not been for this excessive interference by politicians it would not have taken fair shape. Let not the Minister take it wrongly; I have nothing personal against him. My complaint is against the Government for not taking action. I am not trying to be very apologetic because I expected really he would try and set right things, but now it is impossible and he is not in a position to do it. I am now fully convinced that it requires a surgical operation and that mere palliatives will not do. It requires a thorough examination, ruthless checking and an effort to bring it to a fine shape; otherwise Mysore which was once occupying a proud place for industries and industrial development and advancement will go down, perhaps never to raise its head again. Our neighbour Tamil Nadu has stolen a march over us. They have been really doing good things. They keep an eye on everything that is being done. What is required is a thorough examination and looking to plus and minus and seeing whether the undertakings are working in a proper manner or not. If you cannot examine it and if you cannot set it right, then why on earth do you have this huge army of officers? Give each one of them a particular job in a particular sndustry and tell them: "I want you to do such and such a thing and show such and such a result." If they do not do it, keep them under "suspension. That is how I was extracting work. You should tell them: Here is an industry which is entrusted to you; you must work it properly and show me such and such a result." I want the Minister to develop this outlook because we are now in a very sad plight in our industries. We are selling our electricity because we have plenty of electricity with us. We have so many other facilities also and still people are not coming forward to start new industries. There must be some reason. It is for you to probe into it.

With these few words I oppose these Demands.

Mr. SPEAKER.—For account purposes I must inform the House that the hon. Member Sri Siddaverappa has taken 40 minutes, 15 minutes more than the time allotted to them.

Now the hon. Member Sri D. M. Siddaiah will speak.

Sri M. S. KRISHNAN.—On a point of order, Sir.

Under the Rules of Procedure it is you who has the right to fix up the time for each speaker or to each party and you have rightly so fixed according to the time available. On that basis the available time has been distributed by the respective parties to each of its members. Now my point is that because one member of a particular Party has transgressed the time, you should not try to curtail the time available to the other parties. You have to extend the time and give the full time allotted to the various parties.

Mr. SPEAKER.—I am very sorry. I have already pointed out that the hon. member Sri Siddaveerappa has taken much more than the time allotted to his party. He might have taken more time because this is a very important subject and full debate has to take place. But

(MR. SPEAKER)

that does not mean that it is the right of the Opposition to take more than the time allotted. The hon. Member was to be given only 20 minutes. It is unfortunate that he took more time.

Sri M. S. KRISHNAN.—You could have stopped him.

Mr. SPEAKER.—In deference to the sentiments of hon. Members I did not stop him. It is most unfortunate that he should have taken the stand that he would take as much time as he wants.

Sri H. N. NANJE GOWDA.—I think it is not now right on your part to comment on the conduct of the hon. Member, because you yourself allowed him time.

Mr. SPEAKER.—There is nothing wrong in that because the time has been fixed by the consensus of the House and the hon. Member should have abided by that. It is not proper on the part of the hon. Member to question the right of the Chair.

ಶ್ರೀ ಎಚ್. ಎನ್. ನಂಜೇಗೌಡ.—ಮಾನ್ಯ ಸದಸ್ಯರಿಗೆ ಯಾವ ರೀತಿ ಬೇಕಾದರೂ ಡೈರಕ್ಷನ್ ಕೊಡುವುದಕ್ಕೆ ಅಧ್ಯಕ್ಷರಿಗೆ ಹಕ್ಕಿದೆ. ಅಧ್ಯಕ್ಷರು ಕೊಟ್ಟ ಡೈರೆಕ್ಷನನ್ನು ಪಾಲಿಸದಿದ್ದರೆ ಆ ಬಗ್ಗೆ ಕ್ರಮತೆಗೆದುಕೊಳ್ಳುವುದಕ್ಕೆ ಬೇರೆ ಮಾರ್ಗ ಇದೆ ಎಂದು ನಾನು ತಿಳಿದುಕೊಂಡಿದ್ದೇನೆ. ಆದರೂ ಕೂಡ ತಾವು ಯಾವ ಕಾರಣಕ್ಕೋ ಏನೋ ಮಾನ್ಯ ಸಿದ್ಧವೀರಪ್ಪನವರಿಗೆ ಹೆಚ್ಚಿನ ಸಮಯ ಕೊಟ್ಟಿದ್ದೀರಿ. ಈಗ ಮತ್ತೆ ಇನ್‌ಡೈರಕ್ಟ್ ಆಗಿ ಅವರ ವ್ಯಕ್ತಿತ್ವದ ಮೇಲೆ ಕಾಮೆಂಟ್ ಮಾಡುತ್ತಿದ್ದೀರಿ. ಅದು ಸರಿಯಲ್ಲ ಎಂದು ಹೇಳುತ್ತೇನೆ. It was said that the Hon. Member Sri Siddaveerappa has transgressed the rules. This would not be in order. So please expunge this remarks.

Mr. SPEAKER.—It is perfectly in order. Hon. Members should confine themselves to the time allotted to them and should not transgress it. If I did not stop him then, it is only out of deference to him and not by way of approval to what he did. Let the House understand the position.

The Leader of the Congress (R) was a party to the understanding being a member of the Business Advisory Committee, that this debate should be confined to three hours. Having been aware of this it is not correct to exceed the time limit.

† ಶ್ರೀ ಡಿ. ಎಂ. ಸಿದ್ದಯ್ಯ (ಬಿಳಿಗೆರೆ).—ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಕೈಗಾರಿಕಾ ಸಚಿವರು ಈ ಸಭೆಯ ಮುಂದೆ ಮಂಡಿಸಿರತಕ್ಕ ಬೇಡಿಕೆಗಳನ್ನು ಸಮರ್ಥಿಸುತ್ತಾ ಕೆಲವು ವಿಚಾರಗಳನ್ನು ಪ್ರಸ್ತಾಪಮಾಡುತ್ತೇನೆ. ಮಾನ್ಯ ಹಣಕಾಸಿನ ಸಚಿವರು ತಮ್ಮ ಭಾಷಣದಲ್ಲಿ ಅಪ್ಪಣೆ ಕೊಡಿಸುತ್ತಾ "I would only add that there are 4 Statutory Corporations and 19 Government Companies with a total capital investment of Rs. 159 crores. Of this, 8 undertakings, *viz.* MSEB, REMCO, MISL, NGEF, MSK Mills, Mysore Sugar Company, Mysore Cosmetics and Mysore Match Company, account for Rs. 148 crores. It is a matter of regret that all these concerns have for some time past not been earning profits...A decision has since been taken to lease the Mills to a private industrialist" ಎಂದು ಹೇಳಿದ್ದಾರೆ. 159 ಕೋಟಿ ರೂಪಾಯಿಗಳನ್ನು ಸರ್ಕಾರದವರು ಈ ಒಂದು ಸಾರ್ವಜನಿಕ ಕ್ಷೇತ್ರವಾದ ಕೈಗಾರಿಕ ಕ್ಷೇತ್ರದಲ್ಲಿ ಹಾಕಿ ಅದರಲ್ಲಿ ಯಾವುದೂ

ಲಾಭ ಕೊಡುವುದಿಲ್ಲ ಎಂದು ಸರ್ಕಾರದವರು ತಮ್ಮ ವರದಿಯಲ್ಲಿ ಹೇಳುವುದಾದರೆ ಸಾರ್ವಜನಿಕ ಕೈಗಾರಿಕೆಯಲ್ಲಿ ಸರ್ಕಾರಕ್ಕೆ ನಂಬಿಕೆ ಇದೆಯೇ, ಅಥವಾ ಸರ್ಕಾರದ ಅಧೀನದಲ್ಲಿ ಕೆಲಸ ಮಾಡತಕ್ಕ ಅಧಿಕಾರಿಗಳಿಗೆ ಅದರಲ್ಲಿ ನಂಬಿಕೆ ಇದೆಯೇ, ಎಂಬುದು ಬಹಳ ಪ್ರಾಮುಖ್ಯವಾದ ವಿಚಾರ. ಹುಬ್ಬಳ್ಳಿಯಲ್ಲಿರತಕ್ಕ ಟೆಕ್ಸ್‌ಟೈಲ್ ಮಿಲ್ಲಿಗೆ ಪ್ರತಿ ವರ್ಷವೂ ಹಣವನ್ನೂ ಕೊಟ್ಟು ಅದು ಸರಿಯಾಗಿ ಕೆಲಸ ಮಾಡುವುದಿಲ್ಲ ಎಂದು ಅದನ್ನು ಪ್ರೈವೇಟ್ ಇಂಡಸ್ಟ್ರಿಯಲಿಸ್ಟ್‌ಗೆ ಲೀಜಿಗೆ ಕೊಡಬೇಕೆಂದು ತೀರ್ಮಾನ ತೆಗೆದುಕೊಂಡಿದ್ದಾರೆಂದು ಗೊತ್ತಾಗಿದೆ. ನಮ್ಮ ಸರ್ಕಾರದವರು ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳಿಗೆ ಹಣವನ್ನು ಹಾಕಿ ನಡೆಸುತ್ತಾ ಇರುವಾಗ ಅವುಗಳಿಂದ ಲಾಭ ಬರುವುದಿಲ್ಲ, ಆದ್ದರಿಂದ ಅವುಗಳನ್ನು ಪ್ರೈವೇಟ್ ಇಂಡಸ್ಟ್ರಿಯಲಿಸ್ಟಿಗೆ ಮಾರತಕ್ಕದ್ದು ಒಳ್ಳೆಯದು ಎಂದು ತಿಳಿದುಕೊಂಡು ಈ ಕೆಲಸವನ್ನು ಮಾಡುತ್ತಾ ಬಂದಿದ್ದಾರೆ. ಈಗ ಸಾರ್ವಜನಿಕ ಕ್ಷೇತ್ರದಲ್ಲಿ ಕೈಗಾರಿಕೆಗಳನ್ನು ನಡೆಸತಕ್ಕ ಉದ್ದೇಶ ಏನೆಂದರೆ, ಇದರಲ್ಲಿ ಬರೀ ಲಾಭ ಸಂಪಾದನೆ ಮಾಡುವುದು ಒಂದೇ ಮುಖ್ಯವಲ್ಲ. 1956ನೇ ಇಸವಿಯಲ್ಲಿ ಪಂಡಿತ್ ಜವಾಹರ್‌ಲಾಲ್ ನೆಹರೂ ಅವರು ಕೇಂದ್ರ ಸರ್ಕಾರದಲ್ಲಿ ಒಂದು ಸಂದರ್ಭದಲ್ಲಿ ಮಾತನಾಡುತ್ತಾ ಸಾಧ್ಯವಾದಮಟ್ಟಿಗೆ ದೊಡ್ಡ ದೊಡ್ಡ ಕೈಗಾರಿಕಗಳನ್ನು ಸಾರ್ವಜನಿಕ ಕ್ಷೇತ್ರದಲ್ಲಿ ಸ್ಥಾಪನೆ ಮಾಡಿ ಅವುಗಳಲ್ಲಿ ಸಾವಿರಾರು ಕೋಟಿ ರೂಪಾಯಿಗಳನ್ನು ಬಂಡವಾಳವನ್ನು ಹಾಕಿ ಅವುಗಳಿಂದ ಬಂದಂತಹ ಉತ್ಪತ್ತಿಯನ್ನು ಜನತೆಗೆ ಹಂಚಬೇಕು ಎಂದು ಹೇಳಿ, ಆ ಒಂದು ಸದುದ್ದೇಶದಿಂದ ಈ ಕೆಲಸವನ್ನು ಅವರು ಮಾಡಿದ್ದಾರೆ. ಸುಮಾರು 22 ವರ್ಷಗಳಿಂದ ಪ್ರಜಾಪ್ರಭುತ್ವದಲ್ಲಿ ಸಮಾಜವಾದವನ್ನು ಜಾರಿಗೆ ತರುತ್ತೇವೆ ಎಂದು ನಾವು ಸಾರಿಕೊಂಡು ಬಂದಿದ್ದೇವೆ. ನಾಲ್ಕು ಪಂಚವಾರ್ಷಿಕ ಯೋಜನೆಗಳಲ್ಲಿ ಈ ಕೆಲಸವನ್ನು ಸಾಧಿಸುವುದಕ್ಕೋಸ್ಕರ ಕೇಂದ್ರ ಸರ್ಕಾರ ಮತ್ತು ಪ್ರಾಂತ್ಯ ಸರ್ಕಾರ ಕೆಲಸ ಮಾಡಿಕೊಂಡು ಬಂದಿವೆ. ಸಾರ್ವಜನಿಕ ಕ್ಷೇತ್ರದಲ್ಲಿರುವ ಕೈಗಾರಿಕೆಗಳಲ್ಲಿ ಲಾಭ ಬರುವುದಿಲ್ಲ ಎನ್ನುವುದು ಬಹಳ ಗಹನವಾದ ವಿಷಯ. ಅದಕ್ಕೋಸ್ಕರ ಸರ್ಕಾರದವರು ಈಗ ಪಬ್ಲಿಕ್ ಅಂಡರ್‌ಟೇಕಿಂಗ್ ಕಮಿಟಿಯನ್ನು ಮಾಡಿದ್ದಾರೆ. ಸಾರ್ವಜನಿಕ ಕೈಗಾರಿಕೆಗಳಲ್ಲಿ ಏತಕ್ಕೆ ಲಾಭ ಬರುವುದಿಲ್ಲ ಎಂಬುದನ್ನು ಕಂಡುಹಿಡಿವುದಕ್ಕೋಸ್ಕರ ಈ ಒಂದು ಅವಕಾಶವನ್ನು ಸರ್ಕಾರದವರು ಕಲ್ಪಿಸಿಕೊಟ್ಟಿದ್ದಾರೆ. ಈ ಕೆಲಸವನ್ನು ಮೊದಲೇ ಮಾಡಿದ್ದರೆ ಬಹಳ ಒಳ್ಳೆಯದಾಗುತ್ತಿತ್ತು. ಈಗ ಪ್ರಾಮುಖ್ಯವಾಗಿ ನಮ್ಮ ಮುಂದಿರತಕ್ಕ ಪ್ರಶ್ನೆ ಏನೆಂದರೆ ಒಬ್ಬ ಪ್ರೈವೇಟ್ ಇಂಡಸ್ಟ್ರಿಯಲಿಸ್ಟ್ ಕೈಗಾರಿಕೆಯನ್ನು ಸ್ಥಾಪನೆ ಮಾಡಿ ಅದಕ್ಕೆ ಅವನು ಬಂಡವಾಳವನ್ನು ಹಾಕಿ ನಡೆಸುವುದಾದರೆ ಅದರಿಂದ ಲಾಭ ಬರುತ್ತದೆ. ಸಾರ್ವಜನಿಕ ಕ್ಷೇತ್ರದಲ್ಲಿರುವ ಕೈಗಾರಿಕೆಗಳಲ್ಲಿ ಏತಕ್ಕೆ ಲಾಭಬರುವುದಿಲ್ಲ. ಸುಮಾರು 159 ಕೋಟಿ ರೂಪಾಯಿಗಳನ್ನು ವಿವಿಧ ಕೈಗಾರಿಕೆಗಳಲ್ಲಿ ಹಾಕಿರುವಾಗ ಒಂದರಲ್ಲೂ ಲಾಭ ಬರುವುದಿಲ್ಲ ಎಂದರೆ ಹೇಗೆ ? ಮೈಸೂರು ಷುಗರ್ ಕಂಪೆನಿಯಲ್ಲಿ ಈಗೇನೋ ಸ್ವಲ್ಪ ಲಾಭ ಬರುತ್ತಿದೆ ಎಂದು ಹೇಳಿದ್ದಾರೆ. ಸರ್ಕಾರವನ್ನು ನಡೆಸತಕ್ಕವರು ದಕ್ಷತೆಯಿಂದ ಕೆಲಸ ಮಾಡುವುದಿಲ್ಲವೇ ? ಪ್ರಮಾಣಿಕತೆಯಿಂದ ಕೆಲಸ ಮಾಡುವುದಿಲ್ಲವೇ, ಅಥವಾ ಸರ್ಕಾರದ ಕೈಕೆಳಗೆ ಕೆಲಸ ಮಾಡತಕ್ಕ ಅಧಿಕಾರಿಗಳು ಮ್ಯಾನೇಜಿಂಗ್ ಡೈರೆಕ್ಟರು ದಕ್ಷತೆಯಿಂದ ಕೆಲಸ ಮಾಡುವುದಿಲ್ಲವೆ, ಅಪ್ರಾಮಾಣಿಕರಾಗಿದ್ದಾರೆಯೇ? ಅಥವಾ ದೇಶದ ಸಿವಿಲ್ ಸರ್ವೀಸ್ ಅಧಿಕಾರಿಗಳು ಕೆಲಸಮಾಡುವುದಿಲ್ಲವೇ, ಇದು ಬಹಳ ಪ್ರಾಮುಖ್ಯವಾದ ವಿಷಯ. ದೇಶದಲ್ಲಿ ಸಮಾಜವಾದವನ್ನು ಸ್ಥಾಪನೆ ಮಾಡಿ ನಾಗರೀಕ ಜೀವನಕ್ಕೆ ಬೇಕಾದ ಅನ್ನ, ಬಟ್ಟೆ, ವಸತಿ ಇವುಗಳನ್ನು ಒದಗಿಸುತ್ತೇನೆ ಎಂದು ಹೇಳುತ್ತಿದ್ದ ಕಾಂಗ್ರೆಸ್ಸಿನವರಲ್ಲಿ ಪೈಪೋಟಿ ಉಂಟಾಗಿ ಇವೊತ್ತು ಕಾಂಗ್ರೆಸ್ ಇಬ್ಭಾಗವಾಗಿದೆ. ಪ್ರತಿಯೊಬ್ಬರು ನಾವು ಸಮಾಜವಾದವನ್ನು ತರುತ್ತೇವೆ, ನಾವು ಸಮಾಜವಾದವನ್ನು ತರುತ್ತೇವೆ ಎಂದು ಹೇಳುತ್ತಿದ್ದಾರೆ. ಕೇಂದ್ರ ಸರ್ಕಾರದಲ್ಲಿ ಒಂದು ಗುಂಪಿನ ಸರ್ಕಾರ ಇದೆ. ನಮ್ಮ ರಾಜ್ಯದಲ್ಲಿ ಒಂದು ಗುಂಪಿನ ಸರ್ಕಾರ ಇದೆ. ಕೇಂದ್ರ ಸರ್ಕಾರದವರು ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಯಲ್ಲಿ 15 ಸಾವಿರ ಕೋಟಿ ರೂಪಾಯಿಗಳನ್ನು ಹಾಕತಕ್ಕಂಥ ಒಂದು ಯೋಜನೆಯನ್ನು ಮಾಡಿದ್ದಾರೆ. ಹೀಗಿರುವಾಗ ಸಾರ್ವಜನಿಕ ಕ್ಷೇತ್ರದಲ್ಲಿರತಕ್ಕ ಕೈಗಾರಿಕೆಗಳಲ್ಲಿ ಲಾಭ ಬರುವುದಿಲ್ಲ ಎಂದರೆ ಹೆದರಿಕೆಗೆ ಒಳಗಾಗಬೇಕಾಗುತ್ತದೆ ಎಂದು ನಾನು ಸೂಚಿಸುತ್ತೇನೆ. ಇದು ಬಹಳ ಪ್ರಾಮುಖ್ಯವಾದ ವಿಷಯ. ಈ ಬಗ್ಗೆ ಸರ್ಕಾರದವರು ಶೀಘ್ರವಾಗಿ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು, ಈಗ ಸರ್ಕಾರವನ್ನು ನಡೆಸತಕ್ಕವರಲ್ಲಿ ದೋಷ ಇದೆಯೇ, ಅಧಿಕಾರಿಗಳಲ್ಲಿ ದೋಷವಿದೆಯೇ ಎಂಬುದನ್ನು ವಿಮರ್ಶೆ ಮಾಡಬೇಕು. ಕೈಗಾರಿಕೆಗಳಲ್ಲಿ ಲಾಭ ಬರುವುದಿಲ್ಲ ಎನ್ನುವ ನೆಪ ಮಾಡಿಕೊಂಡು ಈ ಕೈಗಾರಿಕೆಗಳನ್ನು ಖಾಸಗೀ ವ್ಯಕ್ತಿಗಳಿಗೆ ಕೊಡುವುದಾದರೆ ಮತ್ತೆ ಕೈಗಾರಿಕೆಗಳನ್ನು ಬಿರ್ಲಾಗಳಿಗೆ, ದೊಡ್ಡ ದೊಡ್ಡ ಕ್ಯಾಪಿಟಲಿಸ್ಟ್‌ಗಳಿಗೆ ಇದರಲ್ಲಿ ಅವಕಾಶ ಮಾಡಿಕೊಟ್ಟಹಾಗಾಗುತ್ತದೆ. ಸಣ್ಣ ಸಣ್ಣ ಬಿರ್ಲಾಗಳು ತಯಾರಾಗುವುದೂ ಬೇಡ. ನಮ್ಮ ರಾಜ್ಯದ ಘನತೆಯ ದೃಷ್ಟಿಯಿಂದ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಬೇಕು, ಎಲ್ಲಾರೂ ದಕ್ಷತೆಯಿಂದ ಪ್ರಾಮಾಣಿಕತೆಯಿಂದ ಕೈಗಾರಿಕೆಗಳಲ್ಲಿ ಕೆಲಸ

(ಶ್ರೀ ಡಿ. ಎಂ. ಸಿದ್ದಯ್ಯ)

ಮಾಡುವುದಾದರೆ ಸಾರ್ವಜನಿಕ ಕೈಗಾರಿಕೆಗಳಲ್ಲಿ ಏತಕ್ಕೆ ಲಾಭ ಬರುವುದಿಲ್ಲ ? ಸಾರ್ವಜನಿಕ ಕೈಗಾರಿಕೆಗಳಿಗೆ ಸಂಬಂಧಪಟ್ಟ ಹಾಗೆ ಕುಂದು ಕೊರತೆಗಳು ಏನಿವೆ ಅವುಗಳನ್ನು ನಿವಾರಣೆ ಮಾಡಿ ದಕ್ಷತೆಯಿಂದ ಪ್ರಾಮಾಣಿಕತೆಯಿಂದ ಕೆಲಸ ಮಾಡುವುದಾದರೆ ಖಾಸಗೀ ಕೈಗಾರಿಕೆಗಳನ್ನು ಕಾಂಪೀಟ್ ಮಾಡಬಹುದು. ಖಾಸಗಿ ಕೈಗಾರಿಕೆಗಳು ಸಾರ್ವಜನಿಕ ಕೈಗಾರಿಕಗಳಮೇಲೆ ಕಾಂಪಿಟಿಷನ್ ಮಾಡುವುದನ್ನು ತಪ್ಪಿಸಬೇಕಾದರೆ ಹೇಗೆ ವ್ಯವಸ್ಥೆ ಮಾಡಬೇಕು ಎಂಬುದು ಪ್ರಾಮುಖ್ಯವಾದ ವಿಷಯ. ದೇಶದ ಅಭ್ಯುದಯ ದೇಶದ ಅರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳನ್ನು ಬಗೆಹರಿಸಿ ನಿಜವಾದ ಸುಖೀ ರಾಜ್ಯವನ್ನು ಕಟ್ಟಬೇಕಾದರೆ ಸಾರ್ವಜನಿಕ ಕೈಗಾರಿಕೆಗಳು ಚೆನ್ನಾಗಿ ಕೆಲಸಮಾಡಿ ಲಾಭವನ್ನು ಪಡೆಯುವಂತೆ ಮಾಡಬೇಕು. ಮತ್ತು ಅವುಗಳಿಂದ ಬಂದಂತಹ ಲಾಭವನ್ನು ದೇಶವ ಅಭಿವೃದ್ಧಿಗೆ ಒದಗಿಸಿದರೆ ಅದರಿಂದ ಬಡಜನರಿಗೆ ಸಹಾಯವಾಗುತ್ತದೆ ಎಂದು ನಾನು ಸ್ಪಷ್ಟವಾಗಿ ತಮ್ಮ ಮುಂದೆ ನಿವೇದಿಸುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ಸರ್ಕಾರದ ನೀತಿ ಹೇಗಿರಬೇಕು, ಕೈಗಾರಿಕೆಗಳನ್ನು ಯಾವ ದೃಷ್ಟಿಯಿಂದ ನಡೆಸಬೇಕು ಎನ್ನುವುದು ಪ್ರಾಮುಖ್ಯವಾದ ವಿಷಯ. ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳಲ್ಲಿ ಬಂದಂತಹ ಕೋಟ್ಯಾಂತರ ರೂಪಾಯಿಗಳ ಲಾಭವನ್ನು ನಮ್ಮ ದೇಶದ ಆರ್ಥಿಕ, ಸಾಮಾಜಿಕ, ಅಭಿವೃದ್ಧಿಗೋಸ್ಕರ ಖರ್ಚು ಮಾಡಬೇಕಾಗಿದೆ. ಇದು ಬಹಳ ಪ್ರಾಮುಖ್ಯವಾದ ಪ್ರಶ್ನೆ. ಆದ್ದರಿಂದ ಈ ಒಂದು ವ್ಯಾಖ್ಯಾನವನ್ನು ನಾನು ತಮ್ಮ ಮುಂದೆ ಇಡುವುದಕ್ಕೆ ಇಚ್ಛೆಪಡುತ್ತೇನೆ. ಅದು ಈ ರೀತಿ ಇದೆ :

"The main principles of socialist distribution are (1) full employment, (2) fair wages, (3) adequate social services and (4) social security."

"In all countries, including the U.S.A., where distributive socialism is in effective operation, 30 to 40 per cent of national income is channelled through the public authorities providing the services and reliefs. In India, only a little more than 10 per cent is taken by the Central and State Governments and perhaps another 1 per cent by the local bodies. It is, therefore, highly regrettable that there should be so much outcry about excessive taxation even by persons who ought to be aware of the facts.

It would be amusing, if it were not tragic, to find these very persons crying for more education and other social services at the same time as they are demanding a reduction of taxation. The true test of statesmanship during this and the coming decades is the education of the electorate regarding the intimate relation between the Welfare State and increasing taxation."

"We should continue this process of building up social cohesion and unity at all levels, acting in the traditional spirit of our culture and in accordance with our Constitution. We should also continue to develop strong political leadership giving a firm lead in policies based on trust in the people, with democratics institutions exercising wide powers at all levels. The services have also their responsibilities. All members of them should have complete faith in the aims and objectives of democracy and of the Welfare State and should carry out their duties with objectivity and integrity.........What we have to remember is this. Both democracy and the Welfare State

demand a higher degree of enlightened and disinterested citizenship than has hitherto been attained. We in India are engaged in a task among the most difficult that any nation undertook in history. There has been no precedent in the world's history for a nation of 400 million people, in the conditions obtaining in India, undertaking large scale, social and economic development on a democratic basis."

ಎಂದು ಹೇಳಿದ್ದಾರೆ. ವೆಲ್‌ಫೇರ್ ಸ್ಟೇಟಿಗೂ ಸಮಾಜವಾದಕ್ಕೂ ಬಹಳ ನಿಕಟವಾದ ಸಂಬಂಧ ಇದೆ. ಒಂದಕ್ಕೊಂದಕ್ಕೆ ತಾರತಮ್ಯವಿಲ್ಲ ಎಂದು ಪ್ರಾಜ್ಞರು ಸ್ಪಷ್ಟಮಾಡಿದ್ದಾರೆ. ಇವೊತ್ತು ಕೈಗಾರಿಕೆಗಳನ್ನು ನಡೆಸತಕ್ಕ ಕಾಲದಲ್ಲಿ ಬಹಳ ಪ್ರಾಮುಖ್ಯವಾಗಿ ಕೈಗಾರಿಕೆಗಳನ್ನು ನಡೆಸಲು ನೈತಿಕ ಜವಾಬ್ದಾರಿಯುಳ್ಳವರನ್ನು ಹಾಕಬೇಕು ಒಂದು ವೇಳೆ ನಮ್ಮ ಸಮಾಜವಾದದಲ್ಲಿ ನಂಬಿಕೆ ಇಲ್ಲದೆ ಇರತಕ್ಕವರು ಸಿವಿಲ್ ಸರ್ವಿಸ್‌ನಲ್ಲಿ ಇಲ್ಲದೇ ಇದ್ದರೆ ಸರ್ಕಾರ ನಂಬಿರುವ ತತ್ವವನ್ನು ಕಾರ್ಯರೂಪಕ್ಕೆ ತರುವ ನಿಷ್ಠೆ ಸಿವಿಲ್ ಸರ್ವಿಸ್ ನಲ್ಲಿರುವವರಿಗೆ ಇಲ್ಲದೇ ಇದ್ದರೆ, ಸಿವಿಲ್ ಸರ್ವೀಸನ್ನೇ ಕಿತ್ತುಹಾಕಿ ದೇಶದಲ್ಲಿ ಆಳುವ ಪಕ್ಷದ, ಆಳುವ ಸರ್ಕಾರದ ನೀತಿಯಲ್ಲಿ ನಂಬಿಕೆಯುಳ್ಳಂಥ ಪಕ್ಷದ ಜನಗಳನ್ನೇ ಕೈಗಾರಿಕೆಗಳಲ್ಲಿ ನೇಮಿಸಿ ಕ್ರಾಂತಿಕಾರಕವಾದ ಸಾಧನೆಯನ್ನು ಸಾಧಿಸಬೇಕು ಎಂದು ನಾನು ಹೇಳುತ್ತೇನೆ. ಪ್ರಜಾಪ್ರಭುತ್ವದ ಆಧಾರದ ಮೇಲೆ ಸಮಾಜವಾದವನ್ನು ರಚಿಸಬೇಕಾದರೆ, ನಮಗೆ ನಮ್ಮ ತತ್ವದಲ್ಲಿ ನಂಬಿಕೆಯುಳ್ಳಂತಹ ಅಧಿಕಾರಿಗಳನ್ನು ಸಾರ್ವಜನಿಕ ಕ್ಷೇತ್ರದಲ್ಲಿ ಹಾಕಬೇಕು. ಒಂದು ವೇಳೆ ಅಂಥ ಅಧಿಕಾರಿಗಳು ನಮಗೆ ಸಿಗದಿದ್ದರೆ, ಮತ್ತು ನಾವು ಯಾವ ಒಂದು ಸಮಾಜ ವಾದವನ್ನು ಬೆಳಸಬೇಕೆಂದು ಹೇಳುತ್ತಿದ್ದೇವೆ. ಆ ಒಂದು ಸಮಾಜವಾದವನ್ನು ರಚಿಸುವುದಕ್ಕಾಗುವುದಿಲ್ಲ. ಮತ್ತು ನಮ್ಮ ಸಮಾಜ ಸುಧಾರಣೆಯಾಗುವುದಿಲ್ಲ. ಅಂತಹ ಸಮಯದಲ್ಲಿ ನಾವು ಹೊಸ ಪದ್ಧತಿಯನ್ನು ಜಾರಿಗೆ ತರಬೇಕಾಗುತ್ತದೆ. ಕಳೆದ 10 ವರ್ಷಗಳಿಂದಲೂ ಅಧಿಕಾರಿಗಳು ಹೇಳಿದಹಾಗೆ ನಾವು ಕೇಳಿಕೊಂಡು ನಡೆದ ಹಾಗೆ, ಮುಂದೆಯೂ ನಡೆದುದೇ ಆದರೆ, ಖಂಡಿತವಾಗಿಯೂ ನಮ್ಮ ಆರ್ಥಿಕ ಧೋರಣೆಯನ್ನು ಸಾಧನೆ ಮಾಡುವುದಕ್ಕಾಗುವುದಿಲ್ಲ. ಮೈಸೂರು ರಾಜ್ಯ ಭರತಖಂಡದಲ್ಲೇ ಕೈಗಾರಿಕೆಗಳಲ್ಲಿ ಮುಂದುವರಿದ ರಾಜ್ಯವೆಂದು ಹೆಸರು ಗಳಿಸಿದೆ. ಕಳೆದ 20 ವರ್ಷಗಳಿಂದಲೂ ನಮ್ಮ ರಾಜ್ಯದಲ್ಲಿ ಕೈಗಾರಿಕೆ ಹೇಗೆ ಅಭಿವೃದ್ಧಿಯಾಗಿತ್ತೋ ಅದನ್ನು ಇನ್ನು ಮುಂದೆಯೂ ಮುಂದುವರಿಸಿಕೊಂಡು ಬಂದ ಪಕ್ಷದಲ್ಲಿ ಬಹುಶಃ ನಮ್ಮ ಭಾರತ ದೇಶದಲ್ಲಿ ನಮ್ಮ ರಾಜ್ಯಕ್ಕೆ ಏನು ಒಂದು ಕೀರ್ತಿ ಇದೆ, ಅದನ್ನು ಆದರ್ಶವಾದ ರೀತಿಯಲ್ಲಿ ಬೆಳೆಸಿಕೊಂಡು ಬರುವುದಕ್ಕೆ ಸಾಧ್ಯವಾಗುತ್ತದೆ. . ಮತ್ತು ನಾವು ಹಿಂದೂಸ್ಥಾನದಲ್ಲೇ ಮಾದರಿಯಾಗಿ ಉಳಿಯುತ್ತೇವೆ. ಕೊನೆಯದಾಗಿ ಮತ್ತೊಬ್ಬ ಮಹನೀಯರು ಸಾರ್ವಜನಿಕ ಕ್ಷೇತ್ರದಲ್ಲಿ ಸರ್ಕಾರದ ಹಣವನ್ನು ಹೇಗೆ ಹಾಕಬೇಕು. ಹೇಗೆ ಅದನ್ನು ವಿನಿಯೋಗಿಸಬೇಕೆಂಬುದರ ಬಗ್ಗೆ ಹೇಳಿದ್ದಾರೆ. ಅವರ ಮಾತನ್ನು ನಾನು ಈಗ ಹೇಳುತ್ತೇನೆ. ಅವರು ಹೀಗೆ ಹೇಳುತ್ತಾರೆ :

11-00 A.M.

"The financial organisation of every public enterprise ought to be conducive to its highest economic efficiency ; and that of public enterprise as a whole ought to be conducive to the most desirable relativities of economic efficiency as between the enterprises. There are two important aspects of the problem. Firstly, the inevitable diffusion of responsibility between the government and a public enterprise for, the performance of the latter ought not to lead to inefficiencies in its financial organisation. Secondly, in the place of several automatic checks and balances in the private sector we have to set up rules and conventions that are not only appropriate in theory as well as in practice but amenable to flexibility as promptly as circumstances warrant.

(ಶ್ರೀ ಡಿ. ಎಂ. ಸಿದ್ದಯ್ಯ)

"The real cost of the factors employed in a public enterprise ought to be known accurately; and the treatment of major financial items by different public enterprises ought to be such as enable us to compare their financial merits.

"The motto should be that every rupee invested is most economically *intended, expended and rewarded.*"

ಈ ಮಹನೀಯರು ತಮ್ಮ ಗ್ರಂಥದಲ್ಲಿ ಸಾರ್ವಜನಿಕ ಕ್ಷೇತ್ರದಲ್ಲಿ ಹಾಕತಕ್ಕ ಪ್ರತಿಯೊಂದು ರೂಪಾಯಿ ಕೂಡ ಸರಿಯಾಗಿ ವಿನಿಯೋಗವಾಗಬೇಕು, ಅದನ್ನು ಸರಿಯಾದ ರೀತಿಯಲ್ಲಿ ಕೈಗಾರಿಕೆಯ ಅಭಿವೃದ್ಧಿಗಾಗಿ ಉಪಯೋಗಿಸಬೇಕು ಮತ್ತು ಅದರಿಂದ ಸರಿಯಾದ ಲಾಭ ಬರಬೇಕೆಂದು ಹೇಳುತ್ತಿದ್ದಾರೆ. ಇವತ್ತು ನಮ್ಮ ಸರ್ಕಾರದವರು ಸಾರ್ವಜನಿಕ ಕ್ಷೇತ್ರದಲ್ಲಿ ನೂರಾರು ಕೋಟಿ ರೂಪಾಯಿಗಳನ್ನು ಹಾಕಬೇಕೆಂದು ಹೇಳುತ್ತಿದ್ದಾರೆ. ಇವೊತ್ತಿನ ದಿವಸ ಆ ಕ್ಷೇತ್ರ ಯಾವ ಸ್ಥಿತಿಯಲ್ಲಿದೆ ಎಂದು ಹೇಳಿದರೆ, ಅದು ಬಂಡವಾಳಶಾಹಿಯವರ ಜೊತೆಗೆ ಸ್ಪರ್ಧೆಮಾಡಬೇಕಾದ ಪರಿಸ್ಥಿತಿ ಬಂದಿದೆ. ಇವತ್ತು ಸಾರ್ವಜನಿಕ ಕ್ಷೇತ್ರದಲ್ಲಿ ಆಡಳಿತ ನಡೆಸತಕ್ಕವರಾಗಲಿ, ಅಲ್ಲಿಯ ಅಧಿಕಾರಿಗಳಾಗಲಿ, ಈ ಬಂಡವಾಳಶಾಹಿಗಳು ಏನಿದ್ದಾರೆ, ಅವರನ್ನು ಚಾಲೆಂಜ್ ಮಾಡಿ, ಅವರಿಗೆ ಸವಾಲು ಹಾಕಿ, ಅವರ ಹಿಡಿತದಿಂದ ತಪ್ಪಿಸಿಕೊಂಡು ನಮ್ಮ ಕೈಗಾರಿಕಾಭಿವೃದ್ಧಿಯನ್ನು ಮಾಡಬೇಕಾಗಿದೆ. ಮತ್ತು ಅದರಿಂದ ನಮ್ಮ ಆರ್ಥಿಕಾಭಿವೃದ್ಧಿಯನ್ನು ಮಾಡಿ, ನಮ್ಮ ಸಮಾಜವಾದವನ್ನು ಸಂರಕ್ಷಣೆ ಮಾಡಬೇಕಾಗಿದೆ. ಆದ್ದರಿಂದ ನನ್ನ ವಿನಯಪೂರ್ವಕವಾದ ಕೇಳಿಕೆ ಏನೆಂದರೆ, ಒಂದು ಧೀರೋದ್ಧಾತವಾದ ರೀತಿಯಲ್ಲಿ ಈ ಬಂಡವಾಳಶಾಹಿಗಳನ್ನು ಹತ್ತಿಕ್ಕಿ, ಯಾರು ಅದರಲ್ಲಿ ಸಮಾಜಘಾತುಕರಿದ್ದಾರೆ, ಯಾರು ಈ ಸಮಾಜವಾದದ ಅಭಿವೃದ್ಧಿಗೆ ಅಡ್ಡಿಯಾಗುತ್ತಾರೆ, ಮತ್ತು ಬ್ರಿಟಿಷರು ಇದ್ದಾಗ ಹೇಗೆ ಇಂಡಸ್ಟ್ರಿಯಲ್ ಕಿಂಗ್ಸ್ ಎಂದು, ಇದ್ದು ಈ ರಾಜಸೂತ್ರವನ್ನು ಹಿಡಿದುಕೊಂಡಿದ್ದರು, ಅಂಥವರನ್ನು ಸರ್ಕಾರ ತನ್ನ ಹತೋಟಿಯಲ್ಲಿಟ್ಟುಕೊಂಡು, ಈ ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳನ್ನು ನಡೆಸಿಕೊಂಡು ಹೋಗಬೇಕೆಂದು ಹೇಳುತ್ತೇನೆ.

ಇನ್ನು ನಮ್ಮ ಸಿರಿಕಲ್ಚರ್ ಇಂಡಸ್ಟ್ರಿಯ ವಿಚಾರದಲ್ಲಿ ಬಾವಿಗಳನ್ನು ತೆಗೆಸುವುದಕ್ಕೆ ಕೊಡುವ ಹಣವನ್ನು ಇನ್ನೂ ಹೆಚ್ಚಾಗಿ ಕೊಡಬೇಕು. ಮಾರ್ಕೆಟ್ಟಿನಲ್ಲಿ ಈ ದಳ್ಳಾಳಿಗಳ ಕಾಟ ಇನ್ನೂ ತಪ್ಪಿಲ್ಲ. ಮೈಸೂರು ದೇಶ ಈ ಸೆರಿಕಲ್ಚರಿನ ಬಗ್ಗೆ ಒಳ್ಳೆಯ ಹೆಸರು ಹೊರಗಡೆ ಇದೆ. ಇದರಲ್ಲಿ ಸರ್ಕಾರಕ್ಕೆ ನಷ್ಟವಾದರೂ ಚಿಂತಿಲ್ಲ, ಅದಕ್ಕೆ ಸರ್ಕಾರದವರು ಸಬ್ಸಿಡಿ ಕೊಟ್ಟು ಬೆಳೆಸಿಕೊಂಡು ಹೋಗಿ, ಮೈಸೂರಿನ ಘನತೆಯನ್ನು ಉಳಿಸಿಕೊಂಡು ಹೋಗಬೇಕೆಂದು ಹೇಳಿ, ಈ ಒಂದು ಕೈಗಾರಿಕೆಯ ಬೇಡಿಕೆಗಳಿಗೆ ನನ್ನ ಒಪ್ಪಿಗೆಯನ್ನು ಕೊಟ್ಟು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎಚ್ ಬಿ. ಜ್ವಾಲನಯ್ಯ (ಹಾಸನ).—ಸ್ವಾಮಿ, ದೊಡ್ಡ ಕೈಗಾರಿಕೆಗಳಿಗೆ ಸುಮಾರು 12 ಕೋಟಿ ರೂಪಾಯಿಗಳು ಮತ್ತು ಸಣ್ಣ ಕೈಗಾರಿಕೆಗಳಿಗೆ ಎಪ್ಪತ್ತೈದೂವರೆ ಲಕ್ಷ ರೂಪಾಯಿಗಳಿರುವ ಈ ಹಣದ ಬೇಡಿಕೆಯನ್ನು ನಾನು ವಿರೋಧಿಸುತ್ತಾ ಕೆಲವು ಮಾತುಗಳನ್ನು ಹೇಳುತ್ತೇನೆ. ಇಲ್ಲಿಯವರೆಗೂ ಸುಮಾರು 15 ಕಂಪನಿಗಳಲ್ಲಿ ಸುಮಾರು 256 ಕೋಟಿ ರೂಪಾಯಿ ಹಣವನ್ನು ವಿನಿಯೋಗಿಸಿ ಎಷ್ಟು ಸಂಪಾದನೆ ಮಾಡಿದ್ದಾರೆಂಬುದನ್ನು ಹೇಳುತ್ತೇನೆ. 8 ಕಂಪೆನಿಗಳಲ್ಲಿ 36 ಕೋಟಿ 43 ಲಕ್ಷ ರೂಪಾಯಿಗಳನ್ನು ವಿನಿಯೋಗಿಸಿ 77·61 ಲಕ್ಷ ರೂಪಾಯಿ ಮಾತ್ರ ಆದಾಯ ಬಂದಿದೆ. ಅದೇ ರೀತಿ ಸುಮಾರು 224 ಕೋಟಿಗೆ ಮೀರಿ 7 ಕಂಪೆನಿಗಳಲ್ಲಿ ಹಣವನ್ನು ವಿನಿಯೋಗಿಸಿ 5 ಕೋಟಿ 53 ಲಕ್ಷ ರೂಪಾಯಿ ನಷ್ಟವಾಗಿದೆ. ಇದರಲ್ಲಿ ಬಹುಮುಖ್ಯವಾದುದು ಮೈಸೂರು ಐರನ್ ಅಂಡ್ ಸ್ಟೀಲ್ ಕಂಪೆನಿ. ಇವರ ಆಡಿಟ್ ರಿಪೋರ್ಟಿನ ಪ್ರಕಾರ 68-69ರಲ್ಲಿ 2 ಕೋಟಿ 11 ಲಕ್ಷ; 69-70ರಲ್ಲಿ 3 ಕೋಟಿ 6 ಲಕ್ಷ ರೂಪಾಯಿ ನಷ್ಟವಾಗಿದೆ. ಇಷ್ಟು ನಷ್ಟವಾದಾಗ, ಮಾನ್ಯ ಮಂತ್ರಿಯವರು ದೊಡ್ಡ ಕೈಗಾರಿಕೆಗಳಿಗೆ ಇನ್ನೂ 12 ಕೋಟಿ ಕೊಡಬೇಕೆಂದು ಕೇಳುವುದಾದರೂ ಕೂಡ ಯಾವ ತತ್ವದ ಮೇಲೆ? ಇದರಲ್ಲಿ ಯಾವ ತತ್ವ ಅಡಗಿದೆ ಎಂಬುದನ್ನು ಹೇಳಬೇಕು. ಈಗ ದೊಡ್ಡ ಕೈಗಾರಿಕೆಗಳಿಗೆ ಹಣವನ್ನು ಕೊಡುವುದಕ್ಕೋಸ್ಕರ ಸರ್ಕಾರದಲ್ಲಿರತಕ್ಕ ಎಲ್ಲಾ ಹಣವನ್ನು ತೆಗೆದುಕೊಂಡು ಅಲ್ಲಿ ಹಾಕುತ್ತಾರೆ ಆದರೆ ನೀವು ಕೊಡುವ ಎಂಪ್ಲಾಯ್‌ಮೆಂಟ್ ಪೊಟೆನ್ಸಿಯಾಲಿಟಿಯನ್ನು ತೆಗೆದುಕೊಂಡರೆ ಅದು ಬಹಳ ಕಡಿಮೆಯಾಗಿದೆ. ಇದನ್ನು ಸಣ್ಣ ಕೈಗಾರಿಕೆಗಳಿಗೆ ಹೆಚ್ಚಾಗಿ

ವಿನಿಯೋಗಿಸಿದರೆ, ಹೆಚ್ಚಿನ ಉಪಯೋಗವಾಗುತ್ತದೆಂದು ಹೇಳಬಹುದು. ಇವತ್ತು ದೊಡ್ಡ ಕೈಗಾರಿಕೆ ಮತ್ತು ಸಣ್ಣ ಕೈಗಾರಿಕೆಗಳನ್ನು ತೆಗೆದುಕೊಂಡರೆ 1:10 ರಂತೆ ಜನರು ಇದರಲ್ಲಿ ಜೀವನ ಮಾಡುತ್ತಿದ್ದಾರೆಂದು ಹೇಳಬಹುದು. ಆದರೆ ಕೇವಲ ಎಪ್ಪತ್ತೈದೂವರೆ ಲಕ್ಷ ರೂಪಾಯಿಗಳನ್ನು ಸಣ್ಣ ಕೈಗಾರಿಕಗಳಿಗೆ ಕೊಟ್ಟಿದ್ದಾರೆ. ನಷ್ಟವಾಗುತ್ತಿರುವ ದೊಡ್ಡ ಕೈಗಾರಿಕೆಗಳಿಗೆ 12 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ನೀವು ಹೀಗೆ ಹಣವನ್ನು ಹಾಕುತ್ತಾ ಹೋದರೆ, 10 ವರ್ಷಗಳಲ್ಲಿ ನಿಮ್ಮ ಕ್ಯಾಪಿಟಲ್ ಕೂಡ ಹೊರಟು ಹೋಗುತ್ತದೆ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ. ಇದರ ಜೊತೆಗೆ ಭದ್ರಾವತಿಯಲ್ಲಿ ಎಕ್ಸ್‌ಪಾನ್‌ಶನ್ ಸ್ಕೀಂ ಎಂದು ಇಟ್ಟುಕೊಂಡಿದ್ದಾರೆ. ಅದನ್ನು ಎಷ್ಟು ಟೈಂ ಲಿಮಿಟ್ಟಿನೊಳಗೆ ಮಾಡಬೇಕೆಂದು ಎಸ್ಟಿಮೇಟ್ ಮಾಡಿದ್ದೀರಿ? ಎಲ್ಲೂ ಕೂಡ ನೀವು ಟೈಂ ಲಿಮಿಟ್‌ನಲ್ಲಿ ಎಕ್ಸ್‌ಪಾನ್‌ಶನ್ ಸ್ಕೀಂ ಮಾಡದೆ ಇರುವುದರಿಂದ, ಅನೇಕ ರೀತಿಯಲ್ಲಿ ಇನ್‌ಡೈರೆಕ್ಟ್ ಲಾಸ್ ಆಗುತ್ತಿದೆ. ಇನ್ನು ಕನ್ಸಲ್ಟೆಂಟ್ ಬಗ್ಗೆ ಮಾನ್ಯ ಸಿದ್ದವೀರಪ್ಪನವರು ಬಹಳ ಹೇಳಿದ್ದಾರೆ. ಇದು ಬಹಳ ವಿಚಿತ್ರವಾದುದು. ಫಾರಿನ್ ಮೆಷಿನರಿಗೆ ಹ್ಯಾಂಡರ್ ಮಾಡುವುದಕ್ಕೆ ತಿಂಗಳಿಗೆ 4 ಸಾವಿರ ರೂಪಾಯಿ, ಮತ್ತು ಇಂಡಿಜಿನಸ್ ಸಾಮಾನುಗಳನ್ನು ಹ್ಯಾಂಡರ್ ಮಾಡುವುದಕ್ಕೆ ಒಂದು ಸಾವಿರ ರೂಪಾಯಿ ಇದು ಎಷ್ಟು ವರ್ಷದಿಂದ ಕೊಟ್ಟು ಕೊಂಡು ಬರುತ್ತಿದ್ದೀರಿ? ಕೆಲವು ಕಂಪೆನಿಗಳಲ್ಲಿ ಅಗ್ರಿಮೆಂಟಿನಲ್ಲಿ ಒಂದು ಕಂಡೀಷನ್ ಇಟ್ಟುಕೊಂಡು ಇರೆಕ್ಷನ್ ಬಗ್ಗೆ ಅವರಿಗೆ ಗ್ರಾಂಟ್ ಕೊಟ್ಟು ಸುಮಾರು 30–31 ಲಕ್ಷ ರೂಪಾಯಿ ನಷ್ಟ ಮಾಡಿದ್ದೀರಿ. ಇದರ ಜೊತೆಗೆ ಗೌರ್ನಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟರಿ ಮತ್ತು ನ್ಯೂ ಗೌರ್ನಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟರಿ, ಇವೆರಡು ಕೂಡ ಒಂದನ್ನೊಂದು ಸ್ಪರ್ಧೆ ಮಾಡುತ್ತಿವೆ. ಇದರಿಂದ ಅನೇಕ ರೀತಿಯಲ್ಲಿ ಸರ್ಕಾರಕ್ಕೆ ನಷ್ಟ ಆಗುತ್ತಿದೆ. ಈ ಕಂಪೆನಿಗೆ ಇವತ್ತು ಒಂದು ಕೋಟಿ 8 ಲಕ್ಷ ರೂಪಾಯಿ ಹೊರಗಡೆಯಿಂದ ಬರಬೇಕಾಗಿದೆ. ಈ ವಿಚಾರದಲ್ಲಿ ಸರ್ಕಾರದವರು ಏನು ಮಾಡಿದ್ದಾರೆ? ಮಧ್ಯಪ್ರದೇಶದವರು ಮತ್ತು ಮಹಾರಾಷ್ಟ್ರದವರು ಈ ಕಂಪೆನಿಯಿಂದ ಟ್ರಾನ್ಸ್‌ಫರ್ಮರ್ಸ್ ಬೇಕೆಂದು ಆರ್ಡರ್ ಮಾಡಿದರು. ಅದೇ ರೀತಿ ಟ್ರಾನ್ಸ್‌ಫಾರ್ಮರ್ಸ್‌ನ್ನು ಸಪ್ಲೈ ಮಾಡಿದ್ದಾರೆ. ಆದರೆ ಡಿಫೆಕ್ಟಿವ್ ಟ್ರಾನ್ಸ್‌ಫಾರ್ಮರ್ಸ್‌ನ್ನು 66ನೇ ಇಸವಿಯಲ್ಲಿ ಕಳಿಸಿಕೊಟ್ಟಿದ್ದಾರೆ. ಅದು 7.5 ಲಕ್ಷ ರೂಪಾಯಿ ಬೆಲೆಯದ್ದು. ಅವರು ನಂತರ ಅದು ಚೆನ್ನಾಗಿಲ್ಲವೆಂದು ಕೊಟ್ಟಂತಹ ಆರ್ಡರನ್ನು ಕ್ಯಾನ್ಸಲ್ ಮಾಡಿದರು. ಈಗ ಆ ಟ್ರಾನ್ಸ್‌ಫಾರ್ಮರ್ಸ್ ನಿಮ್ಮ ಕಂಪೆನಿಯಲ್ಲಿ ಬಿದ್ದಿದೆ. ಇದರಿಂದ ಈ ಕಂಪೆನಿಯ ಪ್ರೆಸ್ಟಿಜ್ ಏನಿದೆ ಎಂಬುದನ್ನು ನೋಡಬಹುದು. ಒಳ್ಳೆಯ ಸಾಮಾನುಗಳನ್ನು ಸಪ್ಲೈ ಮಾಡದೆ ಈ ರೀತಿ ನಷ್ಟವಾಗಿದೆ. ಅದೇ ರೀತಿ ಸೇಲ್ಸ್ ಇಂಟರ್‌ನಾಶನಲ್. ಇದು ವಿಚಿತ್ರವಾದ ಸಂಸ್ಥೆ. ಸರ್ಕಾರದ ಕ್ಯಾಪಿಟಲ್ ಇದರಲ್ಲಿ 10 ಲಕ್ಷ ಹಾಕಿದ್ದಾರೆ. ಒಂದು ವರ್ಷದಲ್ಲಿ ಇದರಲ್ಲಿ ಏಳೂವರೆ ಲಕ್ಷ ನಷ್ಟವಾಗಿದೆ. ಇದು ಯಾವರೀತಿಯಲ್ಲಿ ಸರ್ಕಾರದ ಸೋಲ್ ಏಜೆನ್ಸಿಯಾಗಿ ಕೆಲಸ ಮಾಡುತ್ತದೆ ಯಾವ ರೀತಿ ವರ್ತಿಸುತ್ತದೆ ಎಂಬುದಕ್ಕೆ ಒಂದು ಉದಾಹರಣೆಯನ್ನು ಹೇಳುತ್ತೇನೆ. 3500 ಎಲೆಕ್ಟ್ರಿಕ್ ಮೋಟಾರುಗಳನ್ನು ಸಪ್ಲೈ ಮಾಡಬೇಕೆಂದು ಗೌರ್ನಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟರಿಗೆ ಆರ್ಡರ್ ಕೊಟ್ಟರು. ಆ ರೀತಿ ಆರ್ಡರ್ ಕೊಟ್ಟಾದಮೇಲೆ ಆ ಆರ್ಡರನ್ನು ಎಗ್ಸಿಕ್ಯೂಟ್ ಮಾಡುವ ಸಂದರ್ಭದಲ್ಲಿ 650 ಮೋಟಾರುಗಳನ್ನು ತೆಗೆದುಕೊಂಡು ಬಾಕಿ ಮೋಟಾರುಗಳನ್ನು ಸ್ಟೋರ್ ಮಾಡುವುದಕ್ಕೆ ಸ್ಥಳವಿಲ್ಲವೆಂದು ಹೇಳಿದರು. ಈಗ ಅವನ್ನು ಮಾರಾಟ ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳಿ ಹಾಗೆಯೇ ಬಿಟ್ಟರು. ಇದರಿಂದ ಲಕ್ಷಾಂತರ ರೂಪಾಯಿಗಳು ನಷ್ಟವಾಗಿದೆ. ಈ ರೀತಿ ಸರ್ಕಾರದ ಎಲ್ಲಾ ಕಾರ್ಖಾನೆಗಳನ್ನು ನಷ್ಟಕ್ಕೆ ತೆಗೆದುಕೊಂಡು ಹೋಗುವ ವ್ಯವಸ್ಥೆ ಆಗಿದೆ. ಸೇಕಡ 15ರಷ್ಟೂ ಕೂಡ ಟಾರ್ಜೆಟ್ಟನ್ನು ರೀಚ್ ಮಾಡುವುದಕ್ಕಾಗಲಿಲ್ಲ.

ಇನ್ನು ರೆಮ್‌ಕೊ ಬಗ್ಗೆ ಹೇಳುವುದಾದರೆ, ಅಲ್ಲಿ ಬೇಕಾದಷ್ಟು ಎನರ್ಜಿ ಮೀಟರ್ಸ್, ವಾಟರ್ ಮೀಟರ್ಸ್, ರೇಡಿಯೋಗಳು ಮತ್ತು ಟ್ರಾನ್ಸಿಸ್ಟರ್ಸ್—ಇವನ್ನು ಸ್ಟೋರ್ ಮಾಡಿದ್ದಾರೆ. ಸರ್ಕಾರಕ್ಕೆ ಕೊಡಬೇಕಾದ್ದು ಸಾಲ 208 ಲಕ್ಷ ರೂಪಾಯಿಗಳಷ್ಟು ಇದೆ. ನಮ್ಮ ಕ್ಯಾಪಿಟಲ್ ಅಲ್ಲಿ 60 ಲಕ್ಷ ರೂಪಾಯಿಗಳು ಇದೆ. ಇದು ಹೇಗೆ ನಡೆಯುತ್ತಿದೆ ಎನ್ನುವುದನ್ನು ನೀವು ಊಹಿಸಿಕೊಳ್ಳಬಹುದು.

ಇನ್ನು ನಾಲ್ಕು ಸ್ಟ್ಯಾಚುಟರಿ ಕಾರ್ಪೊರೇಷನ್‌ಗಳ ಬಗ್ಗೆ ಹೇಳುವುದಾದರೆ, ಅಲ್ಲಿ ಹಾಕಿರತಕ್ಕ $83\frac{1}{2}$ ಕೋಟಿ ರೂಪಾಯಿಗಳ ಇನ್‌ವೆಸ್ಟ್‌ಮೆಂಟಿನಲ್ಲಿ ಸೇಕಡ 9ರಷ್ಟು ಲಾಭ ಬಂದಿದೆ. ಇದನ್ನು ನೋಡಿದರೆ ದೊಡ್ಡ ದೊಡ್ಡ ಕೈಗಾರಿಕೆಗಳಿಗೆ ಏನು ಈಗ ಹಣವನ್ನು ವಿನಿಯೋಗಿಸುತ್ತಿದ್ದೇವೋ ಆದರಿಂದ ಸರ್ಕಾರಕ್ಕೆ ನಷ್ಟ, ರಾಜ್ಯಕ್ಕೆ ನಷ್ಟ ಮತ್ತು ಜನತೆಗೂ ನಷ್ಟ ಇದೆ. ಆದ್ದರಿಂದ ನೀವು ಇದರ ಅರ್ಧದಷ್ಟು ಹಣವನ್ನು ಸಣ್ಣ ಸಣ್ಣ ಕೈಗಾರಿಕೆಗಳನ್ನು ಬೆಳೆಸುವುದಕ್ಕೆ ಡೈವರ್ಟ್ ಮಾಡಿದ್ದರೆ ಇನ್ನು ಎಲ್ಲಾ ಸಣ್ಣ ಸಣ್ಣ ಕೈಗಾರಿಕೆಗಳು ಹೆಚ್ಚಿಗೆ ಬೆಳೆಯುವುದಕ್ಕೆ ಅವಕಾಶವಾಗುತ್ತಿತ್ತು.

(ಎಚ್. ಬಿ. ಜ್ವಾಲಾನಯ್ಯ)

ಜನಗಳಿಗೂ ನಾನಾ ವೃತ್ತಿಗಳು ಸಿಕ್ಕಿ ಅವರ ಜೀವನ ಸುಖಮಯವಾಗುತ್ತಿತ್ತು. ಇದರ ಬಗ್ಗೆ ಜಪಾನಿಗೆ ಇಂಡಿಯನ್ ಡೆಲಿಗೇಷನ್ ಹೋದಾಗ ಮಾಡಿದಂಥ ವರದಿಯಲ್ಲಿ ಬಹಳ ಚೆನ್ನಾಗಿ ಹೇಳಿದ್ದಾರೆ. ಅಲ್ಲಿ ಸಣ್ಣ ಪ್ರಮಾಣದ ಕೈಗಾರಿಕೆಗಳು ಯಾವ ರೀತಿ ಅಭಿವೃದ್ಧಿಹೊಂದಿವೆ ಯೆಂಬುದನ್ನು ತಿಳಿಸಿದ್ದಾರೆ. ಜಪಾನ್ ಇಷ್ಟು ಕೈಗಾರಿಕೆಗಳಲ್ಲಿ ಪ್ರಗತಿಗೆ ಬರುವುದಕ್ಕೆ ಕಾರಣ ಸಣ್ಣ ಸಣ್ಣ ಕೈಗಾರಿಕೆಗಳು ಅಭಿವೃದ್ಧಿ ಹೊಂದಿರುವುದೇ ಆಗಿದೆ. ಅಲ್ಲಿಯ ಪ್ರಧಾನ ಮಂತ್ರಿಗಳೇ ಸಣ್ಣ ಕೈಗಾರಿಕೆಗಳ ಪೋರ್ಟ್‌ಫೋಲಿಯೋವನ್ನು ಇಟ್ಟುಕೊಂಡಿದ್ದಾರೆ. ಆದ್ದರಿಂದ ನೀವು ಕೊಟ್ಟಿರುವ 75 ಲಕ್ಷ ರೂಪಾಯಿಗಳು ಯಾವುದಕ್ಕೂ ಸಾಲುವುದಿಲ್ಲ. ನಿಮ್ಮಲ್ಲಿ ಸುಮ್ಮನೆ ಡೈರೆಕ್ಟರ್, ಡೆಪ್ಯುಟಿ ಡೈರೆಕ್ಟರ್ ಮತ್ತು ಜಾಯಿಂಟ್ ಡೈರೆಕ್ಟರ್ ಇವರುಗಳ ಸಂಬಳಕ್ಕೇ ಎಷ್ಟೋ ಹಣ ಖರ್ಚಾಗುತ್ತಿದೆ. ಸಣ್ಣ ಕೈಗಾರಿಕೆಗಳಿಗೆ ಯಾವುದಕ್ಕೂ ಇದರಿಂದ ಉಪಯೋಗ ಬರುವುದಿಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳು ಕನಿಷ್ಠಪಕ್ಷ 3 ಕೋಟಿ ರೂಪಾಯಿಗಳನ್ನಾದರೂ ಸಣ್ಣ ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗೆ ಕೊಡಬೇಕೆಂದು ಹೇಳುತ್ತೇನೆ. ಇದರಿಂದ ಹೆಚ್ಚಿಗೆ ದೇಶ ಬೆಳೆಯುತ್ತದೆ. ಸ್ಟೇಟ್ ಏಡ್ ಇಂಡಸ್ಟ್ರೀಸ್ ಆಕ್ಟ್ ಪ್ರಕಾರ 35 ಲಕ್ಷ ರೂಪಾಯಿಗಳನ್ನು ಕೈಗಾರಿಕೆಯ ಅಭಿವೃದ್ಧಿಗಾಗಿ ಇಟ್ಟುಕೊಂಡಿದ್ದೀರಿ. ಅದನ್ನು ಯಾವುದಕ್ಕೆ ಕೊಡುತ್ತೀರಿ ! ಇದನ್ನು ಕನಿಷ್ಠಪಕ್ಷ ಒಂದು ಕೋಟಿ ರೂಪಾಯಿಗಳಿಗಾದರೂ ಹೆಚ್ಚಿಸಬೇಕು. ಈ 35 ಲಕ್ಷ ರೂಪಾಯಿಗಳಲ್ಲಿ ಕೈಗಾರಿಕೆಯ ಶಾಖೆಯ ವರ್ಗದವರಿಗೆ ಎಷ್ಟು ಕೊಡಬೇಕೋ ಅದನ್ನು ಮೈಸೂರು ಸ್ಟೇಟ್ ಇಂಡಸ್ಟ್ರಿಯಲ್ ಫೈನಾನ್ಸಿಂಗ್ ಕಾರ್ಪೊರೇಷನ್ ಮುಖಾಂತರ ಕೊಡಬೇಕಾಗಿದೆ. ಈಗ ಅದಕ್ಕೂ ದುಡ್ಡು ಇಲ್ಲ, ಇದಕ್ಕೂ ದುಡ್ಡು ಇಲ್ಲವೆಂದು ಹೇಳುತ್ತಾರೆ. ಹೊರದೇಶಗಳಲ್ಲಿ ಸಣ್ಣ ಕೈಗಾರಿಕೆಗಳಿಗೆ ಕೊಡುವಂಥ ಸೌಲಭ್ಯ ಇಲ್ಲಿ ಸ್ವಲ್ಪವೂ ಕೊಡುತ್ತಾ ಇಲ್ಲ. ಮೈಸೂರು ಸರ್ಕಾರ ಇತ್ತೀಚೆಗೆ ಸಣ್ಣ ಕೈಗಾರಿಕೆಗಳನ್ನು ಕಡೆಗಣಿಸಿದ್ದಾರೆ. ಅಸಿಸ್ಟೆಂಟ್ ಡೈರೆಕ್ಟರ್ ಆಫ್ ಇಂಡಸ್ಟ್ರೀಸ್ ಅಂಡ್ ಕಾಮರ್ಸ್ ಆಫೀಸು ಈಗ ಒಂದು ಆರ್ನಮೆಂಟಲ್ ಆಫೀಸು ಆಗಿದೆ. ಅಲ್ಲಿರುವ ಡೆಪ್ಯೂಟಿ ಡೈರೆಕ್ಟರ್ ಮತ್ತು ಜಾಯಿಂಟ್ ಡೈರೆಕ್ಟರ್‌ಗಳಿಗೆ ಕೆಲಸವೇ ಇಲ್ಲ. ನಿಮ್ಮ ಅಧಿಕಾರಿಗಳಲ್ಲಿ ಜನರಿಗೆ ವಿಶ್ವಾಸವೇ ಇಲ್ಲ. ಕೆಲವರು ಉತ್ತಮವಾದ ಅಧಿಕಾರಿಗಳೂ ಇದ್ದಾರೆ. ಕೆಲವರನ್ನು ನಾವೇ ಸೋಮಾರಿಗಳನ್ನಾಗಿ ಮಾಡಿದ್ದೇವೆ. ಕಾರಣ, ಅವರಿಂದ ಉಪಯುಕ್ತವಾದ ಕೆಲಸಗಳನ್ನು ಸರಿಯಾಗಿಪಡೆಯುತ್ತಾ ಇಲ್ಲ.

ಇನ್ನು ಖಾದಿ ಬೋರ್ಡ್ ಬಹಳ ನಷ್ಟದಿಂದ ಕೆಲಸಮಾಡುತ್ತಿದೆ. 20ನೇ ಶತಮಾನದಿಂದ ಮುಂದುವರಿಗಾಗಿ ಕೊಡತಕ್ಕ ಹಣ ಇದರಲ್ಲಿ ಸರ್ವಥಾ ವೇಸ್ಟ್ ಆಗುತ್ತಿದೆ. ಆದ್ದರಿಂದ ಸಣ್ಣ ಕೈಗಾರಿಕೆಗಳನ್ನು ಮೈಸೂರು ರಾಜ್ಯದಲ್ಲಿ ರಿವಲ್ಯೂಷನೈಜ್ ಮಾಡದೇ ಹೋದರೆ ಈ ರಾಜ್ಯಕ್ಕೆ ಏಳಿಗೆ ಇಲ್ಲ. ಒಳ್ಳೆಯದಾಗುವುದಿಲ್ಲ. ಅದೇ ರೀತಿಯಲ್ಲಿ ಕೆಲವು ಕೊ-ಆಪರೇಟಿವ್ ಸೆಕ್ಟರಿನಲ್ಲಿ ಷುಗರ್ ಮಿಲ್‌ಗಳನ್ನು ಈಗ ತೆಗೆದುಕೊಂಡಿದ್ದಾರೆ. ಅನೇಕ ಷುಗರ್ ಮಿಲ್ಲುಗಳಲ್ಲಿ ಸರ್ಕಾರದವರು ಬಂಡವಾಳವನ್ನು ಕೋಟ್ಯಾಂತರ ರೂಪಾಯಿಗಳಷ್ಟು ಹಾಕಿದ್ದಾರೆ. ಬಿಜಾಪುರದಲ್ಲಿ 10–12 ಲಕ್ಷ ರೂಪಾಯಿಗಳಷ್ಟು ಮೆಷನರಿಗಳನ್ನು ತಂದು ಹೊರಗಡೆ ಬಿಸಿಲಿನಲ್ಲಿ ಹಾಕಿದ್ದಾರೆ. ಸರ್ಕಾರದವರು ಇದರ ಬಗ್ಗೆ ಇನ್ನೂ ಗಮನ ತೆಗೆದುಕೊಳ್ಳುತ್ತಾ ಇಲ್ಲ.

ಇನ್ನು ಅಲ್ಪ ಪ್ರಮಾಣದಲ್ಲಿ ಕೈಗಾರಿಕೆಗಳ ಅಭಿವೃದ್ಧಿಗೆ ಸೇಕಡ 15ರಷ್ಟು ಎನ್. ಇ. ಎಸ್. ಸ್ಕೀಂನಲ್ಲಿ ಇಟ್ಟುಕೊಂಡಿದ್ದಾರೆ. ಇದರ ಬಗ್ಗೆ ಸ್ಟೋರ್ಸ್ ಪರ್ಚೇಜ್ ಕಮಿಟಿಯವರು ಯಾವ ಗಮನವನ್ನು ಕೊಡುತ್ತಾ ಇಲ್ಲ. ಆದ್ದರಿಂದ ಸಣ್ಣ ಕೈಗಾರಿಕೆಗಳನ್ನು ಮೈಸೂರು ರಾಜ್ಯದಲ್ಲಿ ಬೆಳಸುವ ವ್ಯವಸ್ಥೆಮಾಡಬೇಕೆಂದು ನಾನು ಸರ್ಕಾರಕ್ಕೆ ಸೂಚಿಸಬಯಸುತ್ತೇನೆ. ಇವಕ್ಕೋಸ್ಕರವೇ ಬೇರೆ ಒಬ್ಬ ಮಂತ್ರಿಯನ್ನು ನೇಮಿಸಬೇಕು. ಅದರಿಂದ ಇನ್ನೂ ಹೆಚ್ಚಿಗೆ ಸಣ್ಣ ಕೈಗಾರಿಕೆಗಳನ್ನು ಬೆಳೆಸುವುದಕ್ಕೆ ಅವಕಾಶವಾಗುತ್ತದೆ. ಇದರಲ್ಲಿ ನಷ್ಟವಾಗುತ್ತಿರುವುದನ್ನು ತಡೆಗಟ್ಟಬೇಕು. ಕಷ್ಟಪಟ್ಟು ಸಂಪಾದನೆ ಮಾಡಿರುವ ಕೋಟ್ಯಾಂತರ ರೂಪಾಯಿಗಳನ್ನು ವ್ಯರ್ಥಮಾಡಬಾರದು. ಹಿಂದಿನಿಂದ ಬಂದಂಥ ಡಿಮ್ಯಾಂಡ್‌ಗಳನ್ನು ನಮ್ಮ ಮಂತ್ರಿಗಳು ಇಲ್ಲಿ ಇಟ್ಟಿದ್ದಾರೆ. ಮಾನ್ಯ ರಾಜಶೇಖರ ಮೂರ್ತಿಯವರು ಕ್ರಾಂತಿಕಾರಕವಾದ ರೀತಿಯಲ್ಲಿ ಹೆಚ್ಚಿಗೆ ಡಿಮ್ಯಾಂಡುಗಳನ್ನು ಇಲ್ಲಿ ಇಡುತ್ತಾರೆಂದು ನಾನು ಎಣಿಸಿದ್ದೆ. ಏಕೆ ಇಡಲಿಲ್ಲವೋ ಗೊತ್ತಿಲ್ಲ. ಮಾನ್ಯ ಶ್ರೀ ಅಪ್ಪಣ್ಣನವರು ಈ ಬಾಬಿನಲ್ಲಿ ಒಳ್ಳೆಯ ಇಂಟರೆಸ್ಟ್ ತೆಗೆದುಕೊಳ್ಳುತ್ತಿದ್ದಾರೆ. ಆದರೆ ಅವರಿಗೆ ದುಡ್ಡು ಇಲ್ಲ. ಸ್ಟೇಟ್ ಇಂಡಸ್ಟ್ರಿಯಲ್ ಫೈನಾನ್ಸಿಂಗ್ ಕಾರ್ಪೊರೇಷನ್, ಮತ್ತು ಇಂಡಸ್ಟ್ರಿಯಲ್ ಕೋ-ಆಪರೇಟಿವ್ ಸೊಸೈಟಿಗಳು ಸಾಕಷ್ಟು ದುಡ್ಡು ಕೊಡುತ್ತಾ ಇಲ್ಲ. ಕೇವಲ ಎರಡು ಕೋಟಿ ರೂಪಾಯಿಗಳನ್ನು ಮಾತ್ರ ಕೊಡುತ್ತಿದ್ದಾರೆ. ನಷ್ಟವಾಗುತ್ತಿರುವ ಕೈಗಾರಿಕೆಗಳಿಗೆ ಹಣವನ್ನು

ಅವರು ಕೊಡುತ್ತಿದ್ದಾರೆ. ಮೈಸೂರು ರಾಜ್ಯದಲ್ಲಿ 10 ವರ್ಷಗಳ ಅವಧಿಯಲ್ಲಿ ಬಂಡವಾಳದಲ್ಲಿ ಬಹಳ ನಷ್ಟವಾಗುತ್ತಿದೆ. ಈ ರೀತಿ 75 ಲಕ್ಷ ರೂಪಾಯಿಗಳನ್ನು ಭಿಕ್ಷೆಯಾಗಿ ಕೊಡುವುದು ಸರಿಯಲ್ಲ. ಆದುದರಿಂದ ಈ ಬೇಡಿಕೆಗೆ ಅನುಮತಿಯನ್ನು ಕೊಡಬಾರದು. ಇಂಡಸ್ಟ್ರಿಯಲ್ ಕೊ-ಆಪರೇಟಿವ್ ಎಸ್ಟೇಟ್ ಎಂದು ಮಾಡುವುದು ಒಳ್ಳೆಯದು. ಅದನ್ನು ಈಗ ಬೆಂಗಳೂರು, ಬೆಳಗಾಂ, ಮತ್ತು ಹುಬ್ಬಳ್ಳಿಯಲ್ಲಿ ಮಾಡುತ್ತಿದ್ದಾರೆ. ಆದರೆ ಮಫೊಸಿಲ್ ಪ್ಲೇಸಸ್‌ನಲ್ಲಿ ಸಣ್ಣ ಸಣ್ಣ ಕೈಗಾರಿಕೆಗಳನ್ನು ಬೆಳೆಸುವುದಕ್ಕೆ ಇವರು ಏನೂ ಮಾಡುತ್ತಾ ಇಲ್ಲ. ಜಪಾನಿನಲ್ಲಿ ಅಲ್ಲಿಯ ಸರ್ಕಾರದವರು ಯಾವ ರೀತಿ ಸಣ್ಣ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಲು ಕ್ರಮಗಳನ್ನು ತೆಗೆದುಕೊಂಡಿದ್ದಾರೋ ಅದೇ ರೀತಿ ಇಲ್ಲಿಯೂ ಕ್ರಮಗಳನ್ನು ತೆಗೆದುಕೊಳ್ಳಬೇಕು. ಕೈಗಾರಿಕೆ, ವ್ಯಾಪಾರ ಮತ್ತು ಮಾರ್ಕೆಟಿಂಗ್ ಈ ಮೂರರ ಬಗ್ಗೆ ಹೊಸ ವ್ಯವಸ್ಥೆ ರಾಜ್ಯದಲ್ಲಿ ಮಾಡಬೇಕು. ಮೈಸೂರು ರಾಜ್ಯದಲ್ಲಿ ಕೈಗಾರಿಕೆಗಳ ಪ್ರಗತಿಯಾಗಬೇಕಾದರೆ ಸಣ್ಣ ಕೈಗಾರಿಕೆಗಳಿಂದಲೇ ಹೊರತು ದೊಡ್ಡ ದೊಡ್ಡ ಕೈಗಾರಿಕೆಗಳಿಂದ ನಷ್ಟವೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†**Sri R. G. WALI** (Hubli).—While supporting the demands made by the hon. Minister for Industries, I would like to place before the House some of the suggestions.

Since the Reorganisation of the States the industrial progress of our State is not so satisfactory. We are happy that since the last one and half years special attention is being paid by the Government and they have declared a number of concessions for starting new industries. While going through the report I am happy to find that during the last nine months 19 applications for setting up new industries were received. The encouragements given to start new industries, no doubt, have created a good atmosphere and it is necessary to see that no difficulty is experienced by the industrialists and it should be made very clear that whenever any assistance is necessary, it should be made available as quickly as possible. There should not be any difficulty in getting licences and giving necessary raw materials and other necessary facilities like land, water and electricity. I find Sir, that there are a number of difficulties experienced by these new entrepreneurs who want to come and start new industries in Mysore State. Many times the industrialists who have started industries will have to feel sorry for having started industries. I want to suggest that all the facilities must be made available to them and any delay in giving such facilities will cause a great loss to Mysore State. Therefore, I suggest that all facilities should be made available as quickly as possible. I want to point out here that the Area Development Board was constituted and it has taken up the cause of developing certain areas by providing all the facilities like water, electricity and plots. But unfortunately the progress is very slow. But so far as I know, no industrial area has been formed except in Bangalore.

Sir, some of the Government industries, as already pointed by me and some of the Hon. Members, which were incurring heavy loss during the last one year, are progressing well. It is quite necessary that proper attention should be given towards the management and to see that the affairs are set right in a proper way. The industries cannot be managed by those sitting in the office or by those working in the Government offices. They have to be handled by proper persons and

(SRI R. G. WALI)

proper vigilance is very essential in this field. If the industries are not manned by proper persons, the money invested in various industries will be lost. The Hon. Minister for Industries and the Hon. Chief Minister have taken a lot of interest during the last one year to see that industries progress well. But let us not be happy about it. What we have to do is, we have to see that all industries progress well in the coming years. I have pointed out many a time that the industrialists are experiencing great hardship in securing raw materials. The lack of supply of raw materials is one of the main reasons for non-development of industries in the State. The industrialists are not getting steel. The Steel is now de-controlled. Due to this reason, the rate has gone up by 2 to 2½ times the original rate. When it was controlled it was available in sufficient quantity and the rate was also reasonable. The rates would not have risen to this level if it was controlled. The Central Government has taken a hasty decision. Many industries are not getting the required quantity of steel. They have to approach various other markets paying 2½ times more than the prescribed rate and obtain the required quantity to run their industry. Unfortunately, they are not getting even 25 per cent quota. If that is the position, what is to be done for steel? naturally who can afford to pay more? They will have to go outside. The Government must see that the legitimate quota for each industry is given without any delay.

I am told that some of the industries are given the import licence for steel. I have to point out that this import licence has become a farce. The actual quantity cannot be imported and has not been imported so far by any industry. Small quantity cannot be imported at all. Overhead charges will be more and they will have to pay extra money. Instead of allowing a situtation like this and making the industrialists to suffer, the required full quantity of steel may be secured by the Small Industries Corporation and made available to all those industries. Some other raw materials are required for some industries. Such industries have been given permission to import them. Some small industries are put to very great hardship to get those raw materials. But the authorities will easily escape by saying that those industries have been given permission to import their raw materials. But the question is whether it is possible to get these raw materials imported by these small industries? Unfortunately these small industries are not able to import the raw materials they require. Therefore, I suggest that these raw materials are imported by the Industrial Corporation and made available to these small industries also. This could be made possible by arriving at an understanding between the State and the Central Government.

Regarding the industrial licensing policy, I am told that the Centre has declared that the industries with capital up to Rs. 1 crore need not take any licence. But there is a clause restricting the import

of components. A licence wlll have to be taken from the Central Government if components worth of Rs. 10 lakhs are to be imported. Many industrialists are unable to get the components on account of this clause. They are finding it difficult to import the components they require. These components are very essential for some of the industries. Therefore the State Government should see that arrangements are made to import such components and see that these components are distributed among the industrialists so that they can start industries as early as possible.

I am very happy that recently some of these industries have come up in some of the Districts. Some of the industries have been proposed and the licences have been given. I am further told that 19 industries are to be started. These industries must come up and they must start functioning immediately. Some of the industries functioning should be provided with all facilities that are necessary for smooth functioning. As I said earlier, the most important thing that is required for industries is raw materials. It is very necessary that raw materials are supplied to them as early as possible without any trouble. Financial help should also be given so that new entrepreneurs may come up. The other facilities like electricity, water and plots should be given immediately without any reservation. I think if all these facilities are given, the industries will come up and the State will soon be industrialised and economically advanced. With these few words, I conclude my speech. Thank you, Sir.

11-30 A.M.

[MR. DEPUTY SPEAKER in the Chair]

† ಶ್ರೀ ಎಚ್. ಎನ್. ನಂಜೇಗೌಡ (ಅರಕಲಗೂಡು).—ಮಾನ್ಯ ಅಧ್ಯಕ್ಷರೇ, ಇವತ್ತು ರಾಷ್ಟ್ರದ ಕೈಗಾರಿಕಾ ಕ್ಷೇತ್ರದ ಅಭಿವೃದ್ಧಿ ಮತ್ತು ಏಳಿಗೆ ಯಾವ ಪ್ರಕಾರ ಆಗಿದೆಯೋ ಅದರಂತೆ ನಮ್ಮ ರಾಜ್ಯ ಆಗಿಲ್ಲ ಎಂದು ನನಗೆ ಅನಿಸುತ್ತದೆ, ಇದಕ್ಕೆ ಎರಡು ಕಾರಣಗಳು ಇವೆ ಎಂದು ತಿಳಿದುಕೊಂಡಿದ್ದೇನೆ. ಒಂದನೆಯದು ನಮ್ಮ ರಾಜ್ಯಕ್ಕೆ ಲಾಭಕರವಾದ ವಿಷಯಗಳನ್ನು ಪ್ರತಿಪಾದಿಸಿದೆ, ನಮ್ಮ ಸಂಸತ್ ಸದಸ್ಯರು ಕೇಂದ್ರದ ಮೇಲೆ ಒತ್ತಾಯ ತರದೆ ಮೌನವಾಗಿ ಕುಳಿತಿರುವುದು. ಇನ್ನೊಂದು ನಮ್ಮ ರಾಜ್ಯ ಸರ್ಕಾರದ ಅನಾಸಕ್ತಿ. ಇದನ್ನು ಏಕೆ ಹೇಳಬೇಕಾಯಿತು ಎಂದರೆ ನಮ್ಮಲ್ಲಿ ಬಿ. ಇ. ಎಲ್. ಇದೆ. ಇವರ ಸೆಕೆಂಡ್ ಯೂನಿಟನ್ನು ಸದ್ಯದಲ್ಲೇ ಇನ್‌ಸ್ಟಾಲ್ ಮಾಡಬೇಕಾದ ಪರಿಸ್ಥಿತಿ ಇದೆ. ಬೆಂಗಳೂರಿನಲ್ಲೇ ಮಾಡಬೇಕೆಂದು ಮೊದಲು ಪ್ರಪೋಸಲ್ ಇತ್ತು, 45 ಎಕರೆ ಜಮೀನನ್ನು ಕೊಡುವುದಕ್ಕೂ ಕೂಡ ನಮ್ಮ ಸರ್ಕಾರದವರು ಒಪ್ಪಿಕೊಂಡಿದ್ದರು. ಅಂತೂ ಏನೋ ಒಂದು ಕಡ್ಡಾಯಕ್ಕಾಗಿ ಒಪ್ಪಿಕೊಂಡ ಹಾಗೆ ಇಲ್ಲಿ ಅದನ್ನು ಸ್ಥಾಪನೆ ಮಾಡುವುದಕ್ಕೆ ಒಪ್ಪಿಕೊಂಡಿದ್ದರು, ಈಗ ಏನೋ ಒಂದು ನೆಪ ಮಾಡಿಕೊಂಡು ಬಿ. ಇ. ಎಲ್. ಮ್ಯಾನೇಜ್‌ಮೆಂಟಿನವರು ಅದನ್ನು ಡೆಲ್ಲಿಯಲ್ಲಿ ಇನ್‌ಸ್ಟಾಲ್ ಮಾಡಬೇಕೆಂದು ಶಿಫಾರಸು ಮಾಡಿದ್ದಾರೆ ಎಂದು ತಿಳಿದು ಬಂದಿದೆ. ಇದನ್ನು ಏಕೆ ಹೇಳಬೇಕಾಯಿತು ಎಂದರೆ ಇಂತಹ ಒಂದು ಯೂನಿಟ್ಟು ನಮ್ಮ ರಾಜ್ಯದಲ್ಲಿ ಆದರೆ ಹತ್ತು ಸಾವಿರ ಎಂಪ್ಲಾಯ್‌ಮೆಂಟ್ ಪೊಟೆನ್ಷಿಯಲ್ ಸಿಕ್ಕುತ್ತದೆ. ಯಾವುದೇ ಒಂದು ಕಾರಣಕ್ಕಾಗಿ, ಬೇರೆ ಕಡೆಗೆ ಇದನ್ನು ಕೊಡುವುದಕ್ಕೆ ಈ ಜಾಗ ಇದಕ್ಕೆ ಲಾಯಕ್ಕಲ್ಲ ಎಂದು ಕೊಲ್ಯಾಬೊರೇಟರ್ಸ್ ಏನು ಅಭಿಪ್ರಾಯ ವ್ಯಕ್ತಪಡಿಸಿದ್ದಾರೋ ಅದನ್ನೂ ಕೂಡ ವಿನಾ ಡೆಲ್ಲಿಯಲ್ಲಿ ಮಾಡಬೇಕೆಂದು ಹೇಳುವುದಕ್ಕೆ ಯಾವ ಕಾರಣ ಇತ್ತು ಅಂತ ಅನ್ನುವುದು ನನಗೆ ಅರ್ಥವಾಗುವುದಿಲ್ಲ. ಮಾನ್ಯ ಶ್ರೀ ರಾಜಶೇಖರಮೂರ್ತಿಗಳು ಇದರ ವಿಷಯದಲ್ಲಿ ಈ ಸಭೆಗೆ ಸರಿಯಾದ ತಿಳಿವಳಿಕೆ ಕೊಡಬೇಕೆಂದು ಹೇಳುತ್ತೇನೆ. ಇದರಲ್ಲಿ ನಮ್ಮ ರಾಜ್ಯದವರ ಅನಾಸಕ್ತಿಯೇ ಇವಕ್ಕೆ

(ಶ್ರೀ ಎಚ್. ಎನ್. ನಂಜೇಗೌಡ)

ಕಾರಣ ಎಂದು ಜನ ಮಾತನಾಡಿಕೊಳ್ಳುತ್ತಾ ಇದ್ದಾರೆ. ರಾಜ್ಯಸರ್ಕಾರದವರು ಪ್ರಯತ್ನ ಪಡದೆ, ಮತ್ತು ಸಂಸತ್ ಸದಸ್ಯರು ಮೈಮರೆತುದರಿಂದ ಈ ರೀತಿ ಆಗುತ್ತಾ ಇರುವುದು. ಇದು ಬಹಳ ದುರ್ದೈವದ ಸಂಗತಿ. ಇಂತಹ ವಿಷಯಗಳಲ್ಲಿ ಕೇಂದ್ರಸರ್ಕಾರದವರು ನಮ್ಮ ರಾಜ್ಯ ವನ್ನು ಅನಾಧರಣೆಯಿಂದ ಕಾಣುತ್ತಾ ಇರುವುದು ಬಹಳ ದುರ್ದೈವದ ಸಂಗತಿ. ಇದನ್ನು ಬಲ ಯುತವಾಗಿ ಪ್ರತಿಪಾದನೆ ಮಾಡಿ, ಟೆಕ್ನಿಕಲ್ ಒಪೀನಿಯನ್ ಕೂಡ ಈ ಯುನಿಟ್ಟು ಬೆಂಗಳೂರಿನಲ್ಲಿ ಇರಬೇಕೆಂದು ಇರುವುದರಿಂದ ಇಲ್ಲೇ ಸೆಂಕೆಂಡ್ ಯೂನಿಟ್‌ನ್ನು ಇನ್‌ಸ್ಟಾಲ್ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಒತ್ತಾಯಪೂರ್ವಕವಾಗಿ ತಿಳಿಸುತ್ತೇನೆ.

ರಾಜ್ಯ ಸರ್ಕಾರದ ಅನಾಸಕ್ತಿ ಬೇರೆ ವಿಷಯದಲ್ಲೂ ಕೂಡ ಇರುವ ಹಾಗೆ ಕಾಣುತ್ತದೆ. ಏಕೆಂದರೆ ನಾನು ಸರ್ಕಾರದ ವತಿಯಿಂದ ಒಂದು ಸಮಾಚಾರವನ್ನು ತರಿಸಿಕೊಂಡೆ. ನಮ್ಮ ಹಾಸನ ಜಿಲ್ಲೆಯಲ್ಲಿ 25 ಜನ ಅರ್ಜಿಹಾಕಿಕೊಂಡವರ ಪೈಕಿ 19 ಜನಕ್ಕೆ ಸ್ಟೇನ್‌ಲೆಸ್ ಸ್ಟೀಲ್ ಕೋಟಾ ಕೊಟ್ಟಿದ್ದಾರೆ. 1968 ರಿಂದ ಈಚೆಗೆ ಈ 19 ಜನಕ್ಕೆ ಸ್ಟೇನ್‌ಲೆಸ್ ಸ್ಟೀಲ್ ಕೋಟಾ ಕೊಟ್ಟಿರುವು ದನ್ನು ನೋಡಿದರೆ 5 ಜನರ ಬಗ್ಗೆ ಮಾಹಿತಿ ಇದೆ, ಇನ್ನು 14 ಬೋಗಸ್ ಕಂಪನಿಗಳು, ಅವರು ಮೆಷಿನರಿಯನ್ನೇ ಇನ್‌ಸ್ಟಾಲ್ ಮಾಡಿಲ್ಲ. ಏಕೆ ಇದನ್ನು ಹೇಳಬೇಕಾಯಿತು ಎಂದರೆ ಇವತ್ತು ಜ್ವಾಲನಯ್ಯನವರ ನೆಂಟರಿಗೆ ಕೊಟ್ಟಿದ್ದಾರೆ, ದೇವೇಗೌಡರ ನೆಂಟರಿಗೆ ಕೊಟ್ಟಿದ್ದಾರೆ, ಶಿವಪ್ಪನವರ ನೆಂಟರಿಗೆ ಕೊಟ್ಟಿದ್ದಾರೆ ಅಂತ ಹೇಳಿ ಜನ ಮಾತನಾಡಿಕೊಳ್ಳುತ್ತಾ ಇದ್ದಾರೆ. ದೇವೇಗೌಡರು 68 ರಿಂದ ಈಚೆಗೆ ಕಾಂಗ್ರೆಸ್‌ನಲ್ಲಿ ಸೇರಿದವರು; ಆದ್ದರಿಂದ ಇಂತಹ ಒಂದು ಪ್ರಸಂಗ ಬಂದಿದೆ.

ಶ್ರೀ ಎಚ್. ಡಿ. ದೇವೇಗೌಡ.—ನಂಜೇಗೌಡರಿಗೆ ನನ್ನ ಮೇಲೆ ಕಣ್ಣು ಬಹಳ ಜಾಸ್ತಿ ಅಂತ ಕಾಣುತ್ತದೆ. ದೇವೇಗೌಡರ ನೆಂಟರಿಗೆ ಸ್ಟೇನ್‌ಲೆಸ್ ಸ್ಟೀಲ್ ಕೋಟಾ ಕೊಟ್ಟಿದ್ದಾರೆ ಎಂದು ಅವರು ಹೇಳಿದರು. ನಮ್ಮ ವಂಶದವರಾಗಲಿ ನಮ್ಮ ಸಂಬಂಧೀಕರಲ್ಲಾಗಲಿ ಎಲ್ಲರೂ ಹೊಲ ಉಳು ವವರೇ, ನಮ್ಮ ತಾಯಿ ಹೊಲದಲ್ಲಿ ಉಳುಮೆ ಮಾಡುವವರಿಗೆ ಹೊತ್ತಿಗೆ ಸರಿಯಾಗಿ ಊಟ ತರುವ ಅಭ್ಯಾಸ ಇಟ್ಟುಕೊಂಡಿದ್ದಂಥವರು, ಇದಕ್ಕಿಂತ ಹೆಚ್ಚಿಗೆ ಇನ್ನೇನನ್ನು ಹೇಳಲಿ? ಒಂದುವೇಳೆ ಅಧಿಕಾರಿಗಳ ಹತ್ತಿರವಾಗಲಿ, ಮಂತ್ರಿಗಳ ಹತ್ತಿರವಾಗಲಿ ಹೋಗಿ ಇಂಥವರಿಗೆ ಯಾರಿಗಾದರೂ ಸ್ಟೇನ್‌ಲೆಸ್‌ಸ್ಟೀಲ್ ಕೋಟಾ ಕೊಡಿ ಎಂದು ಹೇಳಿದಂತಹ ನಿದರ್ಶನ ಅವರು ತೋರಿಸಿಕೊಟ್ಟರೆ ನಾನು ತಪ್ಪು ಒಪ್ಪಿಕೊಳ್ಳುತ್ತೇನೆ, ಬೇಕಾದರೆ ಈ ಸಭೆಯ ಸದಸ್ಯತ್ವಕ್ಕೆ ರಾಜೀನಾಮೆ ಕೊಡುತ್ತೇನೆ.

ಶ್ರೀ ಎಚ್. ಎನ್. ನಂಜೇಗೌಡ.—ಎನ್‌ಕ್ವೈರಿ ಆಗಲಿ ಅಂತ ಒತ್ತಾಯ ಮಾಡುತ್ತಾರೆ ಅಂತ ನಾನು ತಿಳಿದುಕೊಂಡಿದ್ದೆ.

Sri H. D. DEVE GOWDA.—I welcome the suggestion. Whether they are the relatives of Sri Jwalanaiah or Sri Sivappa or anybody, an enquiry should be held and if there is any illegal transaction he must be punished.

ಶ್ರೀ ಎಚ್. ಎನ್. ನಂಜೇಗೌಡ.—ಇದನ್ನು ಏಕೆ ಹೇಳಬೇಕಾಯಿತು ಎಂದರೆ ಇವತ್ತು ಅಂತಹ ಬೋಗಸ್ ಕಂಪನಿಯವರು ಮೆಷಿನರಿಯನ್ನೂ ಕೂಡ ಇನ್‌ಸ್ಟಾಲ್ ಮಾಡದೆ ಕೋಟಾ ಪಡೆದುಕೊಂಡು ಬ್ಲಾಕ್ ಮಾರ್ಕೆಟ್ ಮಾಡುತ್ತಾ ಇದ್ದಾರೆ. 19 ಜನರ ಪೈಕಿ 14 ಜನರಲ್ಲಿ ಮೆಷಿನರಿಯೇ ಇಲ್ಲ, ಆದ್ದರಿಂದ ನಾನು ಮಾನ್ಯ ಮಂತ್ರಿಗಳಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಬಿ. ಪಿ. ಗಂಗಾಧರ್.—ಪಾಯಿಂಟ್-ಆಫ್-ಆರ್ಡರ್ ಸರ್, ಈಗ ಮಾನ್ಯ ಸದಸ್ಯರು ಮಾತನಾಡುತ್ತಾ ಸ್ಟೈನ್‌ಲೆಸ್‌ಸ್ಟೀಲ್ ಕೋಟಾವನ್ನು ಶಿವಪ್ಪನವರ ಬಂಧುಗಳಿಗೆ ಕೊಟ್ಟಿದ್ದಾರೆ ಎಂದು ಹೇಳಿದರು. ಮತ್ತು ಇನ್ನೂ ಕೆಲವರು ಬಂಧುಗಳಿಗೆ ಕೊಟ್ಟಿದ್ದಾರೆ ಎಂದು ಅವರು ಹೇಳಿ ದರು. ಒಂದು ವೇಳೆ ಅವರ ವಂಶಸ್ಥರು ಯಾರಾದರೂ ಅಕಸ್ಮಾತ್ತಾಗಿ ಪಾತ್ರೆಗಳ ಟ್ರೇಡರ್ಸ್ ಆಗಿದ್ದರೆ ಅಂಥವರಿಗೆ ಕೊಡಬಾರದು ಅಂತ ಕಟ್ಟಲೆ ಇದೆಯೇ? ಅಂಥವರು ಆ ವ್ಯವಹಾರ ವನ್ನೇ ಬಿಟ್ಟು ಬಿಡಬೇಕು ಅಂತ ಮಾನ್ಯ ಸದಸ್ಯರ ಅಭಿಪ್ರಾಯವೇ? ಅವರ ನೆಂಟರು ಯಾರಾದರೂ ಇದ್ದರೆ ಅವರು ಹಿಂದಿನಿಂದ ಮಾಡಿಕೊಂಡು ಬಂದಿರತಕ್ಕ ಒಂದು ಪದ್ಧತಿಯನ್ನು ಮುಂದೆಯೂ ಮಾಡಿಕೊಂಡು ಬಂದರೆ ಅದರಲ್ಲಿ ತಪ್ಪೇನಾದರೂ ಇದೆಯೆ?

ಉಪಾಧ್ಯಕ್ಷರು.—ಇದು ಪಾಯಿಂಟ್ ಆಫ್ ಆರ್ಡರ್ ಆಗುವುದಿಲ್ಲ.

ಶ್ರೀ ಎಚ್. ಎನ್. ನಂಜೇಗೌಡ.—ನಾನು ಶಿವಪ್ಪನವರ ಬಗ್ಗೆ ಆಗಲಿ ಇತರರ ಬಗ್ಗೆ ಆಗಲಿ ಹೇಳುತ್ತಿಲ್ಲ, ಜನ ಆ ರೀತಿ ಮಾತನಾಡಿಕೊಳ್ಳುತ್ತಾ ಇದ್ದಾರೆಂದು ಹೇಳಿದೆ. ಇದನ್ನು ಕೊಟ್ಟಿರುವ ರೀತಿಯಲ್ಲಿ ಸ್ವಲ್ಪ ಅನುಮಾನಕ್ಕೆ ಆಸ್ಪದವಾಗಿದೆ ಎಂಬುದನ್ನು ಹೇಳುತ್ತಾ ಇದ್ದೆ. 68ರಲ್ಲಿ ಈ ಕೋಟಾ ಕೊಟ್ಟರಲ್ಲಾ ಅಲ್ಲಿಂದ ಇಲ್ಲಿಯವರೆಗೂ ನಿಮ್ಮ ಅಧಿಕಾರಿಗಳು ಏನು ಮಾಡುತ್ತಾ ಇದ್ದರು? ಕತ್ತೆ ಕಾಯುತ್ತಾ ಇದ್ದರೇ? ಕೋಟಾ ದುರುಪಯೋಗ ಪಡಿಸಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟದ್ದು ಬಹಳ ಅನ್ಯಾಯ, ಇದರ ಬಗ್ಗೆ ತನಿಖೆ ಮಾಡಿ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಹಾಸನದಲ್ಲಿ ಮೊನ್ನೆ ಒಂದು ವಿಚಾರ ಗೊತ್ತಾಯಿತು, ಕಾಂಗ್ರೆಸ್ ಸದಸ್ಯರಾದ ಡಿ. ಎಸ್. ಗೌಡರ ಮನೆಯವರಿಗೆ ಸ್ಪಿರಿಟ್ ಕೋಟಾ ಕೊಟ್ಟಿದ್ದಾರೆ ಅಂತ ಗೊತ್ತಾಯಿತು, ಅಧಿಕೃತವಾಗಿ ಕೊಟ್ಟಿದ್ದಾರೋ ಇಲ್ಲವೋ ಎಂಬುದು ಗೊತ್ತಿಲ್ಲದೇ ಇರುವಾಗ ಅದನ್ನು ಸರಿಯಾಗಿ ವಿಚಾರಿಸಿ ಹೇಳಬೇಕಾಗುತ್ತದೆ.

ಷುಗರ್ ಫ್ಯಾಕ್ಟರಿ ಮೊಲಾಸಸ್‌ನ್ನು ಉಪಯೋಗ ಮಾಡಿ ಡ್ರಿಂಕ್ಸ್ ತಯಾರು ಮಾಡುವುದಕ್ಕೆ ಸರ್ಕಾರದವರೇ ಬ್ರೂಯರೀಸ್ ಓಪನ್ ಮಾಡಬೇಕು. ಇದನ್ನು ಖೋಡೇಸ್ ಅನ್ನುವವರಿಗೆ ಕೊಟ್ಟು ಅವರು ಅನುಚಿತವಾಗಿ ಲಾಭ ಸಂಪಾದನೆ ಮಾಡಿಕೊಳ್ಳುವಂತಹ ಒಂದು ಬಿಸಿನೆಸ್ ಆಗಿ ಮಾಡಿಕೊಳ್ಳುತ್ತಾ ಇದ್ದಾರೆ. ಆದ್ದರಿಂದ ಈಗಲಾದರೂ ಸರ್ಕಾರದವತಿಯಿಂದಲೇ ಬ್ರೂಯರೀಸ್‌ನ್ನು ಓಪನ್ ಮಾಡಿಸಬೇಕೆಂದು ಮಾನ್ಯ ಸಚಿವರಿಗೆ ಸೂಚನೆ ಕೊಡುತ್ತೇನೆ.

ಇನ್ನು ಪ್ರಾಮುಖ್ಯವಾಗಿ ಹೇಳಬೇಕಾದ ವಿಷಯ ಎಂದರೆ ಎಂ. ಎಸ್. ಕೆ. ಮಿಲ್ಸ್‌ನ ವಿಷಯ. ಇದರಲ್ಲಿ ರಾಜಶೇಖರ ಮೂರ್ತಿಯವರ ಕೈವಾಡ ಇಲ್ಲ, ಇವರು ಹೊಸದಾಗಿ ಬಂದಿರುವವರು ಅಂತ ಅನ್ನುವುದನ್ನು ಅರ್ಥಮಾಡಿಕೊಂಡಿದ್ದೇನೆ. ಏಕೆಂದರೆ ಇದು 62ನೇ ಇಸವಿಯಲ್ಲಿ ಪ್ರಾರಂಭವಾದದ್ದು. ಮೊದಲು 14.5 ಲಕ್ಷ ರೂಪಾಯಿಗಳನ್ನು ಈ ಮಿಲ್ಲಿಗೆ ಕೊಟ್ಟರು. ಇಷ್ಟು ಹಣ ಕೊಡುವುದಕ್ಕೆ ಕಾರಣ ಇರಲಿಲ್ಲ, ಕೊಡುವಂತಹ ಸ್ಥಿತಿಯಲ್ಲಿ ಅದು ಇರಲಿಲ್ಲ. ಆದರೂ ಕೂಡ ಕೊಟ್ಟರು. ಅವಾದಮೇಲೆ ಪುನಃ ಮುಚ್ಚಲಾಯಿತು. ಆಗ 60 ಲಕ್ಷ ರೂಪಾಯಿಗಳನ್ನು ಕೊಟ್ಟರು. ಈ ಮಿಲ್ಲಿನ ಅಸೆಟ್ಸ್‌ಗಿಂತ ಲಯಬಿಲಿಟೀಸ್ ಜಾಸ್ತಿಯಾಗಿದೆ. ಹಾಗಿರುವಾಗ ಮತ್ತೆ 65 ಲಕ್ಷ ಕೊಟ್ಟರು. 62ನೆಯ ಇಸವಿಯಲ್ಲಿ ಚುನಾವಣೆ ನಡೆಯಿತು, ಆಗ ನಿಜಲಿಂಗಪ್ಪನವರು ಕೈವಾಡ ನಡೆಸಿದರು ಎಂದು ಹೇಳುತ್ತಿದ್ದಾರೆ. ಮಿಲ್ಲಿನ ಅಸೆಟ್ಸ್—65 ಲಕ್ಷವಿರುವಾಗ ಹೇಗೆ ಸರಕಾರ ಹೆಚ್ಚು ಹಣ ಕೊಟ್ಟಿದೆ? ಹೀಗೆ ಮಾಡಿರುವುದು ಸ್ಟೇಟ್ ಏಡ್ ಟು ಇಂಡಸ್ಟ್ರೀಸ್ ಆಕ್ಟಿಗೆ ವಿರೋಧವಾಗಿಲ್ಲವೇ? ಸರಕಾರ ಇಷ್ಟು ಸಹಾಯ ಮಾಡಿದರೂ ಕಾರ್ಖಾನೆಯನ್ನು ಸರಿಯಾಗಿ ನಡೆಸುವುದಕ್ಕಾಗಿಲ್ಲ. ಸರಕಾರ ಕೊಟ್ಟ ಹಣವನ್ನು ಸಾಲ ತೀರಿಸಲು ಉಪಯೋಗಿಸಿದ್ದಾರೆ, ದುರುಪಯೋಗಿಸಿದ್ದಾರೆ, ದುರುಪಯೋಗ ಮಾಡಿದ್ದಾರೆ. ಹೀಗಿದ್ದರೂ ಕೂಡ ಸುಮ್ಮನಿರುವುದು ನೋಡಿದರೆ ಆಶ್ಚರ್ಯವಾಗುವುದು. 67ರ ಕೊನೆಗೆ ಸಾಲ, ಷೂರಿಟಿ ಎಲ್ಲಾ ಸೇರಿ ಸರಕಾರ 127 ಲಕ್ಷ ಕೊಟ್ಟಿದೆ. ಎಂ.ಎಸ್.ಕೆ. ಮಿಲ್ಸ್ ಅಸೆಟ್ಸ್ 67ರ ಕೊನೆಗೆ 125 ಲಕ್ಷ. ಲಯಬಿಲಿಟೀಸ್ ಹೆಚ್ಚಾಗುತ್ತಿದೆ. ಹಾಗಿರುವಾಗ 127 ಲಕ್ಷ ಕೊಟ್ಟರು, ಮತ್ತೆ 21 ಲಕ್ಷ ಕೊಟ್ಟರು. ಹಾಗೆ ಕೊಡುವಾಗ ನಿಜಲಿಂಗಪ್ಪನವರು ಮಾಡಿರುವ ಒಂದು ಸ್ಟೇಟ್‌ಮೆಂಟ ಇದೆ, ಈ ಸಭೆಯಲ್ಲಿ ಆ ಸ್ಟೇಟ್‌ಮೆಂಟ್ ಹೇಳಿದರೆ ಅರ್ಥವಾಗುವುದು. 10–7–67ರಲ್ಲಿ ದಿಗಂಬರರಾವ್ ಅವರು ಈ ಬಗ್ಗೆ ಪ್ರಶ್ನೆ ಕೇಳಿದಾಗ ಅವರು ಮಾಡಿರುವ ಸ್ಟೇಟ್‌ಮೆಂಟನ್ನು ಓದುತ್ತೇನೆ.

> "The Government have carefully considered the report of the enquiry committee and are of the opinion that the Mill do not have a case on economic grounds. It has not contributed anything towards the economic working and the sound financial position of the Mills. Lately it has become an unsound proposition on account of heavy accumulations. Therefore, there appears to be no alternative to the decision to close the Mills as already resolved by the Board."

ಇದಾದ ನಂತರ ಇತ್ತೀಚೆಗೆ 90 ಲಕ್ಷ ಷೇರು ಎಂದು ಟ್ರೀಟ್ ಮಾಡಬೇಕು, ಮತ್ತೆ 50 ಲಕ್ಷ ಸಾಲ ಕೊಡಬೇಕು ಎಂದು ಯಾವ ಕಾರಣದಿಂದ ತೀರ್ಮಾನ ಮಾಡಿದರು? ಇತ್ತೀಚೆಗೆ ಒಬ್ಬರನ್ನು ಅಲ್ಲಿಗೆ ತಂದುಹಾಕಿದರು, ಅಗ್ರಿಮೆಂಟ್ ನನ್ನ ಹತ್ತಿರವಿದೆ. ಆ ಮಿಲ್ಲಿನ ಸರ್ವಾಧಿಕಾರಿ ಆ ಮನುಷ್ಯ.

(ಶ್ರೀ ಎಚ್. ಎನ್. ನಂಜೇಗೌಡ)

ಅವನು ಕೇವಲ ಎರಡು ಲಕ್ಷ ಕೊಟ್ಟಿದ್ದಾನೆ. ಇಡೀ ಬಂಡವಾಳ ಸರಕಾರದ್ದಿದೆ. ಅಲ್ಲಿರುವ ಸರ್ವಾಧಿಕಾರಿಗೇನು ಆಸಕ್ತಿ ಇದೆ? ಆಗ್ರಿಮೆಂಟಿನ ಪ್ರಕಾರ ಅವನಿಗೆ ಜವಾಬ್ದಾರಿಯಿಲ್ಲ, 15 ಸಾವಿರ ಆತ ದಾನ ಕೊಡಬಹುದು, ವಿಲ್ ಟರ್ನ್‌ಓವರ್ ಮೇಲೆ ಸೇಕಡ ಮೂರುಕಾಲು ಅವನಿಗೆ ಲಾಭ ಕೊಡಬೇಕು, ಅದರಲ್ಲಿ ವೀರೇಂದ್ರ ಪಾಟೀಲರಿಗೆ ಎಷ್ಟು ಬರುತ್ತದೆ ಎಂದು ಜನರು ಕೇಳುತ್ತಿದ್ದಾರೆ. ಇಡೀ ಬಂಡವಾಳ ಸರಕಾರ ಹಾಕಿ ಬೇರೆ ಜನ ಅಲ್ಲಿ ತಂದುಹಾಕಿ ಅವರಿಗೆ ಲಾಭ ಕೊಡುವಾಗ ಸರಕಾರದಲ್ಲಿರುವವರಿಗೆ ಪಾಲಿಲ್ಲ ಎಂದರೆ ಎಂಬುದು ಹೇಗೆ? ಇದರಲ್ಲಾಗಿರುವ ಭಾರಿ ಅನ್ಯಾಯ ನೋಡಿದರೆ ರಾಜ್ಯದ ಹಣ ಪೋಲಾಗುವುದು ಕಂಡುಬರುತ್ತದೆ, ಈ ಸರಕಾರ ಅಧಿಕಾರ ದುರುಪಯೋಗ ಮಾಡಿ ರಾಜ್ಯದ ಹಣ ಲೂಟಿ ಮಾಡುತ್ತಿದೆ, ಆದುದರಿಂದ ಎಂ.ಎಸ್.ಕೆ. ಮಿಲ್ಸ್ ಅಫೇರ್ಸನ್ನು ಕೇಂದ್ರ ಸರಕಾರ ನೋಡಿ ಅದು ಜವಾಬ್ದಾರಿ ನಿಗದಿಮಾಡಬೇಕೆಂದು ಈ ಸಭೆಯ ಮೂಲಕ ಆ ಸರಕಾರವನ್ನು ಪ್ರಾರ್ಥನೆ ಮಾಡುತ್ತೇನೆ.

ಕೊನೆಯದಾಗಿ ಒಂದೆರಡು ಸೂಚನೆ ಕೊಡುತ್ತೇನೆ. ಅದು ಸ್ಟೋರ್ಸ್ ಪರ್ಚೇಸ್ ಇಲಾಖೆಯ ಡೈರೆಕ್ಟರಿಗೆ ಸಂಬಂಧಪಟ್ಟಿದೆ. ಮೂರನೆ ಪುಟದಲ್ಲಿ ಹೀಗಿದೆ:

1. Enquiry *re.* body building of 20 seater mini bus to Bagalkot Gram Sevak Training Centre ;
2. Enquiry *re.* body building of 20 seater mini bus to the Dharwar Gram Sevak Training Centre ;
3. Enquiry *re.* supply of School broadcasting system ;
4. Enquiry *re.* suppy of 16 mm Sound Projector.

ಟೆಕ್ನಿಕಲ್ ಕಮಿಟಿಗೆ ನಮ್ಮ ಡೈರೆಕ್ಟರ್ ಬೆಲೆ ಕೊಟ್ಟಿಲ್ಲ. ತಮಗೆ ಬೇಕಾದವರಿಗೆ ಕೊಟ್ಟಿದ್ದಾರೆ, ಟೆಂಡರ್ ಕರೆದು ಕೊಟ್ಟಿಲ್ಲ. ಕೋಟೇಷನ್ಸ್ ಕರೆಯುವುದು ಏತಕ್ಕೆಂದರೆ ಸರಿಯಾದವರಿಗೆ ಕೊಡಬೇಕೆಂದು. ಅದನ್ನು ಬಿಟ್ಟು ಬೇರೆಯವರಿಗೇಕೆ ಕೊಡುವುದು? ಇವರಲ್ಲೇನೋ ಲಂಚದ ಸನ್ನಾಹವಿರಬೇಕು. ಈ ಡೈರೆಕ್ಟರಿಗೆ ಹಣ ಹೆಚ್ಚಾಗಿ ಕೊಡಬೇಕಾಗಿಲ್ಲ, ಒಂದು ದಿವಸ ಇಂಟರ್‌ನ್ಯಾಷನಲ್ ಹೊಟೇಲಿಗೆ ಕರೆದುಕೊಂಡುಹೋಗಿ ಆರ್ಡರ್ ಸೆಕ್ಸ್ ಕಂಪೆನಿ ಕೊಡಿಸಿದರೆ ಸಾಕು, ಅದರಿಂದ ಒಳ್ಳೆಯದಾಗುತ್ತದೆ ಎಂದು ಜನ ಹೇಳುತ್ತಾರೆ. ಇಂಥವರನ್ನು ಡೈರೆಕ್ಟರ್ ಮಾಡಿದರೆ ಒಳ್ಳೆಯ ಹೆಸರು ಬರುವುದಿಲ್ಲ, ಇವರನ್ನು ತೆಗೆಯಬೇಕು. ತಪಶೀಲು ಬೇಕಾದರೆ ಹೇಳುತ್ತೇನೆ. ಒಳ್ಳೆಯದಾಗಬೇಕೆಂಬ ಅಭಿಪ್ರಾಯವಿರುವುದರಿಂದ ಇದನ್ನು ಹೇಳುವುದು. I am ready to discuss with the Minister and bring to his notice all the lapses. I request him to take action and see that he is changed from that post immediately. Otherwise, he will get a bad name.

ಇಷ್ಟು ಹೇಳಲು ಅವಕಾಶ ಕೊಟ್ಟಿದ್ದಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

† Sri R. M. DESAI (Bilgi).—Mr. Speaker, Sir, while welcoming and supporting the Budget Demands for Industry, I would like to make some observations. Members have talked of the principles and other important matters and I would like to talk on some of the practical aspects of Industry in our State.

Mysore State has no doubt its heritage of having all industries right from pig iron to coal. If we look at the past debates of the Mysore Assembly, we will find that even in those days members have bombarded eminent persons like Visveswariah for having started a concern like the Bhadravathi Iron Works. They were then saying that these industries were going to be utter failures. But today they have become feathers in our cap. No doubt, we have passed through the

stage of defects and improvements. We must remember that industries are not built in a day ; nor can they be built by one person ; nor can we improve the industries by dismissing some officials. There are so many factors that have to be taken into consideration for the development of industries. We have striven hard to strengthen old industries. We are trying hard to improve them. Efforts are also in progress by all the Government agencies to bring in new industries. Mysore has to its credit many minerals like iron, copper, gold and I think even our mineral Department is still venturing to find out some more minerals. The latest is the copper findings in Chitradurga district, which we think must go ahead so that we may find more copper, because it is so important a metal that it is required in a variety of industries.

Now Sir, looking to our present Government industries, we have got six departmental concerns and eight companies in which I think considerable amount has been invested by the Government. Looking to the Balance sheet of these cancerns, we are glad to see that we are on the improvement side. The Bhadravathi Iron and Steel Works has been a matter of concern and it has aroused attention of this House many a time. Sir, it is not a small venture. It is a pioneer venture in the whole of India, if I am not mistaken when it was started. Now it requires such a huge amount of development and it is still in a developing stage. How can you expect an industry to yield profits when it is still in a developing stage ? It is not possible. Looking to the balance sheet, we should say that the deficit or loss is a national loss and when the factory reaches its final stage production, I think we will not be able to cope with the demand for the best alloy. Therefore, there is very bright future for that industry. I thank the Department of Industries and the Industries Ministry for having taken up the matter on very urgent basis.

About the REMCO, we have been told that it is in a hopeless condition. I do not think it is so. Some of the conditions prevailing have made it like that. A little bit of rethinking in the matter is necessary and I think we should improve the conditions in REMCO also. Then we can make it work on profitable lines.

Regarding the other ventures, I think actually we have about 3 to 4 ventures which are making profit already. Sri D. M. Siddiah in his speech has already suggested that all the concerns started by the Government need not be expected to work on profit basis and that they should not have profit motive. But we cannot afford to maintain them always sustaining loss. Ideologies are different from practical working. Any way, we are making our efforts in this regard and I hope we are going to achieve better results in a very short time.

Sri K. H. PATIL.—What are the suggestions of the Hon'ble Member to make them self-supporting ?

Sri R. M. DESAI.—We must think of them. It is not merely a question of starting fresh industries and having 1,000 industries, but we should take a few of them and work them in a profitable manner. Let us not be very pessimistic about industries taken up by the Government. There is a bright future for them.

Sri C. K. RAJIAH SHETTY.—You want to continue the inexcusable lapses that have occurred in some of the major industries ?

Sri R. M. DESAI.—Certainly if there are any inexcusable lapses, we will have to correct them. There is no doubt about it But the criticisms offered must be constructive. We should not criticise merely for the sake of criticism. One must also show the way to improve. There are so many industries in the country which have faced critical times. These are not industries which can come up in a day.

Now let me not take much time of the House. I will go to the salient points. The Mysore Government is welcoming industries into the State. Sir, I thank the Government for inviting successful industrialists into the State. But there are some people in our own State who are eager to put up industrial units. Why not give them the same impetus ? Let us give them the same impetus as we give to other people coming from outside the State. We have seen some people who come to our State, they will have their own people in all ranks from the sweeper to the Managing Director and there will be nobody else entering the compound. I do not blame them for being like that. I am only saying that we can give the same impetus to our own people within the state who want to start industries. There is some sort of a prejudice that all industrialists are blackmarketeers. The Government have offered seven concessions for the people from outside the State to start industries in the State, which have been enumerated in this report. You have not included the concession for water. I suggest that water also should be given as a concession, to the new industries, no matter even if we spend some money for making the water available. When you are giving so many concessions, why not give this concession for water also ? It is not going to cost us much. That is my suggestion. Sir, I understand that the rate at which water is charged to industries is Rs. 7-50. For some of the industries, the water requirements are very great. There must be some concessions for the big industries in this matter. I do not say that this Water rate should not be collected but there must be some concession.

Now coming to the Mysore State Industrial Area Development Corporation, the amount that has been provided this year is very meagre ; in my opinion, very very meagre. I think some facilities have been enumerated here -three facilities for promoting industries :

1 to complete the project report.

2 marketing data and participating in the share capital with or without controlling voice ;

3 underwriting new issues of shares.

Now, if we go through the policy that we have in respect of MSIAD many industries are coming up. My suggestion to the Government is, there are some of the industries in which our money is locked up and many of the industries are standing on their own legs and they are on a sound basis. Why not take that amount from those industries and invest it on fresh industries which are coming up instead of keeping it blocked ? What is the intention of starting this MSIAD ? It is to give impetus to new industries. My humble suggestion to the Government is to have a rethinking in the matter.

Now coming to Agro-Industries in which I am personally concerned, I have got statistics here. In our country, we have been growing plenty of sugar cane, out of which we produce more jaggery than sugar. 1964-65 figures show that India had grown 122 million tons of sugarcane whereas Cuba which is the second biggest had grown only 60 million tons. The sugarcane crushed in that year was only 770 lakh tons for Jaggery and khandsari out of which 77,54,100 tons were crushed for jaggery alone. In jaggery making we incur a colossal loss because of the conventional method. By the vacuum process which is being adopted the recovery will be 15 per cent and for that we could have crushed only 1,16,31,150 tons. So the loss is about 38,77,000 tons of jaggery. This has been wasted as fuel because we turn the crushed sugarcane into fuel. Therefore I suggest that such of the industries which are agro-based and which are making real efforts in this line should be encouraged.

12-00 Noon

We have a cell to find out why some of the industries have failed in our State, and what is required to make them work well. In this connection I would suggest that the smaller industries also should be looked into and consultations held with those people also. If we allay some of their fears and difficulties, it will have a very good impact on our industries.

Sir, I had several more point to touch, but for lack of time, I do not go into them now.

With these words, I thank the Chair.

†ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ (ಚಿಕ್ಕನಾಯಕನಹಳ್ಳಿ).—ಮಾನ್ಯ ಸಭಾಪತಿಯವರೇ, ನಮ್ಮ ಮುಂದಿರುವ ಬೇಡಿಕೆಗಳನ್ನು ನೋಡಿದರೆ, ಸರ್ಕಾರ ಬೊಳ್ಳು ಬೇಡಿಕೆಗಳಿಗೆ ಹಣ ಖರ್ಚು ಮಾಡುವುದು ನೋಡಿದರೆ ದೇಶ ದಿವಾಳಿಯಾಗುವ ಹಾಗೆ ಕಾಣುತ್ತದೆ. ಕೈಗಾರಿಕೆ ವಿಚಾರದಲ್ಲಿ ಸರ್ಕಾರ ಅಕ್ಷಮ್ಯ ಅಪರಾಧ ಮಾಡುತ್ತಿರುವುದರಿಂದ ಇವತ್ತು ಒಂದು ತರಹದ ಪಜಾ ಕೊಡಬೇಕು ಎಂಬ ಭಾವನೆ ಬರುತ್ತದೆ. ಹೊಸದಾಗಿ ಒಂದು ಕೈಗಾರಿಕೆಯನ್ನೂ ಸ್ಥಾಪನೆ ಮಾಡಿಲ್ಲ. ಬಿರ್ಲಾ ಕಂಪನಿಯ ತಜ್ಞರನ್ನು ಭೇಟಿ ಮಾಡಿ ನಾನು ಕೇಳಿದ್ದೇನೆ. ಖಾಸಗಿ ಕೈಗಾರಿಕೆಗಳ ಬಗ್ಗೆ ಒಬ್ಬ ತಜ್ಞರು ಒಂದು ಕಡೆ ಹೀಗೆ ಹೇಳಿದ್ದಾರೆ.

"Maintaining time schedule for erection of any plant or industry and production programme ;

(ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ)

To have keen watch on installed capacity, targeted production, and actual performance ;

Never to idle any machinery, vehicle or man-power ;

To have thorough knowledge of quality and price of raw materials and finished goods and cost of production, and market value.

Selection of right men from the highest job and to any other heads of sections with proper qualifications, experience and integrity to maintain standards and norms ;

To have eternal watch on ever increasing competition and taxes ;

To be aware of latest scientific and technological developments in every line of all sections of industry by concerned Heads of Departments ;

To have a keen watch on study supply of raw materials and fuel ;

Necessity of research laboratories in all major industries.

ಈ ಒಂದು ನೀತಿ ನಿಯಮಗಳನ್ನು ಇವರು ಪಾಲಿಸುತ್ತಿಲ್ಲ.

ಕೈಗಾರಿಕಾ ಕ್ಷೇತ್ರದಲ್ಲಿ ಸರಕಾರಿ ಕ್ಷೇತ್ರ ಖಾಸಗಿ ಕ್ಷೇತ್ರ ಎಂದು ಎರಡು ವಿಭಾಗ ಮಾಡಬಹುದು. ಸರಕಾರಿ ಕ್ಷೇತ್ರದ ಇಲಾಖೆಯಲ್ಲಿ ಹೇಗೆ ಕೆಲಸಕಾರ್ಯಗಳು ನಡೆಯುತ್ತಿವೆ ಅಂದರೆ ಡಾಕ್ಟರ ಇರಬೇಕಾದ ಸ್ಥಳದಲ್ಲಿ ಇಂಜಿನಿಯರ್ ನೇಮಕ ಮಾಡುತ್ತಾರೆ, ಇಂಜಿನಿಯರ್ ಇರಬೇಕಾದ ಸ್ಥಳದಲ್ಲಿ ಡಾಕ್ಟರ್ ನೇಮಿಸುತ್ತಾರೆ ಎನ್ನುವ ಹಾಗೆ ಆಗಿದೆ. ಕೈಗಾರಿಕಾ ಇಲಾಖೆಗೆ ಲಾಯರ್ ಆದವರು ಮಿನಿಸ್ಟರ್ ಆಗಿದ್ದಾರೆ. ಕೈಗಾರಿಕೆ ಬಗ್ಗೆ ಅವರಿಗೆ ಏನೂ ಗೊತ್ತಿಲ್ಲ. ಐ. ಎ. ಎಸ್. ಅಧಿಕಾರಿಗಳು ಇರುತ್ತಾರೆ. ಅವರಿಗೆ ಕೈಗಾರಿಕೆಯ ಬಗ್ಗೆ ಏನು ಗೊತ್ತಿರುತ್ತದೆ? ಭದ್ರಾವತಿಯಲ್ಲಿಯ ದುಸ್ಥಿತಿ ತೆಗೆದುಕೊಂಡರೆ ಬಹುಶಃ ಇದು ಶರಾವತಿ ಸ್ಕ್ಯಾಂಡಲ್ ಹಾಗೆ ಭದ್ರಾವತಿ ಸ್ಕ್ಯಾಂಡಲ್ ಆಗಿದೆ ಎಂದು ಹೇಳಿದರೆ ಅದು ತಪ್ಪಾಗಲಾರದು ಎಂದು ಅನ್ನಿಸುತ್ತದೆ. ಆಡಿಟ್ ರಿಪೋರ್ಟ್ ಮತ್ತು ಪಬ್ಲಿಕ್ ಅಕೌಂಟ್ಸ್ ಕಮಿಟಿ ರಿಪೋರ್ಟ್ ನೋಡಿದರೆ ಇದರಲ್ಲಿ ಮೂರು ನಾಲ್ಕು ಕೋಟಿ ರೂಪಾಯಿ ನಷ್ಟವಾಗಿದೆ ಎಂದು ತೋರುತ್ತದೆ. ಆದರೆ ಸಾಧಾರಣವಾಗಿ 12 ಕೋಟಿ ರೂಪಾಯಿವರೆಗೆ ನಷ್ಟವಾಗಿರಬಹುದು ಎಂದು ನಾನು ಹೇಳುತ್ತೇನೆ. ಇದು ಬೇಜವಾಬ್ದಾರಿ ಆಡಳಿತದ ಪರಿಣಾಮವಾಗಿದೆ. ಸರಕಾರದ ಲೋಪದೋಷಗಳು ಇಷ್ಟು ಹಣವನ್ನು ನುಂಗುತ್ತಿವೆ. ಇದನ್ನು ಸ್ವಲ್ಪ ಯೋಚನೆ ಮಾಡೋಣ. ಖಾಸಗಿ ಕೈಗಾರಿಕೆಗಳಲ್ಲಿ ಮೂರು ತರಹ ಇವೆ. ಡ್ಯುಯಲ್ ಕಂಟ್ರೋಲ್ ಮತ್ತು ಟ್ರೈಬಲ್ ಕಂಟ್ರೋಲ್ ಪ್ರಾಯೋಗಿಕವಾಗಿ ಹಾಕುತ್ತಾರೆ. ವೆಸ್ಟ್ ಜರ್ಮನಿ ಮತ್ತು ಆಸ್ಟ್ರಿಯಾದಿಂದ ತಜ್ಞರ ತಂಡ ಒಂದು ಇದೆ. ಇದರಲ್ಲಿ ಕನ್‌ಸಾರ್ಟಿಯಂ ಅಡ್ವೈಸರಿಗೆ 40 ಲಕ್ಷ ರೂಪಾಯಿ ಕೊಟ್ಟಿದ್ದಾರೆ. ಇವರೆಲ್ಲರೂ ಮೋಸಗಾರರು. ಇದರಲ್ಲಿ ಮ್ಯಾನೇಜಿಂಗ್ ಡೈರೆಕ್ಟರ್ ಮತ್ತು ಟೆಕ್ನಿಕಲ್ ಅಸಿಸ್ಟೆಂಟ್ ಇವರ ಪಾಲು ಇತ್ತು ಎಂದು ಹೇಳಿದರೆ ಅದು ತಪ್ಪಾಗಲಾರದು. ಕನ್ಸಲ್ಟೇಷನ್ ಫೀಜ್ 40 ಲಕ್ಷ ಮಾಡಿದ್ದಾರೆ. 40 ಲಕ್ಷದಲ್ಲಿ 5 ಪರ್ಸೆಂಟ್ ಕಮಿಷನ್ ಡೈರೆಕ್ಟರ್ ತೆಗೆದುಕೊಂಡಿದ್ದಾರೆ. ಇಂಡಿಯನ್ ರೈಲ್ವೇಜ್ ಸಂಪರ್ಕ ನನಗೆ ಅಪ್ರತ್ಯಕ್ಷವಾಗಿ ಇದೆ. ಅಲ್ಲಿ ಒಂದು ಬ್ರಿಡ್ಜ್ ಎಸ್ಟಿಮೇಟು ಮಾಡಲು 5 ಸಾವಿರ ರೂಪಾಯಿ ಫೀಜ್ ಕೊಡುತ್ತಾರೆ. ಇಲ್ಲಿ 40 ಸಾವಿರ ರೂಪಾಯಿ ಫೀಜ್ ಕೊಟ್ಟಿದ್ದಾರೆ. 5 ಸಾವಿರ ರೂಪಾಯಿಗೆ ನಾನು ಅಂದಾಜು ಕೊಡಿಸುತ್ತೇನೆ.

ಇವರು ಕೊಳ್ಳತಕ್ಕ ಹಾಗೂ ಮಾರತಕ್ಕ ವಿಚಾರಗಳಲ್ಲೂ ತಪ್ಪು ಅಡ್ವೈಸನ್ನು ಕೊಡುತ್ತಿದ್ದಾರೆ ಅಷ್ಟೇ ಅಲ್ಲ ಅಲ್ಲಿಗೆ ಬರತಕ್ಕ ಜೆಲ್ಲಿ, ಮರಳು, ಕೋಕ್ ಮತ್ತು ಕೂಲ್ ಎಲ್ಲದಕ್ಕೂ ಕಮಿಷನ್ ಪಡೆಯುತ್ತಿದ್ದಾರೆ. ಇಂಥ ಅಡ್ವೈಸರು ನಮಗೆ ಅಲ್ಲಿರತಕ್ಕವರಲ್ಲಿ ಒಬ್ಬರಲ್ಲ—ಮೂವರು. ಅಷ್ಟು ಜನ ಅಡ್ವೈಸರಿದ್ದೂ ನಮಗೆ ಅಲ್ಲಿ ಅಷ್ಟು ಭಾರಿ ನಷ್ಟವುಂಟಾಗಿದೆ. ಅವರಿಲ್ಲದಿದ್ದರೇ ನಮಗೆ ಹೆಚ್ಚಿನ ಅನು

ಕೂಲವಾಗುತ್ತಿತ್ತು. ಹೀಗೆ ನಮಗೆ ಅಲ್ಲಿ ಪ್ರತಿಯೊಂದು ವ್ಯವಹಾರದಲ್ಲೂ ನಷ್ಟವಾಗುತ್ತಿರುವುದಕ್ಕೆ ಈ ಅಡ್ವೈಸರುಗಳು ಕೊಡತಕ್ಕ ಸಲಹೆಯಲ್ಲಿ ಏನೋ ಮೋಸವಿದೆ ಎನ್ನುವುದು ಇವರಿಗೆ ಗೊತ್ತಾಗುವುದು ಬೇಡವೇ ? ಹಾಗೇ ಆ ಅನೀಲಿಂಗ್ ಫರ್ನೇಸ್ ವಿಚಾರದಲ್ಲೂ ಭಾರಿ ಮೋಸ ನಡೆದಿದೆ. ಅಲ್ಲಿಗೆ ಬೇಕಾಗಿದ್ದ ಒಂದೊಂದು ಕಬ್ಬಿಣದ ಗೇಟನ್ನು ಭದ್ರಾವತಿಯಲ್ಲೇ ಮಾಡಿಸಿದ್ದರೆ ಆ ಒಂದೊಂದು ಗೇಟಿಗೂ 200 ರೂಪಾಯಿಗಳಿಗೆ ಮೇಲೆ ಖರ್ಚುಬರುತ್ತಿರಲಿಲ್ಲ. ಅಲ್ಲಿರತಕ್ಕ ನಮ್ಮ ಕನ್‌ಸೋರ್ಷಿಯಂನವರು ಅವರಿಗೆ ಬೇಕಾದ ಒಬ್ಬ ಇಂಜಿನಿಯರಿಂಗ್ ವರ್ಕ್ಸ್‌ಗೆ ಕಾಂಟ್ರಾಕ್ಟ್ ಕೊಡಿಸಿ ಒಂದೊಂದು ಗೇಟಿಗೂ 800 ರೂಪಾಯಿಗಳನ್ನು ಹಾಕಿದ್ದಾರೆ. ಇದನ್ನು ನೋಡಿದರೆ ನಮ್ಮ ಆ ಕನ್‌ಸೋರ್ಷಿಯಂ ಅವರ ಮತ್ತು ಅಲ್ಲಿರತಕ್ಕ ಆಡಳಿತವರ್ಗದವರ ದಕ್ಷತೆ ಎಷ್ಟಿದೆ ಎಂಬುದು ಗೊತ್ತಾಗುತ್ತದೆ. ಆದಾಗ್ಯೂ ಆ ಕನ್‌ಸೋರ್ಷಿಯಂ ತನಗೆ ಬರತಕ್ಕ 40 ಲಕ್ಷದ ಜೊತೆಗೆ ಮಾರುವುದರಲ್ಲೂ ಮತ್ತು ಕೊಳ್ಳುವುದರಲ್ಲೂ ದುಡ್ಡನ್ನು ಲೂಟಿ ಹೊಡೆಯುತ್ತಿದ್ದಾರೆ. ಆ ಲೂಟಿಯಲ್ಲಿ ಕನ್‌ಸೋರ್ಷಿಯಂಗೂ ಮತ್ತು ಅಲ್ಲಿರತಕ್ಕ ಮ್ಯಾನೇಜಿಂಗ್ ಡೈರೆಕ್ಟರುಗಳಿಗೂ ಹಿಸ್ಸೆ ಇದೆ.

ಹೀಗೇ ಆ ಸ್ಟೀಲ್ ಸ್ಕ್ರ್ಯಾಪ್‌ನ್ನು ಕೊಳ್ಳತಕ್ಕ ವ್ಯವಹಾರದಲ್ಲೂ ಭಾರಿ ಮೋಸ ನಡೆದಿದೆ. ಮೊದಲು 5 ಲಕ್ಷ ಟನ್ ಸ್ಕ್ರ್ಯಾಪಿಗೆ ಟೆಂಡರನ್ನು ಕರೆದರು. ಮೊದಲು ಕಂಟ್ರಾಕ್ಟರಿಗೆ 5 ಸಾವಿರ ರೂಪಾಯಿಗಳನ್ನು ಡೆಪಾಜಿಟ್ ಮಾಡಬೇಕೆಂದು ಹೇಳಿದ್ದರೆ ಆ ನಂತರ ಆ ಡಿಪಾಜಿಟ್ಟನ್ನು 50 ಸಾವಿರಕ್ಕೆ ಹೆಚ್ಚಿಸಲಾಯಿತು. 1968 ರಲ್ಲಿ ಟೆಂಡರನ್ನು ಕರೆದಾಗ ಟನ್ ಒಂದಕ್ಕೆ 25 ರೂಪಾಯಿಗಳಂತೆ ಸ್ಕ್ರ್ಯಾಪನ್ನು ಸರಬರಾಯಿ ಮಾಡುವುದಕ್ಕೆ ಟೆಂಡರುಗಳು ಬಂದವು. ಅದನ್ನು ಹಾಗೇ ಮುಂದುವರಿಸದೆ ಮತ್ತೆ 1969 ರಲ್ಲಿ ಎರಡನೇ ಸಾರ್ತಿಗೆ ಟೆಂಡರನ್ನು ಕರೆಯಲಾಯಿತು. ಆಗ ಬಂದ ಟೆಂಡರಿನಲ್ಲಿ ಟನ್ನಿಗೆ 29 ರೂಪಾಯಿಗಳನ್ನು ಕೋಟ್ ಮಾಡಿದ್ದರು. ಅದೇಕಾಲಕ್ಕೆ ಬೇರೊಂದು ಕಂಪೆನಿಗೆ ಸೇರಿದ ಮೂರು ಜನಗಳು ಪ್ರತ್ಯೇಕ ಪ್ರತ್ಯೇಕವಾಗಿ ಟೆಂಡರುಗಳನ್ನು ಹಾಕಿದರು. ಆದರೆ ಆ ಮೂರು ಜನಗಳೂ ಒಂದೇ ರೇಟನ್ನು ಅಂದರೆ ಟನ್ನಿಗೆ 35.25 ರೂಪಾಯಿಗಳನ್ನು ಕೋಟ್ ಮಾಡಿದ್ದರು. ಆ ಸಂದರ್ಭದಲ್ಲಿ ಆ ಕಂಟ್ರಾಕ್ಟನ್ನು ಯಾರೋ ಒಬ್ಬ ಮಂತ್ರಿಗಳ ಕಡೆಯ ಮನುಷ್ಯನಿಗೆ ಕೊಡಬೇಕಾಗಿದ್ದುದರಿಂದ ಆ ಟೆಂಡರ್ ಅವಧಿಯನ್ನು ವಿನಾಕಾರಣ ಎರಡಾವರ್ತಿ ಮುಂದೂಡಿದರು. ಹಾಗೆ ಮುಂದೂಡಿದ ಮೇಲೂ ಕಡಮೆ ಟೆಂಡರನ್ನು ಹಾಕತಕ್ಕ ಜನರು ಟೆಂಡರನ್ನು ಹಾಕದೆ ಬಿಡಲಿಲ್ಲ. ಆಗ ಈ ಒಂದೇ ಕಂಪೆನಿಯ ಮೂರುಜನ ಟೆಂಡರುದಾರರೇನಿದ್ದರು ಅವರು ಒಟ್ಟಿಗೆ ಆ ಕಡಮೆ ಟೆಂಡರಿನವನನ್ನು ಹಿಡಿದು ಅವನಿಗೆ ಲಂಚವನ್ನು ಕೊಟ್ಟು ಅವನ ಟೆಂಡರನ್ನು ವಾಪಸ್ ತೆಗೆದುಕೊಳ್ಳುವಂತೆ ಮಾಡಿದರು. ಆದರೆ ಹೀಗೇ ಒಂದೇ ರೇಟನ್ನು ಕೋಟ್‌ಮಾಡಿರತಕ್ಕ ಮೂರು ಜನ ಟೆಂಡರ್‌ದಾರರೂ ಒಂದೇ ಕಂಪೆನಿಗೆ ಸೇರಿದವರೆಂದು ಅವರಿಗೆ ಗೊತ್ತಾಗದೆ ಇದ್ದದು ಬಹಳ ಆಶ್ಚರ್ಯ. ಅಂತೂ ಕಣ್ಣುಮುಚ್ಚಿಕೊಂಡು ಆ ಟೆಂಡರುಗಳನ್ನು ಒಪ್ಪಿಕೊಂಡರು. ಆದರೆ ಯಾವ ಮಂತ್ರಿಗಳನ್ನು ತೃಪ್ತಿಮಾಡಲು ಹೀಗೆ ಮಾಡಿದರು ? ಕರ್ಣಾಟಕ ಎಕ್ಸ್‌ಪೋರ್ಟರ್ ಲಕ್ಷ್ಮಣದಾಸ್ ಎನ್ನತಕ್ಕವರಿಗೆ ಸಿಕ್ಕಿರುವ ಕಂಟ್ರಾಕ್ಟಿನಲ್ಲಿ ಮಂತ್ರಿಗಳ ಕೈವಾಡ ವಿಲ್ಲವೆ ? ವಿಚಾರಣೆಮಾಡಿದರೆ ಗೊತ್ತಾಗುತ್ತದೆ.

ಇನ್ನು ಕಬ್ಬಿಣದ ಅದುರನ್ನು ಸರಬರಾಯಿ ಮಾಡತಕ್ಕ ವಿಚಾರದಲ್ಲೂ ಹೀಗೆ ಹಣವನ್ನು ಲೂಟಿ ಮಾಡಿದ್ದಾರೆ. ಅದುರನ್ನು ಟ್ರಾನ್ಸ್‌ಪೋರ್ಟ್‌ಮಾಡಲು ಎಂ. ಎಂ. ಟಿ. ಸಿ. ಅವರಿಗೆ ಕಂಟ್ರಾಕ್ಟ್ ಕೊಟ್ಟಿದ್ದರೆ ಅವರು ಟನ್ ಒಂದಕ್ಕೆ 20, 25ರೂಪಾಯಿಗಳ ಪ್ರಕಾರ ತಂದುಕೊಡುತ್ತಿದ್ದರು. ಯಾವ ಸ್ಪೇಷನ್ನಿಗೆ ಬೇಕಾದರೂ ಸರಬರಾಯಿ ಮಾಡುತ್ತಿದ್ದರು. ಆದರೆ ಅವರನ್ನು ಕೈಬಿಟ್ಟು ಬೇರೆಯವರಿಗೆ ಟೆಂಡರನ್ನು ಕರೆಯದೇನೇ ಕಾಂಟ್ರಾಕ್ಟ್ ಕೊಟ್ಟರು. ಅವರಿಗೆ ಟನ್ ಒಂದಕ್ಕೆ 33.75 ರೂಪಾಯಿಗಳ ರೇಟನ್ನು ಕೊಡಲಾಗಿದೆ. ಎಂ. ಎಂ. ಟಿ. ಸಿ. ಅವರು ಕಡಮೆ ರೇಟಿಗೆ ಸರಬರಾಯಿ ಮಾಡುವುದಾಗಿ ತಿಳಿಸಿದ್ದರೂ ಇವರೇಕೆ ಅಷ್ಟು ದುಬಾರಿ ರೇಟಿಗೆ ಒಪ್ಪಿಕೊಂಡರು ? ಒಂದು ಟನ್ನಿಗೆ 13 ರೂಪಾಯಿ ಜಾಸ್ತಿ ಕೊಡುವುದೆಂದರೇನು ಅರ್ಥ ? ಅಲ್ಲಿಗೆ 5 ಲಕ್ಷ ಟನ್ ಅದುರಿಗೂ ಟನ್ನಿಗೆ 13 ರೂಪಾಯಿಗಳ ಪ್ರಕಾರ 65 ಲಕ್ಷರೂಪಾಯಿಗಳನ್ನು ದಂಡವಾಗಿ ಕೊಡಬೇಕಾಯಿತು. ಇದಕ್ಕೆಲ್ಲಾ ಮೂಲ ಕಾರಣ ಯಾರೋ ಒಬ್ಬ ಕಂಟ್ರಾಕ್ಟರನು ಯಾರೋ ಒಬ್ಬ ಮಂತ್ರಿಗೆ ಎರಡು ಬಾಟಲ್ ವಿಸ್ಕಿ ಕೊಡಿಸಿ ಅವರಿಗೆ ಬಾಲ್ ಡ್ಯಾನ್ಸ್ ಅರೇಂಜ್ ಮಾಡಿದ್ದರಿಂದ ಕೊಡಲಾಯಿತೆಂದು ತಿಳಿದುಬಂದಿದೆ. ಅಲ್ಲಿನ ಜನರು ಸರ್ಕಾರಕ್ಕೆ ಹೀಗೆಲ್ಲಾ ದ್ರೋಹಗಳನ್ನು ಬಗೆಯುತ್ತಿದ್ದಾರೆ. ಈ ವ್ಯವಹಾರವನ್ನು ಪ್ರತ್ಯಕ್ಷವಾಗಿ ಕಂಡವರಿದ್ದಾರೆ. ಮೊದಲು ಒಂದಾವರ್ತಿ ಟೆಂಡರುಗಳನ್ನು ಕರೆದು ಅವುಗಳನ್ನು ಮತ್ತೆ ಮುಂದೂಡುವುದಕ್ಕೆ ಮಂತ್ರಿಗಳ ಪ್ರಭಾವವೇ ಕಾರಣ. ಟನ್ ಒಂದಕ್ಕೆ 13 ರೂಪಾಯಿಗಳನ್ನು ಕೊಡುವುದಕ್ಕೆ ಅವರು ಹೇಗೆ ಏಕಾಏಕಿ

(ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ)

ಒಪ್ಪಿದರು ? 20 ರೂಪಾಯಿಗಳನ್ನು ಕೊಡತಕ್ಕ ಕಡೆ 33 ರೂಪಾಯಿಗಳನ್ನು ಕೊಟ್ಟರೆ ಯಾವ ಕಂಪೆನಿಯಾದರೂ ಉದ್ಧಾರವಾಗುವುದಕ್ಕೆ ಅವಕಾಶವೆಲ್ಲಿದೆ? ಈ ಪ್ರಕರಣದಲ್ಲಿ ನಡೆದಿರತಕ್ಕ ಎಲ್ಲಾ ಮೋಸ ಕೃತ್ಯಗಳನ್ನೂ ವಿವರಿಸುವುದಕ್ಕಾಗುವುದಿಲ್ಲ. ಎಲ್ಲಿ ನೋಡಿದರೂ ಅಕ್ರಮ ವ್ಯವಹಾರವೇ. ಸಪ್ಲೈಮಾಡಬೇಕೆಂದು ಒಪ್ಪಂದವಾಗಿದ್ದ ಸ್ಕ್ರ್ಯಾಪ್ 12,412 ಟನ್ ಸರಬರಾಯಿ ಆದದ್ದು 7,864 ಟನ್ ಮಾತ್ರ. ಹಾಗಾದರೆ ಇನ್ನುಳಿದ 4,547 ಟನ್ ಸ್ಕ್ರ್ಯಾಪ್ ಏನಾಯಿತು ? ಇಲ್ಲಿ ಲಕ್ಷಾಂತರ ರೂಪಾಯಿಗಳನಷ್ಟವುಂಟಾಗಿದೆ. ಕೇವಲ 4 ಜನ ಗುಮಾಸ್ತರನ್ನು ಡಿಸ್‌ಮಿಸ್ ಮಾಡಿದ್ದಾರೆ. ಅದು ಸಾಲದು. ಈ ಸಂಬಂಧದಲ್ಲಿ ಕೂಡಲೆ, ಒಂದು ಎನ್‌ಕ್ವೈರಿಯನ್ನು ನೇಮಕ ಮಾಡಬೇಕೆಂದು ಒತ್ತಾಯಮಾಡುತ್ತೇನೆ. ಸ್ಕ್ರ್ಯಾಪನ್ನು ಸಪ್ಲೈಮಾಡಿರತಕ್ಕ ಬಗ್ಗೆ ಲಾರಿಗಳ ನಂಬರ್ ಟ್ರಕ್ ನಂಬರು ಗಳು ಅಲ್ಲಿರತಕ್ಕ ರಿಜಿಷ್ಟರಲ್ಲಿ ಎಂಟರಾಗಿವೆ. ರೈಲಿನಲ್ಲಿಯೂ ಮತ್ತು ರೋಡ್ ಎರಡರ ಮೂಲಕವೂ ಸರಬರಾಯಿ ಆಗಿದೆ. ಹಣವನ್ನು ಚೆಕ್ ಮೂಲಕ ಪಾವತಿಮಾಡಲಾಗಿದೆ. ಹೀಗೆ ಸಾಕಷ್ಟು ಸಾಕ್ಷಿಪುರಾವೆಗಳಿವೆ. ಅದಕ್ಕಾಗಿ ಕೂಡಲೇ ಒಂದು ಎನ್‌ಕ್ವೈರಿ ಕಮಿಟಿಯನ್ನು ನೇಮಕ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಇದೇ ರೀತಿಯಲ್ಲಿ ಕೋಕ್ ಮತ್ತು ಕೋಲುಗಳ ವಿಷಯದಲ್ಲೂ ಮೋಸ ನಡೆದಿದೆ. ಇವುಗಳಲ್ಲಿ ಉಂಟಾಗಿರತಕ್ಕ ನಷ್ಟವನ್ನು ಭರ್ತಿಮಾಡಲು ಪ್ರೊಡಕ್ಷನ್‌ನಲ್ಲಿ ಖೋತಾ ತೋರಿಸುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಒಟ್ಟು ಭದ್ರಾವತಿ ಕಂಪೆನಿಗೆ ಹೀಗೆ ನಡೆದಿರತಕ್ಕ ಮೋಸಪ್ರಕರಣಗಳಿಂದ 12 ಕೋಟಿ ರೂಪಾಯಿಗಳ ನಷ್ಟವುಂಟಾಗಿದೆ. ಇಂಥ ಅಕ್ಷಮ್ಯ ಆಡಳಿತಕ್ಕೆ ಯಾರು ಹೊಣೆ ? ಇದಕ್ಕಾಗೇ ನಾನು ಕೂಡಲೆ ತನಿಖೆಯಾಗಬೇಕು ಎಂದು ಹೇಳುತ್ತಿದ್ದೇನೆ. ನಾನೇ ಸಾಕಷ್ಟು ಸಾಕ್ಷ್ಯ ಕೊಡಬಲ್ಲೆ. ಸರ್ಕಾರಿವಲಯದಲ್ಲಿ ನಡೆಸುತ್ತಿರುವ ಕೈಗಾರಿಕೆಗಳ ಬಗ್ಗೆ ಖಾಸಗೀ ಜನರು ವಿಶ್ವಾಸವನ್ನು ಕಳೆದುಕೊಳ್ಳುತ್ತಿದ್ದಾರೆ. ಈ ಉದ್ಯಮಗಳನ್ನೆಲ್ಲಾ ಯಾವತ್ತಿದ್ದರೂ ಒಂದು ದಿನ ಖಾಸಗೀ ಜನರಿಗೇ ಒಪ್ಪಿಸಬೇಕೆಂಬ ಒಂದು ಕೆಟ್ಟಚಟ ಅಥವಾ ಅಂಥ ಒಂದು ಮನೋಭಾವನೆ ನಮ್ಮ ಶ್ರೀಮಾನ್ ನಿಜಲಿಂಗಪ್ಪನವರಲ್ಲಿ ಮೊದಲಿಂದಲೂ ಬೆಳೆದುಕೊಂಡು ಬಂದಿದೆ. ಅದು ಸರಿಯಾದುದಲ್ಲ.

ಇನ್ನು ಶ್ರೀಮಾನ್ ಹುಚ್ಚಮಾಸ್ತಿಗೌಡರು ಈಗಾಗಲೇ ಇದೇ ಸಭೆಯಲ್ಲಿ ನಮ್ಮ ಭದ್ರಾವತಿ ಕಂಪೆನಿಯಿಂದ ಕಾಸ್ಟ್ ಆಫ್ ಪ್ರೊಡಕ್ಷನ್ನಿಗಿಂತ ಕಡಮೆ ದರದಲ್ಲಿ ಸ್ಪೆಷಲ್ ಸ್ಟೀಲನ್ನು ಪೂನಾದಲ್ಲಿರ ತಕ್ಕ ಒಂದು ಫರ್ಮಿಗೆ ಸರಬರಾಯಿ ಮಾಡುತ್ತಿದ್ದಾರೆಂದು ಆಪಾದನೆ ಮಾಡಿದ್ದಾರೆ. ಮೊದಲನೇ ಒಪ್ಪಂದದ ಪ್ರಕಾರ 21 ಲಕ್ಷ ರೂಪಾಯಿಗಳ ಬೆಲೆಬಾಳತಕ್ಕ ಸ್ಟೀಲನ್ನು ಅಗ್ಗದ ದರದಲ್ಲಿ ಸರಬರಾಯಿ ಮಾಡಿದ ಮೇಲೂ ಮತ್ತು ಆ ಟರ್ಮು ಮುಗಿದ ನಂತರೂ ಏಕೆ ಆ ಅಗ್ಗದ ದರದಲ್ಲೇ ಅದನ್ನು ಸರಬರಾಯಿ ಮಾಡುವುದಕ್ಕೆ ಒಪ್ಪಿಕೊಂಡರು ? ಹೊರಗಡೆ ರೇಟ್ ಬಹಳ ಜಾಸ್ತಿಯಾಗಿತ್ತು. ಮತ್ತು ಆ ಹಳೇ ದರದಲ್ಲೇ 1971ರ ವರೆಗೂ ಏಕೆ ಸರಬರಾಯಿ ಮಾಡುವುದಕ್ಕೆ ಒಪ್ಪಂದ ಮಾಡಿಕೊಂಡರು ? ಇದರಿಂದ ನಮ್ಮ ಕಂಪೆನಿಗೆ ಒಂದವಾರ್ತಿ 4.81 ಲಕ್ಷ, ಎರಡನೇಸಾರ್ತಿ 1.09 ಲಕ್ಷ, ಮೂರನೇ ಸಾರ್ತಿಗೆ 8.06 ಲಕ್ಷ ಮತ್ತು ನಾಲ್ಕನೇ ಸಾರ್ತಿಗೆ 8.57 ಲಕ್ಷ ಹೀಗೆ ಒಟ್ಟು ಸುಮಾರು 23 ಲಕ್ಷ ರೂಪಾಯಿಗಳು ಲುಕ್ಸಾನಾಗಿದೆ. ಅಂತೂ ಹೀಗೆ ಅಲ್ಲಿರತಕ್ಕ ನಮ್ಮ ಜನರು ಆ ಭದ್ರಾವತಿ ಕಂಪೆನಿಯನ್ನು ದಿನ ದಿನಕ್ಕೂ ಲೂಟಿ ಹೊಡೆಯುತ್ತಿದ್ದಾರೆ.

ಈ ರೀತಿ ವ್ಯವಹಾರಗಳು ನಡೆಯುತ್ತಾ ಇವೆ. ಬಿಲಾಯಿ, ದುರ್ಗಾಪುರ, ರೂರ್ಕೆಲಾ ಅಲ್ಲೆಲ್ಲಾ ಏಜನ್ಸಿ ಅಪಾಯಿಂಟ್ ಮಾಡಲಿಲ್ಲಾ. ನೀವು ಏಜನ್ಸಿಯನ್ನು ಅಪಾಯಿಂಟ್ ಮಾಡಿದ್ದೀರಾ ಈವೊತ್ತು ನಮ್ಮ ಭದ್ರಾವತಿ ಐರನ್ ಅಂಡ್ ಸ್ಟೀಲ್ ವರ್ಕ್ಸ್‌ನ ಬೇಡಿಕೆ 1 ಲಕ್ಷ 40 ಸಾವಿರ ಟನ್ ಜಾಸ್ತಿಯಾಗಿದೆ ಅನ್ನುವುದಾದರೆ ಈ ಏಜನ್ಸಿಯನ್ನು ಯಾರೋ ಒಬ್ಬ ಕೇಡಿ ಮನುಷ್ಯನಿಗೆ ಕೊಟ್ಟಿದ್ದೀರಿ. ಈವೊತ್ತು 20 ಲಕ್ಷ ರೂಪಾಯಿ ಲಾಸ್‌ನಲ್ಲಿಲ್ಲವೆಂದು ಆಡಿಟ್‌ನಲ್ಲಿ ತೋರಿಸಿದ್ದಾರೆ. ಆ ಆಡಿಟ್ ರಿಪೋರ್ಟನ್ನು ನೋಡಿದ ಪಕ್ಷದಲ್ಲಿ ಭದ್ರಾವತಿ ಐರನ್ ಅಂಡ್ ಸ್ಟೀಲ್ ವರ್ಕ್ಸ್‌ನಲ್ಲಿ ಬಹಳ ಲೋಪದೋಷ ಇದೆ ಅನ್ನುವ ಹಾಗೆ ಕಾಣುತ್ತೆ. ಈವೊತ್ತಿನ ದಿವಸ ಪಬ್ಲಿಕ್ ಸೆಕ್ಟಾರ್‌ನಲ್ಲಿ ನಂಬಿಕೆ ಕಳೆದು ಹೋಗಿದೆ. ಶ್ರೀಮಾನ್ ರಾಜಶೇಖರಮೂರ್ತಿಯವರು ಆವಾಗ ಹೊಸಪೇಟೆ ಉಕ್ಕಿನ ಕಾರ್ಖಾನೆ ಕೆಲಸವನ್ನು ಕೇಂದ್ರ ಸರ್ಕಾರದವರು 5ನೇ ಪಂಚವಾರ್ಷಿಯ ಯೋಜನೆಯಲ್ಲಿ ತೆಗೆದುಕೊಳ್ಳುತ್ತಾರೆ ಎಂದು ಹೇಳಿದರು. ಈವಾಗ ತೆಗೆದುಕೊಳ್ಳುವುದಿಲ್ಲ ಎಂದು ಹೇಳುತ್ತಾರೆ. ಈವೊತ್ತಿನ ದಿವಸ ಭರತಖಂಡದಲ್ಲಿ 4 ಮಿಲಿಯನ್ ಟನ್ ಸ್ಟೀಲ್ ಬೇಕಾಗಿದೆ. ಸ್ಟೀಲ್ ಪ್ಲಾಂಟನ್ನು

ದಕ್ಷಿಣ ವಲಯದಲ್ಲಿ ತೆಗೆಯುವಾಗ ಮೊದಲನೇ ಪ್ರಿಯಾರಿಟಿ ನಮ್ಮ ಹೊಸಪೇಟೆಗೆ ಕೊಡಬೇಕಾಗಿದೆ. ಈಗ ಅದು ಬಿಟ್ಟು ಮೊದಲನೆ ಪ್ರಿಯಾರಿಟಿ ಸೇಲಂಗೆ ಕೊಟ್ಟು ಎರಡನೇ ಪ್ರಿಯಾರಿಟಿ ವೈಜಾಗ್‌ಗೆ ಕೊಟ್ಟು ಮೂರನೆ ಪ್ರಿಯಾರಿಟಿ ಮೈಸೂರಿಗೆ ಕೊಡಬೇಕೆಂದು ಇಟ್ಟುಕೊಂಡಿದ್ದಾರೆ. ಹೊಸಪೇಟೆಗೆ ಸ್ಟೀಲ್ ಫ್ಯಾಕ್ಟರಿ ಕೊಡಬೇಕು ಎಂದು ಇದ್ದುದಕ್ಕೆ ಗೋವಾ ಕಾಂಪಿಟಿಷನ್ ಇದೆ. ಈವೊತ್ತಿನ ದಿವಸ ದೇಶದ ಸಾಧನಸಂಪತ್ತು ನಿಜವಾಗಿ ಅಭಿವೃದ್ಧಿ ಆಗಬೇಕಾದರೆ, ದೇಶದಲ್ಲಿ ನಿರುದ್ಯೋಗ ಕಡಿಮೆ ಆಗಬೇಕಾದರೆ ನಮ್ಮ ಆರ್ಥಿಕ ಪರಿಸ್ಥಿತಿ ರಾಜ್ಯಕ್ಕೆ ಅನುಕೂಲವಾಗಬೇಕಾಗಿದೆ. ಅಂಥಾದ್ದರಲ್ಲಿ ಕಣ್ಣುಮುಚ್ಚಾಲೆ ಆಟ ಆಡುತ್ತಿದ್ದಾರೆ. ಅದನ್ನು ಕಣ್ಣು ತೆರೆದು ನೋಡಬೇಕು.

ಇನ್ನು ಷೆಡ್ಯೂಲ್ (ಎ)ನಲ್ಲಿ 16-17 ಇಂಡಸ್ಟ್ರೀಸ್ ಕೊಟ್ಟಿದ್ದಾರೆ. ನಮ್ಮ ಸರಕಾರ ಈವೊತ್ತು, ಪಬ್ಲಿಕ್ ಸೆಕ್ಟಾರ್‌ನಲ್ಲಿ ನಂಬಿಕೆ ಕಳೆದುಕೊಂಡಿದ್ದ ಪಕ್ಷದಲ್ಲಿ ಅದು ಯಾವುದನ್ನೂ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ದೊಡ್ಡ ದೊಡ್ಡ ಕೈಗಾರಿಕೆಗಳು ಸ್ವಾವಮ್ಯ ಪಡೆದು ಅವನ್ನು ಪಬ್ಲಿಕ್ ಸೆಕ್ಟಾರ್ ಕೈಗಾರಿಕೆಗಳನ್ನಾಗಿ ಮಾಡಬೇಕು ಎಂದು ಕೇಂದ್ರ ಸರ್ಕಾರ ನಿರ್ಧಾರ ಮಾಡಿದೆ.

[MR. SPEAKER in the Chair]

ಈವೊತ್ತಿನ ದಿವಸ ಸರ್ಕಾರ ಯಾವ ಒಂದು ಉತ್ತಮವಾದ ಕೈಗಾರಿಕೆಗೂ ಬಂಡವಾಳ ಕೊಡುತ್ತಾ ಇಲ್ಲ. ಆದರೆ ಫಿಲಂ ಇಂಡಸ್ಟ್ರೀಸ್‌ಗೆ 20 ಲಕ್ಷ ರೂಪಾಯಿ ಕೊಟ್ಟಿದ್ದಾರೆ. ಈ ಫಿಲಂ ಇಂಡಸ್ಟ್ರೀಸ್ ಏನೇನು ಉತ್ಪತ್ತಿ ಕೊಡುತ್ತದೆ. ಈ ಜನಗಳು ಇನ್ನೂ ಹೆಚ್ಚು ಫಿಲಂ ತಯಾರು ಮಾಡಲಿ ಎಂದೆ. ಈಗ ಚಿತ್ರದುರ್ಗದಲ್ಲಿರುವ ಕಾಪರ್ ಮೈನಿಂಗ್ ಕಂಪನಿಗೆ ಪ್ರೋತ್ಸಾಹ ಕೊಟ್ಟಿಲ್ಲ. ಈ ವರ್ಷ ಅದು ಬಂಡವಾಳ ಇಲ್ಲದೆ ಸಾಯುತ್ತಾ ಇದೆ. ಅದಕ್ಕೆ ಏತಕ್ಕೆ ಬಂಡವಾಳ ಒದಗಿಸಿಲ್ಲ? ತಾಮ್ರದ ಪರಿಸ್ಥಿತಿ ಕೆಟ್ಟುಹೋಗಿದೆ. ತಾಮ್ರ ದೇಶದಲ್ಲಿ ಕಡಿಮೆ ಇದೆ. ಆ ಕೈಗಾರಿಕೆಯನ್ನು ಡೆವಲಪ್ ಮಾಡಬೇಕು ಎಂದು ಕೇಂದ್ರ ಸರ್ಕಾರದವರೂ ಹೇಳುತ್ತಿದ್ದಾರೆ. 2--3 ವರ್ಷದಿಂದಲೂ ನಾನೂ ಹೇಳುತ್ತಿದ್ದೇನೆ. ಒಂದು ಷೆಡ್ಯೂಲ್ಡ್ ಟೈಂನಲ್ಲಿ ಈ ಕೈಗಾರಿಕೆಯನ್ನು ಪ್ರಾರಂಭಮಾಡಬೇಕು, ಈವೊತ್ತು ಯಾವ ಕೈಗಾರಿಕೆಯೇ ಆಗಲಿ ಅದರ ಅಭಿವೃದ್ಧಿಗೆ ಮತ್ತು ಆರ್ಥಿಕ ಅಭಿವೃದ್ಧಿಗೆ ಮತ್ತು ದೇಶದ ಏಳಿಗೆಗೆ ಏನು ಬೇಕೋ ಅದಕ್ಕೆ ಬಂಡವಾಳ ಹಾಕಿಲ್ಲ. ಅವೆಲ್ಲಾ ಮಣ್ಣುಪಾಲು ಆಗುತ್ತಾ ಇದೆ. ನೀವು ಅವು ಬಿಟ್ಟು ಫಿಲಂ ಇಂಡಸ್ಟ್ರೀಸ್‌ಗೆ ಸಹಾಯ ಮಾಡಬೇಕು ಎಂದು ಹೇಳುತ್ತೀರಾ? ಅದಕ್ಕೆ 50 ಸಾವಿರ ರೂಪಾಯಿ ಕೊಡುತ್ತೀರಾ? ದೇಶಕ್ಕೆ ಬೇಕಾದ ದೊಡ್ಡ ಕೈಗಾರಿಕೆಗಳಿಗೆ ಏತಕ್ಕೆ ಸಹಾಯ ಮಾಡುತ್ತಾ ಇಲ್ಲ. ಈವೊತ್ತು ಸಣ್ಣ ಕೈಗಾರಿಕೆಗಳನ್ನೇ ತೆಗೆದುಕೊಳ್ಳಿ, ದೊಡ್ಡ ಕೈಗಾರಿಕೆಗಳನ್ನೇ ತೆಗೆದುಕೊಳ್ಳಿ, ಮಧ್ಯಮ ಕೈಗಾರಿಕೆಗಳನ್ನೇ ತೆಗೆದುಕೊಳ್ಳಿ ಯಾವುದಕ್ಕೂ ನೀವು ಸಹಾಯ ಮಾಡುತ್ತಾ ಇಲ್ಲ. ಈಗ ಪವರ್ ಲೂಮ್ಸ್ ತೆಗೆದುಕೊಳ್ಳಿ. ಎಷ್ಟೋ ಪವರ್ ಲೂಮ್ಸ್ ಐಡಲ್ ಆಗಿಬಿದ್ದಿದೆ. ಪ್ರೈವೇಟ್ ಸೆಕ್ಟಾರ್‌ನಲ್ಲಿ 4-5 ಮತ್ತು ಕೋಆಪರೇಟೀವ್ ಸೆಕ್ಟಾರ್‌ನಲ್ಲಿ 4–6 ಇವೆಲ್ಲಾ ಐಡಲ್ ಆಗಿ ಬಿದ್ದಿದೆ. ಬಾಂಬೆಯಲ್ಲಿ ಹೋಗಿ ನೋಡಿದರೆ ಸೂರತ್‌ನಲ್ಲಿ ಎಷ್ಟು ಚೆನ್ನಾಗಿ ಆರ್ಗನೈಸ್ ಮಾಡಿದ್ದಾರೆ ಎಂದು ಗೊತ್ತಾಗುತ್ತದೆ. ಒಂದು ಪವರ್ ಲೂಮ್ ಕೂಡ ಐಡಲ್ ಇಲ್ಲದೆ ಇರುವ ಹಾಗೆ ನೋಡಿಕೊಂಡಿದ್ದಾರೆ. ಅಲ್ಲಿ ರಾ ಮೆಟೀರಿಯಲ್ಸ್ ಸರಿಯಾಗಿ ಸಪ್ಲೈ ಮಾಡುತ್ತಾ ಇದ್ದಾರೆ. ಮತ್ತು ಮೆಷಿನ್ಸ್ ಕೂಡ ಸರಿಯಾಗಿ ಸಪ್ಲೈ ಮಾಡುತ್ತಾ ಇದ್ದಾರೆ. ಎಲ್ಲಾ ಕಡೆ ಮೂಲೆಮೂಲೆಗೊಂದು ಪವರ್ ಲೂಮ್ ಕೊಟ್ಟು ಪ್ರತಿಯೊಂದು ಚೆನ್ನಾಗಿ ನಡೆಯುವಂತೆ ಮಾಡಿದ್ದಾರೆ. ಆದರೆ ನಮ್ಮ ದೇಶದಲ್ಲಿ ಸರಿಯಾಗಿ ಗಮನ ಕೊಡದೆ ಎಲ್ಲಾ ಕೈಗಾರಿಕೆಗಳೂ ಪತನವಾಗಲು ಶುರುವಾಗಿವೆ.

ಇನ್ನು ಸರ್ಕಾರಿ ಕ್ಷೇತ್ರದಲ್ಲಿರುವ ಕೈಗಾರಿಕೆಗಳೆಲ್ಲಾ ಅಧಿಕಾರಿಗಳ ಪಾಲಾಯಿತು, ಖಾಸಗೀ ಕ್ಷೇತ್ರದಲ್ಲಿ ಪುಡಾರಿಗಳ ಪಾಲಾಯಿತು, ಹಾಗೆಯೇ ಮೈಸೂರಿನ ಜನರ ಹಿತವೆಲ್ಲಾ ಮಣ್ಣು ಪಾಲಾಯಿತು. ಬಂಗಾರದಿಂದ ಕೂಡಿರತಕ್ಕಂಥ ಈ ಸಂಪತ್ತಿನ ದೇಶವನ್ನು ಪಾಪರ್ ಮಾಡಬೇಡಿ ಎಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಸನ್ಮಾನ್ಯ ಸಭಾಪತಿಗಳೇ, ಮಾನ್ಯ ಕೈಗಾರಿಕಾ ಮಂತ್ರಿಗಳು ಬೇಡಿಕೆ ಇಟ್ಟಿರುವುದನ್ನು ವಿರೋಧಿಸಿ ಒಂದೆರಡು ಮಾತುಗಳನ್ನಾಡುವುದಕ್ಕೆ ಇಷ್ಟಪಡುತ್ತೇನೆ.

ನನ್ನ ಮೊದಲನೆ ಪ್ರಶ್ನೆ ಏನೆಂದರೆ ಈ ರಾಜ್ಯದ ಮಂತ್ರಿಗಳಿಗೆ ಮತ್ತು ಮುಖ್ಯವಾಗಿ ಕ್ಯಾಬಿನೆಟ್‌ಗೆ ತಿಳಿಸುವುದು ನಮ್ಮ ರಾಜ್ಯದಲ್ಲಿ ಕೈಗಾರಿಕೆ ಬೆಳವಣಿಗೆ ಆಗಬೇಕಾದರೆ ಯಾವ ರೀತಿ

(ಶ್ರೀ ಎಂ. ಎಸ್. ಕೃಷ್ಣನ್)

ಧೋರಣೆ ಇರಬೇಕು ಮತ್ತು ಯಾವರೀತಿ ನೀತಿ ಇದೆ ಎನ್ನುವುದನ್ನು ಪರಿಶೀಲನೆ ಮಾಡಬೇಕು. ಈ ಧೋರಣೆ ಮತ್ತು ಅವರ ನೀತಿ ಪ್ರಗತಿದಾಯಕವಾದ ನೀತಿಯೇ, ಈ ನೀತಿಯನ್ನು ಅನುಸರಿಸಿದರೆ ನಮ್ಮ ರಾಜ್ಯದಲ್ಲಿ ಈವೊತ್ತಿನ ದಿನ ಕೈಗಾರಿಕೆಗಳು ಬೆಳವಣಿಗೆ ಆಗುತ್ತದೆಯೇ ಎಂಬುದನ್ನು ಪರಿಶೀಲಿಸಿ, ಆ ನೀತಿ ನಿಸ್ಸಂದೇಹವಾಗಿ ಕೈಗಾರಿಕೆಯನ್ನು ಅಭಿವೃದ್ಧಿ ತರುವ ಹಾಗೆ ಇದ್ದರೆ ಈ ಹಣವನ್ನು ಅವರಿಗೆ ಕೊಡಬಹುದು. ಆದರೆ ದುರ್ದೈವದಿಂದ ದಿನ ನಡೆಯುತ್ತಾ ಇರುವ ವಿದ್ಯಮಾನಗಳನ್ನು ನೋಡಿದರೆ ಸರ್ಕಾರ ಹಾಕಿಕೊಂಡಿರುವ ನೀತಿ ಸರಿಯಾದ ನೀತಿಯಲ್ಲವೆಂದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಈ ಸರ್ಕಾರದಲ್ಲಿ ನನಗೆ ತಿಳಿದಮಟ್ಟಿಗೆ ಇಲ್ಲಿರುವುದು ಸಿಂಡಿಕೇಟ್ ಸರ್ಕಾರ, ಇಂಡಿಕೇಟ್ ಸರ್ಕಾರವಲ್ಲ. ಅವರವರಲ್ಲಿ ಏನೇ ಭಿನ್ನಾಭಿಪ್ರಾಯ ಇರಲಿ ಇಲ್ಲಿನ ಸಿಂಡಿಕೇಟ್ ಸರ್ಕಾರದ ನೀತಿ ಇಂಡಿಕೇಟ್ ಆಗದೇ ಇದ್ದಾಗ ಕೇಂದ್ರದಲ್ಲಿ ಯಾವ ರೀತಿ ಇತ್ತೋ ಅದೇ ರೀತಿ ಧೋರಣೆ ಈ ದಿನ ಇದೆ. ಈಗ ಅವರವರಲ್ಲೇ ಭಿನ್ನಾಭಿಪ್ರಾಯ ಬೇರೆ ಬೇರೆ ಇದೆ. ಈಗ ಸಿಂಡಿಕೇಟ್ ಸರ್ಕಾರದ ನೀತಿ ಏನು ಎನ್ನುವುದನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಅವರ ಧ್ಯೇಯ, ಅವರ ನೀತಿ, ಅವರ ವಾದ, ಎಲ್ಲವೂ ಸ್ಪಷ್ಟವಾಗಿ ಗೊತ್ತಾಗುತ್ತದೆ. ಈವಾಗ ಶ್ರೀಮಾನ್ ನಿಜಲಿಂಗಪ್ಪನವರಿಂದ ಹಿಡಿದು ರಾಮ್‌ಸುಭಾಗ್ ಸಿಂಗ್‌ರವರಿಗೂ ಎಲ್ಲರೂ ತಮ್ಮ ನಿಲುವನ್ನು ಸ್ಪಷ್ಟವಾಗಿ ಹೇಳುತ್ತಿದ್ದಾರೆ. ನಮ್ಮ ದೇಶದಲ್ಲಿ ಸಾರ್ವಜನಿಕ ಕ್ಷೇತ್ರದಲ್ಲಿ ಕೈಗಾರಿಕೆಗಳು ಚೆನ್ನಾಗಿ ನಡೆಯುತ್ತಿಲ್ಲ ಎಂದು. ಸಾರ್ವಜನಿಕ ಕ್ಷೇತ್ರದಲ್ಲೇ ಆಗಲಿ ಖಾಸಗೀ ಕ್ಷೇತ್ರದಲ್ಲೇ ಆಗಲಿ ಒಂದು ಫ್ರಾಗ್ಮಾಟಿಕ್ ಅಪ್ರೋಚ್ (Pragamatic approach) ಇಟ್ಟುಕೊಳ್ಳುತ್ತೇವೆ ಎಂದು ಸಿಂಡಿಕೇಟ್‌ನವರು ಹೇಳುತ್ತಿದ್ದಾರೆ. ಅದೇರೀತಿ ಅಭಿಪ್ರಾಯವನ್ನು ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಮಾತನಾಡುತ್ತಾ ಹೇಳಿದರು. ಶ್ರೀಮಾನ್ ರಾಜಶೇಖರ ಮೂರ್ತಿಯವರು ಕೂಡ "ಫ್ರಾಗ್ಮಾಟಿಕ್ ಔಟ್‌ಲುಕ್" ಇಟ್ಟುಕೊಂಡಿದ್ದೇವೆ ಎಂದು ಹೇಳಿದರು. ಈವೊತ್ತಿನ ದಿವಸ, ವಾಸ್ತವಾಂಶ ನೋಡಿದರೆ, ಮುಖ್ಯವಾಗಿ ನಮ್ಮ ದೇಶದಲ್ಲಿ ಕೈಗಾರಿಕೆ ಬೆಳವಣಿಗೆ ಆಗಬೇಕಾದರೆ ಮೂಲಭೂತವಾಗಿ ಸಾರ್ವಜನಿಕ ಕ್ಷೇತ್ರದಲ್ಲಿ ಬೆಳವಣಿಗೆ ಆಗಬೇಕು ಎಂದು ಏನು ಒಂದು ತತ್ತ್ವವನ್ನು ಹಿಂದಿನಿಂದ ಹಾಕಿಕೊಂಡಿದ್ದಾರೋ ಅದನ್ನೆಲ್ಲಾ ಪೂರ್ತಿಯಾಗಿ ಈ ಸರ್ಕಾರ ಕೈಬಿಟ್ಟಿದೆ.

12-30 P.M.

ಎರಡನೇದು, ಸಾರ್ವಜನಿಕ ಕ್ಷೇತ್ರಕ್ಕೆ ಬದಲಾಗಿ ಎಲ್ಲ ರೀತಿಯಲ್ಲೂ ಖಾಸಗೀ ಕ್ಷೇತ್ರಕ್ಕೇ ಸಹಾಯ ಮಾಡಬೇಕು ಎಂದು ಹೇಳುವಂತಹ ಜನವೇ ಹೆಚ್ಚಾಗಿ ಇಂದು ಸಿಂಡಿಕೇಟಿನಲ್ಲಿದ್ದಾರೆ. ಮಾನ್ಯ ಕೈಗಾರಿಕಾ ಮಂತ್ರಿಗಳು ಹಾಗೂ ಮಾನ್ಯ ಮಂತ್ರಿಗಳಾದ ಶ್ರೀ ರಾಮಕೃಷ್ಣ ಹೆಗಡೆಯವರೂ ಕೂಡ ಇದೇ ರೀತಿಯಾಗಿ ಹೇಳುತ್ತಾರೆ. ಕೈಗಾರಿಕೆಗಳಲ್ಲಿ ಹೆಚ್ಚು ಭಾಗ ಸಾರ್ವಜನಿಕ ಕ್ಷೇತ್ರದಲ್ಲಿ ಬೆಳೆಯಬೇಕು ಎಂಬುದರಲ್ಲಿ ಭಿನ್ನಾಭಿಪ್ರಾಯವಿರುವಂತಿಲ್ಲ. ಆದರೆ ಇದರಲ್ಲೇ ಈ ಮಂತ್ರಿಮಂಡಲದಲ್ಲಿ ಭಿನ್ನಾಭಿಪ್ರಾಯಗಳಿವೆ. ಮಾನ್ಯ ಮಂತ್ರಿಗಳಿಗೆ ಕೈಗಾರಿಕೆಗಳ ಬಗ್ಗೆ ಎಷ್ಟು ಆಸಕ್ತಿ ಇದೆಯೋ ಅಷ್ಟೇ ಆಸಕ್ತಿ ನನಗೂ ಸಹ ಇದೆ. ಅದರೆ ಕೈಗಾರಿಕಾಭಿವೃದ್ಧಿ ಮತ್ತು ಇದರ ಸುಧಾರಣೆಯಾಗಬೇಕಾದರೆ ಇದು ಪಬ್ಲಿಕ್ ಸೆಕ್ಟರ್ ತಳಹದಿಯ ಮೇಲೆ ಬೆಳೆಯಬೇಕು ಎನ್ನುವುದನ್ನು ಮಾತಿನಲ್ಲಿ ಒಪ್ಪಿಕೊಳ್ಳುತ್ತಾ, ಕೈಗಾರಿಕೆಯನ್ನು ಪೂರ್ತಿಯಾಗಿ ಬೆಳೆಯಲು ಖಾಸಗಿ ಕ್ಷೇತ್ರಕ್ಕೆ ಬೆಂಬಲ ಕೊಡುವ ನೀತಿಯೇ ನಿಮ್ಮದಾಗಿದೆ. ಇದಕ್ಕಾಗಿ ನಮ್ಮ ಮಾನ್ಯ ಮಂತ್ರಿಗಳು ಪ್ರವಾಸ ಮಾಡಿ, ಬೊಂಬಾಯಿ, ಕಲ್ಕತ್ತಾ ಹಾಗೂ ಇನ್ನಿತರ ಕಡೆಗಳಲ್ಲಿರುವ ಕೈಗಾರಿಕೋದ್ಯಮಿಗಳನ್ನು ಕರೆದುಕೊಂಡು ಇಲ್ಲಿಗೆ ಬಂದು ಕೈಗಾರಿಕೆಗಳನ್ನು ಮಾಡಬೇಕೆಂದು ಅಂಗಲಾಚಿ ಬೇಡಿಕೊಂಡರು. ಇದು ಫಲಕಾರಿಯಾಗಲಿಲ್ಲ. ಇತರ ಕೈಯಲ್ಲಿ ರಾಜ್ಯದ ದುಡ್ಡನ್ನು ಕೊಟ್ಟು ಕೈಗಾರಿಕೆ ಬೆಳೆಸುವ ಸ್ಥಿತಿ ನಾವು ಇಂದು ನೋಡುತ್ತಿದ್ದೇವೆ. ಇವರ ನಡೆವಳಿಕೆ ನಮ್ಮ ಕೈಗಾರಿಕಾ ನೀತಿಗೇ ವಿರೋಧವಾಗುತ್ತದೆ. ಇಂದು ನಾವು ಮುಖ್ಯವಾಗಿ ವಿಮರ್ಶೆ ಮಾಡಬೇಕಾಗಿರುವುದು ಎರಡು ಮುಖ್ಯ ವಿಷಯಗಳ ಮೇಲೆ. ಒಂದು ಯಾವ ರೀತಿ ಸರಕಾರದ ಕೈಗಾರಿಕೆಗಳನ್ನು ನಡೆಸುತ್ತಿದ್ದಾರೆ ಮತ್ತು ಎರಡನೇಯದು ಸಾರ್ವಜನಿಕ ಕ್ಷೇತ್ರದಲ್ಲಿ ಕೈಗಾರಿಕೆಗಳು ಏನಿವೆ ಅವನ್ನು ಮುಂದುವರಿಸಿಕೊಂಡು ಯಾವ ರೀತಿ ಮುಂದುವರಿಸಿಕೊಂಡು ಬರುತ್ತಿದ್ದಾರೆ ಎನ್ನುವುದು. ಸರಕಾರದ ಕೈಗಾರಿಕೆಗಳನ್ನು ನಡೆಸುವ ವಿಷಯದಲ್ಲಿ ಮಾನ್ಯ ಮಂತ್ರಿಗಳು ಹೇಳಿದ ಹಾಗೆ ಸರಕಾರದ ಬಂಡವಾಳ ಹಾಕಿದ್ದರೂ ಇದು ಯಾವ ರೀತಿ ನಡೆಯುತ್ತಿದೆ ಎನ್ನುವುದು ನಮ್ಮ ಆಡಿಟ್ ರಿಪೋರ್ಟಿನಲ್ಲಿ ಚೆನ್ನಾಗಿ ಗೊತ್ತಾಗುತ್ತದೆ ಮತ್ತು ಆಡಿಟ್ ರಿಪೋರ್ಟಿನಲ್ಲಿ ಇವೆಲ್ಲ ವಿವರಗಳನ್ನೂ ಸ್ಪಷ್ಟವಾಗಿ ಹೇಳಿದ್ದಾರೆ.

ಆಡಿಟ್ ರಿಪೋರ್ಟಿನ ಪುಟ 68-69 ರಲ್ಲಿ ಇವನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಇದರಿಂದ ವಿವರಗಳೆಲ್ಲಾ ಚೆನ್ನಾಗಿ ಗೊತ್ತಾಗುತ್ತದೆ. ಸರಕಾರದ ದಿವಾಳಿ ಖೋರತನಬಯಲಾಗಿದೆ. ಇದೇ ರೀತಿ ಸರಕಾರ ಎರಡುಮೂರು ಕೈಗಾರಿಕೆಗಳಲ್ಲಿ ನಷ್ಟವಾಗುತ್ತಿದೆ ಎನ್ನುವುದು ಸ್ಪಷ್ಟವಾಗಿ ಗೊತ್ತಾಗುತ್ತದೆ ಮತ್ತು ಇದನ್ನು ಅವರು ಒಪ್ಪಿಕೊಳ್ಳುತ್ತಾರೆ. ಎಲ್ಲ ಕೈಗಾರಿಕೆಗಳಲ್ಲೂ ಎಷ್ಟು ನಷ್ಟವಾಗುತ್ತಿದೆ ಎನ್ನುವುದು ಇದರಲ್ಲಿರುವ ಮುಖ್ಯ ಪ್ರಶ್ನೆ. ಇದರ ಬಗ್ಗೆ ಪ್ರಶ್ನೆ ಕೇಳಿದರೆ ಮಾನ್ಯ ಮಂತ್ರಿಗಳು ಅಲ್ಲ ಇಲ್ಲಿ ಕೆಲವು ಅಧಿಕಾರಿಗಳ ಅದಕ್ಷತೆಯಿಂದ ಅಲ್ಲಲ್ಲಿ ಅಲ್ಪಸ್ವಲ್ಪ ನಷ್ಟವಾಗಿರಬಹುದು ಮತ್ತು ಸ್ವಲ್ಪ ತಕರಾರುಗಳು ಇರಬಹುದು ಎಂದು ಇಲ್ಲಿ ಚಾರಿಸುವ ಮಾತುಗಳನ್ನು ಹೇಳಿಬಿಡುತ್ತಾರೆ ಕೈಗಾರಿಕೆಗಳಿಂದ ತಯಾರಾದ ಸರಕುಗಳನ್ನು ಮಾರಲು ಸರಿಯಾದ ಮಾರ್ಕೆಟ್ಟಿದೆಯೇ ಅದರ ಬಗ್ಗೆ ಪರಿಶೀಲನೆ ನಡೆದಿದೆಯೇ ಎಂದರೆ ಯಾವುದೂ ನಡೆದಿಲ್ಲ ಎನ್ನುವುದು ಗೊತ್ತಾಗುತ್ತದೆ. ಇನ್ನು ರೆಂಕೋ ಕೈಗಾರಿಕೆ ವಿಚಾರ ತೆಗೆದುಕೊಂಡರೆ ಇದರಲ್ಲಿ ಸರಕಾರದ ಬಂಡವಾಳ ಹಾಕಿದ್ದರೂ ತುಂಬಾ ನಷ್ಟವಾಗುತ್ತಿದೆ. ಇದರಲ್ಲೇನೋ ಒಂದು ರೀತಿಯಾದ ಅಕ್ರಮ ಅವ್ಯವಹಾರಗಳು ಆಗಿವೆ ಎನ್ನುವುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಇದೇ ರೀತಿ ಈಗ ಭದ್ರಾವತಿಯಲ್ಲಿರುವ ಮೈಸೂರು ಐರನ್ ಅಂಡ್ ಸ್ಟೀಲ್ ಕಂಪನಿ ಬಗ್ಗೆ ಸರಕಾರದ ಮನೋಭಾವ ಯಾವ ರೀತಿ ಇದೆ ಎನ್ನುವುದರ ಬಗ್ಗೆ ಈಗಾಗಲೇ ನನ್ನ ಮಿತ್ರರಾದ ಶ್ರೀಮಾನ್ ರಾಜಯ್ಯ ಶೆಟ್ಟಿಯವರೂ ಹಾಗೂ ಶ್ರೀಮಾನ್ ಸಿದ್ಧವೀರಪ್ಪನವರೂ ಆಡಿಟ್ ರಿಪೋರ್ಟ್‌ನಲ್ಲಿರುವ ವಿಚಾರಗಳನ್ನೂ ಹೇಳಿ ಇದರ ಅಂಕೆ ಅಂಶಗಳನ್ನು ಕೂಡ ಎತ್ತಿ ತೋರಿಸಿದ್ದಾರೆ. ಇದರಲ್ಲೇನೋ ಮೋಸವಾಗಿದೆ ಎನ್ನುವುದು ಇದರಿಂದ ಗೊತ್ತಾಗುತ್ತದೆ. ಇದರಲ್ಲಾಗಿರುವ ದುರ್ವ್ಯಯ, ಲಂಚಗುಳಿತನ, ಸ್ವಜನ ಪಕ್ಷಪಾತ ಆಡಳಿತದಲ್ಲಿ ತುಂಬಿದೆ ಎನ್ನುವುದು ಆಡಿಟ್ ರಿಪೋರ್ಟಿನ ವರದಿ ನೋಡಿದರೆ ಚೆನ್ನಾಗಿ ಗೊತ್ತಾಗುತ್ತದೆ. ಒಂದೇ ಒಂದು ವಿಚಾರ ಹೇಳಬಹುದು. ನನಗೆ ತಿಳಿದಮಟ್ಟಿಗೆ ಇದರ ಬಗ್ಗೆ ಈ ಸಭೆಯ ಎಸ್ಟಿಮೇಟು ಕಮಿಟಿಯವರು (ಅಂದಾಜು ಸಮಿತಿ) ಬಹಳ ಚೆನ್ನಾಗಿ ಆಳವಾಗಿ ವಿಮರ್ಶೆ ಮಾಡಿ ಒಂದು ವರದಿಯನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ನಾನು ಇಲ್ಲಿ ದೀರ್ಘ ವಿಮರ್ಶೆ ಮಾಡಲು ಹೋಗುವುದಿಲ್ಲ. ಎಸ್ಟಿಮೇಟ್ ಕಮಿಟಿಯವರು ಇವುಗಳನ್ನು ಪರಿಶೀಲನೆ ಮಾಡಿ ಏನು ಹೇಳಿದ್ದಾರೆ ಎನ್ನುವುದು ಅವರ ವರದಿಯಲ್ಲಿ ವಿವರವಾಗಿ ಇದೆ. ಆದರೆ ಇದರ ಬಗ್ಗೆ ಮಂತ್ರಿಗಳ ಪ್ರತಿಕ್ರಿಯೆ ಏನು? ಮಾನ್ಯ ಕೈಗಾರಿಕಾ ಮಂತ್ರಿಗಳು ಈ ವರದಿ ಬಗ್ಗೆ ಎಲ್ಲರೂ ಕಮಿಟಿ ಮಾಡುವ ರಿಪೋರ್ಟಿನಂತೆ ಇದೂ ಕೂಡ ಇದೆ ಎಂದು ಸಾಮಾನ್ಯವಾಗಿ ಹೇಳಿದರು ಎಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ಅಂದರೆ ಒಂದು ಮಾನ್ಯ ಸಭೆಯ ಸದಸ್ಯರನ್ನೊಳಗೊಂಡ ಸಮಿತಿಯ ಒಳ್ಳೆಯ ವರದಿಯ ಬಗ್ಗೆ ಮಂತ್ರಿಗಳ ಅಸಡ್ಡೆ ಮನೋಭಾವ ಎಲ್ಲಿಯವರೆಗೆ ಹೋಗಿದೆ ಎನ್ನುವುದು ತಿಳಿಯುತ್ತದೆ. ಇಂತಹವರಿಂದ ಕೈಗಾರಿಕಾ ಬೆಳವಣಿಗೆ ನಿರೀಕ್ಷಿಸಲು ಸಾಧ್ಯವೇನು ?

Sri M. RAJASEKHARA MURTHY.—I have not said so.

ಶ್ರೀ ಎಂ. ಎಸ್. ಕೃಷ್ಣನ್.—ಇದನ್ನು ತಾವೇ ಮೊದಲು ನಿರಾಕರಿಸಬಹುದಿತ್ತು. ಹಾಗೆ ಮಾಡಿಲ್ಲ. ನನಗೆ ಬಂದಿರುವ ವರದಿಯ ಹಾಗೂ ಪತ್ರಿಕೆಗಳಲ್ಲಿ ಬಂದಿರುವ ಸ್ಟೇಟುಮೆಂಟು ಬಗ್ಗೆ ಇಲ್ಲಿ ಹೇಳುತ್ತಿದ್ದೇನೆ. ಸಾರ್ವಜನಿಕ ಕ್ಷೇತ್ರದಲ್ಲಿ ಇರುವ ಕೈಗಾರಿಕೆಗಳಲ್ಲಿ ನಂಬಿಕೆ ಇಲ್ಲದಂತೆ ನಿಮ್ಮ ಹೇಳಿಕೆ ಇದೆ ಎನ್ನುವುದು ಇದರಲ್ಲಿ ಸ್ಪಷ್ಟವಾಗಿ ಗೊತ್ತಾಗುತ್ತದೆ. ರೆಂಕೋ ಕೈಗಾರಿಕೆಯನ್ನೇ ತಾವು ನಿದರ್ಶನವಾಗಿ ತೆಗೆದುಕೊಂಡರೆ ನೀವೇ ಬಂಡವಾಳ ಹಾಕಿ ಸುಮಾರು 80 ಲಕ್ಷದಷ್ಟು ನಷ್ಟವಾಗುತ್ತಿದೆ. ಇದನ್ನು ನಮ್ಮ ಸರಕಾರ ನಡೆಸುವುದು ಬೇಡ. ಇದರ ಬಗ್ಗೆ ಕೇಂದ್ರದ ಮೇಲೆ ಒತ್ತಾಯ ತಂದು ಇವನ್ನು ಬಿ.ಇ.ಎಲ್.ರವರಿಗೇ ಒಪ್ಪಿಸಿ ಬಿಡಿ ಎಂದು ನಾನು ಪದೇ ಪದೇ ಹೇಳಿದ್ದೇನೆ. ಕೇಂದ್ರದವರು ಇದಕ್ಕೆ ಒಪ್ಪಿಗೆ ಕೊಡಲಿಲ್ಲ ಎಂದಿದ್ದಾರೆ ಮಂತ್ರಿಗಳು. ಮತ್ತು ನಮ್ಮ ಸರಕಾರದಲ್ಲಿ ಕೇಂದ್ರದ ಮೇಲೆ ಪ್ರಭಾವಯುತವಾದ ಶಕ್ತಿ ಉಪಯೋಗಿಸಿ ಒತ್ತಾಯ ತರುವಂಥಹ ಸಮರ್ಥರಿಲ್ಲ ಎಂದು ತಿಳಿಯುತ್ತದೆ. ಇದರಿಂದಾಗಿ ಇಂದು ಎರಡನೆಯ ಬಿ.ಇ.ಎಲ್. ಫ್ಯಾಕ್ಟರಿ ಎನ್ನುವುದು ದೆಹಲಿಯಲ್ಲೋ ಇಲ್ಲವೇ ಫರೀದಾಬಾದ್‌ನಲ್ಲೋ ಆಗುವ ಹಾಗೆ ಕಾಣುತ್ತದೆ. ಇಲ್ಲಂತೂ ಆಗುವ ಸಾಧ್ಯತೆ ಕಂಡುಬರುತ್ತಿಲ್ಲ. ರೆಂಕೋನಲ್ಲಿನ ಸ್ಥಿತಿ ಚೆನ್ನಾಗಿಲ್ಲ. ಇದರಿಂದಾಗಿಯೇ ತಾವು ಒಂದು ಪ್ರೋಬ್ ಮಾಡಿ ಆಳವಾಗಿ ಇದರ ಎಲ್ಲ ಸಾಧಕ ಬಾಧಕಗಳನ್ನು ಕೂಲಂಕಶವಾಗಿ ವಿಮರ್ಶೆ ಮಾಡಿ ಇದು ಉಳಿಯುವ ಹಾಗೆ ತಕ್ಕ ಕೆಲಸಗಳನ್ನು ಸರಕಾರ ಮಾಡಬೇಕೆಂದು ಹೇಳುತ್ತೇನೆ. ಇದೇ ರೀತಿ ನಮ್ಮ ಪೋರ್ಸಿಲೇನ್ ಫ್ಯಾಕ್ಟರಿ ಬಗ್ಗೆ ಕೂಡ ವಿಚಾರ ಮಾಡುವುದಾದರೆ ಇದೂ ಕೂಡ ಸರಿಯಾದ ಸ್ಥಿತಿಯಲ್ಲಿಲ್ಲ. ಇದರಲ್ಲಿ ಕೂಡ ನಷ್ಟವಾಗುತ್ತಿದೆ. ಇದರ ಬಗ್ಗೆ ಎಲ್ಲ ಅಂಕೆ ಅಂಶಗಳನ್ನೂ ನಾನು ವಿವರವಾಗಿ ಪಡೆದುಕೊಂಡು ಬಂದಿದ್ದೇನೆ. ಇಲ್ಲಿ ಅವಕಾಶವಿಲ್ಲದೇ ಇರುವುದರಿಂದ ಇದರ ವಿವರಗಳನ್ನು ಬೇಕಾದರೆ ಮಾನ್ಯ ಮಂತ್ರಿಗಳಿಗೆ ಕೊಡುತ್ತೇನೆ.

(ಶ್ರೀ ಎಂ. ಎಸ್. ಕೃಷ್ಣನ್)

ಇದರಲ್ಲೂ ಕೂಡ ಬಹಳ ಮುಗ್ಗಟ್ಟು ಬಂದಿದೆ. ಇದರಲ್ಲಿ ಸುಮಾರು 5.2 ಲಕ್ಷ ಬೆಲೆಯ ಒಂದು ಮೆಷಿನರಿಯನ್ನು ಎನ್.ಜಿ.ಕೆ. (ಜಪಾನ್) ಇವರಿಂದ ತರಿಸಿದರು. ಇದು 1964ನೇ ಅಗ್ರಿಮೆಂಟು ಪ್ರಕಾರ ತರಿಸಿದ್ದು. ಈಗ ಈ ಅಗ್ರಿಮೆಂಟನ್ನು ಕೂಡ ಪರಿಶೀಲನೆ ಮಾಡಬೇಕಾಗಿದೆ. ಇನ್ನು ಇಲ್ಲಿರುವ ಜನ ಮೆಷಿನರಿ ಗೊತ್ತಿಲ್ಲದ ಜನ ಎಂದು ಹಳೇ ಮೆಷಿನರಿ ಒಂದನ್ನು 63 ಲಕ್ಷಕ್ಕೆ ತಂದು ನಮ್ಮ ಸರಕಾರಕ್ಕೆ ಟೋಪಿ ಹಾಕಿದ್ದಾರೆ. ಇದೇ ರೀತಿಯ ಮೆಷಿನರಿಯನ್ನು ಮದ್ರಾಸಿನವರಿಗೆ 30 ಲಕ್ಷಕ್ಕೆ ಕೊಟ್ಟು ನಮ್ಮ ಸರಕಾರಕ್ಕೆ ಹೆಚ್ಚು ಹಣಕ್ಕೆ ಮಾರಿದ್ದಾರೆ. ಇಲ್ಲಿ ಇನ್ಸುಲೇಟರುಗಳನ್ನು ಮಾಡುವ ಹಾಗೆ ಮದ್ರಾಸಿನಲ್ಲೂ ಇನ್ಸುಲೇಟರುಗಳನ್ನು ಮಾಡುತ್ತಿದ್ದಾರೆ. ಇದಕ್ಕಾಗಿ ಡ್ರೈಗ್ರೈಂಡಿಂಗು ಎಕ್ವಿಪ್‌ಮೆಂಟು ಎನ್ನುವ ಮೆಷಿನರಿಯನ್ನು ಯು ಎಸ್ ಎ ಕಡೆಯಿಂದ ಮದ್ರಾಸಿನವರು 25 ಲಕ್ಷಕ್ಕೆ ತರಿಸಿದ್ದರು. ಇದೇ ಮೆಷಿನರಿಯನ್ನು ಇಲ್ಲಿ ತರಿಸಲು ಸುಮಾರು 50 ಲಕ್ಷ ಕೊಟ್ಟು ತರಿಸಲಾಗಿದೆ. ಇದರಿಂದ ಸರಕಾರಕ್ಕೆ ನಷ್ಟವಾಗಿದೆ. ಇದರಲ್ಲಿ ಯಾರ್ಯಾರಿಗೆ ಎಷ್ಟು ಪ್ರಮಾಣದಲ್ಲಿ ಹಂಚಿಕೆಯಾಗಿದೆ ಎನ್ನುವುದನ್ನು ಸರಕಾರ ತೀವ್ರವಾಗಿ ವಿಚಾರಣೆ ಮಾಡಲು ಒಂದು ಪ್ರೋಬ್ ನಡೆಸಬೇಕು. ಇದು ಅಗತ್ಯ. ಇಂತಹ ಒಂದಲ್ಲ ಹಲವಾರು ನಿದರ್ಶನಗಳನ್ನು ಕೊಡಬಹುದು. ಇದರ ಬಗ್ಗೆ ಟೆಕ್ನಿಕಲ್ ಒಪಿನಿಯನ್ ಪಡೆಯಲು ಅನುಕೂಲವಾಗುತ್ತೆ ಎಂದು ಹೊರಗಿಂದ ಇಲ್ಲಿಗೆ ಅಧಿಕಾರಿಗಳನ್ನು ಕರೆಸಿ ಅವರಿಗೆ ತಿಂಗಳಿಗೆ 7,000 ರೂಪಾಯಿಗಳ ಪರವಾನ ಬರುವಂತೆ ಏರ್ಪಾಡು ಮಾಡಿದ್ದಾರೆ. ಪೋರ್ಸಿಲೇನ್ ಫ್ಯಾಕ್ಟರಿಯಲ್ಲಿ ಇನ್ನೂ ರಾಯಲ್ಟಿ ಕೂಡ ಕೊಡುತ್ತಿದ್ದಾರೆ. ಅನ್ಯಾಯಗಳು ಮೋಸ ಹೆಚ್ಚಾಗಿದೆ. ಇದರಿಂದಾಗಿ ಇಲ್ಲಿ ಕೂಡ ಒಂದು ರೀತಿಯಾದ ಮುಗ್ಗಟ್ಟು ಬಂದಿದೆ. ಆದಷ್ಟು ಬೇಗ ಇದರ ಬಗ್ಗೆ ವಿಚಾರಣೆ ನಡೆಸಲು ಏರ್ಪಾಡು ಮಾಡಬೇಕು. ಮತ್ತು ಸರಕಾರ ಬೇಗನೆ ವಿಚಾರಣೆ ನಡೆಸಿ, ಇಂತಹ ಕೈಗಾರಿಕೆಗಳನ್ನು ಉಳಿಸಲು ತಕ್ಕ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತು ನಮ್ಮ ಕೈಗಾರಿಕೆಯಲ್ಲಿ ರೀ ಓರಿಯಂಟೇಷನ್ ಆಗಬೇಕು. ಇದು ಸಮಾಜವಾದವಲ್ಲ. ಕೈಗಾರಿಕೆಗಳು ಬೆಳೆಯುವಂತೆ ಸರಕಾರ ಪ್ರಯತ್ನ ಮಾಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri ABDUL KHUDDUS ANWAR.—Mr. Speaker, Sir, while opposing the demands for industries, I beg to bring a few points for information of this Hon. House. The industries that are working in the Mysore State are not in a happy position. Almost every industry is incurring loss. The Bhadravathi Iron and Steel Works which was a major industry which was earning a profit of more than 195 lakhs prior to 1966. Now it is losing to the tune of nearly Rs. 7 to 3 crores. I want to bring to the notice of the Hon. Minister that L.D. Plant which was giving a production of 200 tons every day is shut down. It is a very sorry state of affairs the officers who are known to be the Technical Officers are not in a position to maintain this L. D. Plant. The Technical Officer concerned is putting forth some plea or the other for shutting down this plant. They are given a salary of some thousands. All of them have come from a foreign country and call themselves experts. The Refractories Plant supplied along with L.D. Plant, for the manufacture of Tar-Dolomite bricks was not at all put into operation, and before it was started it was scrapped by the foreign expert. So as to say that India is not in a position to supply refractories and must get these refractories from foreign, and thus stop the production of L. D. for a period of six or eight months, thus loosing a production of 60,000 tons of steel and in value of Rs. $1\frac{1}{2}$ crores loss to the concern. This is all due to the bad planning and lack of foresight and misdeeds of the man who was there as P. D. General Manager in Collaboration with the foreigners. They require over 600 tons of refractories. Nobody is coming forward to supply such huge quantity and ultimately we have to

depend upon foreign countries. This alarming situation was created by a Foreign Expert–Technical Director, production has suffered a lot on account of this shut down.

With regards rolling of mild steel sections and billets for the use of Agriculturists and Re-rollers, which we were doing since last 30 years by supplying these cut-ends and roll spoils to the merchants, consumers and re-rollers to a tune of 45 thousand tons are deprived of their requirements on the pretext that they have switched over to alloy-Steel without carrying to the needs of the general public, or making alternative arrangements to supply the requirements of the consumers, and thus hundreds of workers are likely to be thrown out of jobs.

Sir, may I ask the concerned Minister that in the foreign countries from where our expert Mr. Huth is coming is adopting the same. Technique of charging the mild steel and again converting it into carbon and manganese steel, and sell it at a rate less than Rs. 1,200 per ton., if the same mild steel is sold it will get a value of Rs. 1,100 per ton and thus put the factory to a loss of Rs. 1½ crores. On account of this suicidal policy to day the rate of mild steel in open market has gone up to Rs. 1,500 per ton ; which an ordinary agriculturist or a common man will not be in a position to purchase and expert Mr. Huth says that we cannot make Carbon–Manganese Steel from out of scrap, which is being used by Japan and other countries and produce alloy steel.

All these 30 years we were able to manufacture these carbon and manganese steel from out of purchased scrap and Open Hearth and Electric Furnaces are very handy for manufacture of Alloy steel and even in the worlds steel production. These furnaces are very much suited for producing alloy steel and L.D. is quite suited for carbon and manganese steel. When we were successful during all these 30 years, why should our experts still think that they cannot make alloy steel, either they do not know the technique or they want this to convert into another Hindustan steels and thus roll–off our money. When I was the Superintendent there, we were earning a profit of 30 to 35 lakhs. But now you are losing. When that is the position, would you consider the Technical Director who has come from outside is competent ? Will you kindly go into the matter whether our people are not competent to be in-charge of the Works and deliver the goods to the best satisfaction of the people ? This consortium is eating Rs. 18 lakhs—20 lakhs every year. These people have taken months together for erection of the plant, whereas our people would have finished within the schedule. Our people have actually erected the plant within the shortest possible time. You can judge who is better. You are simply wasting the money on these people who are no better than our people. As a matter of fa t our people are better than these technical advisers. This is my personal experience. With these few words I conclude. Thank you, Sir

ಶ್ರೀ ಎಸ್. ಪುಟ್ಟಸ್ವಾಮಿ.—ಸ್ವಾಮಿ, ನನಗೆ ಈಗ 5 ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಡಬೇಕು.

ಅಧ್ಯಕ್ಷರು.—ಸಾಧ್ಯವಿಲ್ಲ. ಈಗಾಗಲೇ ಮಾನ್ಯ ಸಿದ್ದವೀರಪ್ಪನವರು 40 ನಿಮಿಷಗಳ ಕಾಲ ಮಾತನಾಡಿದ್ದಾರೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಹಿಂದೆ ಶ್ರೀ ಜೆ. ಬಿ. ಮಲ್ಲಾರಾಧ್ಯರು ಇದ್ದಾಗ ಅವರೊಬ್ಬರೇ 4 ಗಂಟೆಗಳ ಕಾಲ ಮಾತನಾಡುತ್ತಿದ್ದರು. ಆದ್ದರಿಂದ ಮಾನ್ಯ ಸಿದ್ದವೀರಪ್ಪನವರು 40 ನಿಮಿಷ ಮಾತನಾಡಿದ್ದರೆ ಅದು ಜಾಸ್ತಿಯಾಗುವುದಿಲ್ಲ.

ಅಧ್ಯಕ್ಷರು.—ಟೈಮ್ ಬಗ್ಗೆ ಅಗ್ರಿಮೆಂಟ್ ಆಗಿದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ರೇಷ್ಮೆ ಬಗ್ಗೆ ಒಬ್ಬರೂ ಸಹ ಮಾತನಾಡಿಲ್ಲ. ಆದ್ದರಿಂದ ಒಬ್ಬರಿಗಾದರೂ ಸಹ ಮಾತನಾಡುವುದಕ್ಕೆ ಅವಕಾಶ ಕೊಡಲೇಬೇಕು.

Mr. SPEAKER.—The Hon. Leader of Congress (R) Party was a party to this agreement.

Sri H. SIDDAVEERAPPA.—We were not a party to the agreement.

Mr. SPEAKER.—Mr. Siddaveerappa was a party to that.

ಶ್ರೀ ಎನ್ ಹುಚ್ಚಮಾಸ್ತಿಗೌಡ.—ರೇಷ್ಮೆ ಇಲಾಖೆ 10–15 ಲಕ್ಷ ಜನರ ಜೀವನಕ್ಕೆ ಸಂಬಂಧಪಟ್ಟದ್ದು. ಈ ಇಲಾಖೆ ಬಗ್ಗೆ ಒಬ್ಬರೂ ಸಹ ಮಾತನಾಡಿಲ್ಲ. ಆದ್ದರಿಂದ ಮಾನ್ಯ ಪುಟ್ಟಸ್ವಾಮಿಯವರಿಗಾಗಲೀ ಅಥವಾ ಶ್ರೀಮತಿ ನಾಗರತ್ನಮ್ಮನವರಿಗಾಗಲೀ ಮಾತನಾಡುವುದಕ್ಕೆ 10 ನಿಮಿಷವಾದರೂ ಅವಕಾಶ ಕೊಡಿ.

ಅಧ್ಯಕ್ಷರು.—ನಿಮ್ಮ ಪಾರ್ಟಿಯು ಸಿದ್ದವೀರಪ್ಪನವರು ಈಗಾಗಲೇ 40 ನಿಮಿಷ ಮಾತನಾಡಿದ್ದಾರೆ. ಮತ್ತೊಬ್ಬರು 10 ನಿಮಿಷ ಮಾತನಾಡಿದ್ದಾರೆ. ಆದ್ದರಿಂದ ನಾನು ಈಗ ಏನು ಮಾಡುವುದಕ್ಕೂ ಸಹ ಆಗುವುದಿಲ್ಲ.

ಶ್ರೀ ಎನ್ ಹುಚ್ಚಮಾಸ್ತಿಗೌಡ.—ಸ್ವಾಮಿ, ರೇಷ್ಮೆಕೈಗಾರಿಕೆ ಬಹಳ ಪ್ರಾಮುಖ್ಯವಾದದ್ದು. ಈ ವಿಚಾರದಲ್ಲಿ ಯಾರೂ ಮಾತನಾಡಿಲ್ಲ. ಯಾರೂ ಸಹ ಮಾತನಾಡದಿದ್ದರೆ ಮುಖ್ಯವಾದ ಒಂದು ಇಲಾಖೆಯನ್ನು ಮರೆತಹಾಗಾಗುತ್ತದೆ. ಆದ್ದರಿಂದ ಶ್ರೀಮಾನ್ ಪುಟ್ಟಸ್ವಾಮಿಯವರಿಗೆ ಮಾತನಾಡಲು 10 ನಿಮಿಷ ಅವಕಾಶವನ್ನು ಕೊಡಿ.

Mr. SPEAKER.—Is the Hon. Member justified in making this request as a Whip of the party.

Sri H. SIDDAVEERAPPA.—Sir, this is the first time in the history of Mysore Legislature that such a procedure has been followed.

Mr. SPEAKER.—Then the Hon. Member may Suggest Some other Procedure and if it is reasonable we shall accept it.

Sri H. SIDDAVEERAPPA.—Sir, I should say, this time the interests of the State have been lost. Sericulture is an important industry, and Mysore has the biggest place in India in this industry. Please permit at least one person to speak who comes from that area.

Mr. SPEAKER.—The Hon. Member took 40 minutes himself. Was it not a fact that 3 hours time was allotted for this Demand with the consent of the Hon. Member ?

Sri H. SIDDAVEERAPPA.—I have not taken adequate time to do justice. That is why we suggested earlier to simply put the Demand to vote and be done with it.

Sri R. DAYANANDA SAGAR.—Sir, this is not fair. About Rs. 10 crores have been mismanaged in Sericulture industry and you want to give only half-a-day for discussion of this Demand.

MR. SPEAKER.—The entire House including Sri Siddaveerappa agreed to it.

SRI H. SIDDAVEERAPPA.—Sir, please do not bring in my name. I am not a party to it.

SMT. K. S. NAGARATHNAMMA.—Sir, this is really bad. Nobody has spoken about sericulture.

SRI G. DUGGAPPA.—Sir, this is a very important subject. Nobody has made any reference about sericulture. I am sure the Hon. Minister will also agree that an opportunity be given to a member coming from that area.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಪ್ರಪಂಚದಲ್ಲಿ ಉತ್ಪತ್ತಿಯಾಗತಕ್ಕಂಥ ರೇಷ್ಮೆ ಬೆಳೆಯಲ್ಲಿ 80 ಪರ್ಸೆಂಟ್ ರೇಷ್ಮೆಯನ್ನು ಮೈಸೂರು ರಾಜ್ಯದಲ್ಲಿ ಬೆಳೆಯುತ್ತಾರೆ ಇದರ ಗತಿ ಏನು ಮಾಡಿದ್ದೀರಿ ಎಂಬುದನ್ನು ಹೇಳುವುದಕ್ಕೆ ಅವಕಾಶ ಕೊಡದಿದ್ದರೆ ಹೇಗೆ ? ಹೀಗೆ ಮಾಡುತ್ತಿರುವುದು ನ್ಯಾಯವೇ ?

MR. SPEAKER.—If the Hon. Minister is agreeable, I have no objection.

SRI B. B. SAYANAK.—Sir, I rise to a Point of Order. When the Minister is standing to commence his reply, four Hon. Members are standing and speaking. Is the House in order ?

MR. SPEAKER.—I uphold the Point of Order.

SRI D. DEVARAJ URS.—Sir, with your permission, I would like to say a few words. I know sericulture has a very important part to play in industries. With regard to the timing, I wish to submit that rightly or wrongly we have been pushed into a position whereby we have been asked to discuss on such important Demands within such a short period. I appeal to the Chief Minister, through you Sir, that the method we have adopted for discussing Budget demands, will have to be changed hereafter.

MR. SPEAKER.—I totally agree with the Hon. Member. But, my suggestion was not accepted.

ಶ್ರೀ ಬಿ. ಪಿ. ಗಂಗಾಧರ್.—ಬಿಸಿನೆಸ್ ಅಡ್ವೈಜರಿ ಕಮಿಟಿ ಮೀಟಿಂಗ್‌ನಲ್ಲಿ ನೀವು 4–6 ಜನಗಳು ಸೇರಿ ಏನೋ ಒಂದು ತೀರ್ಮಾನ ಮಾಡುತ್ತೀರಿ, ಇದರಲ್ಲಿ ಏನಾಗಿದೆ ಎಂದರೆ ಬೇಡಿಕೆಗಳ ಮೇಲೆ ಮಾತನಾಡುವುದಕ್ಕೆ ನಮಗೆ ಅವಕಾಶವೇ ಸಿಕ್ಕುತ್ತಿಲ್ಲ.

SRI D. DEVARAJ URS.—The second point is, today being Saturday, we should have sat only in the morning. But, since the House was adjourned day-before-yesterday, we have agree to sit in the afternoon as well. The request of the Hon. Members is to give ten minutes for one person to speak, either to Smt. Nagarathnamma or Sri Puttaswamy, and it may be accepted.

MR. SPEAKER.—If the Minister is agreeable, I have no objection. But is it not the duty of the hon. members to abide by what was agreed upon ?

SRI H. SIDDAVEERAPPA.—We have to resist if what is done is improper.

Mr. SPEAKER.—The hon. Member cannot say it is improper.

Sri C. K. RAJAIAH SETTY.—Sir, the Hon. Member may be permitted to speak. We can continue the same subject in the afternoon

Mr. SPEAKER.—It is not possible to continue it in the afternoon. Is the Hon' ble Minister agreeable to give some time to the hon. member?

Sri M. RAJASHEKARA MURTHY.—Yes, Sir.

† ಶ್ರೀ ಎಸ್. ಪುಟ್ಟಸ್ವಾಮಿ (ಚಾಮರಾಜನಗರ).—ಮಾನ್ಯ ಅಧ್ಯಕ್ಷರೇ, ಈಗ ಈ ಸಭೆಯ ಮುಂದಿಟ್ಟಿರತಕ್ಕ ಕೈಗಾರಿಕೆಗೆ ಸಂಬಂಧಪಟ್ಟ ಬೇಡಿಕೆಗಳನ್ನು ವಿರೋಧಿಸುತ್ತಾ ರೇಷ್ಮೆ ಕೈಗಾರಿಕೆಗೆ ಸಂಬಂಧಪಟ್ಟ ಹಾಗೆ ಕೆಲವು ವಿಷಯಗಳನ್ನು ನಾನು ಪ್ರಸ್ತಾಪಮಾಡುವುದಕ್ಕೆ ಇಚ್ಛಿಸುತ್ತೇನೆ. ನಾನು ಈಗಾಗಲೇ ಈ ಮನೆಗೆ ಸದಸ್ಯನಾಗಿ ಚುನಾಯಿತನಾಗಿ ಬಂದಮೇಲೆ ರೇಷ್ಮೆ ಕೈಗಾರಿಕೆಯ ಮೇಲೆ ಎರಡು ಬಾರಿ ಭಾಷಣ ಮಾಡುತ್ತಾ ಈ ರೇಷ್ಮೆ ಕೈಗಾರಿಕೆಯನ್ನು ಪೂರ್ಣವಾಗಿ ಕೈಗಾರಿಕಾ ಇಲಾಖೆಗೆ ಸೇರಿಸಿ ಎಂದು ಒಂದು ಸಲಹೆಯನ್ನು ಕೊಟ್ಟಿದ್ದೆ. ಸರ್ಕಾರದವರು ಅದನ್ನು ಆಲೋಚನೆ ಮಾಡಿದಹಾಗೆ ಕಾಣುವುದಿಲ್ಲ, ಅಥವಾ ಈ ಕೈಗಾರಿಕೆಯನ್ನು ವ್ಯವಸಾಯದ ಇಲಾಖೆಗೆ ಸೇರಿಸಿ ಅದರ ಮುಖಾಂತರ ಅದರ ಅಭಿವೃದ್ಧಿಯನ್ನು ಸಾಧನೆ ಮಾಡಿ ಎಂದು ಹೇಳಿದ್ದೆ. ಇದರ ಬಗ್ಗೆಯೂ ಸರ್ಕಾರದವರು ಆಲೋಚನೆ ಮಾಡಿದಹಾಗೆ ಕಾಣುವುದಿಲ್ಲ. ಹಿಪ್ಪನೇರಳೆ ಸೊಪ್ಪನ್ನು ಬೆಳೆದು ಅದರಿಂದ ರೇಷ್ಮೆಹುಳುವನ್ನು ಸಾಕಿ ಅದರ ಗೂಡಿನಿಂದ ರೇಷ್ಮೆಯನ್ನು ಉತ್ಪನ್ನ ಮಾಡತಕ್ಕದ್ದರಲ್ಲಿ ನಮ್ಮ ಮೈಸೂರು ರಾಜ್ಯ ಇಡೀ ಪ್ರಪಂಚದಲ್ಲೇ ಅಗ್ರಸ್ಥಾನವನ್ನು ಪಡೆದಿದೆ. ಮತ್ತು ಇಡೀ ಪ್ರಪಂಚದಲ್ಲಿ ರೇಷ್ಮೆಯನ್ನು ಬೆಳೆಯುವುದರಲ್ಲಿ 80 ಪರ್ಸೆಂಟ್ ರೇಷ್ಮೆಯನ್ನು ನಮ್ಮ ಮೈಸೂರು ರಾಜ್ಯದಲ್ಲಿ ಬೆಳೆಯುತ್ತಾರೆ. ಆದ್ದರಿಂದ ರೇಷ್ಮೆಯ ಉತ್ಪತ್ತಿಗೆ ಮೂಲವಾಗಿರತಕ್ಕಂಥ ರೇಷ್ಮೆ ಹುಳುವನ್ನು ಸಾಕುವುದಕ್ಕೆ ಪ್ರಾಧಾನ್ಯವಾಗಿರತಕ್ಕ ಹಿಪ್ಪನೇರಳೆ ಸೊಪ್ಪನ್ನು ಮತ್ತು ಅದರ ತಳಿಯನ್ನು ಅಭಿವೃದ್ಧಿಮಾಡತಕ್ಕ ಕೆಲಸವನ್ನು ಮಾಡಬೇಕು. ರೇಷ್ಮೆಯ ಹೊಸ ಹೊಸ ರೀತಿಯ ತಳಿಗಳನ್ನು ಬೆಳೆಸುವುದಕ್ಕೆ ಸರ್ಕಾರದವರು ಒಂದು ವ್ಯವಸ್ಥೆ ಮಾಡಬೇಕು. ಹಿಪ್ಪನೇರಳೆಯನ್ನು ಬೆಳೆಯತಕ್ಕ ರೈತರಿಗೆ ನೀರಾವರಿ ಬಾವಿಗಳನ್ನು ಮತ್ತು ಪಂಪುಸೆಟ್ಟುಗಳನ್ನು ಒದಗಿಸಬೇಕೆಂದು ಎಷ್ಟು ಸಾರಿ ಹೇಳಿದರೂ ಕೂಡ ಸರ್ಕಾರದವರು ಆ ಕಡೆ ಸಾಕಷ್ಟು ಗಮನವನ್ನು ಕೊಟ್ಟಿಲ್ಲ. ಆದ್ದರಿಂದ ರೈತರು ಹಿಪ್ಪನೇರಳೆ ಬೆಳೆಯುವುದಕ್ಕೆ ಅನುಕೂಲವಾಗುವಂತೆ ಸರ್ಕಾರದವರು ನೀರಾವರಿ ಬಾವಿಗಳನ್ನು ಒದಗಿಸಬೇಕೆಂದು ನಾನು ಹೇಳುತ್ತೇನೆ.

ಸರ್ಕಾರದವರು ನಡೆಸುತ್ತಾ ಇರತಕ್ಕ ಸಿಲ್ಕ್ ಫಿಲೇಚರುಗಳು ಏನಿವೆ ಅವುಗಳಲ್ಲಿ ಒಂದು ವರ್ಷಕ್ಕೆ ಲಕ್ಷಾಂತರ ರೂಪಾಯಿಗಳು ನಷ್ಟವಾಗುತ್ತಿದೆ. ಆ ಫಿಲೇಚರುಗಳಲ್ಲಿ ಸರ್ಕಾರದವರು ಹಾಕಿರತಕ್ಕ ಬಂಡವಾಳ ಕುಗ್ಗುತ್ತಾ ಹೋಗುತ್ತಿದೆ. ಆದಕಾರಣ ಈ ಫಿಲೇಚರುಗಳನ್ನು ಒಂದೊಂದು ಯೂನಿಟ್ ಮಾಡಿ ಅದಕ್ಕೆ ಒಬ್ಬೊಬ್ಬ ಮ್ಯಾನೇಜರನ್ನು ನೇಮಕ ಮಾಡಿದರೆ ಆ ಫಿಲೇಚರುಗಳನ್ನು ಸರಿಯಾದ ರೀತಿಯಲ್ಲಿ ನಡೆಸಿ ಹೆಚ್ಚು ಉತ್ಪತ್ತಿ ತೆಗೆಯುವುದಕ್ಕೆ ಅನುಕೂಲವಾಗುತ್ತದೆ. ಈ ವ್ಯವಸ್ಥೆಯನ್ನು ತಕ್ಷಣ ಮಾಡುವುದಾದರೆ ಆ ಫಿಲೇಚರುಗಳಲ್ಲಿ ಆಗತಕ್ಕಂಥ ನಷ್ಟವನ್ನು ತಪ್ಪಿಸುವುದಕ್ಕೆ ಅನುಕೂಲವಾಗುತ್ತದೆ. ರೇಷ್ಮೆ ಕೈಗಾರಿಕೆಯ ಇಲಾಖೆಯಲ್ಲಿ ಅಧಿಕಾರಿಗಳು ಲಂಚತೆಗೆದುಕೊಳ್ಳುವುದನ್ನು ಸರ್ಕಾರದವರು ತಡೆಗಟ್ಟಬೇಕು ಫಿಲೇಚರುಗಳಲ್ಲಿ ರೇಷ್ಮೆ ನೂಲನ್ನು ಕದ್ದು ಮಾರಾಟ ಮಾಡುವುದರಿಂದ ಸರ್ಕಾರಕ್ಕೆ ನಷ್ಟವಾಗುತ್ತದೆ. ಇದನ್ನು ಸರಿಪಡಿಸಬೇಕು. ರೇಷ್ಮೆ ಗೂಡುಗಳ ಮಾರಾಟ ಮತ್ತು ಕೊಂಡುಕೊಳ್ಳುವುದರಲ್ಲಿ ಸರ್ಕಾರಕ್ಕೆ ಆಗತಕ್ಕಂಥ ನಷ್ಟವನ್ನು ಕಡಿಮೆ ಮಾಡುವುದಕ್ಕೆ ಸರ್ಕಾರದವರು ವ್ಯವಸ್ಥೆ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ.

1-00 P. M.

ಇನ್ನೊಂದು ವಿಷಯ ಏನೆಂದರೆ ರಾಜ್ಯಮಟ್ಟದಲ್ಲಿ ಸರ್ಕಾರ ಉತ್ಪನ್ನ ಮಾಡತಕ್ಕ ರೇಷ್ಮೆಯನ್ನು ಮಾರಾಟ ಮಾಡುವುದಕ್ಕೆ ಮತ್ತು ಖಾಸಗಿಯಾಗಿ ರೈತರು ಮಾಡಿದ್ದನ್ನು ಮಾರಾಟ ಮಾಡುವುದಕ್ಕೆ ಒಂದು ರಾಜ್ಯಮಟ್ಟದ ಸಹಕಾರಿ ಸಂಘವನ್ನು ತೆರೆದಿದ್ದಾರೆ. ಇದಕ್ಕೆ ಸರ್ಕಾರದವರೂ ಬಂಡವಾಳವನ್ನು ಕೊಟ್ಟಿದ್ದಾರೆ. ಅದಲ್ಲದೆ ಬ್ಯಾಂಕಿನಿಂದಲೂ ಕೂಡ ಸರ್ಕಾರದವರು ಲಕ್ಷಾಂತರ ರೂಪಾಯಿಯನ್ನು ಇವಕ್ಕೆ ಕೊಡಿಸಿದ್ದಾರೆ. ಈ ಸೊಸೈಟಿ ಹೇಗೆ ನಡೆಯುತ್ತದೆ ಅಂದರೆ, ಮೊನ್ನೆ ನಾಡಗೌಡರ ಇಲಾಖೆಯ ಡಿಮ್ಯಾಂಡ್ ಬಂದಾಗ ಅವರು ಆ ಸಹಕಾರಿ ಇಲಾಖೆಯನ್ನು ವಹಿಸಿಕೊಂಡ ಮೇಲೆ ಏನೇನಾಗಿದೆ ಎಂದು ಮಾನ್ಯ ಸದಸ್ಯರೆಲ್ಲ ಹೇಳಿದರೋ, ಸಹಕಾರಿ

ತತ್ವವೇ ಹೋಗಿದೆ ಎಂದು ಏನು ಹೇಳಿದರೋ, ಅದೇ ರೀತಿ ಇಲ್ಲಿಯೂ ಆಗಿದೆ. 1966-67 ರಿಂದ ಈ ಸಹಕಾರಿ ಸಂಘದ ಇಂಟರ್ನಲ್ ಆಡಿಟ್ ಮಾಡಿಲ್ಲ, ಲೆಕ್ಕಪತ್ರಗಳನ್ನು ತನಿಖೆ ಮಾಡಿಲ್ಲ, ಸರ್ಕಾರದ ಸೆಕ್ರೆಟರಿಯವರಿದ್ದರೂ ಎರಡು ವರ್ಷದಿಂದ ಜನರಲ್ ಬಾಡಿ ಮೀಟಿಂಗ್ ಕೂಡ ಮಾಡಿಲ್ಲ. ಅದರಲ್ಲಿರತಕ್ಕ ಡೈರೆಕ್ಟರ್ಸ್ ಮತ್ತು ಅಧ್ಯಕ್ಷರು, ತಮ್ಮ ತಮ್ಮ ಸ್ವಂತ ವ್ಯಾಪಾರ ಮಾಡುವುದಕ್ಕೋಸ್ಕರ, ಇದರಿಂದ ಅಡ್ವಾನ್ಸ್ ತೆಗೆದುಕೊಂಡು ಖರ್ಚು ಮಾಡುತ್ತಿದ್ದಾರೆ. ಇಲ್ಲಿರತಕ್ಕ ರೇಷ್ಮೆಯನ್ನು ಅವರೇ ತೆಗೆದುಕೊಂಡು ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದಾರೆ. ಅದರ ಬಗ್ಗೆ ತನಿಖೆ ನಡೆಸಬೇಕೆಂದು ಸಂಬಂಧಪಟ್ಟ ಮಂತ್ರಿಯವರಿಗೆ ಕಾಗದ ಬರೆದರೂ ಏನೂ ಕ್ರಮ ತೆಗೆದುಕೊಂಡಿಲ್ಲ. ಸೊಸೈಟಿಗೆ ಸಂಬಂಧಪಟ್ಟ ಮಂತ್ರಿಯವರಿಗೂ ಜನರಲ್‌ಬಾಡಿ ಮೀಟಿಂಗ್ ಮಾಡಿಲ್ಲ, ಲೆಕ್ಕಪತ್ರ ತನಿಖೆ ಮಾಡಿಲ್ಲ, ಅಲ್ಲಿ ಅನ್ಯಾಯ ಬಹಳ ನಡೆಯುತ್ತಿದೆ, ಬ್ಯಾಂಕಿನಿಂದ ಕೊಟ್ಟ ಹಣ ಪೋಲಾಗುತ್ತಿದೆ, ಸರ್ಕಾರದ ಬಂಡವಾಳ ಪೋಲಾಗುತ್ತಿದೆ, ಅದರ ತನಿಖೆ ನಡೆಸಿ ಸರ್ಕಾರವೇ ಅದರ ಆಡಳಿತವನ್ನು ವಹಿಸಿಕೊಳ್ಳಬೇಕೆಂಬ ವ್ಯವಸ್ಥೆ ಮಾಡಬೇಕೆಂದು ಕಾಗದ ಬರೆದರೂ ಸಹ ಅವರು ಯಾವುದನ್ನೂ ಮಾಡಿಸದೆ ಸುಮ್ಮನೆ ಇದ್ದಾರೆ. ಇದಕ್ಕೆ ಕಾರಣವಾದರೂ ಏನೆಂದು ಅರ್ಥವಾಗುವುದಿಲ್ಲ. ಆದ್ದರಿಂದ ರೇಷ್ಮೆಗೆ ಬೇಕಾದ ಸೊಪ್ಪು ಬೆಳೆಸತಕ್ಕ ವಿಚಾರದಲ್ಲಿ ಮತ್ತು ನೂಲು ಮಾರಾಟ ಮಾಡತಕ್ಕ ವಿಷಯದಲ್ಲಿ ಖುದ್ದು ಪರಿಶೀಲನೆ ಮಾಡುವ ಬಗ್ಗೆ ಒಬ್ಬ ಅಧಿಕಾರಿಯನ್ನು ನೇಮಿಸಿ ರೇಷ್ಮೆ ಅಭಿವೃದ್ಧಿಯ ಬಗ್ಗೆ ಹೆಚ್ಚಿನ ಕಾರ್ಯಕ್ರಮಗಳನ್ನು ಸರ್ಕಾರದವರು ಕೈಗೊಳ್ಳುತ್ತಾರೆಂದು ಆಶಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎನ್. ಎ. ಚನ್ನೇಗೌಡ (ಪಾಂಡವಪುರ).—ಸನ್ಮಾನ್ಯ ಅಧ್ಯಕ್ಷರೇ, ಚಿನ್ನದ ನಾಡು, ಗಂಧದ ಬೀಡು, ಆಗಿದ್ದ ಮೈಸೂರು ರಾಜ್ಯ ಕೈಗಾರಿಕೆಯಲ್ಲೂ ಪ್ರಮುಖವಾದ ಪಾತ್ರವನ್ನು ವಹಿಸಿ ಮಾದರಿ ಮೈಸೂರಾಗಿತ್ತು. ಸ್ವಾತಂತ್ರ್ಯ ಬಂದ ಮೇಲೆ ಕಳೆದ ಒಂದು ದಶಕದಲ್ಲಿ ಹೆಚ್ಚಿನ ಪ್ರಗತಿಯನ್ನು ಸಾಧಿಸದೇ ರಾಜ್ಯ ಬೆಂಗಾಡಾಗುತ್ತಿದೆ. ಅದಕ್ಕೆ ಕಾರಣ ಇಷ್ಟೆ. ಸರಕಾರ ಸಮರ್ಪಕವಾದ ರೀತಿಯಲ್ಲಿ ಕೈಗಾರಿಕೆಯ ಪ್ರಗತಿಯನ್ನು ಯೋಜಿತ ರೀತಿಯಲ್ಲಿ ಸಾಧಿಸಿಲ್ಲ. ನಾನು ಇದಕ್ಕೆ ಒಂದು ಸೂಚನೆಯನ್ನು ಕೊಡುತ್ತೇನೆ. ಸ್ಟೇಟ್ ರೋಸ್ಟರ್ ಆಫ್ ಪೊಟೆನ್‌ಶಿಯಲ್ ಎಕ್ಸಿಕ್ಯೂಟಿವ್ಸ್ ಅಂಡ್ ಟೆಕ್ನಿಷಿಯನ್ಸ್‌ನ್ನು ತಯಾರು ಮಾಡಬೇಕು. ಆ ರೀತಿ ಮಾಡಿಕೊಂಡು ಕೈಗಾರಿಕೆಗಳಲ್ಲಿ ಯೋಗ್ಯತೆ ಇರುವಂತಹ, ಅರ್ಹತೆ ಇರುವಂತಹ ಆಡಳಿತಗಾರರನ್ನು ಅದಕ್ಕಾಗಿಯೇ ವಿಶೇಷವಾಗಿ ನೇಮಿಸಿದ ನೇಮಕಾತಿ ಆಯೋಗದ ಮೂಲಕ ನೇಮಿಸಬೇಕು. ರಾಜಕೀಯ ದೃಷ್ಟಿಯಿಂದ ಸ್ವಜನ ಪಕ್ಷಪಾತದ ದೃಷ್ಟಿಯಿಂದ ಅಧಿಕಾರಿಗಳನ್ನು ನೇಮಿಸಿಕೊಂಡರೆ, ಭದ್ರಾವತಿಯಲ್ಲಿ ಆದ ನಷ್ಟದಂತೆ ತುಂಬಲಾರದ ನಷ್ಟವಾಗುತ್ತದೆ. ಈ ರೀತಿ ಸರ್ಕಾರದವರು ಮಾಡಿದುದರಿಂದ ಈ ತನಕ ಕೈಗಾರಿಕೆಗಳಲ್ಲಿ ಹಿಂದುಳಿದಿದ್ದೇವೆ. 1966 ರಿಂದ 68ರ ವರೆಗೆ ಒಬ್ಬ I. A. S. ಅಧಿಕಾರಿಯನ್ನು M. S. I. L. ನ ಆಡಳಿತ ಮಂಡಳಿಯ ವೈಸ್ ಚೇರ್‌ಮನ್ ಮಾಡಿದುದರಿಂದ ಆ ಕಾರ್ಖಾನೆಯಲ್ಲಿ 4-5 ಕೋಟಿ ರೂಪಾಯಿವರೆಗೆ ನಷ್ಟವಾಗಿದೆ. ಅದನ್ನು ಇನ್ನು 10 ವರ್ಷವಾದರೂ ತುಂಬುವುದಕ್ಕಾಗುವುದಿಲ್ಲ. ಇದರಲ್ಲಿ ಸರ್ಕಾರದವರು ದುರಾಡಳಿತವನ್ನು ದುರುದ್ದೇಶದಿಂದಲೇ ಮಾಡಿದ್ದಾರೆಂದು ಹೇಳಬಹುದು. ಮಂಡ್ಯ ಸಕ್ಕರೆ ಕಾರ್ಖಾನೆಯಲ್ಲಿ ಪ್ರಗತಿ ಸಾಧಿಸಿದ್ದೇವೆಂದು ಮಾನ್ಯ ಮಂತ್ರಿಯವರು ಹೇಳುತ್ತಲೇ ಇದ್ದಾರೆ. ಅವರು ಕಳಿಸಿರತಕ್ಕ ಆಡಿಟ್ ರಿಪೋರ್ಟ್‌ನಲ್ಲಿ ಕಳೆದ ಮೂರು ವರ್ಷಗಳಿಂದಲೂ ನಷ್ಟವಾಗುತ್ತಾ ಇದೆ ಎಂಬುದು ಸ್ಪಷ್ಟವಾಗಿದೆ. ಗಂಧದ ಎಣ್ಣೆಯ ಬಗ್ಗೆ ನನ್ನ ಅಭಿಪ್ರಾಯವನ್ನು ಹೇಳುತ್ತೇನೆ. ಗಂಧದ ಎಣ್ಣೆಯ ಬಗ್ಗೆ ಹೇಳುವುದಾದರೆ, ಈ ದಿನ ಇದರ ನಕಲಿಮಾಲು ಮಾಡಿ ಮೈಸೂರು ಮಾರ್ಕೆಟ್ಟಿನಲ್ಲಿ ಮಾರಾಟ ಮಾಡುತ್ತಿದ್ದಾರೆ. ಇದರಿಂದ ಪ್ರಪಂಚದಲ್ಲೇ ಹೆಸರಿನಲ್ಲಿ ಏಕಸ್ವಾಮ್ಯ ಪಡೆದಿರುವ ಗಂಧದೆಣ್ಣೆ ಕೈಗಾರಿಕೆಗೆ ಭಾರಿ ಧಕ್ಕೆಯುಂಟಾಗಿದೆ. ಸರ್ಕಾರದವರು ಇದರ ಬಗ್ಗೆ ಏನು ಕ್ರಮವನ್ನು ತೆಗೆದುಕೊಂಡಿದ್ದಾರೆ? ಆದ್ದರಿಂದ ಈ ಸ್ಪೂರಿಯಸ್ ಪ್ರೊಡಕ್ಟ್ಸ್ ಮಾಡುವುದನ್ನು ತಪ್ಪಿಸಬೇಕೆಂದು ಹೇಳುತ್ತೇನೆ.

ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗಾಗಿ 1966-67ರಲ್ಲಿ 10.31 ಲಕ್ಷ, 1967-68 ರಲ್ಲಿ 24.90 ಲಕ್ಷ ಮತ್ತು 68-69ರಲ್ಲಿ 19.99 ಲಕ್ಷ ರೂಪಾಯಿ ಖರ್ಚುಮಾಡಿದ್ದಾರೆಂದು ಹೇಳುತ್ತಾರೆ. ಸರಕಾರದವರು ಕೈಗಾರಿಕಾ ಇಲಾಖೆಗೆ ಒಬ್ಬ ದಕ್ಷರಾದ ಅಧಿಕಾರಿಯನ್ನು ನೇಮಕ ಮಾಡಿದ್ದಾರೆ. ಅವರು ಬಹಳ ಸತ್ಯಸಂಧರು ಒಳ್ಳೆಯವರು ಮತ್ತು ಯೋಗ್ಯತೆ ಉಳ್ಳವರು. ಅವರ ಬಗ್ಗೆ ಜನತೆ ಗೌರವಾಭಿಮಾನವಿಟ್ಟಿದೆ. ಆದರೆ ಜಾಯಿಂಟ್‌ಡೈರೆಕ್ಟರ್ಸ್ ಮತ್ತು ಡೆಪ್ಯುಟಿ ಜಾಯಿಂಟ್ ಡೈರೆಕ್ಟರ್ಸ್ ಕಲವರು ಇದ್ದಾರೆ. ಅವರು ಹಣವನ್ನು ಸಂಪಾದನೆ ಮಾಡುವುದಕ್ಕೋಸ್ಕರವೇ ಈ ಇಲಾಖೆಯಲ್ಲಿ ಅಧಿಕಾರಿಗಳಾಗಿದ್ದಾರೆ ಎನಿಸುತ್ತದೆ. 19.51 ಲಕ್ಷ ರೂಪಾಯಿಬ್ಲಾಕ್ ಲೋನ್ ಕೊಟ್ಟಿದ್ದಾರೆ. ಇದರಲ್ಲಿ ಬಹು ಭಾಗ ಈ ಅಧಿಕಾರಿಗಳ ಜೇಬಿಗೆ ಹೋಗಿದೆ ಎಂದು ಹೇಳಬಹುದು. ಇವರು ಮಂತ್ರಿ

ಶ್ರೀ ಎನ್. ಎ. ಚನ್ನೇಗೌಡ

ಯವರ ಸಂಬಂಧಿಕರಾಗಿರುವುದರಿಂದ ಯಾವ ಶಿಕ್ಷಾ ಕ್ರಮದ ಹೆದರಿಕೆ ಇಲ್ಲದೆ ಈ ಹಣವನ್ನು ದುರುಪಯೋಗಮಾಡಿಕೊಳ್ಳುತ್ತಿದ್ದಾರೆ. ಇವರು ತಮ್ಮ ಅಧಿಕಾರವನ್ನೂ ದುರುಪಯೋಗ ಮಾಡಿಕೊಂಡು ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗಾಗಿ ಮೀಸಲಾಗಿರುವ ಹಣವನ್ನು ಪೋಲು ಮಾಡುತ್ತಿದ್ದಾರೆ; ಮತ್ತು ಬೇಕಾದಷ್ಟು ಸಂಪಾದನೆ ಮಾಡುತ್ತಿದ್ದಾರೆ. ಇದರ ಬಗ್ಗೆ ಮಂತ್ರಿಯವರು ಗಮನ ಕೊಟ್ಟು ಅವರನ್ನು ಬೇರೆ ಕಡೆಗೆ ವರ್ಗವಾದರೂ ಮಾಡಿ, ಸಣ್ಣ ಕೈಗಾರಿಕೆಗಳ ಉದ್ಧಾರವನ್ನು ಮಾಡಬೇಕು. ಇದರಿಂದ ನಮ್ಮ ರಾಜ್ಯವು ಕೈಗಾರಿಕೆಗಳ ಭೂಪಟದಲ್ಲಿ ಮಾದರಿ ಮೈಸೂರಾಗುವುದಕ್ಕೆ ಸಾಧ್ಯವಾಗುತ್ತದೆ. ಮತ್ತು ನಮ್ಮ ರಾಜ್ಯದಲ್ಲಿ ಕೈಗಾರಿಕಾ ಪೊಟೆನ್‍ಶಿಯಾಲಿಟೀಸ್‍ನ್ನು ನೋಡಿಕೊಂಡು ಅವುಗಳ ಆಧಾರದ ಮೇಲೆ ಕೈಗಾರಿಕೆಗಳನ್ನು ಸ್ಥಾಪನೆ ಮಾಡಬೇಕು. ಈ ದಿನ ರಾಜ್ಯದ ಶೇಕಡಾ 18 ರಷ್ಟು ಪ್ರದೇಶದಲ್ಲಿ ಅರಣ್ಯ ಸಂಪತ್ತು ಇದೆ. ಆ ಸಂಪತ್ತನ್ನು ಸದುಪಯೋಗಪಡಿಸಿಕೊಂಡು ರಾಜ್ಯ ಅಭಿವೃದ್ಧಿ ಪಡಿಸಲು ಫಾರೆಸ್ಟ್ ಬೇಸ್‍ಡ್ ಕೈಗಾರಿಕೆಗಳ ಕಡೆ ಕೂಡ ಹೆಚ್ಚಿನ ಗಮನವನ್ನು ಕೊಡಬೇಕು. ಅದೇ ರೀತಿ ಅಗ್ರೋ ಇಂಡಸ್ಟ್ರೀಸ್ ಕೂಡ ಹೆಚ್ಚು ಪ್ರಗತಿ ಹೊಂದಿಲ್ಲ. ಆದ್ದರಿಂದ ನಮ್ಮ ರಾಜ್ಯದಲ್ಲಿ ಈ ಪೊಟೆನ್‍ಶಿಯಾಲಟೀಸನ್ನು ಗಣನೆ ಮಾಡಿಕೊಂಡು ಕೈಗಾರಿಕೆಗಳನ್ನು ಹೆಚ್ಚು ಸ್ಥಾಪಿಸಿ ಅಭಿವೃದ್ಧಿಗೊಳಿಸಬೇಕೆಂದು ಹೇಳಿ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ರಾಚಯ್ಯ (ವ್ಯವಸಾಯ ಶಾಖೆಯ ಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೇ, ಈ ದಿವಸ ಈ ಡಿಮ್ಯಾಂಡ್ ಮೇಲೆ ಮಾತನಾಡಿದಂಥ ಇಬ್ಬರು ಸದಸ್ಯರು ಬಹಳ ಉಪಯುಕ್ತವಾದ ಸಲಹೆಗಳನ್ನು ಈ ರೇಷ್ಮೆ ಕೈಗಾರಿಕೆಯ ವಿಷಯದಲ್ಲಿ ಕೊಟ್ಟಿದ್ದಾರೆ. ಅವರು ನನಗೆ ಉತ್ತರ ಕೊಡುವುದಕ್ಕೆ ಅವಕಾಶ ಮಾಡಿ ಕೊಟ್ಟಿದ್ದಾರೆ. ಅದಕ್ಕಾಗಿ ಅವರಿಗೆ ನಾನು ಮೊಟ್ಟ ಮೊದಲನೆಯದಾಗಿ ವಂದಿಸುತ್ತೇನೆ.

ನಮ್ಮ ಸಂಸ್ಥಾನದಲ್ಲಿ ಬಹುಪಾಲು ಅಂದರೆ ಸೇಕಡ 80 ಭಾಗದಷ್ಟು ರೇಷ್ಮೆ ಬೆಳೆಯುತ್ತಾರೆ. ಪ್ರತ್ಯಕ್ಷವಾಗಿ ಅಥವಾ ಅಪ್ರತ್ಯಕ್ಷವಾಗಿ 10 ಲಕ್ಷ ಸಂಸಾರಗಳು ಇದರಿಂದ ಜೀವನ ನಡೆಸುತ್ತಿದ್ದಾರೆ. ಈ ಕೈಗಾರಿಕೆ ಎಷ್ಟು ಪ್ರಗತಿಯಾಗಬೇಕಾಗಿತ್ತೋ ಅಷ್ಟು ಪ್ರಗತಿಯಾಗಲಿಲ್ಲವೆಂದು ಮಾನ್ಯ ಸದಸ್ಯರಾದ ಶ್ರೀ ಪುಟ್ಟಸ್ವಾಮಿಯವರು ಹೇಳಿದರು. ಇದನ್ನು ಬೇರೆ ದೇಶಗಳಲ್ಲಿ ವ್ಯವಸಾಯ ಇಲಾಖೆಗೆ ಸೇರಿಸಿದ್ದಾರೆ. ಆದರೆ ಮೈಸೂರಿನಲ್ಲಿ ಇಂಡಸ್ಟ್ರಿ ಡಿಪಾರ್ಟ್‍ಮೆಂಟ್‍ನಲ್ಲಿ ಇದು ಒಂದು ಬ್ರಾಂಚಾಗಿ ಉಳಿದುಕೊಂಡು ಅಗ್ರೋ ಬೇಸ್ಡ್ ಇಂಡಸ್ಟ್ರಿಯಾಗಿದೆ. ಅಗ್ರಿಕಲ್‍ಚರಲ್ ರಿಸರ್ಚ್ ಇನ್‍ಸ್ಟಿಟ್ಯೂಟ್‍ನಲ್ಲಿ ಯಾವ ರೀತಿ ಹೆಚ್ಚಿನ ಪ್ರಗತಿಯನ್ನು ಸಾಧಿಸಿದ್ದಾರೆ, ಏನಾದರೂ ಸಂಶೋಧನೆ ನಡೆಸಿದ್ದಾರೆಯೋ ಎಂದು ನೋಡಿದರೆ, ಆ ಕಡೆ ಹೆಚ್ಚಿನ ಸಾಧನೆ ಮಾಡಲಿಲ್ಲ, ಉತ್ತಮವಾದ ತಳಿ ಬೀಜಗಳನ್ನು ರೈತರಿಗೆ ಒದಗಿಸಿಕೊಡುವುದಕ್ಕಾಗಲಿಲ್ಲವೆಂಬ ದೃಷ್ಟಿಯಿಂದ ಹೇಳಿದ್ದಾರೆಂದು ನಾನು ಭಾವಿಸಿದ್ದೇನೆ. ಬಹುಶಃ ಜಪಾನಿನಲ್ಲಿ, ರಷ್ಯಾದಲ್ಲಿ, ಮತ್ತು ಇತರ ಕಡೆಗಳಲ್ಲಿರುವ ಹಾಗೆ ಕೇಂದ್ರ ಸರ್ಕಾರದಲ್ಲಿ ಅಗ್ರಿಕಲ್‍ಚರ್ ಮಿನಿಸ್ಟ್ರಿಗೆ ಈ ಸಬ್ಜೆಕ್ಟ್ ಕೊಡುವುದು ಒಳ್ಳೆಯದು ಎಂದು ಯೋಚನೆ ಮಾಡುತ್ತಿದ್ದಾರೆ. ಅದು ಆದ ಮೇಲೆ ಪ್ರಾಂತ ಸರ್ಕಾರಗಳು ಯೋಚನೆ ಮಾಡಬೇಕಾಗಿ ಬರುತ್ತದೆ. ಇನ್ನು ಮೈಸೂರು ಸಂಸ್ಥಾನದಲ್ಲಿ 250 ರಿಂದ 300 ಗಜದವರೆಗೆ ನೂಲು ಒಂದು ಗೂಡಿನಲ್ಲಿ ಇರುತ್ತದೆ. ಟ್ರಿಬಲ್ ಮತ್ತು ಡಬ್ಬಲ್ ಕ್ರಾಸಿಂಗ್ ಮಾಡುವುದರಿಂದ 550 ಗಜದವರೆಗೂ ನೂಲು ಬರುತ್ತದೆ. ಈ ರೀತಿಯಾದಂಥ ತಳಿಗಳನ್ನು ಅಭಿವೃದ್ಧಿ ಮಾಡಿ ಹೆಚ್ಚು ಹೆಚ್ಚಿಗೆ ಉತ್ಪತ್ತಿ ಮಾಡುವುದರಿಂದ ಅದರಿಂದ ಸ್ವಲ್ಪ ಮಟ್ಟಿಗೆ ಉತ್ತಮವಾದ ರೇಷ್ಮೆ ಬರುತ್ತದೆ ಅದರಿಂದಲೇ ನಾವು ತೃಪ್ತಿಯಾಗುವುದಿಲ್ಲ. ಇವತ್ತು ಹೆಚ್ಚಿನ ರೀತಿಯಲ್ಲಿ ಸಂಶೋಧನೆ ನಡೆಸಿ ನಮಗೆ ಸಹಕಾರ ಮಾಡಬೇಕೆಂದು ಈಗ ತಾನೆ ಒಬ್ಬ ಡೈರಕ್ಟರನ್ನು ಅಲ್ಲಿಗೆ ಹಾಕಿದ್ದೇವೆ. ಈ ಸಂಶೋಧನಗಾಗಿ ಮೈಸೂರು ದೇಶದ ಮತ್ತು ಪರದೇಶದ ತಳಿಗಳನ್ನು ಬೇರೆಬೇರೆಯಾಗಿ ಮಾಡಿದ್ದೇವೆ. ಮೈಸೂರು ತಳಿಯನ್ನು ಕುಣಿಗಲ್ ಮತ್ತು ಬಿಡದಿ ಭಾಗಗಳಲ್ಲಿ ಬೆಳೆಯಬೇಕೆಂದೂ ಬಾವಿಗಳ ಸೌಕರ್ಯ ಮತ್ತು ಇತರ ಸೌಕರ್ಯಗಳನ್ನು ಒದಗಿಸುತ್ತಿದ್ದೇವೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ರೇಷ್ಮೆ ಕೈಗಾರಿಕೆಯ ಮೂಲತಃ ಪ್ರಶ್ನೆ ಇರುವುದು ನಮ್ಮ ರಾಜ್ಯದಲ್ಲಿ ಇಲ್ಲಿರುವ ತೊಂದರೆ ಏನೆಂದರೆ, ಮೂಲ ಬೀಜೋತ್ಪತ್ತಿ ಕೇಂದ್ರ ಭದ್ರವಾಗಿಲ್ಲದೇ ಇರುವುದು. ಸೆಕೆಂಡ್ ಸ್ಟೇಜ್ ಸೀಡ್ ಮಲ್ಟಿಪ್ಲಿಕೇಷನ್ ಆವಶ್ಯಕ ಎಂಬುದಾಗಿ ನಾನು ತಿಳಿದಿದ್ದೇನೆ. ಸುಮಾರು 200 ಎಕರೆಗಳಲ್ಲಿ ಅದನ್ನು ಮಾಡಬೇಕೆಂದಿದ್ದೇವೆ. ಮಾನ್ಯ ಶ್ರೀ ದೇವರಾಜ್ ಅರಸ್ ಅವರು ಇದ್ದಾಗ ಕೇವಲ 50 ಎಕರೆಗಳಲ್ಲಿ ಇದನ್ನು ಪ್ರಯತ್ನ ಮಾಡಿದರು. ಅವರು

ಉಳಿದ 150 ಎಕರೆಗಳಲ್ಲಿ ಪ್ರಯತ್ನ ಮಾಡಲಿಲ್ಲ. ಅದನ್ನು ಇದುವರೆಗೆ ಡೆವಲಪ್ ಮಾಡದೆ ಕೇವಲ 10 –15 ಎಕರೆಗಳಲ್ಲಿ ಈಗ ಮೂಲಬೀಜವನ್ನು ಒದಗಿಸುವುದಕ್ಕೇ ತೊಂದರೆಯಾಗಿದೆ. ಆದ್ದರಿಂದ ಅದನ್ನು ಬೇಗನೆ ಪರಿಹಾರ ಮಾಡುವ ಕಾರ್ಯಕ್ರಮ ಇದೆಯೋ ಇಲ್ಲವೋ ಎಂಬುದನ್ನು ತಾವು ತಿಳಿಸಬೇಕು.

ಶ್ರೀ ಬಿ. ರಾಚಯ್ಯ.—ಮೂಲ ಬೀಜಗಳಲ್ಲಿ ಬಹುವಾಗಿ ಫಾರಿನ್ ಸೀಡುಗಳನ್ನು ಉಪಯೋಗಿಸುತ್ತಿದ್ದೇವೆ. ಈಗ ಅಂಥಾ 24 ಸಣ್ಣ ಫಾರಮ್ಸ್ ಇವೆ. ಮೈಸೂರಿನಲ್ಲಿ 8 ಫಾರಮ್ಸ್ ಇವೆ. ದೊಡ್ಡ ಫಾರಂಗಳಲ್ಲಿ ಇನ್ನೂ ಹೆಚ್ಚು ಉತ್ಪತ್ತಿ ಮಾಡುವ ಉದ್ದೇಶವನ್ನು ಇಟ್ಟುಕೊಂಡಿದ್ದೇವೆ. ಆದ್ದರಿಂದ ಈಗ ಅವರ ವಿವರಣೆಗಳಿಗೆ ಹೋಗದೆ ಮೂಲ ತಳಿಯನ್ನು ಉತ್ಪಾದನೆ ಮಾಡುವುದು ಮುಖ್ಯವಾಗಿದೆ. ಹಣಕಾಸಿನ ತೊಂದರೆಯಾಗಿ ಅದು ಈಗ ಅಲ್ಪ ಸ್ವಲ್ಪವಾಗಿ ನಡೆಯುತ್ತಿದೆ. ಅದರಿಂದ ಉತ್ಸಾಹ ಕಡಿಮೆಯಾಗಿದೆಯೆಂದು ಅಲ್ಲ. ಹಣವನ್ನು ಇದಕ್ಕೆ ಒದಗಿಸಬೇಕೆಂದು ಕೆಲವು ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಈ ಇಲಾಖೆಗೆ ಹಣವಿಲ್ಲ, ಉಳಿದ ಇಲಾಖೆಗಳಿಗೆ ಹಣವಿದೆಯೇ ?

ಶ್ರೀ ಬಿ. ರಾಚಯ್ಯ.—ಈಗ ಖಾಸಗಿ ಮತ್ತು ಸರ್ಕಾರದ ಕಾರ್ಖಾನೆಗಳು ಇವೆ. ಸರ್ಕಾರದ ಪರವಾಗಿ 46 ಗ್ರೈನೇಜುಗಳನ್ನು ತೆಗೆದಿದ್ದೇವೆ, 11 ಖಾಸಗೀ ಗ್ರೈನೇಜುಗಳನ್ನು ತೆಗೆದಿದ್ದಾರೆ. ಇದುವರೆಗೆ 500 ಜನರಿಗೆ ಲೈಸೆನ್ಸ್ ಕೊಟ್ಟಿದ್ದೇವೆ. ನಮ್ಮ ಸಂಸ್ಥಾನದಲ್ಲಿ 10 ಕೋಟಿ ರೂಪಾಯಿಗಳನ್ನು ಪಡೆದು ಇದನ್ನು ಕ್ರಾಸ್ ಬ್ರೀಡ್ ಮೊಟ್ಟೆಗಳನ್ನು ತಯಾರು ಮಾಡುವುದಕ್ಕೆ ಉಪಯೋಗಿಸುತ್ತಿದ್ದೇವೆ ಖಾಸಗೀಯವರು ಮತ್ತು ಸರ್ಕಾರದವರು ಈ ಮೊಟ್ಟೆಗಳನ್ನು ಹೆಚ್ಚಿಗೆ ತೆಗೆಯುತ್ತಿದ್ದಾರೆ. ರೋಗರಹಿತವಾದ ಮೊಟ್ಟೆಗಳನ್ನು ಕೊಟ್ಟರೆ ಡಬ್ಬಲ್ ಕ್ರಾಸಿಂಗ್ ಮತ್ತು ಟ್ರಿಬ್ಬಲ್ ಕ್ರಾಸಿಂಗ್ ಮಾಡಿಸಿ ಅವುಗಳ ಶಕ್ತಿಯನ್ನು ಹೆಚ್ಚು ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ. ರಷ್ಯನ್ ಡೆಲಿಗೇಟ್ಸ್ ಬಂದಿದ್ದರು. ಅವರ ಸಹಾಯವನ್ನು ಪಡೆದು ಮಲ್ಬರಿ ರಿಪ್ಲೇಸ್ ಮಾಡಬೇಕೆಂಬ ಯೋಜನೆಯನ್ನು ಇಟ್ಟುಕೊಂಡಿದ್ದಾರೆ. ಅದಕ್ಕಾಗಿ ಬ್ಯಾಂಕಿನ ಸಹಾಯವನ್ನು ಕೇಳುತ್ತಿದ್ದಾರೆ. ಇರ್ರಿಗೇಷನ್ ವೆಲ್ಸನ್ನು 2 ಲಕ್ಷ 12 ಸಾವಿರ ಎಕರೆಗಳಿಗೆ ಅನುಕೂಲವಾಗುವಂತೆ ಮಾಡಬೇಕೆಂದಿದ್ದಾರೆ. 42 ಸಾವಿರ ಎಕರೆಗಳವರೆಗೂ ಅನುಕೂಲವಾಗುವಂತೆ ಬಾವಿಗಳಿಂದ ನೀರು ಬರುತ್ತದೆ. ಇನ್ನೂ ಒಂದು ಲಕ್ಷ 60 ಸಾವಿರ ಎಕರೆಗಳಿಗೆ ನೀರು ಒದಗಿಸುವುದಕ್ಕೆ ಒಂದು ಬೃಹದ್ ಯೋಜನೆಯನ್ನು ತಯಾರು ಮಾಡುತ್ತಿದ್ದಾರೆ. ಇದಕ್ಕೋಸ್ಕರ ಮೈಸೂರು ಸ್ಟೇಟ್ ಬ್ಯಾಂಕಿನವರು ಮುಂದೆ ಬಂದಿದ್ದಾರೆ. ಆದರೆ ಸೆಕ್ಯೂರಿಟಿ ಸಿಗದೇ ಇರುವುದರಿಂದ ನಿಧಾನವಾಗುತ್ತಿದೆ. ಅದಕ್ಕೋಸ್ಕರ ಕೇಂದ್ರ ಸರ್ಕಾರ ಮತ್ತು ಪ್ರಾಂತ ಸರ್ಕಾರ ಅವರಿಗೆ ಬ್ಯಾಂಕಿಗೆ ಗ್ಯಾರಂಟಿ ಕೊಟ್ಟು ಹಣ ಸಹಾಯಕ್ಕಾಗಿ ಪ್ರಯತ್ನ ಮಾಡಬೇಕೆಂದು ಸರ್ಕಾರ ಸಿದ್ಧವಾಗಿದೆ. ಅವರಿಗೆ ಸಕ್ಯೂರಿಟಿ ಇರಲಿ ಇಲ್ಲದೇ ಇರಲಿ, ತಕ್ಕ ಸೌಕರ್ಯಗಳನ್ನು ಒದಗಿಸಬೇಕು. ಈ ಕಾರಣದಿಂದ ಡೆಲ್ಲಿಗೆ ಹೋಗಿ ಕೇಂದ್ರ ಸರ್ಕಾರದ ಹತ್ತಿರ ಗ್ಯಾರಂಟಿ ಕೊಡುವುದಕ್ಕೆ ಒಪ್ಪಿದ್ದೇನೆ. ನಮ್ಮ ದೇಶದಲ್ಲಿ ಈಗ ರಫ್ತು ಜಾಸ್ತಿಯಾಗುತ್ತಿದೆ. ಜಪಾನಿನಲ್ಲಿ ಅದರ ಉತ್ಪತ್ತಿ ಕಡಿಮೆಯಾಗಿರುವುದರಿಂದ ಅವರು ಇದನ್ನು ಹೆಚ್ಚಿಗೆ ತರಿಸಿಕೊಳ್ಳುತ್ತಾ ಇದ್ದಾರೆ. ಕೇಂದ್ರ ಸರ್ಕಾರದವರು ಇದಕ್ಕೆ ಬೇಕಾದಷ್ಟು ಹಣವನ್ನು ಒದಗಿಸುವುದಕ್ಕೆ ಸಿದ್ಧರಾಗಿದ್ದಾರೆ. 33 ಕೋಟಿ ರೂಪಾಯಿಗಳನ್ನು ಇದಕ್ಕಾಗಿ ಹಿಂದೆ ಪ್ರೊವೈಡ್ ಮಾಡಿದ್ದು ಈಗ 100 ಕೋಟಿ ರೂಪಾಯಿಗಳನ್ನು ಕೊಟ್ಟು ಕೇಂದ್ರಸರ್ಕಾರ ಮತ್ತು ಪ್ರಾಂತ ಸರ್ಕಾರ ನಮ್ಮ ಬ್ಯಾಂಕುಗಳ ಮುಖಾಂತರ ಮತ್ತು ಇಲಾಖೆಗಳ ಮುಖಾಂತರ ಬಾವಿ ಕಟ್ಟಿಸುವುದಕ್ಕೆ ಮಲ್ಬರಿ ರಿಪ್ಲೇಸ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಅದರ ಬಗ್ಗೆ ಕಾರ್ಯಕ್ರಮ ನಡೆಯುತ್ತಿದೆ. ಈ ವರ್ಷ ಬೇಸಿಗೆಯಲ್ಲಿ ಒಂದು ಸಾವಿರ ಬಾವಿಗಳನ್ನು ಸ್ಟೇಟ್ ಬ್ಯಾಂಕಿನ ಸಹಾಯದಿಂದ ಮಲ್ಬರಿ ಏರಿಯಾಗಳಲ್ಲಿ ಕಟ್ಟಿಸುತ್ತಿದ್ದಾರೆ.

ಶ್ರೀ ವಿ. ಎನ್. ಪಾಟೀಲ್.—ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನವರು ನಮ್ಮ ಸರ್ಕಾರದವರು ಹೇಳದೇ ಇದ್ದರೂ ಅವನ್ನು ಕೊಡುತ್ತಿದ್ದಾರೆಯೇ ?

ಶ್ರೀ ಬಿ. ರಾಚಯ್ಯ.—ನಮ್ಮ ಸರ್ಕಾರದ ಅಧಿಕಾರಿಗಳಿಂದ ಏನೇನು ಸಹಾಯ ಒದಗಬೇಕೋ, ಎನ್‌ಕಂಬ್ರೆನ್ಸ್ ಸರ್ಟಿಫಿಕೇಟ್ ಮತ್ತು ಟೆಕ್ನಿಕಲ್ ಫೀಜಬಲಿಟಿ ಒದಗಿಸಬೇಕೋ ಅದನ್ನು ಒದಗಿಸಿ ಕೊಡುತ್ತಿದ್ದೇವೆ.

ಶ್ರೀ ಎಚ್. ಸಿದ್ದವೀರಪ್ಪ.—ಮುಂದಿನವರ್ಷ 70—71ನೇ ಸಾಲಿನಲ್ಲಿ ಈ ಬಾಬಿಗೆ ಎಷ್ಟು ಕೋಟಿ ರೂಪಾಯಿಗಳನ್ನು ಖರ್ಚುಮಾಡುತ್ತೀರಿ ಎಂಬುದನ್ನು ಹೇಳಿದರೆ ಆಗ ಲೆಕ್ಕ ತೆಗೆದುಕೊಂಡು ನೋಡಬಹುದು.

ಶ್ರೀ ಬಿ. ರಾಚಯ್ಯ.—ನಮ್ಮ ಸರ್ಕಾರದಿಂದ ಕೊಟ್ಟಿರುವ ಹಣ ಕಡಿಮೆ. ಕೆಲವು ಇನ್ಸ್‌ಟಿಟ್ಯೂಷನ್‌ಗಳಿಂದ, ಫೈನಾನ್ಸ್ ಹೆಚ್ಚಿಗೆ ಪಡೆದುಕೊಳ್ಳುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದೇವೆ. ಬ್ಯಾಂಕಿನವರು ಗ್ಯಾರಂಟಿ ಇಲ್ಲದೆ ಕೊಡುವುದಿಲ್ಲ. ಕೇಂದ್ರಸರ್ಕಾರದವರು ಮಲ್ಬರಿ ಡೆವಲಪ್‌ಮೆಂಟ್‌ಗೋಸ್ಕರ ಗ್ಯಾರಂಟಿ ಕೊಡುತ್ತೇವೆಂದು ಅಷ್ಯೂರೆನ್ಸ್ ಕೊಟ್ಟಿರುವುದರಿಂದ ನಾವು ಆ ರೀತಿ ಮಾಡುತ್ತಿದ್ದೇವೆ.

Sri H. SIDDAVEERAPPA.—You could have taken aid from the Planning Commission.

Sri R. DAYANANDA SAGAR.—The Central Government was willing to give sufficient amount to the State Government for this scheme. Is it not a fact ?

ಶ್ರೀ ಬಿ. ರಾಚಯ್ಯ.—11 ಕೋಟಿ ರೂಪಾಯಿಗಳನ್ನು ಕೇಂದ್ರ ಸರಕಾರದವರು ಸೆರಿಕಲ್ಚರ್ ಡೆವಲಪ್‌ಮೆಂಟ್‌ಗೋಸ್ಕರ ಕೊಡುವುದಕ್ಕೆ ಒಪ್ಪಿದ್ದಾರೆ. ಅದರಲ್ಲಿ ಮೈಸೂರು ಸರಕಾರದವರು 5 ಕೋಟಿ ರೂಪಾಯಿಗಳ ಮ್ಯಾಚಿಂಗ್ ಗ್ರಾಂಟನ್ನು ಒದಗಿಸಿಕೊಡಬೇಕಾಗಿದೆ. ದೇವರಾಜ ಅರಸರವರ ಕಾಲದಲ್ಲಿಯೂ ಅದನ್ನು ಒದಗಿಸಿಕೊಡುವುದಕ್ಕೆ ಆಗಲಿಲ್ಲ, ಸಿದ್ದವೀರಪ್ಪನವರ ಕಾಲದಲ್ಲಿಯೂ ಒದಗಿಸಿಕೊಡುವುದಕ್ಕಾಗಲಿಲ್ಲ. ಇನ್ನು ಕಳೆದ ಸಾರಿ ಒಂದು ವರ್ಷ ಟೈಂ ಕೊಡಿ ಎಂದು ಕೇಳಿದೆ. ಒಂದು ವರ್ಷದ ಟೈಂನಲ್ಲಿ ಫಿಲೇಚರ್ ನಷ್ಟವನ್ನು ಎಷ್ಟು ರೆಡ್ಯೂಸ್ ಮಾಡಿದ್ದೇವೆ ಎನ್ನುವ ವಿಚಾರ ಹೇಳುತ್ತೇನೆ. 9 ತಿಂಗಳಲ್ಲಿ ಲಾಸ್ ಕಡಿಮೆ ಮಾಡಿದ್ದೇವೆ. 21 ಲಕ್ಷ ರೂಪಾಯಿಗಳು ಮಾತ್ರ ಲಾಸ್ ಆಗಿದೆ ಒಟ್ಟಿನಲ್ಲಿ ಕಡಿಮೆ ಆಗಿದೆ. ಗೂಡಿನ ಬೆಲೆ ಹೆಚ್ಚಾಗಿದೆ. ಮುಖ್ಯವಾಗಿ ಈ ಫಿಲೇಚರಿನಿಂದ ಇಷ್ಟಕ್ಕೆ ಲಾಸ್ ಏನಿದೆ ಅದನ್ನು ಕಡಿಮೆ ಮಾಡುವುದಕ್ಕೆ ಏನೇನು ಪ್ರಯತ್ನ ಮಾಡಬೇಕೆಂದು ಸಲಹೆ ಮಾಡಿದ್ದಾರೆ ಅದನ್ನು ಮಾಡುತ್ತೇವೆ. ಕಕೂನ್ ಮಾರ್ಕೆಟ್‌ನಲ್ಲಿ ದಳ್ಳಾಳಿಗಳ ಹಾವಳಿ ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಆರ್. ದಯಾನಂದ ಸಾಗರ್.—ಬೇರೆ ಕಡೆ ಎಲ್ಲ ಲಾಭ ಬರುತ್ತದೆ.

ಶ್ರೀ ಬಿ. ರಾಚಯ್ಯ.—ಮಾಂಬಳ್ಳಿಯಲ್ಲಿ ಲಾಭದ ಮಟ್ಟಕ್ಕೆ ಬರುತ್ತಿದೆ. ಸಪರೇಟ್ ಯೂನಿಟ್ ಹಾಕಿರುವುದರಿಂದ ಸ್ವಲ್ಪಮಟ್ಟಿಗೆ ಕಾಂಪಿಟಿಷನ್ ಸ್ಪಿರಿಟ್ ಬರುವಂತೆ ಮಾಡಿದ್ದೇವೆ ಮತ್ತು ಅದಕ್ಕೆ ಒಂದು ಕಾರ್ಪೊರೇಷನ್ ಮಾಡಿ ಅಲ್ಲಿ ಸ್ವಯಂ ಆಡಳಿತ ಪದ್ಧತಿ ಅನುಸರಿಸಬೇಕೆಂಬ ಉದ್ದೇಶ ಸರಕಾರಕ್ಕೆ ಇದೆ. ಮಾರ್ಕೆಟ್ಟಿನಲ್ಲಿ ನಮ್ಮ ಸಿಲ್ಕಿಗೆ ಹೆಚ್ಚಿನ ರೀತಿಯಲ್ಲಿ ಬೆಲೆ ದೊರೆಯುತ್ತಾ ಇರುವುದರಿಂದ ಈ ವರ್ಷ 40 ಸಾವಿರ ಎಕರೆಯಲ್ಲಿ ಮಲಬರಿ ಕಲ್ಟಿವೇಷನ್ ಹೆಚ್ಚಿಸಬೇಕು ಎನ್ನುವ ಉದ್ದೇಶ ಸರಕಾರಕ್ಕೆ ಇದೆ. ಸ್ಪನ್ ಸಿಲ್ಕಿನಿಂದ ಹಿಂದಿನ ವರ್ಷಕ್ಕಿಂತ ಈ ವರ್ಷ ಜಾಸ್ತಿ ಲಾಭ ಬಂದಿದೆ. ಕೊಳ್ಳೆಗಾಲದ ಫಿಲೇಚರ್ ಸಿಲ್ಕ್ ಫ್ಯಾಕ್ಟರಿಯಲ್ಲಿ ಲಾಭ ಮುಟ್ಟುವುದಕ್ಕೆ ಸಾಧ್ಯವಾಗಿಲ್ಲ. ಅಧ್ಯಕ್ಷರು ಮಾತನಾಡುವುದಕ್ಕೆ ಅವಕಾಶಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ವೆಂಕಟರಾಯಪ್ಪ.—ಕೋಲಾರದಲ್ಲಿ ಸರ್ಕಾರಿ ಮಾರ್ಕೆಟ್ ಸ್ಥಾಪನೆ ಆಗಿ ಒಂದು ವರ್ಷವಾಗಿದೆ. ಎಷ್ಟು ಗೂಡನ್ನು ವ್ಯಾಪಾರಮಾಡಿದ್ದಾರೆ, ಖಾಸಗಿ ಮಾರ್ಕೆಟ್‌ನಲ್ಲಿ ಎಷ್ಟು ವ್ಯಾಪಾರ ಆಗಿದೆ? ಒಂದು ವೇಳೆ ಸರಕಾರಿ ಮಾರ್ಕೆಟ್‌ನಲ್ಲಿ ವ್ಯಾಪಾರ ಆಗದಿದ್ದರೆ ಈ ತಿದ್ದುಪಡಿಗೆ ಗವರ್ನರ್‌ರವರ ಒಪ್ಪಿಗೆ 1969 ರಲ್ಲಿ ಬಂದಿದ್ದರೂ ಇದುವರೆಗೂ ಜಾರಿಗೆ ಕೊಡದೆ ಇರಲು ಕಾರಣ ಏನು ? ರೇಷ್ಮೆ ಸಂಶೋಧನೆ ಇಲಾಖೆ ಕೆಲಸಮಾಡುತ್ತಾ ಇದೆ. ಒಳ್ಳೆಯ ಫಲಿತಾಂಶ ಬಂದಿದೆ ಎಂದು ಹೇಳುತ್ತೀರಿ, ನವೆಂಬರ್, ಡಿಸೆಂಬರ್, ಜನವರಿ, ಫೆಬ್ರವರಿಯಲ್ಲಿ ರೇಷ್ಮೆ ಬೆಳೆ ಕೆಡುತ್ತಾ ಇರಲಿಲ್ಲ. ಈ ಸಾರಿ ಸೇಕಡಾ 50 ಭಾಗ ಕೆಡುತ್ತಾ ಇದೆ ಇದಕ್ಕೆ ಏನು ಮಾಡಿದ್ದೀರಿ ?

ಶ್ರೀ ಬಿ. ರಾಚಯ್ಯ.—ಕುಣಿಗಲ್ ಏರಿಯಾದಲ್ಲಿ ಕೆಲವು ಹೊಸ ಹುಳುಗಳನ್ನು ಸಾಕಿದ್ದೇವೆ. ಹುಳು ಸಾಕಬಾರದು ಎಂದು ಮುಂಜಾಗ್ರತೆಕ್ರಮವನ್ನು ತೆಗೆದುಕೊಂಡಿದ್ದೇವೆ. ಮೈಸೂರು ಸಂಶೋಧನೆಯಲ್ಲಿ ಎಕ್ಸ್.ಎಸ್. 4 ಮತ್ತು ಎಕ್ಸ್.ಎಸ್. 3 ಹೊಸ ತಳಿಗಳನ್ನು ಮಾಡಿ ಆಗಲೇ ಪ್ರಚಾರ ಮಾಡುತ್ತಿದ್ದೇವೆ. ಉತ್ತಮ ಗೂಡು ಬರುತ್ತಿದೆ. ಖಾಸಗೀ ಮಾರ್ಕೆಟ್‌ಗಳು ನಡೆಯುತ್ತಿರುವುದು ನಿಜ

ಕಾನೂನಿನಲ್ಲಿ ತೊಡಕು ಇದ್ದು ಕಳೆದ ಸಲ ಶಾಸನ ಸಭೆಯಲ್ಲಿ ತಿದ್ದುಪಡಿ ತಂದು ಮಾನ್ಯ ಸದಸ್ಯರು ಒಪ್ಪಿಗೆ ಕೊಟ್ಟಿದ್ದರಿಂದ ಅದನ್ನು ಜಾರಿಗೆ ತಂದಿದ್ದೇವೆ. ಪೋಲೀಸ್ ಇಲಾಖೆಯವರ ಮತ್ತು ಖಾಸಗೀ ಜನರ ಸಹಕಾರ ಬೇಕಾಗಿದೆ. ಖಾಸಗೀಯಾಗಿ ನಡೆಯುತ್ತಿರುವ ಕರ್ಬ್ ಮಾರ್ಕೆಟ್ಟನ್ನು ನಿಲ್ಲಿಸ ಬೇಕಾದರೆ ಸ್ವಲ್ಪ ಕಾಲ ಹಿಡಿಯುತ್ತದೆ. ಅವರ ಮೇಲೆ ಚಾರ್ಜ್‌ಷೀಟ್ ಹಾಕಬೇಕು, ಇದರಲ್ಲಿ ಕಷ್ಟ ಇರುವುದರಿಂದ, ಪೂರ್ಣವಾಗಿ ಅದನ್ನು ತೆಗೆದುಕೊಳ್ಳುವುದಕ್ಕೆ ಆಗಲಿಲ್ಲ. ಮಾನ್ಯ ಸಭಾಸದಸ್ಯರ ಮತ್ತು ರ್‍ನಿತರ ಸಹಾಯ ಹೆಚ್ಚಿಗೆ ಬೇಕು ಎಂದು ಕೇಳಿಕೊಳ್ಳುತ್ತೇನೆ.

†ಶ್ರೀ ಎಂ. ರಾಜಶೇಖರ ಮೂರ್ತಿ (ಕೈಗಾರಿಕಾ, ಪ್ರಚಾರ ಮತ್ತು ವಾರ್ತಾ ಶಾಖೆಗಳ ಮಂತ್ರಿಗಳು).—ಸ್ವಾಮಿ, ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಸದಸ್ಯರ ಭಾಷಣಗಳನ್ನು ಬಹಳ ಆಸಕ್ತಿಯಿಂದ ಕೇಳಿದ್ದೇನೆ. ಕೆಲವರು ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ, ಕೆಲವರು ಬಹಳ ಕಟುವಾಗಿ ಟೀಕೆ ಮಾಡಿದ್ದಾರೆ, ಮತ್ತು, ಸತ್ಯಾಂಶಕ್ಕೆ ದೂರವಾದ ಆಪಾದನೆಗಳನ್ನು ಮಾಡಿದ್ದಾರೆ. ಈ ಎಲ್ಲಾ ವಿಷಯಗಳಿಗೂ ಕೂಡ ಉತ್ತರ ಕೊಡಲಿಕ್ಕೆ ಕಾಲ ಸಾಕಷ್ಟು ಇಲ್ಲ. ಕೆಲವು ವಿಚಾರಗಳನ್ನು ಮಾತ್ರ ಪ್ರಸ್ತಾಪ ಮಾಡುತ್ತೇನೆ. ಮಾನ್ಯ ಸಿದ್ಧವೀರಪ್ಪನವರು ಪ್ರಾರಂಭದಲ್ಲಿ ಭಾಷಣ ಮಾಡುತ್ತಾ ಮೈಸೂರು ದೇಶದಲ್ಲಿ ಕೈಗಾರಿಕೆಗಳ ಬೆಳವಣಿಗೆ ಸಾಕಷ್ಟು ಆಗಿಲ್ಲ, ಸರಕಾರದವರು ಎಲ್ಲಾ ಪ್ಲಾಟ್‌ಫಾರಂಗಳ ಮೇಲೆ ದೊಡ್ಡ ದೊಡ್ಡ ಭಾಷಣ ಮಾಡುತ್ತಾರೆ, ಭಾಷಣದಲ್ಲಿಯೇ ಅವರ ಕಾರ್ಯವಾಗಿದೆ ಎಂದು ಹೇಳಿದರು. ಬಹುಶಃ ಈ ವಿಚಾರವನ್ನು ಆಳವಾಗಿ ಅಭ್ಯಾಸ ಮಾಡಿದರೆ ಈ ವಾದದಲ್ಲಿ ತಿರುಳಿಲ್ಲ, ಪೊಳ್ಳುವಾದ ಎಂದು ಗೊತ್ತಾಗುತ್ತದೆ. ಕೆಲವು ಅಂಕಿ ಅಂಶಗಳನ್ನು ಕೊಡುತ್ತೇನೆ 1958–59ನೇ ಇಸವಿಯಲ್ಲಿ ಪಬ್ಲಿಕ್ ಸೆಕ್ಟರ್ ಇನ್‌ವೆಸ್ಟ್‌ಮೆಂಟ್ 48.43 ಕೋಟಿ ಇದ್ದುದು 1967–68ರಲ್ಲಿ 191.41 ಕೋಟಿಗೆ ಜಾಸ್ತಿಯಾಗಿದೆ. ಅಡಿಷನಲ್ ಇನ್‌ವೆಸ್ಟ್‌ಮೆಂಟ್ ಪಬ್ಲಿಕ್ ಸೆಕ್ಟರ್‌ನಲ್ಲಿ 142.98 ಕೋಟಿ; ಪ್ರೈವೇಟ್ ಸೆಕ್ಟರ್‌ನಲ್ಲಿ 1958-59 ರಲ್ಲಿ ಇನ್‌ವೆಸ್ಟ್‌ಮೆಂಟ್ 27.75. 1967–68 ರಲ್ಲಿ 132.61 ಕೋಟಿ; ಅಡಿಷನಲ್ ಇನ್‌ವೆಸ್ಟ್‌ಮೆಂಟ್ ಇನ್ ಪ್ರೈವೇಟ್ ಸೆಕ್ಟರ್ 104.86 ಕೋಟಿ. ಒಟ್ಟು ಪಬ್ಲಿಕ್ ಸೆಕ್ಟರ್ ಮತ್ತು ಪ್ರೈವೇಟ್ ಸೆಕ್ಟರ್ ಟೋಟಲ್ ಮಾಡಿದರೆ. 1958-59 ರಲ್ಲಿ 76.18 ಕೋಟಿ ಮತ್ತು 1967–68ರಲ್ಲಿ 324.02 ಕೋಟಿ ಜಾಸ್ತಿಯಾಗಿದೆ. Additional investment in both public and private sectors in the course of ten years 247.87 ಕೋಟಿ ಜಾಸ್ತಿ ಆಗಿದೆ. ಕೈಗಾರಿಕೆ ತೆಗೆದುಕೊಳ್ಳುವಾಗ ಲಾರ್ಜ್ ಅಂಡ್ ಮೀಡಿಯಂ ಇಂಡಸ್ಟ್ರೀಸ್, 25 ಲಕ್ಷಕ್ಕಿಂತ ಜಾಸ್ತಿ ಇನ್‌ವೆಸ್ಟ್‌ಮೆಂಟ್ ಆಗಿರತಕ್ಕ ಇಂಡಸ್ಟ್ರೀಸ್ ಮಾತ್ರ ತೆಗೆದುಕೊಂಡಿದ್ದೇವೆ. 10 ವರ್ಷಗಳಲ್ಲಿ ಪ್ರೈವೇಟ್ ಸೆಕ್ಟರ್ ಪಬ್ಲಿಕ್ ಸೆಕ್ಟರ್ ಇನ್‌ವೆಸ್ಟ್‌ಮೆಂಟ್ ಜಾಸ್ತಿಯಾಗಿರುವುದು ಇದರಿಂದ ಖಚಿತವಾಗಿ ಗೊತ್ತಾಗುತ್ತದೆ. ಅಷ್ಟೇ ಅಲ್ಲ ಈ ಎರಡು ವರ್ಷಗಳಲ್ಲಿ ಹಿಂದೆ ಎಂದೂ ಆಗದಂಥ ಅದ್ಭುತವಾಗಿ ಕೈಗಾರಿಕೆ ಬೆಳವಣಿಗೆ ಆಗಿದೆ ಅದಕ್ಕೆ ಅಂಕಿ ಅಂಶಗಳನ್ನು ಸಹ ಕೊಡುತ್ತೇನೆ. 1968 ರಿಂದ 1970ರ ವರೆಗೆ ಪಬ್ಲಿಕ್ ಸೆಕ್ಟರ್ ಹೊಸದಾಗಿ ಇನ್‌ವೆಸ್ಟ್ ಆಗಿರತಕ್ಕದ್ದು, ಪ್ರೊಡಕ್ಷನ್ ಹೋಗಿರತಕ್ಕದ್ದು, ಎಕ್ಸ್‌ಪಾನ್‌ಷನ್ ಕಂಪ್ಲೀಟ್ ಆಗಿರುವುದು, ಎಕ್ಸ್‌ಪಾನ್‌ಷನ್ ಆಗುತ್ತಾ ಇರುವುದು, ಹೊಸದಾಗಿ ಕೈಗಾರಿಕೆ ತೆಗೆದುಕೊಂಡಿರುವುದು, ಎಲ್ಲಾ ಸೇರಿ ಲಿಸ್ಟ್ ತಯಾರು ಮಾಡಿದ್ದೇವೆ. ಇಂಡಸ್ಟ್ರೀ ವೈಜ್ ಅಂಕಿ ಅಂಶಗಳನ್ನು ಕೊಡುತ್ತೇನೆ ಪಬ್ಲಿಕ್ ಸೆಕ್ಟರ್ 132.3 ಕೋಟಿ, ಪ್ರೈವೇಟ್ ಸೆಕ್ಟರ್ 233.20 ಕೋಟಿ, ಕೋ ಆಪರೇಟಿವ್ ಸೆಕ್ಟರ್ 26 ಕೋಟಿ ಪ್ರಪೋಸ್ಡ್ ಔಟ್‌ಲೇ ಎರಡು ವರ್ಷಗಳಲ್ಲಿ 11 ಕೈಗಾರಿಕೆಗಳಲ್ಲಿ ತೆಗೆದುಕೊಂಡಿದ್ದೇವೆ. Total capital outlay involved in these industries in three sectors is ......

Sri S. SIVAPPA.—Is it proposed or actual investment?

ಶ್ರೀ ಎಂ. ರಾಜಶೇಖರಮೂರ್ತಿ.—ಪ್ರಪೋಸ್ಡ್ ಇರತಕ್ಕದ್ದು ಬಹಳ ಕಡಿಮೆ. ಅಂಡರ್ ಕನ್‌ಸಿಡರೇಷನ್ 129 ಕೋಟಿ. ಅಕ್ಚುಯಲ್ ಔಟ್‌ಫ್ಲೋ ಕೆಲವಕ್ಕೆ ಇದೆ. ಕೆಲವಕ್ಕೆ ಹೇಳುವುದಕ್ಕಾಗುವುದಿಲ್ಲ. They are at various stages of implementation. It is not possible to give exact figures in regard to those industries. The figure varies. ಎರಡು ವರ್ಷಗಳಲ್ಲಿ 11 ಕೈಗಾರಿಕೆಗಳಲ್ಲಿ ಕೆಲವನ್ನು ತೆಗೆದುಕೊಂಡಿದ್ದೇವೆ. ಕೆಲವನ್ನು ತೆಗೆದುಕೊಳ್ಳುತ್ತಾ ಇದ್ದೇವೆ. ಕೆಲವು ಇಂಪ್ಲಿಮೆಂಟ್ ಆಗುತ್ತಾ ಇವೆ. ಎಲ್ಲಾ ಒಟ್ಟು ಸೇರಿ ಇನ್‌ವೆಸ್ಟ್‌ಮೆಂಟ್ 391 ಕೋಟಿ ರೂಪಾಯಿ ಆಗುತ್ತದೆ. ಅಷ್ಟು ಹೆಚ್ಚಿನ ಪ್ರಮಾಣದಲ್ಲಿ ಇನ್‌ವೆಸ್ಟ್ ಆಗಿರುವುದು ಹಿಂದೆ ಎಂದು ಆಗಿರಲಿಲ್ಲ. ಕೈಗಾರಿಕೆಗಳು ಸ್ಥಾಪನೆ ಆಗಿಲ್ಲ, ಮಂತ್ರಿಗಳು ಏನೇನೋ ಭಾಷಣ ಮಾಡುತ್ತಿರುತ್ತಾರೆ ಬರೀ ಮಾತಿನಲ್ಲಿ ಹೇಳುತ್ತಿರುತ್ತಾರೆ ಎಂದು ಹೇಳುವುದು ಸತ್ಯಕ್ಕೆ ದೂರವಾದುದು.

ಶ್ರೀ ಕೆ. ಹೆಚ್. ಪಾಟೀಲ್.—391 ಕೋಟಿ ರೂಪಾಯಿನಲ್ಲಿ ಸ್ಟೇಟದು ಎಷ್ಟು, ಸೆಂಟರದು ಎಷ್ಟು, ಜನರಲ್ ಕಾಂಟ್ರಿಬ್ಯೂಷನ್ ಎಷ್ಟು ಎಂದು ಪರ್ಟಿಕ್ಯುಲರ್ಸ್ ಕೊಟ್ಟರೆ ಉಪಕಾರ ವಾಗುತ್ತದೆ.

ಶ್ರೀ ಎಂ. ರಾಜಶೇಖರಮೂರ್ತಿ.—ಈ ವರ್ಷ 20 ಲಕ್ಷ ರೂಪಾಯಿಗಳು ಬಜೆಟ್ಟಿನಲ್ಲಿ ಕೊಟ್ಟಿರುವುದು.

1–30 P.M.

ಶ್ರೀಮಾನ್ ಸಿದ್ದವೀರಪ್ಪನವರು ಭಾಷಣ ಮಾಡುತ್ತಾ, ಇವಕ್ಕೆಲ್ಲಾ ಕ್ಯಾನ್ಸರ್ ತಗಲಿದೆ ಕೆಲವು ಇಂಡಸ್ಟ್ರೀಸ್ ಸಿಕ್ ಆಗಿವೆ, ಕೆಲವು ಲಿಕ್ವಿಡೇಷನ್ ಸ್ಟೇಜ್‌ನಲ್ಲಿ ಇವೆ ಎಂದು ಹೇಳಿದರು. ಶ್ರೀಮಾನ್ ಸಿದ್ದವೀರಪ್ಪನವರು ಹಿಂದೆ ಮಿನಿಸ್ಟರ್ ಆಗಿದ್ದರು, ಇವನ್ನೆಲ್ಲಾ ಬಹಳ ಆಳವಾಗಿ ಅಭ್ಯಾಸ ಮಾಡಿದ್ದಾರೆ, ಅಂಥವರ ಬಾಯಿಲ್ಲಿ ಇಂಥಾ ಮಾತು ಬಂತಲ್ಲಾ ಎಂದು ನನಗೆ ಬಹಳ ವ್ಯಸನವಾಗುತ್ತಾ ಇದೆ. ಅವರ ಬಗ್ಗೆ ನನಗೆ ಗೌರವ ಇದೆ, ಅವರ ನನ್ನ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ಮಾತನಾಡಿದರು ಅದಕ್ಕೆ ನಾನು ವಂದಿಸುತ್ತೇನೆ. ಆದರೆ ಕೆಲವು ವಿಚಾರಗಳನ್ನು ಹೇಳುವಾಗ ಪ್ರೊಡಕ್ಟಿವಿಟಿ ಆಫ್ ಇಂಡಸ್ಟ್ರಿ, ವರ್ಕಿಂಗ್ ರಿಸೋರ್ಸಸ್ ಆಫ್ ಇಂಡಸ್ಟ್ರೀಸ್ ಬಗ್ಗೆ ನಿಜವಾದ ಅಂಶ ಹೇಳುತ್ತಾರೆ ಎಂದು ನಾನು ತಿಳಿದುಕೊಂಡಿದ್ದೆ, ಚೆನ್ನಾಗಿ ತಿಳಿದುಕೊಂಡಿರತಕ್ಕವರ ಬಾಯಲ್ಲಿ ಈ ರೀತಿ ಟೀಕೆ ಬಂತಲ್ಲಾ ಎಂದು ವ್ಯಸನವಾಗುತ್ತದೆ. 8 ಇಂಡಸ್ಟ್ರೀಸ್‌ನಲ್ಲಿ ನಷ್ಟ ವಾಗುತ್ತಾ ಇತ್ತು, ಈ ಸಾಲಿನಲ್ಲಿ ಅವುಗಳ ಪೈಕಿ 3 ಕಂಪೆನಿಗಳಲ್ಲಿ ಲಾಭ ಬಂದಿವೆ. ಅವು ಯಾವುವು ಎಂದರೆ ಮೈಸೂರು ಷುಗರ್ ಕಂಪೆನಿ, ಸ್ಟೇಟ್ಸ್ ಇಂಟರ್‌ನ್ಯಾಷನಲ್—ಇವರಬಗ್ಗೆ ಬಹಳವಾಗಿ ಮಾತನಾಡಿದ್ದಾರೆ ಹೋದ ವರ್ಷ ನಷ್ಟವಾಗುತ್ತಾ ಇದ್ದುದನ್ನು ಈ ಸಾರಿ ಮೇಕ್‌ಅಪ್ ಮಾಡಿ 9 ಲಕ್ಷ ರೂಪಾಯಿ ಲಾಭ ಮಾಡಿದ್ದಾರೆ. ನಾಲ್ಕೂವರೆ ಲಕ್ಷ ರೂಪಾಯಿ ಇನ್‌ಕಂ ಟ್ಯಾಕ್ಸ್ ಕೊಟ್ಟಿದ್ದಾರೆ. ಮೈಸೂರು ಕ್ರೋಮ್‌ಟ್ಯಾನಿಂಗ್ ಕಂಪೆನಿ ಕೂಡ ಲಾಭ ಮಾಡಿದೆ. ಉಳಿದ ಇಂಡಸ್ಟ್ರೀಸ್‌ಗಳು ಎಂದರೆ ರೆಂಕೋ, ಐರನ್ ಅಂಡ್ ಸ್ಟೀಲ್ ವರ್ಕ್ಸ್, ಎನ್.ಜಿ.ಇ.ಎಫ್, ಈ ರೀತಿ ಉಳಿದ 4 ಫ್ಯಾಕ್ಟರಿಗಳು ಇನಿವೆ ಇವುಗಳಲ್ಲಿ ಈ ವರ್ಷ ನಷ್ಟ ಬಹಳಮಟ್ಟಿಗೆ ಕಡಿಮೆಯಾಗಿದೆ. ಶೇಕಡ ಐವತ್ತಕ್ಕಿಂತ ಹೆಚ್ಚಾಗಿ ನಷ್ಟವನ್ನು ಕಡಿಮೆ ಮಾಡಲಾಗಿದೆ ಎಂದು ಹೇಳುತ್ತಾರೆ. ರೆಂಕೋ, ಮೈಸೂರು ಐರನ್ ಅಂಡ್ ಸ್ಟೀಲ್ ಮತ್ತು ಎನ್. ಜಿ. ಎಫ್ ಈ ಮೂರು ಕಂಪೆನಿಗಳು ಮುಂದಿನ ವರ್ಷ ಲಾಭ ಮಾಡಲಿಕ್ಕೆ ಹೋಗುತ್ತವೆ ಎಂದು ಮಾನ್ಯ ಸದಸ್ಯರಿಗೆ ಹೇಳುತ್ತೇನೆ. ಈ ಕಂಪೆನಿಗಳು ನಷ್ಟದಲ್ಲಿ ನಡೆಯುತ್ತಿರುವುದಕ್ಕೆ ಕಾರಣವೇನೆಂದರೆ

I want the House to understand the correct reasons why the company is running under a loss. In the first place, the expansion is not yet complete. During 1967-68 and 1968-69 there was heavy capital investment in the company. The fully expended company has not yet gone into production. Then again the ratio between equity and debt gives a distorted picture in the balance sheet. In all other steel companies in the world this ratio is 1:1 but in the case of Mysore Iron & Steel Co. Ltd. it is 2:1. Out of a total investment of Rs. 60 crores, 19 crores is equity capital and 40 crores is the debt. If the company has to pay interest, it has to pay interest on the 40 crores. the depreciation and interest alone is much more than the actual loss the company is incurring. If the fully expanded unit goes into production next year, in the first year this company is going to make a profit. This is not the only company which runs at a loss.

Sri S. SIVAPPA.—Who is responsible for over capitalisation?

Sri M. RAJASEKHARA MURTHY.—Nobody. Take the case of Hindustan Steel. During 1968-69 it has run at a loss. They are all capital-intensive industries.

ಶ್ರೀ ಹಂಜಿ ಶಿವಣ್ಣ.—ಮಾನ್ಯಮಂತ್ರಿಗಳು ಕನ್ನಡದಲ್ಲಿ ಮೊದಲು ಉತ್ತರ ಕೊಡಲು ಪ್ರಾರಂಭ ಮಾಡಿದರು, ಈಗ ಇಂಗ್ಲೀಷಿನಲ್ಲಿ ಕೊಡುತ್ತಾ ಇದ್ದಾರೆ. ಕನ್ನಡದಲ್ಲಿ ಮಾತನಾಡುವುದರಿಂದ ಅವರಿಗೆ ಅಗೌರವವಾಗುವುದಾದರೆ ಮೊದಲೇ ಅವರು ಇಂಗ್ಲೀಷಿನಲ್ಲಿ ಮಾತನಾಡಬಹುದಾಗಿತ್ತು.

ಶ್ರೀ ಎಂ. ರಾಜಶೇಖರಮೂರ್ತಿ.—ಹಿಂದೂಸ್ತಾನ್ ಸ್ಟೀಲ್ ಲಿಮಿಟೆಡ್‌ರವರು ಒಂದು ಸಾವಿರ ಕೋಟಿ ರೂಪಾಯಿಗಳಿಗಿಂತ ಹೆಚ್ಚು ಬಂಡವಾಳವನ್ನು ಹಾಕಿ ಕೂಡ 1968 ರಿಂದ 69ರ ವರೆಗೂ ನಷ್ಟವಾಗಿದೆ. 1968–69ರ ಕೊನೆವರೆಗೂ 62 ಕೋಟಿ 35 ಲಕ್ಷ 50 ಸಾವಿರ ರೂಪಾಯಿ ನಷ್ಟವಾಗಿದೆ. ಟಾಟಾ ಐರನ್ ಅಂಡ್ ಸ್ಟೀಲ್ ಕಂಪನಿ, ಇಂಡಿಯನ್ ಐರನ್ ಅಂಡ್ ಸ್ಟೀಲ್ ಕಂಪೆನಿ ಇವುಗಳೆಲ್ಲಾ ಹಾಗೇ ಆಗಿದೆ. ಹೊಸದಾಗಿ ಯಾವುದೇ ಕಂಪೆನಿ ಸ್ಥಾಪನೆಯಾಗಲಿ ಅಲ್ಲಿ ಪ್ರೊಡಕ್ಷನ್ ಚೆನ್ನಾಗಿ ಆಗಿ ಲಾಭ ಬರಬೇಕಾದರೆ 8 ರಿಂದ ಹತ್ತು ವರ್ಷಬೇಕು. ಪ್ರಪಂಚದಲ್ಲಿ ಯಾವ ಕಾರ್ಖಾನೆಯ ಚರಿತ್ರೆ ನೋಡಿದರೂ ಕೂಡ ಪ್ರಾರಂಭದಲ್ಲಿ ಲಾಭ ಮಾಡುವುದಕ್ಕೆ ಆಗಿಲ್ಲ. ಮೈಸೂರಿನ ಉತ್ಪಾದನಾ ಕಾರ್ಖಾನೆಗಳು ಏನಿವೆ; ಅಲ್ಲೂ ಕೂಡ ಮೊದಲನೆ ವರ್ಷದಲ್ಲೇ ಲಾಭ ಮಾಡಿಲ್ಲ ಎಂದು ಹೇಳುತ್ತೇನೆ.

ಶ್ರೀಮಾನ್ ಸಿದ್ದವೀರಪ್ಪನವರು ಟ್ರೇಡ್ ಏಜೆಂಟ್ ಬಗ್ಗೆ ಮಾತನಾಡಿದರು, ಟ್ರೇಡ್ ಏಜೆಂಟರ ಅವಶ್ಯಕತೆ ಇಲ್ಲ, ಬ್ರಿಟಿಷ್ ಹೈಕಮಿಷನ್ ಇದೆ, ಅವರು ಆ ಕೆಲಸ ಮಾಡಬಹುದು ಎಂದು ಹೇಳಿದರು. ಅವರಿಗೆ ಗೊತ್ತಿದೆ, ಅವರು ಮಂತ್ರಿಗಳಾಗಿದ್ದಾಗ ನಾನೂ ಕೂಡ ಈ ಸಭೆಯಲ್ಲಿ ಸದಸ್ಯನಾಗಿದ್ದೆ. ಅವರ ಕಾಲದಲ್ಲಿ ಟ್ರೇಡ್ ಏಜೆಂಟ್ ಆಫೀಸು ಕಂಟಿನ್ಯೂ ಆಗಬೇಕೇ ಬೇಡವೇ ಎಂಬ ಜಿಜ್ಞಾಸ ಬಂದಾಗ ಅವರು ಕೇಂದ್ರಸರ್ಕಾರದವರೊಡನೆ ಬಹಳಮಟ್ಟಿಗೆ ಒತ್ತಾಯ ಮಾಡಿ ಈ ಆಫೀಸು ಕಂಟಿನ್ಯೂ ಆಗಲೇಬೇಕೆಂದು ಹೇಳಿದರು.

ಶ್ರೀ ಎಚ್. ಸಿದ್ದವೀರಪ್ಪ.—15 ವರ್ಷ ಆಯಿತು.

ಶ್ರೀ ಎಂ. ರಾಜಶೇಖರಮೂರ್ತಿ.—ಅವರ ಕಾಲದಲ್ಲಿ ಆದಂತಹ ಪತ್ರವ್ಯವಹಾರ ನನ್ನಲ್ಲಿ ಇದೆ. ಅವರು ಒತ್ತಾಯಮಾಡಿ ಕಂಟಿನ್ಯೂ ಆಗಲೇಬೇಕೆಂದು ಕೇಂದ್ರಸರ್ಕಾರದವರನ್ನು ಒತ್ತಾಯ ಮಾಡಿದ್ದರ ಮೇಲೆ ಟ್ರೇಡ್ ಏಜೆಂಟರನ್ನು ಕಂಟಿನ್ಯೂ ಮಾಡಿದ್ದಾರೆ, ಅದು ಈಗಲೂ ಕೂಡ ಕಂಟಿನ್ಯೂ ಆಗುತ್ತಾ ಇದೆ.

Sri H. SIDDAVEERAPPA.—Much water has flown under the bridge during this period.

Sri M. RAJASEKHARA MURTHY.—His statements in the letter were not washed away in the stream.

ಶ್ರೀ ಎಸ್. ಶಿವಪ್ಪ.—ಟ್ರೇಡ್ ಏಜೆಂಟ್ ಇರುವುದರಿಂದ ಏನು ಲಾಭ ಇದೆ, ಅದನ್ನು ಹೇಗೆ ಸಮರ್ಥನೆ ಮಾಡುತ್ತೀರಿ ಎಂಬುದನ್ನು ಕೇಳಿ. ಅವರ ಅವಶ್ಯಕತೆ ಇದೆಯೇ ಎಂಬುದನ್ನು ಹೇಳಿ.

Sri M. RAJASEKHARA MURTHY.—To market our goods abroad and to purchase the capital equipment that are needed by our industries we require it.

Sri S. SIVAPPA.—Is there no other agency through which the Government can purchase their requirements?

Sri M. RAJASEKHARA MURTHY.—We will be having no other agency of our own.

Sri S. SIVAPPA.—Can this Government not purchase through other agencies?

Sri M. RAJASEKHARA MURTHY.—What is the harm in having our own agency?

(SRI M. RAJASEKHARA MURTHY)

ಮಾನ್ಯ ಸಿದ್ಧವೀರಪ್ಪನವರು ಐ.ಡಿ.ಸಿ. ವಿಚಾರ ಹೇಳಿದರು. 66 ಲಕ್ಷ ರೂಪಾಯಿಗಳನ್ನು ಕಂಪೆನಿ ಕೆಲಸಕಾರ್ಯಗಳಿಗೆ ಕೊಡಲಾಗಿದೆ. ಒಟ್ಟು 24 ಲಕ್ಷ ರೂಪಾಯಿಗಳನ್ನು ಕಮಿಷನ್ ಕೊಡಲಾಗಿದೆ, ಕೆಲವಕ್ಕೆ ಶೇಕಡ 2, ಕೆಲವಕ್ಕೆ ಶೇಕಡ ಒಂದೂವರೆ ಹೀಗೆ ಕೆಲಸದಮೇರೆ ಕೊಡಲಾಗಿದೆ, ಕ್ಯಾಪಿಟಲ್ ಔಟ್‌ಲೇ ನೋಡಿದರೆ. 7 ಪರ್ಸೆಂಟ್ ಪ್ರಕಾರ ಕಮಿಷನ್ ವರ್ಕ್‌ಔಟ್ ಆಗುವುದು. 77 ಸಾವಿರ ಟನ್ ಉಕ್ಕು ತಯಾರುಮಾಡುವ ಕಾರ್ಖಾನೆಗೆ ಕೊಟ್ಟಿರುವುದು ಕನ್‌ಸಲ್‌ಟೆನ್ಸಿಗಾಗಿ ಕೊಟ್ಟಿರುವುದು 24 ಲಕ್ಷ ರೂಪಾಯಿಗಳು ಸ್ಪೆಷಲ್ ಸ್ಟೀಲ್ ತಯಾರುಮಾಡಲು ಕನ್‌ಸಲ್ಟೆಂಟ್ ನೇಮಕಮಾಡಲಾಗಿದೆ.

Sri H. SIDDAVEERAPPA.—Ultimately, it comes to more than 2·2. The Government started like that; ultimately the figure works out to 2·2.

Sri M. RAJASEKHARA MURTHY.—It has to be taken on the total value of the project.

Sri M. SIVAPPA.—The Hon. Minister is giving confusing figures. Commission has not been paid on the total project; it has been paid on certain items. The Government has to calculate only on those items on which commission is paid. I also want to know the competency of the Consulting Agency. Have not the Government got experienced technical hands? Is it the first time that such works are handled?

Sri M. RAJASEKHARA MURTHY.—Why does not the hon. Member allow me to complete my speech? I have not yet completed my reply on the subject. ದುರ್ಗಾಪುರದಲ್ಲಿರುವುದು 66 ಸಾವಿರ ಟನ್ ಸ್ಪೆಷಲ್ ಸ್ಟೀಲ್ ಆದರೆ ಕಮಿಷನ್ ಕೊಟ್ಟಿರುವುದು 88 ಲಕ್ಷ ರೂಪಾಯಿ. ನಮ್ಮಲ್ಲಿ 77 ಸಾವಿರ ಟನ್ ಸ್ಟೀಲ್ ತಯಾರುಮಾಡುವುದು ·7 ಪರ್ಸೆಂಟ್ ವರ್ಕ್‌ಔಟ್ ಆಗುವುದು. ಇದನ್ನು ಬಿಲ್ಡಪ್ ಮಾಡಬೇಕು ಎಂದು ಕೇಂದ್ರಸರ್ಕಾರದ ಮಂತ್ರಿಗಳು ಕೂಡ ಹೇಳಿದ್ದಾರೆ, ಇದು ಅವಶ್ಯಕ. ಆ ಕಂಪೆನಿಯಲ್ಲಿ ಐದಾರು ಚೀಫ್ ಎಂಜನಿಯರುಗಳಿದ್ದಾರೆ, ಅವರಿಗೆ ಸಾಕಷ್ಟು ಅನುಭವವಿದೆ.

ಶ್ರೀ ಎಸ್. ಶಿವಪ್ಪ.—ಅವರಿಗೆ ಸ್ಟೀಲ್ ಫ್ಯಾಕ್ಟರಿ ನಡೆಸಿರುವ ಅನುಭವವೇನಿದೆ?

ಶ್ರೀ ಅಬ್ದುಲ್ ಖುದ್ದೂಸ್ ಅನ್ವಾರ್.—ಇಲಾಖೆ ಎಂಜನಿಯರುಗಳೇನು ಮಾಡುತ್ತಿದ್ದಾರೆ?

Mr. SPEAKER.—At every word and sentence, if Members go on Interrupting the Minister's Speech how could he reply?

Sri H. SIDDAVEERAPPA.—I have got the Audi Report (commercial) 1970 with me. Under the heading 'Performance', it is stated that the commission was expected to be 0·75 per cent but it actually worked out to 2·2 per cent. They wanted 7. 73 lakhs but now it has come to Rs. 31.60 lakhs.

Sri M. RAJASEKHARA MURTHY.—Originally the cost of the project was Rs. 10 7 crores; subsequently it came to Rs. 32 crores. He is calculating on Rs. 10·7 crores; it should be calculated for the revised project and not for the original project. The Department has given full clarifications.

Sri S. SIVAPPA.—The only course left to us is to demand a judicial enquiry. Bhadravathi Iron & Steel Ltd., is a premier factory. The Hon. Minister is not giving convincing answers and is confusing the House; we are not satisfied by his answer. There is an authenticated

Audit Report on this. This House is not going to be satisfied unless there is judical enquiry.

Mr. SPEAKER.—The Hon. Member has to take the answer for what it is worth.

Sri S. SIVAPPA.—Crores of rupees are involved here and the Government is hesitating to face a judicial enquiry.

Sri M. RAJASEKHARA MURTHY.—There is no need for a judicial enquiry for this. There is nothing wrong in it. The hon. Members referred to M.S.K. Mills also. It was on the point of being closed for want of working capital. ಅನೇಕ ಕೂಲಿಕಾರರಿಗೆ ತೊಂದರೆಯಾಗುವುದೆಂಬ ಉದ್ದೇಶದಿಂದ ಸರ್ಕಾರ ಅದಕ್ಕೆ ಸಾಲ ಮತ್ತು ಗ್ಯಾರಂಟಿ ಕೊಟ್ಟು ನಡೆಸಬೇಕಾಯಿತು. ಸರಕಾರ ಹಣ ಸಹಾಯಮಾಡದಿದ್ದರೆ ಆ ಕಾರ್ಖಾನೆ ಮುಚ್ಚಲ್ಪಟ್ಟು ಅನೇಕ ಕೂಲಿಗಳು ಹೊಟ್ಟೆಗಿಲ್ಲದೆ ಬೀದಿಯಲ್ಲಿ ಅಲೆಯಬೇಕಾಗಿ ಬರುತ್ತಿತ್ತು. ಆ ದೃಷ್ಟಿಯಿಂದ ಹಣ ಸಹಾಯ ಮಾಡಲಾಗಿದೆ, ಅದು ನಡೆಯುತ್ತಿದೆ. ಈಗ ಹೊಸಬರು ಬಂದು ಚೆನ್ನಾಗಿ ನಡೆಸುತ್ತಿದ್ದಾರೆ, ಅದನು ಎಕ್ಸ್‌ಪ್ಯಾಂಡ್ ಮಾಡಬೇಕು, ರಿನೋವೇಟ್ ಮಾಡಬೇಕು ಎಂದು ಯೋಚನೆಮಾಡುತ್ತಿದ್ದಾರೆ, ಅದಾದನಂತರ ಲಾಭದಾಯಕವಾಗುವುದು.

ಎಸ್ಟಿಮೇಟ್ಸ್ ಕಮಿಟಿ ವರದಿಯ ವಿಚಾರ ಕೆಲವರು ಪ್ರಸ್ತಾಪಮಾಡಿದರು, ಅದರಮೇಲೆ ಕೈಕೊಂಡಿರುವ ಕ್ರಮವೇನು ಎಂದು ಕೇಳಿದರು. ಅದನ್ನು ಅನುಭವವಿರುವ ಆಫೀಸರುಗಳಿಗೆ ಕಳಿಸಿ ಅದನ್ನು ಓದಿ ವರದಿಮಾಡುವಂತೆ ತಿಳಿಸಿತ್ತು, ವರದಿಮಾಡಿದ್ದಾರೆ. ಆ ವಿಚಾರವೆಲ್ಲಾ ಮುಂದಿನ ಬೋರ್ಡ್ ಮೀಟಿಂಗಿನಲ್ಲಿ ಬರುವುದು, ಕಂಪೆನಿಯ ಹಿತದೃಷ್ಟಿಯಿಂದ ಒಳ್ಳೆಯ ಸಲಹೆಗಳೇನಿವೆ ಅವನ್ನು ಕಾರ್ಯಗತಮಾಡಲು ಸಿದ್ಧವಾಗಿದ್ದೇವೆ.

ಈ ವರ್ಷ ಬೆಂಗಳೂರಿನಲ್ಲಿ ಒಂದು ಪ್ರಿಇನ್‌ಸ್ಪೆಕ್ಷನ್ ಸೆಂಟರನ್ನು ತೆರೆದಿದ್ದೇವೆ ಇದುವರೆಗೆ ಮೈಸೂರಿನಿಂದ ಹೊರಗಡೆಗೆ ಎಕ್ಸ್‌ಪೋರ್ಟ್ ಮಾಡಬೇಕಾದರೆ ಸಾಮಾನು ಮದ್ರಾಸಿಗೆ ಹೋಗಬೇಕಾಗಿತ್ತು. ಎಕ್ಸ್‌ಪೋರ್ಟ್ ಮಾಡಲು ಅನುಕೂಲವಾಗಲೆಂದು ರಾಜ್ಯ ಸರಕಾರ ಕೇಂದ್ರ ಸರ್ಕಾರದಲ್ಲಿ ಒತ್ತಾಯ ಮಾಡಿ ಈಗ ಬೆಂಗಳೂರಿನಲ್ಲೇ ಒಂದು ಸೆಂಟರ್ ಓಪನ್ ಮಾಡಿರುವುದರಿಂದ ರಫ್ತು ಮಾಡುವುದಕ್ಕೆ ಅನುಕೂಲವಾಗಿದೆ.

ಇದಲ್ಲದೆ ಇಲ್ಲಿ ಇಂಡಿಯನ್ ಸ್ಟ್ಯಾಂಡರ್ಡ್ ಇನ್‌ಸ್ಟಿಟ್ಯೂಟ್ ಎಂಬ ಸ್ಪೆಷಲ್ ಸೆಂಟರನ್ನು ಓಪನ್ ಮಾಡಿದ್ದೇವೆ. ಅಲ್ಲಿ ಕೆಲವು ಮಾಡಲ್ ಮಾಡುವರು ಮಾಲು ತಯಾರು ಮಾಡುವರು, ಇದರಿಂದ ಕ್ವಾಲಿಟಿ ಕಂಟ್ರೋಲ್ ಮಾಡಲು ಬಹಳಮಟ್ಟಿಗೆ ಕಂಪೆನಿಗಳಿಗೆ ಅನುಕೂಲವಾಗಿದೆ, ಐ.ಎಸ್.ಐ. ಸ್ಟ್ಯಾಂಡರ್ಡ್ ಇದ್ದರೆ ಮಾರುಕಟ್ಟೆಯಲ್ಲಿ ಅನುಕೂಲವಾಗುವುದು, ಫಾರಿನ್ನಿಗೆ ರಫ್ತು ಮಾಡಲು ಅನುಕೂಲವಾಗುವುದು. ಈ ಇನ್‌ಸ್ಟಿಟ್ಯೂಟ್ ಬೆಂಗಳೂರಿಗೆ ಬಂದುದರಿಂದ ಬಹಳ ಸಹಾಯವಾಗಿದೆ.

ಹೊರಗಡೆಯಿಂದ ಬರುವ ಎಂಟರ್‌ಪ್ರಿನ್ಯುಯರ್ಸ್‌ಗೆ ಅನುಕೂಲವಾಗಲೆಂದು ಒಂದು ಇನ್‌ಫರ್ಮೇಷನ್ ಸೆಂಟರನ್ನು ತೆರೆಯಲಾಗಿದೆ. ಅದರಿಂದ ಕೈಗಾರಿಕಾ ಇಲಾಖೆಗೆ ಮಾತ್ರವಲ್ಲದೆ ಇತರ ಇಲಾಖೆಗಳಿಗೆ ಸಂಬಂಧಪಟ್ಟಂತೆಯೂ ಅನುಕೂಲವಾಗುವುದು, ಮುನಿಸಿಪಲ್ ಲೈಸೆನ್ಸ್, ಕಾರ್ಖಾನೆ ಲೈಸೆನ್ಸ್, ಮುಂತಾದುವನ್ನು ಹೇಗೆ ಪಡೆಯಬೇಕು, ಮಾರಾಟತೆರಿಗೆಗೆ ಬೇಕಾದ ಫಾರಂ ಎಲ್ಲಿ ಸಿಕ್ಕುವುದು ಮುಂತಾದ ಎಲ್ಲ ಸಮಾಚಾರಗಳನ್ನೂ ಈ ಸೆಂಟರ್ ಒದಗಿಸುವುದು ಫಾರಂಗಳನ್ನು ಉಚಿತವಾಗಿ ಒದಗಿಸುವುದು. ಇದಲ್ಲದೆ ಕೈಗಾರಿಕೆಗಳ ಬಗ್ಗೆ ಅಂಕಿಅಂಶ ಶೇಖರಿಸಲು ಮತ್ತು ಅದನ್ನು ಅಪ್‌ಟುಡೇಟ್ ಮಾಡಲು ಪ್ರಯತ್ನಮಾಡಲಾಗಿದೆ. ಕೈಗಾರಿಕೆಗಳಲ್ಲಿ ಮ್ಯಾನೇಜ್‌ಮೆಂಟ್ ಮುಖ್ಯವಾದುದು, ಅದು ಎಷ್ಟು ಚೆನ್ನಾಗಿದ್ದರೆ ಅಷ್ಟು ಲಾಭದಾಯಕವಾಗುವುದು. ಇದಕ್ಕಾಗಿ ಡೆಪ್ಯುಟೇಷನ್ ಬೇಸಿಸ್‌ಮೇಲೆ ಆಫೀಸರುಗಳು ಕೆಲಸಮಾಡುತ್ತಿದ್ದಾರೆ.

ಅದಕ್ಕೋಸ್ಕರ ಸಪರೇಟ್ ಇಂಡಸ್ಟ್ರಿಯಲ್ ಕೇಡರ್ ಮಾಡಬೇಕೆಂದು ಸರ್ಕಾರದ ಆಲೋಚನೆಯಲ್ಲಿದೆ. ಆದರೂ ಕೂಡ ಅದು ಒಳ್ಳೆಯದೆಂದು ಕಂಡುಬಂದರೆ ಈ ವಿಚಾರದಲ್ಲಿ ಶೀಘ್ರವಾಗಿ ನಾವು ಕಾರ್ಯಕ್ರಮವನ್ನು ತೆಗೆದುಕೊಂಡು ಸಪರೇಟ್ ಇಂಡಸ್ಟ್ರಿಯಲ್ ಕೇಡರ್ ಕ್ರಿಯೇಟ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಮಾನ್ಯ ಸದಸ್ಯರು ಅನೇಕ ವಿಚಾರಗಳನ್ನು ಹೇಳಿದ್ದಾರೆ,

(SRI M. RAJASEKHARA MURTHY)

ಅನೇಕ ವಿಚಾರಗಳ ಬಗ್ಗೆ ಟೀಕೆ ಟಿಪ್ಪಣಿಗಳನ್ನು ಮಾಡಿದ್ದಾರೆ. ಅವೆಲ್ಲಕ್ಕೂ ಉತ್ತರ ಕೊಡುವುದಕ್ಕೆ ಕಾಲಾವಕಾಶವಿಲ್ಲ. ಒಂದು ವಿಷಯವನ್ನು ಮಾತ್ರ ನಾನು ಹೇಳುತ್ತೇನೆ. ಶ್ರೀಮಾನ್ ಸಿದ್ದವೀರಪ್ಪನವರು ಮಾತನಾಡುತ್ತಾ, ಕರ್ನಾಟಕ ಟ್ರೇಡರ್ಸ್ ಮಾಲೀಕರು ಭದ್ರಾವತಿಯ ಕಾರ್ಖಾನೆಯ ಕೆಲವು ಸಾಮಾನುಗಳನ್ನು ಹೊರ ದೇಶಕ್ಕೆ ಎಕ್ಸ್‌ಪೋರ್ಟ್ ಮಾಡುವುದಕ್ಕೆ ಎಂದು ತೆಗೆದುಕೊಂಡು ಅದನ್ನು ಇಂಡಿಯಾದೇಶದಲ್ಲಿಯೇ ಮಾರಾಟ ಮಾಡಿದ್ದಾರೆ ಎಂದು ಹೇಳಿದರು. ಅವರು ಅಲ್ಲಿಂದ ಹೊರ ದೇಶಕ್ಕೆ ಏನೇನು ಎಕ್ಸ್‌ಪೋರ್ಟ್ ಮಾಡಿದ್ದಾರೆ, ಷಿಪಿಂಗ್ ಮಾಡಿದ್ದಾರೆ, ಅದಕ್ಕೆ ಸಂಬಂಧಪಟ್ಟ ಫಾರಂಗಳು ಬಿಲ್‌ಗಳು ಇವುಗಳನ್ನೆಲ್ಲಾ ತರಿಸಿಕೊಂಡು ನಾವು ನೋಡಿದ್ದೇವೆ. ಅವರು........

ಶ್ರೀ ಎಸ್. ಗೋಪಾಲಗೌಡ.—ಸ್ವಾಮಿ ನನಗೆ ಒಂದು ಸ್ಪಷ್ಟೀಕರಣ ಬೇಕಾಗಿದೆ. ನಾನು ಈ ಸಭೆಯಲ್ಲಿ ಇಲ್ಲದೆ ಇರುವಾಗ ಬೇರೆ ಯಾರಾದರೂ ಮಾನ್ಯ ಸದಸ್ಯರು ಇದನ್ನು ಪ್ರಸ್ತಾಪ ಮಾಡಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಇದಕ್ಕೆ ಉತ್ತರವನ್ನು ಕೊಡಬೇಕು. 41 ಸಣ್ಣ ಕೈಗಾರಿಕೆಗಳಲ್ಲಿ ನಡೆದಿರತಕ್ಕ ವ್ಯವಹಾರಗಳನ್ನು ಟೈಪ್ ಮಾಡಿಸಿ ಮುಖ್ಯ ಮಂತ್ರಿಗಳಿಗೆ ಒಂದು ಅರ್ಜಿಯನ್ನು ಕೊಟ್ಟಿದ್ದಾರೆ. ಅದರ ಪ್ರತಿ ನನಗೂ ಒಂದು ಬಂದಿದೆ. ಇದರಲ್ಲಿ ಇಬ್ಬರು ಡೈರೆಕ್ಟರು ಇದ್ದಾರೆ. ಮತ್ತು ಜಾಯಿಂಟ್ ಡೈರೆಕ್ಟರೂ ಇದ್ದಾರೆ. ಅವರು ಅದರಲ್ಲಿ ಎಷ್ಟೋ ಲಕ್ಷ ರೂಪಾಯಿಗಳನ್ನು ಸಂಪಾದನೆ ಮಾಡಿದ್ದಾರೆ ಎಂದು ಬ್ರೇಕ್ ಆಫ್ ಫಿಗರ್ಸ್ ಕೊಟ್ಟಿದ್ದಾರೆ. ಯಾರು ಅರ್ಜಿಯನ್ನು ಕೊಟ್ಟಿದ್ದಾರೆಯೋ ಅವರು ಅದನ್ನು ಪ್ರೂವ್ ಮಾಡುವುದಕ್ಕೆ ಸಿದ್ಧರಾಗಿದ್ದಾರೆ. ಆದ್ದರಿಂದ ಮುಖ್ಯ ಮಂತ್ರಿಗಳಿಗೆ ಕೊಟ್ಟಿರತಕ್ಕ ಅರ್ಜಿಯಲ್ಲಿ ಅದಕ್ಕೆ ಸಂಬಂಧಪಟ್ಟವರು ಏನೇನು ಅಪಾದನೆಗಳನ್ನು ಮಾಡಿದ್ದಾರೆ ಅದನ್ನು ವಿಚಾರಣೆ ಮಾಡಬೇಕು. ಸತೀಸ್‌ಚಂದ್ ಎನ್ನತಕ್ಕ ಡೈರೆಕ್ಟರು ಒಬ್ಬರು ಇದ್ದಾರೆ. ಅವರ ಬಗ್ಗೆ 4—5 ಪುಟಗಳಷ್ಟು ಬರೆದಿದ್ದಾರೆ. ಇದನ್ನು ವಿಚಾರ ಮಾಡಬೇಕು. ಈ ಅಪಾದನೆಯ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಹೇಳಿದರೆ ಒಳ್ಳೆಯದು. ಸ್ಪೆಸಿಫಿಕ್ ಆಗಿ ಯಾರಾದರೂ ಚಾರ್ಜಸ್ ಮಾಡಿದರೆ, ಅದನ್ನು ಅವರು ಪ್ರೂವ್ ಮಾಡಿದರೆ ಅದನ್ನು ನಾನು ವಿಚಾರ ಮಾಡುತ್ತೇನೆ ಎಂದು ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಆದ್ದರಿಂದ ಇದು ಒಂದು ವಿಚಾರ ಮಾಡಬೇಕಾದಂತಹ ವಿಷಯ.

ರೆಂಕೋ ಫ್ಯಾಕ್ಟರಿಯನ್ನು ಮಾರಾಟ ಮಾಡುತ್ತಾರೆ ಎನ್ನುವ ಊಹಾಪೋಹ ಎದ್ದಿದೆ. ಈ ವಿಷಯವನ್ನು ಬಹಳ ಗಂಭೀರವಾಗಿ ಪರಿಶೀಲನೆ ಮಾಡಬೇಕು. ಶ್ರೀಮಾನ್ ಕೊಠಾವಲೆಯವರು ಪಬ್ಲಿಕ್ ಅಕೌಂಟ್ಸ್ ಕಮಿಟಿಯ ಅಧ್ಯಕ್ಷರಾಗಿದ್ದಾಗ ಕೈಗಾರಿಕೆಯ ಬಗ್ಗೆ ಕೆಲವು ವಿಷಯಗಳನ್ನು ಆಡಿಟ್ ರಿಪೋರ್ಟಿನಲ್ಲಿ ಬರೆದಿದ್ದಾರೆ. ಕೇಂದ್ರದಲ್ಲಿ ಇದ್ದಹಾಗೆ ಇಲ್ಲಿಯೂ ಕೂಡ ಶ್ರೀಮಾನ್ ಘೋರ್ಪಡೆಯವರ ಅಧ್ಯಕ್ಷತೆಯಲ್ಲಿ ಒಂದು ಪಬ್ಲಿಕ್ ಅಂಡರ್ ಟೇಕಿಂಗ್ ಕಮಿಟಿಯನ್ನು ಮಾಡಬೇಕು, ಅವರು ಪಬ್ಲಿಕ್ ಸೆಕ್ಟಾರ್ ಕೈಗಾರಿಕೆಗಳ ಕೆಲಸಗಳನ್ನು ವಿಚಾರಣೆ ಮಾಡಿ ಒಂದು ವರದಿಯನ್ನು ಕೊಡಬೇಕು, ಎಂದು ಶ್ರೀಮಾನ್ ಕೊಠಾವಳೆಯವರು ಬರೆದಿದ್ದರು. ಆ ಕಮಿಟಿಯನ್ನು ಮಾಡಿ ಅವರಿಗೆ ಕೊಡಬೇಕಾದ ಸ್ಟಾಫ್ ವಗೈರೆಯನ್ನು ಕೊಟ್ಟಿದ್ದಾರೆಯೋ ಏನೋ ಗೊತ್ತಿಲ್ಲ.

ಅಧ್ಯಕ್ಷರು.—ಅದಕ್ಕೆ ಕೊಡಬೇಕಾದ ಸ್ಟಾಫ್ ಅನ್ನು ಕೊಟ್ಟಿದೆ.

ಶ್ರೀ ಎಸ್. ಗೋಪಾಲಗೌಡ.—ನಮ್ಮ ರಾಜ್ಯದಲ್ಲಿ ಸಾಕಷ್ಟು ಕೈಗಾರಿಕೆಯನ್ನು ಅಭಿವೃದ್ಧಿ ಮಾಡಿಲ್ಲ. ನಮ್ಮ ರಾಜ್ಯದಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ಕೈಗಾರಿಕೋದ್ಯಮಿಗಳನ್ನು ಆಹ್ವಾನ ಮಾಡುವುದಕ್ಕೆ ನಮ್ಮ ಸರ್ಕಾರದವರು ಮುಂಬೈ ಮತ್ತು ಕಲ್ಕತ್ತಾಕ್ಕೆ ಹೋಗುವುದನ್ನು ನಾನು ಒಪ್ಪುವುದಿಲ್ಲ. ನಮ್ಮ ರಾಜ್ಯದಲ್ಲಿ ಕೈಗಾರಿಕೆಯನ್ನು ಸ್ಥಾಪನೆ ಮಾಡಿ ಅವುಗಳನ್ನು ಅಭಿವೃದ್ಧಿ ಮಾಡದೇ ಹೋದರೆ ನಿರುದ್ಯೋಗವನ್ನು ಪರಿಹಾರ ಮಾಡುವುದಕ್ಕಾಗುವುದಿಲ್ಲ. ಅದು ಬಹಳ ಕಷ್ಟವಾಗುತ್ತದೆ. ಈಗ ನಮ್ಮಲ್ಲಿರುವ ಕೈಗಾರಿಕೆಗಳಲ್ಲಿ ಲುಕ್ಸಾನು ತೋರಿಸಿ ಅವುಗಳನ್ನು ಬೇರೆಯವರಿಗೆ ಮಾರಾಟಮಾಡುವ ಪ್ರಯತ್ನ ಮಾಡುತ್ತಿದ್ದಾರೆ ಎಂದು ಗೊತ್ತಾಗಿದೆ. ಸಮಾಜವಾದದ ಹೆಸರಿನಲ್ಲಿ ಸಾರ್ವಜನಿಕ ಕ್ಷೇತ್ರದಲ್ಲಿ ಕೈಗಾರಿಕೆಗಳನ್ನು ಸ್ಥಾಪನೆಮಾಡಿ ಅದರಲ್ಲಿ ಫೇಲಾಗಿದ್ದಾರೆ. ಇದು ಆಡಳಿತದ ಅದಕ್ಷತೆಯನ್ನು ಅವಲಂಬಿಸಿದೆ.

ಈಗ 41 ಜನ ಕೈಗಾರಿಕೋದ್ಯಮಿಗಳು ಏನು ಒಂದು ಅರ್ಜಿಯನ್ನು ಕೊಟ್ಟಿದ್ದಾರೆ ಅದರಲ್ಲಿ ಈ ಕೈಗಾರಿಕೆ ಇಲಾಖೆಯ ಜಾಯಿಂಟ್ ಡೈರೆಕ್ಟರು 5 ಸಾವಿರ ರೂಪಾಯಿಗಳಿಂದ 30 ಸಾವಿರ

ರೂಪಾಯಿಗಳವರೆಗೂ ಲಂಚವನ್ನು ಪಡೆದುಕೊಳ್ಳುತ್ತಾರೆ ಎಂದು ಅರ್ಜಿಯಲ್ಲಿ ಬರೆದಿದ್ದಾರೆ. ಹೀಗಿರುವಾಗ ಇಂಥಾದ್ದನ್ನು ವಿಚಾರಣೆ ಮಾಡಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳದೇ ಹೋದರೆ ಪಬ್ಲಿಕ್ ಎಜಟೇಷನ್ ಆಗಬಹುದು ಎನಿಸುತ್ತದೆ. ಅವರು ಸ್ಪೆಸಿಫಿಕ್ ಆಗಿ ಅಲಿಗೇಷನ್ ಮಾಡಿದ್ದಾರೆ. ಅವರು ತಮ್ಮ ಅರ್ಜಿಯಲ್ಲಿ ಬರೆದಿದ್ದಾರೆ ಆ ಬಗ್ಗೆ ನಾವು ಸಾಕ್ಷಿ ಹೇಳುವುದಕ್ಕೆ ತಯಾರಾಗಿದ್ದೇವೆ ಎಂದು ಹೇಳಿದ್ದಾರೆ. ಅವರು ಎಲ್ಲಾ ವಿಷಯಗಳನ್ನು ತಿಳಿದು ಅರ್ಜಿಯನ್ನು ಬರೆದಿದ್ದಾರೆ. ಆದ್ದರಿಂದ ಇದಕ್ಕೆ ಮಾನ್ಯ ಮುಖ್ಯ ಮಂತ್ರಿಗಳಾಗಲೀ ಅಥವಾ ಶ್ರೀಮಾನ್ ರಾಜಶೇಖರ ಮೂರ್ತಿಯವರಾಗಲೀ ಉತ್ತರ ಕೊಡುತ್ತಾರೆಂದು ನಾನು ನಿರೀಕ್ಷಣೆ ಮಾಡುತ್ತೇವೆ.

Sri K. H. PATIL.—Sometimes the allegations are so serious that even the Minister concerned is not in a position to reply. In such matters I request that the matter should be investigated by the Chief Minister. It is the Chief Minister alone who can reply to Sri Gopala Gowda and none else.

2-00 P.M.

Sri M. RAJASEKHARA MURTHY.—The reason for REMCO incurring loss is because of accumulation of meters which were laying unsold. They having 8 lakhs metres which were not sold ; 5 Units were closed and only 3 units were working. Now the prices have gone up and next year it is possible to reach break-even point. Even the General Body has requested the Board and the Government, to take effective steps in this direction, and see the losses are avoided. The Managing Director has recommended some arrangement to be made. Due to the action taken, and higher prices of Metres the Factory is going to get profit. Formerly we thought there was no need to take further action. We moved the Government of India to take over, so that we can do something. But the Government of India was not willing to take it over. Now it will be continued as it is and there is no question of giving it away to private sector. It will be continued as a public Sector Industry. The Company is slowly recovering. With this reply, I request the Hon. Members to vote unanimously.

ಶ್ರೀ ಎ. ಪಿ. ಅಪ್ಪಣ್ಣ (ಕೈಗಾರಿಕೆ ಶಾಖೆಯ ಉಪಮಂತ್ರಿಗಳು).—ಮಾನ್ಯ ಸಭಾಪತಿಗಳೇ, ನಾನು ಬರೀ ಸಣ್ಣ ಕೈಗಾರಿಕ ಬಗ್ಗೆ ಕೆಲವು ಮಾತುಗಳನ್ನು ಹೇಳಲು ಇಚ್ಛಿಪಡುತ್ತೇನೆ. ಈ ಸಭೆಯ ಚರ್ಚೆಯಲ್ಲಿ ಭಾಗವಹಿಸಿದ ಅನೇಕ ಮಾನ್ಯ ಸದಸ್ಯರು ಈ ಬಗ್ಗೆ ಚೆನ್ನಾಗಿ ಮಾತನಾಡಿದ್ದು ಕಂಡು ಬರುವುದಿಲ್ಲ. ಅಲ್ಲದ ಸಮಯದ ಅಭಾವ ಕೂಡ ಈಗ ಇದೆ. ಶ್ರೀಮಾನ್ ಜ್ವಾಲನಯ್ಯನವರು ಒಂದು ಮಾತು ಒತ್ತಿ ಹೇಳಿದರು. ಸಣ್ಣ ಕೈಗಾರಿಕೆ ವಿಚಾರದಲ್ಲಿ ಬಹಳ ಕಡಿಮೆ ಹಣ ಒದಗಿಸಿದೆ, ದೊಡ್ಡ ಕೈಗಾರಿಕೆಗೆ ಹೆಚ್ಚು ಹಣ ಕೊಡುತ್ತಾರೆ, ಆದುದರಿಂದ ಸಣ್ಣ ಕೈಗಾರಿಕೆ ಸರಿಯಾಗಿ ಪ್ರಗತಿಯಾಗುತ್ತಿಲ್ಲ ಎಂದು ಅವರು ಆಪಾದನೆ ಮಾಡಿದರು. ನಾವು ಸಣ್ಣ ಕೈಗಾರಿಕೆಯ ಪ್ರಗತಿ ಪರಿಶೀಲಿಸಿ ನೋಡುವಾಗ ಬಡ್ಜೆಟ್ಟಿನಲ್ಲಿ ಎಷ್ಟು ಹಣ ಕೊಡುತ್ತೇನೆ ಎಂಬ ದೃಷ್ಟಿಯಿಂದ ಅದನ್ನು ನೋಡಿದರೆ ಅದು ಸಾಲದು. ಕೇಂದ್ರ ಸರಕಾರದಿಂದ ಬಂದಿರುವ ಹಣ, ರಾಜ್ಯ ಸರಕಾರ ಸ್ಥಾಪಿಸಿದ ಅನೇಕ ಕಾರ್ಪೋರೇಷನ್ನಿಂದ ಬಂದ ಹಣ ಒಟ್ಟಿಗೆ ತೆಗೆದುಕೊಂಡರ, ಈ ಭಾಗಕ್ಕೆ ಹರಿಯುವ ಹಣ ಹೆಚ್ಚಾಗಿ ಇದೆ ಎಂದು ಹೇಳಿದರೆ ತಪ್ಪಾಗಲಾರದು. ಕಳೆದ ವರ್ಷ 1969—70ರಲ್ಲಿ ಸ್ಟೇಟ್ ಎಡ್ ಇಂಡಸ್ಟ್ರಿಸ್‌ಗೆ 28 ಲಕ್ಷ ರೂ. ಕೊಟ್ಟಿದ್ದಾರೆ ಫೈನಾನ್ಸ್ ಕಾರ್ಪೋರೇಷನ್ನಿಂದ 60 ಲಕ್ಷ ರೂಗಳನ್ನು ಸಣ್ಣ ಕೈಗಾರಿಕೆಗೆ ಸಾಲ ಕೊಟ್ಟಿದ್ದಾರ. ಇದಲ್ಲದೆ ಬ್ಯಾಂಕ್ ಮೂಲಕ 10 ಕೋಟಿ ಸಣ್ಣ ಕೈಗಾರಿಕೆಗೆ ಕೊಟ್ಟಿರುವುದು ಕಡಿಮೆಯಾಗಲಾರದು. ಸಣ್ಣ ಕೈಗಾರಿಕೆಯ ಪ್ರಯೋಜನಕ್ಕೆ ಕೇಂದ್ರ ಸರಕಾರ ನಿರ್ಮಿಸಿದ ನ್ಯಾಷನಲ್ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಕಾರ್ಪೋರೇಷನ್ನಿಂದ 4.5 ಕೋಟಿ ರೂ. ಬೆಲೆ ಬಾಳುವ ಮೆಷಿನರಿ ಹೈಯರ್

(ಶ್ರೀ ಎ. ಪಿ. ಅಪ್ಪಣ್ಣ)

ಪರ್ಚೇಜ್ ಮೇಲೆ ಕೊಟ್ಟಿದ್ದಾರೆ 1969—70ರಲ್ಲಿ 61 ಲಕ್ಷ ರೂಪಾಯಿ ರೆಕಮೆಂಡ್ ಮಾಡಿ ಮೆಷಿನರಿ ಕೊಡಲಿಕ್ಕೆ ಒಪ್ಪಿಕೊಂಡಿದೆಯೆಂಬ ಅಂಶವನ್ನು ತಮ್ಮ ಮುಂದೆ ಇಡುತ್ತೇನೆ. ನಮ್ಮ ಮೈಸೂರು ರಾಜ್ಯದಲ್ಲಿಯು ಪ್ರಗತಿ ಯಾವ ರಾಜ್ಯಕ್ಕಿಂತಲೂ ಕಡಿಮೆ ಇಲ್ಲಾ ಎನ್ನುವ ವಿಚಾರವನ್ನು ತಮ್ಮ ಮುಂದೆ ಇಡಲು ಇಚ್ಛೆಪಡುತ್ತೇನೆ. ಈ ಭಾಗಕ್ಕೆ ಎಷ್ಟರ ಮಟ್ಟಿಗೆ ಪ್ರೋತ್ಸಾಹ ಕೊಡಬೇಕೋ ಅಷ್ಟು ಕೊಟ್ಟಿದೆ. ಇದನ್ನು ಇನ್ನೂ ಇಂಟೆನ್ಸಿವ್ ಆಗಿ ಮಾಡುತ್ತೇವೆ. ಕಳೆದ ವರ್ಷ ಎರಡು ಜಿಲ್ಲೆಗಳಲ್ಲಿ ಪ್ರೋತ್ಸಾಹ ಕೊಟ್ಟು ಇದನ್ನು ಇಂಟೆನ್ಸಿವ್ ಆಗಿ ಮಾಡಿದ್ದೇವೆ. ಐದುವರ್ಷದ ಹಿಂದೆ ನಮ್ಮ ರಾಜ್ಯದಲ್ಲಿ ನಾಲ್ಕು ಸಾವಿರ ಸ್ಮಾಲ್ ಸ್ಕೇಲ್ ಯುನಿಟ್ ಇದ್ದರೆ ಇವತ್ತು ಎಂಟು ಸಾವಿರ ಇವೆ. ಅಂದರೆ ಪ್ರಗತಿ ಡಬ್ಬಲ್ ಆಗಿದೆ ಎಂದು ಹೇಳಬಹುದು. ನಮ್ಮಲ್ಲಿ ನೂರಕ್ಕೆ ನೂರರಷ್ಟು ಪ್ರಗತಿಯಾಗಿದೆ ಎಂದು ನಾನು ಪ್ರತಿಪಾದನೆ ಮಾಡುವುದಿಲ್ಲ. ಇಷ್ಟು ಪ್ರಗತಿ ಸಾಧಿಸಿದ್ದರೂ ಇನ್ನೂ ಪ್ರಗತಿ ಸಾಧಿಸಲಿಕ್ಕೆ ಅವಕಾಶ ಇದೆ. ಪ್ರೈಸ್ ಪ್ರಿಫರೆನ್ಸ್ ವಿಚಾರದಲ್ಲಿ ಹೆಚ್ಚು ಪ್ರೋತ್ಸಾಹ ಕೊಡುತ್ತಿಲ್ಲ ಎಂದು ಶ್ರೀ ಜ್ವಾಲನಯ್ಯನವರು ಒಂದು ಮಾತು ಹೇಳಿದರು. 52 ಐಟಂಗಳು ಸ್ಮಾಲ್ ಸ್ಕೇಲ್ ಸೆಕ್ಟರಿನಲ್ಲಿ ಮಾಡಲಾಗುತ್ತಿದೆ. ಈ ಸಂಖ್ಯೆಯನ್ನು ಇನ್ನೂ ಏರಿಸಬೇಕು ಎಂಬ ವಿಚಾರ ಇದೆ. ಸಣ್ಣ ಕೈಗಾರಿಕೆಯಿಂದ ಹೆಚ್ಚು ಸಾಮಾಗ್ರಿಗಳನ್ನು ನೇರವಾಗಿ ಖರೀದಿ ಮಾಡುವುದಕ್ಕೆ ಆಲೋಚನೆ ಮಾಡುತ್ತಿದ್ದೇವೆ. ಇನ್ನು ವಿರೋಧ ಪಕ್ಷದ ನಾಯಕರಾದ ಮಾನ್ಯ ಶ್ರೀ ಶಿವಪ್ಪನವರ, ಶ್ರೀ ಜ್ವಾಲನಯ್ಯನವರ, ಶ್ರೀ ಎಚ್. ಡಿ. ದೇವೇಗೌಡರ ಬಂಧು ಮಿತ್ರರಿಗೆ ಸ್ಟೈನ್‌ಲೆಸ್ ಸ್ಟೀಲ್ ಕೋಟಾ ಸರಕಾರ ಕೊಟ್ಟಿದೆ ಎಂಬ ಆಪಾದನೆಯನ್ನು ಶ್ರೀಮಾನ್ ನಂಜೇಗೌಡರು ಮಾಡಿದರು.

ಶ್ರೀ ಎಸ್. ಶಿವಪ್ಪ.—ಆಗ್ಗೆ ನಾನು ಸಭೆಯಲ್ಲಿ ಇರಲಿಲ್ಲ. ಆ ಆಪಾದನೆಯನ್ನು ನಾನು ಚಾಲೆಂಜು ಮಾಡುತ್ತೇನೆ. It is a mischievous allegation. I want to challenge that I want an enquiry to be held. The Hon. Member who has made that allegation may come to my village and verify whether any of my relatives are favoured by Government. On account of my being a M. L. A. my whole family has suffered because I do not like to have any favour from anybody. I do not want to go to their rescue. The hon. Member must accept my challenge for an enquiry. You must hold an enquiry.

ಶ್ರೀ ಎ. ಪಿ. ಅಪ್ಪಣ್ಣ.—ಅವರು ಹೇಳತಕ್ಕ ಮಾತುಗಳಲ್ಲಿ ಅರ್ಥವಿಲ್ಲ ಎಂಬುದನ್ನು ಸಮರ್ಥನೆ ಮಾಡುವುದಕ್ಕೆ ನಾನು ಈ ಮಾತುಗಳನ್ನು ಹೇಳುತ್ತಿದ್ದೇನೆ. ಶ್ರೀಮಾನ್ ದೇವೇಗೌಡರಾಗಲಿ ಜ್ವಾಲನಯ್ಯನವರಾಗಲಿ ಯಾರೂ ಈ ವಿಚಾರದಲ್ಲಿ ಅವರ ಸಂಬಂಧಪಟ್ಟವರಿಗೆ ಇಲ್ಲವೇ ಅವರಿಗೆ ಪರಿಚಯವಿರತಕ್ಕವರಿಗೆ ಕೋಟಾ ಕೊಡಬೇಕೆಂದು ಸರ್ಕಾರದವರ ಮೇಲೆ ಯಾವ ಸಂದರ್ಭದಲ್ಲೂ ಅವರು ಯಾವ ಪ್ರಭಾವವನ್ನೂ ಬೀರಿಲ್ಲ. ಹಾಗೂ ಒಂದು ವೇಳೆ ಅವರ ಇಷ್ಟಮಿತ್ರರಿಗೆ ಏನಾದರೂ ಕೋಟಾ ದೊರೆತಿದ್ದರೆ ಅದು ಸರ್ಕಾರದ ಪ್ರಭಾವದಿಂದ ಖಂಡಿತ ಅಲ್ಲ ಎಂದು ಹೇಳುತ್ತೇನೆ. ಒಂದುವೇಳೆ ವಿರೋಧಪಕ್ಷದ ನಾಯಕರ ತಮ್ಮ ವಿರೋಧಪಕ್ಷದ ನಾಯಕರು ರಾಜಕೀಯಕ್ಕೆ ಪ್ರವೇಶಮಾಡುವ ಮುನ್ನವೇ ಬಹಳ ವರ್ಷಕಾಲಗಳಿಂದ ಈ ತಗಡನ್ನು ತರಿಸಿ ಅವರ ವ್ಯವಹಾರ ಮಾಡುತ್ತಿದ್ದರೆ ಈ ದಿವಸ ಅವರು ವಿರೋಧಪಕ್ಷದ ನಾಯಕರಾಗಿದ್ದುದರಿಂದ ಅವರ ತಮ್ಮನಿಗೆ ಕೋಟಾ ಸಿಕ್ಕಿತು ಎಂದು ವಾದಮಾಡುವುದು ಸರಿಯಲ್ಲ. ಈ ವಿಚಾರದಲ್ಲಿ ಮಾನ್ಯ ವಿರೋಧಪಕ್ಷದ ನಾಯಕರಾಗಲೀ ಶ್ರೀಮಾನ್ ಜ್ವಾಲನಯ್ಯನವರಾಗಲೀ ಅಥವಾ ಶ್ರೀ ದೇವೇಗೌಡರಾಗಲಿ ಇವರಾರೂ ಸರ್ಕಾರಕ್ಕೆ ಕೋಟಾ ಕೊಡತಕ್ಕ ವಿಚಾರದಲ್ಲಿ ಒತ್ತಾಯ ಮಾಡಲಿಲ್ಲ ಎಂಬುದನ್ನು ನಾನು ಸಾರಿ ಸಾರಿ ಹೇಳುತ್ತೇನೆ. ಆದರೆ ಆಕಸ್ಮಿಕವಾಗಿ ಆ ಕೋಟಾ ದೊರೆತಿರತಕ್ಕವರು ಇಲ್ಲಿನ ಕೆಲವು ಸದಸ್ಯರಿಗೆ ಸಂಬಂಧವುಳ್ಳವರಾಗಿರಬಹುದು. ಆದರೆ ಆ ಸಂಬಂಧವನ್ನು ಗಮನದಲ್ಲಿಟ್ಟು ಸರ್ಕಾರದವರು ಈ ಕೋಟಾ ಕೊಟ್ಟಿಲ್ಲವೆಂದು ನಾನು ಖಚಿತವಾಗಿ ಹೇಳುತ್ತೇನೆ.

ಶ್ರೀ ಬಿ. ಪಿ. ಗಂಗಾಧರ್.—ತಮಗೆ ತಿಳಿಯುದಂತೆ ಆ ಸಂಬಂಧೀಕರಿಗೆ ಕೋಟಾ ಸಿಕ್ಕಿರಬಹುದು ಎಂದು ತಾವು ಹೇಳುತ್ತಿದ್ದೀರಲ್ಲವೇ?

ಶ್ರೀ ಎ. ಪಿ. ಅಪ್ಪಣ್ಣ.—ಇರಬಹುದು. ಆದರೆ............

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕರ್ಣಾಟಕ ಟ್ರೇಡರ್ಸಿಗೆ 25 ಲಕ್ಷ ರೂಪಾಯಿಗಳ ಸ್ಟೇಯಿನ್‌ಲೆಸ್ ಸ್ಟೀಲಿನ ಕೋಟಾವನ್ನು ಇಂಪೋರ್ಟು ಮಾಡಿಕೊಳ್ಳುವುದಕ್ಕೆ ಅವರಿಗೆ ಅವಕಾಶವಿದೆ. ಅವರು ನೂರು ರೂಪಾಯಿಗಳ ಬೆಲೆಯ ಮಾಲನ್ನು 285 ರೂಪಾಯಿಗಳಿಗೆ ಮಾರಾಟ ಮಾಡಿ ಅದರಲ್ಲಿ 85 ರೂಗಳನ್ನು ಅನ್ ಅಕೌಂಟೆಡ್ ಆಗಿ ಪಡೆದು ಉಳಿದ ಹಣವನ್ನು ಅಂದರೆ 200 ರೂಪಾಯಿ ಗಳನ್ನು ಚೆಕ್‌ರೂಪದಲ್ಲಿ ಪಡೆದಿದ್ದಾರೆಂಬ ವಿಷಯ ಎಲ್ಲೆಲ್ಲೂ ಜನಜನಿತವಾಗಿದೆ. ಇದರ ಸತ್ಯಾಂಶ ವೇನು ಎಂಬುದನ್ನು ಮಾನ್ಯ ಮಂತ್ರಿಗಳು ದಯಮಾಡಿ ಹೇಳಬೇಕು.

ಶ್ರೀ ಎ. ಪಿ. ಅಪ್ಪಣ್ಣ.—ಇನ್ನು ಕೆಲವು ನಿಮಿಷಗಳಲ್ಲಿ......

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸ್ವಾಮಿ, ನಾನು ಕೇಳಿದ ಪ್ರಶ್ನೆಗೆ ಉತ್ತರವನ್ನು ಕೊಡು ವುದಿಲ್ಲವೇ?

ಶ್ರೀ ಎ. ಪಿ. ಅಪ್ಪಣ್ಣ.—ಮಾನ್ಯ ಗೋಪಾಲಗೌಡರೂ ಮತ್ತು ಎನ್. ಎ. ಚನ್ನೇಗೌಡರೂ ಒಂದು ಮಾತನ್ನು ಹೇಳಿದ್ದಾರೆ; ಅದೇನು ಎಂದರೆ 41 ಜನ ಉದ್ಯಮದಾರರು ಒಟ್ಟಾಗಿ ಸೇರಿ ಕೊಂಡು ಮಾನ್ಯ ಮುಖ್ಯ ಮಂತ್ರಿಗಳಿಗೆ ಒಂದು ಕಾಗದವನ್ನು ಬರೆದಿದ್ದಾರೆ ಎಂದು. ಆದರೆ ಆ ಕಾಗದದಲ್ಲಿ 41 ಜನರು ರುಜುಮಾಡಿದ್ದಾರೋ ಇಲ್ಲವೋ ಎಂಬ ವಿಷಯ ನನಗೆ ತಿಳಿ ಯದು. ಆದರೆ ಆ ಕಾಗದದ ಪ್ರತಿ ನನಗೂ ಒಂದು ಬಂದಿದೆ. ಮತ್ತು ಕೈಗಾರಿಕಾ ಸಚಿವರಿಗೂ ಒಂದು ಬಂದಿದೆ. ಆ ಎರಡರಲ್ಲೂ 41 ಜನರ ರುಜುಗಳಿಲ್ಲ. ಹಾಗೆ ಈ ಮಾನ್ಯ ಸಭೆಯ ಸದಸ್ಯರು ಗಳಿಗೂ ಕಳುಹಿಸಿರತಕ್ಕ ಕಾಗದದಲ್ಲಿ ರುಜುಗಳಿಲ್ಲ. ಹೀಗೆ ಒಂದು ಆರೋಪಣೆಮಾಡುವುದಕ್ಕೆ ಒಂದು ಅವಕಾಶವೂ ಉಂಟು. ಹಿಂದಕ್ಕೆ ಯಾರು ಈ ಕೈಗಾರಿಕೆಯ ಹೆಸರಿನಲ್ಲಿ ಲಾಭಪಡೆಯುತ್ತಿ ದ್ದರು ಅವರಿಗೆ ಈಗ ಇದರ ಅವಕಾಶ ತಪ್ಪಿದೆ. ಆ ಸಿಟ್ಟಿಗೆ ಹೀಗೆಲ್ಲಾ ಮಾಡುವುದಕ್ಕೆ ಒಂದು ಅವಕಾಶ ಕೆಲವರಿಗುಂಟು. ಅಂಥ ಕೆಲವು ಜನ ಸೇರಿಕೊಂಡು ಡೈರೆಕ್ಟರ್ ಮತ್ತು ಜಾಯಿಂಟ್ ಡೈರೆಕ್ಟರ್ ಮತ್ತು ಇನ್ನೂ ಕೆಲವು ಅಧಿಕಾರಿಗಳು 5 ಸಾವಿರದಿಂದ 30 ಸಾವಿರದವರೆಗೂ ಲಾಭ ಸಂಪಾದನೆ ಮಾಡುತ್ತಿದ್ದಾರೆಂದು ಬರೆದಿದ್ದಾರೆ ಕೊನೆಯಲ್ಲಿ ಯುವರ್ಸ್ ಫೈತ್‌ಫುಲಿ ಅಷ್ಟು ಮಾತ್ರ ಇವೆಯೇ ವಿನಾ ಅದರಲ್ಲಿ ಯಾರ ರುಜುವೂ ಇರುವುದಿಲ್ಲ. ಈ ವಿಚಾರ ನಮ್ಮ ಗಮನಕ್ಕೆ ಬಂದನಂತರ ನಾವು ಅದರ ಸತ್ಯಾಸತ್ಯವನ್ನು ಹಾಗೂ ಅದರಲ್ಲಿ ತಿರುಳೆಷ್ಟಿದೆ ಎಂಬುದನ್ನು ತಿಳಿದು ಕೊಳ್ಳುವುದಕ್ಕೆ ನಮ್ಮ ಅಧಿಕಾರಿಗಳಿಗೆ ಆ ಕಾಗದವನ್ನು ಕಳುಹಿಸಿದ್ದೇವೆ ಅದರ ವಿಚಾರಣೆಯು ಮುಗಿದ ನಂತರ ಅದರ ಬಂಡವಾಳ ಗೊತ್ತಾಗಬೇಕು. ಈ ದಿವಸ ಮೈಸೂರು ರಾಜ್ಯದಲ್ಲಿ ಕಳೆದ ಒಂದು ವರ್ಷದಿಂದ ಇಂಪೋರ್ಟೆಡ್ ರಾ ಮೆಟೀರಿಯಲ್ಸನ್ನು ಕೆಲವೇ ಕೆಲವು ಉದ್ಯಮಿಗಳವರ ಕೈಲಿದ್ದು ಅವರು ಅದರಿಂದ ಬಹಳ ಹಣವನ್ನು ಮಾಡುತ್ತಿದ್ದರು, ಅದನ್ನು ಇತ್ತೀಚೆಗೆ ತಪ್ಪಿಸ ಲಾಗಿದೆ. ಹೀಗಾಗಿ ಅವರಿಗೆ ಈಗ ಒಂದು ಪೆಟ್ಟು ಬಿದ್ದಿದೆ. ಆದ್ದರಿಂದ ಆ ಜನರು ಈಗ ಈ ಒಂದು ಕಾರ್ಯಕ್ಕೆ ಕೈಹಾಕಿದ್ದಾರೆ; ಅಲ್ಲದೆ ಈ ಜನರೇ ಬೆಂಗಳೂರಲ್ಲಿ ಬಹಳ ಜಾಸ್ತಿ ಇದ್ದಾರೆ. ಇನ್ನೂ ಹೇಳಬೇಕೆಂದರೆ ಇದಕ್ಕೆ ಸಂಬಂಧಪಟ್ಟ ಒಬ್ಬ ಅಧಿಕಾರಿಯು ಮಗನು ಶಾಲೆಗೆ ಹೋಗುವುದಕ್ಕೆ ಬಿಡ ದಂತೆ ತೊಂದರೆ ಕೊಡುತ್ತಿದ್ದಾರೆಂಬ ವಿಚಾರ ತಿಳಿದಮೇಲೆ ಅವರಿಗೆ ಪೋಲೀಸ್ ಪ್ರೊಟೆಕ್ಷನ್ ಕೊಡಬೇಕಾದ ಪ್ರಸಂಗ ಬಂದಿತ್ತು. ಅಂಥ ಜನರು ಇಲ್ಲಿ ಇರುವುದರಿಂದ ಅವರೇ ಈ ರೀತಿ ಒಂದು ಪತ್ರವನ್ನು ಬರೆದು ಡೈರೆಕ್ಟರೂ ಮತ್ತು ಜಾಯಿಂಟ್ ಡೈರೆಕ್ಟರೂ 5 ಸಾವಿರದಿಂದ 30 ಸಾವಿರ ದವರೆಗೂ ಲಂಚವನ್ನು ಪಡೆಯುತ್ತಿದ್ದಾರೆ ಎಂದು ಆ ಕಾಗದದಲ್ಲಿ ಬರೆದಿದ್ದಾರೆ. ಇವರ ಬರವಣಿಗೆ ಯಲ್ಲಿ ಅಂಥ ಒಂದು ಸತ್ಯಾಂಶವಿರಬೇಕಾದರೆ ಇಲ್ಲಿ ಕನಿಷ್ಠಪಕ್ಷ 30 ಸಾವಿರ ರೂಪಾಯಿಗಳ ಇಂಪೋರ್ಟನ್ನು ಪಡೆದಿರತಕ್ಕ ಲೈಸೆನ್ಸ್‌ಹೋಲ್ಡರು ಒಬ್ಬರಾದರೂ ಇರಲೇಬೇಕಲ್ಲವೇ? ಹಾಲಿ ಲೈಸೆನ್ಸ್ ಪಡೆದಿರತಕ್ಕವರಲ್ಲಿ ಯಾರಿಗೂ 10 ಸಾವಿರಕ್ಕೆ ಮೇಲೆ ಲೈಸೆನ್ಸನ್ನು ಕೊಟ್ಟಿಲ್ಲ. ಅಂದಾಗ ಇದೊಂದು ಸುಳ್ಳಿನ ಕಂತೆ ಎಂಬುದು ಮೇಲೆ ಕಾಣುತ್ತದೆ. ಹಾಗೂ ನಾವು ಈ ವಿಷಯದಲ್ಲಿ ಏನು ಸತ್ಯಾಂಶ ಅಡಗಿದೆ ಎಂಬುದನ್ನು ತಿಳಿದುಕೊಳ್ಳಲು ಅಧಿಕಾರಿಗಳಿಗೆ ವಿಚಾರಣೆ ಮಾಡುವುದಕ್ಕೆ ಕಳುಹಿಸಿದ್ದೇವೆ. ಹಾಗಿರುವಾಗ ಇದರ ಬಗ್ಗೆ ವಿನಾ ಕಾರಣ ಒಬ್ಬ ದಕ್ಷ ಹಾಗೂ ನಿಸ್ಪೃಹ ಅಧಿಕಾರಿಯ ಬಗ್ಗೆ ವಿಚಾರಣೆ ನಡೆಸಬೇಕೆಂದರೆ ಅವರ ಮನಸ್ಸಿಗೆ ನೋವಾಗುವುದಲ್ಲದೆ ದಕ್ಷತೆ ಯಿಂದ ಕೆಲಸ ಮಾಡತಕ್ಕ ಅಧಿಕಾರಿಗಳಿಗೆ ಕೆಲಸ ಮಾಡುವ ಉತ್ತೇಜನ ಕಡಮೆಯಾಗುತ್ತದೆ.

ಇನ್ನು 1969–70ರಲ್ಲಿ ಬಿ. ಪಿ. ಷೀಟುಗಳಿಗೂ ಮತ್ತು ಜಿ. ಪಿ. ಷೀಟುಗಳಿಗೂ ಅಪ್ಲಿಕೇಷನ್ ಹಾಕಿಕೊಂಡಿದ್ದವರ ಪೈಕಿ ಸರ್ಕಾರದವರು ಜಿ. ಪಿ. ಷೀಟ್ ಲೈಸೆನ್ಸಿಗೆ ಶಿಫಾರ್ಸ್‌ಮಾಡಿದ್ದುದು 347 ಜನಕ್ಕೆ ಮಾತ್ರ ಮತ್ತು ಜಿ. ಪಿ. ಷೀಟುಗಳಿಗೆ ಶಿಫಾರ್ಸ್‌ಮಾಡಿದ್ದುದು 174 ಜನಕ್ಕೆ ಮಾತ್ರ ಅಂದರೆ ಬಿ. ಪಿ. ಷೀಟಿಗೆ ಅರ್ಜಿಹಾಕಿದ್ದವರು 1141 ಜನರು ಮತ್ತು ಬಿ. ಪಿ. ಷೀಟಿಗೆ ಅರ್ಜಿಹಾಕಿದ್ದ ವರು 787 ಜನರು. ಬಿ. ಪಿ. ಷೀಟ್‌ಗೆ ರೆಕಮಂಡ್ ಮಾಡಿರತಕ್ಕ 347 ಅಪ್ಲಿಕೇಷನ್‌ಗಳಿಗೆ ಕೊಡತಕ್ಕ

(ಶ್ರೀ ಎ. ಪಿ. ಅಪ್ಪಣ್ಣ)

ಕೋಟಾ ಅದನ್ನು ಕೇಂದ್ರದವರು ಮಂಜೂರುಮಾಡುತ್ತಾರೆ, ಇದು 34 ಲಕ್ಷ 70 ಸಾವಿರ ಬೆಲೆಯುದು ಜಿ. ಪಿ. ಷೀಟುಗಳಿಗೆ ಕೊಡತಕ್ಕ ಕೋಟಾ ಬೆಲೆ 5 ಲಕ್ಷ 22 ಸಾವಿರದ್ದು ಮಾತ್ರ.

ಇದು ಏನು ತೋರಿಸುತ್ತದೆ ಎಂದರೆ ಬಹುಶಃ ಲಂಚ ತೆಗೆದುಕೊಂಡು ಹೆಚ್ಚಾಗಿ ಕೋಟಾ ಕೊಡುವುದಾಗಿದ್ದರೆ ಇಷ್ಟು ರಿಜೆಕ್ಷನ್ ಬರಲಿಕ್ಕೆ ಕಾರಣವಿಲ್ಲ. ಅಷ್ಟು ರಿಜೆಕ್ಷನ್ ಮಾಡಬೇಕಾಗಿದ್ದರೆ ಬಹುಶಃ ಇದನ್ನು ನಿಷ್ಪಕ್ಷಪಾತದಿಂದ ಮಾಡಿದ್ದಾರೆ ಎಂದು ಹೇಳಬಹುದು. ಇದನ್ನು ಪಕ್ಷಪಾತದೃಷ್ಟಿಯಿಂದ ಮಾಡಿದ್ದಾರೆ ಅನ್ನುವುದಾಗಲಿ ಅಥವಾ ಬೇರೆ ದೃಷ್ಟಿಯಿಂದ ಇದನ್ನು ಮಾಡಿದ್ದಾರೆ ಅನ್ನುವುದಾಗಲಿ ಹೇಳುವುದಕ್ಕೆ ಸಾಧ್ಯವಿಲ್ಲ. ಬೆಂಗಳೂರಿನಲ್ಲಿ ಈರೀತಿ ಹೊಸ ಲೈಸನ್ಸ್ ಪಡೆಯುವವರ ಸಂಖ್ಯೆ ಜಾಸ್ತಿಯಾಗಿದೆ ಎಂದು ಮಾನ್ಯ ಸದಸ್ಯರು ಹೇಳುತ್ತಾರೆ. ಆದರೆ ಬೆಂಗಳೂರಿನಲ್ಲಿ ಹೊಸ ಇಂಡಸ್ಟ್ರೀಸ್ ತೆರೆಯಲಿಕ್ಕೆ ಬಿಡುವುದಿಲ್ಲ ಎಂದು ನಿಲುವನ್ನು ತಾಳಿದ ಮೇಲೆ ಅವರು ಹಾಸನ, ಚಿಕ್ಕಮಗಳೂರು, ತುಮಕೂರು ಇಂತಹ ಜಿಲ್ಲಾ ಕೇಂದ್ರಗಳಿಗೆ ಹೋಗಿ ಅಲ್ಲಿಯ ಮುನಿಸಿಪಾಲಿಟಿಗೆ ಲೈಸನ್ಸ್ ಅಪ್ಲೈ ಮಾಡುವವರ ಸಂಖ್ಯೆಯೂ ಜಾಸ್ತಿಯಾಗಿದೆ ಇದರಿಂದಾಗಿ ಅಲ್ಲಿಯ ಮನೆ ಬಾಡಿಗೆಯೂ ಜಾಸ್ತಿಯಾಗಿದೆ.

Sri B. P. GANGADHAR.—In Tumkur also we see many sign boards of stainless steel manufacturers, but I feel they are disposing it of otherwise and making money. That is why I was suggesting that instead of giving these sheets it is better to convert them into vessels so that the poor people can get these vessels at cheaper rates.

Sri A. P. APPANNA.—We know that all these people have moved to district headquarter places, because we have taken a decision that no new industry should come up in Bangalore. I agree with the hon. Member. But, the quota is not allotted to the State. It is given on the individual imported licence issued on the basis of the recommendation made by the State Government. Supposing we do not recommend even a single case, then the State is to lose in this direction.

Sri D. DEVARAJ URS.—Sir, I have been very carefully following the line of argument of the Hon. Deputy Minister. We are not suggesting that they should prevent such spurious companies coming up by not recommending. Our argument is that they are not recommending the right type of industrialists. That has got to be examined.

Sri A. P. APPANNA.—Those people who are indulging in these sort of activities are cleverer than people who investigate. I can only say that we have been trying our best to minimise such cases. We cannot say that we have eradicated these people. We are relying on the reports of the departmental officers. I cannot say all of them are perfect ; there are loopholes, I agree.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಸ್ವಾಮಿ, ಈ ಸ್ಟೈನ್‌ಲೆಸ್ ಸ್ಟೀಲ್ ಕೋಟಾವನ್ನು ಯಾರು ದುರುಪಯೋಗ ಮಾಡಿ ಬ್ಲಾಕ್ ಮಾರ್ಕೆಟ್‌ನಲ್ಲಿ ಮಾರಿದ್ದಾರೋ ಅಂಥಹವರನ್ನು ವಿಚಾರಣೆ ಮಾಡಲಿಲ್ಲ. ಎಷ್ಟು ಸಾರಿ ಹೇಳಿದರೂ ಅವರು ಖಾಸಗಿಯವರಿಗೆ ಕೊಡತಕ್ಕಂಥ ಲೈಸನ್ಸ್ ಬಗ್ಗೆ ಹೇಳುತ್ತಾರೆಯೇ ಹೊರತು ಬೇರೆ ಯಾವುದೂ ಹೇಳುವುದಿಲ್ಲ.

ಶ್ರೀ ಎ. ಪಿ. ಅಪ್ಪಣ್ಣ.—ಈಗ ನಾನು ಮೊದಲನೇ ಪ್ರಶ್ನೆಗೆ ಜವಾಬು ಹೇಳುತ್ತಿದ್ದೇನೆ. ಅನಂತರ ಶ್ರೀಮಾನ್ ಹುಚ್ಚಮಾಸ್ತಿ ಗೌಡರು ಕೇಳುವ ಪ್ರಶ್ನೆಗೆ ಜವಾಬು ಹೇಳುತ್ತೇನೆ. ಕಳೆದ ವರ್ಷ ಈರೀತಿ ದುರ್ವ್ಯವಹಾರದಲ್ಲಿದ್ದ 53 ಸಂಸ್ಥೆಗಳನ್ನು ಹಿಡಿದು ಕೇಂದ್ರಕ್ಕೆ ಬರೆದು ಅವರಿಗೆ ಇನ್ನು ಮೇಲೆ ಇಂಪೋರ್ಟ್ ಲೈಸನ್ಸ್ ಕೊಡ ಕೂಡದು ಅವರು ಬ್ಲಾಕ್‌ನಲ್ಲಿ ಮಾರುವುದಕ್ಕೆ ಪ್ರಯತ್ನ ಮಾಡಿದ್ದಾರೆ ಎಂದು ತಿಳಿಸಿದೆವು. ಇದರಲ್ಲಿ ಎಷ್ಟು ಅತ್ಯಾಚಾರ ನಡೆದಿವೆ ಎನ್ನುವುದನ್ನು

ಪರೀಕ್ಷೆ ಮಾಡುತ್ತೇನೆ. ಅದರಲ್ಲಿ ಪೂರ್ಣ ಸತ್ಯಾಂಶ ಏನು ಎನ್ನುವುದನ್ನು ನೋಡಬೇಕು. ಇದರಲ್ಲಿ ಪ್ರಿಮಾಫೇಸಿ ಕೇಸು ಇದೆಯೇ ಎನ್ನುವುದನ್ನು ನೋಡಬೇಕು.

ಶ್ರೀ ಎಸ್. ಗೋಪಾಲ ಗೌಡ.—ಮಾನ್ಯ ಮಂತ್ರಿಗಳು ಹೇಳಿದ್ದು ನಿಜ. ಆ ದೂರಿನಲ್ಲಿ ರುಜು ಹಾಕದೇ ಇದ್ದುದರಿಂದ ವಿಚಾರಣೆ ಮಾಡುವುದಕ್ಕೆ ಬರುವುದಿಲ್ಲ ಎಂದು ಉತ್ತರ ಕೊಟ್ಟಿದ್ದಾರೆ. 41 ಕೈಗಾರಿಕೋದ್ಯಮಿಗಳು ಮುಖ್ಯ ಮಂತ್ರಿಗಳಿಗೆ, ಇತರ ಮಂತ್ರಿಗಳಿಗೆ, ಶಾಸಕರಿಗೆ ಕಾಗದ ಬರೆದಿದ್ದಾರೆ. ಈ ಪತ್ರ ಯಾರು ಬರೆದಿದ್ದಾರೆ, ಯಾರು ರುಜು ಮಾಡಿದ್ದಾರೆ, ಇದಕ್ಕೆ ಇಲಾಖೆಯವರೇ ಕಾರಣರೇ ? ಇದನ್ನು ಸರ್ಕಾರದವರೇ ವಿಚಾರಣೆ ಮಾಡುವುದಾದರೆ ನಾವು ರುಜುವಾತು ಕೊಡುತ್ತೇನೆ ನೀವು ರುಜುವಾತು ಕೊಡಬೇಕು. ಇದೆಲ್ಲಾ ವಿಚಾರಣೆ ಮಾಡುವಂಥಾ ವಿಷಯ. ಈಗ ಅದು ತಮ್ಮಲ್ಲಿ ಬಂದಿದೆ. ಅದನ್ನು ಇಲ್ಲಿನ ವಿಜಿಲೆನ್ಸ್ ಕಮೀಷನ್‌ಗಾದರೂ ಕಳುಹಿಸಿ ಅಥವಾ ಕೇಂದ್ರ ವಿಜಿಲೆನ್ಸ್ ಕಮಿಷನ್‌ಗಾದರೂ ಕಳುಹಿಸಿ.

ಶ್ರೀ ಎ. ಪಿ. ಅಪ್ಪಣ್ಣ.—ಮೈಸೂರು ರಾಜ್ಯದಲ್ಲಿ ಸಣ್ಣ ಕೈಗಾರಿಕೋದ್ಯಮಿಗಳ ಸಂಸ್ಥೆ ಇದೆ. 41 ಜನ ಇದರಲ್ಲಿ ಅತೃಪ್ತಿ ಪಟ್ಟಿದ್ದಾರೆ. ಮೈಸೂರು ಸ್ಟೇಟ್ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಅಸೋಸಿಯೇಷನ್ ಮುಖಾಂತರ ಇದನ್ನು ನಮ್ಮ ಗಮನಕ್ಕೆ ತರಬಹುದಾಗಿತ್ತು.

ಶ್ರೀ ಎಸ್. ಗೋಪಾಲಗೌಡ.—ಈಗ ನಾವು ಹೇಳುವುದನ್ನು ನೋಡಿದರೆ ಸತೀಶ ಚಂದ್ರರವರಿಗೆ ಬರೆದ ಹಾಗೆ ಕಾಣುತ್ತದೆ. ಇದರ ಬಗ್ಗೆ ಸರ್ಕಾರ ಹೇಳದೆ ಹೋದರೆ, ಇದು ಎಲ್ಲಿ ಟೈಪ್ ಆಗಿದೆ ಏನಾಗಿದೆ ಎನ್ನುವುದನ್ನು ನಾನೇ ಬೇಕಾದರೆ ತಪಾಸಣೆ ಮಾಡಿಕೊಡುತ್ತೇನೆ.

ಶ್ರೀ ಬಿ. ಪಿ. ಗಂಗಾಧರ್.—ಈ ಅಪ್ಲಿಕೇಷನ್ ಅನಾನಿಮಸ್ ಆಗಲಿ ಅಥವಾ ಸುದಾನಿಮಸ್ ಆಗಲಿ ಅದನ್ನು ಎನ್‌ಕ್ವೈರಿ ಮಾಡುವುದಕ್ಕೆ ಸಾಧ್ಯ ಇದೆ. ಈ ರೀತಿ ಎನ್‌ಕ್ವೈರಿ ಮಾಡದೆ ಹೋದರೆ ಯಾರಾದರೂ ಕೆಲಸ ಮಾಡುವುದಕ್ಕಾಗುತ್ತದೆಯೇ ?

Sri A. P. APPANNA.—That is what is I am telling. There is Small Scale Industries Association in all the districts and they are affiliated to the All Mysore Small Scale Industries Association. If there is any such grievance against an officer, there is ample opportunity for this Association to represent to the Government. I want to bring to the notice of the hon. Member Sri Gopala Gowda that most of these bogus industries are not members of the Small Scale Industries Association, because the Small Scale Industries themselves are not entertaining them. Whenever they do not find entry into the Association they cannot come through the Association. That is why we have recognised the all-Mysore Small Scale Industries Association. If it is a fact that 41 people are aggrieved by this, this is a just case to refer it to the Association. The very fact that these people are not members of the Association, shows that these are bogus units and they want to harm the officers who are strictly implementing the policies of the Government. We are trying our best to curb such people and the co-operation of the hon. Members in this behalf is solicited.

ಈ ವಿಚಾರದಲ್ಲಿ ಮಾನ್ಯ ಸದಸ್ಯರು ಬಹಳ ಸಹಕಾರವನ್ನು ನೀಡಿದ್ದಾರೆ. ಯಾವ ಸಂದರ್ಭದಲ್ಲಿಯೇ ಆಗಲೀ ಬೋಗಸ್ ಇಂಡಸ್ಟ್ರೀಗಳನ್ನು ಪತ್ತೆ ಹಚ್ಚಲು ಮಾನ್ಯ ಸದಸ್ಯರು ಇದೇ ರೀತಿಯ ಸಹಕಾರವನ್ನು ಕೊಟ್ಟಿದ್ದೇ ಆದರೆ ಬೋಗಸ್ ಇಂಡಸ್ಟ್ರೀಗಳ ಬಗ್ಗೆ ತಕ್ಕ ಕ್ರಮ ತೆಗೆದುಕೊಂಡು ಜಿನಯ್ನೈನ್ ಇಂಡಸ್ಟ್ರೀಗಳವರು ಯಾರಿದ್ದಾರೆ ಅವರಿಗೆ ಸಹಾಯ ಮಾಡಲು ಅನುಕೂಲವಾಗುತ್ತದೆ.

2–30 P.M.

ಶ್ರೀ ಎಂ. ಕಲ್ಯಾಣರಾವ್.—ಕೈಗಾರಿಕ ಮಂತ್ರಿಗಳ ಸಂಬಂಧೀಕರೇ ಕೈಗಾರಿಕಾ ಇಲಾಖೆಗಳಲ್ಲಿ ಕೆಲಸಮಾಡುತ್ತಿದ್ದಾರೆ. ಇವರು ಇಲ್ಲಿ ಅಕ್ರಮ ವ್ಯವಹಾರಗಳನ್ನು ಮಾಡಿದವರೂ ಇಂತಹವರನ್ನು ಈಗ ಪರದೇಶಕ್ಕೆ ಕಳುಹಿಸುತ್ತಿದ್ದಾರೆ. ಇದು ಸರಿಯೇ ?

Sri A. P. APPANNA.—Just because the Joint Director of Small Scale Industries happens to be the relative of the Hon. Minister, that should not be made the reason for making all sorts of allegations. If there is truth in the matter, whether one is a relative of the Minister or not, we have to go into it. The Joint Director of Small Scale Industries has been deputised to go abroad at the instance of the Government of India.

ಮೊದಲು ಇದ್ದ ಜಾಯಿಂಟು ಡೈರೆಕ್ಟರ್ ಆಫ್ ಇಂಡಸ್ಟ್ರೀಸ್ ಕಳುಹಿಸಬೇಕೆಂದು ಇತ್ತು. ಆದರೆ ಕೇಂದ್ರ ಸರಕಾರದವರು ನಮ್ಮ ರಾಜ್ಯದಲ್ಲಿರುವ ಸ್ಮಾಲ್ ಸ್ಕೇಲ್ ಇಂಡಸ್ಟ್ರಿಯಲ್ಲಿರುವವರನ್ನೇ ಇದಕ್ಕೆ ಚುನಾಯಿಸಿ ಪರದೇಶಕ್ಕೆ ಕಳುಹಿಸಬೇಕೆಂದು ಸೂಚನೆ ಬಂತು. ಇದೇ ಸಂದರ್ಭದಲ್ಲಿ ಇವರೂ ಸ್ಮಾಲ್ ಸ್ಕೇಲ್ ಇಂಡಸ್ಟ್ರೀ ಇಲಾಖೆಯಲ್ಲೂ ಜಾಯಿಂಟ್ ಡೈರೆಕ್ಟರು ಆಗಿದ್ದುದರಿಂದ ಇವರನ್ನೇ ಕೇಂದ್ರ ಸರ್ಕಾರಕ್ಕೆ ರೆಕಮೆಂಡ್ ಮಾಡಬೇಕಾಗಿ ಬಂತು. The present hon. Minister for Industries was not the Minister at the time of the proposal; nor the present Joint Director was the Joint Director at that time. The recommendation took place when both of them were not there. But fortunately the recommendation materialised when the present Joint Director is holding that office. It did not materialise the time of the previous Joint Director.

ಶ್ರೀ ಎಂ. ಕಲ್ಯಾಣರಾವ್.—ಹಿಂದೆ ಇದರಲ್ಲಿ ಶಿಕ್ಷೆಯಾಗಿದ್ದಂತಹವರನ್ನು ಇವರಿಗೆ ಪ್ರೊಟೆಕ್ಷನ್ ಕೊಡಲಿಕ್ಕಾಗಿ ಮಾಡುತ್ತಾರೆಂದು ಹೇಳುತ್ತಿದ್ದಾರೆ.

ಶ್ರೀ ಎ. ಪಿ. ಅಪ್ಪಣ್ಣ.—ಇನ್ನು ಒಂದೇ ಒಂದು ಮಾತು ಶ್ರೀ ರಾಜಯ್ಯ ಶೆಟ್ಟರವರು ಹೇಳಿದ್ದಾರೆ. ಅದು ಚಿತ್ರದುರ್ಗ ಜಿಲ್ಲೆಯಲ್ಲಿ ಇರುವ ಕಾಪರ್ ಕಂಪನಿಯ ವಿಚಾರ. ಇದರ ಬಗ್ಗೆ ನಾವು ವಿಚಾರ ಮಾಡುತ್ತಿದ್ದೇವೆ. ಈ ಕಂಪನಿಯಲ್ಲಿ ಹಣ ಹಾಕುವುದು ಸಾಧ್ಯವೇ ಎನ್ನುವುದು ಇನ್ನೂ ತೀರ್ಮಾನವಾಗದೇ ಇದ್ದುದರಿಂದ ಈ ಕಂಪೆನಿಯಲ್ಲಿ ಹಣ ಹಾಕಿಲ್ಲ. ಇಚೆಗೆ ಈ ಕಂಪನಿಯವರು ಸರಿಯಾಗಿ ಕೆಲಸ ಮಾಡುತ್ತಾರೆ ಇದಕ್ಕೆ ಹಣ ಸಹಾಯ ಮಾಡಿ ಪ್ರೊಡಕ್ಷನ್ ಮಾಡಲು ಸಹಾಯ ಮಾಡಬೇಕು ಎನ್ನುವ ತೀರ್ಮಾನಕ್ಕೆ ಸರಕಾರ ಬಂದಿದೆ. ಈಗಾಗಲೇ ಈ ಕಂಪನಿಯವರು ಸುಮಾರು 75 ಲಕ್ಷದಷ್ಟು ಹಣ ಬೇಕೆಂದು ಕೇಳಿದ್ದಾರೆ. ಇದು ಸರಕಾರದ ಪರಿಶೀಲನೆಯಲ್ಲಿದೆ. ಸದ್ಯದಲ್ಲೇ ಇದಕ್ಕೆ ಹಣ ಸಹಾಯ ಮಾಡಿ ಪ್ರೊಡಕ್ಷನ್ ಸ್ಟಾರ್ಟ್ ಮಾಡಲು ತಕ್ಕ ಕಾರ್ಯಕ್ರಮ ತಗೆದುಕೊಳ್ಳುತ್ತೇವೆ ಎಂದು ಇಲ್ಲಿ ಹೇಳಲು ಇಚ್ಛೆಪಡುತ್ತೇನೆ. ಇಷ್ಟು ಮಾತುಗಳನ್ನು ಹೇಳಿ ಇದರಲ್ಲಿ ಭಾಗವಹಿಸಿದ ಮಾನ್ಯ ಸದಸ್ಯರುಗಳನ್ನೆಲ್ಲಾ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಗೋಪಾಲಗೌಡ.—ಬಿ. ಎಂ. ಡಿ. ಎನ್ನುವುದನ್ನು ಸರಕಾರ ವಹಿಸಿಕೊಂಡಿದೆಯಲ್ಲಾ ಇದರಲ್ಲಿ ಬಹಳ ಅವ್ಯವಸ್ಥೆಗಳು ನಡೆದಿವೆ ಎನ್ನುವುದು ಲೋಕಪ್ರಸಿದ್ಧವಾಗಿದೆ. ಇದು ಪಿ. ಎ. ಸಿ. ಕಮಿಟಿ ರಿಪೋರ್ಟಿನಲ್ಲೂ ಬಂದಿದೆ ಮತ್ತು ಇತರೇ ರಿಪೋರ್ಟುಗಳಲ್ಲೂ ಬಂದಿವೆ. ಈ ಅವ್ಯವಸ್ಥೆಗಳು ಆಗಲು ಯಾರು ಕಾರಣ? ಇದು ಗೊತ್ತಿದ್ದರೂ ಮಾನ್ಯ ಮುಖ್ಯ ಮಂತ್ರಿಗಳು ಸುಮ್ಮನೆ ಕಣ್ಣು ಮುಚ್ಚಿಕೊಂಡು ನೋಡುತ್ತಿರುತ್ತಾರೆ. ಈಗ ಮಿನರಲ್ ಡೆವಲಪ್‌ಮೆಂಟು ಬೋರ್ಡ್ ಕೂಡ ನಿಮ್ಮ ತಲೆಗೆ ತಗಲಿಸಿರುವುದರಿಂದ ಬಿ. ಎಂ. ಡಿ. ಅವ್ಯವಹಾರಗಳ ಬಗ್ಗೆ ಒಂದು ಪ್ರೊಬ್ ಮಾಡಬೇಕು. ಇದರಲ್ಲಿ ಎಷ್ಟು ಲುಕ್ಸಾನು ಆಗಿದೆ ಮತ್ತು ಇಷ್ಟು ಲುಕ್ಸಾನು ಆಗಲು ಕಾರಣರು ಯಾರು? ಇದರ ಬಗ್ಗೆ ಎಲ್ಲ ವಿವರಗಳನ್ನು ಪಟ್ಟಿ ಮಾಡಿ ಇದನ್ನು ಈ ಸಭೆಯ ಮುಂದೆ ಇಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎ. ಪಿ. ಅಪ್ಪಣ್ಣ.—ಈ ವಿಚಾರದಲ್ಲಿ ಈಗಾಗಲೇ ಹಿಂದೆ ನಮ್ಮ ಕೈಗಾರಿಕಾ ಮಂತ್ರಿಗಳಾಗಿದ್ದ ಶ್ರೀ ರಾಮಕೃಷ್ಣ ಹೆಗಡೆಯವರು ವಿಚಾರಣೆ ನಡೆಯಬೇಕೆಂದು ಇಲ್ಲಿ ತೀರ್ಮಾನ ಕೈಗೊಂಡು ಆಗ ಇದ್ದ ಬೆಂಗಳೂರು ಡಿವಿಜನಲ್ ಕಮಿಷನರ್‌ರವರು ಈಗ ಅವರು ನಮ್ಮ ರಾಜ್ಯದ ಚೀಫ್ ಸೆಕ್ರೆಟರಿಗಳಾಗಿದ್ದಾರೆ, ವಿಚಾರಣೆ ಮಾಡಿ ಒಂದು ವರದಿಯನ್ನು ಸರಕಾರಕ್ಕೆ ಕೊಡಬೇಕೆಂದು ಸರಕಾರದ ಆರ್ಡರು ಕೂಡ ಆಗಿದೆ. ಇದರ ಎಲ್ಲ ಜವಾಬ್ದಾರಿಯನ್ನೂ ಅವರ ಕಡೆಗೆ ಕೊಡಲಾಗಿದೆ. ಅವರು ಇನ್ನೂ ಸರಕಾರಕ್ಕೆ ವರದಿ ಒಪ್ಪಿಸಿಲ್ಲ. ಅವರು ವರದಿಯನ್ನೂ ಸರಕಾರಕ್ಕೆ ಒಪ್ಪಿಸಿದ ಮೇಲೆ ಇದರ ಮೇಲೆ ಮುಂದಿನ ಕಾರ್ಯಕ್ರಮವನ್ನು ಏನು ಸರಕಾರ ತೆಗೆದುಕೊಳ್ಳಬೇಕು ಎನ್ನುವುದರ ಬಗ್ಗೆ ಅಲೋಚನೆ ಮಾಡುತ್ತೇವೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಾನು ಹೇಳಿದ ಪಾಯಿಂಟ್ ಬಗ್ಗೆ ಹೇಳಲಿಲ್ಲ.

ಶ್ರೀ ಎ. ಪಿ. ಅಪ್ಪಣ್ಣ.—ಕರ್ಣಾಟಕ ಟ್ರೇಡರ್ಸ್ ಬಗ್ಗೆ ಎಕ್ಸ್‌ಪೋರ್ಟ್ ಎಂಟೈಟಲ್‌ಮೆಂಟು ಬಗ್ಗೆ ಕೇಂದ್ರ ಸರಕಾರಕ್ಕೆ ಇವರು ಅಪ್ಲೈ ಮಾಡಿದಾಗ ಇದಕ್ಕೆ ಕೇಂದ್ರದವರು ಪರ್ಮಿಷನ್ ಕೊಟ್ಟಿಲ್ಲ. ಇದಕ್ಕೆ ಮಿನಿಸ್ಟ್ರೀ ಆಫ್ ಫಾರಿನ್ ಟ್ರೇಡ್ ಈ ಇಲಾಖೆಯುವರು ಇವರಿಗೆ ಪರ್ಮಿಷನ್ ಕೊಡಬೇಕೇ ಬೇಡವೇ ಮತ್ತು ಇಂಪೋರ್ಟ್ ಮಾಡುವ ಸ್ಟೇನ್‌ಲೆಸ್ ಸ್ಟೀಲನ್ನು ತರಿಸಿ ಯಾರಿಗೆ ಮಾರಬೇಕು ಎನ್ನುವ ಪ್ರಶ್ನೆ ಬಂತು. ಇದನ್ನು ಮೊದಲು ಕೊಯಮುತ್ತೂರು ಕಡೆ ಇರುವ ಕೈಗಾರಿಕೆಗಳಿಗೆ ಮಾರಬೇಕು ಎಂದು ಹೇಳುತ್ತಿದ್ದರು. ಆದರೆ ಕೇಂದ್ರ ಸರಕಾರದವರು ಇದಕ್ಕೆ ಒಪ್ಪಿಗೆ ಕೊಡಬೇಕಾದರೆ ನಮ್ಮ ರಾಜ್ಯದಲ್ಲಿರುವ ಸಣ್ಣ ಕೈಗಾರಿಕಾ ಕ್ಷೇತ್ರಗಳವರಿಗೇ ಮಾರಬೇಕು ಮತ್ತು ಇದರಲ್ಲಿ 14 ಸಣ್ಣ ಕೈಗಾರಿಕೆಗಳು ಇವೆ, ಇವರಿಗೆ ಇವನ್ನೆಲ್ಲಾ ಮಾರಬೇಕೆಂದು ಮತ್ತು ಇದರ ಬಗ್ಗೆ ಒಂದು ಪಟ್ಟಿ ಮಾಡಿ ಕಳುಹಿಸಬೇಕೆಂದು ಈ ಕಂಪನಿಯವರಿಗೆ ಕೇಂದ್ರ ಸರಕಾರದವರು ಸೂಚನೆ ಕೊಟ್ಟಿದ್ದರು. ಇದರಂತೆ ಈ ಕರ್ಣಾಟಕ ಎಕ್ಸ್‌ಪೋರ್ಟ್ ಕಂಪನಿಯವರು ಪಟ್ಟಿಯನ್ನು ಕೇಂದ್ರ ಸರಕಾರದ ಕಡೆಗೆ ಕಳುಹಿಸಿದ್ದಾರೆ. ಆದರೆ ಕೇಂದ್ರದವರು ಇನ್ನೂ ಇವರ ಪಟ್ಟಿಯನ್ನು ಒಪ್ಪಿಲ್ಲ. 14 ಸಣ್ಣ ಕೈಗಾರಿಕಗಳ ಪಟ್ಟಿ ಬಗ್ಗೆ ಯಾವುದು ಬೋಗಸ್ ಮತ್ತು ಯಾವುದು ಸಹಜವಾಗಿರುವುದು ಎನ್ನುವುದನ್ನೆಲ್ಲಾ ಕೇಂದ್ರ ಸರಕಾರದವರು ಪರಿಶೀಲನೆ ಮಾಡಿದಮೇಲೆ ಬಹುಶಃ ಇವರಿಗೆ ಪರ್ಮಿಷನ್ ಬರಬಹುದು. ಇದುವರೆಗೆ ಅವರಿಗೆ ಇನ್ನೂ ಪರ್ಮಿಷನ್ ಕೊಟ್ಟಿಲ್ಲ. ಇದರಲ್ಲಿ ಹೊಸದೇನೂ ಇಲ್ಲ.

Mr. SPEAKER.—The question is:

"That the respective sums not exceeding the amounts mentioned in the Demand Nos. 24, 14, 16 and 44 be granted to the Government to defray the charges which will come in course of payment during the financial year for the period ending 31st March, 1971."

The motion was adopted.

As directed by the Chair the motion for demands for grants adopted by the Chair are reproduced below:

DEMAND NO. 14.—SUPPLIES AND DISPOSALS

25. Supplies and Disposals

"That a sum not exceeding Rs. 3,37,000 be granted to the Government to defray the charges which will come in course of payment during the financial year for the poriod ending 31st day of March 1971, in respect of 'Supplies and Disposals'."

DEMAND NO. 16.—SCIENTIFIC DEPARTMENTS

27. Scientific Departments

"That a sum not exceeding Rs. 54,07,000 be granted to the Government to defray the charges which will come in course of payment during the financial year for the period ending 31st day of March 1971, in respect of 'Scientific Departments'."

DEMAND NO. 24.—INDUSTRIES INCLUDING SERICULTURE

35. Industries

"That a sum not exceeding Rs. 13,71,25,000 be granted to the Government to defray the charges which will come in course of payment during the financial year for the period ending 31st day of March 1971, in respect of 'Industries'."

DEMAND NO. 44.—INDUSTRIAL AND ECONOMIC DEVELOPMENT

95. Capital Outlay on Industrial and Economic Development.

"That a sum not exceeding Rs. 8,55,70,000 be granted to the Government to defray the charges which will come in course of payment during the financial year for the period ending 31st day of March 1971, in respect of 'Capital Outlay on Industrial and Ecomomic Development'."

Mr. SPEAKER.—The House will now adjourn and meet at 3-30 P.M.

The House rose for lunch at Forty Minutes past Two of the clock and re-assembled at forty Minutes past Three of the Clock.

[MR. SPEAKER in the Chair]

Mysore Sales Tax (Amendment) Bill, 1970

(Introduction)

Mr. SPEAKER.—In regard to the introduction of the Mysore Sales Taxa (Amendment) Bill, 1970 and the Mysore Panchayatiraj Bill, 1970, I m y inform the House that His Excellency the Governor is pleased to give his recommendation for both. The Finance Minister may introduce the Sales Tax (Amendment) Bill.

Sri RAMAKRISHNA HEGDE (Minister for Finance, Planning and Youth Welfare).—Sir, I beg to introduce the Mysore Sales Tax (Amendment) Bill, 1970.

Sri M. NAGAPPA.—Sir, I rise on a point of order. I would like to to know whether any consent has been given by the President of India for the introduction of the Mysore Sales Tax (Amendment) Bill, 1970. This comes under article 304 (*b*). The taxation which is being revised

definitely creates a bar on the trade and commerce of the country. Previously when an amending Bill was moved in the House, the President of India had given his sanction for it. Since we are seeking to make elaborate changes in the sections, I think it is necessary that the President of India should give his consent.

Mr. SPEAKER.—This point came up earlier and I remember to have given a very detailed and considered ruling. When uniformity of taxation is sought to be achieved on certain articles, it does not amount to impediment in the transport of goods from one part of the State to another. I therefore hold that there is no force in the point of order raised by the Hon. Member.

The Mysore Sales Tax (Amendment) Bill, 1970 is intorduced.

MYSORE PANCHAYATIRAJ BILL, 1970

(Introduction)

Sri P. M. NADGOUDA (Minister for Development, Panchayatiraj and Co-operation).—Sir, I beg to...

Sri M. NAGAPPA.—Sir, for this Bill also the President's consent is necessary because it contains many provisions which seek to impose some tax on persons who are carrying on trade, commerce and business. This also contravenes article 304 (b) of the Constitution.

Mr. SPEAKER.—This Bill only seeks to bring about uniformity in taxation and there is no discrimination. The mere imposition of tax does not create the impediment which is contemplated by the hon. Member Sri Nagappa. I therefore hold that there is no substance in the point of order.

Sri P. M. NADGOUDA.—Sir, I beg to introduce the Mysore Panchayatiraj Bill, 1970.

Mr. SPEAKER.—The Mysore Panchayatiraj Bill, 1970 is introduced.

SUPPLEMENTARY AND ADDITIONAL DEMANDS FOR GRANTS FOR THE YEAR 1969-70.

Sri RAMAKRISHNA HEGDE (Minister for Finance, Planning and Youth Welfare).—Sir, I beg to move :

"That further sums not exceeding the amounts shown in espect of demand Nos. 1, 2, 3, 5, 6, 7, 8, 9, 10, 11, 13,

(SRI RAMAKRISHNA HEGDE)

17, 18, 20, 21, 23, 25, 27, 29, 30, 30A, 30B, 31, 31A, 33, 34, 37, 38, 39, 42, 44, 45, 46, 47, 48, 53 and 54 be granted to the Government to defray the charges which will come in course of payment during the financial year ending with 31st day of March, 1970."

Mr. SPEAKER.—Motion Moved :

"That further sums not exceeding the amounts shown in respect of demand Nos. 1, 2, 3, 5, 6, 7, 8, 9, 10, 11, 13, 17, 18, 20, 21, 23, 25, 27, 29, 30, 30A, 30B, 31 31A, 33, 34, 37, 38, 39, 42, 44, 45, 46, 47, 48, 53 and 54 be granted to the Government to defray the charges which will come in course of payment during the financial year ending with 31st day of March, 1970."

†ಶ್ರೀ ಎಂ. ನಾಗಪ್ಪ (ರಾಯಚೂರು).—ಸನ್ಮಾನ್ಯ ಅಧ್ಯಕ್ಷರೇ, ಈ ಸಪ್ಲಿಮೆಂಟರಿ ಡಿಮಾಂಡನ್ನು ವಿರೋಧಿಸುತ್ತಾ ಕೆಲವು ವಿಚಾರಗಳನ್ನು ಈ ಮಾನ್ಯ ಸಭೆಯ ಗಮನಕ್ಕೆ ತರಬಯಸುತ್ತೇನೆ. ಮೊದಲನೆಯದಾಗಿ ನಾನು ಮಾನ್ಯ ಅರ್ಥ ಸಚಿವರನ್ನು ಕಾಂಪ್ಲಿಮೆಂಟ್ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಏಕೆಂದರೆ, ಈ ಸಾರಿ ಮಿನಿಮಂ ಎರಡು ಸಾರಿ ಸಪ್ಲಿಮೆಂಟರಿ ಬಜೆಟನ್ನು ತಂದಿದ್ದಾರೆ. ಕಳೆದ ಸಾರಿಯಾದರೂ ನಾಲ್ಕು ಸಪ್ಲಿಮೆಂಟರಿ ಬಜೆಟ್ ಬಂದಿತ್ತು. ಅದಕ್ಕೋಸ್ಕರ ಕಾಂಪ್ಲಿಮೆಂಟ್ ಮಾಡುತ್ತೇನೆ. ಬರುವ ಸಲ ಇದು ಕೂಡ ಬರದ ಹಾಗೆ ಪ್ರಯತ್ನ ಮಾಡುತ್ತಾರೆಂದು ನಾನು ಆಶಿಸುತ್ತೇನೆ. ಎರಡನೆಯದಾಗಿ ಈ ಸಪ್ಲಿಮೆಂಟರಿ ಬಜೆಟ್ ಏನು ಬಂದಿದೆ, ಇದರ ಬಗ್ಗೆ ಹೇಳುವುದಾದರೆ, ಇವರು 1, 2, 3 ರಿಂದ 11, 13, 17. 18, 20, 21, 23, 25, 27, 29, 30, 30ಎ, 30ಬಿ 31, 31ಎ, 33, 34, 37-39, 42, 44-48, 53-54, ಹೀಗೆ ಎಲ್ಲಾ ಹೆಡ್ಡುಗಳಿಗೆ ಬಜೆಟ್ ಮಾಡಿದ್ದೀರೆಂಬ ಭಾವನೆ ಬರುತ್ತದೆ. ಏನೋ ನಿಜವಾದ ಒಂದು ಬಜೆಟ್ ಬಂತೋ ಎಂಬ ಭಾವನೆ ಬರುತ್ತದೆ. ತಾವು ಹೆಚ್ಚಾದ ಟಿ ಎ ಡಿ ಎ ಕೊಡಬೇಕಾಗಿರುವುದರಿಂದ ಇದನ್ನು ತರಬೇಕಾಯಿತು ಎಂದು ಉತ್ತರದಲ್ಲಿ ಹೇಳಬಹುದು. ಆದರೆ ತಾವು ಟಿ. ಎ., ಡಿ. ಎ., ಅಲ್ಲದೆ, ಅನೇಕ ವಿಚಾರಗಳನ್ನು ಇದರಲ್ಲಿ ಸೇರಿಸಿದ್ದೀರೆಂದು ಹೇಳಿದರೆ, ತಾವು ಅದನ್ನು ವಿರೋಧಿಸಲಿಕ್ಕಿಲ್ಲವೆಂದು ತಿಳಿದಿದ್ದೇನೆ. ಇದು ಸಾಧಾರಣ 39.52 ಕೋಟಿ ರೂಪಾಯಿಯನ್ನು ಒಳಗೊಂಡಿದೆ. ತಾವು ಕೇಳತಕ್ಕದ್ದು ಏನೆಂದರೆ, 20 32 ಕೋಟಿ ರೂಪಾಯಿ ಅಡ್ಜಸ್ಟ್ ಆಗತಕ್ಕದು ಎಂಬುದಾಗಿ. ಸಾಧಾರಣ 20 ಕೋಟಿ ರೂಪಾಯಿಗೆ ಈ ಸಭೆ ಒಪ್ಪಿಗೆ ಕೊಡತಕ್ಕದ್ದು ಎಂಬ ಅಭಿಪ್ರಾಯ ಕಂಡುಬರುತ್ತದೆ. ಒಂದು ವಿಷಯವನ್ನು ಇಲ್ಲಿ ಹೇಳುತ್ತೇನೆ. ಇಲ್ಲಿ ಏನು ತೋರಿಸುತ್ತದೆ ಅಂದರೆ ಬಜೆಟ್ ತಯಾರು ಮಾಡುವಂತದ್ದರಲ್ಲಾಗಲಿ, ಅಥವಾ 20 ಕೋಟಿ ರೂಪಾಯಿಗಳ ಉಳಿತಾಯ ಮಾಡುವಾಗ ಆಗಲಿ, ಹಿಂದೆ ತಯಾರು ಮಾಡಿದ ಬಜೆಟ್ ವಾಸ್ತವಿಕವಾದ ಬಜೆಟ್ ಅಲ್ಲವೆಂಬ ಅಂಕಿಅಂಶಗಳನ್ನು ತೋರಿಸುತ್ತದೆ. ತಾವು 20 ಕೋಟಿ ಸೇವಿಂಗ್ ಆಗಿದ್ದನ್ನು ಇದಕ್ಕೆ ಉಪಯೋಗಿಸುತ್ತೇವೆಂದು ಹೇಳುವುದಾದರೆ, ಹಿಂದೆ ಮಾರ್ಚ್ ತಿಂಗಳಲ್ಲಿ ನೀವು ಏನು ಮಂಡಿಸಿದ್ದೀರಿ, ಅವು ವಾಸ್ತವಿಕವಾದ ಅಂಶಗಳಿಂದ ಕೂಡಿಲ್ಲವೆಂದು ಗೊತ್ತಾಗುತ್ತದೆ. Sanction was accorded in March 1969 for purchase of four jeeps for the use of the Agricultural Income Tax Officers and their staff. No provision was made in the current year's Budget to meet this expenditure as the sanction was accorded after the framing of the Budget estimates of 1969-70. An additional allotment of Rs. 41,100 is required for this purpose. Hence the demand. ಎಂದು ಇಲ್ಲಿ ಹೇಳಿದ್ದಾರೆ. ಆದರೆ ಇದಕ್ಕೆ ಮುಂಚಿತವಾಗಿ ಸಪ್ಲಿಮೆಂಟರಿ ಗ್ರಾಂಟ್ ಬಂದಿತ್ತು. ತಾವು ಆಗ ಇದನ್ನು ತರಬಹುದಾಗಿತ್ತು. ಅದನ್ನು ಹಾಗೆ ತರದೆ, ಮಾರ್ಚ್‌ನಲ್ಲಿ ಮಾತ್ರ ಸ್ಯಾಂಕ್ಷನ್ ಆಗಿದೆ ಎಂದು ಭಾವಿಸಿ ಈ ಜೀಪುಗಳು ಖರೀದಿಯಾಗಿವೆ. ಈಗ 69ರಲ್ಲಿ ಪರ್ಚೇಸ್ ಮಾಡಿದಂತಹ ಜೀಪುಗಳ ಹಣವನ್ನು 70ನೇ ಮಾರ್ಚಿಯಲ್ಲಿ ಇದಕ್ಕೆ ಸ್ಯಾಂಕ್ಷನ್ ಕೊಡಿರಿ ಎಂದು ಹೇಳತಕ್ಕದ್ದು

ಸರಿಯಲ್ಲ. ಇದು ಲೆಕ್ಕಪತ್ರಗಳ ತತ್ವಕ್ಕೆ ಅನುಗುಣವಾಗಿಲ್ಲವೆಂದು ಹೇಳುತ್ತೇನೆ. ಎರಡನೆಯದಾಗಿ ತಾವು ಡೆಟ್ ಸರ್ವಿಸ್ ಬಗ್ಗೆ ಅನೇಕ ವಿಧವಾದ ತೊಂದರೆ ಇದೆಯೆಂದು ಹೇಳುವುದು ಸರಿಯಲ್ಲ. ಪೇಜ್ 13ರಲ್ಲಿ ಇದನ್ನು ಹೇಳಿದ್ದೀರಿ. ತಮಗೆ ತೆಗೆದುಕೊಂಡ ಸಾಲ ಎಷ್ಟು ಎಂಬುದು ಗೊತ್ತಿದೆ. ಇದರಲ್ಲಿ ಯಾವ ಡಿಮ್ಯಾಂಡಿಗೆ ಅದು ಸೇರಿದ್ದೆಂಬುದು ಇಲ್ಲ. ಇದರಲ್ಲಿ ನಾವು ಮೊದಲನೆಯ ಬಜೆಟಿನಲ್ಲಿ 14 ಕೋಟಿ ಒದಗಿಸಿದ್ದೇವೆ, ಈಗ 69 ಲಕ್ಷ 82 ಸಾವಿರ ರೂಪಾಯಿ ಕೊಡಬೇಕಾಗಿತ್ತು ಎಂದು ಹೇಳಿದ್ದಾರೆ. ಈ ಅಕೌಂಟನ್ನು ನೋಡಿದರೆ, ವಾಸ್ತವಿಕವಾಗಿ ಇಂಥ ಒಂದು ವ್ಯವಸ್ಥೆ ಬೇಕಾಗಿತ್ತೇ ಎಂದು ಕೇಳಬೇಕಾಗುತ್ತದೆ. ಆದ್ದರಿಂದ ತಾವು ಮುಂದೆ ಇಂಥ ಐಟಂಗಳನ್ನು ಈ ಸಪ್ಲಿಮೆಂಟರಿ ಬಜೆಟ್ಟಿನಲ್ಲಿ ದಯವಿಟ್ಟು ತರಬಾರದು ಎಂದು ಹೇಳುತ್ತೇನೆ. ಇದು ಏನು ತೋರಿಸುತ್ತದೆ ಅಂದರೆ, ನಮ್ಮ ಸಾಲ ಎಷ್ಟು ಇದೆಯೆಂದು ನಮ್ಮ ಸರ್ಕಾರಕ್ಕೆ ಗೊತ್ತಿಲ್ಲ, ಲೆಕ್ಕ ಇಡಲಿಲ್ಲ ಎಂಬ ಅಭಿಪ್ರಾಯ ಜನರಲ್ಲಿ ಬರುತ್ತದೆ. ಆದ್ದರಿಂದ ಡೆಟ್ ಬಗ್ಗೆ ಇವರು ಏನೂ ಆಸಕ್ತಿ ವಹಿಸುತ್ತಾ ಇಲ್ಲ ಎಂದು ಗೊತ್ತಾಗುತ್ತದೆ. ನಾನಾದರೂ ಹೇಳುತ್ತೇನೆ, ಈ ಹಣಕಾಸಿನ ವ್ಯವಸ್ಥೆ ನಮ್ಮ ರಾಜ್ಯದಲ್ಲಿ ಸಮರ್ಪಕವಾಗಿಲ್ಲ ಮತ್ತು ಸಮರ್ಪಕವಾಗಿರತಕ್ಕಂತಹ ಲೆಕ್ಕಪತ್ರಗಳನ್ನು ಮೈಂಟೈನ್ ಮಾಡುತ್ತಾ ಇಲ್ಲವೆಂಬುದು ಸ್ಪಷ್ಟವಾಗುತ್ತದೆ.

ಡಿಮ್ಯಾಂಡ್ 10ರಲ್ಲಿ ಐಟಂ ನಂ. 4ರಲ್ಲಿ ಹೆಚ್ಚಿನ ಟೂರ್ ಮಾಡಿರುವುದರಿಂದ ಮಂತ್ರಿಗಳಿಗೆ ಹೆಚ್ಚಿನ ಖರ್ಚು ಅಲೋಯೆನ್ಸ್ ಮತ್ತು ಆನರರಿ ಬಗ್ಗೆ ಆಗಿದೆ ಎಂದು ಹೇಳಿದ್ದಾರೆ. ಸಾಮಾನ್ಯವಾಗಿ ಮಂತ್ರಿಗಳ ಅಂಕೆ ಸಂಖ್ಯೆ ಮತ್ತು ಅವರಿಗೆ ಬೇಕಾಗುವ ಟಿ.ಎ., ಡಿ.ಎ. ಏನೂ ಹೆಚ್ಚಾಗಿಲ್ಲ ಮತ್ತು ಅವರಿಗೆ ದಿನಭತ್ಯ ಕೊಡುವುದು ಎಲ್ಲಾ ಗೊತ್ತೇ ಇದೆ. ಮೊನ್ನೆ ಒಂದು ಪ್ರಶ್ನೆ ಹಾಕಿದಾಗ ಎಲ್ಲಾ ಅಂಕೆಸಂಖ್ಯೆಗಳನ್ನು ಕೊಟ್ಟಿದ್ದಾರೆ. ಒಬ್ಬ ಮಂತ್ರಿಯು 2ರಿಂದ ನಾಲ್ಕು ಸಾವಿರದ ವರೆಗೆ ತಿಂಗಳಿಗೆ ಖರ್ಚು ಮಾಡುವವರಿದ್ದಾರೆ. ತಾವು ಈ ಮಂತ್ರಿಗಳಿಗೆ ಸಾಧಾರಣ 90 ಸಾವಿರ ರೂಪಾಯಿ ಕೇಳಿದ್ದೀರಿ. ಇದು ಟೋಕನ್ ಗ್ರ್ಯಾಂಟ್ ಅಲ್ಲ. ಹಾಗಿದ್ದರೆ ಅದನ್ನು ಒಪ್ಪುತ್ತಿದ್ದೆ. ಮಂತ್ರಿಗಳ ಟಿ.ಎ., ಡಿ.ಎ. ಮತ್ತು ಬೇರೆ ಅಲೊಯೆನ್ಸಸ್ ಎಂದು ಒಂದು ಹಂತದಲ್ಲಿ 90 ಸಾವಿರ ರೂಪಾಯಿ ಕೇಳಿ, ನಂತರ ಕಂಟಿಂಜೆನ್ಸಿ ಎಂದು ಒಂದು ಲಕ್ಷ 30 ಸಾವಿರ, ಹೀಗೆ ಒಟ್ಟು ಎರಡು ಲಕ್ಷದ 20 ಸಾವಿರ ರೂಪಾಯಿ ಈ ಮಂತ್ರಿಮಂಡಲಕ್ಕೋಸ್ಕರ ಕೇಳತಕ್ಕದ್ದು ಬಹಳ ಆಶ್ಚರ್ಯಕರವಾದ ವಿಷಯ. ಮಂತ್ರಿಯವರು ಬಾವಿಗಳಿಗೆ ಹಣ ಕೊಡಿ ಎಂದು ಕೇಳಿದಾಗ, ಹಣವಿಲ್ಲವೆಂದು ಹೇಳುತ್ತಿದ್ದಾರೆ. ಆದರೆ ಈಗ ಈ ರೀತಿ ಮಂತ್ರಿಯವರ ಭೋಗಕ್ಕಾಗಿ ಎರಡು ಲಕ್ಷ ರೂಪಾಯಿ 20 ಸಾವಿರ ಬೇಕೆಂದು ಕೇಳುವುದಾದರೆ, ಇದಕ್ಕಿಂತ ಅವಹೇಳನವಾದ ಮಾತು ಬೇರೆ ಇಲ್ಲ. ಇದು ಆನ್ ಆಂಟಿಸಿಪೇಟೆಡ್, ಮತ್ತು ಆನ್‌ಫೋರ್‌ಸೀನ್ ವಿಚಾರಗಳಿಗೆ ಮಾತ್ರ ಸಂಬಂಧಪಟ್ಟದ್ದು ; ಈಗ ಮಂತ್ರಿಗಳ ಸಂಖ್ಯೆ ಗೊತ್ತೇ ಇದೆ. ಟೂರ್ ಮಾಡುವುದು ಗೊತ್ತೇ ಇದೆ. ಚುನಾವಣೆ ಬಂದಾಗ ಹೆಚ್ಚು ಟೂರ್ ಮಾಡಿದ್ದಾರೆ. ಮತ್ತು ಟ್ರಂಕ್‌ಕಾಲ್ ಚಾರ್ಜ್ ಜಾಸ್ತಿಯಾಗಿರುವುದರಿಂದ ಇದನ್ನು ಕೇಳಿದ್ದೇವೆಂದು ಹೇಳಿದ್ದಾರೆ. ಇವರು ತಾಲ್ಲೂಕು ಬೋರ್ಡು ಚುನಾವಣೆಯ ಸಮಯದಲ್ಲಿ ಬೇಕಾದಷ್ಟು ಟೂರ್ ಮಾಡಿದ್ದಾರೆ. ಅಲ್ಲದೆ ಸ್ಟೇಟ್ ಮತ್ತು ಸ್ಟೇಟ್ ಹೊರಗಡೆ ಟೂರ್ ಮಾಡಿ, ಕಾಂಗ್ರೆಸ್ (ಒ) ಅಧಿವೇಶನಕ್ಕೂ ಅಲ್ಲಿಂದ ಹೋಗಿದ್ದಾರೆ. ಬೆಳಗಾಂನ ವರೆಗೆ ಟೂರ್ ಹಾಕುವುದು, ಅಲ್ಲಿಂದ ಆ ಕಡೆಗೆ ಹೋಗುವುದು. ಮತ್ತು ಹೀಗೆ ಆಗತಕ್ಕ ಖರ್ಚುಗಳನ್ನು ಇದರಲ್ಲಿ ತೋರಿಸುವುದು.

4–00 P.M.

ಯಾರ್ಯಾರು ಹೋಗಿದ್ದಾರೆಂಬುದು ನನಗೆ ಗೊತ್ತಿದೆ. ನನ್ನ ಹತ್ತಿರ ಟೂರ್ ಪ್ರೋಗ್ರಾಮ್ಸ್ ಬಂದಿವೆ. ಬೊಂಬಾಯಿ ಬಾರ್ಡರ್‌ವರೆಗೂ ಹೋಗಿದ್ದಾರೆ. ಅಲ್ಲಿಂದ ಇತರ ಕಡೆಗಳಿಗೆ ಸರ್ಕಾರದ ಕಾರುಗಳಲ್ಲಿ ಟೂರ್ ಮಾಡಿದ್ದಾರೆ. ಅಲ್ಲಿಯವರೆಗೂ ತಮ್ಮ ಟೂರ್ ಪ್ರೋಗ್ರಾಮ್ಸ್ ಇವೆ. ಕೆಲವು ಮಂತ್ರಿಗಳು ಎಷ್ಟೋ ಮೆಡಿಕಲ್ ಅಲೋಯನ್ಸ್ ತೆಗೆದುಕೊಂಡಿದ್ದಾರೆ. 4 ಸಾವಿರ ರೂಪಾಯಿಗಳ ಭತ್ಯ ತೆಗೆದುಕೊಂಡ ಮಂತ್ರಿಗಳು ಈ ಮಂತ್ರಿಮಂಡಲದಲ್ಲಿದ್ದಾರೆ. ಅವರು ತಮಗೆ ಬೇಕಾದ ಕಡೆಗಳಲ್ಲಿ ಟೂರ್ ಪ್ರೋಗ್ರಾಂಗಳನ್ನು ಹಾಕಿಕೊಂಡಿದ್ದಾರೆ. ಕಾಂಗ್ರೆಸ್ ಅಧಿವೇಶನವನ್ನು ಕರೆದಿದ್ದರು. ಈ ಅಧಿವೇಶನಕ್ಕೆ ದಯಮಾಡಿಸಿದ್ದಾಗ, ರಾಯಚೂರ್ ಜಿಲ್ಲೆ, ಬಿದರೆ ಜಿಲ್ಲೆ ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲಿ ಪ್ರವಾಸಮಾಡಿ ಕಾಂಗ್ರೆಸ್ ಪಕ್ಷದ ಕೆಲಸಮಾಡಿದ್ದಾರೆ. ಎರಡನೇ ಕಡೆಯೂ ಈ ರೀತಿ ಭತ್ಯವನ್ನು ಪಡೆಯುತ್ತಿದ್ದಾರೆ. ನಾವು ನಿರ್ದಿಷ್ಟವಾಗಿ ಈ ಸಭೆಯಲ್ಲಿ ಮೂರು ವರ್ಷಗಳಿಂದಲೂ ನೋಡಿದ್ದೇವೆ. ಮಂತ್ರಿಗಳ ಟೂರ್ ಬಗ್ಗೆ ಈ ರೀತಿ ಹೆಚ್ಚುವರಿ ಕೇಳಿದ್ದು ನಾವು ನೋಡಿರಲಿಲ್ಲ. ಇವತ್ತು ಅದನ್ನು ನೋಡಿದರೆ ಬಹಳ ಆಶ್ಚರ್ಯವಾಗುತ್ತದೆ. ಒಂದನೆಯ ಕಾರಣ, ಬಿದರ್ ಟೂರ್, ಎರಡನೆಯ ಕಾರಣ ಗುಜರಾತಿಗೆ ಟೂರ್ ಮಾಡಿದ್ದು ಮತ್ತು ಬೊಂಬಾಯಿ ಬಾರ್ಡರ್‌ವರೆಗೆ ಟೂರ್ ಮಾಡಿದ್ದೂ ಸಹ

(ಶ್ರೀ ಎಂ. ನಾಗಪ್ಪ)

ಇದರಲ್ಲಿ ಸೇರಿದೆಯೆಂಬುದಾಗಿ ನಾನು ಹೇಳುತ್ತಿದ್ದೇನೆ. ಇದರಲ್ಲಿ ಇನ್ನೂ ಕೆಲವು ಮುಖ್ಯವಾದಂಥ ವಿಷಯಗಳನ್ನು ನಾವು ನೋಡಬೇಕಾಗಿದೆ. ಸ್ಟೇಟ್ ಗೆಸ್ಟ್ ಬಂದಾಗ್ಗೆ ಮಾಡತಕ್ಕ ಖರ್ಚು ಇದರಲ್ಲಿ ಸಾಧಾರಣವಾಗಿ 80 ಸಾವಿರ ರೂಪಾಯಿಗಳು ಆಗಿದೆಯೆಂದು ಹೇಳಿದ್ದಾರೆ. ನಾವು ಹಿಂದೆ ಈ ಬಾಬಿಗೆ ಕೊಟ್ಟಂಥ ಹಣ ಅಲ್ಲದೆ ಹೆಚ್ಚಿಗೆ 80 ಸಾವಿರ ರೂಪಾಯಿಗಳನ್ನು ಈಗ ಕೇಳಿದ್ದಾರೆ. ಇವತ್ತು ಹೊರಗಡೆಯಿಂದ ಬರತಕ್ಕವರಿಗೆ ರಾಜಮನ್ನಣೆ ಮಾಡುವುದಕ್ಕೆ ಕೇಳುವಂಥ ಹಣ ಇದರಲ್ಲಿ ನೋಡಿದರೆ ಎಷ್ಟು ಲ್ಯಾವಿಷ್ ಆಗಿ ಹಣವನ್ನು ಭೋಗಕ್ಕೆ ಉಪಯೋಗಮಾಡುತ್ತಿದ್ದಾರೆಂದು ಗೊತ್ತಾಗುತ್ತದೆ. ದೇಶಕ್ಕೆ ಸ್ವತಂತ್ರ್ಯಬಂದು 22 ವರ್ಷಗಳು ಆದರೂ ಇನ್ನೂ ನೂರಾರು ಹಳ್ಳಿಗಳಲ್ಲಿ ಜನತೆಗೆ ಕುಡಿಯುವುದಕ್ಕೆ ನೀರಿಲ್ಲ. ಅನೇಕ ಜನರು ಉದ್ಯೋಗಗಳಿಲ್ಲದೆ ಅಲೆದಾಡುತ್ತಿದ್ದಾರೆ. ಈಗ ಇವರು ಮಾಡತಕ್ಕ ಖರ್ಚುಗಳನ್ನು ನೋಡಿದರೆ ವಾಸ್ತವಿಕವಾಗಿ ರಾಜ್ಯದ ಬಗ್ಗೆ ಯಾವ ತರಹ ಒಂದು ಒಳ್ಳೆಯ ಅಭಿಮಾನವನ್ನು ಈ ಸರ್ಕಾರ ಇಟ್ಟುಕೊಂಡಿಲ್ಲವೆಂದು ನನಗೆ ಗೊತ್ತಾಗುತ್ತದೆ. ಎರಡನೆಯದಾಗಿ ಎಲ್ಲಾ ನೌಕರರುಗಳಿಗೂ ಕೆಳಗಿನಿಂದ ಹಿಡಿದು ಅಂದರೆ ನಾಲ್ಕನೆಯ ದರ್ಜೆಯ ನೌಕರರಿಂದ ಸೆಕ್ರೆಟೇರಿಯಟ್‌ನಲ್ಲಿ ಸೆಕ್ರೆಟರಿಗಳ ದರ್ಜೆಯವರೆಗೆ ಸಹ ವೇತನದ ಬಗ್ಗೆ ಪರಿವರ್ತನೆಯಾಗಿದೆ. ಮಾನ್ಯ ಅಧ್ಯಕ್ಷರಿಗೂ ಜಾಸ್ತಿಯಾಗಿದೆ. ಮಾನ್ಯ ಮಂತ್ರಿಗಳಿಗೂ ಜಾಸ್ತಿಯಾಗಿದೆ.

ಶ್ರೀ ರಾಮಕೃಷ್ಣ ಹೆಗಡೆ.—ಸ್ವಲ್ಪ ಸದಸ್ಯರಿಗೂ ಹೆಚ್ಚಾಗಿದೆ.

ಶ್ರೀ ಎಂ. ನಾಗಪ್ಪ.—ಅದಕ್ಕೋಸ್ಕರವೇ ತಮಗೂ ಹೆಚ್ಚಾಗಿದೆಯೆಂದು ಹೇಳಿದೆ. ಆದರೆ ಈಗ ಹೈಕೋರ್ಟಿನಲ್ಲಿ ನ್ಯಾಯಾಧೀಶರು ಆಗಿರತಕ್ಕವರಿಗೆ ನಮ್ಮ ಕಾನ್‌ಸ್ಟಿಟ್ಯೂಷನ್ ಆಫ್ ಇಂಡಿಯಾ ಯಾವಾಗ ಪಾಸ್ ಆಯಿತೋ ಆಗ ಅದರಲ್ಲಿ ಕೆಲವು ಸಂಬಳಸಾರಿಗೆಗಳನ್ನು ನಿಗದಿಮಾಡಿಕೊಟ್ಟು ಆ ಸಂಬಳ ಬಿಟ್ಟರೆ, ಅದು 22 ವರ್ಷಗಳಿಂದಲೂ ಯಾಕೆ ಯಾವ ಪರಿವರ್ತನೆಯೂ ಆಗಿಲ್ಲವೆಂದು ನಾನು ಈ ಸಭೆಯ ಮೂಲಕ ತಮ್ಮನ್ನು ಕೇಳುತ್ತಿದ್ದೇನೆ. ಇದಕ್ಕೆ ಕಾನ್‌ಸ್ಟಿಟ್ಯೂಷನ್ ಅಮೆಂಡ್‌ಮೆಂಟ್ ಬೇಕಾಗಬಹುದು. ಅದನ್ನು ಬಹಳ ತೀವ್ರಗತಿಯಿಂದ ಮಾಡಬೇಕು. ಇದು ಅನೇಕ ವರ್ಷಗಳಿಂದ ಪೆಂಡಿಂಗ್ ಇದೆ. ಅವರ ಸಂಬಳಸಾರಿಗೆ ವಿಷಯವನ್ನು ತೀವ್ರಗತಿಯಿಂದ ವಿಚಾರ ಮಾಡಬೇಕು. ಬೊಂಬಾಯಿ ಹೈಕೋರ್ಟಿನಲ್ಲಿ ಎರಡು ವರ್ಷಗಳ ಹಿಂದೆ ಒಬ್ಬ ಜಡ್ಜ್ ಸಂಬಳ ಸಾಲದೆಂದು ರಾಜೀನಾಮೆ ಕೊಟ್ಟಂಥ ಉದಾಹರಣೆಗಳನ್ನು ನಾವು ನೋಡಿದ್ದೇವೆ. ಇಲ್ಲಿ ಅಂತಹ ಪರಿಸ್ಥಿತಿ ಉದ್ಭವವಾಗುವುದಕ್ಕೆ ಮುಂಚೆ, ಇವತ್ತು ಗೆಜೆಟೆಡ್ ಅಧಿಕಾರಿಗಳಿಗೆ ಹಾಗೂ ನಾನ್ ಗೆಜೆಟೆಡ್ ಅಧಿಕಾರಿಗಳಿಗೆ ಯಾವ ರೀತಿ ಸಂಬಳ ಸಾರಿಗೆ ಜಾಸ್ತಿ ಮಾಡಿದ್ದೀರೊ ಆ ರೀತಿ ಜಡ್ಜಿಗಳಿಗೂ ಕೂಡ ಅವರ ಸಂಬಳವನ್ನು ಜಾಸ್ತಿ ಮಾಡುವ ಬಗ್ಗೆ ಯೋಚನೆಮಾಡುವುದು ಬಹಳ ಅವಶ್ಯಕ. ಮೊನ್ನೆ ನಾನು ಕೋರ್ಟುಗಳ ಬಗ್ಗೆ ಮಾತನಾಡುತ್ತಾ ಒಂದು ವಿಷಯವನ್ನು ಹೇಳಿದ್ದೇನೆ. ವಂಶಪಾರಂಪರ್ಯವಾಗಿ ಜಡ್ಜಿಗಳ ಆಯ್ಕೆ ನಡೆದಿದೆಯೆಂದು ಹೇಳಿದೆ. ಜಡ್ಜ್‌ಗಳ ಬಗ್ಗೆ ಮಾನ್ಯ ಪಾರ್ಲಿಮೆಂಟರಿ ಅಫೇರ್ಸ್ ಮಿನಿಸ್ಟರ್ ಉತ್ತರ ಕೊಡುವಾಗ ಅವರ ಹೆಸರುಗಳನ್ನು ಯಾತಕ್ಕೆ ಹೇಳಲಿಲ್ಲವೆಂದು ಹೇಳಿದರು.

ಶ್ರೀ ಕೆ. ಪುಟ್ಟಸ್ವಾಮಿ.—ನಾನು ಹೆಸರುಗಳನ್ನು ಯಾತಕ್ಕೆ ಹೇಳಲಿಲ್ಲ ಎಂದು ಆಕ್ಷೇಪಣೆ ಮಾಡಲಿಲ್ಲ ಅದು ಕಾನ್‌ಸ್ಟಿಟ್ಯೂಷನಲ್ ಅಪಾಯಿಂಟ್‌ಮೆಂಟ್. ಅದನ್ನು ಪ್ರೆಸಿಡೆಂಟ್ ಅವರು ಮಾಡುವುದು. ಅದರ ಮೇಲೆ ನಮ್ಮ ಕಂಟ್ರೋಲ್ ಇಲ್ಲವೆಂದು ಹೇಳಿದೆ.

ಶ್ರೀ ಎಂ. ನಾಗಪ್ಪ.—ತಮಗೂ ಕಂಟ್ರೋಲ್ ಇದೆ. ನನಗೆ ಗೊತ್ತಿರುವ ಹಾಗೆ ಸರ್ಕಾರದವರು ಅನೇಕ ಹೆಸರುಗಳನ್ನು ಶಿಫಾರಸು ಮಾಡುತ್ತಾರೆ. ಅದನ್ನು ನೀವೇ ಮಾಡುವುದು. ಆದ್ದರಿಂದ ಆ ಹೆಸರುಗಳು ನಿಮ್ಮ ಪಟ್ಟಿಯಿಂದಲೇ ಹೋಗಿವೆ.

Sri K. PUTTASWAMY.—As far as I know the recommendations emanate from the Chief Justice. I don't mean to say that it would be automatically sent to the Government of India. But in most of the cases whatever recommendations the Chief Justice makes would be sent to the Government of India who would send to Supreme Court and the Supreme Court will consider and advise the Government of India

ಶ್ರೀ ಎಂ. ನಾಗಪ್ಪ.—ಮಾನ್ಯ ಪಾರ್ಲಿಮೆಂಟರಿ ಮಂತ್ರಿಗಳು ಜಾರಿಕೆ ಮಾತುಗಳನ್ನು ಆಡುತ್ತಿದ್ದಾರೆ. ರಾಜ್ಯಪಾಲರನ್ನು ಇದರ ಬಗ್ಗೆ ಮೊದಲು ವಿಚಾರ ಮಾಡಿ ಇಂತಹವರಿಗೇ ಕೊಡಿ

ಎಂದು ಕೇಳುವ ಹಕ್ಕು ರಾಜ್ಯ ಸರ್ಕಾರಕ್ಕೆ ಇದೆ. ತಾವು ಬಂಗಾಳದಲ್ಲಿ ಏನಾಯಿತೆಂಬುದನ್ನು ನೋಡಬಹುದು. ಪ್ರಜಾಸತಾತ್ಮಕ ರಾಜ್ಯದಲ್ಲಿ, ಇಂತಹ ಕೆಲವು ಹುದ್ದೆಗಳಿಗೆ ಪೋಸ್ಟು ಮಾಡುವಾಗ, ರಾಜ್ಯ ಸರ್ಕಾರಕ್ಕೆ ಕೆಲವು ಅಧಿಕಾರಗಳು ಇವೆ. ರಾಜ್ಯಪಾಲರನ್ನು ಪೋಸ್ಟು ಮಾಡುವಾಗಲೂ ಕೂಡ ರಾಜ್ಯ ಸರ್ಕಾರದವರನ್ನು ಕೇಳುತ್ತಾರೆ. ಹೈಕೋರ್ಟ್ ಜಡ್ಜ್‌ಗಳನ್ನು ನೇಮಕ ಮಾಡುವಾಗ ರಾಜ್ಯ ಸರ್ಕಾರದವರನ್ನು ಕೇಳುತ್ತಾರೆ. ಹೈಕೋರ್ಟ್ ಜಡ್ಜ್‌ಗಳನ್ನು ನೇಮಕ ಮಾಡುವಾಗ ರಾಜ್ಯ ಸರ್ಕಾರದವರನ್ನು ಕೇಳುವುದಿಲ್ಲವೆಂಬ ಮಾತು ಹೇಳಿದರೆ ನಾನು ತಮ್ಮ ಮಾತಿಗೆ ಒಪ್ಪುತ್ತೇನೆ ಎಂಬ ಭಾವನೆಯನ್ನು ಇಟ್ಟುಕೊಳ್ಳಬಾರದು. ದಯವಿಟ್ಟು ನೀವೇ ಅಂತಹ ಹೆಸರುಗಳನ್ನು ಶಿಫಾರಸು ಮಾಡುವ ಪರಿಸ್ಥಿತಿ ಇದೆ. ಆದ್ದರಿಂದ ಈ ಜಡ್ಜ್‌ಗಳನ್ನು ನೇಮಕ ಮಾಡುವಾಗ ಈ ರಾಜ್ಯದ ಪರಿಸ್ಥಿತಿ ಏನಾಗುತ್ತದೆಂದು ಯೋಚನೆ ಮಾಡಬೇಕು. ಇನ್ನು ನಮ್ಮ ಹೈಕೋರ್ಟಿನಲ್ಲಿ ನೋಡಿದರೆ, ಅಲ್ಲಿ 3 ಜನ ಸಿಟಿಂಗ್ ಜಡ್ಜ್‌ಗಳು as if by succession ಬಂದ ಹಾಗೆ ಆ ಸ್ಥಾನಗಳಿಗೆ ಬಂದಿರುವುದು ಮಾನ್ಯ ಮಂತ್ರಿಗಳಿಗೆ ಗೊತ್ತಿದೆ. ಮುಂದೆ ಈ ರೀತಿಯಾಗದಂತೆ ನೋಡಿಕೊಳ್ಳಬೇಕು. ಎರಡನೆಯದಾಗಿ, ಮುಖ್ಯ ನ್ಯಾಯಾಧೀಶರನ್ನು ಚುನಾಯಿಸುವಾಗ ನಮ್ಮ ರಾಜ್ಯದವರನ್ನೇ ತೆಗೆದುಕೊಂಡಿದ್ದೀರಿ. ಆದರೆ ಮುಖ್ಯ ನ್ಯಾಯಾಧೀಶರು ಹೊರಗಡೆಯಿಂದ ಬಂದರೆ ಒಳ್ಳೆಯದು. ರಾಜ್ಯ ಸರ್ಕಾರದವರು ರಾಜ್ಯಪಾಲರ ಹುದ್ದೆಗೆ ಇಂತಹವರೇ ಬೇಕೆಂದು ಕೇಳಿ ಚುನಾಯಿಸಿದ ಹಾಗೆಯೇ ಹೈಕೋರ್ಟ್ ಜಡ್ಜ್‌ಗಳೂ ಇಂತಹವರೇ ಬೇಕೆಂದು ಕೇಳಬಹುದು. ಈಗ ಸಬಾರ್ಡಿನೇಟ್ ಜುಡಿಷಿಯರಿ ಬಹಳ ಅಧೋಗತಿಗೆ ಹೋಗುತ್ತಿದೆ. ಬೇಂಚ್ ಅಂಡ್ ಭಾರ್‌ನಲ್ಲಿ ಯಾವ ಸಂಬಂಧ ಉಳಿಯುತ್ತಾ ಇಲ್ಲ. ಕೇಡರ್‌ನಿಂದ ಬಂದಿರತಕ್ಕ ಕೆಲವು ಜಡ್ಜ್‌ಗಳ ಮೇಲೆ ಒಂದು ರೀತಿಯ ಅನುಮಾನವಿದೆ. ಇವತ್ತು ಪ್ರಜಾಸತ್ತೆ ಸಂರಕ್ಷಣೆಯಾಗಬೇಕು. ಈ ದೃಷ್ಟಿಯಿಂದ ಮತ್ತೊಮ್ಮೆ ರಾಜ್ಯ ಸರ್ಕಾರದವರನ್ನು ಕೇಳುತ್ತೇನೆ. ಜಡ್ಜ್‌ಗಳನ್ನು ಅಪಾಯಿಂಟ್‌ಮೆಂಟ್ ಮಾಡುವಾಗ ಹೊರಗಡೆಯಿಂದ ತರತಕ್ಕ ಪ್ರಯತ್ನ ಮಾಡಿ. ಆದರೆ ಜಡ್ಜ್‌ಗಳ ಹುದ್ದೆಯನ್ನು ಇಲ್ಲಿನವರಿಗೆ ಕೊಡಬೇಡಿ ಎನ್ನುವುದು ನನ್ನ ಉದ್ದೇಶವಲ್ಲ. ಅವರನ್ನು ಬೇರೆ ರಾಜ್ಯಗಳಿಗೆ ಕಳುಹಿಸಿರಿ. ಮದರಾಸಿಗೆ ಕಳುಹಿಸಿರಿ, ಕೇರಳಕ್ಕೆ ಕಳುಹಿಸಿರಿ, ಅಂತಹ ವ್ಯವಸ್ಥೆ ಮಾಡುವುದರಿಂದ ತೊಂದರೆಯಾಗುವುದಿಲ್ಲ. ಇಲ್ಲಿ ಇರತಕ್ಕ ಕೆಳಗಿನ ಜುಡಿಷಿಯರಿ ಒಳ್ಳೆಯ ಮಟ್ಟದಲ್ಲಿ ಕೆಲಸ ನಡೆಸುತ್ತಿದೆ ಎಂದು ಅಭಿಪ್ರಾಯ ಪಡುತ್ತೇನೆ. ಇದಕ್ಕಾಗಿ ಸಮಯ ಒದಗಿಸಿಕೊಟ್ಟದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

Sri RAMAKRISHNA HEGDE.—Mr. Speaker Sir, it is heartening to note that this time there has been practically no criticism at all on the second instalment of supplementary demands. It is the intention of the Government to come before the Legislature as rarely as possible with supplementary demands. The Hon. Member who spoke a little earlier, though complimented the Government on bringing the demands twice, expressed the hope that in future, the Government will not bring even one instalment. It is not possible. In the course of 12 months many unexpected events take place and in the interest of speedy development of our economy in various fields, it is necessary to incur additional expenditure. Therefore, a provision has been made in the Constitution for supplementary demands. As the Hon. Member pointed out even though the total estimates amount to approximately Rs. 39 crores, the actual outgo of cash is only to the extent of Rs. 16 crores and out of this amount a very substantial amount is made for irrigation and power development. This is mainly on account of the recommendations of the Resources Committee which took great pains in suggesting to Government certain measures of economy and also certain measures by which the income could be augmented. Sir, the Hon. Member criticised what he calls the excessive tours by the Ministers. This is a welfare state. It is absolutely necessary for the Ministers in-charge of various Departments to undertake tours, so that

(SRI RAMAKRISHNA HEGDE)

they can meet the masses of people and can understand their problems. If there are any cases of touring by the Ministers in their own constituencies, or in their own District frequently, we shall see in future that such tours are avoided. Actually we have come to a sort of understanding that no Minister should undertake a tour for more than 10 days in a month. In our opinion the excessive tours are not desirable, because it costs the exchequer and also it costs to certain degree dislocation in the normal functioning of administrative machinery. But such cases are very very few. I may assure this House that this suggestion will be kept in mind by the Ministers. Another Hon. Member made another suggestion saying that outsiders should be entertained for Judiciary. There will be difference of opinion about it. The Hon. Member suggests that we should appoint a person from outside as Chief Justice of the High Court. Actually some time back, may be 10 year ago, Sri Dasagupta, a very eminent Jurist from West Bengal, was appointed as the Chief Justice of Mysore High Court. In one sense it might create a very healthy atmosphere particularly in regard to integration of the Country. If this idea is to be translated into practice, the move should come from the Central Government. It should not happen as though the Mysore State should have people from outside to fill in this high office in the Judiciary and the Mysoreans should be denied an opportunity of adorning the same office elsewhere. Perhaps it might require a suitable constitutional amendment also. But anyway he has made this suggestion. I do not want to express any opinion on behalf of the Government because it is rather a delicate matter. We should not deny the legitimate claims of people, legal people who are qualified for the same purpose. Sir, I am glad that this time the House is almost unanimous in granting the additional supplementary demands. I hope we will be worthy of whatever is expressed by the Hon. Members, and I will see that we do not incur unnecessary expenditure.

MR. SPEAKER.—The question is :

leave to introduce a Bill or Bills may be made and a Bill or Bills may be introduced on such day before the Assembly enters on the business for which the day has been allotted.

The hon. Member Sri Nagappa may find that Rule 163 applies for the days allotted for general discussion. Sri Nagappa has not made a reference to Rule 164 and 174.

Rule 174 (2) states:

"At any time after the introduction in the Assembly of an Appropriation Bill, the Speaker may allot a day or days Jointly or severally for the completion of all or any of the stages involved in the passage of the Bill, by the Assembly, and when such allotment has been made the Speaker shall .... forthwith put every question necessary to dispose of all the outstanding matters................"

Yesterday, while allotting this day for the Appropration Bill, it was agreed to by the hon. friends in the Opposition and the Leader of the House. That this finance Bill also may be taken up for consideration along with the Appropriation Bill. Accordingly I have allotted this day for the Appropriation Bill and this Bill, which are almost of the same nature and quality and relate to finance. Therefore, the objection under Rule 175 cannot be upheld.

Sri RAMAKRISHNA HEGDE.—Sir, I beg to move.

"That the Mysore Sales Tax (Amendment) Bill, 1970, be taken into consideration."

Mr. SPEAKER.—Motion moved :

"That the Mysore Sales Tax (Amendment) Bill, 1970, be taken into consideration."

Sri S. SIVAPPA.—I want some information on rationalisation of taxes.

Mr. SPEAKER.—First, let the Hon. Minister explain the provisions. He will touch that point also.

Sri RAMAKRISHNA HEGDE.—Sir, the hon. Members are aware that some time ago, the Government constituted a Committee under the Chairmanship of Sri Boothalingam. The Committee consisted of two hon. Members of this House also, namely, Sri H. Siddaveerappa and Sri M. Y. Ghorpade.

This Committee has given its report on sales tax. It had suggested certain measures so that the revenue from sales-tax may go up and certain procedures simplified. The Government has examined this recommendation and has accepted the recommendation with a little modification here and there.

The recommendations pertain to three aspects. One is regarding the exemption from turnover tax and regular assessment. At the moment, the exemption limit is Rs. 10,000. The Committee recommended that it should be raised to Rs. 25,000 so that large number of petty traders may not be inconvenienced because, according to the study of the Committee, there are several thousands of cases of assessment whose annual turnover is less than Rs. 25,000. Accordingly the Government has accepted the recommendation and a provision has been made in this Bill.

Then the composition limit has also been raised from the present Rs. 25,000 to Rs. 75,000. This is also done with a view to see that petty traders are not required to keep accounts, and submit themselves for assessment.

The third aspect is the rationalisation of the tax structure. This Committee recommended that the tax rates in respect of luxury goods should be raised to 12 per cent from the present 11 per cent. According to the Committee, the rates may be so rationalised that for calculation and for accounting, it may be easy. In regard to certain goods, the Committee had recommended enhancement but the Government has slightly modified the recommended rates, for instance, bricks and tiles except country bricks and country tiles. As against the existing rate of 3½ percent, the Committee had recommended 6 percent. The Government think that it should not be more than 4 per cent. Therefore, the Bill has provided for 4 per cent so far as those items are concerned.

Similarly in regard to Lifts item 19 in the Act as against 4½ per cent the committee recommended 10 per cent and the Government has further increased it to 12 per cent. In regard to opium, ganja and bhang as against 12½ per cent the committee had recommended 12 per cent because according to the committee, 12 per cent should be the maximum tax. But the Government has decided to raise it to 25 per cent as in the case of other liquors and intoxicants.

These are the few cases where the Government has departed from the recommendations of the committee. Similarly in regard to bullions the present rate of tax is one per cent. The committee had recommended for the retention of the rate. But the Government have decided to increase it to 2 per cent. The additional revenue on account of this measure is estimated to be of the order of 1½ to 2 crores.

SRI G. CHANDRAKANT.—Hitherto with regard to raw silk there was no sales tax.

SRI RAMAKRISHNA HEGDE.—There was sales tax. There was the licence fee.

SRI G. CHANDRAKANTH.—Minimum and maximum licence fee was there. It is detrimental in the interest of silk business.

SRI R. DAYANANDA SAGAR.—You are taxing twisted silk. There is no point of levying again on raw silk. The industry is in its infant stage.

Sri RAMAKRISHNA HEGDE.—Another important point that the hon. Members might have noticed is this. At present motor spirits are being taxed under a separate Act, *i.e.*, on the basis of litreage, 9 paise per litre for petrol and 10 paise per litre for diesel oil. This is sought to be converted into *ad valorem* and sales tax is proposed to be levied at the rate of 10 per cent for petrol and 12 per cent for diesel oil. While, doing so, we have taken into consideration that the public is not hit hard. Recently the Central Government has enhanced excise duty on this. While fixing the rates sufficient care has been taken to see that the consumers are not hit very hard.

Mr. SPEAKER.—I would like to make one suggestion to the hon. Member Sri H. Siddaveerappa. The bill is stated to be based on the recommendations of the committee of which the hon. Member was a member. Therefere, after hearing the hon. Members if the hon. Member Sri Siddaveerappa were to speak and explain why a particular decision was taken, it would be advantageous to the House. Thereafter the Hon. Minister will reply.

Sri H. SIDDAVEERAPPA.—I have no objection. But the only point is, I am sure the Hon. Minister will take care of this Bill and he will reply. If there are any points about the report, I have my own observations to make. Aprat from that, on the provisions of the Bill I would like to make my own observations.

†ಶ್ರೀ ಎಸ್. ಶಿವಪ್ಪ.—ಅಧ್ಯಕ್ಷರೇ, ಆರ್ಥಿಕ ಸಚಿವರು ಮಂಡನೆ ಮಾಡಿರತಕ್ಕ ಮಾರಾಟ ತೆರಿಗೆ ತಿದ್ದುಪಡಿ ಮಸೂದೆಯನ್ನು ನಾನು ತೀವ್ರವಾಗಿ ವಿರೋಧ ಮಾಡುತ್ತ, ಈ ಹೊತ್ತು ಈ ಮಸೂದೆಯನ್ನು ಮಂಡನೆ ಮಾಡತಕ್ಕ ಕಾಲದಲ್ಲಿ ಆರ್ಥಿಕ ಸಚಿವರು ಹೊಸದಾಗಿ ಟ್ಯಾಕ್ಸೇಷನ್ ಪೇಪರ್ ಹಾಕುತ್ತಿದ್ದಾರೋ ಅಥವಾ ಮಾರಾಟ ತೆರಿಗೆ ತಿದ್ದುಪಡಿ ಮಸೂದೆಯನ್ನು ಮಂಡನೆ ಮಾಡುತ್ತಿದ್ದಾರೋ ಎನ್ನುವ ಅನುಮಾನ ನನಗೆ ಬಂತು. ಮಾರಾಟ ತೆರಿಗೆ ತಿದ್ದುಪಡಿ ಮಾಡುವ ನೆಪದಲ್ಲಿ ಅನೇಕ ಹೊಸ ತರಹ ತೆರಿಗೆಗಳನ್ನು ವ್ಯವಸ್ಥಿತವಾಗಿ ಹೊರಿಸುವುದಕ್ಕೆ ಏನನ್ನು ಮಾಡಿದ್ದಾರೆ. ಈ ವಿಚಾರದಲ್ಲಿ ಶಾಸನ ಸಭೆ ತೀವ್ರವಾಗಿ ಆಲೋಚನೆ ಮಾಡಬೇಕಾಗಿದೆ. ಸಣ್ಣ ಪುಟ್ಟ ಒಂದೆರಡು ಬದಲಾವಣೆಗಳನ್ನು ಮಾಡಬಹುದು ಎಂಬುದು ನನ್ನ ಭಾವನೆಯಾಗಿತ್ತು. ಆದರೆ ಈಗ ನಮ್ಮ ಮುಂದೆ ತಂದಿರುವ ಮಸೂದೆಯನ್ನು ನೋಡಿದರೆ ಕೊನೇ ಪಕ್ಷ ನಾಲ್ಕು ದಿವಸವಾದರೂ ಚರ್ಚೆ ಮಾಡಬೇಕಾಗಿದೆ ಎಂದು ಕಾಣುತ್ತದೆ. ಒಂದೊಂದು ಬಾಬಿನ ಮೇಲೂ ಇವರು ಹಾಕಿರತಕ್ಕ ಮಾರಾಟ ತೆರಿಗೆಯಿಂದ ಸಮಾಜದ ಮೇಲೆ ಏನು ಪರಿಣಾಮವಾಗುತ್ತದೆ, ಸಂಬಂಧಪಟ್ಟ ಕೈಗಾರಿಕೆಗಳ ಮೇಲೆ ಏನು ಪರಿಣಾಮವಾಗುತ್ತದೆ, ಕೊಂಡುಕೊಳ್ಳತಕ್ಕವನ ಮೇಲೆ ಏನು ಪರಿಣಾಮವಾಗುತ್ತದೆ, ಎಂದು ನಾನು ವಿಚಾರ ಮಾಡಿದೆ. ಪ್ರತಿಯೊಂದು ಬಾಬಿನ ಮೇಲೂ ಎರಡು ಪರ್ಸೆಂಟ್, ನಾಲ್ಕು ಪರ್ಸೆಂಟ್ ಹೀಗೆ ಟ್ಯಾಕ್ಸ್ ಹೆಚ್ಚು ಮಾಡಿರುವುದರಿಂದ ಎಷ್ಟು ಆದಾಯ ಬರುತ್ತದೆ ಎನ್ನುವ ಅಂಕಿಅಂಶಗಳು ಇವರ ಹತ್ತಿರವಿಲ್ಲ. ಒಂದೂವರೆ ಅಥವಾ ಎರಡು ಕೋಟಿ ರೂಪಾಯಿ ಬರಬಹುದು ಎಂದು ಮಾನ್ಯ ಮಂತ್ರಿಗಳು ಯಾವ ಆಧಾರದ ಮೇಲೆ ಹೇಳಿದರು ? ಈ ಮಸೂದೆಯ ಪ್ರಕಾರ ನಮ್ಮ ದೇಶದ ಜನತೆಯ ಮೇಲೆ ಹತ್ತು ಕೋಟಿ ರೂಪಾಯಿಗಿಂತ ಜಾಸ್ತಿ ಭಾರ ಬೀಳುತ್ತದೆ. ಪ್ರತಿಯೊಂದು ಬಾಬಿಗೂ ವಿವರಗಳನ್ನು ಕೊಡಬೇಕು ಎಂದು ಕೇಳುತ್ತೇನೆ. ಪ್ರತಿಯೊಂದು ಬಾಬಿನ ಮಾರಾಟ ಎಷ್ಟು, ಅದರಿಂದ ಎಷ್ಟು ತೆರಿಗೆ ಜಾಸ್ತಿ ಬರುತ್ತದೆ ಎನ್ನುವುದರ ಲೆಕ್ಕ ಇದೆಯೇ ? ಯಾವ ಶಾಸ್ತ್ರೀಯ ಆಧಾರದ ಮೇಲೆ ಇಷ್ಟು ವರಮಾನ ಬರುತ್ತದೆ ಎಂದು ಅಂದಾಜು ಮಾಡಿದ್ದಾರೆ ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ. ರ್‍ಯಾಷನಲೈಸೇಷನ್ ದೃಷ್ಟಿಯಿಂದ ಮತ್ತು ಲೆಕ್ಕಾಚಾರ ಹಾಕುವುದಕ್ಕೆ ಸುಲಭವಾಗಬಹುದು ಎನ್ನುವ ದೃಷ್ಟಿಯಿಂದ ಅಕೌಂಟಿಂಗ್ ಮತ್ತು ಕ್ಯಾಲ್ಕ್ಯುಲೇಷನ್ ಸುಲಭವಾಗಬೇಕು ಎನ್ನುವ ದೃಷ್ಟಿಯಿಂದ ಟ್ಯಾಕ್ಸ್ ಜಾಸ್ತಿ ಮಾಡಬೇಕಾಗಿದೆ ಎಂದು ಹೇಳುತ್ತಿದ್ದಾರೆ. ಹಾಗಿದ್ದರೆ ಎರಡು ಪರ್ಸೆಂಟ್ ಇರುವುದನ್ನು

ಹತ್ತು ಪರ್ಸೆಂಟಿಗೆ ಏರಿಸಿದರೆ ಲೆಕ್ಕ ಮಾಡುವುದು ಸುಲಭವಾಗುತ್ತದೆ. ಅವರು ವಾರಾಟ ತೆರಿಗೆಯನ್ನು ಜಾಸ್ತಿ ಮಾಡುವುದಕ್ಕೆ ಮತ್ತು ಅದರಿಂದ ಎಷ್ಟು ಹೆಚ್ಚು ವರಮಾನ ರಾಜ್ಯ ಸರ್ಕಾರಕ್ಕೆ ಬರುತ್ತದೆ ಎನ್ನುವುದಕ್ಕೆ ಅವರಲ್ಲಿ ಶಾಸ್ತ್ರೀಯವಾದ ವಾದವಿದೆಯೇ ಎಂದು ಕೇಳುತ್ತೇನೆ.

ಮಾನ್ಯ ಆರ್ಥಿಕ ಸಚಿವರು ಬಜೆಟ್ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದುದನ್ನು ನೋಡಿ ಕೆಲವು ಸಣ್ಣಪುಟ್ಟ ತಿದ್ದುಪಡಿ ಮಾಡುತ್ತಾರೆ ಎನ್ನುವ ಆಧಾರದ ಮೇಲೆ ಈ ಮಸೂದೆಯನ್ನು ಒಂದು ದಿವಸ ಚರ್ಚೆ ಮಾಡಿದರೆ ಸಾಕು ಎಂದು ನನ್ನ ಭಾವನೆ ಇತ್ತು. ಮಾನ್ಯ ಮಂತ್ರಿಗಳು ಈ ಮಸೂದೆ ಬಹಳ ಸುಲಭವಾದ ಮಸೂದೆ ಎಂದು ಹೇಳಿದರು. ಆದರೆ ಇವರು ಸೇಲ್ಸ್ ಟ್ಯಾಕ್ಸ್ ತಿದ್ದುಪಡಿ ಮಾಡತಕ್ಕ ನೆಪದಲ್ಲಿ ದೊಡ್ಡ ಟ್ಯಾಕ್ಸೇಷನ್ ಮೆಷರ್ ತಂದು ಈ ಸಭೆಯ ಮುಖಾಂತರ ಜನತೆಯ ಮೇಲೆ ಹೇರತಕ್ಕ ಒಂದು ಜಾಣತನವನ್ನು ಮೋಸದಿಂದ ತಂದಿದ್ದಾರೆ. ಈಗ ಇರತಕ್ಕಂಥ ರೀತಿಯಲ್ಲಿ ಈ ಸೇಲ್ಸ್ ಟ್ಯಾಕ್ಸ್ ಮಸೂದೆ ಒಪ್ಪುವುದಕ್ಕೆ ಸಾಧ್ಯವಿಲ್ಲ. ಈ ಮಸೂದೆಯನ್ನು ವಾಪಸ್ಸು ತೆಗೆದುಕೊಳ್ಳಬೇಕು. ಯಾಕೆಂದರೆ ಯಾವ ಯಾವ ಪದಾರ್ಥಗಳ ಮೇಲೆ ಸೇಲ್ಸ್ ಟ್ಯಾಕ್ಸ್ ಹಾಕುತ್ತೀರಿ, ಅದರಿಂದ ಏನು ಪರಿಣಾಮವಾಗುತ್ತದೆ ಎನ್ನತಕ್ಕಂಥ ಅಂಶವನ್ನು ಸಭೆಯಲ್ಲಿ ಕೂಲಂಕಷವಾಗಿ ಚರ್ಚೆ ಮಾಡಿ ಆ ನಂತರ ತೀರ್ಮಾನ ಮಾಡಬೇಕು. ಈ ತಿದ್ದುಪಡಿ ಮಸೂದೆಯನ್ನು ವಾಪಸ್ಸು ತೆಗೆದುಕೊಳ್ಳುವುದು ಜಾಣತನ ಎಂದು ಹೇಳುತ್ತೇನೆ. ಷೆಡ್ಯೂಲಿನಲ್ಲಿ 83 ಐಟಮ್ಸ್ ಇವೆ, ಇದರಲ್ಲಿ ಸುಮಾರು 65 ಐಟಮ್ಸ್‌ನಲ್ಲಿ ಸೇಲ್ಸ್ ಟ್ಯಾಕ್ಸ್ ಜಾಸ್ತಿ ಮಾಡಿದ್ದೀರಿ. ಅಲ್ಲದೆ ಇದರಲ್ಲಿ 33 ಹೊಸ ಐಟಮ್ಸ್ ಸೇರಿಸಿದ್ದೀರಿ. ಮೂಲ ಕಾನೂನಿಗಿಂತ ಹೆಚ್ಚು ಪರಿಣಾಮಕಾರಿ ಮಸೂದೆ ತಂದಿದ್ದೀರಿ. ಇಂಥಾದ್ದನ್ನು ನಮ್ಮ ತಲೆಯ ಮೇಲೆ ಹಾಕಿ ಒಪ್ಪು ಅಂದರೆ ಹೇಗೆ ಒಪ್ಪುವುದಕ್ಕೆ ಸಾಧ್ಯ ? ಈ ತಿದ್ದುಪಡಿ ಮಸೂದೆ ಜಾರಿಗೆ ಬಂದ ಮೇಲೆ ಒಂದೂವರೆ ಕೋಟಿ ಆದಾಯ ಬರುತ್ತದೆ ಎಂದು ಹೇಳುತ್ತೀರಿ. ಆದರೆ ಸಿಂಗಲ್ ಪಾಯಿಂಟ್ ಇದ್ದುದ್ದನ್ನು ಮಲ್ಟಿ ಪಾಯಿಂಟ್ ಮಾಡಿದ್ದೀರಿ. ಬಜೆಟ್ ಭಾಷಣದಲ್ಲಿ ತಾವು ಹೇಳಿರುವುದು ಒಂದು, ಮಸೂದೆ ತಂದಿರತಕ್ಕಂಥದ್ದು ಬೇರೆಯಾಗಿದೆ. ಹಣಕಾಸಿನ ಸಚಿವರ ಮಾತಿಗೆ ಬೆಲೆ ಇಲ್ಲವೇ ? ಹೊಸ ತೆರಿಗೆ ಹಾಕುವ ರೀತಿಯಲ್ಲಿ ಈ ಮಸೂದೆ ತರಲಾಗಿದೆ. ಆದುದರಿಂದ ಈ ಮಸೂದೆ ಅಪಾಯಕಾರಿ ಆಗಿದೆ ಎಂದು ಸಭಾಧ್ಯಕ್ಷರ ಮೂಲಕ ಹಣಕಾಸಿನ ಸಚಿವರಿಗೆ ಎಚ್ಚರಿಕೆ ಕೊಟ್ಟು ಒಂದೆರಡು ಮಾತು ಹೇಳುತ್ತೇನೆ.

ಟರ್ನಓವರ್ ಮಿನಿಮಂ ಲಿಮಿಟ್ 10 ಸಾವಿರ ಇದ್ದುದನ್ನು 25 ಸಾವಿರದವರೆಗೆ ಮಿತಿ ಏರಿಸಲಾಗಿದೆ. ಮತ್ತು ಮ್ಯಾಗ್ಸಿಮಂ ಲಿಮಿಟ್ಟು 75 ಸಾವಿರದವರೆಗೆ ಮಿತಿ ಇಡಲಾಗಿದೆ. ಆದರೆ ಹಳೇ ರೂಲ್ಸ್ ಪ್ರಕಾರ ಕಾಂಪೋಜಿಶನಕ್ಕೆ 15 ರೂ. ಇದ್ದ ಕಡೆ 600 ರೂ.ಗಳಿಗೆ ಏರಿಸಿದ್ದೀರಿ. ಅಲ್ಲದೆ 25 ರೂ. ಇದ್ದುದನ್ನು 1200 ರೂ.ಗಳಿಗೆ ಹೆಚ್ಚಿಸಿದೆ. ಇದು ಸರಿಯಾಗಿಲ್ಲ. ಮೊದಲು ಇದ್ದಂತೆ ಮಾಡಬೇಕು ಎಂದು ಹೇಳುತ್ತೇನೆ.

ಈ ಮಸೂದೆಯಲ್ಲಿ ಮುಖ್ಯವಾಗಿ ಇದ್ದಂಥ ಎರಡನೇ ಷೆಡ್ಯೂಲಿನಲ್ಲಿ ಪ್ರತಿಯೊಂದು ಐಟಮ್ಮಿಗೆ ಒಂದು ಪರ್ಸೆಂಟ್, ಎರಡು ಪರ್ಸೆಂಟ್, ನಾಲ್ಕು ಪರ್ಸೆಂಟ್, ಆರು ಪರ್ಸೆಂಟ್ ಹೀಗೆ ಜಾಸ್ತಿ ಮಾಡಿದ್ದೀರಿ. ಇದನ್ನು ಮಾಡಲು ನೀತಿ ಏನು ಎಂಬುದನ್ನು ವಿಚಾರ ಮಾಡಬೇಕಾಗಿದೆ. ರಿಫೈನ್ಡ್ ಆಯಿಲ್, ವನಸ್ಪತಿ, ಡಾಲ್ಡಾ ಇವುಗಳಿಗೆ ಟ್ಯಾಕ್ಸ್ ಬೇಡ ಎಂದು ಬಿಟ್ಟು ಬಿಟ್ಟಿದ್ದೀರಿ. ವನಸ್ಪತಿ ಡಾಲ್ಡಾ ಮೇಲೆ ಆರೂವರೆ ಪರ್ಸೆಂಟ್ ಇದ್ದುದನ್ನು ಆರು ಪರ್ಸೆಂಟಿಗೆ ಇಳಿಸಲಾಗಿದೆ. ಆದರೆ ಔಷಧಿಗಳ ಮೇಲೆ ಹೊಸದಾಗಿ ಆರು ಪರ್ಸೆಂಟ್ ಟ್ಯಾಕ್ಸ್ ಹಾಕಲಾಗಿದೆ. ಇದರಲ್ಲಿ ಇರುವ ನೀತಿ ಏನು ? ಇವು ಬಡವರಿಗೆ ಬೇಕಾದ ವಸ್ತುಗಳಾಗಿವೆ. ಗೋಲ್ಡ್ ಥ್ರೆಡ್ ಇದು ಲಗ್ಜುರಿ ಆರ್ಟಿಕಲ್ ಎಂದು ಎರಡೂವರೆ ಪರ್ಸೆಂಟ್ ಇದ್ದುದನ್ನು ಎರಡು ಪರ್ಸೆಂಟಿಗೆ ಇಳಿಸಲಾಗಿದೆ. ಇದು ಏನು ನೀತಿ ? ಫ್ಯಾನ್ಸಿ ಲಕ್ಷುರಿ ಆರ್ಟಿಕಲ್ ಇದ್ದರೂ ಆರೂವರೆ ಪರ್ಸೆಂಟ್ ಇದ್ದುದನ್ನು ಆರು ಪರ್ಸೆಂಟಿಗೆ ಕಡಿಮೆ ಮಾಡಿದ್ದೀರಿ. ಇದರಿಂದ ಏನು ತಿಳಿದು ಬರುತ್ತದೆ ಅಂದರೆ ನಿಮ್ಮಲ್ಲಿ ಒಂದು ಸರಿಯಾದ ನೀತಿ ಇಲ್ಲ. ಹೆಂಡದ ವಿಚಾರದಲ್ಲಿ ನಿಮಗೆ ಕನಿಕರ ಬಂದು 5 ಪರ್ಸೆಂಟ್ ಇದ್ದುದನ್ನು 4 ಪರ್ಸೆಂಟಿಗೆ ಇಳಿಸಲಾಗಿದೆ. ಈಗ ಹೆಂಡ ಕುಡಿಯುವುದು ಒಂದು ಫ್ಯಾಷನ್ ಆಗಿ ಬಿಟ್ಟಿದೆ. ಒಳ್ಳೆಯವರೂ ಸಹ ಹೆಂಡ ಕುಡಿಯುತ್ತಾರೆ. ಏತಕ್ಕೆ ಕನಿಕರ 4 ಪರ್ಸೆಂಟ್ ಮಾಡಿದ್ದೀರಿ ? ಇದರ ಔಚಿತ್ಯ ಏನು ? ಇದಕ್ಕೆ ಸಮಾಧಾನಕಾರಕವಾದ ಉತ್ತರ ಕೊಡಬೇಕು ಎಂದು ನಿರೀಕ್ಷಣೆ ಮಾಡುತ್ತೇನೆ.

ಕಬ್ಬು ಬೆಳೆದು ಅದನ್ನು ಬೆಲ್ಲ ಮಾಡಿ ತೆಗೆದುಕೊಂಡು ಹೋಗುವವನಿಗೆ 3 ಪರ್ಸೆಂಟ್ ಇದ್ದುದನ್ನು 4 ಪರ್ಸೆಂಟ್ ಮಾಡಲಾಗಿದೆ. ಇಂದು ಬೆಲ್ಲದ ಪರಿಸ್ಥಿತಿ ಏನು ಇದೆ ಇದು ಎಲ್ಲರಿಗೂ ಗೊತ್ತಿದೆ. ಕಬ್ಬು ಬೆಳೆದವರ ಪರಿಸ್ಥಿತಿ ಸರಿಯಾಗಿಲ್ಲ. ಅವರೆಲ್ಲರೂ ಪಾಪರ್ ಆಗಿ ಬಿಟ್ಟಿದ್ದಾರೆ.

(ಶ್ರೀ ಎಸ್. ಶಿವಪ್ಪ)

ಈ ದಿವಸ ಕಬ್ಬು ಹಾಕಿದವರು ಪಾಪರ್ ಆಗಿದ್ದಾರೆ. ಬೆಲ್ಲಕ್ಕೆ ಬೆಲೆಯೇ ಇಲ್ಲದಂತಾಗಿದೆ, ಗಿರಾಕಿಯೂ ಇಲ್ಲವಾಗಿದೆ. ಬೆಲ್ಲವನ್ನು ಕೇಳುವವರೇ ಇಲ್ಲ. ಈ ರೀತಿ ಪರಿಸ್ಥಿತಿ ಇರುವಾಗ ಈ ಒಂದು ಕೈಗಾರಿಕೆಗೆ ವಿನಾಯಿತಿ ತೋರಿಸುವುದನ್ನು ಬಿಟ್ಟು ಇದರ ಮೇಲೆ 3 ಪರ್ಸೆಂಟು ಇದ್ದುದನ್ನು 4 ಪರ್ಸೆಂಟು ಮಾಡಿದ್ದೀರಲ್ಲಾ ಇದರ ಔಚಿತ್ಯ ಏನು ಎಂದು ನಾನು ಸರ್ಕಾರವನ್ನು ಕೇಳುತ್ತೇನೆ.

2-30 P.M.

ಇನ್ನು ಗಾಣದ ವಿಚಾರ ಮಾತನಾಡಬೇಕಾಗಿದೆ. ಹಿಂದೆ ಬೆಲ್ಲದ ಬೆಲೆ ಚೆನ್ನಾಗಿದ್ದಾಗ ಮಂಡ್ಯದಲ್ಲಿ ಕಬ್ಬಿನ ಕಾರ್ಖಾನೆಯವರು ಬೆಲ್ಲವನ್ನು ಮಾಡುತ್ತಾ ಇರಲಿಲ್ಲ. ಆ ಸಂದರ್ಭದಲ್ಲಿ ಮಂಡ್ಯದಲ್ಲಿರುವ ರೈತರಿಗೆ ಎರಡು ಸಾವಿರ ಗಾಣಗಳನ್ನು ಕೊಟ್ಟು ಬೆಲ್ಲ ಮಾಡಲಿ ಎಂದು ಅವರಿಗೆ ಅನುಕೂಲ ಮಾಡಿಕೊಟ್ಟರು. ಈಗ ಅವರ ಸ್ಥಿತಿ ಕೇಳುವವರೇ ಇಲ್ಲ. 2-3 ವರ್ಷದ ಹಿಂದೆ ಒಂದು ಸಾರಿ ಸೇಲ್ಸ್ ಟ್ಯಾಕ್ಸ್ ಡಿಪಾರ್ಟ್‌ಮೆಂಟಿನವರು ಹೋದಾಗ ಅವರ ಹತ್ತಿರ 100-200 ರೂಪಾಯಿ ಲಂಚ ತೆಗೆದುಕೊಂಡಿದ್ದಾರೆ. ಆವಾಗಿನ ಸಂದರ್ಭದಲ್ಲಿ ಒಬ್ಬೊಬ್ಬ ರೈತರಿಗೂ 20 ಸಾವಿರ, 30 ಸಾವಿರ, 60 ಸಾವಿರದಿಂದ ಒಂದು ಲಕ್ಷದವರೆಗೂ ಲಾಭ ಬಂದಿರಬಹುದು. ಹಿಂದೆ ಈ ಗಾಣದ ಒಂದು ಕೈಗಾರಿಕೆಯಲ್ಲಿ ಏನು ಲಾಭ ಬಂದಿತ್ತೋ ಇಂದಿನ ಪರಿಸ್ಥಿತಿ ಕೇಳಿದರೆ ಈ ಕೈಗಾರಿಕೆ ಮೇಲೆ ಏತಕ್ಕೆ ಈ ಒಂದು ಪರಿಣಾಮ ಉಂಟಾಯಿತು ಎನ್ನುವ ಪ್ರಶ್ನೆ ಬರುತ್ತದೆ. ಆದುದರಿಂದ ಈ ಗಾಣದ ಮೇಲೆ ಹಾಕಿರುವ ತೆರಿಗೆ ಹೋಗಬೇಕು. ಇದರ ಬಗ್ಗೆ ಮಾನ್ಯ ಸಚಿವರು ಭರವಸೆ ಕೊಡಬೇಕು. ನೀವು ಇದಕ್ಕೆ ವಿನಾಯಿತಿ ಕೊಟ್ಟು ಗ್ರಾಮ ಕೈಗಾರಿಕೆಯಾದ ಇದನ್ನು ಉಳಿಸುವ ಹಾಗೆ ಮಾಡಬೇಕು. ಇಲ್ಲದೇ ಹೋದರೆ ಇದನ್ನು ಕೊಲೆ ಮಾಡಿದ ಹಾಗಾಗುತ್ತದೆ. ಆದುದರಿಂದ ಬೆಲ್ಲ ಮಾಡುವ ರೈತರಿಗೆ ಇದರ ಬಗ್ಗೆ ಸಹಾಯ ಮಾಡಬೇಕು ಎಂದು ನಾನು ಸರ್ಕಾರಕ್ಕೆ ಒಂದು ಸೂಚನೆ ಕೊಡುತ್ತೇನೆ.

ಇನ್ನು ಕಡಲೆಕಾಯಿ, ತೆಂಗಿನಕಾಯಿ ಇದಕ್ಕೆ ಈವೊತ್ತಿನ ದಿವಸ ಸಿಂಗಲ್ ಪಾಯಿಂಟ್ ಟ್ಯಾಕ್ಸ್ ಇದ್ದುದನ್ನು ಮಲ್ಟಿಪಾಯಿಂಟ್ ಮಾಡಿ 2 ಪರ್ಸೆಂಟು ಟ್ಯಾಕ್ಸ್ ಹಾಕಿದ್ದೀರಿ. ಇದು ಕೈ ಕೈ ಬದಲಾಯಿಸುತ್ತಾ ಹೋದಾಗ 6,7,8, ಪರ್ಸೆಂಟು ಆಗಬಹುದು. ಕಡಲೆಕಾಯಿ ಮತ್ತು ತೆಂಗಿನ ಕಾಯಿ ಸಾಮಾನ್ಯ ಜನರು ಉಪಯೋಗಿಸುವಂಥ ಪದಾರ್ಥಕ್ಕೆ ಮಲ್ಟಿಪಾಯಿಂಟ್ ತೆರಿಗೆ ಹಾಕಿರು ವುದನ್ನು ಬಿಟ್ಟು ಸಿಂಗಲ್ ಪಾಯಿಂಟ್ ತೆರಿಗೆ ಹಾಕುವುದು ಒಳ್ಳೆಯದು ಎಂದು ನಾನು ಸೂಚನೆ ಮಾಡುತ್ತೇನೆ.

ಅಧ್ಯಕ್ಷರೇ, ಈಗ ಇದ್ದಂಥ ತೆರಿಗೆಗಳನ್ನು ಹೆಚ್ಚು ಮಾಡುವುದರ ಜೊತೆಗೆ ಇನ್ನೂ 33 ಹೊಸ ಪದಾರ್ಥಗಳಿಗೆ ತೆರಿಗೆಯನ್ನು ಹೇರಲು ಹೋಗಿದ್ದೀರಿ. ಅದರಲ್ಲಿ ಲೂಬ್ರಿಕೇಟಿಂಗ್ ಆಯಿಲ್ ಇನ್ ಕ್ಲೂಡಿಂಗ್ ಗ್ರೀಸ್ ಅಂಡ್ ಫರ್ನೇಸ್ ಆಯಿಲ್, ಅರೆಕಾ, ಬೀಡಿ, ಕನ್‌ಫೆಕ್ಷನರಿ, ಮಕ್ಕಳು ತಿನ್ನತಕ್ಕಂಥ ಪೆಪರ್‌ಮೆಂಟ್, ಐಸ್‌ಫ್ರೂಟ್ಸ್ ಹೀಗೆ ಇನ್ನೂ ಮುಂತಾದುವುಗಳ ಮೇಲೆ 6 ಪರ್ಸೆಂಟು ಟ್ಯಾಕ್ಸ್ ಹಾಕಿದ್ದೀರಿ. ಇದನ್ನು ಯಾವ ಆಧಾರದ ಮೇಲೆ ಹಾಕಿದ್ದೀರಿ? ಅಲ್ಲದೆ ಹೊಸ ಪದಾರ್ಥಗಳಿಗೆ ಬೇರೆ ಹಾಕಿದ್ದೀರಿ.

ಇನ್ನು ರೇಷ್ಮೆ ಕೈಗಾರಿಕೆ ಬಗ್ಗೆ ನಮ್ಮ ಮಾನ್ಯ ಸ್ನೇಹಿತರಾದ ಶ್ರೀಮಾನ್ ದಯಾನಂದ ಸಾಗರ್‌ರವರು ಹೇಳಿದ ಹಾಗೆ ಈ ಕೈಗಾರಿಕೆ ಕುಂದಿಹೋಗಿದೆ. ಅಂಥಾದ್ದರಲ್ಲಿ ರಾ ಸಿಲ್ಕ್ ಮೇಲೆ ತೆರಿಗೆ ಹಾಕುವುದು ಅನ್ಯಾಯಕಾರ ಹಾಗೂ ಹಾನಿಕರ. ಹಣಕಾಸಿನ ಮಂತ್ರಿಗಳು ಈ ವಿಚಾರದಲ್ಲಿ ಉತ್ತರ ಕೊಡಬೇಕು. ಈ ಎಲ್ಲ ದೃಷ್ಟಿಯಿಂದಲೂ ಸರ್ಕಾರದವರು ಈ ವ್ಯಾಪಾರದ ತೆರಿಗೆಯನ್ನು ತಿದ್ದುಪಡಿ ಮಾಡತಕ್ಕಂಥ ನೆಪದಲ್ಲಿ ಹಿಂದೆ ಇದ್ದ ಪದಾರ್ಥಗಳ ಜೊತೆಗೆ ಇನ್ನೂ 33 ಪಾದಾರ್ಥಗಳಿಗೆ ಹೊಸ ತೆರಿಗೆಯನ್ನು ಹಾಕಿರುವುದು ಕ್ರೂರತನ ಹಾಗೂ ಅಪಾಯಕಾರಿಯಾಗಿದೆ. ಇದರಿಂದ ದೇಶದ ಜನಸಾಮಾನ್ಯರ ಮೇಲೆ ದುಷ್ಪರಿಣಾಮವಾಗುತ್ತದೆ ಇದನ್ನು ಯೋಚನೆ ಮಾಡಬೇಕು.

ಈಗಾಗಲೇ ಪೆಟ್ರೋಲ್ ಮೇಲೆ ಕೇಂದ್ರ ಸರ್ಕಾರದವರು ಎಕ್ಸೈಜ್ ಡ್ಯೂಟಿ ಹಾಕಿದ್ದಾರೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ತೆರಿಗೆ ಮಧ್ಯೆ ಸಿಕ್ಕಿ ಜನ ಚಟ್ನಿ ಆಗುತ್ತಿದ್ದಾರೆ. They have been sandwiched between Central Government and State Government. ಇದನ್ನು ಸರ್ಕಾರ ಯೋಚನೆ ಮಾಡಬೇಕು. ಅವರು ತೆರಿಗೆ ಹಾಕಿದ ಮೇಲೆ ನೀವಾದರೂ ಕೂಡ ಇದಕ್ಕೆ ಕೈ ಹಾಕಬಾರದು. ಅಥವಾ ಕೇಂದ್ರ ಸರ್ಕಾರದವರಿಗಾದರೂ ಸಲಹೆ ಮಾಡಬೇಕು.

This is injurious to the State. ಇದು ರಾಜ್ಯಕ್ಕೆ ಒಳಪಟ್ಟಂಥ ವಿಚಾರ. ಇದನ್ನು ರಾಜ್ಯ ಸರ್ಕಾರದವರೇ ತೀರ್ಮಾನ ಮಾಡಬೇಕು. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಈ ಇಬ್ಬರ ಪೈಪೋಟಿಯಿಂದ ಈ ವ್ಯಾಪಾರ ತೆರಿಗೆಯನ್ನು ಜನತೆಯ ಮೇಲೆ ಹಾಕುತ್ತಾ ಹೋದರೆ ಜನತೆಯ ಪರಿಸ್ಥಿತಿ ಏನಾಗಬೇಕು ? ಅವನಿಗೆ ಯಾವ ರೀತಿಯಲ್ಲೂ ನ್ಯಾಯ ದೊರೆಯಲಿಕ್ಕೆ ಆಗದ ಹಾಗೆ ಈ ಮಾರಾಟ ತೆರಿಗೆಯ ತಿದ್ದುಪಡಿಯನ್ನು ತಂತಕ್ಕಂಥ ಸಾಹಸಕ್ಕೆ ನಮ್ಮ ಆರ್ಥಿಕ ಸಚಿವರು ಪ್ರಯತ್ನ ಮಾಡಿದ್ದಾರೆ. ಈ ಪ್ರಯತ್ನ ಖಂಡಿತವಾಗಿಯೂ ದೇಶಕ್ಕೆ ಬಹಳ ಹಾನಿಕರವಾದ ಪ್ರಯತ್ನ. ಈ ತೆರಿಗೆಯ ಒಂದು ಹೊರೆಯನ್ನು ಜನತೆಯ ಮೇಲೆ ಏಕಕಾಲದಲ್ಲಿ ಹಾಕುತ್ತಾ ಹೋದರೆ ಅವರ ಬೆನ್ನುಮೂಳೆ ಮುರಿಯುವಂಥಾ ಸಾಹಸಕ್ಕೆ ಹೋದಂತಾಗುತ್ತದೆ. ಇದು ಕ್ರೂರವಾದ ಶಾಸನ. ಜನರಿಗೆ ಪ್ರತಿನಿತ್ಯದ ಬಳಕೆಯ ವಸ್ತುಗಳ ಬೆಲೆ ಗಗನಕ್ಕೆ ಏರುತ್ತಿರುವ ಕಾಲದಲ್ಲಿ ಮನುಷ್ಯನ ದಿನನಿತ್ಯದ ಜೀವನಕ್ಕೆ ಅಗತ್ಯವಾದ ವಸ್ತುಗಳ ಮೇಲೆ ತೆರಿಗೆ ಜಾಸ್ತಿ ಮಾಡುತ್ತಾ ಹೋಗುವುದು ಅಪಾಯಕಾರಿ ಹಾಗೂ ಹಾನಿಕರ.

ಇನ್ನು ಲಕ್ಸುರಿ ಆರ್ಟಿಕಲ್ಸ್ ವಿಷಯವಾಗಿ ಹೇಳುತ್ತೇನೆ. ಮೊದಲು ಯಾವುದು ಭೋಗವಸ್ತು ಎಂಬುದನ್ನು ನಿರ್ಧರಿಸಿ. ಮನುಷ್ಯನಿಗೆ ಅತ್ಯಗತ್ಯವಾಗಿ ಬೇಕಾದ ವಸ್ತು ಯಾವುದು ಅದರಲ್ಲಿ ಭೋಗವಸ್ತು ಯಾವುದು ಎಂದು ಮೊದಲು ಕಂಡುಹಿಡಿದಿದ್ದೀರಾ ? ತೆರಿಗೆ ಹಾಕುವುದು, ಇದು ಭೋಗವಸ್ತು ಎಂದು ಒಂದು ನೆಪ ಹೇಳುವುದು ಸರಿಯಲ್ಲ. ಸಾಬೂನು, ಕಡಲೆಕಾಯಿ ಎಣ್ಣೆ, ತೆಂಗಿನಕಾಯಿ, ನೆಲಗಡಲೆಕಾಯಿ ಇವು ಭೋಗವಸ್ತುಗಳೇ ! ಸಾಮಾನ್ಯ ಜನರಿಗೆ ಸಹಜವಾಗಿ ಪ್ರತಿನಿತ್ಯದ ಬಳಕೆಗೆ ಬೇಕಾಗುವ ವಸ್ತುಗಳು ಯಾವುವು ಇವೆ, ಅಂತಹ ವಸ್ತುಗಳು ಬಿಟ್ಟು ಬೇರೆ ಯಾವುದಾದರೂ ಇದ್ದರೆ ಅದಕ್ಕೆ ಭೋಗವಸ್ತು ಎಂದು ಹೇಳುತ್ತೇನೆ. ಆದರೆ ದಿನನಿತ್ಯದ ಬಳಕೆಯ ವಸ್ತುಗಳನ್ನೇ ಭೋಗವಸ್ತು ಎಂದು ಪರಿಗಣಿಸಿ ಅವಕ್ಕೆ ತೆರಿಗೆ ಹಾಕುವುದಾದರೆ ಜನತೆಗೂ ಸರ್ಕಾರಕ್ಕೂ ಎಷ್ಟು ದೂರ ಇದೆ ಅನ್ನುವುದು ಗೊತ್ತಾಗುತ್ತದೆ ಮನುಷ್ಯನಿಗೆ ದಿನನಿತ್ಯದ ಜೀವನದಲ್ಲಿ ಬಳಕೆಗೆ ಬೇಕಾದ ವಸ್ತುಗಳು ಯಾವುವು ಎಂದು ಅರ್ಥ ಮಾಡಿಕೊಳ್ಳುವ ಶಕ್ತಿ ರಾಜ್ಯ ಸರ್ಕಾರಕ್ಕೆ ಇಲ್ಲ. ಇವನ್ನು ಲಕ್ಸುರಿ ಆರ್ಟಿಕಲ್ಸ್ ಎಂದು ಹೇಳುತ್ತಾರೆ. ಏತಕ್ಕೆ ಅವರು ತಮ್ಮ ಮಟ್ಟದಲ್ಲಿ ಯೋಚನೆ ಮಾಡುತ್ತಾರೋ ಗೊತ್ತಿಲ್ಲ. ಈವತ್ತು ನೀವು ತೆರಿಗೆ ಹಾಕಿರುವ ವಸ್ತುಗಳಲ್ಲಿ ಶೇಕಡ 80 ರಷ್ಟು ದಿನನಿತ್ಯದ ಬಗ್ಗೆ ಬೇಕಾದ ವಸ್ತುಗಳಾಗಿವೆ. ಈವೊತ್ತು ಅದನ್ನು ಭೋಗ ವಸ್ತು ಎಂದು ಹೇಳಿ ಈ ಮಸೂದೆಯನ್ನು ತಂದಿರತಕ್ಕಂಥದ್ದು ನ್ಯಾಯವಲ್ಲ. ಈವೊತ್ತು ಖರಾರು ವಾಕ್ಯಾದ ಅಂಕಿ ಅಂಶ ಈ ಸಭೆಗೆ ಕೊಟ್ಟಿಲ್ಲ. ಈವೊತ್ತು ಹಿಂದೆ 60 ಪದಾರ್ಥಗಳ ಮೇಲೆ ಹಾಕಿದ ತೆರಿಗೆಗಳನ್ನು ಜಾಸ್ತಿ ಮಾಡಿ ಅದರ ಜೊತೆಗೆ 33 ಪದಾರ್ಥಗಳಿಗೆ ಹೊಸ ತೆರಿಗೆಗಳನ್ನು ಹಾಕಿದರೂ ಕೂಡ ಸರ್ಕಾರದ ಖಜಾನೆಗೆ ಬರತಕ್ಕಂಥಾದ್ದು $1\frac{1}{2}$ ಯಿಂದ 2 ಕೋಟಿ ರೂಪಾಯಿ ಆಗಬಹುದು ಎಂದು ನಾನು ಹೇಳುತ್ತೇನೆ. ಅವರ ಹತ್ತಿರ ಸ್ಟ್ಯಾಟಿಸ್ಟಿಕ್ಸ್ ಇಲ್ಲ. ಆದುದರಿಂದ ಈಗಲಾದರೂ ಕೂಡ ನಾನು ಹೇಳುತ್ತೇನೆ. ಈ ಮಸೂದೆಯನ್ನು ವಾಪಸ್ಸು ತೆಗೆದುಕೊಂಡು ಪುನಃ ಆಲೋಚನೆ ಮಾಡಿ ಜನತೆಗೆ ದಿನನಿತ್ಯದ ಅಗತ್ಯವಾಗಿರತಕ್ಕಂಥ ವಸ್ತುಗಳ ಮೇಲೆ ವಿನಾಯಿತಿ ಕೊಟ್ಟು ಯಾವುದು ಭೋಗವಸ್ತು ಎಂದು ನಿರ್ಧಾರ ಮಾಡಿ ಅವುಗಳ ಮೇಲೆ ತೆರಿಗೆ ಹಾಕುವುದನ್ನು ಯೋಚನೆ ಮಾಡಿ. ಇದರಿಂದ ನಾನು ಇದನ್ನು ವಿರೋಧಿಸುತ್ತೇನೆ. ಇದನ್ನು ಯೋಚನೆ ಮಾಡಿ ಆಮೇಲೆ ಮಸೂದೆ ತನ್ನಿ ಎಂದು ಮತ್ತೊಮ್ಮೆ ಹೇಳುತ್ತೇನೆ. ಆದುದರಿಂದ ಮಾನ್ಯ ಆರ್ಥಿಕ ಸಚಿವರು ಈ ಮಸೂದೆಯನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† SRI R. G. WALI (Hubli).—Mr. Speaker Sir, the Sales Tax (Amendment) Bill has been introduced to bring into force the suggestions made by the Committee headed by Sri Bhootalingam. This committee has made a number of suggestions and I have already expressed my opinion on some of them. No doubt the Bhootalingam Committee has taken into consideration various difficulties experienced by the consumers and dealers and also the incidence of multiple point tax on various items. Particularly item Nos. 84 to 116 which were causing great annoyance to the small traders and consumers, have been brought under this single point levy. I am very happy to note this.

(SRI R. G. ``ALI)

I have to point out that the Bhootalingam Committee has recommended that the limit for registration should be extended from Rs. 10,000 to Rs. 25,000. Really it is a welcome feature and most of the small dealers are benefited by it. But here I wish to point out that there is a particular stress laid on the fact that all the dealers having a turn-over of Rs. 10,000 and above, should be registered and also pay registration fees etc., whereby the small dealers will again be put to great hardship. The registration will force the dealers to maintain daily accounts and subject them again to face the officers who will trouble them. If these small dealers are asked to produce their accounts and appear for examination before the officers, they will have to appoint Sales Tax advisers and pay them fees and undergo a great hardship and the very fact of giving exemption to the small dealers will be nullified. Therefore, I suggest that this exemption limit of Rs. 25,000 should be a clear limit given to the small dealers without putting them to any hardship.

Sir, while going through the amending Bill, I find that while registering, the assessee will have to put in an application. The relevant clause, *i e.*, amendment of Section 10A sub-clause (4) (a) which states:

> "(4) (a) The prescribed authority shall, for good and sufficient reasons, demand from any dealer liable to pay tax under this Act and, who has been registered or has applied for renewal of registration, security for the proper payment of tax payable by him and on such demand such dealer shall furnish the same."

If this clause is accepted or laid down and if the department insists on the security being furnished by the dealers, it leads to give further authority to the Sales Tax Officers to say unless you give security I am not going to effect registration. Originally, there was a provision for the officers to use their discretion which is now being removed. I suggest therefore that instead of the word "shall" the word "may" be substituted, so as to provide for the officers to use their discretion only in doubtful cases and thereby avoid hardship to the assessees.

Regarding the proposal to substitute new section for Section 12-B in regard to payment of tax in advance, the proposed new section reads as follows:

> "12-B. Payment of tax in advance.—(1) Subject to such rules as may be prescribed, every dealer shall pay in advance every month the tax on his taxable turnover during the preceding month and when such payment is made, he shall send to the assessing authority a statement of his total turnover and taxable turnover during such preceding month."

Sir, originally the assessee was given an alternative. He was allowed to pay monthly or quarterly, so that the dealers are not put to hardship

since they cannot complete their accounts every month. Therefore Sir, I suggest that the original provision in this behalf should be retained. Further if the assessee pays tax less than fifteen per cent on the aggregate for the whole year he is liable to pay a penalty one and a half times the amount of tax payable by him. This causes much hardship to the dealers. Therefore, I suggest that the existing system should be continued.

Sri H. SIDDAVEERAPPA.—Many merchants and associations represented that existing system is injurious to them.

Sri R. G. WALI.—Sir, there are two points to be considered here. One is about self-assessment. In this case it would be quite in order if monthly statement of accounts are furnished. But in this case not only the dealers whose turnover is up to Rs. 25,000 but also whose turnover is more than that are also included. Therefore Sir, I feel that if the Government considers it necessary to continue the existing practice it would enable the dealers to produce correct accounts and thereby much hardship to these dealers could be avoided.

Then Sir, coming to another clause under section 20 the Government is thinking of amending this clause regarding appeals ; while prefering an appeal, the assessee is asked to pay the entire tax. The clause reads like this :

> " No appeal against an order of assessment shall be entertained by the appellate authority unless it is accompanied by satisfactory proof of the payment of the tax assessed and penalty, if any, due :"

If the amount is to be paid, then the appeal is made, then there is no question of any relief at all. Once the money is paid, you know what hardship is caused to the assessee. Since the assessee is made to pay tax every quarter, Government need not insist on payment before prefering an appeal. I suggest that this particular clause be removed so that no hardship is caused to the assessee.

Coming to another very important point, now what is happening? As I have already pointed out items 84 to 116–about 32 in number they have been transferred from multi-point to single point levy. These items are altogether new. It is not a mere transfer. It is simply said that they were subject to multi-point tax. I thank the Committee for having brought them under single point tax, because there used to be a lot of competition between the small dealer and big dealer. A person who is dealing in match box, for which there is multi-point levy, the big dealer has to pay 3 per cent. The small dealer who buys his stock from a big dealer has to pay this 3 per cent and sell at a higher price. But the person who goes to the big dealer can obtain his requirement 3 per cent cheaper. Therefore I am grateful to the committee for having brought these items under single point levy. I am sorry there is some confusion. I find that match box and chillies are still subject to multi-point levy. Match box and chillies are items which are consumed by

(SRI R. G. WALI)

every one, particularly the poorer sections of the community. They buy their stock once during some months and use it throughout the year. Since chillies is subject to multi-point tax, at the first stage, the commission agent will be charging 3 per cent in the town who purchases and sells this commodity, he has to charge another 3 per cent and a smaller dealer will have to pay another 3 per cent, so that in all, one has to bear a tax of nearly 9 per cent on chillies. I therefore suggest that matches and chillies also should be brought under single point levy. I would in the first instance plead for a total exemption and if exemption is not considered possible, I suggest that they should be brought under the second schedule for single point levy.

Sir, I was speaking of thems 84—116 which have been transferred to single point levy from multi-point. There will be huge stocks left with some shop-keepers as on 31st March 1970. Take for example, the medical stores. A person may be having a stock of Rs. 50,000 or Rs. 75,000 or even one lakh depending upon the turnover in the shop. If they have already paid 3 per cent according to the present system, they will again be required to pay 3 per cent on the stock which becomes excessive, and it would cause needless hardship because consumers will have to pay 6 per cent. So I suggest that this particular provision is suitably amended so as to keep it at 3 per cent. There are various other items included in items 84 to 116, items like lubricating oil, butter etc. Here again, one or two items which have been brought under the second schedule for single point levy, I want to point out are items like confectionary, biscuits, washing soap, flakes, ice and iced-fruits. Washing soap is used by all classes of people. Here it is brought for 6 per cent single point. It really is a very big percentage. I suggest that it may be reduced to 3 or 4 per cent. 3 per cent is already there, and it may be continued, since it is an article of consumption by all classes of people. Even for items like ice, confectionary, I do not think 6 per cent is reasonable because it is mostly consumed by small children. Why tax tender children ?

Regarding another aspect of levy on coconut oil, I should say that coconut oil is one of the most important items of consumption in South Kanara. Much of the oil is smuggled from Kerala and Kerala tax is 1½ per cent. Here you have brought for a single point of 4 per cent. I feel that 4 per cent is rather heavy and it will have to be reduced. Otherwise, it will give scope for smuggling to Kerala.

Lastly, as I pointed out, interpretations are made by the officers. Many a time in their own favour and assessees are put to great hardship. Wherever such interpretations are to be made, they may discuss the same in the advisory committee and difficulties may be solved at that level, because it is for that purpose that such advisory committees are constituted, and I suggest that precautions may be taken to issue necessary clarifications are issud promptly so as to avoid hardship to the assessees.

With these words, I welcome this Mysore Sales-Tax (amendment) Bill.

† ಶ್ರೀ ಟಿ. ಆರ್. ಶಾಮಣ್ಣ (ಫ್ರೋಟೆರ್).—ಮಾನ್ಯ ಅಧ್ಯಕ್ಷರೇ, ಈಗ ನಮ್ಮ ನಾಯಕರು ಹೇಳಿರುವಹಾಗೆ ಇಲ್ಲಿ ನಮಗೆ ಕೊಟ್ಟಿರತಕ್ಕ ಅಂಕಿ ಅಂಶಗಳನ್ನು ನೋಡಿದರೆ ಕಣ್ಣಿಗೆ ಮಣ್ಣೆರಚಿ ಕ್ಯಾಮೊಫ್ಲೇಜ್ ಮಾಡುವ ಪರಿಸ್ಥಿತಿಯಲ್ಲಿ ಇಟ್ಟಿದ್ದಾರೆ. ಇದನ್ನು ಪರಿಶೀಲನೆ ಮಾಡಿದರೆ ಇದರಿಂದ ಹೆಚ್ಚಾಗತಕ್ಕ ವರಮಾನ ಕೇವಲ ಒಂದೂಕಾಲು ಕೋಟಿ ಅಥವಾ ಒಂದೂವರೆ ಕೋಟಿ ಎಂದು ಹೇಳಿದ್ದಾರೆ. ಇದು ಖಂಡಿತವಾಗಿಯೂ ನಾಲ್ಕೈದು ಕೋಟಿಗಳಷ್ಟು ಜಾಸ್ತಿಯಾಗುತ್ತದೆ. ಈ ರೀತಿ ಯಾವ ಯಾವುದು ಎಷ್ಟೆಷ್ಟು ಆಗುತ್ತದೆ ಎನ್ನುವ ಅಂಶವನ್ನು ಪರಿಶೀಲನೆ ಮಾಡಿದರೆ ಅದಕ್ಕೆ ಸರಿಯಾದ ಅಂಕಿ ಅಂಶಗಳನ್ನು ಕೊಡದೆ ಬರೀ ಮಂಗಂ ಆಗಿ ಇಲ್ಲಿ ತಂದು ಇಟ್ಟಿರತಕ್ಕದ್ದು ಅವರು ಮಾಡಿರತಕ್ಕ ದ್ರೋಹ ಎಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ.

3-00 P.M.

ಈಗ ನಮ್ಮ ಮುಂದೆ ಇಟ್ಟಿರತಕ್ಕಂಥ ತಿದ್ದುಪಡಿಗಳಲ್ಲಿ ಮುಖ್ಯವಾದುದು ಎಂದರೆ ಮಿನಿಮಮ್ ಲಿಮಿಟನ್ನು 10 ಸಾವಿರ ರೂಪಾಯಿಗಳಿಂದ 25 ಸಾವಿರ ರೂಪಾಯಿಗಳಿಗೆ ಹೆಚ್ಚಿಸಿರುವುದು ಮತ್ತು ಕಾಂಪೋಸಿಷನ್ ಮಿತಿಯನ್ನು 75 ಸಾವಿರ ರೂಪಾಯಿಗಳಿಗೆ ಹೆಚ್ಚಿಸಿರುವುದು. ಈ ಎರಡು ಅಂಶಗಳಲ್ಲಿ ಕೂಡ ವ್ಯಾಪಾರಸ್ಥರು ಕಳ್ಳ ಲೆಕ್ಕವನ್ನು ಬರೆಯುವುದಕ್ಕೆ ಮತ್ತು ಸರ್ಕಾರಕ್ಕೆ ಮೋಸ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಂತಾಗಿದೆ. ಇನ್‌ಕಮ್ ಟ್ಯಾಕ್ಸ್‌ನಲ್ಲಿ ಮಾರ್ಜಿನಲ್ ರಿಲೀಫ್ ಇಟ್ಟಿರುವಂತೆ ಇಲ್ಲಿಯೂ ಇಟ್ಟಿದ್ದರೆ ಚೆನ್ನಾಗಿರುತ್ತಿತ್ತು. ಈಗ ಏನಾಗಿದೆ ಎಂದರೆ 25,100 ರೂಪಾಯಿಗಳ ವಹಿವಾಟು ಇದ್ದವರು ಟ್ಯಾಕ್ಸ್ ಕೊಡಬೇಕಾಗುತ್ತದೆ. 25,000 ರೂಪಾಯಿಗಳು ಇದ್ದವರು ಕೊಡಬೇಕಾಗಿಲ್ಲ. ಇದರಿಂದ ಸುಳ್ಳು ಲೆಕ್ಕ ಬರೆಯುವುದಕ್ಕೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ಆದ್ದರಿಂದ ಮಾರ್ಜಿನಲ್ ರಿಲೀಫ್ ಇಟ್ಟರೆ ಲೆಕ್ಕವನ್ನು ಸರಿಯಾಗಿ ಇಡುತ್ತಾರೆ. ಮತ್ತು ವರ್ತಕರಿಗೆ ಹೆಚ್ಚಿನ ತೊಂದರೆಯಾಗುವುದಿಲ್ಲ. ಕಾಂಪೋಸಿಷನ್ ಮಿತಿಯನ್ನು 75 ಸಾವಿರಕ್ಕೆ ಹೆಚ್ಚಿಸಿರುವುದರಿಂದ ದೊಡ್ಡ ದೊಡ್ಡ ವರ್ತಕರು ಕೂಡ ಸರಿಯಾಗಿ ಲೆಕ್ಕ ಇಡದೆ ಸರ್ಕಾರಕ್ಕೆ ಮೋಸ ಮಾಡುವ ಪ್ರಸಂಗಗಳು ಇವೆ. ನಮ್ಮ ದೇಶದಲ್ಲಿರುವ ಎಲ್ಲ ಇಲಾಖೆಗಳಿಗಿಂತಲೂ ಹೆಚ್ಚಿನ ಲಂಚರುಷುವತ್ತು ತುಂಬಿರತಕ್ಕಂಥದ್ದು ಸೇಲ್ಸ್ ಟ್ಯಾಕ್ಸ್ ಡಿಪಾರ್ಟ್‌ಮೆಂಟಿನಲ್ಲಿ ಎಂದು ಹೇಳಿದರೆ ತಪ್ಪಾಗಲಾರದು. ಪಾನನಿರೋಧವನ್ನು ಜಾರಿಗೆ ತಂದಿದ್ದರಿಂದ ಅದರಿಂದ ಬರುತ್ತಿದ್ದ ವರಮಾನವನ್ನು ಸರಿದೂಗಿಸಲು ಸೇಲ್ಸ್ ಟ್ಯಾಕ್ಸನ್ನು ಜಾರಿಗೆ ತರಲಾಯಿತು. ಕ್ರಮಕ್ರಮವಾಗಿ ಇದೇ ಒಂದು ಸರ್ಕಾರಕ್ಕೆ ಮುಖ್ಯವಾದ ವರಮಾನವಾಯಿತು. ವರ್ಷೇ ವರ್ಷೇ ಸೇಲ್ಸ್ ಟ್ಯಾಕ್ಸಿನಿಂದ ಬರುತ್ತಿರುವ ಆದಾಯ ಜಾಸ್ತಿಯಾಗುತ್ತಿದೆ ಎಂದು ಸರ್ಕಾರದವರು ಹೇಳಿದರೂ ಕೂಡ ಸೋರಿ ಹೋಗುವ ಹಣ ಬಹಳ ಇದೆ. ಈ ಬಗ್ಗೆ ನಾನು ಅನೇಕ ತಿಳಿವಳಿಕಸ್ಥರ ಬಳಿ ಮಾತನಾಡಿದ್ದೇನೆ. ಮತ್ತು ಚರ್ಚೆ ಮಾಡಿದ್ದೇನೆ. ಸರಿಯಾದ ರೀತಿಯಲ್ಲಿ ವಸೂಲಿ ಮಾಡಿದರೆ ಈಗ ವಸೂಲಿಯಾಗುತ್ತಿರುವುದಕ್ಕಿಂತ ಒಂದೂವರೆಯಷ್ಟು ಅಂದರೆ 50 ಪರ್‌ಸೆಂಟ್ ಹೆಚ್ಚಿಗೆ ವಸೂಲಿ ಮಾಡುವುದಕ್ಕೆ ಸಾಧ್ಯ ಎಂದು ತಿಳಿದವರು ಹೇಳುತ್ತಾರೆ. ಆದ್ದರಿಂದ ನಾನು ಮಾನ್ಯ ಅರ್ಥಿಕ ಸಚಿವರಿಗೆ ಒಂದು ಸವಾಲು ಹಾಕುತ್ತೇನೆ, ಏನೆಂದರೆ ಈಗ ಖರ್ಚು ಕಳೆದು ನೆಟ್ ವರಮಾನ ಈ ಬಾಬಿನಿಂದ ಎಷ್ಟು ಬರುತ್ತಿದೆಯೋ ಅದಕ್ಕಿಂತ 50 ಪರ್‌ಸೆಂಟ್ ಜಾಸ್ತಿ ಅಲ್ಲದಿದ್ದರೂ ಕೂಡ 20 ಪರ್‌ಸೆಂಟ್ ಜಾಸ್ತಿ ವಸೂಲಿ ಮಾಡಿಕೊಡುವ ಬಗ್ಗೆ ಏಜೆನ್ಸಿಗೆ ಒಪ್ಪಿಸುವುದಾದರೆ ನಾನು ಏಜೆನ್ಸಿಯನ್ನು ಒದಗಿಸಿಕೊಡುವುದಕ್ಕೆ ತಯಾರಿದ್ದೇನೆ ತಾವು ಒಪ್ಪುವುದಾದರೆ ಅದಕ್ಕೆ ಬೇಕಾದ ಏರ್ಪಾಡು ಮಾಡುವುದಕ್ಕೆ ಸಿದ್ಧನಿದ್ದೇನೆ. ಇವತ್ತು ಈ ಇಲಾಖೆಯಲ್ಲಿ ಬುಡದಿಂದ ಹಿಡಿದು ಕೊನೆಯ ಹಂತದವರೆಗೂ ಲಂಚರುಷುವತ್ತು ನಡೆಯುತ್ತಿದೆ. ಈ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿಗಳು ಮತ್ತು ನೌಕರರು ಬೇಕಾದ ಹಾಗೆ ಅನುಕೂಲ ಮಾಡಿಕೊಳ್ಳುತ್ತಿದ್ದಾರೆ. ಇವತ್ತು ಬೆಂಗಳೂರಿನಲ್ಲಿರತಕ್ಕಂಥ ಸೇಲ್ಸ್ ಟ್ಯಾಕ್ಸ್ ಅಧಿಕಾರಿಗಳು ಮನೆಗಳನ್ನು ಕಟ್ಟಿಕೊಂಡಿದ್ದಾರೆ, ಆಸ್ತಿ ಮಾಡಿಕೊಂಡಿದ್ದಾರೆ. ಇವರು ಮನೆ ಕಟ್ಟುವುದಕ್ಕೆ ಮೊದಲು ಅವರ ಆಸ್ತಿ ಎಷ್ಟಿತ್ತು ಎಂಬುದನ್ನು ಸರ್ಕಾರದವರು ತನಿಖೆ ಮಾಡಬೇಕು. ಈ ಇಲಾಖೆಯಲ್ಲಿ ಜವಾನನಿಂದ ಹಿಡಿದು ಮೇಲಿನ ಆಫೀಸರ್‌ವರೆಗೆ ಬರತಕ್ಕಂಥ ಲಂಚ ಹಂಚಿಕೆಯಾಗುತ್ತಿದೆ ಎಂದು ಕೇಳಿದ್ದೇನೆ. ಇವತ್ತು ಅಧಿಕಾರಿಗಳು ಲೆಕ್ಕ ಪರಿಶೀಲನೆ ಮಾಡುವುದಕ್ಕೆ ಮೊದಲೇ ವ್ಯಾಪಾರಿ ಹತ್ತಿರ ಲಂಚ ಎಷ್ಟು ಕೊಡುತ್ತೀಯಾ ಎಂದು ಕೇಳುತ್ತಾರೆ. ಲಂಚ ಕೊಡುವುದಕ್ಕೆ ಒಪ್ಪಿಕೊಳ್ಳದಿದ್ದರೆ ಇಲ್ಲದ ಕಿರುಕುಳ ಕೊಡುತ್ತಾರೆ. ಈ ವಿಚಾರ ಮಾನ್ಯ ಮಂತ್ರಿಗಳಿಗೂ ಕೂಡ ಗೊತ್ತಿರಬಹುದು. ಈ ಕಾರಣದಿಂದ ಸರ್ಕಾರಕ್ಕೆ ಬರುವ ಆದಾಯ

(ಶ್ರೀ ಟಿ. ಆರ್. ಶಾಮಣ್ಣ)

ಕಡಿಮೆಯಾಗುವುದಕ್ಕೆ ಕಾರಣವಾಗಿದೆ. ಆದ್ದರಿಂದ ನಾನು ಹೇಳಿದಂಥ ಸವಾಲನ್ನು ಮಾನ್ಯ ಮಂತ್ರಿಗಳು ಒಪ್ಪಿಕೊಂಡರೆ ಸರ್ಕಾರಕ್ಕೆ ಹೆಚ್ಚಿನ ಆದಾಯ ಬರುತ್ತದೆಂದು ಹೇಳುತ್ತೇನೆ. ಇವತ್ತು ಮಿನಿಮಮ್ ಲಿಮಿಟ್‌ನ್ನು 10 ಸಾವಿರದಿಂದ 25 ಸಾವಿರಕ್ಕೆ ಹೆಚ್ಚಿಸಿದ್ದರೂ ಕೂಡ ಮಾರ್ಜಿನಲ್ ರಿಲಿಫ್‌ಗೆ ಅವಕಾಶ ಕೊಟ್ಟಿಲ್ಲ. ಇದರಿಂದ 25 ಸಾವಿರದಿಂದ 26 ಸಾವಿರ ರೂಪಾಯಿಗಳ ವಹಿವಾಟು ನಡೆದಿದ್ದರೆ ಅಂತಹವರು ಟ್ಯಾಕ್ಸ್ ಕೊಡಬೇಕಾಗುತ್ತದೆ. ಇದನ್ನು ತಪ್ಪಿಸಿಕೊಳ್ಳಲು ರಾಮನ ಲೆಕ್ಕ, ಕೃಷ್ಣನ ಲೆಕ್ಕ ಎಂದು ಎರಡು ರೀತಿಯ ಲೆಕ್ಕಗಳನ್ನು ಬರೆದು ಸರ್ಕಾರಕ್ಕೆ ಮೋಸ ಮಾಡುತ್ತಾರೆ. ಇದನ್ನು ತಡೆಗಟ್ಟಲು ಮಾರ್ಜಿನಲ್ ರಿಲೀಫ್‌ನ್ನು ಕೊಡುವುದು ಒಳ್ಳೆಯದು. ಇವತ್ತು ಸೇಲ್ಸ್ ಟ್ಯಾಕ್ಸ್ ಆಫೀಸರ್‌ಗಳು ಬೆಂಗಳೂರಿಗೆ ವರ್ಗ ಮಾಡಿಸಿಕೊಂಡು ಬರಲು 20 ಸಾವಿರ ರೂಪಾಯಿಗಳವರೆಗೆ ಖರ್ಚು ಮಾಡುತ್ತಿದ್ದಾರೆ. ಇದರಿಂದ ಬೆಂಗಳೂರಿನಲ್ಲಿ ಅವರ ಆದಾಯ ಎಷ್ಟಿರುತ್ತದೆ ಎಂಬುದನ್ನು ಮಾನ್ಯ ಮಂತ್ರಿಗಳು ವಿಚಾರ ಮಾಡಬೇಕು. ನ್ಯಾಯವಾಗಿ ಲೆಕ್ಕವಿಡುತ್ತಿರುವ ಅನೇಕ ಸಣ್ಣ ವರ್ತಕರಿಗೆ ಇವರಿಂದ ಇಲ್ಲದ ಕಿರುಕುಳವಾಗುತ್ತಿದೆ. ಲಂಚ ಕೊಟ್ಟರೆ ಯಾವ ಕಿರುಕುಳವೂ ಸಹ ಇರುವುದಿಲ್ಲ. ಇವತ್ತು ಲಂಚ ಕೊಟ್ಟು ಅಧಿಕಾರಿಗಳನ್ನು ಒಳಗೆ ಹಾಕಿಕೊಂಡಿರುವ ವರ್ತಕರು ಸುಳ್ಳು ಲೆಕ್ಕಗಳನ್ನು ಬರೆದು ತಪ್ಪಿಸಿಕೊಳ್ಳುತ್ತಿದ್ದಾರೆ. ಇದನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡಬೇಕು.

ರ್‍ಯಾಷನಲೈಸೇಷನ್ ಆಫ್ ಸೇಲ್ಸ್ ಟ್ಯಾಕ್ಸ್ ಎನ್ನುವುದರ ಬಗ್ಗೆ ಕೆಲವು ಅಂಶಗಳನ್ನು ಕೊಟ್ಟಿದ್ದಾರೆ. ಆಹಾರ ಪದಾರ್ಥಗಳ ಮೇಲೆ ಮಲ್ಟಿ ಪಾಯಿಂಟ್ ಟ್ಯಾಕ್ಸ್ ಹಾಕಿರುವುದು ಬಹಳ ತೊಂದರೆಯ ವಿಚಾರ. ಭೋಗ ವಸ್ತುಗಳ ಮೇಲೆ ಟ್ಯಾಕ್ಸ್ ಹೆಚ್ಚು ಮಾಡಿದ್ದಾರೆ. ಇದರಿಂದ ಚೆಕ್ ಪೋಸ್ಟ್‌ಗಳಲ್ಲಿರುವವರಿಗೆ ಅನುಕೂಲವಾಗುತ್ತದೆ. ಚೆಕ್ ಪೋಸ್ಟ್‌ಗಳು ಇರುವುದು ನಾಮಕಾವಾಸ್ತೆಯಾಗಿವೆ. ಲಾರಿಯವರು ಮತ್ತು ಚೆಕ್‌ಪೋಸ್ಟ್‌ಗಳಲ್ಲಿರುವವರು ಷಾಮೀಲಾಗಿ ಕಳ್ಳ ಬಿಲ್ಲುಗಳನ್ನು ತಯಾರು ಮಾಡಿಕೊಂಡು ಬಂದು, ಸರಿಯಾದ ರೀತಿಯಲ್ಲಿ ಸಾಮಾನುಗಳ ಲೆಕ್ಕ ಸಿಕ್ಕದೆ ಟ್ಯಾಕ್ಸ್ ಎವೇಷನ್ ಆಗುತ್ತಿದೆ. 12 ಪರ್ಸೆಂಟಿಗೆ ತೆರಿಗೆಯನ್ನು ಏರಿಸಿರುವುದರಿಂದ ಹೆಚ್ಚು ಎವೇಷನ್ನಿಗೆ ಅವಕಾಶವಾಗುತ್ತದೆಯೇ ಹೊರತು ಸರ್ಕಾರಕ್ಕೆ ಹೆಚ್ಚು ಆದಾಯ ಬರುವುದಿಲ್ಲ. ಚೆಕ್ ಪೋಸ್ಟ್‌ಗಳ ಬಗ್ಗೆ ಸಾಕಾದಷ್ಟು ಗಮನ ಕೊಡದೆ ಇದ್ದರೆ ಬಹಳ ತೊಂದರೆಯಾಗುತ್ತದೆ. ಆಗಿಂದಾಗ್ಗೆ ಮೇಲ್ಪಟ್ಟ ಅಧಿಕಾರಿಗಳು ಹೋಗಿ ಪರೀಕ್ಷೆ ಮಾಡಿ, ವೇ ಬಿಲ್ ಮತ್ತು ಸಾಮಾನುಗಳು ಸರಿಯಾಗಿವೆಯೇ ಎನ್ನುವುದನ್ನು ಪರಿಶೀಲನೆ ಮಾಡುವುದು ಒಳ್ಳೆಯದು. ನಾನು ಅನೇಕ ವರ್ಷಗಳ ಕಾಲ ಬೆಂಗಳೂರು ಕಾರ್ಪೊರೇಷನ್ನಿನ ಫೈನಾನ್ಸ್ ಕಮಿಟಿಯಲ್ಲಿ ಇದ್ದೆ. ಆಗ ಆಕ್ಟ್ರಾಯಿ ಹೇಗೆ ತಪ್ಪಿಸುತ್ತಾರೆ ಎನ್ನುವುದು ನನ್ನ ಗಮನಕ್ಕೆ ಬಂತು. ಚೆಕ್ ಪೋಸ್ಟಿನಲ್ಲಿರುವವರು ಮತ್ತು ಲಾರಿಯವರು ಷಾಮೀಲಾಗಿ ಸರ್ಕಾರಕ್ಕೆ ಬರಬೇಕಾದ ವರಮಾನ ಕಡಮೆಯಾಗುತ್ತದೆ. ಚೆಕ್ ಪೋಸ್ಟ್‌ಗಳಲ್ಲಿ ನಡೆಯುವ ಅನ್ಯಾಯವನ್ನು ತಪ್ಪಿಸಲು ಸೂಕ್ತವಾದ ಕಾರ್ಯಕ್ರಮವನ್ನು ತೆಗೆದುಕೊಳ್ಳದೆ ಹೋದರೆ ಸೇಲ್ಸ್ ಟ್ಯಾಕ್ಸ್‌ನಿಂದ ಹೆಚ್ಚು ನಷ್ಟವಾಗುತ್ತದೆ ಎಂದು ಹೇಳುತ್ತೇನೆ.

ಅನೇಕ ಸಾಮಗ್ರಿಗಳ ಮೇಲೆ ತೆರಿಗೆ ಏರುತ್ತಿದೆ. ಒಂದು ಕಡೆ ಸರ್ಕಾರಿ ನೌಕರರ ತುಟ್ಟಿ ಭತ್ಯ ಮತ್ತು ಇತರ ಸಂಬಳ ಸಾರಿಗೆಗಳನ್ನು ಹೆಚ್ಚಿಸಬೇಕೆಂದು ಪ್ರಯತ್ನಪಡುತ್ತಾರೆ. ನಾನಾ ಕಾರಣಗಳಿಂದ ನಿತ್ಯ ಬಳಕೆಯ ಸಾಮಾನುಗಳ ಮೇಲೆ ತೆರಿಗೆಗಳನ್ನು ಹೇರಿದ್ದಾರೆ. ಈಗ ತೆರಿಗೆ ಹಾಕುತ್ತಿರುವ ಸಾಮಾನುಗಳಲ್ಲದೆ 84 ರಿಂದ 116ರ ವರೆಗೆ ಅನೇಕ ಸಾಮಾನುಗಳ ಮೇಲೆ ಹೊಸದಾಗಿ ತೆರಿಗೆಯನ್ನು ಹಾಕಿದ್ದಾರೆ. ಇದರಲ್ಲಿ ರೇಜರ್ ಬ್ಲೇಡುಗಳು—ಇದನ್ನು ಬಡವರು ಬಲ್ಲಿದರು ಎಲ್ಲರೂ ಉಪಯೋಗಿಸುತ್ತಾರೆ—ಬೀಡಿ ಎಲೆ, ಮೋಟಾರ್ ಸ್ಪಿರಿಟ್ ಹೀಗೆ ಸಾಮಾನ್ಯ ಮನುಷ್ಯನಿಗೆ ಬೇಕಾಗುವ ನಿತ್ಯ ಬಳಕೆಯ ವಸ್ತುಗಳ ಮೇಲೆ ಪರೋಕ್ಷವಾಗಿ ಮತ್ತು ಪ್ರತ್ಯಕ್ಷವಾಗಿ ತೆರಿಗೆಗಳನ್ನು ಹಾಕುವುದರಿಂದ ನಮ್ಮ ಜೀವನ ವೆಚ್ಚದ ಮಟ್ಟ ದಿನದಿನಕ್ಕೆ ಹೆಚ್ಚುತ್ತಿರತಕ್ಕ ಕಾಲದಲ್ಲಿ ಸಾಮಾನುಗಳ ಬೆಲೆ ವಿಪರೀತವಾಗಿ ಏರಿಹೋಗಿ ಬಹಳ ಕಷ್ಟವಾಗುತ್ತದೆ.

ರೇಷ್ಮೆ ಮೇಲೆ ಮೊದಲು ತೂಕದ ಮೇಲೆ ತೆರಿಗೆ ಹಾಕಿದ್ದರು. ಈಗ ಆಡ್‌ವ್ಯಾಲೊರಂ ಎಂದು ತೆಗೆದುಕೊಂಡು ಬಂದಿದ್ದಾರೆ. ಹೋದ ವರ್ಷ 110-120 ರೂಪಾಯಿ ಇದ್ದ ರೇಷ್ಮೆ ಬೆಲೆ 200 ರೂಪಾಯಿ ಮೇಲಾಗಿದೆ. ಆಡ್‌ವ್ಯಾಲೊರಂ ಟ್ಯಾಕ್ಸ್ ಹಾಕಿದರೆ ಅದರ ಬೆಲೆ ಇನ್ನೂ ಹೆಚ್ಚಾಗುತ್ತದೆ ಮತ್ತು ರೇಷ್ಮೆ ವ್ಯಾಪಾರ ಬೇರೆಕಡೆಗೆ ಹೋಗುತ್ತದೆ. ರೇಷ್ಮೆ ಬೆಲೆ ಜಾಸ್ತಿಯಾಗುತ್ತಿದೆ ಎನ್ನುವ ಕೂಗು ಒಂದು ಕಡೆ ಇರುವಾಗ ರೇಷ್ಮೆ ಮೇಲೆ ತೆರಿಗೆ ಹೆಚ್ಚು ಮಾಡುವುದರಿಂದ ನಮ್ಮ ದೇಶದಲ್ಲಿನ

ವ್ಯಾಪಾರಕ್ಕೆ ಧಕ್ಕೆ ಬಂದು ಹಿಂದೂಪುರ, ಹೊಸೂರು, ಮದ್ರಾಸ್ ಕಡೆಗಳಲ್ಲಿ ವ್ಯಾಪಾರ ಮಾಡುವುದಕ್ಕೆ ಷುರು ಮಾಡುತ್ತಾರೆ. ನಿತ್ಯ ಬಳಕೆಯ ವಸ್ತುಗಳ ಮೇಲೆ ಮಾರಾಟ ತೆರಿಗೆಯನ್ನು ವಿಧಿಸುವಾಗ ಅಕ್ಕಪಕ್ಕದ ರಾಜ್ಯಗಳಾದ ಕೇರಳ, ತಮಿಳುನಾಡು, ಆಂಧ್ರ, ಮಹಾರಾಷ್ಟ್ರಗಳಿರತಕ್ಕ ಸೇಲ್ಸ್ ಟ್ಯಾಕ್ಸ್ ಸ್ಟ್ರಕ್ಚರ್ ಏನಿದೆ ಎನ್ನುವುದನ್ನು ನೋಡಿಕೊಂಡು ವ್ಯಾಪಾರ ಬೇರೆ ಕಡೆ ಹೋಗದ ಹಾಗೆ ಮಾಡಿದರೆ ಚೆನ್ನಾಗಿರುತ್ತದೆ.

ಬಳಕೆದಾರರಿಂದ ವಸೂಲು ಮಾಡುವ ಮಾರಾಟ ತೆರಿಗೆಯನ್ನು ಅನೇಕರು ಸರ್ಕಾರಕ್ಕೆ ಕೊಡುತ್ತಿಲ್ಲ; ಲೆಕ್ಕ ಸರಿಯಾಗಿ ಇಡುತ್ತಿಲ್ಲ. ಇದರಿಂದ ಎಷ್ಟು ಪ್ರಮಾಣದಲ್ಲಿ ಮಾರಾಟ ತೆರಿಗೆ ಸರ್ಕಾರಕ್ಕೆ ಬರಬೇಕೋ ಅಷ್ಟು ಪ್ರಮಾಣದಲ್ಲಿ ಬರುತ್ತಿಲ್ಲ. ಆದುದರಿಂದ ಮಾರಾಟ ತೆರಿಗೆಯನ್ನು ಸರಿಯಾಗಿ ವಸೂಲು ಮಾಡಿದರೆ ಈಗ ತೆರಿಗೆಯನ್ನು ಹೆಚ್ಚಿಸಬೇಕಾದ ಅಗತ್ಯವಿರುವುದಿಲ್ಲ. ತೆರಿಗೆಯನ್ನು ಹೆಚ್ಚು ಮಾಡುವುದಕ್ಕೆ ಬದಲಾಗಿ ಎವೇಷನ್ ಹೆಚ್ಚಿಸಿದಂತಾಗುತ್ತದೆ. ಟ್ಯಾಕ್ಸ್ ಸ್ಟ್ರಕ್ಚರ್ ಬಗ್ಗೆ ಸರಿಯಾದ ಕ್ರಮ ತೆಗೆದುಕೊಂಡು, ಸರಿಯಾದ ರೀತಿಯಲ್ಲಿ ವಸೂಲು ಮಾಡಿದರೆ ಜನಗಳಿಗೆ ಅನುಕೂಲವಾಗುತ್ತದೆ. ಹಾಗೆ ಮಾಡದೆ ಸೇಲ್ಸ್ ಟ್ಯಾಕ್ಸ್ ಹೆಚ್ಚು ಮಾಡುತ್ತಾ ಹೋಗುವುದು ಸರಿಯಲ್ಲ. ಈಗ ನಮ್ಮ ಮುಂದೆ ತಂದಿರುವ ಮಾರಾಟ ತೆರಿಗೆ ತಿದ್ದುಪಡಿ ಮಸೂದೆ ಕಣ್ಣು ಮುಚ್ಚಾಲೆ ಇದ್ದ ಹಾಗೆ ಇದೆ. ಈಗ ಹೆಚ್ಚು ಮಾಡುತ್ತಿರುವ ರೀತಿಯಲ್ಲಿ ಸರಿಯಾಗಿ ಪರಿಶೀಲನೆ ಮಾಡಿದರೆ ಒಂದೂವರೆ ಕೋಟಿ ರೂಪಾಯಿ ಅಲ್ಲ, ಅದರ ಐದರಷ್ಟು ತೆರಿಗೆ ಬರುತ್ತದೆ ಎನ್ನುವ ಅಂಶ ಗೊತ್ತಾಗುತ್ತದೆ. ಸೇಲ್ಸ್ ಟ್ಯಾಕ್ಸ್ ಡಿಪಾರ್ಟ್‌ಮೆಂಟಿನಲ್ಲಿರುವ ಲಂಚಗುಳಿತನವನ್ನು ಕಡಮೆ ಮಾಡಿ, ಅಲ್ಲಿರುವ ಲಂಚಕೋರ ಅಧಿಕಾರಿಮೇಲೆ ಸರಿಯಾದ ಹತೋಟಿಯನ್ನು ಇಟ್ಟುಕೊಂಡು, ಸರ್ಕಾರಕ್ಕೆ ವರಮಾನ ಹೆಚ್ಚಿನ ರೀತಿಯಲ್ಲಿ ಬರುವಂತೆ ಮಾಡಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಶ್ರೀನಿವಾಸ ನಾಯಕ್ (ಮಂಗಳೂರು-1)—ಮಾನ್ಯ ಸಭಾಪತಿಗಳೇ, ಹಣಕಾಸಿನ ಸಚಿವರು ಮಾನ್ಯ ಸಭೆಯ ಮುಂದೆ ಇಟ್ಟಿರುವ ಸೇಲ್ಸ್ ಟ್ಯಾಕ್ಸ್ ಅಮೆಂಡ್‌ಮೆಂಟ್ ಬಿಲ್ಲನ್ನು ಸ್ವಾಗತಿಸಿ ಎರಡು ಮಾತು ಹೇಳಲಿಕ್ಕೆ ಬಯಸುತ್ತೇನೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಾಮುಖ್ಯವಾದ ಉದ್ಯಮ ಎಣ್ಣೆ ಗಿರಣಿಗಳು. ಕೊಬರಿ ನಮ್ಮ ಜಿಲ್ಲೆಯಲ್ಲಿ ಬೆಳೆಯುವುದಿಲ್ಲ. ಅದನ್ನು ಕೇರಳದಿಂದ ತರಿಸಿಕೊಳ್ಳಬೇಕಾಗಿದೆ. ಕೇರಳದಿಂದ ತರಿಸುವ ಕೊಬರಿಗೆ ಕೇಂದ್ರ ಸರ್ಕಾರದ ಎಕ್ಸೈಸ್ ಟ್ಯಾಕ್ಸ್ ಇದೆ, ಅದನ್ನು ಕೊಡುತ್ತ ಇದ್ದಾರೆ ಮತ್ತು ಫಸ್ಟ್ ಪರ್ಚೇಸ್ ಟ್ಯಾಕ್ಸ್ ಕೂಡ ಅದಕ್ಕೆ ಕೊಡುತ್ತಿದ್ದಾರೆ. ಇದರಿಂದ ತೆಗೆಯುವ ಎಣ್ಣೆಗೆ ಫಸ್ಟ್ ಪರ್ಚೇಸ್ ಟ್ಯಾಕ್ಸ್ ಇಲ್ಲ. ಕೊಬರಿಗೆ ಮಾತ್ರ ಈ ಟ್ಯಾಕ್ಸ್ ಇದೆ. ಆದ್ದರಿಂದ ಕೇರಳದಿಂದ ತರಿಸುವ ಕೊಬರಿಗೆ ಫಸ್ಟ್ ಪರ್ಚೇಸ್ ಟ್ಯಾಕ್ಸ್ ಕೊಟ್ಟು, ನಮ್ಮಲ್ಲಿ ಎಣ್ಣೆಯನ್ನು ಉತ್ಪಾದನೆ ಮಾಡಿ, ಅದಕ್ಕೆ 4 ಪರ್ಸೆಂಟ್ ಸೇಲ್ಸ್ ಟ್ಯಾಕ್ಸ್ ಹೇರಿದರೆ ಉತ್ಪಾದನಾ ಕ್ರಯ ಜಾಸ್ತಿಯಾಗುತ್ತದೆ. ಅದೇ ಕೇರಳದಲ್ಲಿ ಉತ್ಪಾದನೆ ಮಾಡುವ ಎಣ್ಣೆಯ ಬೆಲೆ ಬಹಳ ಕಡಮೆ ಇರುತ್ತದೆ. ಕೇರಳದಲ್ಲಿ 1 ಪರ್ಸೆಂಟ್ ಟ್ಯಾಕ್ಸ್ ವಿಧಿಸುತ್ತಿದ್ದಾರೆ. ಎರಡು ರಾಜ್ಯಗಳಲ್ಲಿನ ಟ್ಯಾಕ್ಸ್ ಸ್ಟ್ರಕ್ಚರ್‌ನಲ್ಲಿ ಬಹಳ ಅಂತರವಿರುವುದರಿಂದ ಕೇರಳದಿಂದ ಎಣ್ಣೆಯನ್ನು ತರಿಸಿಕೊಂಡು ನಮ್ಮ ಜಿಲ್ಲೆಯಲ್ಲಿ ಮಾರಾಟ ಮಾಡುತ್ತಿದ್ದಾರೆ. ಇದರಿಂದ ಅನೇಕ ವರ್ಷಗಳಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೆಳೆದು ಬಂದಿರುವ ಎಣ್ಣೆ ಉದ್ಯಮ ಹಾಳಾಗಿ ಹೋಗುತ್ತದೆ ಎಂದು ನಾನು ಹೇಳಲಿಕ್ಕೆ ಬಯಸುತ್ತೇನೆ. ನಮ್ಮ ಜಿಲ್ಲೆಯಲ್ಲಿ ಎಣ್ಣೆ ಉದ್ಯಮ ನೂರು ವರ್ಷಗಳ ಹಿಂದಿನಿಂದ ಬೆಳೆದುಕೊಂಡು ಬಂದ ಉದ್ಯಮ. ಆ ಉದ್ಯಮದಲ್ಲಿ ಹಲವು ಮಂದಿ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಮಂಗಳೂರು, ಪುತ್ತೂರು, ಉಡುಪಿ, ಹೀಗೆ ಜಿಲ್ಲೆಯ ಹಲವು ಕಡೆಗಳಲ್ಲಿ ಎಣ್ಣೆಯ ಉತ್ಪಾದನಾ ಮಿಲ್ಲುಗಳಿರುತ್ತವೆ. ಪ್ರತಿಯೊಂದು ಕಡೆಯೂ ತುಂಬ ರೀತಿಯಿಂದ ಹಾನಿಯಾಗಲಿಕ್ಕೆ ಸಾಧ್ಯವಿದೆ. ಈಗ ಎಣ್ಣೆಗೆ 4 ಪರ್ಸೆಂಟ್ ಸಿಂಗಲ್ ಪಾಯಿಂಟ್ ಟ್ಯಾಕ್ಸ್ ವಿಧಿಸಲು ಸರ್ಕಾರ ಬಯಸುತ್ತಿದೆ. ಅದರಿಂದಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೆಳೆದು ಬಂದ ಎಣ್ಣೆ ಉದ್ಯಮ ಹಾಳಾಗುವುದಕ್ಕೆ ಸಾಧ್ಯವಿದೆ. ಅದಕ್ಕಾಗಿ ನಮ್ಮ ಸರ್ಕಾರ ಎಣ್ಣೆ ಮೇಲೆ ಹಾಕಿರುವ ತೆರಿಗೆಯನ್ನು ಕಡಿಮೆ ಮಾಡಬೇಕು. ಅಡಕೆ, ಮೆಣಸು ಮುಂತಾದ ಕೆಲವು ಪದಾರ್ಥಗಳ ವ್ಯಾಪಾರ ಕೇರಳಕ್ಕೆ ಹೋಗುತ್ತದೆ ಎನ್ನುವ ಕಾರಣದಿಂದ ಈಗ ಇರುವ ಟ್ಯಾಕ್ಸನ್ನು ಕಡಮೆ ಮಾಡಬೇಕು ಎಂದು ಹೊರಟಿದ್ದಾರೆ. ಅದೇ ರೀತಿ ಎಣ್ಣೆ ವ್ಯಾಪಾರವೂ ಕೂಡ ಕೇರಳಕ್ಕೆ ಹೋಗುತ್ತದೆ. ಅದನ್ನು ತಪ್ಪಿಸಬೇಕಾದರೆ ನಮ್ಮಲ್ಲಿ ವಿಧಿಸಬೇಕೆಂದಿರುವ 4 ಪರ್ಸೆಂಟ್ ಸಿಂಗಲ್ ಪಾಯಿಂಟ್ ಟ್ಯಾಕ್ಸನ್ನು 2 ಪರ್ಸೆಂಟಿಗೆ ತರಬೇಕಾಗಿದೆ. ಇಲ್ಲದೆ ಇದ್ದರೆ ಒಂದೂವರೆ ಪರ್ಸೆಂಟ್ ಮಲ್ಟಿಪಾಯಿಂಟ್ ಟ್ಯಾಕ್ಸ್ ಹಾಕಬೇಕೆಂದು ಹೇಳಲಿಕ್ಕೆ ಬಯಸುತ್ತೇನೆ.

(ಶ್ರೀ ಎಂ. ಶ್ರೀನಿವಾಸ ನಾಯಕ್)

ಸೋಪಿನ ಮೇಲೆ ತೆರಿಗೆ ಹೆಚ್ಚು ಮಾಡಿದ್ದಾರೆ. ಆಹಾರ ಪದಾರ್ಥಗಳಷ್ಟೇ ಪ್ರಾಶಸ್ತ್ಯವನ್ನು ಸೋಪಿಗೂ ಕೊಡಬೇಕಾಗಿದೆ. ಏಕೆಂದರೆ ಮನುಷ್ಯ ಶುಭ್ರವಾಗ ಬಟ್ಟೆಬರೆಗಳನ್ನು ಹಾಕಿಕೊಂಡು ಆಹಾರವನ್ನು ಸೇವಿಸಬೇಕಾಗುತ್ತದೆ ಇವತ್ತು ಸಾಬೂನನ್ನು ಪ್ರತಿಯೊಬ್ಬ ಮನುಷ್ಯನೂ ಉಪಯೋಗಿಸಬೇಕಾಗುತ್ತದೆ. ಇವತ್ತು ಅದಕ್ಕೆ 4 ಪರ್ಸೆಂಟ್ ಇದ್ದದನ್ನು 6 ಪರ್ಸೆಂಟ್ ಮಾಡುತ್ತಿರುವುದು ತುಂಬಾ ಹೆಚ್ಚಾಗುತ್ತದೆ. ಏಕೆಂದರೆ ಇದನ್ನು ಪ್ರತಿಯೊಬ್ಬ ಮನುಷ್ಯನೂ ಉಪಯೋಗಿಸುವುದರಿಂದ ಇದರ ಬೆಲೆ ತುಂಬಾ ಜಾಸ್ತಿಯಾಗುತ್ತದೆ. ಆದ್ದರಿಂದ ಇದನ್ನು ನಾಲ್ಕು ಪರ್ಸೆಂಟಿಗೆ ಇಳಿಸಿದರೆ ಜನರಿಗೆ ಹೆಚ್ಚಿನ ಹಾನಿ ಯಾಗಲಾರದು ಎಂದು ಹೇಳುತ್ತೇನೆ. ಇದರಿಂದ ಜನರ ವೈಯಕ್ತಿಕ ಬಜೆಟ್ ಏರಿದೆ, ಅದು ಇನ್ನೂ ಏರುತ್ತಾ ಹೋಗಿ ಅದರಲ್ಲೂ ಬಡ ಜನರಿಗೆ ತುಂಬಾ ತೊಂದರೆಯಾಗುತ್ತದೆ. ಆದ್ದರಿಂದ ಇದನ್ನು ಸರ್ಕಾರದವರು ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅದೇ ರೀತಿ ರಿಜಿಸ್ಟ್ರೇಷನ್ ಮಾಡುವಾಗ ಹಿಂದೆ ಆರು ರೂಪಾಯಿ ಇತ್ತು. ಅದನ್ನು ಕೂಡ ಈಗ 25 ರೂಪಾಯಿ ಮಾಡಿದರೆ, ಒಂದಕ್ಕೆ ನಾಲ್ಕರಷ್ಟು ಜಾಸ್ತಿಮಾಡಿದ ಹಾಗೆ ಆಯ್ತು. ಇದರಿಂದ ಸಣ್ಣ ಪುಟ್ಟ ವ್ಯಾಪಾರಿಗಳಿಗೆ ಬಹಳ ಕಷ್ಟವಾಗುತ್ತದೆ ಮತ್ತು ಇದರಿಂದ ತುಂಬಾ ಹಾನಿಯೂ ಆಗುತ್ತದೆ. ಆದ್ದರಿಂದ 6 ಇದ್ದದ್ದನ್ನು 10 ಮಾಡಬೇಕೇ ಹೊರತು, 25 ರೂಪಾಯಿ ಮಾಡಬಾರದು, ಮಾಡಿದರೆ ಬಡ ಜನರಿಗೆ, ಅದರಲ್ಲೂ ಸಣ್ಣ ವ್ಯಾಪಾರಿಗಳಿಗೆ ಬಹಳ ತೊಂದರೆಯಾಗುತ್ತದೆಂದು ಹೇಳುತ್ತೇನೆ. ಇನ್ನು ಮಾನ್ಯ ಸದಸ್ಯರಾದ ವಾಲಿಯವರು ಹೇಳಿದ ಹಾಗೆ ಇವೊತ್ತಿನ ದಿವಸ ಮೆಣಸು, ಬೆಂಕಿ ಪೆಟ್ಟಿಗೆ, ಇದಕ್ಕೆಲ್ಲಾ ಸಿಂಗಲ್ ಪಾಯಿಂಟ್ ಟ್ಯಾಕ್ಸ್ ಮಾತ್ರ ಹಾಕುವುದು ಒಳ್ಳೆಯದು. ಇದಕ್ಕೆ ಮಲ್ಟಿಪಾಯಿಂಟ್ ಟ್ಯಾಕ್ಸ್ ಮಾಡಬೇಕೆಂದಿದ್ದರೆ, ಅದನ್ನು ಸಿಂಗಲ್ ಪಾಯಿಂಟ್ ಆಗಿ ಮಾಡುವುದು ಒಳ್ಳೆಯದೆಂದು ಹೇಳುತ್ತೇನೆ. ಕೊನೆಯದಾಗಿ, ಈ ಎಣ್ಣೆಯ ಬಗ್ಗೆ ಸರ್ಕಾರದವರು ಪುನರ್ ಪರಿಶೀಲನೆ ಮಾಡುವುದು ಅಗತ್ಯ, ಇಲ್ಲದಿದ್ದರೆ ಈ ಎಣ್ಣೆ ಕೈಗಾರಿಕೆ ಎಲ್ಲಾ ಕೇರಳಕ್ಕೆ ಹೋಗುತ್ತದೆ ಎಂದು ಹೇಳಿ, ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† Sri R. DAYANANDA SAGAR (Chamarajpet).—Sir, I oppose this Bill because it is very arbitrary and unreasonable. The sales tax touches 116 items and there is no item, which the common man uses, is untouched by this tax. This indirect taxation touches the most common man ; as a result of which it gives rise to spurt in prices of all articles in every day need and use. The day after you increase the indirect taxation, the labourer, the worker, the man who receives fixed salary, etc., asks for more wages, salaries and the like. The unwholesome effect of indirect taxation should be examined in this light. Therefore, it is always best for the Government to go in for direct taxation.

Direct taxation actually touches the rich man who has got capacity to pay taxes. If you ask the middle-class man, the lower middle class man and the poor man to pay you the taxes indeed he pays it indirectly, not knowing the prices have gone high. Since Government have levied sales tax on 116 items, he has got to pay the tax. What is the item that is left off from taxation ? None. Even a petty labourer and peasant who hardly earns Rs. 2 per day, will be paying this indirect tax every day from the daily wages they are getting ; the same is the case with officers and non-gazetted officials and others getting fixed salaries. The result is, immediately prices shoot up, officials and others getting fixed salaries and wages agitate and ask for more pay and wages on the ground the prices have gone high.

Prices have been rising continuously ever since the outbreak of the Second World war. When I was a student during the period of

the II World War, I was paying Rs. 6 per month for the Hotel and getting first class food. For two annas I could get a meal. What is the position to-day? Because of the unreasonable and arbitrary way of taxation that we have adopted ever since the II would War, prices are going up by leaps and bounds. The Government is keen on getting more revenue. What is the price of the rupee to-day and how much revenue are they really getting? In terms of rupees, annas and paise, the income may look huge. But immediately taxes are levied and prices rise, the Government will have to pay it back to their servants because there will be agitation for more and more salaries, allowances, wages and the like. During the regime of Aurangazeb, there was a taxation called "Jazia." If Government had levied at least "Jezia" according to the capacity of the payer, it would have been all right.

Sri M. NAGAPPA.—Does the hon. Members compare this Government to Aurangazeb's?

Sri R. DAYANANDA SAGAR.—I don't mind. After all, it is worse than that. This Government is going far ahead of him in levying taxes. He was being criticised; even today historians criticise him for levying 'Jazia'. But this taxation is worse than the levy of 'Jazia' because Aurangazeb was levying it according to the capacity of each man.

ಶ್ರೀ ಆರ್. ಮು ಸ್ವಾಮಯ್ಯ.—ಜಿಜಿಯಾ ತೆರಿಗೆಯನ್ನು ಔರಂಗಜೇಬನ ಕಾಲದಲ್ಲಿ ಎಲ್ಲರೂ ಕೊಡಬೇಕಾಗಿತ್ತೇ ?

ಶ್ರೀ ಆರ್. ದಯಾನಂದಸಾಗರ.—ಹೌದು, ಪ್ರತಿಯೊಬ್ಬರಿಗೂ ಅದು ಬೀಳುತ್ತಿತ್ತು. To-day, every man including the beggar is paying "Jazia" to this Government. Therefore, I would suggest to the Government to abolish this Sales Tax. This sales tax was then introduced because the Government wanted to introduce Prohibition. It was a taxation in lieu of the income lost by Prohibition. But unfortunately today on one side, Government are collecting the sales tax and on the other side taxation on liquors. This double taxation is not correct and proper. My Hon. friend Sri T. R. Shamanna rightly threw a challenge to the Government that if the collection of sales tax was entrusted to him, he would undertake to pay the Government not only the present income but also 25 per cent over and above it. As Government would be realising more collections, the Government would do well to accept his offer. I would like to call this Sales Tax Department Public enemy No. 1-A. The Public Works Department is called Public Enemy No. 1. I want this Sales Department to be named Enemy No. 1-A. I will substantiate. Every man pays this tax. This sales-tax is extracted from every man. But the person who collects this tax is not an officer; it is the middleman, it is the agent, who collects this tax. The merchant is the agent for collecting this tax. He collects it on behalf of the Government. He keeps different kinds of accounts for that purpose—one account for himself, one account for the hon'ble tax officers whose needs are met. The merchant knows how much he is likely to get. There is a regular ring. There is clandestine understanding between the highest

(ಶ್ರೀ ಆರ್. ದಯಾನಂದಸಾಗರ್)

Officer and the lowest officer. There is heart-to-heart talk and the collections made from the humble tax-payer are shared. This amount is distributed by the tax collection officers from the highest to the lowest. This is an open secret. You can ask any officer; you can find out yourself.

[MR. CHAIRMAN (Sri D. M. SIDDAIAH) in the Chair]

To-day one should be a Sales-Tax Officer or an officer in the Public Works Department if he should get a beautiful girl in marriage from a rich father-in-law. A rich father-in-law would naturally like to have a prosperous son-in-law. Such a flourishing son-in-law will be available either in the Public Works Department where contracts are given, where designs are changed and wrong measurements are resorted to and where there is a maximum opportunity for corrupt officers to earn huge sums of money by way of bribes. Everybody knows about it. An official in the Sales-Tax Department has also got the same scope for taking bribes. If a father-in-law wants a prospective son-in-law, and if he comes to know that so-and-so is employed in the P.W.D. or the Sales-Tax Department, without hesitation he can offer his daughter to him. He need not become a Minister. You and I are fools to have become politicans and Ministers and wasting all our time. Those who make their way very carefully to these departments are more fortunate because they live with much more comfort with ill-gotten money.

3-30 P.M.

MR. CHAIRMAN.—What is the alternate method of collecting Sales-Tax ?

SRI R. DAYANANDA SAGAR.—I do not mind even if they levy personal tax, *i.e.*, each man paying according to his capacity. Every man should be taxed, whether he be a rich man or a poor man, a labou er or a worker. Now everything that the common man is paying does not come to the State's coffer. I can tell you that I can give the Government 50 per cent more than what they are collecting. We will form an agency and collect on behalf of the Government. Giving it all the facilities we can collect more than 50 per cent of what you are getting. I am certain that all the moneys that are collected from the common man are not coming to the Government coffers.

SRI C. K. RAJAIAH SHETTY.—Sir, it is unfortunate the Finance Minister is not here.

SRI R. DAYANANDA SAGAR.—I am giving some suggestions.

MR. CHAIRMAN.—I have sent for the Finance Minister. He will come.

Sri R. DAYANANDA SAGAR.—Sir, when taxation measures are being discussed, these are important matters and it is better that the Finance Minister is here. The Government is trying to get 1½ or 2 crores and accord ng to the estimation of my friends it may be five or six crores more and the exploitation to the public is much more. It may be 15 crores and whatever that comes to the Government is very much less. My City of Bangalore alone contributes 25 crores. That is the amount you actually receive but I would say that the actual amount collected from the common man amounts to 100 crores, only in the City of Bangalore. After all you are levying this tax on almost every item, 116 items have been taxed and now you come forward to add 33 items again. As I told you, we do not mind paying you. After all it is a vicious circle ; you levy tax and people ask for more wages or allowances and this is a vicious circle going on and so much so, money has absolutely no value at all. A property built about 15 years ago for about a lakh of rupees, is worth 20 lakhs today. This is what is happening. Therefore, there is no point in trying to directly or indirectly tax people. Indirect tax is resorted to only to exploit the affluent people. Supposing a person wants to buy a super motor car like Rolls Royce or cars of that type or a man wants to lead a luxurious life or a man wants to have foreign liquors, you tax them. Now, what you are doing is, you are taxing a common man who purchases 'Karpoora' for performing pooja. The children who go to shops to purchase sweetmeat have to pay. You are taxing on whatever item that is available today. The standards of individuals have gone up. In my schools and college I see servants wearing wrist watches. That goes to show that standard has gone up and so much so the most common man has to pay tax on almost every item. I see even beedi is taxed ; fortunately or unfortunately beedies or toddy are the necessities of poorest man and you have not left them. That means you are levying on all items. I submit that this taxation on 33 items was not necessary.

You have now introduced lottery System and you say that you are collecting 1½ to 2 crores. If so, why do you want to tax the common man? You tax him here. there and everywhere and there is no limit. You have been taxing and the people have been paying. But, are you making use of this money in a proper way ? You see what an amount of corruption is involved. I gave you example of a deal of the Bangalore water Supply and Sewerage Board. Have you heard anywhere in the world in the highest tender being accepted? When there was a clamour in the House that acceptance of the tender was a little delayed and of late I am told that the tender has been accepted and work order has been issued. What have you done ? There is difference of 5½ crores between the lowest and the highest tender. We all know with what difficulty the common man pays tax. The Citizens of Bangalore contribute as much as 25 crores and in actual collection it is of the order of 100 crores and what is the return he derives ? A Bangalore citizen is paying nearly Rs. 2 for thousand gallons of water he is utilising and after accepting

(SRI R. DAYANANDA SAGAR)

this tender and work being finished he has to pay Rs. 4 for every thousand gallons of water he uses. By accepting such tenders he is made to pay so much and that rates may still go up later. Where are we going ? We do not mind giving money. But you have unreasonably and arbitrarily taxed every item and your collection system itself is very defective. Only five to ten per cent comes to the government coffers and the rest is eaten away by the middlemen, merchants, tax collectors and so on. Then again, even the money you have collected is not utilised properly, you have got what is known as the public work system where your engineers by ingentious methods change designs. Take the case of Sharavathy. First of all they said earthen dam will be all right ; then they said we will have rock fill dam ; then masonry dam and so on and went on changing designs. They negotiated their own rates and rates between government and contractors. There is a continuous deal right from the Ministry down to the Chief Engineer. So they made a deal with Tarapores and about two crores have been excessively paid. I gave facts and figures and Government Orders and Chief Engineer's letter which is a fool-proof Copy. So, this way the public money that has been collected by this kind of taxation is unnecessarily being wasted. That is why I say Sir, that this Sales tax Department is public enemy No. 1-A. I would suggest to the Hon. Minister, to abolish this Department. If you want you can put Jazia according to the capacity of people. You can fix that some people can pay so much and other people can pay so much according to their capacity and ability. You can resort to this kind of taxation. What you are taxing is no better than the Jazia. We know what amount by way of tax the Government is receiving. Only 5 to 10 per cent tax is received by the Government and 50 per cent of the taxed amount will be taken away by the merchants and the other 25 per cent is received by the Officers. A few friends of mine in the State told me that they actually make a sort of division of this amount according to the rank. The Deputy Commissioner will get some more share, the Assistant Commissioner will get some lesser share and the Inspectors and other officers will get still some lesser share. According to the rank, they will distribute the amount. We can remember here the docoits who use to rob the people, collect the booty and distribute it among themselves in a secret place. This is what is being done in this welfare State. For this purpose they will go to Travellers Bungalow and actually divide the amount among themselves, according to the rank of the officers.

The Silk Industry as you are all aware is a very important industry which must be protected. No industry in the State has engaged more than 10 lakhs of people excepting this silk industry. The most important avocation of these people is growing mulbery, rearing cocoons and taking out raw silk. The Silk is being exported. This is a foreign exchange earner. Hitherto we have been importing everything. We

know we have no foreign exchange elsewhere. The Government of India will have to revise its policy regarding this silk trade. There is a good demand for the silk throughout the world. Especially Mysore silk is very famous. But unfortunately the prices of silk are very much high. When I was the Deputy Minister for silk Industry, I went abroad. There I found there is very great demand for the Mysore silk because of its durability and fineness. I went to Paris and other places. I enquired a number of Merchants. They are very eager to get the Mysore Silk. But the prices are very high. That is the impression among the people there. The silk produced in Japan is cheaper than the Indian Silk. But now a days Japan is not producing as much silk as it was producing before. The population of Japan is diverting its attention to some other trade. Day by day the production of silk in Japan is decreasing. Therefore, it is better to reduce the price of silk, so that we can catch a good market in the world. The people naturally purchase the Indian silk because for its fineness and also because the price will be cheaper. The villagers are losing very heavily. For the silk produced in the factories ½ per cent is imposed. For the silk produced by the villagers you are levying 2 per cent. Why do you want to tax this rural silk ? Our silk is produced by reelers, the men who have got Charka. The intention of the Government should be to give relief to the rural people. But on the other hand you are taxing them heavily. When that is the position, how can they thrive ?

Sri RAMAKRISHNA HEGDE.—I am withdrawing that.

Sri R. DAYANANDA SAGAR.—If it is so, I am thankful to you. I don't want to speak further. I thank the Chair and conclude.

†ಶ್ರೀ ಪಿ. ವಿ. ಐತಾಳ್ (ಸುರತ್ಕಲ್).—ಕಳೆದ ಬಾರಿ ಬಜೆಟ್ ಮೇಲೆ ನಾನು ಮಾತನಾಡುವಾಗ ಶ್ರೀ ರಾಮಕೃಷ್ಣ ಹೆಗಡೆಯವರು ಈ ಸಭೆಯಲ್ಲಿ ಹಾಜರಿರಲಿಲ್ಲ. ಭೂತಲಿಂಗಂ ಕಮಿಟಿ ನೇಮಕಮಾಡಿ ಸಾವಿರಾರು ರೂಪಾಯಿ ಖರ್ಚುಮಾಡಿದೆವು. ಆದರೆ ಅವರು ಮುಖ್ಯ ಆದಾಯ ಬರುವಂಥ ಬಾಬುಗಳನ್ನು ಸರಕಾರಕ್ಕೆ ತೋರಿಸಿಕೊಡಲಿಲ್ಲ. ನಮ್ಮ ಮೈಸೂರು ರಾಜ್ಯದಲ್ಲಿ ಚೆಕ್ ಪೋಸ್ಟ್‌ಗಳನ್ನು ಅಲ್ಲಲ್ಲಿ ಸ್ಥಾಪನ ಮಾಡುವಂಥದ್ದು ಸರಕಾರದ ಮೊದಲನೆಯ ಕರ್ತವ್ಯವಾಗಿತ್ತು. ಭೂತಲಿಂಗಂ ಕಮಿಟಿಯವರು ಕೂಡ ಇದು ಮ್ಯಾಟರ್ ಆಫ್ ಕಾಂಪ್ಲೆಕ್ಸಿಟಿ ಆದಕಾರಣ ಅದರ ಬಗ್ಗೆ ರಿಪೋರ್ಟ್ ಮಾಡುವುದಿಲ್ಲ ಎಂದು ಹೇಳಿದ್ದಾರೆ. ಇಂತಹ ಗಹನವಾದ ಅತಿ ಮುಖ್ಯವಾದಂಥ ವಿಷಯವನ್ನು ಮುಂದೆ ಹಾಕಿದ್ದಾರೆ. ಇದು ಸರಿಯಲ್ಲ. ಆರು ತಿಂಗಳು ಕೆಲಸ ಮಾಡಿ ಒಂದೂವರೆ ಕೋಟಿ ರೂಪಾಯಿ ಜಾಸ್ತಿ ಆಗಬಹುದು ಎಂದು ಹೇಳುವಂಥ ಸೂಚನೆಯನ್ನು ಕೊಟ್ಟಿದ್ದಾರೆ. ಅದರ ಬದಲು ಹೈದರಾಬಾದ್ ಕರ್ನಾಟಕ, ಬೊಂಬಾಯಿ ಕರ್ನಾಟಕ ಮತ್ತು ಮುಖ್ಯ ಮುಖ್ಯ ನಗರಗಳಲ್ಲಿ ಚೆಕ್ ಪೋಸ್ಟ್ ಮಾಡಿದರೆ, 10 ಕೋಟಿ ರೂಪಾಯಿ ವರಮಾನ ಒಂದು ವರ್ಷದಲ್ಲಿ ಜಾಸ್ತಿಯಾಗುತ್ತದೆ ಎಂದು ಹೇಳುತ್ತೇನೆ. ಅಷ್ಟು ವರಮಾನ ಬಾರದೇ ಹೋದರೆ ರಿಜೈನ್ ಮಾಡುತ್ತೇನೆ. ಮಂಗಳೂರಿನಲ್ಲಿ ಚೆಕ್ ಪೋಸ್ಟ್ ಮಾಡಿದ ಹಾಗೆ ಗುಲ್ಬರ್ಗ, ಹುಬ್ಬಳ್ಳಿ, ಧಾರವಾರ, ಬೆಳಗಾಂ ಮೊದಲಾದಂಥ ಕಡೆಗಳಲ್ಲಿ ಚೆಕ್ ಪೋಸ್ಟ್ ಮಾಡಿಲ್ಲ. ರಾಜಕೀಯ ಒತ್ತಡದಿಂದಾಗಿ ಈವೊತ್ತಿನವರೆಗೂ ಎಲ್ಲಿಯೂ ಚೆಕ್‌ಪೋಸ್ಟ್‌ಗಳನ್ನು ಹಾಕಿಲ್ಲ. ಈ ಸಭೆಗೆ ಆಶ್ವಾಸನೆಯನ್ನು ಕೊಟ್ಟರೂ ಕೂಡ ಚೆಕ್‌ಪೋಸ್ಟುಗಳನ್ನು ಸ್ಥಾಪನೆಮಾಡುವುದನ್ನು ಮುಂದಕ್ಕೆ ಹಾಕುತ್ತಿದ್ದಾರೆ. ಇನ್ನು ಜನರಲ್ ಎಲೆಕ್ಷನ್ ಆಗಲು ಒಂದು ವರ್ಷ 9 ತಿಂಗಳು ಬೇಕು. ಅಷ್ಟರವರೆಗೆ ಸಮಯ ದೂಡಿ ಬಿಟ್ಟರೆ ವರ್ತಕರ ಬೆಂಬಲವನ್ನು ಕಳೆದುಕೊಳ್ಳುವುದಿಲ್ಲ ಚೆಕ್‌ಪೋಸ್ಟ್ ಇಂಟ್ರೊಡ್ಯೂಸ್ ಮಾಡಿದರೆ ಅವರ ಬೆಂಬಲ ಕಳೆದುಕೊಳ್ಳಬಹುದು ಎನ್ನುವ ಇರಾದೆಯಿಂದ ಚೆಕ್‌ಪೋಸ್ಟ್ ವಿಷಯ ಮುಂದಕ್ಕೆ ಹಾಕಿದ್ದಾರೆ.

(ಶ್ರೀ ಪಿ. ವಿ. ಐತಾಳ)

ಹೊಸಪೇಟೆಗೆ ಒಂದು ಚೆಕ್‌ಪೋಸ್ಟ್ ಹಾಕಿದ್ದಾರೆ. ಹೊಸಪೇಟೆಗೆ ಬರಲಿಕ್ಕೆ ಹಲವಾರು ಮಾರ್ಗಗಳು ಇವೆ. ಅದೇರೀತಿ ದಾವಣಗೆರೆಗೆ ಒಂದು ಚೆಕ್ ಪೋಸ್ಟ್ ಹಾಕಿದ್ದಾರೆ. ಮಂಗಳೂರು ಬೆಂಗಳೂರಿನಲ್ಲಿ ಎಲ್ಲಾ ಕಡೇ ಸುತ್ತು ಹಾಕಿದ್ದೀರಿ ಎಲ್ಲಿಂದಲೂ ಬರುವುದಕ್ಕೆ ಆಗುವುದಿಲ್ಲ. ಇದಕ್ಕೆ ರಾಜಕೀಯ ಹಿನ್ನೆಲೆ ಇವೆ. ಚೆಕ್‌ಪೋಸ್ಟ್ ಹಾಕಿದರೆ ಒಂದು ವರ್ಷಕ್ಕೆ ಹತ್ತುಕೋಟಿ ರೂಪಾಯಿ ವರಮಾನ ಬರುತ್ತದೆ ಎಂದು ಹೇಳುತ್ತೇನೆ.

ಮಂಗಳೂರಿನಲ್ಲಿ ಇದನ್ನು ಹಾಕಿದ್ದರಿಂದ ಮೊದಲನೆ ವರ್ಷಕ್ಕಿಂತ ಎರಡನೇ ವರ್ಷದಲ್ಲಿ ಸಾಧಾರಣ 25—30 ಪರ್ಸೆಂಟ್ ಜಾಸ್ತಿ ಟ್ಯಾಕ್ಸ್ ಬಂದಿದೆ ಎಂದು ಪುನಃ ರಾಮಕೃಷ್ಣ ಹೆಗಡೆ ಯವರಿಗೆ ಒತ್ತಿ ಹೇಳುತ್ತೇನೆ. ಇದನ್ನು ಮಾಡದೇ ನಿಜವಾಗಿಯೂ ಟ್ಯಾಕ್ಸ್ ಜಾಸ್ತಿ ಸಿಕ್ಕುವುದಿಲ್ಲ, ಇದರ ಬದಲು ಬೇಡದಂತಹ ಕೆಲವು ವಿಷಯಗಳಿಗೆ ಟ್ಯಾಕ್ಸ್ ಜಾಸ್ತಿ ಮಾಡಿದ್ದೀರಿ. ಇದನ್ನು ನೋಡುವಾಗ ಬಹಳ ಬೇಸರವಾಗುತ್ತದೆ. ಬ್ರೆಡ್. ಜನರು ತಿನ್ನುವಂತಹ ಬ್ರೆಡ್‌ಗೆ ಇಷ್ಟರವರೆಗೂ ಒಂದೂವರೆ ಪರ್ಸೆಂಟ್ ಇತ್ತು ಇದಕ್ಕೆ 3 ಪರ್ಸೆಂಟ್ ಮಾಡಿದ್ದೀರಿ. ಮಕ್ಕಳು ತಿನ್ನುವಂತಹ ಬಿಸ್ಕಟ್ಸ್, ಗ್ಲೂಕೋಸ್ ಬಿಸ್ಕಟ್ಸ್ ಮುಂತಾದುವುಗಳಿಗೆ 6 ಪರ್ಸೆಂಟ್ ಹಾಕಿದ್ದೀರಿ. ಇನ್ನು ಮನೆಕಟ್ಟುವಂತಹ ಯೋಜನೆಯನ್ನು ಬಿಟ್ಟೇಬಿಡಬೇಕು, ಬೆಂಗಳೂರು ನಗರ ಒಂದನ್ನು ಬಿಟ್ಟರೆ ದಕ್ಷಿಣ ಕನ್ನಡ ಜಿಲ್ಲೆ ಮಾತ್ರವಲ್ಲ ಎಲ್ಲ ಕಡೆಯಲ್ಲೂ ಸಣ್ಣ ಸಣ್ಣ ಕಟ್ಟಡಗಳನ್ನು ಕಟ್ಟುವಂತಹ ಅವಶ್ಯಕತೆ ಅತಿ ಅಗತ್ಯ ಉಂಟು. ಸಿಮೆಂಟಿಗೆ 6 ಪರ್ಸೆಂಟ್ ಟ್ಯಾಕ್ಸ್ ಹಾಕಿದ್ದೀರಿ. ರೀಜನಲ್ ಇಂಬ್ಯಾಲೆನ್ಸ್ ಎಷ್ಟುಮಟ್ಟಿಗೆ ಇದೆ ಎಂದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲೇ ಇಡೀ ರಾಜ್ಯದಲ್ಲಿ ಈ ಕಟ್ಟಡಗಳ ನಿರ್ಮಾಣಕ್ಕಾಗಿ ಮಾಡಿರುವ ಖರ್ಚು ಅತಿ ಕಡಿಮೆಯಾಗಿದೆ. ಸರ್ಕಾರಿ ನೌಕರರು ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಿಗೆ ಕಟ್ಟಡಗಳು ಇಲ್ಲದ ಕಾರಣ ಬರುವುದಿಲ್ಲ ಹೋದರೂ ಕೂಡ ಹೆಲ್ತ್ ಸರಿಯಾಗಿಲ್ಲ ಎಂಬ ಕಾರಣದಿಂದ ಹೋದ ಒಂದು ತಿಂಗಳಿನಲ್ಲೇ ಅಲ್ಲಿಂದ ವಾಪಸು ಹೊರಟು ಹೋಗುತ್ತಾರೆ. ಆದಕಾರಣ ನಮ್ಮ ರಾಜ್ಯದಲ್ಲಿ ಆದಷ್ಟು ಜಾಸ್ತಿ ಕಟ್ಟಡಗಳು ಆಗಬೇಕಾಗಿವೆ. ಹೆಂಚುಗಳು, ನೆಲಕ್ಕೆ ಹಾಕುವ ಟೈಲ್ಸ್, ಮನೆಕಟ್ಟಲಿಕ್ಕೆ ಉಪಯೋಗಿಸುವ ಪ್ರತಿಯೊಂದು ಸಾಮಾನುಗಳಿಗೂ ಕೂಡ ಟ್ಯಾಕ್ಸ್‌ನ್ನು ಜಾಸ್ತಿಮಾಡಿ ಕಟ್ಟಡ ಕಟ್ಟುವಂತಹ ಉತ್ಸಾಹವನ್ನೇ ಅಡಗಿಸಿಬಿಟ್ಟಿದ್ದೀರಿ ಎಂದು ನಾನು ಹೇಳಬೇಕಾಗಿದೆ. ಇನ್ನು ಒಂದು ಹೊಸ ಯೋಜನೆ ಹಾಕಿದ್ದೀರಿ. ವರ್ಕ್ಸ್ ಕಾಂಟ್ರಾಕ್ಟ್‌ಗೆ ಟ್ಯಾಕ್ಸ್ ಇಲ್ಲ. ಅದಕ್ಕೆ ಉಪಯೋಗಿಸಿದಂತಹ ಸಾಮಾನುಗಳನ್ನು ಪರ್ಚೇಸ್ ಮಾಡಿದ್ದರೆ ಮೇಲೆ ಕೊಡಬೇಕಾಗುತ್ತದೆ. ಇಂತಹ ಒಂದು ಹೊಸ ಸೆಕ್ಷನ್ ಬೇರೆ ಒಂದೆರಡು ರಾಜ್ಯದಲ್ಲಿ ಇದೆ ಅಂತ ಹೇಳಿ ಅದನ್ನು ಇಲ್ಲಿ ಇಂಟ್ರೊಡ್ಯೂಸ್ ಮಾಡಿದ್ದೀರಿ. ಆ ರಾಜ್ಯಗಳು ಬಹಳ ಪ್ರಗತಿ ಹೊಂದಿದಂತಹ ರಾಜ್ಯಗಳು, ಅಲ್ಲಿ ಬೇಕಾದಷ್ಟು ಕಟ್ಟಡಗಳು ಇವೆ. ಈ ರೀತಿ ಒಂದು ಹೊಸ ರೀತಿಯ ಟ್ಯಾಕ್ಸ್‌ನ್ನು ಹಾಕಿ ನಮ್ಮ ರಾಜ್ಯದಲ್ಲಿ ಹೊಸ ಹೊಸ ಕಟ್ಟೋಣಗಳು ಬರುವುದಕ್ಕೆ ಹೆಚ್ಚಿನದಾದ ಕೆಡಕನ್ನು ಉಂಟು ಮಾಡಿದ್ದೀರಿ, ಇದು ಸರಿಯಲ್ಲ.

ಇದರಲ್ಲಿ ತಮ್ಮನ್ನು ಶ್ಲಾಘನೆ ಮಾಡುವಂತಹ ವಿಷಯಗಳೂ ಕೂಡ ಇವೆ. ಕನಿಷ್ಠ ಮಿತಿಯನ್ನು ಹತ್ತು ಸಾವಿರದಿಂದ 25 ಸಾವಿರಕ್ಕೆ ಏರಿಸಿದ್ದೀರಿ, ಅದೇ ರೀತಿ ಕಾಂಪೌಂಡಿಂಗ್‌ನಲ್ಲೂ ಕೂಡ 25 ಸಾವಿರ ರೂಪಾಯಿ ಇದ್ದುದನ್ನು 75 ಸಾವಿರ ರೂಪಾಯಿಗೆ ಏರಿಸಿದ್ದೀರಿ. ಇದಕ್ಕಾಗಿ ನಿಜವಾಗಿಯೂ ನಿಮ್ಮನ್ನು ಅಭಿನಂದಿಸಲೇಬೇಕು. 25 ಸಾವಿರದಿಂದ 28 ಸಾವಿರದ ಒಳಗೆ ಟ್ಯಾಕ್ಸ್ ಇಲ್ಲ, ಅದರ ಮೇಲೆ ಆದರೆ 3 ಪರ್ಸೆಂಟ್ ಕೊಡಬೇಕಾಗುತ್ತದೆ. ಇದರೊಳಗೆ ಇರತಕ್ಕ ಸ್ಲಾಬಿಗೆ ಟ್ಯಾಕ್ಸ್ ಇಲ್ಲ. ಅಸೆಸ್‌ಮೆಂಟ್ ಮಾಡುವಾಗ ಬೆಸ್ಟ್ ಆಫ್ ಜಡ್ಜ್‌ಮೆಂಟ್ ಪವರ್ ಇರುವ ಕಾರಣ ಅವರು ಒಂದೇ ಮಾತಿನಲ್ಲಿ 25 ಸಾವಿರ ರೂಪಾಯಿ ಇದ್ದುದನ್ನು 25 ಸಾವಿರದ 500 ರೂಪಾಯಿ ಮಾಡಿ ಬಿಡುತ್ತಾರೆ, ಇದರಿಂದ ಚಿಕ್ಕಪುಟ್ಟವ್ಯಾಪಾರಿಗಳಿಗೆ ದೊಡ್ಡ ಧಕ್ಕೆ ಇದೆ. 75 ಸಾವಿರ ರೂಪಾಯಿಗಳವರೆಗೂ ಕಾಂಪೌಂಡಿಂಗ್ ರೇಟ್ ಯಾವ ರೀತಿ ಮಾಡಿದ್ದೀರೋ ಅದೇ ರೀತಿ 75 ಸಾವಿರ ರೂಪಾಯಿ ಟರ್ನ್ ಓವರ್ ಆಗುವವರಿಗೆ ಮೊದಲನೆ 25 ಸಾವಿರ ರೂಪಾಯಿಗೆ ಎಕ್ಸೆಂಪ್ಷನ್ ಕೊಡಬೇಕು. ಉಳಿದ 50 ಸಾವಿರ ರೂಪಾಯಿಗೆ ಟ್ಯಾಕ್ಸ್ ಹಾಕಬೇಕು. ಇಲ್ಲದೇ ಹೋದರೆ ನಿನ್ನ ಒಟ್ಟು ಟರ್ನ್ಓವರ್ 20 ಸಾವಿರ ರೂಪಾಯಿ ಬಂದಿದೆ, 25 ಸಾವಿರದ 500 ರೂಪಾಯಿ ಮಾಡಿಬಿಡುತ್ತೇವೆ 750 ರೂಪಾಯಿ ಟ್ಯಾಕ್ಸ್ ಕೊಡಬೇಕಾಗುತ್ತದೆ, ಆದಕಾರಣ ನನಗೆ ನೂರು ಇನ್ನೂರು ರೂಪಾಯಿ ಕೊಡು ಅಂತ ಹೇಳಿ ಅಸಿಸ್ಟೆಂಟ್ ಕಮರ್ಷಿಯಲ್ ಆಫೀಸರು ಹೆದರಿಸುವಂತಹ ಒಂದು ಪರಿಸ್ಥಿತಿ ಇದೆ. ಜನರು ಲಂಚಗುಳಿತನಕ್ಕೆ ಈಡಾಗಲು ಅವಕಾಶ ಇದೆ. ರಿಟರ್ನ್ ಕೊಡಬೇಕು, ಲೆಕ್ಕ ಇಡಬೇಕು; ಇದೆಲ್ಲಾ ಆದರೂ ಕೂಡ ನಂಬುವುದಿಲ್ಲ.

ಆದ್ದರಿಂದ ಈ ಬೆಸ್ಟ್ ಆಫ್ ಜಡ್ಜ್‌ಮೆಂಟ್ ಅಂತ ಅನ್ನುವಂತಹ ಪವರ್‌ನ್ನು ಇಟ್ಟುಕೊಂಡಿರುವುದು ಬಹಳ ಅಪಾಯಕಾರಿ, ಇದಕ್ಕೆ ಸೂಕ್ತವಾದ ತಿದ್ದುಪಡಿ ಮಾಡುವುದು ಅತ್ಯಂತ ಅಗತ್ಯ.

ಇನ್ನು ರಿಜಿಸ್ಟ್ರೇಷನ್ ಫೀಜು. 6 ರೂಪಾಯಿ ಇದ್ದುದನ್ನು 25 ರೂಪಾಯಿಗೆ ಏರಿಸಿದ್ದೀರಿ. ಲೈಸೆನ್ಸ್ ಫೀಜಿನ ಹಾಗೆ ತಮಗೆ ಆಗುವಂತಹ ಖರ್ಚು ವಿಾಟ್ ಮಾಡಲಿಕ್ಕೆ ಮಾತ್ರ ರಿಜಿಸ್ಟ್ರೇಷನ್ ಫೀಜ ವಸೂಲು ಮಾಡುವುದು ನ್ಯಾಯ ಅದು ಬಿಟ್ಟು ಟ್ಯಾಕ್ಸ್ ರೀತಿಯಲ್ಲಿ ಸರ್ಕಾರದ ಬೊಕ್ಕಸ ವನ್ನು ತುಂಬಿಸುವುದಕ್ಕೆ ರಿಜಿಸ್ಟ್ರೇಷನ್ ಫೀಜು ವಸೂಲು ಮಾಡುವುದು ನ್ಯಾಯವಲ್ಲ. ಚಿಕ್ಕಪುಟ್ಟ ವ್ಯಾಪಾರಿಗಳಿಗೂ ಕೂಡ ಈ ಒಂದು ಹೊರೆಯನ್ನು ಹೊರಿಸಿದ್ದೀರಿ ಇದು ನ್ಯಾಯವಲ್ಲ. ಅವನು ಅಂಗಡಿ ಓಪನ್ ಮಾಡಿದ ಒಂದು ತಿಂಗಳೊಳಗೆ ಅವನಿಗೆ ನೋಟೀಸ್ ಬರುತ್ತದೆ. ಅಡ್ವಾನ್ಸ್ ಟ್ಯಾಕ್ಸ್ ಕೊಡಬೇಕು. ಅವನ ಅಂಗಡಿಗೆ ಬೇಕಾದಂತಹ ಸಾಮಗ್ರಿಗಳಿಗೆ ಪ್ರಥಮವಾಗಿ ಇನ್ನೂ ಅವನು ಇನ್‌ವೆಸ್ಟ್ ಮಾಡಬೇಕು, ಕಟ್ಟಡಕ್ಕೆ ಬಾಡಿಗೆ ಕೊಡಬೇಕು, ನೌಕರರನ್ನು ನೇಮಕ ಮಾಡಿ ಕೊಳ್ಳಬೇಕು, ಇವುಗಳಾವುವೂ ಇನ್ನೂ ಪೂರ್ತಿಯಾಗಿ ಆಗದೆ ಇದ್ದಂಥ ಸಂದರ್ಭದಲ್ಲೂ ಕೂಡ ಅವನು ಅಡ್ವಾನ್ಸ್ ಟ್ಯಾಕ್ಸ್ ಕೊಡಬೇಕು ಅಲ್ಲದೆ ಸೆಕ್ಯೂರಿಟಿ ಬೇರೆ ಕೊಡಬೇಕು. 6 ತಿಂಗಳ ಟ್ಯಾಕ್ಸ್ ತಮ್ಮಲ್ಲಿ ಡಿಪಾಸಿಟ್ ಮಾಡಬೇಕೆಂದು ಕಾನೂನು ಮಾಡಿದ್ದೀರಿ ಇದಕ್ಕೆ ಯಾವ ಬೆಂಬಲವೂ ಇಲ್ಲ ಎಂದು ನಾನು ಸಾರುತ್ತೇನೆ. ನಮ್ಮ ರಾಜ್ಯ ಪ್ರಗತಿ ಹೊಂದಬೇಕಾದರೆ, ಉದ್ಯಮಗಳು ಹೆಚ್ಚಾಗ ಬೇಕಾದರೆ, ವ್ಯಾಪಾರ ವಹಿವಾಟುಗಳು ಜಾಸ್ತಿಯಾಗಬೇಕಾದರೆ ಈ ರೀತಿ ತೆರಿಗೆ ಹಾಕು ವುದು ಸರಿಯಲ್ಲ. ಡಿಪಾಸಿಟ್ ಮಾಡಬೇಕು ಅಂತ ಹೇಳುವಂತಹ ಕ್ಲಾಸನ್ನು ತೆಗೆದುಹಾಕಬೇಕೆಂದು ಹೇಳುತ್ತೇನೆ.

ಒಬ್ಬ ವ್ಯಾಪಾರಿ ತನ್ನ ಟರ್ನ್‌ಓವರ್ ಎಷ್ಟಾಗಬಹುದು ಎಂಬುದನ್ನು ಎಸ್ಟಿಮೇಟ್ ಮಾಡಿ ಮೊದಲನೆಯ ತಿಂಗಳು ಎಷ್ಟಾಗಿದೆ ಅದಕ್ಕೆ ಸರಿಯಾದಂತಹ ಟ್ಯಾಕ್ಸ್ ಕಟ್ಟುವಂತಹ ಒಂದು ಪ್ರೊವಿಜನ್ ಮಾಡಿದ್ದೀರಿ. ಒಂದುವೇಳೆ ಹೆಚ್ಚು ಕಮ್ಮಿ ಆದರೆ ಅವನ ಮೇಲೆ ಪೆನಾಲ್ಟಿ ಹಾಕು ವಂತಹ ಒಂದು ಶಬ್ದವನ್ನು ಹಾಕಿದ್ದೀರಿ, ಇದು ಸರಿಯಲ್ಲ.

ಏನಾದರೂ ಹೆಚ್ಚು ಕಡಮೆಯಾಗಬಹುದು, ಪರ ಊರಿಗೆ ಕನ್‌ಸೈನ್‌ಮೆಂಟ್ ಕಳಿಸಿರಬಹುದು, ಅದು ಅಕ್ಸೆಪ್ಟ್ ಆಗಬಹುದು ಅಥವಾ ಬಿಡಬಹುದು. ಅಂಥ ಸಂದರ್ಭದಲ್ಲಿ ಟರ್ನ್‌ಓವರ್ ಬಿಟ್ಟಿರ ಬಹುದು. ಹಾಗಾದಾಗ ಅವನ ಎಸ್ಟಿಮೇಟ್ ಹೆಚ್ಚುಕಡಮೆಯಾದರೆ ಒಂದೂವರೆ ಪಾಲಿನಷ್ಟು ಅವನಿಂದ ವಸೂಲುಮಾಡುವುದರಿಂದ ಅವನಿಗೆ ನಷ್ಟವಾಗಲು ಅವಕಾಶವಿದೆ. ಇದು ಸರಿಯಲ್ಲ. ಇಷ್ಟು ದೊಡ್ಡ ಪೆನಾಲ್ಟಿ ಹಾಕುವುದು ಸರಿಯಲ್ಲ.

4-00 P.M.

ಒಂದು ಶ್ಲಾಘನೀಯವಾದ ವಿಷಯವೊಂದಿದೆ. ಹಲವು ಬಾರಿ ಈ ವಿಷಯ ಹೇಳಿದ್ದೆ. ಹಣಕಾಸಿನ ಮಂತ್ರಿಗಳ ಉದಾಹರಣೆ ಕಳೆದ ಸಲ ಕೊಟ್ಟೆ. ಹೆಚ್ಚು ತೆರಿಗೆ ಹಾಕಿದಾಗ ಅಪೀಲು ಮಾಡಬೇಕಾದರೆ ಹೊರಿಸುವ ಸಂಪೂರ್ಣ ತೆರಿಗೆಯನ್ನು ಕಟ್ಟಬೇಕಾದ ಅವಶ್ಯಕತೆ ಇಲ್ಲ. ಹೀಗೆ ಮಾಡಿ ಅಪೀಲು ತೆಗೆದುಕೊಳ್ಳುವುದಕ್ಕೆ ಅವಕಾಶಮಾಡಿರುವುದು ಶ್ಲಾಘನೀಯವಾದುದು. ಹಲವು ವ್ಯಾಪಾರಿಗಳಿಗೆ ಕಷ್ಟವಿತ್ತು. ಹಿಂದಿನ ಪ್ರಾವಿಷನ್ ಪ್ರಕಾರ ಸಂಪೂರ್ಣ ತೆರಿಗೆ ಕಟ್ಟದಿದ್ದರೆ ಅಪೀಲು ಡಿಸ್‌ಮಿಸ್ ಆಗುತ್ತಿತ್ತು. ಬೇರೆ ಮಾರ್ಗವಿರಲಿಲ್ಲ. ಅಪೀಲು ಮಾಡಿದರೆ ಇಷ್ಟು ಫೀಜನ್ನು ಕಟ್ಟಬೇಕೆಂದು ಅಪೆಲೇಟ್ ಅಥಾರಿಟಿ ಡಿಮ್ಯಾಂಡುಮಾಡುತ್ತಿದ್ದರು. ಹಾಗೆ ಕಟ್ಟದಿದ್ದರೆ ಅಪೀಲನ್ನು ಅಡ್ಮಿಟ್ ಮಾಡುತ್ತಿರಲಿಲ್ಲ. ಆದುದರಿಂದ ಈಗ ಮಾಡಿರುವ ತಿದ್ದುಪಡಿ ಸಮಂಜಸ ವಾಗಿದೆ. ಇದಕ್ಕೆ ರೆಟ್ರಾಸ್‌ಪೆಕ್ಟಿವ್ ಎಫೆಕ್ಟ್ ಕೊಡಬೇಕು, ಇಲ್ಲದಿದ್ದರೆ ಕೆಲವರಿಗೆ ಕಷ್ಟವಾಗು ವುದು. ಈಗಲೇ ಹಲವಾರು ಅಪೀಲುಗಳು ಟ್ರಿಬ್ಯೂನಲ್‌ನಲ್ಲಿ ಮತ್ತು ಡಿ ಸಿ ಬಳಿ ಪೆಂಡಿಂಗ್ ಇವೆ. ಅವುಗಳಿಗೂ ಕೂಡ ಈಗಿನ ತಿದ್ದುಪಡಿ ಅನ್ವಯಿಸುವಂತೆ ಮಾಡಬೇಕು.

ಎಸ್‌ಕೇಪ್ಡ್ ಅಸೆಸ್‌ಮೆಂಟ್ ವಿಷಯದಲ್ಲಿ ತಿದ್ದುಪಡಿಗಳಮೇಲೆ ತಿದ್ದುಪಡಿಗಳು ಬಂದಿವೆ. 9ನೇ ಕ್ಲಾಸ್ ತೆಗೆದುಕೊಂಡು ಹೊಸ ತಿದ್ದುಪಡಿ ತಂದಿದ್ದಾರೆ ತರಬಹುದು. ಆದರೆ 5 ವರ್ಷವಾದ ಮೇಲೆ ಅಸೆಸ್ ಮಾಡುವುದಕ್ಕಾಗುವುದಿಲ್ಲ, ಲಿಮಿಟೇಷನ್ ಪ್ರಶ್ನೆ ಬರುವುದು. ಹೈಕೋರ್ಟು ಹೊಡೆದುಹಾಕುವುದು. ಸಿ ಟಿ ಒ ಪವರ್ ಉಪಯೋಗಿಸಿ ಅಸೆಸ್ ಮಾಡಿದರೆ ಅಪೀಲಿದೆ, ಡಿ ಸಿ ಗೆ ಅಥವ ಎ ಸಿ ಗೆ ಅಪೀಲುಮಾಡಲು ಅವಕಾಶವಿದೆ. ಆದರೆ ರಾಜ್ಯಾಂಗದ 14ನೇ ಕಲಂಮಿಗೆ

(ಶ್ರೀ ಪಿ. ವಿ. ಐತಾಳ್)

ವಿರೋಧವಾಗುವುದೆಂದು ಹೊಡೆದುಹಾಕಲ್ಪಡುವುದು. ಈಗ ನೋಡಿದರೆ 5 ವರ್ಷ ಏರಿದರೂ ಕೂಡ ಎಸ್‌ಕೇಪ್ಡ್ ಅಸೆಸ್‌ಮೆಂಟ್ ಎಂದು ತೆರಿಗೆಹಾಕುವ ಉದ್ದೇಶವಿದೆಯೆಂದು ಕಾಣುವುದು. ಹಾಗಿದ್ದರೆ ಅದು ಸರಿಯಲ್ಲ.

ಇನ್ನು ಎರಡನೆಯ ಷೆಡ್ಯೂಲಿನಲ್ಲಿ ಬ್ರಿಕ್ಸ್ ಮತ್ತು ಟೈರ್ಸ್‌ಗೆ ಮೂರುವರೆ ಪರ್ಸೆಂಟ್ ಇದ್ದ ತೆರಿಗೆಯನ್ನು 4 ಪರ್ಸೆಂಟಿಗೆ ಹೆಚ್ಚಿಸಿರುವುದು ಸರಿಯಲ್ಲ. ಬೈಸಿಕಲ್ಲಿಗೆ ತೆರಿಗೆ ಜಾಸ್ತಿ ಮಾಡಿದ್ದಾರೆ, ಸಾಧಾರಣ ಜನರು ಉಪಯೋಗಿಸುವ ಬೈಸಿಕಲ್ಲಿಗೆ ಸೇಕಡ 6ರಂತೆ ತೆರಿಗೆ ಹಾಕಿರುವುದು ತೀರ ಅನ್ಯಾಯ. ಹಲವಾರು ಬಡ ನೌಕರರು ಮತ್ತಿತರರು ಉಪಯೋಗಿಸುವುದಕ್ಕೆ ಅದು ಲಕ್ಷುರಿ ಆರ್ಟಿಕಲ್ ಅಲ್ಲದಿದ್ದರೂ ಹೆಚ್ಚಿಸಿದ್ದಾರೆ, ಇದಕ್ಕೆ ತಿದ್ದುಪಡಿ ಮಾಡಲೇಬೇಕು. ಸೇಕಡ ಐದೂವರೆ ಇದ್ದುದನ್ನು 6 ಮಾಡಿದ್ದೀರಿ, ಐದೂವರೆಯೇ ಜಾಸ್ತಿ, ಅದನ್ನು ಕಡಮೆ ಮಾಡಬೇಕು. ಸೇಕಡ 25-30 ಮಂದಿ ಬೈಸಿಕಲ್ ಉಪಯೋಗಿಸುವರು.

ಇನ್ನು ತಮ್ಮ ದೃಷ್ಟಿ ಕಟ್ಟಡಗಳು ಮತ್ತು ಕಂಟ್ರಾಕ್ಟರುಗಳ ಮೇಲೆ ಬಿದ್ದಿದೆ. ಸ್ಯಾನಿಟರಿ ಫಿಟಿಂಗ್‌ಗಳಿಗೆ ತೆರಿಗೆ ಜಾಸ್ತಿ ಮಾಡಿದೆ. ಡೆವಲಪ್ ಆಗುವ ಬೆಂಗಳೂರಿನಲ್ಲಿ ಸ್ಯಾನಿಟರಿ ಫಿಟಿಂಗ್ಸ್ ಬಹಳ ಪ್ರಾಮುಖ್ಯವಾಗಿ ಬೇಕಾಗಿದೆ. ದೊಡ್ಡ ನಗರಗಳಲ್ಲಿ ಗುಮಾಸ್ತರು ಅಥವ ಜವಾನರು ಗಳಿಗೂ ಸ್ಯಾನಿಟರಿ ಫಿಟಿಂಗ್ಸ್ ಅತ್ಯಗತ್ಯವಾಗಿ ಬೇಕು. ಅದಿಲ್ಲದಿದ್ದರೆ ಲೈಸನ್ಸ್ ಕೊಡುವುದಿಲ್ಲ. ಆದಕಾರಣ ದೊಡ್ಡ ನಗರಗಳಲ್ಲಿ ಸ್ಯಾನಿಟರಿ ಫಿಟಿಂಗ್ಸ್ ತೆಗೆದುಕೊಂಡು ಮುನಿಸಿಪಲ್ ಕಾನೂನನ್ನನು ಸರಿಸಿ ಕಟ್ಟಡ ಕಟ್ಟಬೇಕಾಗಿರುವಾಗ ಅದಕ್ಕೆ ಜಾಸ್ತಿ ತೆರಿಗೆ ಹಾಕಲಾಗಿದೆ, ಏಳೂವರೆ ಇದ್ದುದನ್ನು ಸೇಕಡ 8ಕ್ಕೆ ಹೆಚ್ಚಿಸಿರುವುದು ತೀರ ಅನ್ಯಾಯ. ಅದೇ ರೀತಿಯಲ್ಲಿ ಸಿಮೆಂಟಿಗೆ ಸೇಕಡ ಆರೂವರೆ ಇದ್ದ ತೆರಿಗೆಯನ್ನು 8ಕ್ಕೆ ಹೆಚ್ಚಿಸಲಾಗಿದೆ. ಹೀಗಾದರೆ ಬಡವರ ಗತಿಯೇನು ? ಕಾಫಿ ಮತ್ತು ಟೀ ಬೆಳಿಗ್ಗೆ ಎದ್ದ ಕೂಡಲೆ ಉಪಯೋಗ ಮಾಡುವುದು ಅಭ್ಯಾಸವಾಗಿರುವಾಗ ಅದರ ಮೇಲೆ ಬೇಕಾದಂತೆ ತೆರಿಗೆ ಹೇರಿದ್ದಾರೆ, ಕಾಫಿ ಮತ್ತು ಟೀ ಮೇಲೆ ಐದೂವರೆ ಇದ್ದುದನ್ನು 6 ಪರ್ಸೆಂಟಿಗೆ ಏರಿಸಿರುವುದು ಅನ್ಯಾಯ. ಮಣೇಲ್ ಶ್ರೀನಿವಾಸ ನಾಯಕರು ಹೇಳಿದಂತೆ ಮಿಲ್ಲರ್ಸ್‌ಗೆ ಬಹಳ ಅನ್ಯಾಯವಾಗಿದೆ, ಅದರಲ್ಲೂ ಕೊಬರಿ ಮಿಲ್ಲುಗಳವರಿಗೆ ಅನ್ಯಾಯವಾಗಿದೆ. ಕೊಬರಿ ತೆಗೆದುಕೊಳ್ಳುವಾಗ ಸೇಕಡ 2ರಷ್ಟು ತೆರಿಗೆ ಕೊಡಬೇಕು, ಆಮೇಲೆ ಎಣ್ಣೆಗೆ ಸೇಕಡ 4ರಂತೆ ಕೊಡಬೇಕು. ಮೊದಲು ಸೇಕಡ ಎರಡೂವರೆ ಇತ್ತು. ಈಗ ಹೆಚ್ಚಿಸಿದೆ. ನಂತರ ಹಿಂದಿಗೆ ಸೇಕಡ 2 ತೆರಿಗೆ ಇದೆ. ಇದರಿಂದ ಒಟ್ಟು 8 ಪರ್ಸೆಂಟ್ ತೆರಿಗೆ ಹಾಕಿದ ಹಾಗಾಯ್ತು. ಹೀಗಾದರೆ ಯಾವ ರೀತಿ ಮಿಲ್ಲರ್ಸ್ ಸುಧಾರಿಸಿ ಕೊಳ್ಳಬೇಕು ಎಂಬುದನ್ನು ಯೋಚನೆ ಮಾಡಿ. ಎಡಿಬಲ್ ಆಯಿಲ್ಲನ್ನು ಬಡವರು ಉಪಯೋಗ ಮಾಡುವರು, ದಿನವೂ ಉಪಯೋಗಿಸುವ ವಸ್ತು ಅದು. ಬಡವರು ಮಂತ್ರಿಗಳ ಹಾಗೆ ತುಪ್ಪ ತಿನ್ನುವುದಕ್ಕಾಗುವುದಿಲ್ಲ. ಅವರು ಕೊಬರಿ ಎಣ್ಣೆ ಉಪಯೋಗಿಸಿ ಆರೋಗ್ಯ ಕಾಪಾಡಿಕೊಳ್ಳುವರು. ಅಂಥ ಎಣ್ಣೆಗೆ ಎರಡೂವರೆ ಪರ್ಸೆಂಟ್ ಇದ್ದುದನ್ನು 4 ಪರ್ಸೆಂಟ್ ಮಾಡಲಾಗಿದೆ. ಕೊಬರಿಗೆ ಸೇಕಡ 4, ಹಿಂಡಿಗೆ ಸೇಕಡ 2 ಈ ರೀತಿ ತೆರಿಗೆ ಇದೆ. ಇದು ಸರಿಯಲ್ಲ.

ಪ್ಲೇಯಿಂಗ್ ಕಾರ್ಡುಗಳಿಗೆ ಸೇಕಡ ಏಳೂವರೆಯಿಂದ 12 ಕ್ಕೆ ಏರಿಸುವುದೇಕೆ ! ರಾಟರಿ ಜಾರಿಗೆ ತಂದಮೇಲೆ ಬೇಕಾದಷ್ಟು ಸಂಪಾದನೆಯಾಗುತ್ತಿದೆ. ಜುಗಾರಿ ಆಡಬಾರದೆಂದು ಕಾನೂನಿದೆ, ಆದಕಾರಣ ಅದನ್ನಾಡುವವರು ಕಡಮೆ. ಬೇಜಾರಾದಾಗ ಹಣ ಇಡದೆ ಕೆಲವರು ಆಡುವರು. ಮಕ್ಕಳು ಶಾಲೆಗಳಲ್ಲಿ, ಕ್ಲಬ್ಬುಗಳಲ್ಲಿ ಬೇಜಾರಾದಾಗ ಹೊತ್ತು ಕಳೆಯಲು ಆಡುವರು. ಹಣ ಇಟ್ಟು ಆಡುವವರನ್ನು ಅರೆಸ್ಟ್ ಮಾಡಬಹುದು. ಆದುದರಿಂದ ಸೇಕಡ 12 ರಂತೆ ತೆರಿಗೆ ಹಾಕಿರುವುದಕ್ಕೆ ಯಾವ ಕಾರಣವೂ ಇಲ್ಲ.

[MR. DEPUTY SPEAKER in the Chair]

ಗಡಿಯಾರಗಳ ಮೇಲೆ ಕೂಡ ಹೆಚ್ಚು ಮಾಡಿದ್ದಾರೆ. ಹತ್ತೂವರೆ ಗಂಟೆಗೆ ಸರ್ಕಾರಿ ನೌಕರರು ಆಫೀಸಿಗೆ ಬಾರದೆ ಇದ್ದರೆ ಅವರನ್ನು ಹಾಗೆಯೇ ಬಿಡುತ್ತಾರೆಯೇ ? ಬಡ ನೌಕರರು, ಒಬ್ಬ ಗುಮಾಸ್ತ, ಅಥವಾ ಜವಾನ ಕೂಡ ಒಂದು ಅಲಾರಂ ಗಡಿಯಾರ ತೆಗೆದುಕೊಳ್ಳುತ್ತಾನೆ. ಕಾಲಕ್ಕೆ ಸರಿಯಾಗಿ ಕೆಲಸ ಮಾಡಬೇಕಾಗಿರುವುದು ಮನುಷ್ಯನ ಮುಖ್ಯ ಕರ್ತವ್ಯಗಳಲ್ಲೊಂದು ಎಂದು ಬಲ್ಲವರು ಹೇಳುತ್ತಾರೆ. ಅದಕ್ಕೆ 12 ಪರ್ಸೆಂಟ್ ಹಾಕಿದ್ದಾರೆ. ಹೆಂಡಕ್ಕೆ (ಕಳ್ಳಿಗೆ)

5 ಪರ್ಸೆಂಟ್ ಇದ್ದುದನ್ನು 4 ಪರ್ಸೆಂಟಿಗೆ ಇಳಿಸಿದ್ದಾರೆ. ಕಳ್ಳಿಗೆ ಕಡಮೆ ಮಾಡುವುದಕ್ಕೆ ಯಾವ ನೈತಿಕ ಬೆಂಬಲವಿದೆ? ಪಾಪ್ಯುಲಾರಿಟಿ ಮಾಡುವುದಕ್ಕೆ ಮಾಡುತ್ತಿದ್ದಾರೆಯೋ ಏನೋ? ಜನ ಇನ್ನೂಷ್ಟು ಕುಡಿಯಲಿ ಎಂದು ಮಾಡುತ್ತಿದ್ದಾರೆಯೋ ಏನೋ?

ಎಣ್ಣೆ ಮತ್ತು ಸೋಪಿನ ಮೇಲೆ ಕೂಡ ಟ್ಯಾಕ್ಸ್ ಹೆಚ್ಚು ಮಾಡಿದ್ದಾರೆ. ಬಟ್ಟೆಗೆ ಹಾಕುವಂಥ ಸೋಪಿಗೆ ಕೂಡ ಜಾಸ್ತಿ ಮಾಡಿದ್ದಾರೆ. ಬಟ್ಟೆ ಹರಿದಿದ್ದರೂ ಚಿಂತೆ ಇಲ್ಲ, ಸ್ವಚ್ಛವಾಗಿ ಇರಬೇಕು ಎಂದು ನಾನು ಚಿಕ್ಕ ಹುಡುಗನಾಗಿದ್ದಾಗ ಶಾಲೆಯಲ್ಲಿ ನಮ್ಮ ಮಾಸ್ತರು ಹೇಳುತ್ತಿದ್ದರು. ಇಂಥ ಸಾಬೂನಿನ ಮೇಲೆ 6 ಪರ್ಸೆಂಟ್ ಟ್ಯಾಕ್ಸ್ ಹಾಕಿದ್ದಾರೆ. ಸೋಪಿನ ಮೇಲೆ ಸಿಂಗಲ್ ಪಾಯಿಂಟ್ ಟ್ಯಾಕ್ಸ್ ಹಾಕಿದ್ದರೂ ಚಿಲ್ಲರೆ ಅಂಗಡಿಯವರು ಟ್ಯಾಕ್ಸ್ ಕೊಟ್ಟು ಪೇಟೆಯಿಂದ ಸೋಪು ತರುತ್ತಾನೆ. ಅದನ್ನು ಮಾರುವಾಗ ಅದರ ಮೇಲೆ ತನ್ನ ಲಾಭವನ್ನು ದೃಷ್ಟಿಯಲ್ಲಿ ಇಟ್ಟುಕೊಂಡೇ ಮಾರುತ್ತಾನೆ.

ಬ್ಯಾಂಕುಗಳನ್ನು ರಾಷ್ಟ್ರೀಕರಣ ಮಾಡಿದ್ದಾರೆ. ಹಣವನ್ನು ಮನೆಯಲ್ಲಿ ಇಡುವುದಕ್ಕೆ ಸಾಧ್ಯವಿಲ್ಲ. ಅರ್ಬನ್ ಪ್ರಾಪರ್ಟಿ ಮೇಲೆ ಸೀಲಿಂಗ್ ಬರುತ್ತದೆ. ಮಧ್ಯಮ ವರ್ಗದ ಜನ, ಕಷ್ಟ ಬಂದ ಕಾಲದಲ್ಲಿ ಇರಲಿ ಎಂದು ಸ್ಟೇನ್‌ಲೆಸ್‌ಸ್ಟೀಲ್ ತೆಗೆದುಕೊಳ್ಳೋಣವೆಂದರೆ, ಅದರ ಮೇಲೆ ಕೂಡ ಸರ್ಕಾರದ ದೃಷ್ಟಿ ಬಿದ್ದಿದೆ. ಇದರ ಮೇಲಿನ ಟ್ಯಾಕ್ಸನ್ನು ಕೂಡ ನಾಲ್ಕೂವರೆ ಪರ್ಸೆಂಟಿನಿಂದ ಆರು ಪರ್ಸೆಂಟಿಗೆ ಏರಿಸಿದ್ದಾರೆ.

ಬುಲಿಯನ್ ಅಂಡ್ ಸ್ಪೀಸಿ—ಇದರ ಮೇಲೆ ಎಲ್ಲ ರಾಷ್ಟ್ರಗಳಲ್ಲಿಯೂ ಅತಿ ಕಡಮೆ ಟ್ಯಾಕ್ಸ್ ಇದೆ. ಇದಕ್ಕೆ ನಮ್ಮ ಸರ್ಕಾರ 2 ಪರ್ಸೆಂಟ್ ಟ್ಯಾಕ್ಸ್ ಮಾಡಿದೆ. ಇದರಿಂದ ದೊಡ್ಡ ವಿಪತ್ತು ಬರಲಿಕ್ಕೆ ಸಾಧ್ಯವುಂಟು. ಏನೆಂದರೆ ಇದರ ವ್ಯಾಪಾರ ವಹಿವಾಟು ನಮ್ಮ ರಾಜ್ಯದಲ್ಲಿ ಕಡಮೆಯಾಗಿ ನೆರೆಹೊರೆಯ ರಾಜ್ಯಗಳಿಗೆ ಹೋಗುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಇದರ ಮೇಲೆ ಟ್ಯಾಕ್ಸ್ ಜಾಸ್ತಿ ಮಾಡುವುದು ಸರಿಯಲ್ಲ.

ಮೊಸಾಯಿಕ್ ಟೈಲ್ಸ್ ಅಂಡ್ ಚಿಪ್ಸ್‌ಮೇಲೆ ನಾಲ್ಕೂವರೆ ಪರ್ಸೆಂಟ್ ಇದ್ದ ಟ್ಯಾಕ್ಸನ್ನು 8 ಪರ್ಸೆಂಟ್‌ಗೆ ಏರಿಸಿದ್ದಾರೆ. ಕಟ್ಟಡಗಳನ್ನು ಕಟ್ಟಲೇಬಾರದು ಎಂದು ಈ ತರಹ ತಿದ್ದುಪಡಿಗಳನ್ನು ತರುತ್ತಿದ್ದಾರೆಂದು ಕಾಣುತ್ತದೆ. ಅದೇ ರೀತಿಯಲ್ಲಿ ಸಿಮೆಂಟ್, ಅಸ್ಬೆಸ್ಟಾಸ್ ಷೀಟ್ಸ್ ಇವುಗಳಮೇಲೆ ಕೂಡ 6 ಪರ್ಸೆಂಟ್‌ಗೆ ಏರಿಸಿದ್ದಾರೆ. ಟಾಡಿಮೇಲೆ ಮಾತ್ರ ಒಂದು ಪರ್ಸೆಂಟ್ ಕಡಮೆ ಮಾಡಿದ್ದಾರೆ. ಇದಕ್ಕೆ ಮಾನ್ಯ ಅರ್ಥಸಚಿವರನ್ನು ಅಭಿನಂದಿಸಬೇಕಾಗಿದೆ. ಅವರು ಬಹಳ ಉದಾರ ಮನಸ್ಸಿನಿಂದ ಬಡವರಿಗೆ ಬೇಕಾದ ಪದಾರ್ಥ, ಜನ ಸಾಮಾನ್ಯರು ಮತ್ತು ಎಲ್ಲರೂ ಉಪಯೋಗಿಸುವ ಪದಾರ್ಥ ಎಂದು ಕಡಮೆ ಮಾಡಿರುವುದಕ್ಕಾಗಿ ಅವರಿಗೆ ಅಭಿನಂದನೆಗಳು ಸಲ್ಲಲೇ ಬೇಕು.

ದಕ್ಷಿಣ ಕನ್ನಡ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ತೋಟಗಳಿವೆ. ಕೃಷಿಕರ ದೃಷ್ಟಿಯನ್ನು ಇವರು ಇಟ್ಟುಕೊಂಡಿದ್ದಾರೆ. ಪೆಪ್ಪರ್' ಕ್ಯಾಷ್ಯೂ, ಅರೆಕಾ ಇವುಗಳಿಗೆ 5 ಪರ್ಸೆಂಟ್ ಟ್ಯಾಕ್ಸ್ ಇತ್ತು. ಅದನ್ನು 2 ಪರ್ಸೆಂಟ್ ಮಾಡಿದ್ದಾರೆ. ಇದಕ್ಕಾಗಿ ನನ್ನ ಹೃತ್ಪೂರ್ವಕವಾದ ವಂದನೆಗಳನ್ನು ಸಲ್ಲಿಸುತ್ತೇನೆ. ಅಡಕೆ ತೋಟವನ್ನು ಬೆಳೆಸುವಕಷ್ಟ ನಮಗೆ ಗೊತ್ತಿದೆ. 15 ದಿವಸ ನೀರು ತಪ್ಪಿಹೋದರೆ ಬರುವ ವರ್ಷ ಬೆಳೆ ಇಲ್ಲ. ಅಂಥ ಸಂದರ್ಭದಲ್ಲಿ ಅದಕ್ಕೆ 5 ಪರ್ಸೆಂಟ್ ಟ್ಯಾಕ್ಸ್ ಹಾಕಿದ್ದರಿಂದ, ಕೇರಳದಲ್ಲಿ 4 ಪರ್ಸೆಂಟ್ ಇದ್ದುದರಿಂದ ನಮ್ಮ ರಾಜ್ಯದ ವಹಿವಾಟುಗಳೆಲ್ಲ ಕೇರಳಕ್ಕೆ ಹೋದುವು. ಅದೇ ರೀತಿ ಕ್ಯಾಷ್ಯೂ ಮೇಲೆ ಕೇರಳದಲ್ಲಿ 4 ಪರ್ಸೆಂಟ್ ಇದೆ. ನಮ್ಮಲ್ಲಿ 5 ಪರ್ಸೆಂಟ್ ಹಾಕಿದ್ದರಿಂದ ಇದರ ವಹಿವಾಟೂ ಕೇರಳಕ್ಕೆ ಹೆಚ್ಚಾಗಿ ಹೋಯಿತು. ಇಂಡಿಯಾ ದೇಶದಲ್ಲಿ ಉತ್ಪಾದನೆಯಾಗುವ ಗೇರುಬೀಜದಲ್ಲಿ 85 ಭಾಗ ಕೇರಳದಲ್ಲಿಯೂ 15 ಭಾಗ ದಕ್ಷಿಣ ಇಂಡಿಯಾದಲ್ಲಿಯೂ ಆಗುತ್ತದೆ.

ಸೇಕಡ 60 ರಷ್ಟು ಗೇರು ಬೀಜ ನಮಗೆ ಬರಬೇಕಾದ್ದು ಆಫ್ರಿಕಾದಿಂದ. 40 ಪರ್ಸೆಂಟ್ ಮಾತ್ರ ಇಂಡಿಯಾ ದೇಶದಲ್ಲಿ ಬೆಳೆಯುತ್ತೇವೆ. ಕೆಲವು ವರ್ಷಗಳ ಹಿಂದೆ ಆಫ್ರಿಕದಲ್ಲಿ ಪ್ರೋಸೆಸಿಂಗ್ ಇಂಡಸ್ಟ್ರಿ ಡೆವಲಪ್ ಆಗಿರಲಿಲ್ಲ. ಅವರು ಗೇರುಬೀಜವನ್ನು, ಕಚ್ಚಾಮಾಲು ಎಂದು ಇಂಡಿಯಾ ದೇಶಕ್ಕೆ ಕಳುಹಿಸುತ್ತಿದ್ದರು. ಅದರಿಂದ ನಮ್ಮಲ್ಲಿ ಈ ಕೈಗಾರಿಕೆ ಬಹಳ ಒಳ್ಳೆಯ ರೀತಿಯಲ್ಲಿ ನಡೆಯುತ್ತಿತ್ತು. ಆದರೆ ಈಗ ಜಾಯಿಂಟ್' ಸ್ಕೇಲ್'ನಲ್ಲಿ ದಕ್ಷಿಣ ಆಫ್ರಿಕಾದಲ್ಲಿ ಕ್ಯಾಷ್ಯೂ ಪ್ರೋಸೆಸಿಂಗ್ ಇಂಡಸ್ಟ್ರಿ ನಡೆದಿದೆ. ಅವರು ನಮ್ಮೊಡನೆ ಅಮೆರಿಕಾ ಮಾರುಕಟ್ಟೆಯಲ್ಲಿ ಸ್ಪೈರ್ಧೆ ಮಾಡುವುದಕ್ಕೆ ಷುರು ಮಾಡಿದ್ದಾರೆ. ಮಂಗಳೂರಿನ ಹಲವಾರು ಕಾರ್ಖಾನೆಗಳಿಗೆ ಕ್ಯಾಷೂನಟ್' ಆಫ್ರಿಕಾದಿಂದ ಬರುವುದು ಕಡಮೆಯಾಗಿದೆ. ಆ ಸಂದರ್ಭದಲ್ಲಿ ಕೇರಳದಲ್ಲಿ 4 ಪರ್ಸೆಂಟ್' ಟ್ಯಾಕ್ಸ್ ಇಲ್ಲಿ 5 ಪರ್ಸೆಂಟ್ ಟ್ಯಾಕ್ಸ್ ಇದ್ದುದರಿಂದ ನಮ್ಮ ಗೇರು ಬೀಜವನ್ನು ಕೇರಳಕ್ಕೆ ಕಳುಹಿಸಿ, ಅವರ ಬೀಜ-

(ಶ್ರೀ ಪಿ. ಪಿ. ಐತಾಳ)

ದೊಡನೆ ಮಿಕ್ಸ್‌ಮಾಡಿ ತರುತ್ತಿದ್ದರು. ಆ ವಿಷಯದಲ್ಲಿ ಕಮೀಷನರಿಗೆ ರೆಪ್ರೆಸೆಂಟೇಷನ್ ಕೊಟ್ಟಿದ್ದಾರೆ. ನಮ್ಮ ಗೇರುಬೀಜವನ್ನು ಕೇರಳಕ್ಕೆ ಕಳುಹಿಸಿ ಅಲ್ಲಿಂದ ಅವರು ಗೇರುಬೀಜದೊಡನೆ ಮಿಶ್ರ ಮಾಡಿ ತರಿಸುತ್ತಿದ್ದಾರೆ. ಕೇರಳ ಮೈಸೂರು ಗಡಿಯಲ್ಲಿ 100-150 ಮೈಲ ಉದ್ದದಲ್ಲಿ ಯಾವ ಚೆಕ್ ಪೋಸ್ಟ್‌ಗಳೂ ಇಲ್ಲದೆ ಇರುವುದರಿಂದ ಈ ರೀತಿ ನಡೆಯುತ್ತಿದೆ. ಕೇರಳದ ಗೇರು ಬೀಜಕ್ಕೆ 25 ರೂಪಾಯಿ ಜಾಸ್ತಿ ಬರುತ್ತದೆ. ಹೀಗಾಗಿ ಲಾಭ ಮಾಡುವ ದೃಷ್ಟಿಯಿಂದ ಮೈಸೂರಿನಿಂದ ಕೇರಳಕ್ಕೆ ಕಳುಹಿಸಿ, ವಾಪಸು ತರಿಸುತ್ತಿದ್ದಾರೆ. ಸೇಲ್ಸ್ ಟ್ಯಾಕ್ಸ್ ಕಡಮೆ ಮಾಡಿರುವುದರಿಂದ ಈ ರೀತಿಯ ವ್ಯವಹಾರ ನಿಲ್ಲುವುದಕ್ಕೆ ಅವಕಾಶವಾಗಿದೆ. ಇದಕ್ಕೆ ಮಾನ್ಯ ಮಂತ್ರಿಗಳನ್ನು ಅಭಿನಂದಿಸುತ್ತೇನೆ.

ಕನ್‌ಫೆಕ್ಷನರಿ, ಬಿಸ್ಕತ್ ಮತ್ತು ಕೇಕ್ಸ್ ಮಕ್ಕಳ ಪೌಷ್ಟಿಕ ಆಹಾರ. ಇದರಮೇಲೆ 6 ಪರ್ಸೆಂಟ್ ಟ್ಯಾಕ್ಸ್ ಹಾಕುವುದು ಸರಿಯಲ್ಲ. ಮೂರು ಪರ್ಸೆಂಟ್ ಇದ್ದುದನ್ನು ಒಂದೇ ಸಲ ಎರಡರಷ್ಟು ಮಾಡಿರುವುದು ಸರಿಯಲ್ಲ.

ಪೇಂಟ್ಸ್, ಕಲರ್ಸ್, ಡ್ರೈಸ್ ಅಂಡ್ ವಾರ್ನಿಷ್ ಇದರಮೇಲೆ ಕೂಡ ಟ್ಯಾಕ್ಸ್ ಜಾಸ್ತಿಮಾಡಿದ್ದಾರೆ. ಒಂದು ಕಟ್ಟಡವನ್ನು ಕಟ್ಟಲು ಯಾವ ಯಾವ ಸಾಮಗ್ರಿಗಳು ಬೇಕೋ ಅದಕ್ಕೆಲ್ಲ ಒಂದಕ್ಕೆ ಎರಡರಷ್ಟು ಟ್ಯಾಕ್ಸ್ ಮಾಡಿದ್ದಾರೆ. ಮನೆಗಳಿಲ್ಲದೆ ಜನ ನರಳುತ್ತಿದ್ದಾರೆ. ಬೆಂಗಳೂರಿನಲ್ಲಿ ತಕ್ಕಮಟ್ಟಿಗೆ ಕಟ್ಟಡಗಳುಂಟು. ಬೇರೆ ಕಡೆ ಕಟ್ಟಡಗಳಿಲ್ಲ. ಕಟ್ಟಡಗಳಿಲ್ಲದೆ ರಸ್ತೆಗಳಲ್ಲಿ ಜನ ವಾಸ ಮಾಡಬೇಕಾದ ಪರಿಸ್ಥಿತಿ ಇದೆ. ಹೀಗಿರುವಾಗ ಕಟ್ಟಡಗಳನ್ನು ಕಟ್ಟುವುದಕ್ಕೆ ಯಾವ ಯಾವ ಸಾಮಗ್ರಿ ಬೇಕೋ ಅದಕ್ಕೆ ಪ್ರತಿಯೊಂದಕ್ಕೂ ಒಂದಕ್ಕೆ ಎರಡರಷ್ಟು ತೆರಿಗೆ ಹಾಕಿದ್ದಾರೆ. ಇದು ಸರಿಯಲ್ಲ.

ನಮ್ಮಲ್ಲಿ ಮಳೆ ಬಹಳ ಜಾಸ್ತಿ, ಬೆಂಗಳೂರಿನಲ್ಲಿ ಕೊಡೆ ಇಲ್ಲದೆ ಜನತೆ ದಿವಸ ತೆಗೆಯುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆ, ಉತ್ತರ ಕನ್ನಡ ಜಿಲ್ಲೆ ಹಾಗೂ ಮಲೆನಾಡು ಕಡೆ ಮೂರು ತಿಂಗಳು ಕೊಡೆ ಇಲ್ಲದೆ ಇರುವುದಕ್ಕೇ ಸಾಧ್ಯವಿಲ್ಲ, ಅದು ಬಡವನ ರಕ್ಷೆ. ಮೆಡಿಷನಲ್ ಪ್ರಿಪರೇಷನ್ ಹಾಗೆ. ಇವರು ಔಷಧಿಯನ್ನು ಕೂಡ ಬಿಟ್ಟಿಲ್ಲ. ಅದಕ್ಕೂ ಜಾಸ್ತಿ ಮಾಡಿದ್ದಾರೆ. ಕೊಡೆ ಬಡವನಿಗೆ ರಕ್ಷಣೆಯಾಗಿರುವ ಸಾಮಾಗ್ರಿ, ಇದಕ್ಕೆ 6 ಪರ್ಸೆಂಟ್ ಟ್ಯಾಕ್ಸ್ ಹಾಕಿದ್ದಾರೆ. ಫೋಲ್ಡಿಂಗ್ ಅಂಬ್ರೆಲಾ ಎಂದು ಹಾಕಿದ್ದಾರೆ. ನಮ್ಮ ಕಡೆ ಕೆಲವರು ಓಲೆ ಕೊಡೆ ಹಿಡಿದುಕೊಳ್ಳುತ್ತಾರೆ. ಗಾಂಧಿ ಟೋಪಿಗೆ ಇದ್ದ ಹಾಗೆ ಇದೂ ಕೂಡ ಒಂದು ಸಿಂಬಲ್. ನಾಗರಿಕರಾದ ಕಾಲದಲ್ಲಿ ನಾವು ಕೂಡ ಅದನ್ನು ಇಟ್ಟುಕೊಳ್ಳಬೇಕು ಎನ್ನುವುದು ಮಾನ್ಯ ಮಂತ್ರಿಗಳ ಅಭಿಪ್ರಾಯವೋ ? ಬಡವನಿಗೆ ಮಳೆಯಿಂದ ರಕ್ಷಣೆಮಾಡುವಂಥ ಕೊಡೆಗೆ 6 ಪರ್ಸೆಂಟ್ ಟ್ಯಾಕ್ಸ್ ಹಾಕಿರುವುದು ಬಹಳ ಅನ್ಯಾಯ.

ತೆಂಗಿನ ನಾರಿನಿಂದ ಹಗ್ಗ, ಬುಟ್ಟಿ, ಚಾಪೆ ಮುಂತಾದುವುಗಳನ್ನು ಮನೆಯಲ್ಲಿ ಕೂತುಕೊಂಡು ಮಾಡುವ ಒಂದು ಕೈಗಾರಿಕೆಯಾಗಿದೆ. ಇದು ಬಹಳ ಕಷ್ಟದ ಕೆಲಸ. ಇಂಥ ಕಾಯಿರ್ ಇಂಡಸ್ಟ್ರೀ ಮೇಲೆ ಆರು ಪರ್ಸೆಂಟ್ ಟ್ಯಾಕ್ಸ್ ಹಾಕಿರುವುದಕ್ಕೆ ಯಾವ ಜಸ್ಟಿಫಿಕೇಷನ್ ಇಲ್ಲ. ಇದು ಬಹಳ ಅನ್ಯಾಯ. ಗುಡಿ ಕೈಗಾರಿಕೆಯ ಬಗ್ಗೆ ಭೂತಲಿಂಗಂರವರ ಶಿಫಾರಸುಗಳನ್ನು ಬಿಟ್ಟುಕೊಟ್ಟು ಮನಸ್ಸಿಗೆ ಬಂದ ಹಾಗೆ ಟ್ಯಾಕ್ಸ್ ಹಾಕಿರುವುದು ಕಂಡುಬರುತ್ತದೆ.

ರೇಜರ್ ಮತ್ತು ಬ್ಲೇಡ್ಸ್ ಇವು ಪ್ರತಿದಿವಸ ಎಲ್ಲರಿಗೂ ಬೇಕಾಗುವ ಪದಾರ್ಥಗಳಾಗಿವೆ. ಇವು ಲಗ್ಸುರಿ ಆರ್ಟಿಕಲ್ಸ್ ಅಲ್ಲ. ಬಡವ ಇರಲಿ ಶ್ರೀಮಂತನಿರಲಿ ಪ್ರತಿಯೊಬ್ಬರಿಗೂ ಬೇಕಾಗುವ ಪದಾರ್ಥಗಳ ಮೇಲೆ ಟ್ಯಾಕ್ಸ್ ಹಾಕಿರುವುದು ಸರಿಯಲ್ಲ. ಇನ್ನು ಕ್ರೋಕರಿ ಮತ್ತು ಕಟ್ಲರಿ ಮೇಲೆ ಮೂರು ಪರ್ಸೆಂಟ್ ಇದ್ದುದನ್ನು ಎಂಟು ಪರ್ಸೆಂಟ್ ಮಾಡಲಾಗಿದೆ. ಬಡವರಿಗೆ ಬೇಕಾಗುವ ಒಂದು ಚಿಮಣಿ ಎಣ್ಣೆಯ ದೀಪ ಕೂಡ ಕಟ್ಲರಿ ಗುಡ್ಸ್ ಆಗುತ್ತದೆ ಎಂದು ಸೇಲ್ಸ್ ಟ್ಯಾಕ್ಸ್ ಆಫೀಸರು ಇಂಟರ್‌ಪ್ರಿಟೇಷನ್ ಮಾಡಬಹುದು. ಇದರಿಂದ ಬಡವರನ್ನು ಗೋಳು ಹೊಯಿಸುತ್ತೀರಿ, ಇದು ಸರಿಯಲ್ಲ ಎಂದು ಹೇಳುತ್ತೇನೆ. ಲಕ್ಷಗಟ್ಟಲೆ ಮೋಸ ಮಾಡಿದವರಿಗೆ ಜಪ್ತಿ ವಾರಂಟ್ ಕಳಿಸುವುದಿಲ್ಲ. ಭೂತಲಿಂಗಂ ಸಮಿತಿಯ ಪ್ರಶ್ನಾವಳಿಗೆ ಬೇರೆ ಡೀಲರ್ ಹೆಸರಿನಲ್ಲಿ ಉತ್ತರ ಕಳಿಸಿದ್ದೇನೆ. ಅಸೆಸ್ಮೆಂಟ್ ಮಾಡಿದಮೇಲೆ 21 ದಿವಸ ಅವಧಿ ಕೊಡುತ್ತಾರೆ. ಇಷ್ಟು ಕಡಿಮೆ ಕಾಲಾವಕಾಶ ಇರುವುದರಿಂದ ಬಹಳ ಪೀಡೆಯಾಗುತ್ತದೆ. ಇದು ಬಹಳ ಅನ್ಯಾಯ. ಈ ರೀತಿ ಇರುವುದರಿಂದ ಟ್ಯಾಕ್ಸ್ ಇವೇಜನ್ ಬಹಳ ಆಗುತ್ತಿದೆ. ಡೀಲರುಗಳು ಅಸೆಸಿಂಗ್

ಅಥಾರಿಟಿ ಸಂಪರ್ಕ ಬೆಳೆಸಿ ಅಲ್ಲಿಯದು ಅಲ್ಲಲ್ಲಿಯೇ ಕಾಂಪೌಂಡಿಂಗ್ ಮಾಡುತ್ತಾರೆ. ಸೇಲ್ಸ್ ಟ್ಯಾಕ್ಸ್ ಡಿಪಾರ್ಟ್‌ಮೆಂಟಿನಲ್ಲಿ ಎಲ್ಲ ಅಧಿಕಾರಿಗಳೂ ಕೆಟ್ಟವರಲ್ಲ. ಕೆಲವು ಅಧಿಕಾರಿಗಳು ಒಳ್ಳೆಯವರು ಇದ್ದಾರೆ. ನಲ್ವತ್ತುಸಾವಿರ ಟ್ಯಾಕ್ಸ್ ಕೊಡುವುದು ಎಂದು ಇದ್ದರೆ ನಿನಗರ್ಧ ನನಗರ್ಧ ಎಂದು ಹಂಚಿಕೊಂಡುಬಿಟ್ಟು ಪಾಲು ಮಾಡಿಕೊಳ್ಳುತ್ತಾರೆ ಮತ್ತು ಕೇವಲ ಹತ್ತುಸಾವಿರ ಟ್ಯಾಕ್ಸ್ ಎಂದು ತೀರ್ಮಾನ ಮಾಡುತ್ತಾರೆ. ಇದನ್ನು ತಡೆಗಟ್ಟುವುದು ಹೇಗೆ ಎಂದು ಯೋಚನೆ ಮಾಡಿಲ್ಲ. ಇಂಟರ್ನಲ್ ಆಡಿಟ್ ಎಂದು ಹೊಸದಾಗಿ ತಂದಿದ್ದೀರಿ. ಈ ಇಂಟರ್ನಲ್ ಆಡಿಟ್ ಕಂಟ್ರೋಲ್ ಅಧಿಕಾರವನ್ನು ಸಣ್ಣ ಗ್ರೇಡ್ ಅಧಿಕಾರಿಗೆ ಕೊಡದೆ ಅದನ್ನು ಅಸಿಸ್ಟೆಂಟ್ ಕಮೀಷನರ್, ಡೆಪ್ಯುಟಿ ಕಮೀಷನರ್ ಅವರಿಗೆ ಇದ್ದರೆ ಭಯ ಇರುತ್ತದೆ. ಇನ್‌ಸ್ಪೆಕ್ಟ್ ಮಾಡುವವರು ಹೈಯರ್ ಗ್ರೇಡ್‌ನವರು ಇರಬೇಕು. ಇಲ್ಲದಿದ್ದರೆ ಸರಕಾರಕ್ಕೆ ನ್ಯಾಯ ಸಿಕ್ಕುವುದಿಲ್ಲ. ಇಷ್ಟೇ ಅಲ್ಲದೆ ಸರ್ಪ್ರೈಜ್ ವಿಜಿಟ್ ಕೊಟ್ಟು ಇನ್‌ಸ್ಪೆಕ್ಟ್ ಮಾಡಲು ನಾಲ್ಕು ಡೆಪ್ಯೂಟಿ ಕಮಿಷನರ್ಸ್ ನಮ್ಮ ರಾಜ್ಯದಲ್ಲಿ ಇರಬೇಕು. ಇವರು ಎಲ್ಲಿಗೆ ಯಾವ ಇನ್‌ಸ್ಪೆಕ್ಟ್ ಮಾಡಲು ಹೋಗುತ್ತಾರೆ ಎನ್ನುವುದು ಬೇರೆಯವರಿಗೆ ಗೊತ್ತಾಗಬಾರದು. ಈ ರೀತಿ ಒಂದು ಯೋಜನೆ ಮಾಡಿದರೆ, ಒಂದು ವರ್ಷದಲ್ಲಿ ಎರಡು ಕೋಟಿ ರೂಪಾಯಿ ಟ್ಯಾಕ್ಸ್ ಇವೇಜನ್ ಮಾಡುವುದು ನಿಂತುಹೋಗುತ್ತದೆ ಎಂದು ಹೇಳಿ ನನ್ನ ಭಾಷಣ ಮುಗಿಸುತ್ತೇನೆ.

† ಶ್ರೀ ಎಂ. ನಾಗಪ್ಪ (ರಾಯಚೂರು).—ಸನ್ಮಾನ್ಯ ಅಧ್ಯಕ್ಷರೇ, ಮಾರಾಟ ತೆರಿಗೆ ಬಗ್ಗೆ ತಂದಿರುವ ತಿದ್ದುಪಡಿ ಮಸೂದೆಯನ್ನು ನಾನು ವಿರೋಧಿಸುತ್ತೇನೆ. ಈ ಮಸೂದೆಯನ್ನು ಮಂಡಿಸುತ್ತಾ ಮಾತನಾಡುವಾಗ ಮಾನ್ಯ ಮಂತ್ರಿಗಳು ಹೇಳಿಕೆ ಕೊಟ್ಟಂತೆ ಭೂತಲಿಂಗಂ ಕಮಿಟಿ ಕೊಟ್ಟಂಥ ವರದಿಯನ್ನು ಪರಿಶೀಲಿಸಿದನಂತರ ಕೆಲವು ತಿದ್ದುಪಡಿಗಳನ್ನು ಮಾಡಬೇಕಾಗುವುದು ಎಂದು ಅಭಿಪ್ರಾಯಪಟ್ಟು ಈ ತಿದ್ದುಪಡಿ ಮಸೂದೆ ತರಲಾಗಿದೆ ಎಂದು ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ಸ್ ಅಂಡ್ ರೀಜನ್ಸ್‌ನಲ್ಲಿ ಹೇಳಿದ್ದಾರೆ. ಭೂತಲಿಂಗಂ ಕಮಿಟಿ ವರದಿಯಲ್ಲಿಯ ಎರಡು ಮುಖ್ಯವಾದ ಅಂಶಗಳನ್ನು ಈ ತಿದ್ದುಪಡಿ ಮಸೂದೆಯಲ್ಲಿ ಗಣನೆಗೆ ತೆಗೆದುಕೊಂಡಿದ್ದಾರೆ. ಅಡ್ಮಿನಿಸ್ಟ್ರೇಷನ್ ಡಿಫಿಕಲ್ಟೀಸ್ ಸಾಧ್ಯವಾದಷ್ಟು ಕಡಿಮೆಯಾಗಬೇಕು ಮತ್ತು ಸರ್ಕಾರಕ್ಕೆ ಟ್ಯಾಕ್ಸ್ ಹೆಚ್ಚು ಬರಬೇಕು ಈ ಒಂದು ಉದ್ದೇಶ ಇದರಲ್ಲಿ ಇದೆ. ಎರಡನೆಯದಾಗಿ ಟ್ಯಾಕ್ಸ್ ಇವೇಜನ್ ತಡೆಗಟ್ಟಬೇಕು ಎಂದು ಇರತಕ್ಕ ಈ ಎರಡು ಮುಖ್ಯವಾದ ಅಂಶಗಳನ್ನು ಸರಕಾರ ತೆಗೆದುಕೊಂಡು ಈ ತಿದ್ದುಪಡಿ ಮಸೂದೆಯನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಆದರೆ ನನಗೆ ಬಹಳ ದುಃಖವಾಗುತ್ತದೆ. ನಾನು ಒಂದು ವಿಷಯ ಹೇಳಬೇಕಾದರೆ ಭೂತಲಿಂಗಂ ಸಮಿತಿಯನ್ನು ನೇಮಕ ಮಾಡಿದ್ದು ಜನರಮೇಲೆ ಹೆಚ್ಚಿನ ಕಾರಭಾರವನ್ನು ಹಾಕಬೇಕೆಂತಲೋ, ಹೆಚ್ಚು ಜನರಮೇಲೆ ಕರಭಾರವನ್ನು ಹಾಕಬೇಕು ಎಂತಲೋ, ಈ ವಿಚಾರದಲ್ಲಿ ಸರ್ಕಾರದವರ ಉದ್ದೇಶವೇನಿತ್ತು ಎಂಬುದನ್ನು ತಿಳಿಯುವುದಕ್ಕಾಗಿ ಆ ಸಮಿತಿಯ ನೇಮಕದ ಟರಂಸ್ ಅಂಡ್ ರೆಫರೆನ್ಸ್ ನೋಡಿದರೆ ಸರ್ಕಾರಕ್ಕೆ ಒಪ್ಪಿಗೆಯಾಗತಕ್ಕಂಥ ಕೆಲವು ಸಲಹೆಗಳೇನಿವೆ ಎಂಬುದನ್ನು ನೋಡಿಕೊಂಡು, ಯಾವುದೋ ಒಂದೆರಡು ವಸ್ತುಗಳ ಮೇಲೆ ಹಾಕಿರತಕ್ಕ ತೆರಿಗೆಯ ಭಾರವನ್ನು ತಗ್ಗಿಸತಕ್ಕ ನೆಪವನ್ನು ಮಾಡಿಕೊಂಡು ಈ ದಿವಸ ಸರ್ಕಾರದವರು ಅನೇಕ ದಿನಬಳಕೆಯ ವಸ್ತುಗಳ ಮೇಲೆ ಒಂದು ಹೆಚ್ಚಿನ ತೆರಿಗೆಯನ್ನು ಜನರಮೇಲೆ ಹಾಕಬೇಕೆಂಬ ಉದ್ದೇಶದಿಂದಲೇ ಈ ಮಸೂದೆಯನ್ನು ತಂದಿದ್ದಾರೆಂಬುದಾಗಿ ನನಗೆ ಕಂಡುಬರುತ್ತಿದೆ.

ಈಗ ಮಸೂದೆಯಲ್ಲಿ ಎರಡನೇ ಷೆಡ್ಯೂಲನಲ್ಲಿ ತೆರಿಗೆ ವಿಧಿಸತಕ್ಕ ವಸ್ತುಗಳನ್ನು ಹೇಳಿದ್ದಾರೆ, ಮೊದಲು ಇದ್ದುದ ಒಟ್ಟು ವಸ್ತುಗಳ ಸಂಖ್ಯೆ 83 ಮಾತ್ರ. ಈ ದಿವಸ ಆ ವಸ್ತುಗಳ ಸಂಖ್ಯೆ 116 ಕ್ಕೇರಿದೆ. ಈ ಹೊಸ ತಿದ್ದುಪಡಿ ಮಸೂದೆಯ ಪ್ರಕಾರ ಹೊಸದಾಗಿ 33 ಪದಾರ್ಥಗಳ ಮೇಲೆ ತೆರಿಗೆಯನ್ನು ಹಾಕುವುದಕ್ಕೆ ಸರ್ಕಾರದವರು ಉದ್ದೇಶಪಟ್ಟಿದ್ದಾರೆಂಬುದನ್ನು ನಾವು ಇಲ್ಲಿ ಮನಗಾಣಬಹುದು. ಆದರೆ ಈ ತಿದ್ದುಪಡಿ ಮಸೂದೆಯಲ್ಲಿ ಒಂದು ಹೆಚ್ಚಿನ ವಿಶೇಷವೇನೆಂದರೆ—ಕೆಲವು ವಸ್ತುಗಳ ಮೇಲೆ ಹಾಕಿರತಕ್ಕ ತೆರಿಗೆಯ ದರವನ್ನು ತಗ್ಗಿಸುತ್ತೇವೆಂಬ ನೆಪವನ್ನು ತೋರಿಸುತ್ತ ಕೆಲವು ವಸ್ತುಗಳಿಗೆ ಅರ್ಧ ಪರ್ಸೆಂಟ್, ಇನ್ನು ಕೆಲವು ವಸ್ತುಗಳಿಗೆ ಒಂದೂವರೆ ಪರ್ಸೆಂಟ್ ಮತ್ತು ಕೆಲವು ವಸ್ತುಗಳಿಗೆ ಮೂರು ಪರ್ಸೆಂಟ್ ತೆರಿಗೆಯನ್ನು ತಗ್ಗಿಸಿದ್ದಾರೆ. ಹೀಗೆ ತೆರಿಗೆಯನ್ನು ತಗ್ಗಿಸಿರತಕ್ಕ ಒಟ್ಟು ವಸ್ತುಗಳ ಸಂಖ್ಯೆ ಹನ್ನೊಂದು ಮಾತ್ರ. ಇವರು ಬಹಳ ತಗ್ಗಿಸಿರತಕ್ಕಂಥ ವಸ್ತುಗಳೆಂದರೆ ಅಡಕೆ, ಮೆಣಸು, ಗೋಡಂಬಿ ಇತ್ಯಾದಿ ವಸ್ತುಗಳು. ಈ ಮಸೂದೆಯಲ್ಲಿ ನಾವು ಕಾಣಬಹುದಾದ ಇನ್ನೊಂದು ಅಂಶವೇನೆಂದರೆ ಸರ್ಕಾರದವರು ಇಲ್ಲಿ ತಮ್ಮನ್ನು ತಾವೇ ಹೊಗಳಿಕೊಂಡಿದ್ದಾರೆ. ಅದು ಏತಕ್ಕೆಂದರೆ ಅವರು ಇಲ್ಲಿಯವರೆಗೂ ವರ್ಷಕ್ಕೆ 10 ಸಾವಿರ ಟರ್ನೋವರ್ ಇದ್ದವರಿಗೆಲ್ಲಾ ಟ್ಯಾಕ್ಸನ್ನು ಹಾಕುತ್ತಿದ್ದರು. ಈಗ ಆ ಸ್ಲಾಬನ್ನು 25 ಸಾವಿರಕ್ಕೆ ಏರಿಸಿರುವುದರಿಂದ ಅಲ್ಲಿ

(ಶ್ರೀ ಎಂ. ನಾಗಪ್ಪ)

ಬಹಳ ಜನ ವರ್ತಕರಿಗೆ ವಿನಾಯಿತಿ ಕೊಟ್ಟಹಾಗೆ ಆಯಿತು ಎಂಬುದು ಅವರ ಭಾವನೆ. ಆದರೆ ಅಲ್ಲಿ ತೆರಿಗೆ ಕೊಡತಕ್ಕ ವರ್ತಕರ ಸಂಖ್ಯೆ ಎಷ್ಟು ಕಡಮೆ ಆಯಿತೋ ಅದಕ್ಕೆ ಅಧಿಕ ಪ್ರಮಾಣದಲ್ಲಿ ಕೊಳ್ಳತಕ್ಕವರ ಮೇಲೆ ಆ ತೆರಿಗೆಯನ್ನು ಹಾಕಿದ್ದಾರೆ. ಮೊದಲು ತೆರಿಗೆ ವಸೂಲಿಯ ಬಗ್ಗೆ ಮೂರು ಸ್ಲಾಬ್‌ಗಳನ್ನಾಗಿ ವಿಂಗಡಿಸಿಕೊಂಡಿದ್ದರು. ಅದರಲ್ಲಿ ಮೊದಲನೆಯದು 10 ಸಾವಿರದಿಂದ 15 ಸಾವಿರದವರೆಗೆ—ಎರಡನೆಯದು 15 ಸಾವಿರದಿಂದ 20 ಸಾವಿರ ಮತ್ತು ಮೂರನೆಯದು 20 ಸಾವಿರದಿಂದ 25 ಸಾವಿರ. ಆದರೆ ಈಗಿನ ತಿದ್ದುಪಡಿಯ ಮಸೂದೆಯ ಪ್ರಕಾರ ಎರಡೇ ಸ್ಲಾಬ್‌ಗಳಿರುತ್ತವೆ. ಒಂದು 25 ಸಾವಿರದಿಂದ 50 ಸಾವಿರ, ಇನ್ನೊಂದು 50 ಸಾವಿರದಿಂದ 75 ಸಾವಿರ ಮೊದಲನೆಯ ಸ್ಲಾಬಿನಲ್ಲಿ ಯಾರಾದರೂ ತಪ್ಪನ್ನು ಮಾಡಿದರೆ ಅವರಿಗೆ 600 ರೂಪಾಯಿ ಕಾಂಪೌಂಡಿಂಗ್ ಅಂದರೆ ದಂಡ ಕೊಡಬೇಕೆಂದೂ ಎರಡನೇ ಸ್ಲಾಬಿನಲ್ಲಿ ತಪ್ಪನ್ನು ಮಾಡಿದವರು 12 ನೂರು ರೂಪಾಯಿ ದಂಡ ಕೊಡಬೇಕೆಂದು ಒಂದು ಕಾಯಿದೆ ಮಾಡಿದ್ದಾರೆ. ಆದರೆ ಈ ದಿವಸ ಈ ಮಸೂದೆಯನ್ನು ರಾಜ್ಯದ ಬೊಕ್ಕಸವನ್ನು ತುಂಬಿಸತಕ್ಕ ಉದ್ದೇಶದಿಂದಲೇ ತಂದಿದೆಯೋ ಅಥವಾ ಒಂದು ವಾಸ್ತವಿಕ ದೃಷ್ಟಿಯಿಂದ ಈ ತಿದ್ದುಪಡಿ ಮಸೂದೆಯನ್ನು ತಂದಿದೆಯೋ ಎಂಬುದನ್ನು ನಾವೀಗ ವಿಚಾರಮಾಡಬೇಕಾಗಿದೆ. ನಾವು ಈ ತಿದ್ದುಪಡಿ ಮಸೂದೆಯನ್ನು ಈ ಎರಡು ದೃಷ್ಟಿಗಳಿಂದ ನೋಡುವುದಾದರೆ ಇಲ್ಲಿಯವರೆಗೂ ಈ ಸಣ್ಣ ಸಣ್ಣ ವರ್ತಕರೇನಿದ್ದರು ಅವರಿಗೆ ತೆರಿಗೆ ವಸೂಲಿ ಅಧಿಕಾರಿಗಳಿಂದ ಬಹಳ ಕಿರುಕುಳವಾಗುತ್ತ ಇತ್ತು, ಅದು ಇನ್ನು ಮುಂದಕ್ಕೆ ಇರುವುದಿಲ್ಲ ಎನ್ನುವುದು ಒಂದನೇ ವಿಷಯ. ಇನ್ನೊಂದು ದೃಷ್ಟಿಯಲ್ಲಿ ಇದನ್ನು ನೋಡಿದಾಗ ಇದರಿಂದ ಸಾಮಾನ್ಯ ಜನತೆಯಮೇಲೆ ತೆರಿಗೆ ಭಾರ ಜಾಸ್ತಿ ಆಯಿತು ಎನ್ನುವುದು ಎರಡನೇ ವಿಷಯ. ಆದರೆ ಕೊಳ್ಳತಕ್ಕವರ ಸಂಖ್ಯೆ ಲಕ್ಷಾವಧಿಯಲ್ಲಿದ್ದರೆ ಅಸೆಸಿಗಳ ಸಂಖ್ಯೆ ಅದು ತೀರಾ ನೆಗ್ಲಿಜಿಬಲ್; ಅಂದರೆ 25 ಸಾವಿರದ ಕೆಳಗೆ ಬರುತ್ತಿದ್ದ ಅಸೆಸಿಗಳ ಸಂಖ್ಯೆ ಬಹಳ ವಿರಳವಾಗಿತ್ತು. ಆದ್ದರಿಂದ ತೆರಿಗೆ ರಿಯಾಯಿತಿಗಿಂತ ಮೂರರಷ್ಟು ಹೆಚ್ಚಿನ ತೆರಿಗೆ ಈ ಕೊಳ್ಳತಕ್ಕವರಿಂದ ಬರುತ್ತದೆ. ಆದರೆ ನಮ್ಮ ಸರ್ಕಾರಕ್ಕೆ ಮೋಟಾರ್ ವಾಹನಗಳ ಬಗ್ಗೆ ಬಹಳ ಕನಿಕರವಿದ್ದಹಾಗೆ ಕಾಣುತ್ತಿದೆ. ಏಕೆಂದರೆ ಅವರಿಗೆ ಹಾಕಿದ್ದ ಹಿಂದಿನ ತೆರಿಗೆಯನ್ನು ಪುನರ್ವಿಮರ್ಶೆಮಾಡಿ ಅವರ ತೆರಿಗೆಯನ್ನು ಹೆಚ್ಚಿಸಿರತಕ್ಕುದ್ದನ್ನ ನೋಡಿದರೆ ಅದು ಕೇವಲ ಒಂದು ಪರ್ಸೆಂಟ್ ಮಾತ್ರ. 11 ಪರ್ಸೆಂಟ್ ಇದ್ದುದನ್ನು 12 ಪರ್ಸೆಂಟಿಗೆ ಹೆಚ್ಚಿಸಿದ್ದಾರೆ. ಅದನ್ನು ಬಿಟ್ಟರೆ ಇನ್ನು ನಿತ್ಯವೂ ಕೂಲಿ ಮಾಡತಕ್ಕ ಜನರಿಂದ ಹಿಡಿದು ಮಧ್ಯಮವರ್ಗದ ಜನಗಳವರೆಗೂ ಹಾಕಿದ್ದ ತೆರಿಗೆಯ ವಿಚಾರದಲ್ಲಿ ಏನು ಮಾಡಿದ್ದಾರೆಂದರೆ ಇವರು ದೊಡ್ಡವರಿಗೆ ಕೊಡತಕ್ಕ ಸೌಲತ್ತಿನಲ್ಲಿ ಏನು ಕಳೆದುಹೋಗಿತ್ತೋ ಅದಕ್ಕೆ ಎರಡರಷ್ಟನ್ನು ಜನಸಾಮಾನ್ಯರಿಂದ ಪಡೆಯುವುದಕ್ಕೆ ಇದರಲ್ಲಿ ಪ್ರಯತ್ನಮಾಡಿದ್ದಾರೆ. ಆದ್ದರಿಂದ ಈ ತಿದ್ದುಪಡಿಮಸೂದೆ ಸಾಮಾನ್ಯ ಜನತೆಯ ಅನುಕೂಲಕ್ಕಾಗಿ ತಂದುದಲ್ಲ. ಆದರೆ ಈ ಕೆಲಸ ಸರ್ಕಾರಕ್ಕೆ ಸಲ್ಲದು. ಬಾಯಲ್ಲಿ ಸರ್ಕಾರದವರು ಸೋಷಿಯಲಿಜಂ ಬೇಕೆಂದು ಹೇಳುತ್ತಿದ್ದಾರೆ. ಕಾರ್ಯದಲ್ಲಿ ವ್ಯತಿರಿಕ್ತವಾಗಿ ಮಾಡುತ್ತಿದ್ದಾರೆ.

ಇನ್ನು ಎರಡನೆಯದಾಗಿ ಈ ಬಿಲ್ಲಿನಲ್ಲಿ ಕೆಲವು ಲೋಪದೋಷಗಳಿವೆ. ಬಿಲ್ಲಿನಲ್ಲಿ ಒಂದು ಸ್ಟೇಟ್ ರೆಪ್ರಸೆಂಟೆಟಿವ್ ಎಂಬ ಪದವನ್ನು ಒಳಗೊಂಡ ತಿದ್ದುಪಡಿಯನ್ನು ಸೇರಿಸಿದ್ದಾರೆ. ಅವರನ್ನು ಆ ಡಿಫೆನ್ಸಿನಲ್ಲಿ ರಾಜ್ಯ ಸರ್ಕಾರದವರು ನೇಮಕ ಮಾಡಬೇಕೆಂದು ಹೇಳಿದ್ದಾರೆ. ಆ ಪದ ಸ್ಟೇಟ್ ರೆಪ್ರೆಸೆಂಟೆಟೀವ್ ಎಂಬುದಾಗಿದ್ದರೂ ಅದರ ಅರ್ಥ ಲಾಯರ್ ಕೆಲಸಬಂದು.

"In proceedings before the Appellate Tribunal, the State Representative shall be competent--

(i) to prepare and sign applications, appeals and other documents,

(ii) to appear, represent, act and plead,

(iii) to receive notices and other processes, and

(iv) to do all other acts connected with such proceedings, on behalf of the State Government or any officer appointed under this Act."

ಆದರೆ ಈ ಅಧಿಕಾರಿಗಳನ್ನು ನೇಮಕ ಮಾಡತಕ್ಕ ಬಗ್ಗೆ ಅವರಿಗೇನು ವಿದ್ಯಾರ್ಹತೆ ಇರಬೇಕೆಂಬುದನ್ನು ಹೇಳಿಲ್ಲ. ಅಂದರೆ ಸರ್ಕಾರದವರು ಅವರಿಗೆ ಬೇಕಾದವರನ್ನು ನೇಮಕ ಮಾಡಬಹುದೆಂದು ಹೇಳಿದಹಾಗಾಯಿತು. ಇನ್ನು ಅದೇ ಸಂದರ್ಭದಲ್ಲಿ ಅದರ್ ಡಾಕ್ಯುಮೆಂಟ್ಸ್ ಎಂತ ಬೇರೆ ಹೇಳಿದ್ದಾರೆ. ಇದು ಏನುಬೇಕಾದರೂ ಆಗಬಹುದು. ಆದ್ದರಿಂದ ಸರ್ಕಾರದವರು ಇದರ ಬಗ್ಗೆ ಪುನರಾಲೋಚನೆ ಮಾಡತಕ್ಕದ್ದು ಅಗತ್ಯವೆಂದು ಹೇಳುತ್ತೇನೆ.

ಇನ್ನು ಕ್ಲಾಜ್ (ಒ) ಒಂದರಲ್ಲಿ ಮಿಲ್ಲರುಗಳ ಡೆಫಿನಿಷನ್ ಕೊಟ್ಟಿದ್ದಾರೆ. ಅದರಲ್ಲಿ ಒಂದು ರೈಸ್ ಮಿಲ್, ಎರಡನೆಯದು ಗ್ರೌಂಡ್‌ನಟ್ ಆಯಿಲ್ ಮಾಡುವುದು ಮತ್ತು ಮೂರನೆದು ಗ್ರೌಂಡ್‌ನಟ್ ಬೀಜವನ್ನು ಬಡಿಸುವುದು ಎಂದಿದೆ. ಇದರ ಜೊತೆಗೆ ಡೀಲರ್ ಎಂಬ ಶಬ್ದವನ್ನು ಬೇರೆ ಉಪಯೋಗ ಮಾಡುತ್ತಿದ್ದೇವೆ. ಡೀಲರ್ ಎಂಬ ಶಬ್ದದ ಬಗ್ಗೆ ಕ್ಲಾಜ್ (6) ಸೆಕ್ಷನ್ (10)ರ ಸಬ್ ಸೆಕ್ಷನ್ನಿನಲ್ಲಿ ಹೀಗೆ ಹೇಳಿದ್ದಾರೆ :—

" 'milier' means a person who engages himself in rice milling operations in a rice mill or in causing operations in an oil mill or in dehusking in a decorticating factory, and includes a person who, or the authority which, has the ultimate control over the affairs of such mill or decorticating factory and when the said affairs are entrusted to a manager, managing director or managing agent, such manager, managing director or managing agent."

ಇಲ್ಲಿ ಮಿಲ್ಲರ್ ಎಂಬ ಶಬ್ದ ಡೀಲರ್ ಎಂಬ ಶಬ್ದವನ್ನೂ ಒಳಗೊಳ್ಳುತ್ತದೆಂದು ಹೇಳಿದಂತಾಗುತ್ತದೆ ಇದರಿಂದ ಬಹಳ ತೊಂದರೆಯಾಗುತ್ತದೆ.

ಡೀಲರ್ ಅನ್ನುವ ಶಬ್ದದಲ್ಲಿ ಮಿಲ್ಲರ್ ಅನ್ನುವುದು ಬರುತ್ತದೆ ಎಂದು ಹೇಳುತ್ತೀರಿ. ಆದರೆ ಅದು ಬರುವುದಿಲ್ಲ ಎಂಬುದು ನನ್ನ ಅಭಿಪ್ರಾಯ. ಕಾಟನ್, ಜೂಟ್, ಯಾರ್ನ್, ಫ್ಲೋರ್ ಹೀಗೆ ಅನೇಕ ತರಹ ಮಿಲ್ಲುಗಳು ಇವೆ. ಆ ಮಿಲ್ಲುಗಳ ಬಗ್ಗೆ ಏನು ಅಭಿಪ್ರಾಯ ತಾಳುತ್ತೀರಾ? ಡೀಲರ್ ಅನ್ನತಕ್ಕಂಥಾದ್ದು ಬಹಳ ವಿಶಾಲವಾಗಿದೆ. ಪ್ರತಿಯೊಬ್ಬ ಮಿಲ್ಲರ್ ಇದರಲ್ಲಿ ಬರುತ್ತಾನೆಯೇ, ಸೇರುತ್ತಾನೆಯೇ ಎಂಬುದನ್ನು ಡೀಲರ್ ಅನ್ನುವ ಡೆಫನಿಷನ್‌ನಲ್ಲಿ ನೋಡಬೇಕು. ಡೀಲರ್ ಡೆಫನಿಷನ್ ಈ ರೀತಿ ಇದೆ:—

"Dealer means any person who carries on the business of buying, selling, supplying or distributing goods, directly or otherwise, whether for cash or for deferred payment, or for commission, remuneration or other valuable consideration."

ಖರೀದಿ ಮಾಡುವವನಾಗಲಿ, ಮಾರಾಟ ಮಾಡುವವನಾಗಲಿ ಅಥವಾ ಮಾಲ್ ಡಿಸ್ಟ್ರಿಬ್ಯೂಟ್ ಮಾಡುವವನಾಗಲಿ ಮಿಲ್ಲರ್ ಡೆಫನೆಷನ್‌ನಲ್ಲಿ ಬರುತ್ತಾ ಇಲ್ಲ. ಹೀಗಾದರೆ ಮಿಲ್ಲರ್‌ಗೆ ಡೆಫನಿಷನ್ ಅನ್ನತಕ್ಕಂಥ ಶಬ್ದದ ಔಚಿತ್ಯ ಏನು ಇದೆ? ಸೆಕ್ಷನ್ 10ಕ್ಕೆ ಸೇರಿಸಿ ಪುನಃ ಸೆಕ್ಷನ್ 12 ರಲ್ಲಿ ಅದನ್ನು ಒಮಿಟ್ ಮಾಡುವ ಔಚಿತ್ಯ ಏನು ಇದೆ?

ಈ ಬಿಲ್ಲಿನ ಕ್ಲಾಸ್ 8 (ii)ರಲ್ಲಿ ಹೀಗೆ ಹೇಳುತ್ತೀರಿ :

" for the words 'every registered dealer', the words, brackets and figures ' every dealer who is liable to get himself registered under sub-section (2) of section 10'," shall be substituted ಅಮೇಲೆ ಪುನಃ ಈ ಬಿಲ್ಲಿನ Clause 7(4) (b) ನಲ್ಲಿ ಈ ರೀತಿ ಹೇಳುತ್ತೀರಿ—

"The amount of security payable under Clause (*a*) shall not exceed,—

(i) In the case of dealers who have opted to pay tax under Section 17, an amount equivalent to three months' compounded rate fixed for that year, and

(ಶ್ರೀ ಎಂ. ನಾಗಪ್ಪ)

(ii) in other cases, an amount equivalent to one-half of the tax anticipated to be payable by the dealer for that year:

Provided that the assessing authority shall have power to demand at any time additional security if such authority has reason to believe that the security fixed was too low.

ಸೆಕ್ಷನ್ 10ರಲ್ಲಿ ಸಬ್ ಕ್ಲಾಸ್ (3)ನ್ನು ಈ ಬಿಲ್ಲಿನಲ್ಲಿ ಬಿಟ್ಟಿದ್ದೀರಿ. ಅದಕ್ಕೆ ನಾನು ಈಗ ಹೇಳುವುದು ಈ ಬಿಲ್ಲಿನಲ್ಲಿ ಸಬ್ ಕ್ಲಾಸ್ (ii)ಕ್ಕೆ ಅಮೆಂಡ್‌ಮೆಂಟ್‌ಗೆ ಕಳುಹಿಸಿದ್ದೇನೆ. ಈ ಪಾಯಿಂಟ್‌ನ್ನು ಮನದಟ್ಟು ಮಾಡುವುದಕ್ಕೆ ಸೆಕ್ಷನ್ನು 10ನ್ನು ಓದುತ್ತೇನೆ. ಅದು ಹೀಗೆ ಇದೆ—

10. *Registration of dealers, commission agents, etc.*—

(1) Every dealer whose total turnover in any year is not less than ten thousand rupees shall and any other dealer may, get himself registered under this Act.

(2) Notwithstanding anything contained in sub-section (1).—

(i) every casual trader dealing in goods mentioned in the Third Schedule or the Fourth Schedule;

(ii) every dealer registered under the Central Sales Tax Act, 1956 (Central Act 74 of 1956),

(iii) every dealer residing outside the State but carrying on business in the State;

(iv) every manager or agent of a non-resident dealer; and

(v) every commission agent, broker, dealer agent, auctioner or any other mercantile agent, by whatever name called, who carries on the business of buying, selling, supplying or distributing goods on behalf of any principal,

shall get himself registered under this Act, irrespective of the quantum of his total turnover in such goods. ಇಲ್ಲಿಯಾದರೂ ಮಿಲ್ಲರ್ ಎನ್ನುವುದನ್ನು ಸೇರಿಸಿದ್ದೀರಾ? ಆದುದರಿಂದ ಸಬ್‌ಕ್ಲಾಸ್ (ii) ಅನವಶ್ಯಕ ಅದರಿಂದ ಏನೂ ಅರ್ಥ ಬರುವುದಿಲ್ಲ. ಆದುದರಿಂದ ಈ ಬಿಲ್ಲಿನ ಕ್ಲಾಸ್ 8 (ii) ರಲ್ಲಿ ಸಬ್ ಸೆಕ್ಷನ್ (2) ಆದಮೇಲೆ ಸಬ್ ಸೆಕ್ಷನ್ (3) ಸೇರಿಸಿ.

ಇನ್ನು ರಿಜಿಸ್ಟ್ರೇಷನ್ ಬಗ್ಗೆ ಒಂದು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಇದರಲ್ಲಿ ರಿಜಿಸ್ಟ್ರೇಷನ್ ಫೀಸ್ 6 ರೂಪಾಯಿ ಇದ್ದುದನ್ನು 25 ರೂಪಾಯಿಯವರೆಗೆ ಏರಿಸಿದ್ದೀರಿ. ಅದನ್ನು ತಾವು ಸ್ವಲ್ಪ ಗಮನಿಸಬೇಕು. ಟ್ಯಾಕ್ಸ್ ಲಯಬಿಲಿಟಿಯನ್ನು 10 ಸಾವಿರ ರೂಪಾಯಿ ಲಿಮಿಟ್ ಇದ್ದುದನ್ನು 25 ಸಾವಿರ ರೂಪಾಯಿಯವರೆಗೆ ಏರಿಸಿದ್ದೀರಿ. ವಾಸ್ತವಿಕವಾಗಿ ನೋಡಿದರೆ ಇದರಿಂದ ಪ್ರಯೋಜನ ಏನೂ ಆಗುವುದಿಲ್ಲ. ನೀವು 10 ಸಾವಿರ ರೂಪಾಯಿ ಇಟ್ಟುಕೊಂಡು ಸೇಲ್ಸ್ ಟ್ಯಾಕ್ಸ್ ವಸೂಲ್ಮಾಡಿದ್ದರೂ ಕೂಡ ಅದರಿಂದ ಏನೂ ಜಾಸ್ತಿ ರಾಜ್ಯದ ಬೊಕ್ಕಸಕ್ಕೆ ಬರುವುದಿಲ್ಲ. ರಿಜಿಸ್ಟ್ರೇಷನ್ ಫೀಸ್ ಬೇರೆ 25 ರೂಪಾಯಿ ಜಾಸ್ತಿ ಮಾಡುತ್ತೀರಾ? ಆದರೆ ಈ

ಹಣವೆಲ್ಲಾ ಸರ್ಕಾರಕ್ಕೆ ಬರದೆ ಆಫೀಸರ ಸ್ವಂತ ಜೇಬಿಗೆ ಹೋಗುತ್ತದೆ. ತಾವು ಇದನ್ನು ಮರೆಯಬಾರದು. 10 ಸಾವಿರದಿಂದ 25 ಸಾವಿರದವರೆಗೆ ಸ್ಲ್ಯಾಬ್ ಏರಿಸಿದ್ದೀರಿ. ಇದರಲ್ಲಿ ಮಿಲ್ಲಿಂಗ್ ಮತ್ತು ಪ್ರೊಡಕ್ಷನ್ ಮಾಡುವ ಜನಗಳಿಗೆ ಸ್ಲ್ಯಾಬ್ ಕಡಿಮೆ ಇಲ್ಲ. ಸೆಕ್ಷನ್ 6ನ್ನು ರೀಕ್ಯಾಸ್ಟ್ ಮಾಡಿದ್ದೀರಾ. ಕಚ್ಚಾಮಾಲುಗಳನ್ನು ತೆಗೆದುಕೊಂಡು ಬೇರೆ ಮಾಲುಗಳನ್ನು ಪ್ರೊಡಕ್ಷನ್ ಮಾಡಿದರೆ ಅವನು ಅಂತ ಗೂಡ್ಸ್ ಮೇಲೆ ಅದೇ ರೇಟಿನಲ್ಲಿ ಪರ್ಚೇಸ್ ಪ್ರೈಸ್ ಮೇಲೆ ಟ್ಯಾಕ್ಸ್ ಕೊಡಬೇಕು ಅಂತ ಹೇಳಿದ್ದಾರೆ. ಹೀಗೆ ಮಾಡಿದರೆ ಕೈಗಾರಿಕೆ ಮೇಲೆ ಯಾವ ತರಹ ಪರಿಣಾಮವಾಗುತ್ತದೆ ಎಂಬುದನ್ನು ಊಹಿಸಬೇಕು. ತಾವು 25 ಸಾವಿರ ರೂಪಾಯಿಯವರೆಗೆ ಸ್ಲ್ಯಾಬ್ ಇಟ್ಟಿರುವುದು ಸರಿಯಾಗಿಲ್ಲ ಎಂದು ನಾನು ಹೇಳುತ್ತೇನೆ. ಆದ್ದರಿಂದ ನಮ್ಮ ರಾಜ್ಯದಲ್ಲಿ ಈಗ ಕೈಗಾರಿಕೆಗಳ ಮೇಲೆ ಟ್ಯಾಕ್ಸ್ ಬೀಳುತ್ತದೆ ಎಂದು ನಾನು ಹೇಳುತ್ತೇನೆ.

Sri H. SIDDAVEERAPPA (Harihar).—Mr. Speaker Sir, it is already late. I do not wish to take much time since a number of my hon. friends have offered valuable suggestions on this Bill. Since the name of the Committee in which I happen to be a member has been stated to be the basis for the Clauses that have been introduced in this Bill, I think it is but right I should offer a few remarks about it.

Sir, the Bhoothalingam Committee was constituted and one of the terms of the Committee was the need for raising additional resources for the State and the local bodies in the context of the fourth plan. So far as sales tax with which we are presently exercised is concerned, the Committee had to take into consideration simplification, removal of hardships to dealears, avoidance of diversion of trade, etc. The Committee took sales tax as the main item for the simple reason that out of tax revenues sales tax is the biggest item which brings a revenue of the order of about 40 crores. Although one of the terms was for raising additional revenues, the committee had to take into account various other factors, namely, burden, the incidence of taxation and the rates obtaining in neighbouring States and how it affect the comman man and to eliminate the hardships as much as possible. It is with this object in view the Committee sat and the committee like other committee in India did not go anywhere; they did not visit any other State nor any place in the State. They thought that enough material could be had after getting evidence from merchants, consumers and various other cross-section of the people. They examined and to the best of their mite, they gave the report. When that report was given I thought that the Finance Minister would place it before House. After all this House is the master of the sieuatior and after getting suggestions or proposals or modifications of this House, I thought the Finance Minister would formulate his Bill and bring it before the House. Probably he was hardpressed for time and within a few hours we have to clinch the issue.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅನೇಕ ರಾಜ್ಯಗಳಲ್ಲಿ ಸಮಿತಿಗಳನ್ನು ಮಾಡಿದರೆ ಅವು ರಾಜ್ಯದ ಹೊರಗೆ ಹೋಗಿ ಡಾಟಾ ಕಲೆಕ್ಟ್ ಮಾಡಬಹುದು. ಅದರಂತೆ ನಾವು ಇಲ್ಲಿ ಹೊರಗೆ ಹೋಗುವ ಹಾಗಿಲ್ಲ. ಸರಕಾರದವರೇ ಅವಕ್ಕೆ ಬೇಕಾದ ಅಂಕಿ ಸಂಖ್ಯೆಗಳನ್ನು ಹೊರಗಡೆಯಿಂದ ತರಿಸಲು ಏರ್ಪಾಡು ಮಾಡುತ್ತಾರೆಂದು ಅರ್ಥವೇ?

Sri H. SIDDAVEERAPPA.—I am sorry. That is not my object. In our opinion we thought that the material we had here was more than

(SRI H. SIDDAVEERAPPA)

ample and we need not go elsewhere for collection of additional inspiration or material.

Therefore while making these proposals we had in view how best to rationalise the system, how best we can reduce the hardships. how best we can think of checking malpractices and check evasion of tax. Taking all these facts into consideration we gave a report and I find most of the recommendations by and large have been accepted by the Government, except of course in the schedule. Here and there, our recommendations are not accepted *in toto*. Of course the Government have a right to make any change. It is nowhere stated that the recommendations of the committee are sacrosanct and should be accepted *in toto*. I have been comforted by one thought and that is, the Government may at any time if undue hardship is felt in respect of any item they are always at liberty either to reduce or to modify.

With these observations, I will now take up a few salient points about the Bill. So far as exemption limit is concerned, by raising the exemption limit I think we have taken out one third of the assessees from the files. This makes the procedure simplified, avoids hardship and to that extent the officers can concentrate on the very few assessees and think of bettering their work. I think it will certainly do some good in trying to increase the efficiency in the department and trying to do work better. One other clause, namely clause 6, is an important one. Under the guise of consignment sales, many transactions were taking place. For instance if an article is booked here and the consignee is at Bombay, because it is sent elsewhere no tax is paid on it. We have plugged this loophole by providing clause 6. Most of the other clauses are consequential. Another important clause is 12(b). Hitherto the procedure was different. They were asked to pay a particular amount that was fixed by the department. Under this clause, which I think is in Madras and we have copied it from Madras, the procedure is payment of tax in advance. A person collects tax every day and he goes on writing and according to his judgment nobody is there to question him. It will save two things. It will avoid hardship and secondly when it becomes a big amount he may find it hard to pay. Otherwise also he may utilised it for capital. Now he is holding it as trustee of the Government and he can pay it. Only after the year is over when accounts are taken if it is found that there is change of more than 15 per cent, a presumption arises that he has not tendered proper accounts. Then only some punishment will have to be given. If he comes to know after the period of one year, there is the penalty caluse. So the person will be careful and he will try to see that he is as near the approximate amount that he has to possibly pay. Therefore, in this respect the new clause introduced is beneficial. Likewise the compounding clause. I do not want to say much about it.

One other thing is about the rates. I do not know what special consideration the Minister had. I find items 86, 87 and 88 require

to be revised and I personally feel they can also come under the category of six per cent because it is a very costly commercial crop. My friend said that there is a lot of difficulty in raising this crop. I may say that there is a lot of difficulty in raising other crops like ragi or jowar. In fact that is much more difficult. I feel something will have to be done.

In clause 21 I have to say one thing about the groundnut oil. There is one other clause about vanaspati. This point has already been mentioned by Sri S. Sivappa. This vanaspati and refined oil are used by upper class people whereas groundnut oil is the only edible oil like the coconut oil in South and North Kanara, that is used by middle and poor class people to provide fat to the body. In our area groundnut oil is the only faty substance that poor man has to take to his body. So, I feel that some consideration should be shown to this item and I earnestly request the Hon. Minister to reduce it from 4 to 2 per cent. It is very essential in the interest of poor men.

5-00 P.M.

There is an item called bread and bakery. This is a very important item. There are people who cannot afford to have full meal. Such people will eat bread and take a cup of water and sleep. The Government of India taking into consideration the necessity for popularising the wheat and wheat product have started nearly 8 Modern Bakeries. Out of 8 Bakeries, one is started in Bangalore itself. If you put 3 per cent sales tax *i.e.*, a multiple point tax, the poor man is bound to be hit hard. This is one of the items where the Minister should pay his particular attention. I have got a suggestion to make in this connection. Maida is the raw material for the manufature of bread. The bakers have got to take licence. These poor people, who constitute 90 per cent of the Bakers of all type, should not come under the clutches of law. I therefore suggest that you can go to the very root of it and assess your tax on Maida. Now you put only 1½ per cent on it. I do not mind if you raise it to 6 per cent. You should not tax the bread or other articles that are manufactured in the Bakery. You are not going to lose more if you leave it. This will be the solitary solution which can be examined. You can simply tax Maida. Without Maida no bread can be manufactured. Therefore, you better examine it and see that Maida is taxed at source at the rate of 6 per cent. If you do it you will be saving the poor people who manufacture the bread and the people who eat it.

I have got another suggestion to make and I do not know how far it finds favour with the Hon. Minister. We the non-officials on the Committee should not disclose what has happened and what decision has been taken in the Committee. But it is our right to say that we are very anxious to see that the food articles are taken away from the category of articles on which the sales tax is being imposed. 1½ per cent multi-point has been kept as it was with the fraction. You have removed the fraction for the purpose of simplification and you have

(SRI H. SIDDAVEERAPPA)

made it 2 per cent. It is only here, we did not touch for various reasons because we thought if food article is to be removed from the category of the sales tax, it is going to give you double return. Now what is happening when the food articles are brought to the Market? If the articles like paddy, ragi, Jola etc., are brought to the market, they do not fetch any sales tax because they belong to agriculturists. The agriculturists are exempted from paying tax. When he brings these articles, he is not bound to pay sales tax. But what is happening there is, when the paddy or some food articles are brought to the market, the Commission agent comes into picture. These Commission agents do this business on behalf of the agriculturists. The procedure adopted here is so cumbursome. The agriculturists must produce R. R. extract, Pahani extract and all other things to claim one point exemption. As it is, nobody is claiming exemption. Without your notice it is simply passed on to the producer who pays sales tax. On account of this cumbersome procedure, the producer will have to pay the tax. As per the standing rules, the producer should get the benefit. But he does not get. You are under impression that the producer should get the benefit and he is getting. Any food article that is brought to the Market belongs to agriculturists only and to nobody else. I am told and I also know personally well, that 99 per cent of the goods that are in the Market are brought by the growers only. These people may bring in the lorries only. The days of bullock carts transportation are over now. But the officers concerned presume that the goods brought in lorries are all belonging to the merchants. Their presumption is completely wrong. Even if the merchants bring, those things must be looked into and checked which are the goods that have been brought by the Merchants and which are the goods that have been brought by the agriculturists. But do not be guided away by the fact that merchants alone can bring goods in lorries. You are not going to lose on that score. The main idea is to give some relief to the growers. But your officers are not dogmatic in their view. They come and simply tax everybody there without considering all these points. My request to you is to get the case examined and see that proper justice is done to the ryots.

Then Sir, I have got another suggestion to make, and this is for your consideration. I am putting forth this suggestion out of my experience. You are collecting sales tax on the goods that have been marketed in the Regulated Market. Most of the agriculturists are not at all bringing their produce to the regulated Market because of some fear in their mind. They sell it in the village itself. Just to avoid this and to save leakages I am suggesting that Commercial Sales Officer may be posted as Chief Marketing Officer. In the Regulated Market Act, you need not make any change. You simply by notification, make him the Chief Marketing Officer for the entire Mysore State. All the regulated Markets in the State should come under his jurisdiction. This

will have to be done immediately. This will be doubly advantageous. The entire regulated market stock will come at each jurisdiction and your Sales tax Officers will be there in close liaison and you can save 90 per cent of the leakages. I think many of your senior officers will be knowing it. In some of the markets the leakages run to lakhs of rupees. It there is proper checking and if there is proper avoidance of leakages, in Mysore State alone you can easily collect Rs. 10 crores more from sales tax. Supposing 100 agriculturists bring things for sale and by some arrangement there is no quotation, then, as per the Act and rules, the agriculturist is always at liberty and has a right to cancel the tender or reject it. The moment it is rejected, the very same goods are sold in the same market without bringing them into account. Sometimes there will be chit sales in collusion with your officers. That is why some of the officers request for posting to a particular post. No doubt certain sections in the Act are very clear. We must know the arrival in the market on that day. Supposing a merchant has received 500 quintals, we must know what is the sale and what is the balance that remains over. If we take the daily account, we can find out how much of it is broght. No grower would ever take the trouble of taking it back to the village because he has not got the retaining power. Otherwise he would have kept it in the warehouse itself. Therefore, I suggest that this aspect should be examined in the Cabinet. Every important place in Mysore has a Regulated Market and there are more than 150 Regulated Markets in the State. If we try to know how much quantity has arrived, there is no possibility for leakage and every month they have to pay the tax. It is by this method that some of these things may be checked. I think a suggestion like this was once mooted in one of the Committees which I do not easily remember now.

As I have said earlier, we have to try to reduce the number of multi-point items as much as possible and simplify it, and bring in as many items as possible under the single-point. By and large some of these taxes that have been now introduced appear to be somewhat harsh. They say that by this extra taxation they may get about one to one and-a-half crores of rupees. We cannot accept it. We have to examine as to what will be the amount we may get if the taxrate is revised. It may be about Rs. 1½ to 2 crores by this additional taxation. However, I request the Hon'ble Minister to please see that the items of food articles are kept uppermost in mind. We know by one stroke of the pen, he gave Rs.10 crores to our needy employees. Likewise here are the needy consumers. After all you may lose about Rs.2 crores. Don't be niggardly. You will be getting the approbation of the common man and you will become a real socialist, for which you are now turning. This is going to be very helpful and the Government will certainly get the congratulations they deserve if the foodgrains are exempted from sales tax as also the oil seeds.

With these few words I close my remarks.

SRI C. K. RAJAIAH SHETTY (Chicknayakanahalli). Sir, though this Bill was brought with good intention as per the Bhootalingam Report, it is really unfortunate that there are so many clauses which are more dangerous than the previous Bill. As a matter of fact, regarding small merchants though concessions have been shown in respect of exemption limits, they have been asked to pay Rs. 600 at a stretch which is rather unfortunate. A small merchant with a capital of Rs. 1,000 can have a turnover of Rs. 25,000. How is it possible for him to pay Rs. 600 at a stretch? Similarly, a merchant with a capital of Rs. 3,000 can have a turnover of Rs. 75,000 and he has to pay one-third of the capital towards tax. Therefore, this is really a harsh piece of legislation, and it should be amended. Sometimes these merchants will be asked by the officers to pay advance tax of Rs. 1,200.

One other important thing is, this Government has no intention to know what exactly is the impact of this Bill on industry. During 1968, the sales tax on ores was 5 per cent and it is now proposed to be raised to 8 per cent. Bhadravati Iron and Steel is the biggest industry which is purchasing the maximum quantity of iron ore in this country. In the Estimates Committee Report of Sri M. Y. Ghorpade it is clearly stated that the purchase rate of iron ore is highest when compard to such other units and you propose to raise it still further. You propose to tax fuel oil also at the rate of 6 per cent. In Mysore as well as in South Kanara everybody is switching over to electric furnace or coal furnace because of the high rate of fuel oil. Even the Porcelain factory has switched over to electric furnace. Our rate of tax on oil is the highest. When the case is such, you are further adding 6 per cent to that. Can you expect any industrial development at this rate? You want to tax the raw materials, semi-finished goods, finished goods, transport and at the same time you want to develop industry. How is it possible Sir? I feel that this Bill is more a suicidal measure than a socialistic measure. The manganese market has completely failed and the rate has come down from 100 to 25 per cent and it has become impossible for anyone to run this industry and for this also you want so tax 8 per cent more.

Then in regard to essential goods and food stuffs the Government never seems to think of reducing the tax. They have taxed several food stuffs like soji, wheat, Rice, etc. In a country like Japan they are subsidising these essential commodities, whereas this Government is going on increasing taxes on these commodities. Still I do not know how the Government is bold enough to say that they want to establish socialistic pattern of society. By these taxation measures, the Government is forcing the people of this country towards communism. As a matter of fact, one of the foreigner once stated that there is no commodity in India which is not taxed even a cup of water is not free from taxation nor a morsel of food in India.

Therefore Sir, I feel that this is really an unfortunate measure which creates more hardships for the common man and I suggest that this Bill should be reconsidered and recast.

SRI RAMAKRISHNA HEGDE.—Mr. Speaker Sir, may I express my grateful thanks to the hon. Members who participated in the debate on this bill and for their constructive suggestions. But there appears to be an impression that the Government was in a great hurry to get this legislation passed. I did not mean to hurry or hustle through this legislation. But as I mentioned in my Budget Speech, the Bill has to be given effect to from the first day of April, 1970, the next financial year. That is why, perhaps this measure could not be given as much time as the hon. members desired.

I may mention that the provisions contained in this amending Bill are mostly in accordance with the recommendations of the Bhootalingam Committee. One or two hon. Members were rather uncharitable when they observed that the provisions in the Bill have nothing to do with the recommendations of the Bhootalingam committee. Sir, the Committee broadly speaking made the following recommendations, in regard to:

1 The general scheme of tax which the Government has accepted;

2 exemptions in respect of motor spirit and the separate legislation in regard to tax on motor spirit to repeal the existing legislation and to levy the tax on *ad-velorem* basis. The Government has accepted this recommendation also.

3 Selection of goods for single point and multipoint levy. The Government has accepted the recommendation *in toto* [and we have not made any deviation from the recommendations of this committee.

In regard to rates of taxation also the Government has accepted; the recommendation except in three or four cases where certain modifications have been made. I will explain it little later.

Lastly, in regard to minimum turnover and composition the Government has accepted the recommendation of this Committee. Actually, the committee had rcommended that for composition the limits should be Rs. 60,000 for annual turnover, but Government further raised it to Rs. 75,000. By raising the exemption limit as many as 36,000 cases will not be subject to regular assessment and this will also result in considerable lessening of the burden on the part of the department in regard to making assessments.

Then Sir, the four or five cases where the Government has made departure from the recommendations of this Committee are as follows:

"That clause 1, the Long Title and the enacting formula do stand part of the Bill."

The motion was adopted

Clause 1, Long Title and the Enacting formula were added to the Bill.

Motion to Pass

Sri RAMAKRISHNA HEGDE.—Sir, I beg to move:

"That the Mysore Appropriation Bill, 1970, be passed."

Mr. SPEAKER.—The question is:

"That the Mysore Appropriation Bill, 1970, be passed."

The motion was adopted

Now the Hon. Minister may move the next bill for consideration.

Mysore Appropriation (No. 2) Bill, 1970

Motion to Consider

Sri RAMAKRISHNA HEGDE.—Sir, I beg to move:

"That the Mysore Appropriation (No. 2) Bill, 1970, be taken into consideration."

Mr. SPEAKER.—Motion moved :

"That the Mysore Appropriation (No. 2) Bill, 1970, be taken into consideration."

† ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಸ್ವಾಮಿ, 1970–71ನೇ ಇಸವಿಗೆ 531 ಕೋಟಿ ರೂಪಾಯಿಯ ಹಣ ವಿನಿಯೋಗ ಮಸೂದೆಯನ್ನು ಮಾನ್ಯ ಅರ್ಥ ಸಚಿವರು ಇಲ್ಲಿ ಸಭೆಯ ಮುಂದೆ ಮಂಡಿಸಿದ್ದಾರೆ. ಈ ಹಣವನ್ನು ಯಾರಿಗೆ ಕೊಡುತ್ತಿದ್ದಾರೆಂದರೆ, ಸರ್ಕಾರದ ವಿವಿಧ ಇಲಾಖೆಗಳಿಗೆ ಕೊಡುತ್ತಿದ್ದಾರೆ. ಇವತ್ತು ಈ ಸರ್ಕಾರ ಮತ್ತು ಅರ್ಥ ಶಾಖೆ ಹೇಗೆ ಆಗಿದೆ ಎಂದರೆ, ಇದು ಒಂದು ಲಂಗು ಲಗಾಮು ಇಲ್ಲದ ಕುದುರೆ ಮತ್ತು ಅದರ ಸವಾರ ಇದ್ದ ಹಾಗೆ ಇದೆ. ಇಂಥ ಒಂದು ಕುದುರೆಯ ಮೇಲೆ ಸವಾರನನ್ನು ಕೂರಿಸಿದರೆ, ಕುದುರೆಯನ್ನು ಆ ಸವಾರನು ಎಷ್ಟರ ಮಟ್ಟಿಗೆ ಕಂಟ್ರೋಲ್ ಮಾಡಿ ತನ್ನ ಗುರಿಯನ್ನು ಮುಟ್ಟಬಲ್ಲನು ? ಅದೇ ಮಟ್ಟದಲ್ಲಿ ಇವತ್ತು ಈ ಸರ್ಕಾರ ಇದೆ. ಏಕೆಂದರೆ ಸರ್ಕಾರಕ್ಕೆ ಲಂಗೂ ಇಲ್ಲ, ಲಗಾಮೂ ಇಲ್ಲ. ಈಗಾಗಲೇ ನಾವು ನೋಡಿರತಕ್ಕ ರೀತಿಯಲ್ಲಿ ಈ ಹಣಕಾಸಿನ ಚಿತ್ರವನ್ನು ಯಾವ ಬಜೆಟಿನಲ್ಲೂ ಕರಾರುವಾಕ್ಕಾಗಿ ಇವರು ತಿಳಿಸುತ್ತಾ ಇಲ್ಲ. ಪ್ರತಿವರ್ಷ ಒಂದು, ಎರಡು, ಮೂರು ಎಂದು ಸಪ್ಲಿಮೆಂಟರಿ ಡಿಮ್ಯಾಂಡನ್ನು ಇಟ್ಟುಕೊಂಡು ತಮಗೆ ಬೇಕಾದ ಹಾಗೆ ಹಣ ಖರ್ಚು ಮಾಡುತ್ತಿದ್ದಾರೆ. ಅವಲ್ಲದೆ ಎಕ್ಸೆಸ್ ಡಿಮ್ಯಾಂಡ್ ಎಂದು ಯಾರಿಗೂ ತೋರಿಸದೆ, ಖರ್ಚು ಮಾಡುವುದಕ್ಕೆ ಈ ಸಭೆಯ ಅನುಮತಿಯನ್ನು ಕೇಳುವುದು ಒಂದು ಪದ್ಧತಿಯಾಗಿ ಬಿಟ್ಟಿದೆ. ಇವತ್ತು 531 ಕೋಟಿ ರೂಪಾಯಿ ಕೊಡಬೇಕಾಗಿದೆ. ಇವರಿಗೆ ಇಂಥ ಖರ್ಚುಗಳನ್ನು ನಿಲ್ಲಿಸತಕ್ಕ ಶಕ್ತಿ ಇದೆಯೇ ಅಂದರೆ, ಇದು ಬ್ರೇಕ್ ಇಲ್ಲದ ಕಾರಿನ ಹಾಗೆ ಇದೆ. ಇವರಿಗೆ ಕಾರು ಹೋದ ಹಾಗೆ ಇರಬೇಕು. ಆ ಕಾರು ಒಂದು 10 ಮೈಲಿ ಸ್ಪೀಡಿನಲ್ಲಿ ಹೋದರೆ ಎಲ್ಲಾದರೂ ತಡೆದು, ನಿಲ್ಲಿಸಬಹುದು. ಆದರೆ ಬಹು ವೇಗದಿಂದ ಹೋದರೆ, ಅದು ಬ್ರೇಕ್ ಇಲ್ಲದೆ ತಲೆಕೆಳಗಾಗುತ್ತದೆ. ಇವರ ಪಾರ್ಟಿಯಲ್ಲಿ ಬಿಗಿಯಾಗಿ ರಾಜ್ಯವಾಳತಕ್ಕ ಪರಿಸ್ಥಿತಿ ಇಲ್ಲ. ಇವರು ಸಮಾಜವಾದವನ್ನು ಜಾರಿಗೆ ತರುತ್ತೇವೆಂದು ಹೇಳತಕ್ಕವರು, ಆದರೆ ಸುಮ್ಮನೆ ಬಾಯಲ್ಲಿ ಹೇಳಿದರೆ ಅದು ಸಾಧ್ಯವಾಗಲಾರದು. ಹೀಗೆ ಮಾಡಿದರೆ ಇವರಿಗೆ ಅದನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವುದಕ್ಕೆ ಸಾಧ್ಯವೇ ? ಈ ಬ್ರೇಕ್ ಇಲ್ಲದ ಸರ್ಕಾರದವರು, ಸಮಾಜವಾದವನ್ನು ಕಟ್ಟುನಿಟ್ಟಾಗಿ ಜಾರಿಗೆ ತರುತ್ತೇವೆಂದು ಹೇಳಿದರೆ, ಇವರ ಹಿಂಬಾಲಕರು ತಿರುಗಿ ಬೀಳುತ್ತಾರೆ. ಉದಾಹರಣೆಗೆ ಮೊನ್ನೆ ರಾಜ್ಯಸಭೆಯ ಚುನಾವಣೆಯಲ್ಲಿ ಆಯಿತಲ್ಲ, ಹಾಗೆ ಆಗಬಹುದು. ಇದು ಕೇವಲ ಒಂದು ನೀರಿನ ಗುಳ್ಳೆ ಇದ್ದ ಹಾಗೆ ಇದೆ. ಯಾವ ಸಮಯದಲ್ಲಿ ಏನಾಗಬಹುದೆಂದು ಹೇಳಲಾಗದು. ಆದ್ದರಿಂದ ಇಂತಹ ಸರ್ಕಾರಕ್ಕೆ ಇಷ್ಟೊಂದು ಹಣವನ್ನು ಕೊಡುವುದರಿಂದ ಪ್ರಯೋಜನವಾಗುತ್ತದೆಯೇ ಎಂಬ ಶಂಕೆ ನನಗೆ ಬಂದಿದೆ. ಈ ಸರ್ಕಾರದಲ್ಲಿ ಭದ್ರತೆ ಇಲ್ಲ. ಸಮಾಜವಾದದಲ್ಲಿ ನಿಷ್ಠೆ ಇಲ್ಲ. ಕಾರ್ಯಕ್ರಮದಲ್ಲಿ ಒಂದು ತತ್ವ ಇಲ್ಲ. 531 ಕೋಟಿ ರೂಪಾಯಿಗಳಲ್ಲ. ಇನ್ನೂ 200 ಕೋಟಿ ರೂಪಾಯಿಗಳನ್ನು ಇವರಿಗೆ ಕೊಟ್ಟರೂ ಅದರಿಂದೇನೂ ಪ್ರಯೋಜನವಾಗುವುದಿಲ್ಲವೆಂದು ನನಗನ್ನಿಸುತ್ತದೆ. ಹಿಂದೆ ಅರ್ಥ ಸಚಿವರು ಬಡ್ಜೆಟ್ಟನ್ನು ಮಂಡನೆ ಮಾಡುವಾಗ ಎಷ್ಟೊಂದು ಲವಲವಿಕೆ, ಖುಷಿಯಿಂದಿದ್ದರು. ಕ್ಷೌರ ಮಾಡಿಕೊಂಡಿದ್ದರು. ಈಗ ಹಣ ಕೊಟ್ಟ ಮೇಲೆ ಅವರಿಗೆ ಏಕೋ ಬೇಜಾರು, ಕ್ಷೌರ ಮಾಡಿಕೊಂಡಿಲ್ಲ. ಗಡ್ಡ ಬಿಡುತ್ತಿದ್ದಾರೆ. ಅವರ ಮುಖ ಚಿತ್ರದಿಂದರೇ ಅದು ಗೊತ್ತಾಗುತ್ತದೆ.

ಶ್ರೀ ಎಚ್. ಸಿದ್ಧವೀರಪ್ಪ.—ಅದು ಸನ್ಯಾಸಾಶ್ರಮಕ್ಕೆ ದಾರಿ.

ಶ್ರೀ ಎಸ್. ಶಿವಪ್ಪ.—ಅವರು ರಿಟೈರ್ ಆಗುತ್ತಾರೆಂದು ಕಾಣುತ್ತದೆ. ಅವರೂ ಸಹ ಯಾವುದಾದರೂ ಒಂದು ಆಶ್ರಮಕ್ಕೆ ಹೋಗಬಹುದು. ಜೋಗಿಮಠದಲ್ಲಿ ಮಾನ್ಯ ಶ್ರೀ ನಿಜಲಿಂಗಪ್ಪನವರು ಇರಲು ಅದನ್ನು ತೆಗೆದುಕೊಂಡಿದ್ದಾರೆ. ಆಗ ನೀವೂ ಅಲ್ಲಿಗೇ ಹೋಗಿ ಇರಬಹುದು. ಈ ಸರ್ಕಾರಕ್ಕೆ ಪೇಚಾಟ ಆಗಿದೆ. ಮಾನ್ಯ ಮುಖ್ಯ ಮಂತ್ರಿಗಳು ಕೆಳಗಿನ ಅಧಿಕಾರಿಗಳ ಮೇಲೆ ಹಿಡಿತ ಇದೆಯೆಂದು ಹೇಳುತ್ತಾರೆ. ಅವರು ಇವತ್ತಿನ ದಿವಸ ಗೃಹಸಚಿವರಾಗಿ ಜವಾಬ್ದಾರಿಯನ್ನು ಹೊತ್ತಿದ್ದಾರೆ. ಇವರ ಕಾಲದಲ್ಲಿ ಪೋಲೀಸರ ದಬ್ಬಾಳಿಕೆಯನ್ನು ನಾವು ಇನ್ನೂ ಕಾಣುತ್ತಿದ್ದೇವೆ. ಕೃಷ್ಣರಾಜಪುರದಲ್ಲಿ ಒಬ್ಬರಿಗೆ ತಿರುಪತಿ ಕ್ಷೌರ ಮಾಡಿಸಿ ನಾಮ ಹಾಕಿ ಅವರಿಗೆ ಮಲಮೂತ್ರ ಕುಡಿಸಿ ಮೆರವಣಿಗೆ ಮಾಡಿದ ದೃಶ್ಯ 1970ನೇ ಇಸವಿಯಲ್ಲಿ ಇಂತಹ ನಾಗರಿಕ ಸರ್ಕಾರ ರಾಜ್ಯದಲ್ಲಿ ಇದೆಯಲ್ಲಾ ಎಂದು ವ್ಯಸನ ಪಡಬೇಕಾಗಿದೆ. ನಿನ್ನೆ ತಾನೆ ಇನ್ನೊಂದು ವಿಷಯವನ್ನು ಹೇಳಿದ್ದೇನೆ.

† Indicates that remarks or speeches have not been revised by the member concerned.

(ಶ್ರೀ ಎಸ್. ಶಿವಪ್ಪ)

ದಕ್ಷಿಣ ಕನ್ನಡ ಜಿಲ್ಲೆಯ ಕಾಪುವಿನಲ್ಲಿ ಒಂದು ಮಾರಿಗುಡಿ ಜಾತ್ರೆ ನಡೆಸಿದ ಸಂದರ್ಭದಲ್ಲಿ ಪೋಲೀಸರು ಅಲ್ಲಿ ಜನಗಳ ಮೇಲೆ ಬೇಕಾದಷ್ಟು ಹಲ್ಲೆ ನಡೆಸಿದ್ದಾರೆ. ಪೋಲೀಸರಿಗೆ ಜನರು ಅಂದರೆ ಲೆಕ್ಕ ಅಲ್ಲ. ಪೋಲೀಸರು ಇರುವುದು ಶಿಕ್ಷೆ ಕೊಡುವುದಕ್ಕೆಂದು ಅವರು ತಿಳಿದುಕೊಂಡಿರಬಹುದು. ನ್ಯಾಯಾಲಯವಿದ್ದ ಹಾಗೆ, ಪೋಲೀಸರಿಗೇ ನ್ಯಾಯಾಂಗವನ್ನು ಹೊತ್ತಿರತಕ್ಕ ಜವಾಬ್ದಾರಿ ಇದೆಯೆಂದು ತಿಳಿದಿರಬಹುದು. ಜನರನ್ನು ಪೋಲೀಸ್ ಸ್ಟೇಷನ್ನಿಗೆ ಕರೆದುಕೊಂಡು ಹೋಗುವುದು, ಅಲ್ಲಿ ಬಲವಾಗಿ ಹೊಡೆಯುವುದು, ಬೇಕಾದ ಹಾಗೆ ಶಿಕ್ಷೆ ಕೊಡುವುದು — ಇಂತಹ ಅಧಿಕಾರಗಳನ್ನು ಈಗ ಪೋಲೀಸಿನವರಿಗೆ ಕೊಟ್ಟಿದ್ದಾರೆ. ಇದು ನಾಗರೀಕ ಸರ್ಕಾರವಾಗಿದೆ. ಇದು ಪ್ರಜಾಪ್ರಭುತ್ವದಲ್ಲಿ ಆಗಬರದು. ಮಾನ್ಯ ಮುಖ್ಯಮಂತ್ರಿಗಳು ಜವಾಬ್ದಾರಿ ಹೊತ್ತಿರತಕ್ಕ ಮೈಸೂರು ಸ್ಟೇಟ್ ಎಲೆಕ್ಟ್ರಿಸಿಟಿ ಬೋರ್ಡ್‌ನಲ್ಲಿ ಕೆಲಸ ಮಾಡುತ್ತಾ ಇದ್ದಂಥವನನ್ನು ಕಾಪುವಿನಲ್ಲಿ ಪೋಲೀಸ್ ಸ್ಟೇಷನ್ನಿಗೆ ಕರೆದುಕೊಂಡು ಹೋಗಿ ಅಲ್ಲಿ ಲಾಕಪ್‌ನಲ್ಲಿ ಅವನನ್ನು ಹಾಕಿ ಹೀನಾಯವಾಗಿ ಬಡಿದು ಹೊಡೆದಿದ್ದುದರಿಂದ ಅವನು ಇವತ್ತು ಆಸ್ಪತ್ರೆಯಲ್ಲಿದ್ದಾನೆ. ಅದಕ್ಕಾಗಿ ಇವತ್ತು ಎಂ.ಎಸ್.ಇ.ಬಿ.ಯವರು ಹರಿತಾಳ ಮಾಡಿದ್ದಾರೆ. ಈ ರೀತಿಯಾಗಿ ಪೋಲೀಸರ ಅಮಾನುಷಕೃತ್ಯದಿಂದ ಎಲೆಕ್ಟ್ರಿಸಿಟಿ ಬೋರ್ಡಿನ ಕೆಳ ಅಧಿಕಾರಿಗಳು ಹರತಾಳ ಮಾಡುವ ಮಟ್ಟಕ್ಕೆ ಬಂದಿದ್ದರು ಎಂಬುದಾಗಿ ಹೇಳಿದರೆ, ಇನ್ನು ಸಾಮಾನ್ಯ ಜನತೆ ಎಲ್ಲಿ ಹೋಗುತಾರೋ ಗೊತ್ತಿಲ್ಲ. ಇನ್ನೊಂದು ವಿಷಯ. ಅಲ್ಲಿಯೇ ಒಬ್ಬ ವೆಟರಿನರಿ ಅಧಿಕಾರಿಯನ್ನೇ ಬೇರೆ ದಸ್ತಗಿರಿ ಮಾಡಿದ್ದಾರೆ. ಅಲ್ಲಿ ದನಗಳ ಆಸ್ಪತ್ರೆಗೆ ಪೋಲೀಸರೇ ಬೀಗ ಹಾಕಿದ್ದಾರೆ. ಅವರು ಕಾನೂನಿನ ಸರ್ವಾಧಿಕಾರಿಯಾಗಿದ್ದಾರೆ. ಆ ಆಸ್ಪತ್ರೆಗೆ ಹೋದರೆ ಬೀಗ ತೆಗೆಯುವುದಿಲ್ಲ. ನೆಲಮಂಗಲದಲ್ಲಿ ನಾಲ್ಕಾರು ವರ್ಷಗಳಿಂದ ಮಳೆ ಬಂದಿಲ್ಲ. ಅಂತಹ ಕಡೆಗಳಲ್ಲಿ ಕಂದಾಯ ವಸೂಲು ಮಾಡಬಾರದೆಂದು ಮಾನ್ಯ ರೆವಿನ್ಯೂ ಸಚಿವರು ಆಜ್ಞೆ ಪಾಸ್ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಈ ಶಾಸನ ಸಭೆಯಲ್ಲಿ ಅದರ ಬಗ್ಗೆ ಇನ್ನೂ ಮಸೂದೆಯನ್ನು ಪಾಸ್ ಮಾಡಲಿಲ್ಲ. ಸಹಸ್ರಾರು ರೂಪಾಯಿಗಳಷ್ಟು ಕಂದಾಯ ಕೊಡುತ್ತಿದ್ದವನು ಒಬ್ಬ ಹಿಂದೆ ಮಾನ್ಯ ಶ್ರೀ ಆಲೂರು ಹನುಮಂತಪ್ಪನವರ ವಿರೋಧವಾಗಿ ಚುನಾವಣೆಗೆ ನಿಂತಿದ್ದ. ಅರಣ್ಯ ಶಾಖೆಯ ಸಚಿವರ ಎದುರಾಗಿ ಚುನಾವಣೆಗೆ ನಿಲ್ಲುವುದು ಏಕೆ ಎಂಬ ಪ್ರಶ್ನೆ ಆಗಲೇ ಬಂದಿತ್ತು. ಆಗಿನ ಒಂದು ಸೇಡನ್ನು ಅವನ ಮೇಲೆ ತೀರಿಸಿಕೊಳ್ಳುವುದಕ್ಕೋಸ್ಕರ ಆ ಮಂತ್ರಿಗಳು ತನ್ನ ಪೋಲೀಸ್ ಅಧಿಕಾರವನ್ನು ಅಲ್ಲಿ ಚಲಾಯಿಸಿ, ತಾನು ಹುಟ್ಟಿದ ಊರಾದ ತ್ಯಾಮಗೊಂಡಲದಲ್ಲಿ ಮೆರವಣಿಗೆ ಮಾಡಿದ್ದಾರೆ. ಇದರಿಂದ ಗೌರವಸ್ಥರಾದ ಜನರು ಈ ದೇಶದಲ್ಲಿ ಇರುವುದಕ್ಕೆ ಸಾಧ್ಯವೇ ! ಪೋಲೀಸರ ಜುಲುಮೆ ಎಲ್ಲಿ ಹೋದರೂ ಇದೆ. ಇದರಿಂದ ಗೌರವವಾಗಿ ಜೀವನ ಮಾಡುವುದಕ್ಕೆ ಅವಕಾಶವಿಲ್ಲ. ಈ ರಾಜ್ಯದಲ್ಲಿ ಪೋಲೀಸ್ ಖಾತೆ ತನ್ನ ಜವಾಬ್ದಾರಿಯನ್ನು ಅರಿತು ವರ್ತನೆ ಮಾಡುತ್ತಿಲ್ಲ. ಇದನ್ನು ವಿಚಾರ ಮಾಡದಿದ್ದರೆ, ಈ ದೇಶದಲ್ಲಿ ಸರ್ಕಾರ ಪ್ರಜಾಪ್ರಭುತ್ವಕ್ಕೆ ಅನುಸಾರವಾಗಿ ಕೆಲಸ ಮಾಡುತ್ತದೆಂಬ ಅಂಶ ಖಂಡಿತವಾಗಿ ಉಳಿಯುವುದಿಲ್ಲವೆಂದು ನಾನು ಸಭಾಧ್ಯಕ್ಷರ ಮೂಲಕ ಪ್ರಾರ್ಥನೆ ಮಾಡುತ್ತೇನೆ. ತಪ್ಪು ಮಾಡಿದವರಿಗೆ ಶಿಕ್ಷೆ ಮಾಡುವುದಕ್ಕೆ ಸಾಕಾದಷ್ಟು ಕಾನೂನುಗಳು ಇವೆ. ಅಂತಹ ತಪ್ಪಿತಸ್ಥರನ್ನು ಕೋರ್ಟಿಗೆ ಕರೆದುಕೊಂಡು ಹೋಗಬಹುದು. ಆದರೆ ಪೋಲೀಸರೇ ಜನರ ಕೈಗೆ ತೋಡ ಹಾಕಿ ಅವರನ್ನು ಒದ್ದು ಮೈಮುಖ ಮುರಿಯುವ ಹಾಗೆ ಹೊಡೆಯುವ ಕೆಲಸ ಮಾಡಬಾರದು. ಇಂತಹದ್ದು ಕಾಂಗ್ರೆಸ್ ಸರ್ಕಾರದಲ್ಲಿ ಬಿಟ್ಟರೆ ಬೇರೆ ರಾಜ್ಯದಲ್ಲಿ ಇನ್ನೆಲ್ಲಿಯೂ ಇಲ್ಲ. ನೀವು ಈಗಾಗಲೇ ಮಹಾತ್ಮ ಗಾಂಧಿಯವರ ಶತಾಬ್ದಿವರ್ಷವೆಂದು ಆಚರಣೆ ಮಾಡುತ್ತಿದ್ದೀರಿ. ಆದರೂ ಮಹಾತ್ಮಾಗಾಂಧಿಯವರ ಶಾಪ ಈಗ ನಿಮ್ಮ ಮೇಲೆ ಬಿದ್ದಿದೆ. ಆದ್ದರಿಂದ ನಿಮ್ಮ ಅಧಿಕಾರ ರಾಜ್ಯಗಳಲ್ಲಿ ಕುಸಿದು ಬೀಳುವ ಮಟ್ಟಕ್ಕೆ ನೀವು ಬಂದಿದ್ದೀರಿ. ನಿಮ್ಮ ಪಕ್ಷವನ್ನು ಹಿಡಿತದಲ್ಲಿಟ್ಟುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಶಕ್ತಿ ಇಲ್ಲ. ಜನತೆಯ ಮೇಲೆ ನಿಮ್ಮ ಸೇಡನ್ನು ತೀರಿಸಿಕೊಳ್ಳುವುದಕ್ಕೋಸ್ಕರ ನಿಮಗೆ ಬೇಕಾದವರನ್ನು ಆ ರೀತಿ ಉಪಯೋಗಿಸಿಕೊಳ್ಳುವುದು ಪ್ರಜಾಪ್ರಭುತ್ವಕ್ಕೆ ವಿರುದ್ಧವಾಗಿದೆ. ಈ ಕಾಂಗ್ರೆಸ್ ಸರ್ಕಾರವನ್ನು ಇಷ್ಟೊಂದು ದುಷ್ಪರಿಣಾಮಕ್ಕೆ ಒಳಪಡಿಸಿ ಈ ಮಟ್ಟಕ್ಕೆ ತಂದಿರುವ ಜವಾಬ್ದಾರಿ ಹೋಂ ಡಿಪಾರ್ಟ್‌ಮೆಂಟ್ ಖಾತೆ ಹೊತ್ತಿರತಕ್ಕ ಮತ್ತು ಶಾಸನ ಸಭೆಯ ಜವಾಬ್ದಾರಿಯಾಗಿರತಕ್ಕ ಮಾನ್ಯ ಮುಖ್ಯಮಂತ್ರಿಗಳ ಮೇಲೆ ಇದೆ. ಯಾವ ವಿಚಾರವನ್ನೂ ತೆಗೆದುಕೊಂಡರೂ ಪೋಲೀಸರಿಂದಲೇ ಹೇಳಿಕೆ ತರಿಸಿ ಓದುತ್ತಾರೆ. ಇವರು ನ್ಯಾಯಾಂಗ ವಿಚಾರಣೆ ಮಾಡತಕ್ಕ ಒಂದು ಇನ್‌ಸ್ಟನ್ಸ್ ಸಹ ಇಲ್ಲ. ಬೇರೆ ರಾಜ್ಯಗಳಲ್ಲಿ ಯಾರಾದರೂ ಪೋಲೀಸರು ಏನಾದರೂ ಹಲ್ಲೆ ಮಾಡಿದರೆ ನ್ಯಾಯ ವಿಚಾರಣೆಯನ್ನು ಕೂಡಲೇ ಮಾಡುವ ವಿಚಾರ ಬೇರೆ ರಾಜ್ಯಗಳಲ್ಲಿ ಇದೆ. ಮೈಸೂರು ರಾಜ್ಯದಲ್ಲಿ ಇಂತಹ ಒಂದು ಪದ್ಧತಿ ಅಂದರೆ ನ್ಯಾಯಾಂಗ ವಿಚಾರಣೆ ಮಾಡುವುದು ಇಲ್ಲ. ಇದು

ಅವರ ನೈತಿಕ ಜವಾಬ್ದಾರಿಯಾಗಿದೆ. ಜನತೆ ಸರ್ಕಾರ ಮಾಡಿದ್ದನ್ನೆಲ್ಲಾ ನೋಡಿಕೊಂಡು ಸುಮ್ಮನೆ ಕೈಕಟ್ಟಿ ಕುಳಿತುಕೊಳ್ಳುತ್ತಾರೆಂಬ ಭಾವನೆ ಈ ಸರ್ಕಾರಕ್ಕೆ ಇದ್ದರೆ ಅದು ತಪ್ಪು. ಜನರು ಎಚ್ಚರವಾಗಿದ್ದಾರೆ ಮತ್ತು ಈ ಸರ್ಕಾರ ಕಡೆಗೆ ಅದರ ಪರಿಣಾಮವಾಗಿ ಆಹುತಿಯಾಗುತ್ತದೆಂದು ನಾನು ಎಚ್ಚರಿಕೆಯನ್ನು ಕೊಡುತ್ತೇನೆ. ಇನ್ನು ನಾನು ಕೂಲಂಕಷವಾಗಿ ಎಲ್ಲ ವಿವರಗಳಿಗೂ ಹೋಗುವುದಿಲ್ಲ. ಇವತ್ತು ರಾಜ್ಯದ ಪರಿಸ್ಥಿತಿ ಹೇಗಿದೆಯೆಂದರೆ ಎರಡು ಮೂರು ಕಷ್ಟಗಳಿಗೆ ಸಿಕ್ಕಿರುವ ಪರಿಸ್ಥಿತಿಯನ್ನು ರಾಜ್ಯ ಸರ್ಕಾರ ಎದುರಿಸಬೇಕಾಗಿದೆ. ಮೊದಲನೆಯದು ನದಿ ನೀರಿನ ವಿವಾದ, ಮತ್ತೊಂದು ಗಡಿ ಸಮಸ್ಯೆ. ಈ ಎರಡು ಮುಖ್ಯ ಸಮಸ್ಯೆಗಳನ್ನು ಈಗ ಸರ್ಕಾರ ಎದುರಿಸಬೇಕಾಗಿದೆ. ಇವುಗಳನ್ನು ಎದುರಿಸತಕ್ಕ ನೈಪುಣ್ಯತೆ ಈ ಸರ್ಕಾರಕ್ಕೆ ಇದೆಯೆಂದು ಹೇಳಿದರೆ ನನಗೇಕೋ ಶಂಕೆಯಾಗಿದೆ. ನಿಮಗೆ ನೈತಿಕವಾದ ನಿಲುವು ಇಲ್ಲ ಒಂದು ಒಳ್ಳೆಯ ನೀತಿ ಈ ಸರ್ಕಾರಕ್ಕೆ ಇಲ್ಲ. ಇದು ಅಂಜಿಕೆಯಿಂದ ಇರತಕ್ಕ ಸರ್ಕಾರ. ನಮ್ಮ ನೈತಿಕವಾದ ಜವಾಬ್ದಾರಿ ಇದರಲ್ಲಿದೆಯೆಂದು ನನಗೆ ನಂಬಿಕೆ ಇಲ್ಲ. ತಮಗೆ ಆ ಒಂದು ಅವಾರ್ಡ್‌ನಲ್ಲಿ ಜಯ ಬರುತ್ತದೆಯೇ ಎಂದು ನಾನು ಕೇಳುತ್ತೇನೆ, ನೀವು ಯಾರೇ ಆಗಲೀ ಕೇಂದ್ರ ಸರ್ಕಾರವನ್ನು ಎದುರಿಸುತ್ತೀರಾ ಎಂದು ನಾನು ಕೇಳುತ್ತೇನೆ. ಆ ಕೆಲಸವನ್ನು ಅಂಜುಬುರುಕುತನದಿಂದ ಮಾಡುತ್ತಿದ್ದೀರಿ. ಮಹಾಜನ್ ಕಮಿಷನ್ ವರದಿ ಕೊಟ್ಟು ಮೂರು ವರ್ಷಗಳಾದವು. ಆಗ ಮಾನ್ಯ ಶ್ರೀ ನಿಜಲಿಂಗಪ್ಪನವರು ಅಧ್ಯಕ್ಷರು ಆಗಿದ್ದರು. ಅವರ ಹೈಕಿಯವರೇ ಪ್ರಧಾನಿಯಾಗಿದ್ದರು. ಅಂತಹ ಕಾಲದಲ್ಲಿ ನ್ಯಾಯ ಹಾಗೂ ದಕ್ಷವಾಗಿರತಕ್ಕ ಮತ್ತು ಶಕ್ತಿಸಾಮರ್ಥ್ಯಗಳಿಂದ ಕೂಡಿರುವ ಕಾಂಗ್ರೆಸ್ ಸರ್ಕಾರಕ್ಕೆ ಒಂದು ದಿಟ್ಟ ನಿಲುವು ಇದರ ಬಗ್ಗೆ ಏಕೆ ಬರಲಿಲ್ಲವೆಂದು ನಾನು ಕೇಳುತ್ತೇನೆ. ಈಗ ಕಾಂಗ್ರೆಸ್ ಇಬ್ಭಾಗವಾಗಿ, ಮಹಾರಾಷ್ಟ್ರದವರು ಆ ಒಂದು ಅವಕಾಶವನ್ನು ಉಪಯೋಗಿಸಿಕೊಂಡು ಅಲ್ಲಿನ ಮಾನ್ಯ ಮುಖ್ಯ ಮಂತ್ರಿಗಳು ಪ್ರಧಾನಿಯವರ ಮೇಲೆ ಒತ್ತಾಯ ತಂದಿದ್ದಾರೆ.

9-00 A.M.

ಇದರಿಂದಾಗಿ ಕೇಂದ್ರಸರ್ಕಾರದವರು ಕೂಡ ಎಲ್ಲೆಲ್ಲಿ ಶಕ್ತಿ ಇದೆಯೋ ಅತ್ತ ಕಡೆಗೆ ವಾಲಿಕೊಳ್ಳತಕ್ಕ ಒಂದು ರಾಜಕೀಯ ಅವರಲ್ಲಿ ನಡೆದಿದೆ. ಮಹಾರಾಷ್ಟ್ರದವರ ಒತ್ತಾಯದಿಂದ ಕೇಂದ್ರ ಸರ್ಕಾರದವರು ಅವರ ಕಡೆಗೆ ವಾಲಿದರೆ ಅದಕ್ಕೆ ಜವಾಬ್ದಾರಿ ಈ ಸರ್ಕಾರ ಎಂಬ ಇವರ ಮೇಲೆ ಅಪಾದನೆ ಹೊರಿಸುವುದಕ್ಕೆ ನಾನು ತಯಾರಾಗಿದ್ದೇನೆ. ಇವರ ಅಂಜುಬುರುಕುತನದ ನೀತಿಯಿಂದ ಇವರಿಗೆ ಇರತಕ್ಕ ಅಧಿಕಾರವನ್ನು ಉಪಯೋಗಿಸಿಕೊಳ್ಳದೆ ಇವತ್ತು ಈ ಒಂದು ಅವಸ್ಥೆಗೆ ನಮ್ಮನ್ನು ತಂದಿದ್ದಾರೆ. ಇದೇ ರೀತಿ ನದಿ ನೀರಿನ ವಿವಾದದಲ್ಲಿ ಕೂಡ ತಮಿಳು ನಾಡಿನವರು ಕೇಂದ್ರಸರ್ಕಾರದವರಿಗೆ ಅಪೀಲು ಮಾಡಿದ್ದಾರೆ. ಇವತ್ತೋ ನಾಳೆಯೋ ಹೇಮಾವತಿ ಅಣೆ ಕಟ್ಟುವುದಕ್ಕೆ ತಡೆ ಹಾಕಿ ಅದನ್ನು ಟ್ರಿಬ್ಯೂನಲ್‌ಗೆ ಹಾಕಬೇಕೆಂದು ತಿಳಿಸುವಂತಹ ಪ್ರಯತ್ನ ನಡೆದಿದೆ. ಅಲ್ಲಿರತಕ್ಕ ನೀರಾವರಿ ಸಚಿವರೂ ಕೂಡ ಮೊದಲಿನಿಂದಲೂ ಮೈಸೂರಿನ ಬಗ್ಗೆ ಒಂದು ತಾರತಮ್ಯ ತೋರಿಸುತ್ತಾ ಇರತಕ್ಕದ್ದನ್ನು ನಾವು ನೋಡಿದ್ದೇವೆ. ಕೃಷ್ಣಾ ನದಿ ನೀರಿನ ಹಂಚಿಕೆಯ ವಿಷಯದಲ್ಲಿ ಅವರು ಮೈಸೂರಿನ ಪರವಾಗಿ ಇಲ್ಲ, ಹೇಮಾವತಿಯ ವಿಷಯದಲ್ಲೂ ಕೂಡ ಅವರು ನಮ್ಮ ಕಡೆಗೆ ಬರುತ್ತಾರೆ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಕೃಷ್ಣಾ ನದಿ ನೀರಿನ ಹಂಚಿಕೆಯಲ್ಲಿ ಅಂದಿನ ಮುಖ್ಯ ಮಂತ್ರಿಗಳಾಗಿದ್ದ ಶ್ರೀಮಾನ್ ನಿಜಲಿಂಗಪ್ಪನವರು ಧೈರ್ಯದಿಂದ ಹೋರಾಟ ಮಾಡಲಿಲ್ಲ. ಅವರಿಗೆ ಇಲ್ಲದೇ ಇದ್ದ ಅಂಜುಬುರುಕುತನ ಇತ್ತು. ಕೆ. ಎಲ್. ರಾಯರ ಕೃಪಾಕಟಾಕ್ಷ ಅವರಿಗೆ ಬೇಕಾಗಿತ್ತು. ಶರಾವತಿ ವಿಷಯದಲ್ಲಿ ಕೆ. ಎಲ್. ರಾವ್ ಅವರ ಸರ್ಟಿಫಿಕೇಟ್ ಅವರಿಗೆ ಬೇಕಾಗಿತ್ತು. ಶರಾವತಿ ಬಗ್ಗೆ ತನಿಖೆ ಮಾಡಿ, ಪರಿಶೀಲನೆ ಮಾಡಿ ಅಂದಾಗ ಶ್ರೀಮಾನ್ ನಿಜಲಿಂಗಪ್ಪನವರಿಗೆ ಕೆ. ಎಲ್. ರಾಯರ ಆಶ್ರಯ ಬೇಕಾಗಿತ್ತು ಮತ್ತು ಕೃಪಾಕಟಾಕ್ಷ ಬೇಕಾಗಿತ್ತು. ಆದ್ದರಿಂದ ಕೃಷ್ಣಾ ನದಿಯ ನೀರನ್ನು ಕೃಷ್ಣಾರ್ಪಣ ಮಾಡಿ, ಶರಾವತಿಯ ದೂರಿನಿಂದ ತಲೆತಪ್ಪಿಸಿಕೊಳ್ಳುವುದಕ್ಕೆ ಅವರಿಂದ ಸರ್ಟಿಫಿಕೇಟ್ ಪಡೆದು ಈ ರಾಜ್ಯದ ಹಿತವನ್ನು ಮಾರಾಟ ಮಾಡಿದಂತಹ ಅಪಕೀರ್ತಿ ಅವರ ಕಾಲದಲ್ಲಿ ಮೈಸೂರು ರಾಜ್ಯಕ್ಕೆ ಬಂದಿದೆ ಎಂದು ಬಹಳ ವ್ಯಸನದಿಂದ ಹೇಳುತ್ತಾ ಇದ್ದೇನೆ. ಆ ಒಂದು ಕಾರ್ಯದಿಂದಾಗಿ ಇವತ್ತಿನ ದಿವಸ ಹೇಮಾವತಿಯ ಯೋಜನೆ ಏನಾಗುತ್ತದೆ ಎಂಬುದನ್ನು ಕೂಡ ಇಂದು ಹೇಳುವುದಕ್ಕೆ ನಮಗೆ ಶಕ್ತಿ ಇಲ್ಲ. ಮಾನ್ಯ ಅಧ್ಯಕ್ಷರೇ, ಮತ್ತೊಂದು ವಿಷಯ ಎಂದರೆ ಈ ದೇಶದ 3 ಕೋಟಿ ಜನ ಏನಿದ್ದಾರೆ ಅವರು ಎಚ್ಚೆತ್ತಿದ್ದಾರೆ, ಎದ್ದು ನಿಂತಿದ್ದಾರೆ, ಧೈರ್ಯದಿಂದ ಹೋರಾಟ ಮಾಡುತ್ತೇವೆ ಎಂದು ಹೇಳಿ ಪಣತೊಟ್ಟು ನಿಂತಿದ್ದಾರೆ. ಯುವಕರು ತಮ್ಮೆಲ್ಲವನ್ನೂ ತ್ಯಾಗ ಮಾಡುತ್ತೇವೆ ಅಂತ ರಕ್ತಾರ್ಪಣಕ್ಕೂ ಕೂಡ ಸಿದ್ಧರಾಗಿ ಮುಂದೆ ಬಂದಿದ್ದಾರೆ. ಅದನ್ನು ಉಪಯೋಗಿಸಿಕೊಂಡು ಕಾರ್ಯ ಸಾಧನೆ ಮಾಡತಕ್ಕ

(ಶ್ರೀ ಎಸ್. ಶಿವಪ್ಪ)

ಒಂದು ಅವಕಾಶ ಈ ರಾಜ್ಯಕ್ಕೆ ಇದೆ. ಅಂತಹ ಒಂದು ಮಟ್ಟಕ್ಕೆ ಬಂದಿದ್ದೇವೆ. ನದಿ ನೀರಿನ ಹಂಚಿಕೆಯಾಗಲಿ ಗಡಿ ಸಮಸ್ಯೆಯಾಗಲಿ, ಯಾವುದೇ ಸಮಸ್ಯೆಯಾಗಲಿ ಕೇಂದ್ರಸರ್ಕಾರ ಎಷ್ಟೇ ಬಲಿಷ್ಠವಾದ ಸರ್ಕಾರ ಇರಲಿ, ನಮ್ಮ ಹಿತಸಾಧನೆಗೆ, ಈ ರಾಜ್ಯದ ಹಿತಸಾಧನೆಗೆ ಈ ದೇಶದ ಜನತೆ ಹೋರಾಟಕ್ಕೆ ಸಿದ್ಧವಾಗಿದೆ. ಇಂತಹ ಒಂದು ಹೋರಾಟದ ಸದ್ವಿನಿಯೋಗ ಮಾಡಿಕೊಳ್ಳತಕ್ಕ ಸಾಮರ್ಥ್ಯ ಈ ಸರ್ಕಾರಕ್ಕೆ ಇದೆಯೇ ಎಂದು ಪ್ರಶ್ನೆ ಹಾಕುತ್ತೇನೆ. ಇದಕ್ಕೆ ಸರ್ಕಾರ ತಯಾರಾಗಬೇಕು ಇಲ್ಲದೇ ಹೋದರೆ ಈ ರಾಜ್ಯವನ್ನು ಆಳುವುದಕ್ಕೆ ಈ ಸರ್ಕಾರಕ್ಕೆ ಹಕ್ಕು ಇಲ್ಲ, ರಾಜೀನಾಮೆ ಕೊಟ್ಟು ಈ ರಾಜ್ಯದ ಹಿತಸಾಧನೆ ಮಾಡಬೇಕೆಂದು ತಮ್ಮ ಮೂಲಕ ಅಗ್ರಹಪೂರ್ವಕವಾಗಿ ಈ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಕೊನೆಯದಾಗಿ ಒಂದೇ ಒಂದು ವಿಚಾರ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಅದು ರಾಜಕೀಯ ಪರಿಸ್ಥಿತಿ. ಈ ನಮ್ಮ ರಾಜ್ಯದಲ್ಲಿರತಕ್ಕ ರಾಜಕೀಯ ಪರಿಸ್ಥಿತಿ ಎಷ್ಟೊಂದು ಕೆಡಡಿದೆ, ಅಲ್ಲೋಲಕಲ್ಲೋಲವಾಗಿದೆ ಎಂಬುದನ್ನು ಮೊನ್ನೆ ನಡೆದಂತಹ ಚುನಾವಣೆಯನ್ನು ನೋಡಿದಂತಹ ರಾಜಕೀಯ ವಿಮರ್ಶಕಾರರು ಯಾರಾದರೂ ಕೂಡ ಅರ್ಥಮಾಡಿಕೊಳ್ಳಬಹುದು. ಕಾಂಗ್ರೆಸ್‌ನವರು ಹೇಳುತ್ತಾ ಇದ್ದರು ಮೊನೋಲಿಥಿಕ್ ರಾಕ್ ಇದ್ದಹಾಗೆ ಇದ್ದೇವೆ ಅಂತ. ಯಾವುದೇ ಒಂದು ಪಕ್ಷ ರಾಜ್ಯವನ್ನು ಆಳುತ್ತಾ ಇದ್ದರೂ ಅದು ಭದ್ರವಾದ ಒಂದು ಪಕ್ಷವಾಗಬೇಕು. ಆಗಲೇ ಆ ಸರ್ಕಾರಕ್ಕೆ ರಾಜ್ಯವನ್ನು ಆಳತಕ್ಕ ಸಾಮರ್ಥ್ಯ ಬರುತ್ತದೆ. ಆಗಲೇ ಪ್ರಜಾಪ್ರಭುತ್ವ ಯಶಸ್ವಿಯಾಗಬೇಕಾದರೆ. ಆದರೆ ತಮ್ಮ ಈ ಅಧಿಕಾರಿದಿಂದಾಗಿ ಜನತೆಗೆ, ರಾಷ್ಟ್ರಕ್ಕೆ ಇವತ್ತಿನ ದಿವಸ ಏನಾಗಿದೆ ? ದೇಶಕ್ಕೆ ಮುನ್‌ಸೂಚಕವಾಗಿ ನಮ್ಮ ಈ ರಾಜ್ಯದಲ್ಲಿ ಮುಂದೆ ಎಂತಹ ಒಂದು ಪರಿಸ್ಥಿತಿ ಬರಬಹುದು ಎಂಬ ಸೂಚನೆಯನ್ನೂ ಕೂಡ ಈ ಸರ್ಕಾರ ಕೊಟ್ಟಿದೆ. ಈ ಒಂದು ಸೂಚನೆಯಿಂದ ನಿಮ್ಮ ತಪ್ಪನ್ನು ಹೊರಗೆಡವತಕ್ಕ ಪರಿಸ್ಥಿತಿ ಇವತ್ತು ಉಂಟಾಗಿದೆ. ಬೇರೆ ಪಕ್ಷಗಳೂ ಇವೆ, ಯಾವ ಪಕ್ಷದಲ್ಲೂ ಕ್ರಾಸ್ ಓಟಿಂಗ್ ಇಲ್ಲ ಅಂತ ಅನ್ನುವುದಕ್ಕೆ ನಾನು ತಯಾರಾಗಿಲ್ಲ. ಆಡಳಿತ ಪಕ್ಷ ಇವತ್ತು ತನ್ನ ಒಂದು ಸಾಮರ್ಥ್ಯವನ್ನು ಕಳೆದುಕೊಂಡಿದೆ. ಪ್ರಜಾಪ್ರಭುತ್ವದ ತಳಹದಿಗೇ ಧಕ್ಕೆ ಬರತಕ್ಕ ನೀತಿಯನ್ನು ಆಡಳಿತ ಪಕ್ಷ 22 ವರ್ಷಗಳಿಂದಲೂ ಮಾಡಿಕೊಂಡು ಬಂದಿದೆ. ಇವತ್ತೂ ಕೂಡ ಮಾಡುತ್ತಾ ಇದೆ. ಪ್ರಜಾಪ್ರಭುತ್ವ ಇದಕ್ಕೆ ಬಲಿಯಾಗಬೇಕಾಗಿದೆ. ಇವತ್ತು ಪ್ರಜಾಪ್ರಭುತ್ವದ ಕೊಲೆ ಆಡಳಿತ ಪಕ್ಷದಿಂದಲೇ ಈ ರಾಜ್ಯದಲ್ಲಿ ಮತ್ತು ಈ ರಾಷ್ಟ್ರದಲ್ಲಿ ಆಗಿದೆ ಎಂಬ ಅಪಾದನೆಗೆ ನೀವು ಒಳಗಾಗಿದ್ದೀರಿ. ಇದರಿಂದಾಗಿ ಇವತ್ತು ರಾಜ್ಯದಲ್ಲಿ ನೆಮ್ಮದಿ ಇಲ್ಲ. ಏಕಪಕ್ಷೀಯವಾದ ಸರ್ಕಾರ ಇನ್ನೂ ರಾಜ್ಯವನ್ನು ಆಳುವುದಕ್ಕೆ ಸಾಧ್ಯವಿಲ್ಲ ಎಂಬ ಮಟ್ಟಕ್ಕೆ ಈ ರಾಜ್ಯದಲ್ಲಿ ಬಂದಿದೆ, ಮತ್ತು ಅದು ರಾಷ್ಟ್ರದ ಮಟ್ಟದಲ್ಲೂ ಕೂಡ ಬಂದಿದೆ. ಸಮಾಜವಾದದಲ್ಲಿ ನಂಬಿಕೆ ಇರತಕ್ಕ, ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರತಕ್ಕ ಎಲ್ಲಾ ಪಕ್ಷಗಳೂ ಒಂದುಗೂಡಿ ಈ ರಾಷ್ಟ್ರದಲ್ಲಿ ಕಾಂಗ್ರೆಸ್ ಪಕ್ಷದ ಆಡಳಿತಕ್ಕೆ ಸನ್ನಿಹಿತವಾಗಿರತಕ್ಕ ವಿಪತ್ತನ್ನು ದೂರ ಮಾಡಲು ಪ್ರೇರೇಪಿತರಾಗಿ ಈ ರಾಷ್ಟ್ರವನ್ನು ಕಾಪಾಡಬೇಕೆನ್ನುವ ಮಟ್ಟಕ್ಕೆ ಬಂದಿದೆ. ಅದೇ ರೀತಿ ಈ ರಾಜ್ಯದಲ್ಲೂ ಕೂಡ ಆಗಬೇಕಾಗುತ್ತದೆ ಅಂತಹ ಸಂದರ್ಭದಲ್ಲಿ ಈ ಸರ್ಕಾರ ರಾಜೀನಾಮೆ ಕೊಟ್ಟು ಹೋಗಬೇಕು ಎಂದು ಹೇಳಿ ಈ ಹಣಕಾಸಿನ ವಿಧೇಯಕವನ್ನು ವಿರೋಧ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎನ್. ಹುಚ್ಚಮಾಸ್ತಿಗೌಡ (ಹುಲಿಯೂರುದುರ್ಗ).—ಸನ್ಮಾನ್ಯ ಅಧ್ಯಕ್ಷರೇ, ಭೂಕಂದಾಯದ ವಿಷಯದಲ್ಲಿ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ತಮ್ಮ ಅಪ್ಪಣೆ ಬೇಡುತ್ತೇನೆ. ಈ ಭೂಕಂದಾಯದ ಪದ್ಧತಿ ಬಹಳ ಆರ್ಷೆಯವಾಗಿದ್ದರೂ ಕೂಡ, ಬಹಳ ಕಾಲದಿಂದ ಬಂದದ್ದು ಆಗಿದ್ದರೂ ಕೂಡ, ಆಗ ಆಡಳಿತ ನಡೆಸುತ್ತಾ ಇದ್ದಂಥವರು ಸುಲಭವಾಗಿ ರೈತರಿಂದ ಒಂದು ತೆರಿಗೆಯನ್ನು ಪಡೆಯುವುದಕ್ಕೆ ಇದು ಹಾಕಿದ್ದಂಥ ಮಾರ್ಗವೇ ಹೊರತು ಶಾಸ್ತ್ರೀಯವಾದ ಮಾರ್ಗವಲ್ಲ. ಯಾರಿಗೆ ಎಷ್ಟು ಭೂಮಿ ಇದೆ, ಎಕರೆವಾರು ಇಷ್ಟು ಕೊಡಿ ಅಂತ ಸುಲಭದಲ್ಲಿ ವಸೂಲು ಮಾಡುವುದಕ್ಕೆ ಇದ್ದಂಥ ಪದ್ಧತಿ, ಇದರಲ್ಲಿ ಯಾರಿಗೆ ಎಷ್ಟು ವರಮಾನ ಬರುತ್ತದೆ ಅದಕ್ಕೆ ತಕ್ಕ ಹಾಗೆ ಸರ್ಕಾರಕ್ಕೆ ಎಷ್ಟು ಕೊಡಬೇಕೆನ್ನುವ ಪದ್ಧತಿ ಆಗಿನ ಕಾಲದಲ್ಲಿ ಇರಲಿಲ್ಲ. ಈಗ ಪ್ರಪಂಚದ ಯಾವ ರಾಷ್ಟ್ರ ತೆಗೆದುಕೊಂಡರೂ ಕೂಡ ಕಂದಾಯದ ಪದ್ಧತಿ ಹಳೆಯದಾದಂತಹ ಕ್ರಮದಲ್ಲೇ ನಡೆಯುತ್ತಾ ಇದೆ. ಮೈಸೂರು ರಾಜ್ಯವಾಗಲಿ, ಇಂಡಿಯಾದೇಶದ ಇತರ ಯಾವುದೇ ರಾಜ್ಯಗಳಲ್ಲಾಗಲಿ ಹೊಸ ಪದ್ಧತಿಯನ್ನು ಯೋಜನೆ ಮಾಡುವುದಕ್ಕೆ ಇನ್ನೂ ಸಮರ್ಥವಾಗಿಲ್ಲ ಎಂದು ನಾನು ವ್ಯಸನದಿಂದ ಹೇಳಬೇಕಾಗುತ್ತದೆ. ಮೈಸೂರು ಸರ್ಕಾರದವರು ಈಗ 3–4 ವರ್ಷದಹಿಂದೆ ಈಗಿರತಕ್ಕ ಪದ್ಧತಿ

ಯನ್ನು ನಾವು ಬದಲಾವಣೆ ಮಾಡುತ್ತೇವೆಂದು ಚುನಾವಣೆಗೆ ಮುಂಚೆ ಹೇಳಿದ್ದರು. ಈ ಪದ್ಧತಿಯನ್ನು ಬದಲಾವಣೆ ಮಾಡಿ ವ್ಯವಸಾಯದ ಎಲ್ಲಾ ಉತ್ಪಾದನೆಯನ್ನೂ ಗಮನಕ್ಕೆ ತೆಗೆದುಕೊಂಡು ಅದರ ಮೇಲೆ ಆದಾಯ ತೆರಿಗೆ ಹಾಕುವಂತಹ ಕಾರ್ಯ ನಮ್ಮ ಆರ್ಥಿಕ ಮಂತ್ರಿಗಳು ಸ್ವಲ್ಪಮಟ್ಟಿಗೆ ಯೋಚನೆ ಮಾಡಿದರು, ಆದರೆ ಅವರ ಪ್ರಯತ್ನದಲ್ಲಿ ಇದಕ್ಕೆ ಯಶಸ್ಸು ದೊರಕಲಿಲ್ಲ, ಕಾರಣವೇನೆಂದರೆ ಇದು ಮೊನ್ನೆ ನಡೆದಂತಹ ವಿಷಯ, ಇದು ಹಿಂದಿನ ಚುನಾವಣೆಗೆ ಮುಂಚೆ ಆದದ್ದು ಅಲ್ಲ, ಇಲ್ಲಿರತಕ್ಕ ಒಂದು ದೋಷ ಏನೆಂದರೆ ಸ್ವಲ್ಪಮಟ್ಟಿಗೆ ಮಾನ್ಯ ಸಭೆಯಲ್ಲಿರತಕ್ಕ ಸದಸ್ಯರೂ ಇದು ತಮ್ಮ ಆತ್ಮ ಶೋಧನೆ ಮಾಡಿಕೊಳ್ಳತಕ್ಕ ಕಾಲ ಎಂದು ಭಾವಿಸುತ್ತೇನೆ, ಇಲ್ಲಿರತಕ್ಕ ಅರ್ಧಕ್ಕಿಂತ ಹೆಚ್ಚು ಭಾಗ ಸದಸ್ಯರು ಆದಾಯ ತೆರಿಗೆಯನ್ನು ಕೊಡುವುದಕ್ಕೆ ಸಮರ್ಥರಾಗಿರತಕ್ಕವರು ಮತ್ತು ಈ ಪದ್ಧತಿಯನ್ನು ಅನುಸರಿಸಿದರೆ ಆದಾಯ ತೆರಿಗೆ ಕೊಡಬೇಕಾಗಿ ಬರತಕ್ಕವರು. ಆದ್ದರಿಂದಲೇ ಲೆಕ್ಕಪತ್ರಗಳನ್ನು ಇಡುವುದರಲ್ಲಿ ದೋಷ ಇದೆ, ಇವೆಲ್ಲವುಗಳಿಂದ ಕಿರುಕುಳ ಆಗುತ್ತದೆ ಆದ್ದರಿಂದ ಈ ಪದ್ಧತಿ ಬೇಡ ಎಂದು ಹೇಳುವುದಕ್ಕೆ ಬದಲಾಗಿ ನಮ್ಮ ಮೇಲೆ ಮಾತ್ರ ಹೊರೆ ಬೀಳುತ್ತದೆ ಎಂಬ ಭಯ ಮಾನ್ಯ ಸದಸ್ಯರನೇಕರಿಗೆ ಇದೆ ಎಂದು ನಾನು ಸಂಶಯಪಡುತ್ತೇನೆ. ಆ ಭಯ ನಾವು ಇಟ್ಟುಕೊಳ್ಳದೇಹೋದರೆ ಮಾತ್ರ ನಮ್ಮ ರೈತರಿಗೆ ನ್ಯಾಯ ದೊರಕಿಸಿದ ಹಾಗಾಗುತ್ತದೆ. ಈಗಿರತಕ್ಕ ಭೂ ಕಂದಾಯದ ಪದ್ಧತಿಯನ್ನು ರದ್ದುಮಾಡಿ ವ್ಯವಸಾಯದ ಎಲ್ಲಾ ಉತ್ಪಾದನೆಯನ್ನೂ ಗಮನದಲ್ಲಿಟ್ಟುಕೊಂಡು ಆದಾಯ ತೆರಿಗೆ ಹಾಕುವುದು ಒಂದು ಶಾಸ್ತ್ರೀಯ ಮಾರ್ಗವೇ ಹೊರತು ಈಗಿರತಕ್ಕದ್ದು ಶಾಸ್ತ್ರೀಯ ಮಾರ್ಗವಲ್ಲ. ಈ ಪದ್ಧತಿ ರೈತನಿಗೆ ನ್ಯಾಯ ದೊರಕಿಸಿಕೊಡತಕ್ಕ ರೀತಿಯಲ್ಲಿ ಇಲ್ಲ. ಅನೇಕ ರೈತರು ಅರೆ ಹೊಟ್ಟೆಯಲ್ಲಿ ಇದ್ದಾರೆ. ಅವರ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸತಕ್ಕ ಶಕ್ತಿ ಅವರಿಗೆ ಇಲ್ಲ. ಅವರಿಗೆ ಮೂರು ತಿಂಗಳು ಜೀವನ ಮಾಡಲು ಬೇಕಾದಷ್ಟು ಬೆಳೆಯನ್ನು ಬೆಳೆಯುವ ಸ್ಥಿತಿಯಲ್ಲಿ ಇಲ್ಲ, ಅಂತಹವರು ಸರಕಾರಕ್ಕೆ ಕಂದಾಯ ಕೊಡುವ ಅವಶ್ಯಕತೆ ಏನಿದೆ. ಬೇರೆ ಕ್ಷೇತ್ರದಲ್ಲಿ ಇರತಕ್ಕ ಜನ ವ್ಯಾಪಾರ ಕ್ಷೇತ್ರದಲ್ಲಿ ಆಗಲೀ, ಸರಕಾರಿ ನೌಕರಿಯಲ್ಲಿ ಆಗಲೀ ಇದ್ದರೆ ಅಥವಾ ಬೇರೆ ಯಾವ ಕ್ಷೇತ್ರವನ್ನು ತೆಗೆದುಕೊಂಡರೂ ಕೂಡ ಒಂದು ಪ್ರಮಾಣದವರೆಗೆ ಸರಕಾರಕ್ಕೆ ತೆರಿಗೆ ಕೊಡಬೇಕಾದದ್ದು ಇಲ್ಲ. ಅದರೆ ವ್ಯವಸಾಯ ಕ್ಷೇತ್ರದಲ್ಲಿ ಮಾತ್ರ ಜೀವನ ಮಾಡುವುದಕ್ಕೆ ಸಾಧ್ಯ ಇರಲಿ ಇಲ್ಲದೆ ಇರಲಿ ತೆರಿಗೆ ಕೊಡಬೇಕು. ಇದು ಸಮಾಜವಾದ ನೀತಿಗೆ ವಿರೋಧವಾದದ್ದು. ಇದನ್ನು ಸರಕಾರ ಗಮನದಲ್ಲಿ ಇಟ್ಟುಕೊಳ್ಳಬೇಕು. ಆಗಿಂದಾಗ್ಗೆ ಸಮಾಜವಾದದ ಬಗ್ಗೆ ಹೇಳತಕ್ಕ ಅರ್ಥಮಂತ್ರಿಗಳಾಗಲಿ, ಸರಕಾರವಾಗಲಿ ಈ ಕಡೆ ದಾರಿ ಮಾಡದೆಹೋದರೆ ಸಮಾಜವಾದವನ್ನು ಪ್ರತಿಪಾದಿಸುವುದಕ್ಕೆ ಹಕ್ಕು ಇಲ್ಲ ಎಂದು ಭಾವಿಸುತ್ತೇನೆ. ಆದುದರಿಂದ ಕಂದಾಯ ಪದ್ಧತಿಯನ್ನು ಕೂಡಲೇ ರದ್ದು ಮಾಡಬೇಕು. ಒಂದು ಪಕ್ಷ ಈ ಕಂದಾಯ ಪೂರ್ತಿ ವಜಾ ಮಾಡಿ ಆದಾಯ ತೆರಿಗೆ ಹಾಕುವುದಕ್ಕೆ ಇಷ್ಟ ಪಡದೆ ಹೋದರೆ ಕಡೆಯ ಪಕ್ಷ ಯಾವುದಾದರೂ ಒಂದು ಮಿತಿಯನ್ನಾದರೂ ಕೂಡ ಗೊತ್ತು ಮಾಡಿ. ಈ ಮಿತಿಯಿಂದ ಕೆಳಗೆ ಇರತಕ್ಕ ಹಿಡುವಳಿದಾರರ ಮೇಲೆ ಹಾಕತಕ್ಕ ಕಂದಾಯ ಪೂರ್ತಿ ತೆಗೆದುಹಾಕಬೇಕು. ಈ ಪದ್ಧತಿಯನ್ನು ಮಾಡದೆ ಹೋದರೆ ನಾವು ರೈತನ ಜೀವನದ ಮೇಲೆ ಸರಸ ಆಡಿದಹಾಗಾಗುತ್ತದೆ. ಮತ್ತು ರೈತನ ಕಷ್ಟವನ್ನು ತಪ್ಪಿಸುವುದಕ್ಕೆ ಸರ್ಕಾರಕ್ಕೆ ಇಷ್ಟ ಇಲ್ಲಎಂದು ರುಜುವಾತುಮಾಡಿದಹಾಗಾಗುತ್ತದೆ ಎಂದು ಹೇಳಲು ಇಷ್ಟಪಡುತ್ತೇನೆ.

ಇನ್ನು ನೀರಿನ ತೆರಿಗೆಯನ್ನುಹಾಕಿದ್ದಾರೆ. ನೀರಿನ ತೆರಿಗೆಬಗ್ಗೆ ನಮ್ಮೆಲ್ಲರ ಅಭಿಪ್ರಾಯ ಮತ್ತು ಆಡಳಿತ ಪಕ್ಷದಲ್ಲಿ ಇರತಕ್ಕ ಸದಸ್ಯರು ಅಭಿಪ್ರಾಯ ಏನಿದೆಯೆಂದರೆ ಬೆಳೆ ಎಲ್ಲಿ ಆಗುತ್ತದೆಯೋ ಆ ಬೆಳೆ ಮೇಲೆ ನೀರಿನ ತೆರಿಗೆಯನ್ನು ಹಾಕಬೇಕು ಎಂಬುದು. ಆದರೆ ಬೆಳೆ ಆಗಲಿ, ಆಗದೆ ಇರಲಿ 1965 ರಿಂದ ನೀರಿನ ತೆರಿಗೆಯನ್ನು ಹಾಕಿದ್ದಾರೆ. ನೀರಿನ ತೆರಿಗೆ ಹಾಕಿರುವ ಬಗ್ಗೆ ಬೆಳೆ ಆಗಿದೆಯೋ ಇಲ್ಲವೇ ಎನ್ನುವುದಕ್ಕೆ ಲೆಕ್ಕಪತ್ರಗಳನ್ನು ಶಾನುಭೋಗರು ಇಟ್ಟಿಲ್ಲ. ಕ್ರಾಪ್ ಕಟಿಂಗ್ ಎಕ್ಸ್‌ಪೆರಿಮೆಂಟ್ ಮೇಲೆ ಯಾವುದು ಮಾಡದೆ 1965ನೇ ಇಸವಿಯಿಂದ ನೀರಿನ ತೆರಿಗೆಯನ್ನು ಕೊಡಬೇಕೆಂದು ಆ ಬಗ್ಗೆ ವಸೂಲಿ ಕ್ರಮವನ್ನು ಕೈಕೊಂಡಿದ್ದಾರೆ. ಅದರಿಂದ ರೈತರಿಗೆ ಬಹಳ ಹಿಂಸೆ ಆಗುತ್ತಾ ಇದೆ. ನೀರಿನ ತೆರಿಗೆ ಮೇಲೆ ಸೆಸ್ ಹಾಕುವುದಿಲ್ಲ ಎಂದು ಸ್ಪಷ್ಟವಾಗಿ ಈ ಸಭೆಯಲ್ಲಿ ಹೇಳಿದ್ದರೂ ಸೆಸ್ಸನ್ನು ವಸೂಲುಮಾಡುತ್ತಿದ್ದಾರೆ. ನಮ್ಮ ರೆವಿನ್ಯೂ ಮಂತ್ರಿಗಳು ಬೆಳೆ ಆಗಿದೆ, ಇಲ್ಲ ಎನ್ನುವುದಕ್ಕೆ ರೆವಿನ್ಯೂ ಸೂಪರ್‌ವಿಜನ್ ಆಫೀಸರು ಮತ್ತು ಅಸಿಸ್ಟೆಂಟ್ ಇಂಜನೀಯರುಗಳನ್ನು ಸ್ಥಳಕ್ಕೆ ಕಳುಹಿಸಿ ಅವರಿಂದ ವಿಚಾರಣೆಮಾಡಿ ಬೆಳೆ ಆಗಿಲ್ಲಎಂದರೆ ತೆರಿಗೆ ಬಿಡುವಹಾಗೆ ಸೂಚನೆ ಕೊಟ್ಟಿದ್ದೇವೆ ಎಂದು ಹೇಳಿದ್ದರು. ಇನ್ನೊಂದು ಕಡೆ ಹೇಳುತ್ತಾರೆ ನೀವು ಅಪೀಲ್ ಮಾಡಿಕೊಳ್ಳಿ ಎಂದು. ಇನ್ನೊಂದು ಕಡೆ ಹೇಳುತ್ತಾರೆ ಅಧಿಕಾರಿಗಳು ವಸೂಲಿ ಮಾಡುವುದನ್ನು ನಿಲ್ಲಿಸಲಿ ಎಂದು ಹೀಗಾಗಿ ರೈತರಿಗೆ ಬಹಳ ವಿಧದಿಂದ ತೊಂದರೆ ಆಗಿದೆ. ಅಭಾವ ಪ್ರದೇಶದಲ್ಲಿ ಕೂಡ ನಾಲ್ಕು ವರ್ಷಗಳಿಂದ ವಸೂಲು ಮಾಡುತ್ತಿದ್ದಾರೆ. ಈಗ ಇರುವ ನೀರಿನ ತೆರಿಗೆಯನ್ನು ರದ್ದುಮಾಡಬೇಕೆಂದು ಹೇಳಲು ಇಷ್ಟಪಡುತ್ತೇನೆ. ರೈತರ

(ಶ್ರೀ ಎನ್. ಹುಚ್ಚಮಾಸ್ತಿಗೌಡ)

ತೊಂದರೆಗಳನ್ನು ಸರಕಾರ ಗಮನಿಸಿ ಅರ್ಥ ಮಂತ್ರಿಗಳು ಅವರ ಭಾಷಣದಲ್ಲಿ ಒಂದು ಮಾತು ಹೇಳಿದ್ದರು. ಏನೆಂದರೆ ಕೃಷಿ ವ್ಯವಸಾಯವು ವಾಣಿಜ್ಯ ತಳಹದಿಮೇಲೆ ಹೆಚ್ಚು ಹೆಚ್ಚು ವೈವಿಧ್ಯದೊಂದಿಗೆ ಸಾಗುತ್ತದೆ. ನಾವೀಗ ರೈತನ ಉತ್ಸಾಹ ಕಡಿಮೆಯಾಗದಂತೆ, ಮಾರುಕಟ್ಟೆಯ ಏರುಪೇರುಗಳಿಂದ ಆತನನ್ನು ರಕ್ಷಿಸಬೇಕು ಸಾಕಷ್ಟು ಒಳ್ಳೆಯ ಬೆಲೆ ದೊರೆಯುವ ಭರವಸೆ ನೀಡಬೇಕು ಎಂಬುದಾಗಿ ತತ್ವ ನಿರೂಪಣೆ ಮಾಡಿದ್ದಾರೆಯೇ ಹೊರತು ಅದಕ್ಕೆ ತಕ್ಕಂಥ ಕಾರ್ಯಕ್ರಮ ಕೈಗೊಂಡಿಲ್ಲ. ರೈತ ಬೆಳೆಯತಕ್ಕ ಪ್ರತಿಯೊಂದು ಉತ್ಪತ್ತಿ ಮೇಲೆ ಖರ್ಚು ಎಷ್ಟು, ಲಾಭ ಎಷ್ಟು ಎಂಬುದಾಗಿ ಪ್ರತಿಯೊಂದಕ್ಕೂ ಬೆಲೆ ನಿಗದಿ ಮಾಡಿ ಸರಿಯಾದ ಬೆಲೆ ದೊರಕುವ ಹಾಗೆ ಸರ್ಕಾರ ರೈತರಿಗೆ ಗ್ಯಾರಂಟಿ ಕೊಡಬೇಕು. ಹಾಗೆ ಮಾಡದೆಹೋದರೆ ರೈತ ಉಳಿಯುವಹಾಗಿಲ್ಲ. ಕಬ್ಬು ಬೆಳೆದು ಮಾರಾಟ ಮಾಡತಕ್ಕ ರೈತ ಸಂಪೂರ್ಣವಾಗಿ ಹಾಳಾಗಿಹೋಗಿದ್ದಾನೆ. ವ್ಯವಸಾಯದ ಖರ್ಚು ಕೂಡ ಹುಟ್ಟುವುದಿಲ್ಲ, ಅಂತಹ ಸ್ಥಿತಿ ಬಂದಿದೆ. ಸರಕಾರದವರು ಕಾರ್ಯಕ್ರಮಗಳನ್ನು ತೆಗೆದುಕೊಳ್ಳದೆ ಹೋದರೆ ಖಂಡಿತ ರೈತರನ್ನು ಉದ್ಧಾರಮಾಡುವುದಕ್ಕೆ ಸಾಧ್ಯವಿಲ್ಲ. ಕಂದಾಯ ವಸೂಲು ಮಾಡುವುದಕ್ಕೆ ಮುಂಚಿತವಾಗಿ ರೈತರು ಬಾಕಿ ಕೊಡಬೇಕಾದದ್ದು ಎಷ್ಟು, ವಸೂಲು ಆಗಿರುವುದು ಎಷ್ಟು, ಎಂಬ ವಿವರಗಳನ್ನು ಒಳಗೊಂಡ ಪಟ್ಟಾವನ್ನು ತಯಾರು ಮಾಡಿ ಪ್ರತಿಯೊಬ್ಬ ರೈತನಿಗೂ ಕೊಡುತ್ತೇವೆ ಎಂದು ಭರವಸೆ ಕೊಟ್ಟರು. ಮಹಾತ್ಮಗಾಂಧಿ ಜನ್ಮ ಶತಾಬ್ದಿ ವರ್ಷದಲ್ಲಿ ಈ ಒಂದು ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳಿ ಸರಕಾರ ಕೆಲವು ಕಡೆ ಪಟ್ಟಾಗಳನ್ನು ಹಂಚಿದ್ದಾರೆ. ಆದರೆ ಆ ಪಟ್ಟಾಗಳಲ್ಲಿ ಯಾವುದೂ ನಮೂದು ಮಾಡಿಲ್ಲ. ಈಗಲಾದರೂ ಕೂಡ ಎಲ್ಲಾ ಪಟ್ಟಾಗಳನ್ನು ಭರ್ತಿಮಾಡಿ ಯಾರುಯಾರು ಎಷ್ಟು ಬಾಕಿ ಕೊಡಬೇಕು, ಕೊಟ್ಟಿರುವುದು ಎಷ್ಟು ಎಂದು ಲೆಕ್ಕ ಪೂರ್ಣವಾಗಿ ಕೊಟ್ಟ ಮೇಲೆ ಕಂದಾಯ ಸರಕಾರಕ್ಕೆ ಕೊಡಬೇಕು ಎಂದು ಹೇಳುವುದು ಅಗತ್ಯವಾಗಿದೆ. ನೀರಿನ ತೆರಿಗೆಯಾಗಲಿ, ಕ್ಷಾಮ ಕಾಲದಲ್ಲಿ ಕಂದಾಯ ರದ್ದು ಮಾಡುವ ವಿಷಯವಾಗಲಿ, ಪಟ್ಟಾಗಳನ್ನು ಬರೆದುಕೊಡುವುದಾಗಲಿ, ಬೆಲೆ ನಿಗದಿ ಮಾಡುವುದಾಗಲಿ ಇದಕ್ಕೆ ತಕ್ಕಂಥ ಕಾರ್ಯಕ್ರಮ ಕೈಕೊಳ್ಳದೆ ಇರತಕ್ಕ ಕಾಲದಲ್ಲಿ ಅರ್ಥಿಕ ಮಂತ್ರಿಗಳು ಇಟ್ಟಿರತಕ್ಕ ಮುಂಗಡ ಪತ್ರಕ್ಕೆ ಮೂರು ಕಾಸಿನ ಕಿಮ್ಮತ್ತು ಕೊಡಬೇಕಾಗಿಲ್ಲ ಎಂದು ಕಡ್ಡಾಯವಾಗಿ ಹೇಳಲು ಇಷ್ಟ ಪಡುತ್ತೇನೆ. ಒಂದು ಪಕ್ಷಕ್ಕೆ ಎಲ್ಲ ಬೆಳಗೆ ನೀರಿನ ತೆರಿಗೆಯನ್ನು ವಸೂಲುಮಾಡುವ ಕ್ರಮವನ್ನು ಮುಂದುವರಿಸುತ್ತಾರೋ ಅಲ್ಲಿ ಚಳುವಳಿಮಾಡಿ ಜನಗಳಿಗೂ ಕೊಡಬೇಡಿ ಎಂದು ಹೇಳಿ ಸರಕಾರಕ್ಕೆ ವಿರುದ್ಧ ದಂಗೆ ಏಳುವಹಾಗೆ ಮಾಡುವುದು ಅಗತ್ಯವಾಗಿದೆ. ನಮ್ಮ ಸ್ನೇಹಿತರಾದವರು ರೈತರ ಪರವಾಗಿ ಪ್ರತಿನಿಧಿಸಿ ಕೆಲಸಮಾಡುವುದು ಇದ್ದರೆ ತಾವು ಈ ಕೆಲಸಮಾಡಬೇಕೆಂದು ಸೂಚನೆಕೊಡುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಆಡಿಟ್ ರಿಪೋರ್ಟ್ ಬಗ್ಗೆ ಹೇಳುತ್ತೇನೆ. ಸರಕಾರ ಒದಗಿಸಿರತಕ್ಕ ಆಡಿಟ್ ರಿಪೋರ್ಟ್ (ಕಮರ್ಷಿಯಲ್) 1970 ನನ್ನ ಹತ್ತಿರ ಇದೆ. ಅದರಲ್ಲೂ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ಕಷ್ಟ ಪಟ್ಟು ಎಲ್ಲೆಲ್ಲಿ ದೋಷಗಳು ಇವೆ, ಎಲ್ಲಿ ನಷ್ಟವಾಗಿದೆ, ಹೇಗೆ ನಷ್ಟವಾಗಿದೆ ಎನ್ನುವುದನ್ನು ಸುಲಭವಾಗಿ ಪ್ರಸ್ತಾಪಮಾಡಬಹುದಾಗಿತ್ತು. ಇಂತಹ ವಿಷಯಗಳನ್ನು ಇಲ್ಲ ಪ್ರಸ್ತಾಪಮಾಡಿದ್ದಾರೆ. ಆದರೆ ಈ ಆಡಿಟ್ ರಿಪೋರ್ಟಿಗೆ ಬೆಲೆ ಏನಿದೆ ? ಎಲ್ಲಿ ದೋಷ ಇದೆ ಎನ್ನುವುದನ್ನು ಅವರು ಹೇಳಿದ್ದರೆ, ಅದನ್ನು ಸರಿಪಡಿಸುವುದಕ್ಕೆ ಒಂದು ಪ್ರಯತ್ನವೂ ನಡೆಯುತ್ತಿಲ್ಲ, ಭದ್ರಾವತಿ ಐರನ್ ವರ್ಕ್ಸ್‌ಗೆ ಸಂಬಂಧಪಟ್ಟಹಾಗೆ ಇದರಲ್ಲಿ ಬಹಳ ಹೇಳಿದ್ದಾರೆ. ಅದರಲ್ಲಿ ಒಂದು ವಿಷಯವನ್ನು ಮಾತ್ರ ನಾನು ಪ್ರಸ್ತಾಪಮಾಡುವುದಕ್ಕೆ ಇಷ್ಟಪಡುತ್ತೇನೆ ; ಸೇಲ್ ಆಫ಼್ ಸ್ಪೆಷಲ್ ಸ್ಟೀಲ್ ಕನ್‌ಸೆಷನ್ ರೇಟ್ಸ್ ಬಗ್ಗೆ ನಾನು ಹಿಂದೆ ಒಂದು ದಿವಸ ಮಾತನಾಡುವಾಗ ಮುಖ್ಯ ಮಂತ್ರಿಗಳ ಮೇಲೆ ನೇರವಾಗಿ ಅಪಾದನೆ ಮಾಡಿದ್ದೆ. ಅವರು ಭಾರತ ಪ್ರೋರ್ಜ ಕಂಪನಿಯಲ್ಲಿ ಅನಾವಶ್ಯಕವಾದ ಆಸಕ್ತಿಯನ್ನು ತೋರಿಸಿದ್ದಾರೆ ಎನ್ನುವ ಅನುಮಾನ ನನಗೆ ಇದೆ ಎಂದು ಹೇಳಿದ್ದೆ. ಅದಕ್ಕೆ ರುಜುವಾತು ಆಗುವಹಾಗೆ ಆಡಿಟ್ ರಿಪೋರ್ಟಿನಲ್ಲಿ ಇದೆ. 2 ಲಕ್ಷ 53 ಸಾವಿರ ರೂಪಾಯಿ ನಷ್ಟಮಾಡಿಕೊಂಡು ಅವರಿಗೆ ಕಬ್ಬಿಣ ಮತ್ತು ಉಕ್ಕನ್ನು ಕಡಿಮೆ ಬೆಲೆಗೆ ಒದಗಿಸಿಕೊಟ್ಟಿದ್ದಾರೆ. ಇದಕ್ಕೆ ಕಾರಣ ಏನು ? ಇದರಲ್ಲಿ, ಸ್ವಲ್ಪಮಟ್ಟಿಗೆ ನಿಜ ಇದೆ ಎಂದು ಹೇಳಲು ಒಂದು ಮಾತನ್ನು ಮಾತ್ರ ಆಡಿಟ್ ರಿಪೋರ್ಟ್‌ನಲ್ಲಿರುವುದನ್ನು ಓದುವುದಕ್ಕೆ ಇಷ್ಟಪಡುತ್ತೇನೆ.

" Sale of special steel at concessional rates :

The selling prices of special steel blooms and sections were reduced in December 1966 and July 1967. In respect of supplies of balance

quantities of steel relating to earlier orders of the same firm pending on these dates, the company agreed to the cancellation of orders and accepted fresh orders at the reduced rates. In respect of 984 tonnes so supplied on fresh orders, the loss of revenue amounted to Rs. 1.09 lakhs. ಈ ಪ್ರಕಾರ ಕೊಟ್ಟಂಥ ಆರ್ಡರನ್ನು ಬದಲಾಯಿಸಿ ಮತ್ತೆ ಕಡಿಮೆ ರೇಟಿಗೆ ಹೊಸ ಅಗ್ರಿಮೆಂಟ್ ಮಾಡಿಕೊಂಡು ಕಬ್ಬಿಣ ಒದಗಿಸಿದ್ದಾರೆ. ಇನ್ನೂ ಅನೇಕ ಬಾಬುಗಳು ಇವೆ. ಯಾತಕ್ಕೋಸ್ಕರ ಹೀಗೆ ಮಾಡಿದ್ದಾರೆ ! ಆ ಕಂಪನಿಯಲ್ಲಿ ಇರತಕ್ಕ ಮಾಲೀಕರು ಯಾರು ? ಅವರಿಗೂ ಸರಕಾರಕ್ಕೂ ಏನು ಸಂಬಂಧ ಇದೆ, ಇವನ್ನೆಲ್ಲಾ ನಾವು ಹೊಳಹೊಕ್ಕು ನೋಡಬೇಕಾದ ಅಗತ್ಯ ಇದೆ. ಇದನ್ನು ನೋಡಿದರೆ ನೇರವಾಗಿ ಸರಕಾರಕ್ಕೆ ಸಂಬಂಧ ಇದೆ, ಅದರಲ್ಲಿ ಆಸಕ್ತಿ ಇದೆ. ಮತ್ತು ಯಾತಕ್ಕೋಸ್ಕರ ಹೀಗೆ ಮಾಡಿದರು ಎಂದು ಗೊತ್ತಾಗುತ್ತದೆ. ಇಂತಹ ದೋಷವನ್ನು ತಪ್ಪಿಸುವುದಕ್ಕೆ ಸರಕಾರ ಏನು ಪ್ರಯತ್ನ ಮಾಡಿದೆ ? ಯಾತಕ್ಕೋಸ್ಕರ ಸರ್ಕಾರ ಇಷ್ಟೊಂದು ಆಸಕ್ತಿ ವಹಿಸಿದೆ ಎಂದು ನಾನು ಸಭೆಯಲ್ಲಿ ಹೇಳುವುದು ಅವಶ್ಯಕ ಅವರು ಏನು ಕಾರ್ಯಕ್ರಮವನ್ನು ಈ ಬಗ್ಗೆ ತೆಗೆದುಕೊಳ್ಳುತ್ತಾರೆ ? ಒಂದು ಪಕ್ಷ ಕಾರ್ಯಕ್ರಮ ತೆಗೆದುಕೊಳ್ಳದೆ ಹೋದರೆ ಮೇಲ್ವಿಚಾರಣೆ ನಡೆಸಿ ಅವರನ್ನು ಅಪಾದನೆಗೆ ಗುರಿ ಮಾಡಿ ದೋಷ ಎಸ್ಗಿದೆ ಎಂದು ರುಜುವಾತು ಮಾಡಬೇಕಾದುದು ಅಗತ್ಯ ಎಂದು ಭಾವಿಸುತ್ತೇನೆ.

ಸ್ವಾಮಿ, ಇನ್ನೊಂದು ವಿಷಯ ಮುಖ್ಯವಾಗಿದೆ. ಅದೇನೆಂದರೆ ವಿದ್ಯುಚ್ಛಕ್ತಿ ಬೋರ್ಡಿನವರು ಪಂಪುಸೆಟ್ಟುಗಳನ್ನು ಕೊಂಡು ರೈತರಿಗೆ ಒದಗಿಸುವ ಕ್ರಮವಿತ್ತು. ಈಗ ಅದನ್ನು ವ್ಯವಸಾಯದ ಇಲಾಖೆಗೆ ವಹಿಸಿದರು. ಹಾಗೆ ಮಾಡಿದಾಗ ಆ ಬೋರ್ಡಿನಲ್ಲಿ ಸುಮಾರು 279 ಪಂಪುಸೆಟ್ಟುಗಳಿದ್ದುವು. ಅವು ಮತ್ತು 1965ರಲ್ಲಿ ಕೊಂಡಿರುವುದು ಅಲ್ಲೇ ಇವೆ. ಅವುಗಳ ವಿತರಣೆ 65 ರಿಂದ ಆಗಿಲ್ಲ. ಸುಮಾರು 3 ಲಕ್ಷ ರೂಪಾಯಿ ಬೆಲೆಬಾಳುವ ಪಂಪುಸೆಟ್ಟುಗಳ ಅವಶ್ಯಕತೆ ರೈತರಿಗಿದೆ. ಇದನ್ನು ವ್ಯವಸಾಯ ಇಲಾಖೆ ಒದಗಿಸಬೇಕಾಗಿವೆ ಅಥವಾ ವಿದ್ಯುಚ್ಛಕ್ತಿ ಬೋರ್ಡು ಒದಗಿಸಬೇಕಾಗಿದೆ. ಆಡಿಟ್ ವರದಿಯಲ್ಲಿ ಎಷ್ಟು ಲೋಪದೋಷಗಳನ್ನು ಸೂಚಿಸಿದ್ದರೂ ಕೂಡ ಅವುಗಳ ಬಗ್ಗೆ ಸರ್ಕಾರ ಸೂಕ್ತ ಕ್ರಮ ಕೈಕೊಳ್ಳುವುದಿಲ್ಲ.

ಇನ್ನು ಸೊಸೈಟಿಗಳ ಬಗ್ಗೆ ಕೂಡ ಆಡಿಟ್ ವರದಿಗಳಿವೆ, ಪ್ರೊವಿನ್ಷಿಯಲ್ ಮಾರ್ಕೆಂಟಿಂಗ್ ಸೊಸೈಟಿ ವರದಿ ಬಂದಿದೆ. ಎಷ್ಟೋ ಆಡಿಟ್ ವರದಿಗಳು ಬಂದರೂ, ಅದರಲ್ಲಿ ಎಷ್ಟೋ ಲೋಪದೋಷಗಳನ್ನು ಸೂಚಿಸಿದ್ದರೂ. ಸರಕಾರ ಕೋಟ್ಯಾಂತರ ರೂಪಾಯಿಗಳ ಬಂಡವಾಳ ಹಾಕಿದ್ದರೂ, ಆಡಿಟ್ ವರದಿಯಲ್ಲಿ ಲೋಪದೋಷಗಳೇನು ಸೂಚಿಸಲ್ಪಟ್ಟಿವೆ ಅವುಗಳಮೇಲೆ ಕ್ರಮ ತೆಗೆದುಕೊಳ್ಳುವುದಿಲ್ಲ. ಕಾರಣವೇನೆಂದರೆ ಅವರಿಗೆ ಬೇಕಾದವರು ಅಲ್ಲಿರುವುದು. ಅವರಮೇಲೆ ಅಪಾದನೆಗಳು ಬಂದಾಗ ಕೂಡ ಕ್ರಮ ತೆಗೆದುಕೊಳ್ಳುವುದಿಲ್ಲ. ಕ್ರಮ ತೆಗೆದುಕೊಂಡರೆ ತಮ್ಮ ಅಧಿಕಾರಕ್ಕೆ ಚ್ಯುತಿ ಬರಬಹುದು ಎಂದು ಸರಕಾರ ತಮ್ಮವರಮೇಲೆ ಕ್ರಮ ತೆಗೆದುಕೊಳ್ಳುವುದಿಲ್ಲ. ಇದರಿಂದ ಲಕ್ಷಗಟ್ಟಲೆ ಕೋಟಿಗಟ್ಟಲೆ ರಾಜ್ಯದ ಹಣ ಪೋಲಾಗುತ್ತಿದೆ, ಜನರಿಗೆ ಸಿಕ್ಕಬೇಕಾದ ಸೌಲಭ್ಯ ಸಿಕ್ಕಿಲ್ಲ. ಈಬಗ್ಗೆ ಅನೇಕ ಉದಾಹರಣೆಗಳಿವೆ, ಅದನ್ನು ಈಗ ಹೇಳುವುದಿಲ್ಲ. ಇರುವ ಲೋಪದೋಷ ಸ್ಪಷ್ಟವಾಗಿದ್ದರೂ ಅದು ರುಜುವಾತಾಗಿದ್ದರೂ ಸರ್ಕಾರ ಕ್ರಮ ತೆಗೆದುಕೊಳ್ಳುತ್ತಿಲ್ಲ, ಇದು ಅಕ್ಷಮ್ಯ ಅಪರಾಧ ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

ಇನ್ನು ಜನರಿಗೆ ಪ್ರಾಮಾಣಿಕವಾದ ಮತ್ತು ದಕ್ಷವಾದ ಆಡಳಿತ ಒದಗಿಸುವುದು ನಮ್ಮ ಮುಖ್ಯ ಧ್ಯೇಯ ನೀತಿ ಎಂದು ನಮ್ಮ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಆಡಿಟ್ ವರದಿಯಲ್ಲಿ ಇಂಥ ದೋಷವಿದೆ ಎಂದು ಹೇಳಿದ್ದರೂ ಅದರ ಬಗ್ಗೆ ಕ್ರಮ ತೆಗೆದುಕೊಳ್ಳದಿದ್ದರೆ ದಕ್ಷ ಆಡಳಿತ ಎಲ್ಲಿ ಬರುವುದು ? ಸುಮ್ಮನೆ ನೀತಿ ನಿರೂಪಮಾಡಿದರೆ ಸಾಲದು, ಅದನ್ನು ಕಾರ್ಯರೂಪಕ್ಕೆ ತರಬೇಕು. ಹಾಗೆ ತರದಿರುವಾಗ, ದೋಷಗಳನ್ನು ತಿದ್ದಿ ತಪ್ಪುಮಾಡಿದವರಮೇಲೆ ಆಡಿಟ್ ವರದಿಯಂತೆ ಕ್ರಮ ತೆಗೆದುಕೊಳ್ಳದಿರುವಾಗ ದಕ್ಷ ಆಡಳಿತ ಒದಗಿಸುವರು ಎಂದು ನಿರೀಕ್ಷೆಮಾಡುವುದು ತಪ್ಪಾದೀತು. ಹೀಗಾದರೆ ಅವರು ಪ್ರಾಮಾಣಿಕವಾದ ಆಡಳಿತ, ದಕ್ಷ ಆಡಳಿತ ಒದಗಿಸುವುದಕ್ಕಾಗುವುದಿಲ್ಲ. ಇದಕ್ಕೆ ಅನೇಕ ಉದಾಹರಣೆಗಳಿರುವುವು.

ಇನ್ನು ಈ ರಾಜ್ಯದಲ್ಲಿ ಅನೇಕ ಸಂಸ್ಥೆಗಳಿವೆ; ಜಾತಿಯ ಹೆಸರನ್ನು ಹೇಳುವ ಸಂಸ್ಥೆಗಳಿವೆ, ಒಕ್ಕಲಿಗರ ವಿದ್ಯಾರ್ಥಿನಿಲಯ, ಕುರುಬರ ವಿಧ್ಯಾರ್ಥಿ ನಿಲಯ, ಲಿಂಗಾಯಿತರ ವಿದ್ಯಾರ್ಥಿ ನಿಲಯ, ಬ್ರಾಹ್ಮಣರ ವಿಧ್ಯಾರ್ಥಿ ನಿಲಯ ಎಂಬ ಅನೇಕ ಜಾತಿಯ ಹೆಸರನ್ನು ಹೇಳುವ ವಿದ್ಯಾರ್ಥಿ ನಿಲಯಗಳಿವೆ. ಇವುಗಳಿಗೆ ಹೆಚ್ಚು ಹಣ ಕೊಟ್ಟರೂ ನೆಪಮಾತ್ರಕ್ಕೆ ಒಬ್ಬಿಬ್ಬರನ್ನು ಇತರ ಜಾತಿಯವರನ್ನು ತೆಗೆದುಕೊಳ್ಳುವರು. ಇಂಥ ಸಂಸ್ಥೆಗಳಿಗೆ ಕಡ್ಡಾಯವಾಗಿ ಸರಕಾರ ಸಹಾಯಮಾಡುವುದನ್ನು

(ಶ್ರೀ ಎನ್. ಹುಚ್ಚಮಾಸ್ತಿಗೌಡ)

ನಿಲ್ಲಿಸಬೇಕು. ಹಾಗೆ ಮಾಡಿದ ಹೊರತು ನಮ್ಮದು ಜಾತ್ಯಾತೀತ ರಾಷ್ಟ್ರ ಎಂದು ಹೇಳುವುದಕ್ಕಾಗು ವುದಿಲ್ಲ. ಇಂದು ಜಾತೀಯ ಸಂಸ್ಥೆಗಳಿಗೆ ಪ್ರೋತ್ಸಾಹ ಕೊಡುತ್ತಿರುವುದು ಸ್ಪಷ್ಟವಾಗಿ ಕಾಣು ವುದು. ಈ ಪ್ರೋತ್ಸಾಹವನ್ನು ಕೂಡಲೇ ನಿಲ್ಲಿಸಬೇಕೆಂದು ಸೂಚಿಸಲು ಇಷ್ಟಪಡುತ್ತೇನೆ. ಈ ಬಗ್ಗೆ ನಮ್ಮ ಅರ್ಥಿಕ ಸಚಿವರು ತಮ್ಮ ಬಜೆಟ್ ಭಾಷಣದಲ್ಲಿ ಒಂದು ವಿಚಾರ ಹೇಳಿದ್ದಾರೆ. ಅದು ಈ ರೀತಿ ಇದೆ. "ಈ ವರ್ಗಗಳಿಗಾಗಿ ಕೈಕೊಂಡಿರುವ ಕಾರ್ಯಕ್ರಮಗಳ ಮುಖ್ಯ ಲಕ್ಷಣಗಳು ಉಲ್ಲೇಖನೀಯ ವಾಗಿವೆ. ಹಿಂದೆ ಜಾತಿ ಮತ ಪದ್ಧತಿಗಳಮೇಲೆ ಆರಂಭಿಸಲಾದ ಸರಕಾರಿ ವಿದ್ಯಾರ್ಥಿ ನಿಲಯಗಳು ಮತ್ತಿತ್ತರ ಸಂಸ್ಥೆಗಳಿಗೆ ಸಾರ್ವಜನಿಕ ಸ್ವರೂಪ ನೀಡಲಾಗಿದೆ." ಬರೀ ಸ್ವರೂಪ ನೀಡಲಾಗಿದೆಯೇ ಹೊರತು ಜಾತೀಯತೆಯ ದೋಷ ನಿವಾರಣೆಯಾಗಲು ಸಾಕಷ್ಟು ಕ್ರಮ ಕೈಕೊಂಡಿಲ್ಲ. ದೋಷ ಇನ್ನೂ ಇರುವುದರಿಂದ ಜಾತೀಯತೆ ಇನ್ನೂ ಮುಂದುವರೆಯುತ್ತಿದೆ. ಇಂಥ ಸಂಸ್ಥೆಗಳು ಇಂದು ಈ ರಾಜ್ಯದಲ್ಲಿವೆ. ಈ ಸಂಸ್ಥೆಗಳಿಗೆ ಸಹಾಯಮಾಡುವುದನ್ನು ನಿಲ್ಲಿಸಲು ಧೈರ್ಯಮಾಡಬೇಕು ಎಂದು ಸರ್ಕಾರಕ್ಕೆ ಸೂಚಿಸುತ್ತೇನೆ. ಮತ್ತು ಯಾವ ಯಾವ ಸಂಸ್ಥೆಗಳು ಜಾತಿಯ ಹೆಸರನ್ನು ಹೇಳುವುವು ಅವಕ್ಕೆ ಸರಕಾರ ಧನಸಹಾಯ ಅಥವ ಪ್ರೋತ್ಸಾಹ ನೀಡಬಾರದು ಎಂದು ಹೇಳಲಿಷ್ಟ ಪಡುತ್ತೇನೆ.

ಕೈಗಾರಿಕಗಳಲ್ಲಿ ನಮ್ಮ ರಾಜ್ಯದಲ್ಲಿ ಸಿಕ್ಕಾಪಟ್ಟೆ ಹಣ ಪೋಲಾಗುತ್ತಿದೆ. ಅದನ್ನು ತಪ್ಪಿಸುವು ದಕ್ಕೆ ಪ್ರಯತ್ನವೇನು ನಡೆದಿದೆ ? ಇಂಟರ್‌ನ್ಯಾಷನಲ್ ಸ್ಟೋರ್ಸ್ ಸಂಸ್ಥೆಯಲ್ಲಿ ಲಾಭ ಬರುವ ಹಾಗೆ ಮಾಡಿದ್ದೇವೆ ಎಂದು ಮೊನ್ನೆ ಹೇಳಿದರು. ಲಾಟರಿ ಟಿಕೆಟ್ಟುಗಳನ್ನು ಮಾರುವ ಜವಾಬ್ದಾರಿಯನ್ನು ಆ ಸಂಸ್ಥೆಗೆ ವಹಿಸಿ ಲಾಭ ಸಂಪಾದನೆಯಾಗಿದೆ ಎಂದು ಹೇಳುತ್ತಾರೆ. ಇದು ಆ ಸಂಸ್ಥೆಯ ನಿಜ ವಾದ ಕೆಲಸವಲ್ಲ. ಅದರ ಕಾರ್ಯವೇನು ಅದಕ್ಕೆ ಲಾಭವಿದೆಯೇ, ಇಲ್ಲವೇ ಎಂದು ಹೇಳುವ ಚೈತನ್ಯ ವಿಲ್ಲ. ಫಿರೇಚರಿನಲ್ಲಿ ನಷ್ಟವಾಗುವುದನ್ನು ಸ್ವಲ್ಪ ಮಟ್ಟಿಗೆ ತಪ್ಪಿಸಿದ್ದೇವೆಂದು ರಾಚಯ್ಯನವರು ಹೇಳಿದ್ದಾರೆ. ಕಾರಣ ಅದಕ್ಕೆ ಮಾರ್ಕೆಟ್ ಸಿಕ್ಕಿದೆ ಎಂಬುದು. ಆದರೆ ಉತ್ಪತ್ತಿಯ ಖರ್ಚನ್ನು ಕಡಮೆಮಾಡಲು ಪ್ರಯತ್ನಮಾಡಿಲ್ಲ. ಇತರರು ಕಡಮೆ ಖರ್ಚಿನಲ್ಲಿ ಉತ್ಪತ್ತಿ ಮಾಡುತ್ತಿಲ್ಲವೇ ? ಅವರು ಹಾಗೆ ಮಾಡುವುದಕ್ಕೆ ಕಾರಣವೇನು ? ಅದನ್ನು ನೋಡಿ ಉತ್ಪತ್ತಿ ಖರ್ಚನ್ನು ಕಡಮೆ ಮಾಡಲು ಯೋಚನೆಮಾಡಬೇಕೇ ಹೊರತು ಯಾವುದೋ ಕಾರಣ ಹೇಳಿದರೆ ಪ್ರಯೋಜನವಾಗುವು ದಿಲ್ಲ. ಇನ್ನು ಯಾವುದೇ ಸಾರ್ವಜನಿಕ ಕ್ಷೇತ್ರದಲ್ಲಿರುವ ಕೈಗಾರಿಕೆ ತೆಗೆದುಕೊಂಡರೂ ಲಾಭ ಬರುವುದಕ್ಕೆ ಸಾಧ್ಯವಾಗುತ್ತಿಲ್ಲ. ಏಕೆ ಅವು ಲಾಭದಾಯಕವಾಗಿಲ್ಲ ಅಂದರೆ ಅವುಗಳನ್ನು ನಡೆಸುವು ದರಲ್ಲಿ ಲೋಪದೋಷಗಳು ಬಹಳವಾಗಿವೆ. ಆಡಿಟ್ ವರದಿಗೆ ಬೆಲೆಯಿಲ್ಲ. ಪಿ.ಎ.ಸಿ.ಗೆ ನಮ್ಮ ಅಧ್ಯಕ್ಷರು ಹಿಂದೆ ಅಧ್ಯಕ್ಷರಾಗಿದ್ದರು, ಅವರು ಎಲ್ಲೆಲ್ಲಿ ಏನೇನು ಲೋಪದೋಷಗಳಿವೆ ಎಂಬುದನ್ನು ತೋರಿಸಿದ್ದಾರೆ. ಅವನ್ನು ನಿವಾರಣೆ ಮಾಡಲು ಸರ್ಕಾರ ಕ್ರಮ ತೆಗೆದುಕೊಳ್ಳುವುದಿಲ್ಲ. ಕ್ರಮ ತೆಗೆದುಕೊಳ್ಳಬೇಕಾದ್ದು ಮುಖ್ಯವಾದುದು. ಇರುವ ದೋಷಗಳನ್ನು ನಿವಾರಿಸಲು ಕ್ರಮ ತೆಗೆದು ಕೊಳ್ಳುವವರೆಗೂ ಸಾರ್ವಜನಿಕ ಕ್ಷೇತ್ರದಲ್ಲಿರುವ ಕೈಗಾರಿಕೆಗಳಲ್ಲಿ ಲಾಭ ಪಡೆಯುವುದಕ್ಕಾಗುವುದಿಲ್ಲ ಎಂದು ಹೇಳಬಹುದು.

ಇನ್ನೊಂದು ವಿಷಯವೆಂದರೆ, ಪ್ರತಿನಿತ್ಯ ಅಧಿಕಾರಿಗಳ ಆಡಳಿತದಲ್ಲಿ ಹಸ್ತಕ್ಷೇಪ ಮಾಡುವುದು ಕಂಡುಬರುತ್ತಿದೆ. ಆಡಳಿತ ಯಂತ್ರ ಬಹಳ ಸೂಕ್ಷ್ಮವಾದುದು. ರೂಲ್ ಆಫ್ ಲಾ ಎಂದು ಹೇಳುವಂತೆ ಕಾನೂನು ಪ್ರಕಾರ ಆಡಳಿತ ನಡೆಸಬೇಕು. ಆದರೆ ಹಾಗೆ ನಡೆಸುವುದಕ್ಕೆ ಅವಕಾಶ ಕೊಡುವುದಿಲ್ಲ. ಕಾನೂನು ಪ್ರಕಾರ ಕೆಲಸಮಾಡಬೇಕೆಂದಿರುವ ಅಧಿಕಾರಿಗಳಿಗೆ ಪ್ರೋತ್ಸಾಹವಿಲ್ಲ. ಅವರಿಗೆ ತೊಂದರೆಮಾಡಿ ಅವರು ಅಪ್ರಾಮಾಣಿಕರಾಗುವಹಾಗೆ ಮಾಡಿದ್ದಾರೆ. ಇದರಿಂದ ಅಧಿಕಾರಿ ಗಳು ಪ್ರಾಮಾಣಿಕರಾಗಿ ಕೆಲಸಮಾಡುವುದಕ್ಕೆ ಅವಕಾಶವಿಲ್ಲವಾಗಿದೆ. ಯಾವ ಅಧಿಕಾರಿಯೂ ಕೂಡ ಸ್ವತಂತ್ರವಾಗಿ ಕೆಲಸಮಾಡುವುದಕ್ಕೆ ಸಾಧ್ಯವಿಲ್ಲದಂಥ ಒಂದು ವಾತಾವರಣವಿದೆ, ಇದಕ್ಕೆ ಎಷ್ಟು ಉದಾಹರಣೆಗಳನ್ನು ಬೇಕಾದರೂ ಕೊಡಬಹುದು. ಸಣ್ಣಪುಟ್ಟ ಅಧಿಕಾರಿಗಳಿಗೆ ಕೂಡ ಅನೇಕವೇಳೆ ಫೋನ್‌ಮಾಡುವುದು, ತಮಗೆ ಬೇಕಾದಂತೆ ಮಾಡುವಂತೆ ಹೇಳುವುದು ನಡೆಯುತ್ತಿದೆ, ಪ್ರವಾಸ ಮಾಡಿದ್ದಾಗ ಇದೇ ಕೆಲಸ ನಡೆಯುವುದು, ಪ್ರವಾಸ ಹೋದಾಗ ಅಧಿಕಾರಿಗಳನ್ನು ಕರೆದು ವಿರೋಧ ವಾಗಿರುವವರು ಯಾರಿದ್ದಾರೆ, ಆಡಳಿತ ಪಕ್ಷಕ್ಕೆ ವಿರೋಧವಾಗಿರುವವರು ಅಥವಾ ಇತರರು ಆಗದವರು ಯಾರಿದ್ದಾರೆ, ಚುನಾವಣೆಯಲ್ಲಿ ವಿರೋಧಮಾಡಿದವರು ಯಾರಿದ್ದಾರೆ ಅವರಿಗೆ ಕೆಡಕು ಮಾಡಲು ಏನು ಬೇಕೋ ಅದನ್ನು ಮಾಡುವಂತೆ ಅಧಿಕಾರಿಗಳಿಗೆ ಹೇಳುವರು. ಹೀಗೆ ಆಡಳಿತ ಯಂತ್ರವನ್ನು ಹಾಳುಮಾಡುವುದು ದೊಡ್ಡ ಅಪರಾಧ. ಇದಕ್ಕಿಂತ ದೊಡ್ಡ ಅಪರಾಧ ಬೇರೆ ಇಲ್ಲ.

ಇಂದು ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿರಬಹುದು, ನಾಳೆ ಬೇರೆ ಪಕ್ಷ ಅಧಿಕಾರಕ್ಕೆ ಬರಬಹುದು, 1967ರ ಚುನಾವಣೆ ನೋಡಿದರೆ ನಮಗೆ ನಿಜ ಸಂಗತಿ ಸ್ಪಷ್ಟವಾಗುವುದು, ಕಾಂಗ್ರೆಸ್ ಪಕ್ಷವೇ ಖಾಯಮವಾಗಿ ಆಡಳಿತ ನಡೆಸಲು ಸಾಧ್ಯವಿಲ್ಲವೆಂಬುದು ವ್ಯಕ್ತವಾಗಿದೆ. ಹಾಗಿರುವಾಗ ಬಹಳ ಕಾಲದಿಂದ ಕೆಲಸಮಾಡುತ್ತಿರುವ ಆಡಳಿತ ಯಂತ್ರವನ್ನು ಹಾಳುಮಾಡುವ ಕೆಲಸಕ್ಕೆ ಯಾರೂ ಕೈಹಾಕಬಾರದು ಎಂದು ಸೂಚಿಸುತ್ತೇನೆ. ಒಂದು ಪಕ್ಷ ಈಗ ಮಾಡುವಂತೆ ಆಡಳಿತ ಯಂತ್ರವನ್ನು ಹಾಳುಮಾಡಿದರೆ ಮುಂದೆ ಒಳ್ಳೆಯ ಆಡಳಿತ ಸಿಕ್ಕುವುದಿಲ್ಲವೆಂದು ಹೇಳುತ್ತೇನೆ ಈಗ ಪ್ರಿಂಟಿಂಗ್ ಮಿಸ್ಟೇಕ್ಸ್ ಮುಂತಾದ್ದು ಎಷ್ಟೋ ನಡೆಯುತ್ತಿವೆ, ಯಾರು ಏನೇ ತಪ್ಪುಮಾಡಿದರೂ ಬಹುಮತದ ಬೆಂಬಲವಿದೆ, ಸಹಾಯಮಾಡುವವರು ಎಂಬ ಧೈರ್ಯ ತಪ್ಪುಮಾಡಿದವರಿಗಿದೆ. ಆಡಳಿತದಲ್ಲಿ ಕೆಲಸ ಮಾಡತಕ್ಕವರಿಗೆ, ತಪ್ಪು ಮಾಡಿದಾಗ ಸುಲಭವಲ್ಲಿ ತಪ್ಪಿಸಿಕೊಳ್ಳುತ್ತೇವೆ ಎನ್ನುವ ಧೈರ್ಯ ಬರಬಾರದು. ಸಣ್ಣ ತಪ್ಪು ಆದರೂ ಶಿಕ್ಷೆಗೊಳಪಡಿಸಬೇಕು. ಆಕ್ಷೇಪಣೆ ಬಾರದ ಹಾಗೆ ನೋಡಿಕೊಳ್ಳಬೇಕು. ಒಂದು ಸಲ ಆಕ್ಷೇಪಣೆ ಬಂದರೆ ಅದನ್ನು ಕಳೆದುಕೊಳ್ಳುವುದು ಕಷ್ಟ ಎನ್ನುವ ಹೆದರಿಕೆ ಮತ್ತು ಲೋಕಾಪವಾದಕ್ಕೆ ಹೆದರತಕ್ಕದ್ದು ಇರಬೇಕು. ಹಳ್ಳಿಗಾಡಿನಲ್ಲಾಗಲೀ ತಾಲ್ಲೂಕು ಮಟ್ಟದಲ್ಲಾಗಲೀ, ಜಿಲ್ಲೆಯ ಮಟ್ಟದಲ್ಲಾಗಲೀ ಆಡಳಿತ ಎಷ್ಟು ಸಡಿಲವಾಗಿದೆ ಎನ್ನುವುದನ್ನು ನಾವು ಪ್ರತ್ಯಕ್ಷವಾಗಿ ನೋಡಬಹುದು. ಈ ಕಡೆಗೆ ಸರ್ಕಾರದ ಲಕ್ಷ್ಯವಿಲ್ಲ.

9-30 A.M.

ಲಂಚದ ಆಪಾದನೆ ಬಹಳವಾಗಿದೆ. ಯಾವುದೊಂದು ಕೆಲಸವೂ ಲಂಚವಿಲ್ಲದೆ ನಡೆಯುವ ಹಾಗೆಯೇ ಇಲ್ಲ. ಹಳ್ಳಿಗಾಡಿನಲ್ಲಿ ಹೋದರೆ ಸಣ್ಣ ಪುಟ್ಟ ಕೆಲಸಗಳಿಗೆ ಕೂಡ ಲಂಚ ಕೊಡದೆ ಒಂದು ಕೆಲಸವೂ ಆಗುವುದಿಲ್ಲ. ಶಾಸನ ಸಭಾ ಸದಸ್ಯರು, ಅದರಲ್ಲಿಯೂ ಎದುರು ಪಕ್ಷದವರು ಹೇಳಿದರೆ ಆ ಕೆಲಸ ನಡೆಯುವ ಹಾಗೆಯೇ ಇಲ್ಲ. ಇದರ ಬಗ್ಗೆ ಅವರು ಪ್ರತಿಯೊಬ್ಬರಿಗೂ ತಿಳುವಳಿಕೆ ಕೊಟ್ಟಿದ್ದಾರೆಂದು ಕಾಣುತ್ತದೆ. ಎದುರು ಪಕ್ಷದ ಶಾಸನ ಸಭಾ ಸದಸ್ಯರು ಹೇಳಿದರೆ ಏನೂ ಗಮನ ಕೊಡಬೇಕಾದ್ದಿಲ್ಲ, ಅವರಿಗೆ ಟೂರ್ ಪ್ರೋಗ್ರಾಂ ಕಳುಹಿಸಬೇಕಾದ್ದಿಲ್ಲ, ಅವರು ಹೇಳುವ ಕೆಲಸ ಮಾಡಬೇಕಾದ್ದಿಲ್ಲ, ಅವರನ್ನು ಜೊತೆಯಲ್ಲಿ ಕರೆಸುಕೊಂಡು ಹೋಗಬೇಕಾದ್ದಿಲ್ಲ ಎಂದು ಈ ರೀತಿ ಅಧಿಕಾರಿಗಳಿಗೆ ಹೇಳಿದ್ದಾರೆಂದು ಕಾಣುತ್ತದೆ. ಶಾಸನ ಸಭಾ ಸದಸ್ಯರಿಗೆ ನ್ಯಾಯವಾಗಿ ಸಲ್ಲಬೇಕಾದ ಗೌರವ ಅಧಿಕಾರಿಗಳಿಂದ ಸಲ್ಲದೆ ಇರುವ ಹಾಗೆ ಮಾಡಿದ್ದಾರೆ. ಪಾರ್ಲಿಮೆಂಟ್ ಸದಸ್ಯರಿಗೆ ಯಾವ ರೀತಿ ಗೌರವ ಸಲ್ಲಬೇಕೆಂದು ಕೇಂದ್ರ ಸರ್ಕಾರದವರು ಒಂದು ನಿರೂಪಣೆಯನ್ನು ಪ್ರತಿಯೊಬ್ಬ ಅಧಿಕಾರಿಗೂ ಕಳುಹಿಸಿದ್ದಾರೆ. ಅದೇ ಶಾಸನ ಸಭಾ ಸದಸ್ಯರಿಗೆ ಅಧಿಕಾರಿಗಳು ನಿರ್ಲಕ್ಷ್ಯದಿಂದ ಕಾಣುವಂತೆ ಈ ಸರ್ಕಾರದವರು ಮಾಡಿದ್ದಾರೆ. ಇವರಿಗೂ ಒಂದು ದಿವಸ ಏಟು ಬೀಳುತ್ತದೆ ಎನ್ನುವುದನ್ನು ಮರೆಯ ಬಾರದು. ಲಂಚ ಎಷ್ಟು ದೂರ ಹೋಗಿದೆ ಎಂದರೆ, ನಾನು ಒಂದು ನಾಟಕದಲ್ಲಿ ಅಧ್ಯಕ್ಷತೆ ವಹಿಸಬೇಕಾಗಿತ್ತು. ಅದಕ್ಕೆ ಲೈಸೆನ್ಸ್ ತೆಗೆದುಕೊಳ್ಳಬೇಕಾಗಿರಲಿಲ್ಲ. ಆದರೂ ಆ ಊರಿನಲ್ಲಿ ಸ್ವಲ್ಪ ಭಿನ್ನಾಭಿಪ್ರಾಯಗಳಿದ್ದುದರಿಂದ ಲೈಸೆನ್ಸ್ ತೆಗೆದುಕೊಳ್ಳಿ ಎಂದು ಹೇಳಿ ಕಳುಹಿಸಿದೆ. ಹುಚ್ಚಮಾಸ್ತಿಗೌಡರು ಅಧ್ಯಕ್ಷತೆ ವಹಿಸುತ್ತಾರೆಂದು ಪ್ರಿಂಟ್ ಕೂಡ ಮಾಡಿದ್ದರು. ದೊಡ್ಡ ಕಲ್ಲಹಳ್ಳಿಯ ಜನರು ಹೋಗಿ ತಾಲ್ಲೂಕು ತಹಸೀಲ್ದಾರರನ್ನು ಲೈಸೆನ್ಸ್ ಕೇಳಿದಾಗ 70 ರೂಪಾಯಿ ಅವರಿಗೆ. 50 ರೂಪಾಯಿ ಸಬ್ ಇನ್‌ಸ್ಪೆಕ್ಟರಿಗೆ ಲೈಸೆನ್ಸ್ ಕೊಡಲು ತೆಗೆದುಕೊಂಡಿದ್ದಾರೆ. ಹೀಗೆ ಅವರು ಒಂದು ಸಣ್ಣ ಕೆಲಸಕ್ಕೆ 120 ರೂಪಾಯಿ ಕೊಟ್ಟು ಬರಬೇಕಾಯಿತು. ಹೀಗೆ 120 ರೂಪಾಯಿ ಖರ್ಚು ಮಾಡಿದರೂ ಪೋಲೀಸಿನವರೂ ಸ್ಥಳಕ್ಕೆ ಬರಲಿಲ್ಲ, ಲೈಸೆನ್ಸನ್ನೂ ಕೊಡಲಿಲ್ಲ. ಸಣ್ಣ ಸಣ್ಣ ಕೆಲಸಗಳಿಗೆ ನಾವು ಹೇಳಿ ಕಳುಹಿಸಿದರೂ, ನಾವೇ ಖುದ್ದಾಗಿ ಅಧಿಕಾರಿಗಳಿಗೆ ಹೇಳಿದರೂ, ಲಂಚ ಕೊಡದೆ ಒಂದು ಸಣ್ಣ ಕೆಲಸ ಕೂಡ ನಡೆಯುವುದಿಲ್ಲ ಇಂಥ ಪರಿಸ್ಥಿತಿ ಬಂದಿದೆ. ಇದಕ್ಕೆ ಕಾರಣವೇನು? ಮೇಲಿನಿಂದ ಕೆಳಗಿನವರೆಗೆ ಲಂಚದ ಆಪಾದನೆಗೆ ಗುರಿಯಾಗಿರುತ್ತಾರೆ, ಅವರೆಲ್ಲ ಲಕ್ಷಾಂತ್ಯರೆ ಮಾಡುತ್ತಾರೆ, ನಾವು 50, ನೂರು ರೂಪಾಯಿ ತೆಗೆದುಕೊಂಡರೆ ನಮ್ಮನ್ನು ಏಕೆ ಸಾಯಿಸುತ್ತೀರಿ, ನಾವೂ ಹೊಟ್ಟೆಪಾಡು ನೋಡಿಕೊಂಡು ಜೀವನ ಮಾಡಿಕೊಳ್ಳಬೇಕು ಎಂದು ಕೆಳಗಿನವರು ಹೇಳುತ್ತಾರೆ. ಬೆಂಗಳೂರು ನಗರದಲ್ಲಿ ಎಷ್ಟು ಜನ ಮನೆಗಳನ್ನು ಕಟ್ಟಿಕೊಂಡಿದ್ದಾರೆಂಬುದನ್ನು ಲೆಕ್ಕಕ್ಕೆ ತೆಗೆದುಕೊಂಡರೆ, ಸೂಪರ್‌ವೈಸರುಗಳು, ಅಸಿಸ್ಟೆಂಟ್ ಇಂಜಿನಿಯರುಗಳು, ಎಕ್ಸಿಕ್ಯೂಟಿವ್ ಇಂಜಿನಿಯರುಗಳು ಹೀಗೆ ಎಷ್ಟೋ ಜನ ಅಧಿಕಾರಿಗಳು ಮನೆಗಳನ್ನು ಕಟ್ಟಿಸಿಕೊಂಡಿದ್ದಾರೆ. ಅವರೆಲ್ಲ ಭವ್ಯವಾದ ಮನೆಗಳನ್ನು ಕಟ್ಟಿಸಿ ಕೊಳ್ಳಲು ಯಾವ ರೀತಿಯಲ್ಲಿ ಸಾಧ್ಯವಾಯಿತು ಎನ್ನುವುದನ್ನು ಸರ್ಕಾರದವರು ತನಿಖೆ ಮಾಡಿದರೆ ತಾನೇ ತಿಳಿಯುತ್ತದೆ. ಲಂಚ ಯಾತಕ್ಕೋಸ್ಕರ ಇದೆ, ಅದನ್ನು ತಪ್ಪಿಸುವುದಕ್ಕೆ ಏನು ಪ್ರಯತ್ನ ಮಾಡಬೇಕು ಎನ್ನುವುದು ಸರ್ಕಾರಕ್ಕೆ ಇದೆಯೇ

(ಶ್ರೀ ಎಸ್. ಹುಚ್ಚಮಾಸ್ತಿಗೌಡ)

ಎಂದರೆ ಖಂಡಿತವಾಗಿ ಇಲ್ಲ. ಸರ್ಕಾರದವರ ಪ್ರಯತ್ನಗಳೆಲ್ಲ ವ್ಯರ್ಥ. ದೊಡ್ಡ ದೊಡ್ಡವರನ್ನೆಲ್ಲ ಸುಲಭವಾಗಿ ಬಿಟ್ಟು ಹತ್ತಿಪ್ಪತ್ತು ರೂಪಾಯಿ ತೆಗೆದುಕೊಂಡವರನ್ನು ಹಿಡಿದುಕೊಂಡು ಇಷ್ಟು ಜನರನ್ನು ಹಿಡಿದಿದ್ದೇವೆಂದು ಹೇಳುತ್ತಾರೆ. ಇದಕ್ಕಾಗಿ ವಿಜಿಲೆನ್ಸ್ ಕಮಿಷನ್ ಇದೆ. ಅಲ್ಲಿರುವ ಲಂಚವನ್ನು ತಪ್ಪಿಸುವುದಕ್ಕೆ ಸಾಧ್ಯವೇ ಇಲ್ಲದಂತಾಗಿದೆ. ಲಂಚದ ಆಪಾದನೆಯನ್ನು ನೇರವಾಗಿ ಒಬ್ಬ ಅಧಿಕಾರಿಯ ಮೇಲೆ ಮಾಡಿ ಮಾನ್ಯ ಮುಖ್ಯಮಂತ್ರಿಯವರಿಗೆ ಬರೆದು ಕೊಟ್ಟೆ. ವಿಚಾರಣೆ ಮಾಡುತ್ತೇನೆಂದು ಹೇಳಿದರು. ಆರು ತಿಂಗಳಾಯಿತು. ಸ್ಥಳಕ್ಕೆ ಬಂದು ಅಧಿಕಾರಿಗಳು ಇದುವರೆಗೂ ವಿಚಾರಣೆ ಮಾಡಿಲ್ಲ. ಇಂಜಿನಿಯರಿಂಗ್ ಇಲಾಖೆಯಲ್ಲಿ ಯಾವುದಾದರೂ ಕೆಲಸ ಮಾಡಿದರೆ, ಅಳತೆ ತೆಗೆದುಕೊಳ್ಳುವುದರಲ್ಲಿ ವ್ಯತ್ಯಾಸ ಮಾಡಿ ಲಂಚ ತೆಗೆದುಕೊಂಡಿದ್ದಾರೆಂದು ಹೇಳಿದೆ. ಈ ಹೊತ್ತೂ ಆ ನಿದರ್ಶನವನ್ನು ರುಜುವಾತು ಮಾಡಿ ಕೊಡುವುದಕ್ಕೆ ನನಗೆ ಸಾಧ್ಯವಿದೆ. ಇಲ್ಲಿಯವರೆಗೂ ವಿಚಾರಣೆ ಆಗಿಲ್ಲ, ಅವರ ಮೇಲೆ ಏನೂ ಕ್ರಮ ತೆಗೆದುಕೊಳ್ಳಲಿಲ್ಲ. ಕಾರಣವೇನೆಂದರೆ ಅವರ ಪರವಾಗಿ ಅನೇಕ ಜನ ಮಂತ್ರಿಗಳಿದ್ದಾರೆ. ರಾಜ್ಯ ಮಂತ್ರಿಗಳು, ಉಪ ಮಂತ್ರಿಗಳು ಇವರ ಕಾಟ ಬಹಳ ಜಾಸ್ತಿ. ಅವರು ಅಧಿಕಾರಿಗಳಿಗೆ ಹೇಳುತ್ತಾರೆ, ಹೆದರ ಬೇಡಿ ನಿಮ್ಮ ಯೋಗಕ್ಷೇಮವನ್ನು ನಾನು ನೋಡಿಕೊಳ್ಳುತ್ತೇನೆ, ಹುಚ್ಚಮಾಸ್ತಿ ಗೌಡ ಹೇಳಿದಕ್ಕೆ ವಿರೋಧವಾಗಿ ಮಾಡಬೇಕು, ಆ ಒಂದು ಕೆಲಸವನ್ನು ಮಾಡಿದರೆ ನಿಮ್ಮ ಯೋಗಕ್ಷೇಮ ನಮ್ಮದು ಎಂದು ಹೇಳುತ್ತಾರೆ. ಭಗವದ್ಗೀತೆಯಲ್ಲಿ ಭಕ್ತರ ಯೋಗಕ್ಷೇಮವನ್ನು ನೋಡಿಕೊಳ್ಳುತ್ತೇನೆ ಎಂದು ಶ್ರೀ ಕೃಷ್ಣ ಪರಮಾತ್ಮ ಹೇಳಿರುವಂತೆ ಇವರು ಕೆಳಗಿನ ಅಧಿಕಾರಿಗಳ ಯೋಗಕ್ಷೇಮವನ್ನು ನೋಡಿಕೊಳ್ಳುತ್ತೇವೆಂದು ಹೇಳುತ್ತಾರೆ. ಇಂಥವರು ಒಂದು ಕ್ಷಣವೂ ಅಧಿಕಾರದಲ್ಲಿರುವುದಕ್ಕೆ ಅವಕಾಶ ಮಾಡಬಾರದು ಎಂದು ಆಡಳಿತ ಪಕ್ಷದಲ್ಲಿರುವ ಸದಸ್ಯರಿಗೆ ಬಹಳ ನಮ್ರತೆಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಅರ್ಥ ಮಂತ್ರಿಗಳು ಇಟ್ಟಿರತಕ್ಕ ಮಸೂದೆ ಒಪ್ಪತಕ್ಕದ್ದಲ್ಲ. ಇವರಿಗೆ ಹಣ ಹೆಚ್ಚು ಕೊಟ್ಟು ಉತ್ಸಾಹದಿಂದ ಕೆಲಸ ಮಾಡುವುದನ್ನು ತಪ್ಪಿಸಬೇಕು. ಅವರು ಹೋಗತಕ್ಕ ದಾರಿಯನ್ನು ಸರಿಪಡಿಸಿಕೊಂಡ ಹೊರತು ಹಣಕೊಟ್ಟರೆ ಪ್ರಯೋಜನವಾಗುವುದಿಲ್ಲ. ಹಣ ಕೊಡುವುದನ್ನು ನಿಲ್ಲಿಸಬೇಕು, ಇದಕ್ಕೆ ವಿರೋಧ ಮಾಡಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ (ಹರಿಹರ).—ಸ್ವಾಮಿ, ಮಾನ್ಯ ಹಣಕಾಸಿನ ಸಚಿವರು ಮಂಡಿಸಿರತಕ್ಕ ಮಸೂದೆಯಮೇಲೆ ಒಂದೆರಡು ಮಾತುಗಳನ್ನು ಅನಿವಾರ್ಯವಾಗಿ ಆಡತಕ್ಕ ಪ್ರಸಂಗ ಬಂದಿದೆ. ನಾನು ಮಾತನಾಡಬಾರದು ಎಂದು ಇದ್ದೆ. ಆದರೆ ನನ್ನ ಮನಸ್ಸಿಗೆ ಒಂದು ಭವಿಷ್ಯ ಹೊಳೆಯಿತು. ಬಹುಶಃ ಮುಂದಿನ ಸಾರಿ ವೀರೇಂದ್ರ ಪಾಟೀಲರ ಮಂತ್ರಿ ಮಂಡಲ ಇನ್ನೊಂದು ಬಜೆಟ್ಟನ್ನು ಮಂಡಿಸತಕ್ಕ ಅವಕಾಶ ಇರುವುದಿಲ್ಲ. ಆದುದರಿಂದ ಈಗಲೇ ಅವರ ವಿಚಾರದಲ್ಲಿ ಹೇಳಬೇಕು ಎಂದು ಅನಿಸಿತು. ಶ್ರೀಮಾನ್ ನಿಜಲಿಂಗಪ್ಪನವರು ಡೆಲ್ಲಿಗೆ ಹೋಗಬೇಕಾದರೆ ಒಂದು ಭವಿಷ್ಯ ಹೇಳಿದ್ದೆ. ಏನೆಂದರೆ, ನೀವು ಕಾಂಗ್ರೆಸ್ ಸಂಸ್ಥೆಯ ಚರಮ ಗೀತೆಯನ್ನು ಹಾಡುವುದಕ್ಕೆ ಹೋಗುತ್ತೀರಿ ಎಂದು ನಾನು ಹೇಳಿದ ಭವಿಷ್ಯ ನಿಜವಾಯಿತು.

ಈಗಾಗಲೇ ಅನೇಕ ವಿಷಯಗಳನ್ನು ಮಾನ್ಯ ಸ್ನೇಹಿತರು ಹೇಳಿದರು. ಇನ್ನೊಂದು ವರ್ಷ ಅಧಿಕಾರದಲ್ಲಿದ್ದರೆ ಪುನಃ ಇವರು ನಮ್ಮನ್ನು ಮಾತನಾಡಬೇಕಾದ್ದಿಲ್ಲ, ಈ ಸಭೆಯಲ್ಲಿ ಹಾಗೂ ಹೀಗೂ ಮಾಡಿ, ಸಂದಿಯೊಳಗೆ ಸಮಾರಾಧನೆ ಮಾಡಿಕೊಂಡು ಕಾಲವನ್ನು ತೂರಿಸಿಕೊಂಡು ನಮಗೆ ಬೇಕಾದ ದುಡ್ಡನ್ನು ನಾವು ಮಂಜೂರು ಮಾಡಿಕೊಂಡಿದ್ದೇವೆ, ಇನ್ನು ಇವರ ಯೋಚನೆ ಏಕೆ ಎಂದು ಎಂದು ತಿಳಿದಿರಬಹುದು ಈ ಹೊತ್ತು ಪುನಃ ಹೊಸ ಯೋಜನೆ ಅಥವಾ ಹೊಸ ಸಂಕಟ ಪ್ರಾರಂಭವಾಗುತ್ತದೆ ಎನ್ನುವುದನ್ನು ನಾನು ಸವಿನಯದಿಂದ ನಿಮ್ಮ ಸ್ನೇಹಿತನಾಗಿ ಹೇಳುತ್ತಿದ್ದೇನೆ. ಕಾರಣವಿಷ್ಟೆ. ಇಂದಿನ ರಾಜಕೀಯದಲ್ಲಿ ನನಗಾದರೂ ಅನ್ನಿಸುತ್ತದೆ, ನೀವು ಹೋಗತಕ್ಕ ರೀತಿಯಲ್ಲಿ ಇದೇ ರೀತಿ ಹೋದರೆ ಪ್ರಜಾಪ್ರಭುತ್ವದ ಕಗ್ಗೊಲೆಯಾಗುತ್ತದೆ, ಮುಂದೆ ಪ್ರಜಾಪ್ರಭುತ್ವಕ್ಕೆ ದಾರಿ ಇಲ್ಲದಂತೆ ಮಾಡಿ ಹೋಗುತ್ತೀರಿ, ನೀವು ಹಾಕತಕ್ಕಂಥ ಪ್ರಜಾಪ್ರಭುತ್ವದ ದಾರಿಯಲ್ಲಿ ಕಲ್ಲು ಮುಳ್ಳನ್ನು ಹಾಕಿ ಭದ್ರವಾಗಿ ಮಾಡಿ ಹೋಗುತ್ತೀರಿ ಎನ್ನತಕ್ಕ ವಿಚಾರವನ್ನು ನಾವು ಈ ಹೊತ್ತಿನ ದಿವಸ ಕಾಣುತ್ತಿದ್ದೇವೆ. ಪ್ರಜಾಪ್ರಭುತ್ವದಲ್ಲಿ ಪಕ್ಷಗಳು ಬರುತ್ತವೆ, ಪಕ್ಷಗಳು ಹುಟ್ಟುತ್ತವೆ ಮತ್ತು ಅವುಗಳಲ್ಲಿ ಸತ್ವ ಕಂಡು ಬಂದರೆ ಪಕ್ಷಗಳು ಬೆಳೆಯುತ್ತವೆ, ಇಲ್ಲದೆ ಹೋದರೆ ಅವಷ್ಟಕ್ಕೆ ಅವು ನಶಿಸಿ ಹೋಗುತ್ತವೆ. ನಿಮಗೆ ಏನಾಗಿದೆ ಅಂದರೆ ಪ್ರಜಾಪ್ರಭುತ್ವದ ಗುತ್ತಿಗೆ ನಮ್ಮದು ಎಂದು ಹೇಳುವ ಹಾಗೆ ಆಗಿದೆ. ಶ್ರೀಮಾನ್ ನಿಜಲಿಂಗಪ್ಪನವರ ಕಾಂಗ್ರೆಸ್ಸಿಗೆ ಪ್ರಜಾಪ್ರಭುತ್ವದ ಗುತ್ತಿಗೆ ಇರುವುದು, ಮಾತನಾಡುವ ಸಂಪೂರ್ಣ ಹಕ್ಕು ತಮಗೆ

ಇರುವುದು, ಬೇರೆಯವರಿಗೆ ಈ ಹಕ್ಕು ಇಲ್ಲ ಎಂದು ತಾವು ಹೇಳುವುದನ್ನು ನಾವು ವಿರೋಧಿಸು ತ್ತೇವೆ. ಈ ಸಂಸ್ಥೆಯವರು ನೆಲಮಂಗಲದಲ್ಲಿ ನಡೆದ ಸಮಾರಂಭ ಒಂದರಲ್ಲಿ ಸೇರಿದಾಗ ಇದನ್ನು ಬಹಳ ಸ್ಪಷ್ಟವಾಗಿ ತೋರಿಸಿದ್ದಾರೆ. ನಮ್ಮ ಹಳ್ಳಿಗಳಲ್ಲಿ ಒಂದು ಗಾದೆ ಮಾತು ಇದೆ. ದಿವಾಕಾ ದೀಪ ಉರೀತು, ಎರಡು ನಿಮಿಷ ಎಂಬುದನ್ನು ಅವರು ಬಹಳ ಸ್ಪಷ್ಟವಾಗಿ ತೋರಿಸಿದ್ದಾರೆ. ಶ್ರೀಮಾನ್ ನಿಜಲಿಂಗಪ್ಪನವರು ನಮ್ಮ ಪಕ್ಷದ ವಿಚಾರ ಬಹಳ ಸೊಗಸಾದ ಮಾತಿನಲ್ಲಿ ಅವರ ದೃಷ್ಟಿ ಯಲ್ಲಿ, ಹೇಳಿದ್ದಾರೆ. ಈ ನಮ್ಮ ಪಕ್ಷದಲ್ಲಿ ಇರತಕ್ಕಂಥವರೆಲ್ಲರೂ ಅಣಿ ಮುತ್ತುಗಳು ಎಂದು ಮತ್ತು ಎಂಥಂಥವರು ಇದರಲ್ಲಿ ಸೇರಿದ್ದಾರೆ ಎನ್ನುವುದನ್ನು ಹೇಳಿದ್ದಾರೆ. ಚುನಾವಣೆಗೆ ಟಿಕೀಟು ಸಿಗದೆ ಅತೃಪ್ತರಾದವರು, ಮಂತ್ರಿ ಸ್ಥಾನ ಸಿಗದೆ ನಿರಾಶರಾದವರು, ಕಂದಾಯ ಕೊಡದೆ ಮೋಸ ಮಾಡಿದವರು, ಈಗ ಒಂದು ಮತ್ತೆ ಇನ್ನೊಂದು ಮಾತನಾಡುವ ಜನರು ಸೇರಿಕೊಂಡಿದ್ದಾರೆ, ಇವರ ಅಧ್ಯಕ್ಷರು ಹತ್ತು ವರ್ಷ ಆದಾಯ ತೆರಿಗೆ ಕೊಡದೇ ಇದ್ದವರು ಇದರಲ್ಲಿ ಸೇರಿದ್ದಾರೆ ಎಂದು ಇರುವ ಅವರ ಭಾಷಣ ಪತ್ರಿಕೆಯಲ್ಲಿ ಪ್ರಚಾರವಾಗಿದೆ. ಅದೇ ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಇವತ್ತಿನ ದಿವಸದ ಪತ್ರಿಕೆಯಲ್ಲಿ ಹೀಗೆ ಹೇಳಿದ್ದಾರೆ:

> "ನೆಲಮಂಗಲದಲ್ಲಿ ಮಾತನಾಡುತ್ತ ಶ್ರೀಮಾನ್ ಎಸ್. ಎನ್. ಹೇಳುತ್ತಾರೆ. ಇಂದಿರಾ ಗಾಂಧಿ ಕಟ್ಟಿಕೊಂಡಿರುವ ಕಾಂಗ್ರೆಸ್ಸಿಗೆ ಮೈಸೂರು ರಾಜ್ಯದಿಂದ ಯಾರಾರು ಸೇರಿಕೊಂಡಿದ್ದಾರೆ? ಚುನಾವಣೆಗೆ ಟಿಕೀಟು ಸಿಗದೆ ಅತೃಪ್ತರಾದವರು, ಮಂತ್ರಿ ಸ್ಥಾನ ಸಿಗದೆ ನಿರಾಶರಾದವರು, ಕಂದಾಯ ಕೊಡದೆ ಮೋಸ ಮಾಡಿದವರು, ಈಗ ಒಂದು ಮತ್ತೆ ಇನ್ನೊಂದು ಮಾತನಾಡುವ ಜನರು ಸೇರಿಕೊಂಡಿದ್ದಾರೆ ಎಲ್ಲವೂ ಅಣಿ ಮುತ್ತುಗಳೆ ಎಂಬುದಾಗಿ"
>
> ಆದರೆ, ಎಸ್. ಎನ್. ಉಳಿಸಿಕೊಂಡಿರುವ ಕಾಂಗ್ರೆಸ್ಸಿನಲ್ಲಿ! ಖಾದಿ ಬೋರ್ಡ್ ನುಂಗಿ ಜೀರ್ಣಿಸಿಕೊಂಡು ವಾತಾಪಿ ಜೀರ್ಣೋ ಭವ ಮಾಡಿದ ಭೀಮರೂ, ಮಾಜಿ ರಜಾಕಾರರೂ, ಐವತ್ತು ಸಾವಿರಕ್ಕೆ ಆಸ್ತಿ ಮಾರುತ್ತೇನೆಂದು ಅನಂತರ ನಾನೆಲ್ಲಿಂದೆ ಎಂದವರೂ, ಮಂತ್ರಿ ಸ್ಥಾನ ಸಿಕ್ಕವರೂ ಸೇರಿಕೊಂಡಿದ್ದಾರೆ. ಎಲ್ಲವೂ ಡೈಮಂಡು ಗಳೇ—ಕಲ್ಟರ್ಡ್ ಡೈಮೆಂಡ್!

ಇದು ಏನು ತೋರಿಸುತ್ತದೆ! ಈ ರೀತಿ ಪಕ್ಷ ಅಲ್ಲಗಳೆಯಲು ಹೋದರೆ, ಪ್ರಜಾಪ್ರಭುತ್ವವನ್ನು ಅಲ್ಲಗಳೆದ ಹಾಗೆ ಆಗಲಿಲ್ಲವೇ! ಇಂದು ಪ್ರಪಂಚದಲ್ಲಿ ಅನೇಕ ಪ್ರಜಾಪ್ರಭುತ್ವ ಆಡಳಿತ ನಡೆಸುವ ದೇಶಗಳಿವೆ. ಆದರೆ ನಮ್ಮ ದೇಶದಲ್ಲಿ ಕಾಂಗ್ರೆಸ್ಸಿನಲ್ಲಿಯೇ ಇಬ್ಬಣಗಳು ಆಗಿರುವುದರಿಂದ ಪ್ರಜಾ ಪ್ರಭುತ್ವ ಬೆಳವಣಿಗೆ ಕುರಿತು ಯಾರಾದರೂ ತಾವೇ ಹೊಣೆಗಾರರು ಎಂದು ಸಂಕೋಚಪಟ್ಟು ಕೊಳ್ಳಬೇಕಾಗಿಲ್ಲ. ಅನೇಕರು ಈ ಪ್ರಜಾಪ್ರಭುತ್ವವನ್ನು ಸಂತೋಷದಿಂದ ಸ್ವಾಗತಿಸಿದ್ದಾರೆ. ಶ್ರೀಮತಿ ಇಂದಿರಾ ಗಾಂಧಿಯವರು ಅಧಿಕಾರಕ್ಕೆ ಬರುವಾಗ ಸರಿಯಾದುದನ್ನೇ ಅವರು ಹೇಳಿದರು. ಎರಡು ವರ್ಷ ಕಾಲ ಇವರು ಇರಲಿ, ಸರಿಯಾಗಿ ನೋಡಿಕೊಂಡು ಹೋಗಲಿ ಎಂದು. ಆದರೆ ಈಗ ಅವರ ಮನಸ್ಸು ವ್ಯಗ್ರವಾಗಿದೆ. 60 ವರ್ಷ ಆದ ಮೇಲೆ ಅರಳು ಮರಳು ಆಗುತ್ತದೆ. ಅನೇಕ ಸಲ ಏನೋ ಹೇಳಿಬಿಡುತ್ತಾರೆ. ಹೇಳಿದ್ದು ನೆನಪು ಇಲ್ಲ ಎಂದು ಆಮೇಲೆ ಹೇಳುತ್ತಾರೆ. ಹರಿದು ಹಂಚಿ ಹೋದ ಕನ್ನಡನಾಡು ಒಂದಾಗೂಡಬೇಕು ಎನ್ನುವ ಹಿರಿಯಾಸೆಯಿಂದ ಈ ನಮ್ಮ ಮೈಸೂರು ರಾಜ್ಯ ರಚನೆಯಾಯಿತು. ಆದರೆ ಇಂದು ಆಡಳಿತದಲ್ಲಿರುವ ಪಕ್ಷದವರು ಅದನ್ನು ಮೂರು ಗುಂಪು ಮಾಡಿ ಹಣ ಮತ್ತು ಜಾತಿಯನ್ನೇ ಆಧಾರವಾಗಿ ಇಟ್ಟುಕೊಂಡು ಆಡಳಿತ ನಡೆಸುತ್ತಿದ್ದಾರೆ. ಈ ಪಕ್ಷದವರು ಒಂದು ಓಟು ಪಡೆಯಲು 75 ಸಾವಿರ ರೂಪಾಯಿ ಖರ್ಚು ಮಾಡುವುದು ಅಂದರೆ ಎಷ್ಟು ನಾಚಿಕೆಗೇಡಿನ ಮಾತು! ಮುಂದೆ 1972 ರಲ್ಲಿ ಚುನಾವಣೆ ಕಾಲದಲ್ಲಿ ಓಟು ಕೇಳಲು ಹೋದಾಗ ಜನತೆ ನಮ್ಮನ್ನು ಕೇಳುತ್ತದೆ. ನೀವು ಒಂದು ಓಟಿಗೆ 500 ರೂಪಾಯಿ ಕೊಟ್ಟು ಆರಿಸಿ ಬಂದಿದ್ದೀರಿ, ನಮಗೂ ಹಣ ಕೊಟ್ಟರೆ ಓಟು ಕೊಡುತ್ತೇವೆ ಎಂದು ಹೇಳುತ್ತಾರೆ. ಶ್ರೀಮಾನ್ ನಿಜಲಿಂಗಪ್ಪ ನವರ ಹತ್ತಿರ ಅವರ ಅನುಯಾಯಿಗಳ ಹತ್ತಿರ ಅಷ್ಟು ಬಂಡವಾಳ ಇರಬಹುದು. ಈ ರೀತಿ ಇನ್ನೊಬ್ಬರ ಮೇಲೆ ಆಕ್ಷೇಪಣೆ ಮಾಡತಕ್ಕಂಥವರ ಮೇಲೆಯೇ ಅದು ತಿರುಗಿ ಬಿದ್ದು ಅದು ಏನು ಪರಿಣಮಿಸುತ್ತದೆ ಎಂಬುದನ್ನು 1972 ರ ಚುನಾವಣೆಯಲ್ಲಿ ನೋಡಬಹುದು. ಇಂಥ ರಾಜಕೀಯ ಹಾದರತನದ ವ್ಯಾಪಾರ ನಡೆಯುತ್ತಿದೆ. ಸೀಮೆಂಟ್ ಚೀಲದಲ್ಲಿ ನೋಟು ತುಂಬಿಕೊಂಡು ಹಂಚು ತ್ತಾರೆ ಎಂದು ಹೇಳುವ ಪರಿಸ್ಥಿತಿ ಬರಬಾರದ ಸಂಗತಿ. ಇವರು ನೋಟು ತೆಗೆದುಕೊಂಡರೆ ಜನತೆ ಇವರಿಗೆ ಏಟು ಕೊಡುತ್ತಾರೆ. ಇವತ್ತಿನ ದಿವಸ ಪ್ರಪಂಚದಲ್ಲಿಯ ಎರಡು ರಾಷ್ಟ್ರಗಳನ್ನು ಅಂದರೆ ಅಮೇರಿಕಾ ಮತ್ತು ರಷಿಯಾ ರಾಷ್ಟ್ರಗಳ ನೀತಿಯನ್ನು ಇವರು ಒಪ್ಪಬಹುದು. ಆದರೆ ಕಮ್ಯೂ

(ಶ್ರೀ ಎಚ್. ಸಿದ್ದವೀರಪ್ಪ)

ನಿಜಾಂನ್ನು ನಾನು ಒಪ್ಪುವುದಿಲ್ಲ. ನಮಗೆ ಅದು ಬಹಳ ದೂರ ಇದೆ. ಪ್ರಜಾಪ್ರಭುತ್ವದ ಮೇಲೆ ನಮಗೆ ಅಚಲ ನಂಬಿಗೆ ಇದೆ. ಸೂರ್ಯನ ಮೇಲೆ ಉಗುಳಿದರೆ ಅದು ನಮ್ಮ ಮೇಲೆ ಬಂದು ಬೀಳುತ್ತದೆ ಎಂಬುದನ್ನು ಅವರು ನೆನಪಿನಲ್ಲಿಟ್ಟುಕೊಳ್ಳಬೇಕು. ಅಮೆರಿಕಾ ರಷಿಯಾ ಇವು ಮಹಾ ದೊಡ್ಡ ರಾಷ್ಟ್ರಗಳು, ಅವರ ವಿಚಾರ ಎತ್ತಿಕೊಂಡು ಮಾತನಾಡುವುದು ಏಕೆ? ಅದು ವಿವೇಕ ಅಥವಾ ಅವಿವೇಕದ ಮಾತು ಆದೀತು. ನಮ್ಮ ಮೈಸೂರು ರಾಜ್ಯದ ವಿಚಾರ ಮಾತನಾಡುವುದಾದರೆ ಈ ಸರಕಾರಕ್ಕೆ ನೈತಿಕ ಬೆಂಬಲ ಇಲ್ಲ. ಐಕ್ಯತೆ ಒಡೆದುಹೋಗಿದೆ. ಇವತ್ತಿನ ದಿವಸ ಈ ಸರಕಾರ ಹೇಗೆ ಇದೆ ಅಂದರೆ ನಮ್ಮ ಹಳ್ಳಿಗಾಡಿನಲ್ಲಿ ಹಳೇ ಬಟ್ಟೆ ಇದ್ದರೆ ಅದನ್ನು ಒಗೆಯುವುದಿಲ್ಲ, ಬಿಸಾಕುವುದಿಲ್ಲ. ಪ್ರತಿಯೊಂದು ಬಟ್ಟೆಯ ಚೂರು ತೆಗೆದುಕೊಂಡು ಕವದಿ ಹೊಲೆಯುತ್ತಾರೆ. ಹಳೇ ಬಟ್ಟೆಯಿಂದ ತಯಾರಿಸಿದ ಇಂಥ ಕವದಿ ರಗ್ಗಿನಕ್ಕಿಂತಲೂ ಒಳ್ಳೆಯದಾಗಿರುತ್ತದೆ. ಹಳೇ ಬಟ್ಟೆಯ ತುಂಡಿನಿಂದ ತಯಾರಿಸಿದ ಕವದಿಯ ಹಾಗೆ ಇದು ಕವದಿ ಸರಕಾರ ಆಗಿದೆ ಎಂದು ಹೇಳಿದರೆ ಅದು ತಪ್ಪು ಅಲ್ಲ. ಇವರಲ್ಲಿ 28 ಜನ ಮಂತ್ರಿಗಳು ಇದ್ದಾರೆ.

Sri K. H. PATIL.—Sir, I feel that I have a right to intervene and suggest my point of view. I want to know from the hon. Member Sri Siddaveerappa whether he is......

Mr. SPEAKER.—I am not permitting the hon. member.

* * *

ಶ್ರೀ ಎಚ್. ಎನ್. ನಂಜೇಗೌಡ (ಅರಕಲಗೂಡು).—ಸ್ವಾಮಿ, ನನ್ನದೊಂದು ಕ್ರಿಯಾಲೋಪವಿದೆ......

ಅಧ್ಯಕ್ಷರು.—ಅದೇನು ಹೇಳಿ.

ಶ್ರೀ ಎಚ್. ಎನ್. ನಂಜೇಗೌಡ.—ತಾವು ಹೀಗೆ ಇರಿಟೇಟಿಂಗ್ ಟೋನಿನಲ್ಲಿ ಹೇಳಿದರೆ ನಾನು ಏನು ಹೇಳಲಿ? ಈ ಸಭೆಯಲ್ಲಿ ಏನಾದರೂ ವಿಷಯ ಚರ್ಚೆಯಾಗುತ್ತಿದ್ದಾಗ ಯಾರಾದರೂ ಒಬ್ಬರು ಮಾತನಾಡುತ್ತಿದ್ದರೆ ಬೇರೆ ಸದಸ್ಯರೆದ್ದು ಅವರ ಅಭಿಪ್ರಾಯವನ್ನೂ ವ್ಯಕ್ತಪಡಿಸುತ್ತಿರುವುದು ಇಲ್ಲಿ ಸಾಮಾನ್ಯವಾಗಿ ನಡೆದುಕೊಂಡು ಬಂದಿರತಕ್ಕ ಒಂದು ವಾಡಿಕೆಯಾಗಿದೆ. ಅದರಂತೆ ಈಗತಾನೇ ಇಲ್ಲಿ ಶ್ರೀ ಸಿದ್ದವೀರಪ್ಪನವರು ಮಾತನಾಡುತ್ತಿದ್ದಾಗ ಶ್ರೀ ಕೆ. ಎಚ್. ಪಾಟೀಲರೂ ಎದ್ದು ಮಾತನಾಡಿದ್ದು ಉಂಟು. ಆದರೆ ಅದನ್ನು ತಾವು ಅಧಿಕೃತ ವರದಿಯಿಂದ ಎಕ್ಸ್‌ಪಂಜ್ ಮಾಡಬೇಕೆಂದು ಅಪ್ಪಣೆ ಮಾಡೋಣವಾಯಿತು......

Sri K. H. PATIL.—I take strong objection if you have expunged what I stated........

Mr. SPEAKER.—Not to be recorded.

ಶ್ರೀ ಎಚ್. ಎನ್. ನಂಜೇಗೌಡ.—ಸ್ವಾಮಿ, ರೂಲ್ 315 ಪ್ರಕಾರ, ತಮಗೆ ಕೆಲವು ಪದಗಳನ್ನು ಎಕ್ಸ್‌ಪಂಜ್ ಮಾಡುವುದಕ್ಕೆ ಅಧಿಕಾರವಿದೆ. ಡಿಫಮೇಟರಿ, ಇಂಡೀಸೆಂಟ್, ಅನ್‌ಡಿಗ್ನಿಫೈಡ್ ಇತ್ಯಾದಿ ಪದಗಳನ್ನು ಪ್ರಯೋಗ ಮಾಡಿದ್ದರೆ ಅವುಗಳನ್ನು ಎಕ್ಸ್‌ಪಂಜ್ ಮಾಡುವುದಕ್ಕೆ ತಮಗೆ ಅವಕಾಶವುಂಟು. ಆದರೆ ನಾನು ತಮ್ಮಲ್ಲಿ ಏನು ಮನವಿ ಮಾಡಿಕೊಳ್ಳಬೇಕೆಂದು ಇದ್ದೇನೆಂದರೆ ಇಲ್ಲಿ ನಡೆಯತಕ್ಕ ಕಾರ್ಯಕಲಾಪಗಳಲ್ಲಿ ನಿಮಗೆ—ನಾವು; ನಮಗೆ ತಾವೂ ಒಂದು ರೆಸಿಪ್ರೋಕಲ್ಲಾಗಿ ಪ್ರೀತಿ ಅಭಿಮಾನಗಳನ್ನಿಟ್ಟು ವರ್ತಿಸಬೇಕು, ಅಂಥ ಒಂದು ಸಂಪ್ರದಾಯವನ್ನು ಬೆಳಸಿಕೊಂಡು ಬರತಕ್ಕದ್ದು ಎಲ್ಲರಿಗೂ ಒಳ್ಳೆಯದು. ಆದರೆ ತಾವು ಹಿಟ್ಟಿಂಗ್ ಮೂಡಿನಲ್ಲಿ ಯಾವಾಗಲೂ ಮಾತನಾಡಬಾರದೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

Mr. SPEAKER.—I am very glad that hon. member Sri Nanje Gowda has made a correct approach. I have not taken the decision to expunge what hon. Member Sri K. H. Patil spoke lightly. The hon. member made reference to certain proverb and the Chair is entitled to expunge it.

* * * * Matter Expunged as ordered by the Chair.

As regards interventions, the rule is that unless the hon. member speaking yields, no other hon. member can intervene. Even if the hon. Member who is speaking were to yield, the Hon. Chair should permit the other hon. member to intervene. Only with the permission of the Speaker, an hon. member can intervene and not otherwise. If hon. Member want to see the authorities on this point I shall certainly show them.

In the present case, the hon. Member Sri K. H. Patil never intended to seek any clarification fr m the hon. Member who was speaking, but merely tried to carry on some dialogue which is not correct.

As regards the rule in respect of expunction of the words, I am to state that only those words, speeches, etc., can go on record which have been made according to the rules with the permission of the Speaker. No hon. member is entitled to make a speech or intervene without the permission of the Speaker. Since the hon. Member Sri K. H. Patil spoke without my permission, I have ordered the same to be expunged from the records.

Now, the hon. Member Sri Siddaveerappa may continue his speech.

ಶ್ರೀ ಎಚ್. ಸಿದ್ಧವೀರಪ್ಪ.—ಸ್ವಾಮಿ, ನಾನು ಆಗ ಕೌದೀ ವಿಚಾರವನ್ನು ಮಾತನಾಡುತ್ತಿದ್ದೆ. ಕೌದೀ ಎಂಥದರೂ ಒಂದೇ ತ್ಯಾಪೆ ಎಂದರೂ ಒಂದೇ. ಈ ದಿವಸ ನಮ್ಮ ಸರ್ಕಾರ ಆ ತ್ಯಾಪೆ ಹಾಕಿದ ಕೌದಿ ಇದ್ದ ಪರಿಸ್ಥಿತಿಯಲ್ಲಿದೆ. ಇದನ್ನು ಶ್ರೀಮಾನ್ ನಿಜಲಿಂಗಪ್ಪನವರು ಅರ್ಥಮಾಡಿಕೊಳ್ಳದೆ ಮೊನ್ನೆ ದಿವಸ ಅವರು ಅಲ್ಲಿ ನಮ್ಮ ಪಕ್ಷದ ವಿಚಾರದಲ್ಲಿ ಅಷ್ಟು ಖಾರವಾಗಿ ಮಾತನಾಡಿದ್ದಾರೆ. ಆದರೆ ಒಂದು ವಿಷಯವನ್ನು ಮಾತ್ರ ಈ ಸರ್ಕಾರದವರು ನೆನಪಿನಲ್ಲಿಟ್ಟುಕೊಳ್ಳಬೇಕೆಂದು ಹೇಳುತ್ತಿದ್ದೇನೆ. ಅದೇನೆಂದರೆ—ನಮ್ಮ ಸಂಸ್ಥೆ ಸತ್ತು ಹೋಯಿತು ಎಂದರೆ ನಿಮ್ಮ ಪಕ್ಷವೂ ಸತ್ತು ಹೋದಂತೆಯೇ, ಅಳಿದು ಹೋದಂತೆಯೇ. ನಮ್ಮ ಪಕ್ಷ ಎಂದು ಸತ್ತು ಹೋಗುತ್ತದೋ ಅಂದೇ ದೇಶದಲ್ಲಿ ಪ್ರಜಾಪ್ರಭುತ್ವವೂ ಅಳಿಯಿತೆನ್ನಬೇಕು. ದೇಶದಲ್ಲಿ ನಮ್ಮ ಪಕ್ಷ ಉಳಿದು ಬೆಳೆದರೇನೇ ದೇಶದಲ್ಲಿ ಪ್ರಜಾಪ್ರಭುತ್ವಕ್ಕೆ ಒಂದು ತಳಹದಿ ಹಾಕಿದಂತೆ ಆಗುತ್ತದೆ. ಆದ್ದರಿಂದ ಶ್ರೀ ವೀರೇಂದ್ರ ಪಾಟೀಲರ ಸರ್ಕಾರ ಒಂದು ಪಟ್ಟುಹಿಡಿದು ವಾದಮಾಡುವುದಕ್ಕೆ ಸಾಧ್ಯವಿಲ್ಲ. ಆದರೆ ಶ್ರೀಮಾನ್ ವೀರೇಂದ್ರ ಪಾಟೀಲರು ನಾನೇ ಬಹಳ ಬುದ್ಧಿವಂತ, ಈ ಸರ್ಕಾರದ ಆಡಳಿತವನ್ನು ಬಹಳ ಬುದ್ಧಿವಂತಿಕೆಯಿಂದ ಒಯ್ಯುತ್ತಿದ್ದೇನೆ, ನನಗಿಂತಲೂ ಆಡಳಿತ ವಿಚಾರದಲ್ಲಿ ಹೆಚ್ಚಿಗೆ ತಿಳಿದವರು ಇನ್ನೊಬ್ಬರಿಲ್ಲ ಎಂದು ಅವರು ಭಾವಿಸಿರಬಹುದು. ಆದರೆ ಅವರು ಅವರ ಸರ್ಕಾರ ಒಂದು ದೋಣಿಯಲ್ಲಿ ಇದ್ದ ಹಾಗೆ ಇದೆ. ಆದರೆ ಇವರಿಗೆ ಸರಿಯಾಗಿ ಹುಟ್ಟುಹಾಕುವುದಕ್ಕೆ ಬರುವುದಿಲ್ಲ. ಇವರು ಬಹಳ ಅಂಜುಬುರುಕರು, ಅವರದು ಬಹಳ ಪುಕ್ಕಲು ಎದೆ. ಆದರೆ ಅವರು ಚೆನ್ನಾಗಿ ಆಡಳಿತವನ್ನು ತಿಳಿದುಕೊಂಡಿದ್ದಾರೆ, ಇಲ್ಲ ಎಂದು ನಾನು ಹೇಳುವುದಿಲ್ಲ. ಗುಣಕ್ಕೆ ನನ್ನಲ್ಲಿ ಯಾವತ್ತೂ ಮತ್ಸರವಿಲ್ಲ. ಹಾಲಿ ದೇಶಕ್ಕೆ ಒದಗಿರತಕ್ಕ ಗಂಡಾಂತರದ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಇತ್ತೀಚೆಗೆ ಒಂದು ಸ್ಲೋಗನ್ನು ತಾಳಿ ಪ್ರತಿಯೊಂದಕ್ಕೂ ನಾನು ವಿರೋಧ ಪಕ್ಷದವರನ್ನು ಕೇಳಬೇಕು, ಕೇಳುತ್ತೇನೆ, ವಿರೋಧಪಕ್ಷಗಳನ್ನು ನಂಬಿಕೆಗೆ ತೆಗೆದುಕೊಂಡಿದ್ದೇನೆ, ಅವರನ್ನು ಕೇಳಿ ಮುಂದಿನ ತೀರ್ಮಾನ ಹೇಳುತ್ತೇನೆ ಎಂಬ ಒಂದು ಮುಂಜಾಗ್ರತೆ ಕಾರ್ಯವನ್ನು ಕೈಗೊಂಡ ಕಾರಣ ತಮಗೆ ಬಂದಿರತಕ್ಕ ಗಂಡಾಂತರಗಳನ್ನು ತಪ್ಪಿಸಿಕೊಳ್ಳುವುದಕ್ಕೆ ಒಂದು ಅವಕಾಶವಾಗಿದೆ. ದೇವರ ದಯದಿಂದ ಎಲ್ಲವೂ ಪಾರಾದರಂತೂ ಪರವಾ ಇಲ್ಲ. ಶ್ರೀ ಶಿವಪ್ಪನವರು ರಾಜ್ಯಕ್ಕೇನಾದರೂ ಆ ನದೀನೀರಿನ ವಿಚಾರದಲ್ಲಿ ಇಲ್ಲವೇ ಗಡಿ ವ್ಯವಹಾರದಲ್ಲಿ ಏನಾದರೂ ಅನಾನುಕೂಲವಾದರೆ ಅದಕ್ಕೆ ಇಂದಿನ ಆಡಳಿತಪಕ್ಷವೇ ಹೊಣೆ ಎಂದು ಸಾರಿದ ಮೇಲೆ ನಮ್ಮ ಮುಖ್ಯ ಮಂತ್ರಿಗಳು ಈ ಒಂದು ನಿಲುವನ್ನು ತೆಗೆದುಕೊಂಡರು. ಈ ದಿವಸ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ತಾಳಿರತಕ್ಕ ನಿಲುವು ಹೇಗಿದೆ ಎಂದರೆ ಊರಲ್ಲಿ ಯಾವುದಾದರೂ ಒಂದು ಮನೆಗೆ ಬೆಂಕಿ ಬಿದ್ದಾಗ ಅವರು ಆ ಬೆಂಕಿಯನ್ನು ಆರಿಸತಕ್ಕ

(ಶ್ರೀ ಎಚ್. ಸಿದ್ಧವೀರಪ್ಪ)

ಕಾಲದಲ್ಲಿ ಇವರು ನಮ್ಮವರು ಇವರು ಬೇರೆಯವರು ಎಂಬ ತಾರತಮ್ಯವನ್ನು ಎಣಿಸದೆ ಎಲ್ಲರನ್ನೂ ಒಂದೊಂದು ಕೊಡಪಾನ ನೀರನ್ನು ತಂದು ಹಾಕಿ ಮಣ್ಣನ್ನು ಎರಚಿ ಆ ಬೆಂಕಿಯನ್ನು ಆರಿಸಲು ಪ್ರಾರ್ಥನೆ ಮಾಡುವಂತಿದೆ. ಆದರೆ ಈ ಸಂದರ್ಭದಲ್ಲಿ ಆಡಳಿತ ಪಕ್ಷದವರ ಮನೆ ಒಂದೇ ಸುಡುವುದಾಗಿದ್ದರೆ ನಾವು ನಮ್ಮ ಪಕ್ಷದವರು ಖಂಡಿತ ನೀರನ್ನು ಹಾಕುತ್ತಿರಲಿಲ್ಲ—ಬೆಂಕಿಯನ್ನೂ ಆರಿಸುತ್ತಿರಲಿಲ್ಲ. ಆದರೆ ಈ ದಿವಸ ಪರಿಸ್ಥಿತಿ ಹಾಗಿಲ್ಲ. ನಾವು ಅವರ ಮನೆಗೆ ಬಿದ್ದಿರತಕ್ಕ ಬೆಂಕಿಯನ್ನು ಆರಿಸದಿದ್ದರೆ ನಮ್ಮ ಮನೆ ಅಲ್ಲಿ ಉಳಿಯುವಹಾಗಿಲ್ಲ. ಅದಕ್ಕಾಗಿ ನಾವು ಶ್ರಮಿಸಬೇಕಾಗಿದೆ. ನೀರನ್ನೂ ಮಣ್ಣನ್ನೂ ಎರಚಿ ಬೆಂಕಿಯನ್ನು ಆರಿಸಬೇಕಾಗಿದೆ. ಅದು ನಮ್ಮ ಆದ್ಯಕರ್ತವ್ಯ, ಅದನ್ನು ನಾವು ಮಾಡೇಮಾಡುತ್ತೇವೆ. ಅವರು ನಮ್ಮ ಸಹಕಾರವನ್ನು ಕೇಳಲಿ—ಕೇಳದೆ ಇರಲಿ. ನಮ್ಮ ಸಹಾಯವನ್ನು ಪಡೆದುಕೊಳ್ಳಲಿ—ಬಿಡಲಿ ನಾವು ಮಾಡುವುದನ್ನು ಮಾಡೇ ಮಾಡುತ್ತೇವೆ. ಆದರೆ ಇವರಿಗೆ ಒಂದು ಮಾತ್ರ ಎಚ್ಚರಿಕೆಯನ್ನು ನೀಡಬೇಕಾಗಿದೆ. ಇನ್ನು ಇವರ ಕೈಲಿ ಸಮ್ಮಿಶ್ರ ಸರ್ಕಾರ ನಡೆಸುವುದು ಖಂಡಿತ ಸಾಧ್ಯವಿಲ್ಲ. ಈ ಮಾತನ್ನು ಶ್ರೀ ಶಿವಪ್ಪನವರು ಹೇಳುವುದಕ್ಕೂ ಎರಡು ವರ್ಷಗಳ ಮುನ್ನ ನಾನು ಹೇಳಿದ್ದೇನೆ. We want a Ministry of talents. We want a Ministry consisting of men with calibre character, integrity and capacity to give a drive and see that the country is saved. ನಮಗೆ ಇಂಥ ಸರ್ಕಾರ ಬೇಕು. ಅಂಥ ಒಂದು ಸರ್ಕಾರ ಬರಬೇಕಾದರೆ ಈಗ ಇರತಕ್ಕ ಸರ್ಕಾರ ವಿಸರ್ಜನೆಯಾಗಬೇಕು. ದೇಶದಲ್ಲಿ ಯಾರ್ಯಾರು ದಕ್ಷರಿದ್ದಾರೋ ಅವರು ಮುಂದೆ ಬರುತ್ತಾರೆ, ಅವರು ದೇಶದ ಆಗುಹೋಗುಗಳ ಭಾರವನ್ನು ಹೊರುತ್ತಾರೆ. ಆಗ ನಮಗೆ ಬಂದಿರತಕ್ಕ ಗಂಡಾಂತರಗಳು ನಿವಾರಣೆಯಾಗುವುದಕ್ಕೆ ಒಂದು ಅವಕಾಶವಾಗುವುದು. ಆಗ್ಗೆ ನಾವು ಈ ಬೆಂಕಿಯನ್ನು ಆರಿಸುವುದಕ್ಕೆ ಏನು ಬೇಕೋ ಅದನ್ನು ಮಾಡುತ್ತೇವೆ. ನಾವು ಆಗ ನೀರು ಮಣ್ಣನ್ನು ಹಾಕುತ್ತೇವೆ; ವಿನಾ ಎಂದಿಗೂ ಉರಿಯುತಕ್ಕ ಬೆಂಕಿಗೆ ಇನ್ನಷ್ಟು ಪೆಟ್ರೋಲನ್ನು ಎಂದೂ ಹಾಕುವುದಿಲ್ಲ. ಇಷ್ಟಕ್ಕೆ ಇವರು ಅವಕಾಶಮಾಡಿಕೊಡದೆ ಇದ್ದರೆ ಮುಂದಾಗತಕ್ಕ ಅನಾಹುತಗಳಿಗೆಲ್ಲಾ ಇವರೇ ಜವಾಬ್ದಾರರು - ಆಗ ಇವರನ್ನು ನಾವು ದೇಶದ ಮುಂದೆ ವಿಚಾರಣೆಗೆ ನಿಲ್ಲಿಸಬೇಕಾಗುತ್ತದೆ. ಈ ಬಗ್ಗೆ ಹೇಳಬೇಕೆಂದರೆ ಇನ್ನೂ ಎಷ್ಟೋ ಇದೆ. ಅದಕ್ಕೆಲ್ಲಾ ಕಾಲವಕಾಶವಿಲ್ಲ. ಇನ್ನು ಹಣಕಾಸಿನ ಬಗ್ಗೆ ಒಂದೆರಡು ವಿಚಾರಗಳನ್ನು ಹೇಳುತ್ತೇನೆ. ಈಗಾಗಲೇ ನಾವು ಬಜೆಟ್ ಮಂಜೂರು ಮಾಡಿಕೊಟ್ಟಿದ್ದೇವೆ. ಶ್ರೀಮಾನ್ ಲಿಂಗಾರೆಡ್ಡಿ ಅವರು ಹಣ ಬೇಕು ಎಂದು ತಗಾದಿ ಮಾಡಿದ ತಕ್ಷಣ ಹಣವನ್ನು ಬಿಡುಗಡೆ ಮಾಡಬೇಡಿ. ಪ್ರತಿಯೊಂದು ಪೈಸೆಯನ್ನು ಖರ್ಚು ಮಾಡಬೇಕಾದರೂ ಕೂಡ ನೀವು ದೇಶದ ಜನರ ಹಿತದೃಷ್ಟಿಯಿಂದ ಅದು ಸರಿಯಾಗಿ ಖರ್ಚಾಗುತ್ತದೆಯೋ ಎಂಬುದನ್ನು ವಿಚಾರ ಮಾಡಿ ಖರ್ಚು ಮಾಡಬೇಕು. ಏಕೆಂದರೆ ನಿಮ್ಮ ಮೇಲೆ ಜವಾಬ್ದಾರಿಯನ್ನು ಹೊರಿಸಲಾಗಿದೆ. ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸಬೇಕು. ಅದನ್ನು ಬಿಟ್ಟು ಕೇಳಿದ್ದಕ್ಕೆಲ್ಲಾ ದಸ್ಕತ ಹಾಕಿ ಹಣವನ್ನು ವಿನಾಕಾರಣ ಖರ್ಚು ಮಾಡಿದರೆ ನಾಳೆ ನೀವೇ ತಪ್ಪಿತಸ್ಥರಾಗಬೇಕಾಗುತ್ತದೆ. ನಾವು ಸೇಲ್ ಟ್ಯಾಕ್ಸಬಿಲ್‌ನ್ನು ತಿದ್ದುಪಡಿ ಮಾಡಿ ಈಗಾಗಲೇ ಬಡವರ ಮೇಲೆ ಹೆಚ್ಚಿನ ತೆರಿಗೆಯನ್ನು ಹಾಕಿದ್ದೇವೆ. ನಾನು ಸಹ ಆ ಕಮಿಟಿಯಲ್ಲಿ ಇದ್ದೆ. ನನಗೆ ಈ ರೀತಿ ತೆರಿಗೆ ಹೆಚ್ಚು ಮಾಡುವುದಕ್ಕೆ ಮನಸ್ಸು ಅಳುಕುತ್ತಿತ್ತು. ಆದರೆ ಟರ್ಮ್ಸ್ ಆಫ್ ರೆಫರೆನ್ಸ್ ಇದ್ದಿದ್ದರಿಂದ ಮತ್ತು ನಾಲ್ಕನೆಯ ಪಂಚ ವಾರ್ಷಿಕ ಯೋಜನೆಗೆ ಹಣ ಬೇಕೆಂದು ಹೇಳಿದ್ದರಿಂದ ಅನಿವಾರ್ಯವಾಗಿ ನಾನು ಒಪ್ಪಬೇಕಾಯಿತು. ಮನಸ್ಸಿಲ್ಲದ ಮನಸ್ಸಿನಿಂದ ಯುನಾನಿಮಸ್ ರಿಪೋರ್ಟ್ ಕೊಡಲು ನಾನು ಒಪ್ಪಬೇಕಾಯಿತು. ಈ ಕಾರಣದಿಂದ ಬಡವರಿಂದ ಬರುವ ಹಣವನ್ನು ಖರ್ಚು ಮಾಡುವಾಗ ಅದನ್ನು ಎರಡು ಸಾರಿ ಹಿಚುಕಿ ನೋಡಬೇಕು. ಆ ಹಣ ಸದ್ವಿನಿಯೋಗವಾಗುತ್ತದೆಯೋ ಇಲ್ಲವೇ ಎಂಬುದನ್ನು ವಿಚಾರಮಾಡಿ ನಂತರ ಖರ್ಚು ಮಾಡಬೇಕು. ಹಣವನ್ನು ವಿನಾಕಾರಣ ಖರ್ಚು ಮಾಡಬಾರದೆಂದು ಈ ದೇಶದ ಜನತೆಯ ಪರವಾಗಿ ಮತ್ತು ಕಂಗಾಲುಗೆಟ್ಟ ಜನತೆಯ ಪರವಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

10-00 A.M.

ಇನ್ನು ರಾಜಕೀಯ ಪರಿಸ್ಥಿತಿಯ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಇವತ್ತು ಒಳಗೆ ಏನೇನು ನಡೆಯುತ್ತಿದೆ ಎಂಬುದು ತಮಗೇ ಗೊತ್ತಿದೆ. ಇವತ್ತು ಒಳಗೊಳಗೇ ಘರ್ಷಣೆ ನಡೆಯುತ್ತಿದೆ. ಎಲೆಕ್ಟ್ರಿಸಿಟಿ ದೀಪದ ಫ್ಯೂಜ್ ಹೋದರೆ ಒಳಗೊಳಗೇ ಬೆಂಕಿ ಹೊತ್ತಿಕೊಳ್ಳುವಂತೆ ನಿಮ್ಮಲ್ಲೂ

ಒಂದು ದಿನ ಘರ್ಷಣೆಯ ಬೆಂಕಿ ಹೊತ್ತಿಕೊಳ್ಳಬಹುದು. ಅದು ಬಹಳ ದೂರ ಇಲ್ಲ. ಈಗ ನಿಮ್ಮ ಬಿಂಬ ಒಂದು ಕಡೆ ಇದ್ದರೆ ಮನಸ್ಸು ಮತ್ತೊಂದು ಕಡೆ ಇದೆ. ನಿಮ್ಮ ಆತ್ಮ ಸಾಕ್ಷಿಗೆ ಸರಿಯಾಗಿ ನಡೆದುಕೊಳ್ಳುತ್ತಿದ್ದೀರಾ ಎಂಬುದನ್ನು ನೀವೇ ಧೈರ್ಯವಾಗಿ ಪ್ರಶ್ನೆ ಹಾಕಿಕೊಳ್ಳಿ. ನಾನು ಅಧಿಕಾರದಲ್ಲಿ ಇಲ್ಲ ಎಂಬ ಕಾರಣದಿಂದ ವೈರಾಗ್ಯಭಾವದಿಂದ ಹೇಳುತ್ತಿಲ್ಲ, ಅಧಿಕಾರದಲ್ಲಿರುವುದು ಗೌಣ. ಇವತ್ತು ಅಧಿಕಾರದಲ್ಲಿ ಇಲ್ಲದಿದ್ದರೆ ಹೆಚ್ಚಿನ ಮರ್ಯಾದೆ ಸಿಗುತ್ತದೆ. ಅಧಿಕಾರದಲ್ಲಿ ಇದ್ದರೆ ಜನರಿಂದ ಬೈಸಿಕೊಳ್ಳಬೇಕು, ಉಗುಳಿಸಿಕೊಳ್ಳಬೇಕು. ಮಾನಮರ್ಯಾದೆಯಿಂದ ಸುಖವಾಗಿ ಜೀವನ ಮಾಡುವುದು ಕಷ್ಟವಾಗುತ್ತದೆ. ನಾನಾದರೂ ಹೇಳುತ್ತೇನೆ, ಇವತ್ತು ದೇಶದಲ್ಲಿ ಜಾತೀಯತೆ ಎಂಬುದು ತಾಂಡವನೃತ್ಯವಾಡುತ್ತಿದೆ. ಈ ದೇಶದಲ್ಲಿ ಲಂಚರುಷುವತ್ತು ಹೆಚ್ಚಾಗಿದೆ ಇದನ್ನು ತಡೆಗಟ್ಟಬೇಕು. ಈ ವಿಚಾರದಲ್ಲಿ ಆ ಕಡೆ ಇರುವ ನನ್ನ ಸ್ನೇಹಿತರು ಯಾವ ರೀತಿಯೂ ಮರೆಮಾಚಿಕೊಳ್ಳದೆ ತಮ್ಮ ಅಭಿಪ್ರಾಯವನ್ನು ತಿಳಿಸಬೇಕು. ಇಲ್ಲದಿದ್ದರೆ ಇನ್ನೂ ಹೆಚ್ಚಿನ ದ್ರೋಹವನ್ನು ಬಗೆದಂತಾಗುತ್ತದೆ. ಹೊಟ್ಟೆಯಲ್ಲಿರುವ ಗೆಡ್ಡೆಯನ್ನು ಸಣ್ಣದಾಗಿರುವಾಗಲೇ ತೆಗೆಸಬೇಕು, ದೊಡ್ಡದಾದ ಮೇಲೆ ಅಪರೇಷನ್ ಮಾಡಿದರೂ ಕೂಡ ಪ್ರಾಣ ಉಳಿಯುವುದು ಕಷ್ಟವಾಗುತ್ತದೆ. ಅದರಂತೆ ತಮ್ಮ ಮನಸ್ಸಿನಲ್ಲಿರುವುದನ್ನು ಹೇಳುವುದು ಒಳ್ಳೆಯದು. ಅದನ್ನು ಬಿಟ್ಟು ಎಲ್ಲದಕ್ಕೂ ಸುಮ್ಮನೆ ಕೈಎತ್ತುವುದು ಸರಿಯಲ್ಲವೆಂದು ನಾನು ಈ ಸಭೆಯಲ್ಲಿ ಪದೇ ಪದೇ ಹೇಳಿದ್ದೇನೆ. ಈ ಸರ್ಕಾರದವರು ದೇಶವನ್ನು ಕೆಡಿಸಿದ್ದಾರೆ, ವಿಷ ಬೀಜವನ್ನು ಬಿತ್ತಿದ್ದಾರೆ. ಈ ಕಾರಣದಿಂದ ನಾವು ಜನರಿಗೆ ಮುಖ ತೋರಿಸುವುದು ಕಷ್ಟವಾಗಿದೆ. ಇವತ್ತು ಹೊರಗೆ ಜನರು ಹೇಳುತ್ತಿದ್ದಾರೆ, ರಾಜಕೀಯದಲ್ಲಿರುವವರೆಲ್ಲಾ ಒಂದೇ ಜಾತಿಯ ಜನರು, ಒಂದು ರೂಪಾಯಿ ನಾಣ್ಯದ ಎರಡು ಮುಖ ಇದ್ದಂತೆ ಇವರು, ಯಾರು ಅಧಿಕಾರಕ್ಕೆ ಬಂದರೂ ಒಂದೇ ಎಂಬುದಾಗಿ. ಇದನ್ನು ತಪ್ಪಿಸಿಕೊಳ್ಳಲು ನಾವು ಶ್ರೀ ನಿಜಲಿಂಗಪ್ಪನವರನ್ನು ಅಡ್ಡಬಿದ್ದು ಬೇಡಿಕೊಂಡೆವು, ಈ ಬಗ್ಗೆ ಒಂದು ವಿಚಾರಣೆಯನ್ನು ಮಾಡಿಸಿ, ಇರುವ ಕೆಟ್ಟ ಹುಳುಗಳು ಹೊರಗೆ ಬರಲಿ. ನಂತರ ನಿರ್ದೋಷಿಗಳು ಧೈರ್ಯವಾಗಿ ರಾಜ್ಯದಲ್ಲಿ ಓಡಾಡುವುದಕ್ಕೆ ಅವಕಾಶವಾಗುತ್ತದೆ ಎಂಬುದಾಗಿ. ಆದರೆ ಅವರು ಮನಸ್ಸು ಮಾಡಲಿಲ್ಲ. ಈ ಕಾರಣದಿಂದ ಜನರ ದೃಷ್ಟಿಯಲ್ಲಿ ಎಲ್ಲರೂ ಒಂದೇ ಆಗಿದ್ದೇವೆ. ಇವತ್ತಿನ ದಿವಸ ಅವರು ಇಂಥವರು ಇವರು ಅಂಥವರು ಎಂದು ಹೇಳುವುದರಲ್ಲಿ ಅರ್ಥವಿಲ್ಲ. ಸರ್ಕಾರದ ಹಣದಿಂದ ನಾಯಿಗಳನ್ನು ಕೊಂಡುಕೊಂಡು ಸರ್ಕಾರದ ಹಣದಿಂದಲೇ ಅವನ್ನು ಸಾಕುವುದು ನಡೆಯುತ್ತಿದೆ. ಈ ಎಲ್ಲ ಕಾರಣದಿಂದ ರಾಜಕೀಯದಲ್ಲಿರುವವರೆಲ್ಲಾ ಒಂದೇ ಗುಂಪಿಗೆ ಸೇರಿದವರು ಎಂದು ಜನರು ಭಾವಿಸುವುದು ತಪ್ಪು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಾನ್ಯ ಶಿವಪ್ಪನವರು ಲಾ ಅಂಡ್ ಆರ್ಡರ್ ಬಗ್ಗೆ ಒಂದೆರಡು ವಿಷಯಗಳನ್ನು ಹೇಳಿದರು. ಈ ವಿಚಾರದ ಬಗ್ಗೆ ನಾನು ಇಲ್ಲಿಯವರೆಗೆ ಮಾತನಾಡಲಿಲ್ಲ. ಈಗ ಮಾತನಾಡಲೇಬೇಕಾಗಿದೆ. ಹಿಂದೆ ಶ್ರೀ ಬಾಳಿಗಾ ಅವರು ಅಧ್ಯಕ್ಷರಾಗಿದ್ದಾಗ ಒಂದು ವಿಷಯ ಇದೇ ವಿಚಾರದಲ್ಲಿ ಪ್ರಸ್ತಾಪಕ್ಕೆ ಬಂದಿತ್ತು. ಚಿತ್ರದುರ್ಗ ಜಿಲ್ಲೆಯಲ್ಲಿ ಒಂದು ರೈತ ಜನಾಂಗಕ್ಕೆ ಸೇರಿದ ಬಹುಸಂಖ್ಯಾತ ಜನರು ಪುಂಡರು ಎಂಬ ಕಾರಣ ಕೊಟ್ಟು ಅವರ ಮೇಲೆ ಪುಂಡುಕಂದಾಯ ಹಾಕಬೇಕೆಂದು ಶ್ರೀ ನಿಜಲಿಂಗಪ್ಪನವರು ಪ್ರಯತ್ನ ಮಾಡಿದ್ದರು. ಅದನ್ನು ವಸೂಲಿ ಮಾಡಿದರೆ ಪರಿಸ್ಥಿತಿ ವಿಕೋಪಕ್ಕೆ ಹೋಗಬಹುದೆಂಬ ದೃಷ್ಟಿಯಿಂದ ಅದನ್ನು ಹಾಗೆಯೇ ಕೈಬಿಟ್ಟರು. ಮೊನ್ನೆ ಒಂದು ವಿಷಯವನ್ನು ಕೇಳಿದೆ, ಅದು ಎಷ್ಟರಮಟ್ಟಿಗೆ ನಿಜವೋ ಸುಳ್ಳೋ ಗೊತ್ತಿಲ್ಲ. ಮೂರು ನಾಲ್ಕು ವರ್ಷದಿಂದ ಅದನ್ನು ಮುಚ್ಚಿಟ್ಟು ಈಗ ಆ ಪುಂಡುಕಂದಾಯವನ್ನು ವಸೂಲಿ ಮಾಡುವುದಕ್ಕೆ ಹೊರಟಿದ್ದಾರೆ ಎಂಬುದನ್ನು ಕೇಳಿದೆ. ಒಂದು ರೈತಾಪಿ ಜನಾಂಗದ ಮೇಲೆ ನೀವು ಈ ರೀತಿ ಪುಂಡುಕಂದಾಯವನ್ನು ವಸೂಲಿ ಮಾಡುವುದಾದರೆ ಮುಂದೆ ಇದೇ ಜನಾಂಗದವರು ಮೈಸೂರು ರಾಜ್ಯದಲ್ಲಿರತಕ್ಕಂಥ 7-8 ಲಕ್ಷ ಜನರಿರುವ ಬೇರೆ ಜನಾಂಗದ ಮೇಲೆ ಪುಂಡುಕಂದಾಯ ಹಾಕುವ ಕಾಲ ಬರಬಹುದು ಎಂಬುದನ್ನು ತಾವು ಮರೆಯಬಾರದು. ಕೇವಲ ರಾಜಕೀಯ ಕಾರಣ ಇಟ್ಟುಕೊಂಡು ಒಂದು ಜನಾಂಗವನ್ನು ತುಳಿಯುವುದಕ್ಕೆ, ಒಂದು ಪ್ರಬಲವಾದ ಸಂಸ್ಥೆಯನ್ನು ಮುರಿಯುವುದಕ್ಕೆ ಶ್ರೀಮಾನ್ ನಿಜಲಿಂಗಪ್ಪನವರು ಹುಟ್ಟಿಸಿದಂಥ ಈ ಪುಂಡುಕಂದಾಯವನ್ನು ವಸೂಲಿ ಮಾಡಲು ಇವತ್ತು ಹೊರಟಿದ್ದರೆ ಅದನ್ನು ಮತ್ತೊಮ್ಮೆ ತಾವು ವಿಚಾರ ಮಾಡುವುದು ಒಳ್ಳೆಯದೆಂದು ಸವಿನಯದಿಂದ ಎಚ್ಚರಿಕೆ ಕೊಡುತ್ತಿದ್ದೇನೆ. ಹಾಕುವುದಿದ್ದರೆ ಧೈರ್ಯವಾಗಿ ಹಾಕಿ, ಇಲ್ಲದಿದ್ದರೆ ಸುಮ್ಮನೆ ಬಿಟ್ಟುಬಿಡಿರಿ ಇದು ರಾಜಕೀಯ ಹುನ್ನಾರ. ಆದ್ದರಿಂದ ಇದನ್ನು ಹಾಕುವುದಕ್ಕೆ ಮೊದಲು ಸರ್ಕಾರ ಎಚ್ಚರಿಕೆಯಿಂದ ವಿಚಾರ ಮಾಡಬೇಕೆಂದು ಈ ಸಮಯದಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ನಿಮಗೆ ಆಗದಿದ್ದವರ ಬಗ್ಗೆ ಏನೇನು ಮಾಡಿದ್ದೀರಿ ಎಂಬ ಬಗ್ಗೆ ಒಂದೇ ಒಂದು ವಿಷಯ ಹೇಳುತ್ತೇನೆ. ಶ್ರೀಮಾನ್ ವೀರಪ್ಪಗೌಡರ ಬಗ್ಗೆ ಒಂದು ಕೇಸನ್ನ್ ಹಾಕಿದ್ದಿರಿ, ಅದನ್ನು ಮೊನ್ನೆ ದಿವಸ ಅಂದರೆ 23-3-1970ರಲ್ಲಿ ಹೈಕೋರ್ಟಿನವರು ವಜಾ

(ಶ್ರೀ ಎಚ್. ಸಿದ್ದವೀರಪ್ಪ)

ಮಾಡಿದರು. ಇದು ಒಂದು ವಿಚಿತ್ರವಾದ ಕೇಸ್. ತಾರೀಖು 25-10-1968ರಲ್ಲಿ ಶ್ರೀ ವೀರಪ್ಪಗೌಡರು ಒಂದು ಚೆಕನ್ನು ಡ್ರಾ ಮಾಡಲು ಇಟ್ಟುಕೊಂಡಿದ್ದರು ಎಂಬುದಾಗಿ ಆ ಬಗ್ಗೆ ಅವರ ಮೇಲೆ ತಾ 9-11-1968ರಲ್ಲಿ ಕಂಪ್ಲೈಂಟ್ ಕೊಟ್ಟರು. ಆ ಬಗ್ಗೆ ಯಾವ ಕ್ರಮವನ್ನೂ ತೆಗೆದುಕೊಳ್ಳದೆ ಅದನ್ನು ಸುಮ್ಮನೆ ಇಟ್ಟರು. ಯಾವಾಗ ಶ್ರೀಮಾನ್ ವೀರಪ್ಪಗೌಡರು ನಿಜಲಿಂಗಪ್ಪನವರನ್ನು ಅಧ್ಯಕ್ಷ ಪದವಿಯಿಂದ ತೆಗೆಯಬೇಕು, ಎ.ಐ.ಸಿ.ಸಿ. ಮೀಟಿಂಗ್ ಕರೆಯಬೇಕು ಎಂಬ ಪತ್ರಕ್ಕೆ ಸಹಿ ಹಾಕಿದರೋ ಆಗ ಚೆಕ್ ವಿಚಾರದಲ್ಲಿ ಒಂದು ಪ್ರಿಲಿಮಿನರಿ ಚಾರ್ಜ್‌ಷೀಟ್‌ನ್ನು ಹಾಕಿದರು. ನ್ಯಾಯಾಂಗ ಇಲಾಖೆಯವರು ಸಹ ಈ ರೀತಿ ಚಾರ್ಜ್‌ಷೀಟ್ ಹಾಕುವುದು ಸರಿಯಲ್ಲ, ಅದು ನಿಲ್ಲುವುದಲ್ಲ ಎಂದು ಹೇಳಿದರೂ ಕೂಡ ಆ ಕೇಸ್‌ನ್ನು ನಡೆಸಿಕೊಂಡು ಬಂದರು. ತಾ 4-11-1969ರಲ್ಲಿ ಚಿಕ್ಕಮಗಳೂರಿನ ಡಿ.ಸಿ.ಸಿ. ಅಧ್ಯಕ್ಷರಾದ ಶ್ರೀಮಾನ್ ರುದ್ರಪ್ಪನವರು ಇವರನ್ನು ಕರೆಸಿಕೊಂಡು ನಿಜಲಿಂಗಪ್ಪನವರನ್ನು ಅಧ್ಯಕ್ಷ ಪದವಿಯಿಂದ ತೆಗೆಯಬೇಕು ಎಂಬ ಪತ್ರಕ್ಕೆ ಸಹಿ ಹಾಕಿರುವುದನ್ನು ವಾಪಸ್ ತೆಗೆದುಕೊಂಡರೆ ನಾವು ನಿಮ್ಮ ಮೇಲೆ ಹಾಕಿರುವ ಕೇಸ್‌ನ್ನು ವಾಪಸ್ ತೆಗೆದುಕೊಳ್ಳುತ್ತೇವೆಂದು ಹೇಳಿದಾಗ ಅದಕ್ಕೆ ಇವರು ಒಪ್ಪಲಿಲ್ಲ. ತಾ. 5-11-1969ರಲ್ಲಿ ಶ್ರೀಮಾನ್ ಶಂಕರೇಗೌಡರು ಇವರನ್ನು ಟ್ರಂಕ್ ಕಾಲ್ ಮಾಡಿ ಕರೆಸಿಕೊಂಡು ಕೇಳಿದರು. ಇದಕ್ಕೆ ನಮ್ಮಲ್ಲಿ ದಾಖಲೆಯೂ ಇದೆ. ಅವರು ಇದನ್ನೆಲ್ಲಾ ಮಾಡಬೇಡಿ ಬಿಟ್ಟುಬಿಡಿ. ನಿಮ್ಮ ಮೇಲೆ ಕೇಸು ಹಾಕುವುದಿಲ್ಲ ಎಂದೂ ಹೇಳಿದರಂತೆ. ಇಷ್ಟೆಲ್ಲಾ ನಾನು ಏತಕ್ಕೋಸ್ಕರ ಹೇಳುತ್ತೇನೆ ಎಂದರೆ ಎಲ್ಲಿಗೆ ನಮ್ಮ ರಾಜ್ಯ ಬಂತು ಎಂದು ಹೇಳಲಿಕ್ಕಾಗಿ. ನಾನು ಹೇಳುವುದನ್ನೇ ಕೇಳು ಎಂದು ಹೇಳುವುದಕ್ಕಿಂತ, ಶ್ರೀ ವೀರಪ್ಪಗೌಡರ ಮೇಲೆ ಕೇಸು ಹಾಕಿ, ತಪ್ಪು ಮಾಡಿದ್ದರೆ ಅವರ ಮೇಲೆ ಶಿಕ್ಷೆಯಾಗುತ್ತದೆ. ಇನ್ನು ಬಿಟ್ಟು ಈ ರೀತಿ ಮಾಡುವುದು ಸರಿಯಲ್ಲ. ನಮ್ಮ ಮಾನ್ಯ ರಾಜ್ಯ ಮಂತ್ರಿಗಳಾದ ಶ್ರೀಮಾನ್ ಆಲೂರು ಹನುಮಂತಪ್ಪನವರು ನೋಡುವುದಕ್ಕೆ ಬಹಳ ಸೌಮ್ಯವಾಗಿದ್ದರೂ ಇವರ ಮೇಲೂ ಕೂಡ ನಮಗೆ ಬಂದಿರತಕ್ಕ ವರ್ತಮಾನಗಳ ಪ್ರಕಾರ ಯಾರೋ ಒಬ್ಬರು ಎಲೆಕ್ಷನ್‌ನಲ್ಲಿ ಸಹಾಯಮಾಡಲಿಲ್ಲ ಎಂದು ಅವರ ಮೇಲೆ ಒಂದು ರೀತಿಯಾಗಿ ಜಿದ್ದು ತೀರಿಸಲು ಕಂದಾಯ ಕೊಟ್ಟಿಲ್ಲ ಎಂದು ಅವರಿಗೆ ಹಿಂಸೆ ಮಾಡುತ್ತಿದ್ದಾರೆ ಎನ್ನುವ ಮಾತೂ ಕೂಡ ಬಂದಿದೆ.

ಶ್ರೀ ಆಲೂರು ಹನುಮಂತಪ್ಪ.—ಇದಕ್ಕೆ ಯಾವ ಆಧಾರವೂ ಇಲ್ಲ. ಬೇಕಾದರೆ ಎನ್‌ಕ್ವೈರಿ ಕಮಿಟಿ ಮಾಡಲಿ ನಾನು ವಿಚಾರಣೆಗೆ ಸಿದ್ಧವಾಗಿದ್ದೇನೆ.

ಶ್ರೀ ಹೆಚ್. ಸಿದ್ದವೀರಪ್ಪ.—ಶ್ರೀಮಾನ್ ಶಿವಪ್ಪನವರಿಗೆ ಬಂದಿರುವಂತೆ ನನಗೂ ಕೂಡ ಕಾಗದಪತ್ರಗಳು ಬಂದಿವೆ. ಇದರಿಂದಾಗಿ ನಾನು ಆ ರೀತಿ ಭಾವಿಸಬೇಕಾಗಿದೆ. ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಮೇಲ್ಮನೆಯಲ್ಲಿ ಈ ವಿಷಯವಾಗಿ ಜವಾಬು ಕೊಟ್ಟಿದ್ದಾರೆ ಎಂದು ನಾನು ಪತ್ರಿಕೆಗಳಲ್ಲಿ ಓದಿದೆ. ಆದರೆ ಇದಕ್ಕೆ ಸಂಬಂಧಪಟ್ಟ ವಿಷಯವೋ ಇಲ್ಲ ಬೇರೆ ವಿಚಾರವಲ್ಲಿ ಕೊಟ್ಟಿದ್ದಾರೋ ನನಗೆ ಗೊತ್ತಾಗಲಿಲ್ಲ. ಒಟ್ಟಿನಲ್ಲಿ ನಾನು ಹೇಳುವುದು ನೀವು ಈ ರೀತಿ ಮಾಡಿಕೊಳ್ಳುವುದಕ್ಕೆ ಹೋಗಬೇಡಿ ಮತ್ತು ಕೆಟ್ಟ ಹೆಸರು ಬರಲು ಅವಕಾಶ ಕೊಡಬೇಡಿ. ಒಂದು ಗಾದೆ ಇದೆ. ತಮಗೆ ಗೊತ್ತಿರಬಹುದು ಅದು ನೋ ಫೈರ್ ವಿಥೌಟ್ ಸ್ಮೋಕ್. ಎಲ್ಲೋ ಸ್ವಲ್ಪ ಇದರ ವಾಸನೆ ಇರುತ್ತದೆ. ವಾಸನೆ ಇಲ್ಲದೆ ಇವೆಲ್ಲಾ ಬರುವುದಿಲ್ಲ. ಈ ರೀತಿ ರಾಜ್ಯಭಾರ ಮಾಡಲು ಹೋಗಬೇಡಿ. ಇನ್ನು ಮೇಲಾದರೂ ಇಂತಹ ತಪ್ಪುಗಳನ್ನು ಹೆಚ್ಚು ಮಾಡಬೇಡಿ. ಮುಂದಾದರೂ ಜಾಗರೂಕತೆಯಿಂದ ಈ ದೇಶದಲ್ಲಿರುವ ಪ್ರಜಾಪ್ರಭುತ್ವವನ್ನು ಉಳಿಸಲು ಮತ್ತು ಅದರ ಬೆಳವಣಿಗೆಗೆ ದಾರಿ ಮಾಡಿಕೊಡಿ. ಶ್ರೀಮಾನ್ ವೀರೇಂದ್ರ ಪಾಟೀಲ್‌ರವರೂ ಕೂಡ ಅವರ ಮನಸ್ಸು ಇದರ ಕಡೆಗೆ ಬದಲಾವಣೆಯಾಗಿದೆ ಎಂದು ಕೇಳುತ್ತೇವೆ. ಅದು ಎಷ್ಟುಮಟ್ಟಿಗೆ ನಿಜವೋ ಗೊತ್ತಿಲ್ಲ. ನಿಮ್ಮನ್ನು ಸ್ಥಳ ಪಲ್ಲಟ ಮಾಡಬೇಕು ಎನ್ನುವ ಆಸೆ ನಮಗೆ ಎಳ್ಳಷ್ಟೂ ಇಲ್ಲ. ಈವೊತ್ತಿನ ದಿವಸ ನಿಮಗೆ ಸ್ಥಾನವನ್ನು ಕೊಟ್ಟಿದ್ದರೂ ಆ ಸ್ಥಾನವನ್ನು ಹಿಡಿದುಕೊಳ್ಳುವುದಕ್ಕೂ ನಿಮಗೆ ಶಕ್ತಿ ಇಲ್ಲ. ಈಗ ಬಂದಿರತಕ್ಕ ಎರಡು ಸಮಸ್ಯೆಗಳು ಎಂದರೆ ಒಂದು ಗಡಿ ಸಮಸ್ಯೆ ಮತ್ತು ನೀರಿನ ಸಮಸ್ಯೆ. ನಾನಾಗಲೇ ಹೇಳಿದ ಹಾಗೆ ನಿಮಗೆ ಇದರಲ್ಲಿ ಇಂಟರೆಸ್ಟ್ ಇರಲಿ ಇಲ್ಲದೇ ಇರಲೀ ನಾವು ನಿಮ್ಮ ಮೇಲೆ ಇದರ ಹೊಣೆಯನ್ನು ಹೊರಿಸುವುದಕ್ಕೆ ಹೋಗುವುದಲ್ಲ. ನಿಮ್ಮ ಮೇಲೆ ನಮಗೆ ಇಷ್ಟವಿಲ್ಲದೇ ಹೋದರೂ ಈ ದೇಶದ ಮೇಲೆ ಇರುವ ಪ್ರೇಮಕ್ಕೋಸ್ಕರ ನಾವು ನಮ್ಮ ಕೈಲಾದ ಕೆಲಸ ಮಾಡುತ್ತೇವೆ. ನಿಮಗೆ ಹೆದರಿಕೊಂಡು ನಾವು ಕೆಲಸ ಮಾಡಬೇಕಾಗಿಲ್ಲ ಎಂದು ಮತ್ತೊಮ್ಮೆ ಹೇಳುತ್ತೇನೆ. ನಾವು ದಿನವೂ ಪತ್ರಿಕೆಗಳಲ್ಲಿ ನೋಡುತ್ತೇವೆ. ಮಹಾರಾಷ್ಟ್ರದ ಮುಖ್ಯ ಮಂತ್ರಿಗಳಾದ ಶ್ರೀಮಾನ್ ನಾಯಕ್

ರವರು ವಾರಕ್ಕೆ ಎರಡು ಮೂರು ದಿನಕ್ಕೆ ಒಂದು ಸಾರಿ ದೆಹಲಿಗೆ ಹೋಗಿ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿಕೊಂಡು ಬರುತ್ತಿದ್ದಾರೆ ಎಂದು. ನಮ್ಮ ಮುಖ್ಯ ಮಂತ್ರಿಗಳಿಗೆ ನಾನು ಸಲಹೆ ಮಾಡುವುದು ಒಂದು ತಿಂಗಳು ಬೇಕಾದರೂ ನಿಮ್ಮ ಆಫೀಸನ್ನು ದೆಹಲಿಯಲ್ಲೇ ಇಟ್ಟುಕೊಂಡು ಕೆಲಸ ಮಾಡಿ ಇದರಿಂದ ಅನುಕೂಲವಾಗುತ್ತದೆ ಎಂದು ಎಷ್ಟು ಸಲಹೆ ಮಾಡಿದರೂ ಪ್ರತಿಯೊಂದು ಸಾರಿಯೂ ಇದಕ್ಕೆ ಬೆಲೆ ಕೊಡುತ್ತಿಲ್ಲ. ನಾನು ನಮ್ಮ ಪಕ್ಷದ ಬಗ್ಗೆ ಹೇಳುವುದಾದರೆ ಅವರು ನಮ್ಮ ಸಹಕಾರವನ್ನು ಕೇಳಿದರೆ ನಾವು ಕೊಡಲು ಸಿದ್ಧರಾಗಿದ್ದೇವೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಹಾರಾಷ್ಟ್ರದ ಮುಖ್ಯ ಮಂತ್ರಿಗಳು ಅವರ ನೇತೃತ್ವದಲ್ಲಿ ಒಂದು ಡೆಲೆಗೇಷನನ್ನ ಸದಸ್ಯದಲ್ಲೆ ಕರೆದುಕೊಂಡು ಹೋಗುತ್ತಾರಂತೆ.

ಶ್ರೀ ಎಚ್. ಸಿದ್ದವೀರಪ್ಪ.—ಅವರೇನೋ ಮಾಡುತ್ತಾರೆ. ಆದರೆ ನಮ್ಮ ಮುಖ್ಯ ಮಂತ್ರಿಗಳು ಮಾಡುವುವಕ್ಕೆ ಹಿಂಜರಿಯುತ್ತಿದ್ದಾರೆ. ನಾವು ಇದಕ್ಕಾಗಿ ಅವರನ್ನು ಬಯ್ಯುವುದಕ್ಕೆ ಹೋಗುವುದಿಲ್ಲ. ಇದರಲ್ಲಿ ಯಾರನ್ನೂ ದೂಷಿಸಲು ಹೋಗುವುದಿಲ್ಲ. ನಮ್ಮ ಕರ್ತವ್ಯ ಮಾಡಲಿಕ್ಕೆ ನಮಗೆ ಸಮಯ ಬಂದಾಗ ನಾವೇ ಹೋಗುತ್ತೇವೆ. ಅವರು ನಮ್ಮ ಸಹಕಾರ ಬೇಕೆಂದು ಇಷ್ಟಪಟ್ಟರೆ ಯಾವಾಗಲೂ ನಾವು ತೆರೆದ ಮನಸ್ಸಿನಿಂದ ಕೊಡಲು ತಯಾರಿದ್ದೇವೆ. ಮತ್ತು ಏನು ಬೇಕಾದರೂ ಮಾಡುವುದಕ್ಕೆ ತಯಾರಾಗಿದ್ದೇವೆ. ಒಂದು ಒಳ್ಳೆಯ ಕಾರ್ಯ ಮಾಡುವಾಗ ಮತ್ತು ಸಮಾಜಕ್ಕೆ ಒಳ್ಳೆಯದಾಗುವಾಗ ನಮ್ಮ ಹಳ್ಳಿಗಳಲ್ಲಿ ಎಲ್ಲ ಜನರೂ ಕೂಡಿಕೊಂಡು ಮಾಡುವಂತೆ ಇಲ್ಲೂ ಕೂಡ ಎಲ್ಲರೊಡನೆ ಕೂಡಿಕೊಂಡು ಮಾಡುವುದು ನಮ್ಮ ಸಮಾಜದ ಕರ್ತವ್ಯ. ಇದು ಸಮಾಜದ ಕಾರ್ಯ ಎಂದು ನಾವು ಹೆಚ್ಚು ಪ್ರಯತ್ನ ಮಾಡಿ ಕೆಲಸ ಮಾಡುತ್ತೇವೆ ಎಂದು ಇಷ್ಟು ಮಾತನ್ನು ಕೇಳಿ ಕೊನೆಯಲ್ಲಿ ಮಾನ್ಯ ಮಂತ್ರಿಗಳಾದ ಶ್ರೀ ರಾಮಕೃಷ್ಣ ಹೆಗ್ಗಡೆಯವರಲ್ಲಿ ವಿನಯದಿಂದ ಪ್ರಾರ್ಥನೆ ಮಾಡುವುದು ಆದಷ್ಟು ಹಣವನ್ನುಳಿಸಿ ನೀರಾವರಿ ಕೆಲಸಗಳಿಗೆ ಹಾಗೂ ನೀರಾವರಿ ಕಾಮಗಾರಿಗಳಿಗೆ ಕೊಡಿ. ಆದರೆ ಒಂದು ಪೈಸಾ ಹಣವನ್ನೂ ಮಾನ್ಯ ಮಂತ್ರಿಗಳಾದ ಶ್ರೀನಾಡಗೌಡರ ಕೈಗೆ ಕೊಡಬೇಡಿ. ಏಕೆಂದರೆ ಅವರ ಕೈಗೆ ಎಷ್ಟು ಹಣ ಕೊಟ್ಟರೂ ಹೊಳೆಯ ನೀರಿನಲ್ಲಿ ಹುಣಿಸೆಹಣ್ಣು ಕಿವಿಚಿದಂತಾಗುತ್ತದೆ. ಮಾನ್ಯ ನಾಡಗೌಡರಿಗೆ ಕೊಡುವ ಹಣವೂ ಒಂದೇ ಸ್ಮಶಾನಕ್ಕೆ ಹೋಗುವ ಹೆಣಕ್ಕೆ ಕೊಡುವ ಹಣವೂ ಒಂದೇ. ಇವರ ಇಲಾಖೆಗೆ ಹಣ ಕೊಡಬೇಡಿ. ಇಷ್ಟು ಹೇಳಿ ನನ್ನ ಮಾತನ್ನು ಪೂರೈಸುತ್ತೇನೆ.

†ಶ್ರೀ ಶರಣಗೌಡ ಇನಾಂದಾರ್ (ಜವರ್ಗಿ).—ಮಾನ್ಯ ಅಧ್ಯಕ್ಷರೇ, ಈ ದಿವಸ ನಮ್ಮ ಮುಂದೆ ಇರತಕ್ಕ ಮೈಸೂರು ಅಪ್ರೊಪ್ರಿಯೇಷನ್ ಬಿಲ್ ನಂಬರು (2) 1970 ಎನ್ನುವ ಬಿಲ್ಲನ್ನು ಮಂಜೂರು ಮಾಡುವ ಸಂದರ್ಭದಲ್ಲಿ ಇಲ್ಲ ಚರ್ಚೆ ನಡೆಯುತ್ತಿದೆ. ಈಗಾಗಲೇ ಸಾಮಾನ್ಯವಾಗಿ ಖಂಡ ಪತ್ರಗಳ ಬಗ್ಗೆ ಅನೇಕ ಮಹನೀಯರು ತಮ್ಮ ತಮ್ಮ ವಿಚಾರಗಳನ್ನು ವ್ಯಕ್ತಪಡಿಸಿದ್ದಾರೆ ಮತ್ತು ಈ ಬಿಲ್ಲಿನ ಮೇಲೂ ಸಾಕಷ್ಟು ಹೇಳಿದ್ದಾರೆ. ನಾನು ಅಷ್ಟು ಡಿಟೇಲ್ ಆಗಿ ಹೇಳುವುದಕ್ಕೆ ಹೋಗದೆ ಕೆಲವು ಮುಖ್ಯ ಅಂಶಗಳ ಬಗ್ಗೆ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಅವಧಿಯಲ್ಲಿ ಕೆಲಸಗಳನು ಮಾಡಬೇಕಾಗಿತ್ತು ಎಂದು ಇಲ್ಲಿ ಸೂಚಿಸಬಯಸುತ್ತೇನೆ. ಮೊದಲನೇದು, ಸಾಮಾನ್ಯವಾಗಿ ಭಾಷಾವಾರು ಪ್ರಾಂತರಚನೆಯಾದ ಮೇಲೆ 18 ವರ್ಷಗಳ ಕಾಲದಿಂದಲೂ ಕಾಂಗ್ರೆಸ್ಸು ಸರಕಾರವೇ ಆಡಳಿತ ಮಾಡುತ್ತ ಬರುತ್ತಿದೆ. ಹಾಗಿದ್ದೂ ಮೈಸೂರು ಪ್ರಾಂತಕ್ಕೆ ಬದಲಾಗಿ 'ಕರ್ಣಾಟಕ' ಎನ್ನುವ ಒಂದು ಹೆಸರನ್ನು ಕೊಡುವುದಕ್ಕೆ ಇನ್ನೂ ಆಗಲಿಲ್ಲ. ಇದೆ ಪಕ್ಕದ ನಮ್ಮ ಮದ್ರಾಸು ರಾಜ್ಯದಲ್ಲಿ ಡಿ. ಎಂ. ಕೆ. ಸರಕಾರ ಬಂದ ಮೂರು ವರ್ಷದ ಕಾಲದಲ್ಲೇ ಮದ್ರಾಸು ಎಂದು ಇದ್ದ ಹೆಸರನ್ನು ತೆಗೆದು 'ತಮಿಳು ನಾಡು' ಎಂದು ಹೆಸರನ್ನು ಇಟ್ಟು ಈ ದೇಶದ ಜನಾಂಗದ ಬಹು ಕಾಲದ ಬೇಡಿಕೆಯನ್ನು ಅವರು ಪೂರ್ತಿಗೊಳಿಸಿ ಅಲ್ಲಿನ ಜನರಿಗೆ ಸಂತೋಷಗೊಳಿಸಿದ್ದಾರೆ. ಇಲ್ಲಿ ನಮ್ಮ ಸರಕಾರದವರೂ ಕೂಡ ಒಂದೇ ಮನಸ್ಸಿನಿಂದ ಇಲ್ಲ. ಏತಕ್ಕಾಗಿ ಮನಸ್ಸು ಮಾಡುತ್ತಿಲ್ಲವೊ ಗೊತ್ತಿಲ್ಲ. ಈ ವಿಚಾರ ನೋಡಿದರೆ ನಮಗೆ ಬಹಳ ವ್ಯಥೆಯಾಗುತ್ತದೆ. ಸುಮ್ಮನೆ ವಿರೋಧ ಪಕ್ಷದಿಂದ ಬರತಕ್ಕ ಗೊತ್ತುವಳಿ ಹಾಗೂ ರೆಸಲ್ಯೂಷನ್‌ಗಳ ಮೇಲೆ ಎಷ್ಟೋ ಬಾರಿ ಈ ಮನೆಯಲ್ಲಿ ಬಂದು ಮಾತನಾಡಿ ಸುಮ್ಮನೆ ಇದನ್ನು ಮುಂದೂಡಿಕೊಂಡು ಬರುತ್ತಿದ್ದಾರೆ. ಇವಕ್ಕೆ ನಿರ್ದಿಷ್ಟವಾದ ಒಂದು ರೂಪನ್ನು ಕೊಟ್ಟು ಇಂತಹ ಒಂದು ಗೊತ್ತುವಳಿ ಪಾಸುಮಾಡಿ ಇದನ್ನು ಮಾಡುವುದಕ್ಕೆ ಇವರಿಗೇನು ತೊಂದರೆ ಇದೆ ಎನ್ನುವುದನ್ನು ಇವೊತ್ತಿನವರೆಗೂ ನಮ್ಮ ಮುಖ್ಯ ಮಂತ್ರಿಗಳಾಗಲೀ ಅಥವಾ ಇನ್ನೊಬ್ಬರಾಗಲೀ ತಮ್ಮ ನಿರ್ಧಾರವನ್ನು ಕೊಟ್ಟಿಲ್ಲ. ಇದರ ಸಲುವಾಗಿ ನಾನು ಹೇಳುವುದು ಇನ್ನು 1972ರ ವರೆಗೆ ಅಧಿಕಾರ ತಮಗೆ ಇದೆ. ಅಲ್ಲಿಯವರೆಗೂ ಇದನ್ನು ಮುಂದೂಡದೇ ಈ ದೇಶದ ಜನಕ್ಕೆ ಸರ್ವ ಸಮ್ಮತವಾಗುವಂತಹ ಹೆಸರನ್ನು ಇಡುವ ಗೊತ್ತುವಳಿಯನ್ನು ಪಾಸುಮಾಡಿ ಕೇಂದ್ರದವರಿಗೆ ಸಲಹೆಮಾಡಿ ಇಲ್ಲಿ ಇರುವ ಘಟನೆಗೂ ತಿದ್ದುಪಡಿ

(ಶ್ರೀ ಶರಣಗೌಡ ಇನಾಂದಾರ್)

ಮಾಡುವ ಸೂಚನೆಯನ್ನು ಸೂಚಿಸಿ ನಮ್ಮೆಲ್ಲ ಜನರ ಆಸೆ ಆಕಾಂಕ್ಷೆಗಳನ್ನು ಪೂರೈಸುತ್ತಾರೆ ಎಂದು ನಾನು ತಮ್ಮ ಮೂಲಕ ಮುಖ್ಯ ಮಂತ್ರಿಗಳಲ್ಲಿ ಕೃತಜ್ಞತೆಯಿಂದ ವಿನಂತಿ ಮಾಡಿಕೊಳ್ಳುತ್ತೇನೆ.

ಎರಡನೆಯದು ಜನರಲ್ ಅಡ್ಮಿನಿಸ್ಟ್ರೇಷನ್ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಸಾಮಾನ್ಯವಾಗಿ ಈ ದೇಶದಲ್ಲಿ ನಡೆಯತಕ್ಕ ಆಡಳಿತದ ಮೇಲೆ ವಿಚಾರಮಾಡುವ ಮಂತ್ರಿಗಳಿಗೆ ಬಹಳ ತೊಂದರೆಯಾಗುತ್ತಿದೆಯೋ ಏನೋ ಎಂದು ನನಗನಿಸುತ್ತದೆ. ಏಕೆಂದರೆ ಅಧಿಕಾರಿಗಳ ಮೇಲೆ ಸರಿಯಾದ ಹಿಡಿತವಿಲ್ಲ ಎಂದು ಅನೇಕ ಮಿತ್ರರು ಈಗಾಗಲೇ ಹೇಳಿದ್ದಾರೆ. ನಾನು ಇದನ್ನು ಹೊಸದಾಗಿ ಹೇಳುತ್ತಿಲ್ಲ. ಆದರೆ ಅವರು ಏಕೆ ಈ ರೀತಿಯಾಗಿ ಹೇಳುತ್ತಾರೆ ಎನ್ನುವ ವಿಚಾರವನ್ನು ನಾವು ಯೋಚನೆ ಮಾಡುವುದಾದರೆ ನನಗನಿಸುವುದು ಏನೋ ಒಂದು ತರಹ ವೀಕ್‌ನೆಸ್ ಇದರಲ್ಲಿದೆ ಎಂದು ನನಗನ್ನಿಸುತ್ತವೆ.

[MR. CHAIRMAN (SRI D. M. SIDDAIAH) in the Chair]

ಎಲ್ಲಿಯವರೆಗೆ ಈ ಆಡಳಿತ ಸರಿಯಾಗಿ ನಡೆಸುವುದಕ್ಕೆ ನಾವು ಶುದ್ಧೀಕರಣ ಮಾಡುವುದಿಲ್ಲವೋ ಅಲ್ಲಿಯವರೆಗೆ 500 ಕೋಟಿ ರೂಪಾಯಿಗೆ ಮೇಲ್ಪಟ್ಟು ಜನತೆಯಿಂದ ವಸೂಲು ಮಾಡಿದ ಹಣವನ್ನು ಸರಕಾರದ ಕೈಯಲ್ಲಿ ಕೊಡುವುದು ಸರಿಯಲ್ಲ. ಸರಕಾರದವರು ಒಂದೊಂದು ಖಾತೆಗೆ ಮುಂಗಡ ಪತ್ರದಲ್ಲಿ ಈ ಮನೆಯ ಮುಂದೆ ಎಷ್ಟು ಡಿಮಾಂಡು ಮಾಡುತ್ತಾ ಇದ್ದಾರೋ ಅದರ ಪೈಕಿ ಶೇಕಡಾ ನಾಲ್ಕರಷ್ಟು ಕೂಡ ಖರ್ಚುಮಾಡುತ್ತಾ ಇಲ್ಲ. ಇನ್ನು ಕೆಲವು ಸಂದರ್ಭಗಳಲ್ಲಿ ಒಂದೊಂದು ಡಿಮ್ಯಾಂಡಿಗೆ ಅವರು ಎಷ್ಟು ಕೇಳುತ್ತಿದ್ದಾರೋ ಅದಕ್ಕೆ ಎರಡು ಪಟ್ಟು ಮೂರು ಪಟ್ಟು ಹೆಚ್ಚಿಗೆ ಖರ್ಚುಮಾಡುತ್ತಿದ್ದಾರೆ. ಈ ಮನೆಯ ಮನ್ನಣೆ ಪಡೆಯದೆ ತಮಗೆ ಬೇಕಾದಷ್ಟು ಖರ್ಚುಮಾಡಿ ಆಮೇಲೆ ಸಪ್ಲಿಮೆಂಟರಿ ಡಿಮ್ಯಾಂಡ್ಸ್ ಅಥವಾ ಎಕ್ಸೆಸ್ ಡಿಮ್ಯಾಂಡ್ಸ್ ಈ ಸಭೆಯ ಮುಂದೆ ತಂದಿರುವುದು ಗೊತ್ತಿದೆ. ಎಸ್ಟಿಮೇಟ್ ಕಮಿಟಿ ಮತ್ತು ಪಬ್ಲಿಕ್ ಅಕೌಂಟ್ಸ್ ಕಮಿಟಿ ಸದಸ್ಯರನ್ನು ಈ ಮನೆಯಿಂದ ಆರಿಸಿ ಕಳುಹಿಸಿದ್ದೇವೆ. ಅವರು ಏನಾದರೂ ಶಿಫಾರಸುಗಳನ್ನು ಮಾಡಿದರೆ ಅದನ್ನು ಸರಕಾರದವರು ಕಾರ್ಯಾಚರಣೆಗೆ ತರದೆ ಇರುವುದು ವಿಷಾದಕರ ಎಂದು ಹೇಳುತ್ತೇನೆ. ಈ ಕಮಿಟಿಗಳು ಎರಡು ವರ್ಷ ಕಷ್ಟಪಟ್ಟು ಅನೇಕ ವಿಚಾರಗಳನ್ನು ತಿಳಿದುಕೊಂಡು ರಿಕಾರ್ಡುಗಳನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿ ಸಿದ್ಧಪಡಿಸಿದ ರಿಕಾರ್ಡುಗಳಿಗೆ ಸರಕಾರದವರು ಗಮನ ಕೊಡದೆ ಇರುವುದು ಬಹಳ ವಿಷಾದನೀಯ. ಅವರ ಶಿಫಾರಸುಗಳನ್ನು ಕಾರ್ಯಗತಮಾಡುವುದಕ್ಕೆ ಯಾವ ತೊಂದರೆ ಇದೆ ಎಂದು ಹೇಳಿಕೆಯನ್ನು ಏನೂ ಕೊಟ್ಟಿಲ್ಲ. ಈ ದೃಷ್ಟಿಯಿಂದ ನೋಡಿದ್ದೇ ಆದರೆ ಪ್ರಜಾಪ್ರಭುತ್ವದಲ್ಲಿ ಈ ರೀತಿ ಮುಂದುವರಿಯುತ್ತಾ ಹೋದರೆ ದೇಶದಲ್ಲಿ ಇರತಕ್ಕ ಜನತೆಗೆ ಪ್ರಜಾಪ್ರಭುತ್ವದಲ್ಲಿ ಭಕ್ತಿ ಮತ್ತು ವಿಶ್ವಾಸ ಕಡಿಮೆ ಆಗುವ ಪ್ರಸಂಗ ಬರುತ್ತದೆ. ಆದುದರಿಂದ ಆ ಶಿಫಾರಸುಗಳನ್ನು ಕಾರ್ಯಗತ ಮಾಡುವುದರಲ್ಲಿ ದಕ್ಷತೆ ಮತ್ತು ಪ್ರಾಮುಖ್ಯತೆಯನ್ನು ಸರಕಾರದವರು ತೋರಿಸಬೇಕೆಂದು ತಮ್ಮ ಮುಖಾಂತರ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನೊಂದು ಅಧಿಕಾರಿಗಳ ವರ್ಗಾವಣೆ ಮಾಡುವುದರಲ್ಲಿ ಅನೇಕ ರೀತಿ ಲೋಪದೋಷಗಳು ಕಂಡುಬರುತ್ತಿವೆ. ಕೆಲವು ಅಧಿಕಾರಿಗಳು 10-15 ವರ್ಷಗಳಾದರೂ ಒಂದೇ ಕಡೆ ಇರುತ್ತಾರೆ. ಇನ್ನು ಕೆಲವರನ್ನು ಎರಡು ವರ್ಷಗಳಲ್ಲಿಯೇ ಯಾವ ಕಾರಣವೂ ಇಲ್ಲದೆ ವರ್ಗ ಮಾಡಿರುವ ಪ್ರಸಂಗ ಇದೆ. ಇದನ್ನು ದೂರಿಕರಿಸಬೇಕು. ಹೈದರಾಬಾದು ಕರ್ನಾಟಕ ಅಥವಾ ಉತ್ತರ ಭಾಗದಿಂದ ಬರತಕ್ಕ ಜನರು ಒಂದು ವಿಚಾರ ಹೇಳುತ್ತಿದ್ದಾರೆ. ವಿಧಾನಸೌಧದಲ್ಲಿ ಈಗ ಇರತಕ್ಕ ಆಡಳಿತ ವರ್ಗದವರ ಮುಖಾಂತರ ಯಾವ ಕೆಲಸವೂ ಸುಲಭವಾಗಿ ಆಗುವುದಿಲ್ಲ. ಯಾವುದಾದರೂ ಫೈಲು ಷರ್ನ್ ಕ್ಲಾರ್ಕ್‌ನಿಂದ ಅಂಡರ್ ಸೆಕ್ರೆಟರಿಗೆ ಬರಬೇಕಾದರೆ ಎಷ್ಟೋ ಎಂ.ಎಲ್.ಎ.ಗಳು ಬಂದು ಹೇಳಿದರೂ ಬರುವುದಿಲ್ಲ. ಮತ್ತೆ ಪುನಃ ಮಂತ್ರಿಗಳ ಹತ್ತಿರ ಹೋಗಿ ಅವರ ಪಿ.ಎ. ಮುಖಾಂತರ ಫೋನ್ ಮಾಡಿಸಿದರೆ ಹೆಜ್ಜೆಯಮೇಲೆ ಹೆಜ್ಜೆ ಇಟ್ಟುಕೊಂಡು ನಿಧಾನವಾಗಿ ಬರುತ್ತದೆ. ಇದನ್ನು ನೋಡಿ ಜನರಿಗೆ ಬೇಜಾರು ಆಗಿದೆ. ಒಬ್ಬ ಮನುಷ್ಯ ನೂರಾರು ಮೈಲಿ ದೂರದಿಂದ ಬಂದು ರೊಕ್ಕ ಖರ್ಚುಮಾಡಿ ಬೆಂಗಳೂರಿನಲ್ಲಿ ಎಂಟು ದಿವಸ ಇದ್ದರೂ ಕೆಲಸವಾಗುವುದಿಲ್ಲ. ನೋಡೋಣ, ಮಾಡೋಣ, ನೀವು ಹೋಗಿರಿ ನಾವು ಕಳುಹಿಸಿಕೊಡುತ್ತೇವೆ ಎಂದು ಹೇಳುತ್ತಾರೆ. ಆದರೆ ಅವರು ನೋಡುವುದೂ ಇಲ್ಲ ಮಾಡುವುದೂ ಇಲ್ಲ. ಸ್ವಲ್ಪ ಸಮಯದ ನಂತರ ಪುನಃ ಬಂದು ಕೆಲಸ ಏನು ಆಯಿತು ಎಂದು ಕೇಳಿದರೆ ಯಾವ ಕೆಲಸ ಎಂದು ಅವರನ್ನೇ ಕೇಳುವ ಸಂದರ್ಭ ಉಂಟು. ಈ ರೀತಿ ಕೆಲಸ ನಡೆಯುತ್ತಾ ಇದೆ. ಮುಖ್ಯ ಮಂತ್ರಿಗಳು ತಾವು ಅಧಿಕಾರ ವಹಿಸಿದ ಕೂಡಲೇ ಒಂದು

ಹೇಳಿಕೆಯನ್ನು ಕೊಟ್ಟು ಆಶಾದಾಯಕವಾದ ವಾತವರಣ ನಿರ್ಮಾಣ ಮಾಡಿದರು. ಎಲ್ಲ ಸರಕಾರಿ ಅಧಿಕಾರಿಗಳನ್ನು ಉದ್ದೇಶಿಸಿ ಮಾತನಾಡುತ್ತಾ ಎಲ್ಲಾ ಜನರಿಗೂ ನ್ಯಾಯ ಸಿಗಬೇಕು ಎಂದು ಹೇಳಿದರು, ಒಂದೆರಡು ತಿಂಗಳು ಅಧಿಕಾರಿಗಳು ಪ್ರಾಂಪ್ಟ್ ಆಗಿ ಕೆಲಸ ಮಾಡಿದರು. ಆಮೇಲೆ ಮೊದಲಿನಂತೆಯೇ ಕೆಲಸ ನಡೆಯುತ್ತಿದೆ. ಯಾವ ಫೈಲ್ ಎಲ್ಲಿ ಹೋಗಿದೆ ಎಂದು ಹುಡುಕುವುದೇ ಕಷ್ಟವಾಗಿದೆ. ಈ ದೃಷ್ಟಿಯಿಂದ ಮೊದಲು ಅದನ್ನು ಸರಿಪಡಿಸಿ ಜನರಿಗೆ ಸಮಾಧಾನ ಮಾಡಬೇಕು.

ಎರಡನೆಯದು ಎಕಾನಮಿ ಬಗ್ಗೆ ಸಾಮಾನ್ಯವಾಗಿ ರಾಮಕೃಷ್ಣಹೆಗ್ಗಡೆಯವರು ಎಷ್ಟೋ ಸಲ ಉಳಿಸುತ್ತೇವೆ ಎಂದು ಹೇಳಿದರು, ಮುಖ್ಯವಾದಂಥ ಕೆಲಸಗಳಿಗೆ ಕೊಟ್ಟಂಥ ಹಣದಲ್ಲಿ ಶೇಕಡಾ 20—25 ರಷ್ಟು ಉಳಿಸಿ ಸರ್‌ಪ್ಲಸ್ ಬಜೆಟ್ ಮಾಡಿರುವುದನ್ನು ಬಹಳ ಸಲ ನೋಡಿದ್ದೇನೆ. ಯಾಕಂದರೆ ಕೃಷ್ಣ ಪ್ರಾಜೆಕ್ಟ್ ಮತ್ತು ಅನೇಕ ದೊಡ್ಡ ದೊಡ್ಡ ಕೆಲಸಗಳಿಗೆ ಅಪಾರವಾಗಿ ಹಣ ಒದಗಿಸಿ ಮುಂದೆ ಅದರಲ್ಲಿ ನಾಲ್ಕನೆ ಒಂದು ಭಾಗವನ್ನು ಖರ್ಚು ಮಾಡದೆ ಉಳಿಸಿರುವಂಥದ್ದು ಅನೇಕ ಸಲ ನೋಡಿದ್ದೇವೆ. ಈ ದೃಷ್ಟಿಯಿಂದ ಎಕಾನಮಿ ಮಾಡುವುದಲ್ಲ. ಎಕಾನಮಿ ಮಾಡಬೇಕಾದರೆ ಬಂಗಾಳ ಮತ್ತು ಪಂಜಾಬಿನಲ್ಲಿ ಯಾವ ರೀತಿ ಅಪ್ಪರ್ ಹೌಸ್ ಅಬಾಲಿಷ್ ಮಾಡಿದ್ದಾರೋ ಆ ರೀತಿ ಇಲ್ಲಿಯೂ ಅಬಾಲಿಷ್‌ಮಾಡಿ ಉಳಿತಾಯ ಮಾಡಿದರೆ ಹಣವನ್ನು ಉಳಿತಾಯ ಮಾಡಬಹುದು. In principle almost all the parties have accepted the abolition of the upper house. ಆದುದರಿಂದ ಮೈಸೂರಿನಲ್ಲಿಯೂ ಮೇಲ್ಮನೆಯನ್ನು ಉಳಿಸಿಕೊಂಡು ಬರುವುದರಲ್ಲಿ ಏನು ಅರ್ಥವಿಲ್ಲ ಎಂದು ನನಗನಿಸುತ್ತದೆ. ಈ ದೃಷ್ಟಿಯಿಂದ ತಾವು ಈ ಸೆಷನ್‌ನಲ್ಲಿ ಆಗಲಿ ಅಥವಾ ಮುಂದಿನ ಸೆಷನ್‌ನಲ್ಲಿ ಆಗಲಿ ಇಲ್ಲಿ ಇರತಕ್ಕ ವಿಧಾನ ಪರಿಷತ್ತನ್ನು ಅಬಾಲಿಷ್ ಮಾಡಲು ಇಲ್ಲ ಒಂದು ರೆಜಲ್ಯೂಷನ್ ತಂದು ಪಾಸ್ ಮಾಡಿ ಕೇಂದ್ರ ಸರಕಾರಕ್ಕೆ ಕಳುಹಿಸಿಕೊಟ್ಟದ್ದೇ ಆದರೆ ನಮಗೂ ತೊಂದರೆ ಕಡಿಮೆ ಆಗುತ್ತದೆ. ನಿಮಗೂ ತೊಂದರೆ ಕಡಿಮೆಯಾಗಿ ಅಪಾರವಾದ ಹಣ ಉಳಿಯುತ್ತದೆ. ಮೇಲ್ಮನೆ ಇದ್ದರೆ ಕೆಲವು ಎಂ.ಎಲ್.ಸಿ ಗಳನ್ನು ಮಂತ್ರಿಮಂಡಲದಲ್ಲಿ ಸೇರಿಸಬೇಕಾಗುತ್ತದೆ. ಹಾಗೆ ಸೇರಿಸದಿದ್ದರೆ ಪಾರ್ಟಿಯಲ್ಲಿ ನಿಮಗೆ ತೊಂದರೆಯಾಗುತ್ತದೆ. ಅದೂ ಅಲ್ಲದೆ, ನೇರವಾಗಿ ಜನರಿಂದ ಆರಿಸಿ ಬಂದ ಜನರನ್ನು ಮಂತ್ರಿಮಂಡಲದಲ್ಲಿ ಸೇರಿಸಿ ಜವಾಬ್ದಾರಿಯಿಂದ ವರ್ತಿಸತಕ್ಕ ಶಕ್ತಿ ನಿಮಗೆ ಬರುವುದಿಲ್ಲ. ಕನಿಷ್ಟಪಕ್ಷ ಮಂತ್ರಿಮಂಡಲದಲ್ಲಿ ಮೂರನೇ ಒಂದು ಭಾಗ ಮೇಲ್ಮನೆಯ ಸದಸ್ಯರಿರುತ್ತಾರೆ.

ಶ್ರೀ ರಾಮಕೃಷ್ಣಹೆಗಡೆ.—ಇಲ್ಲಿ ಮೂರು ಜನ ಇದ್ದಾರೆ.

ಶ್ರೀ ಶರಣಗೌಡ ಇನಾಂದಾರ್.—ಒಂದೊಂದು ಕಡೆ ಹಾಗೆ ಇದೆ. ಆದುದರಿಂದ ಮೇಲ್ಮನೆಯನ್ನು ವಜಾ ಮಾಡಿ ಅದಕ್ಕೆ ಆಗತಕ್ಕ ಖರ್ಚನ್ನು ಉಳಿಸಿ ಅದನ್ನು ಬೇರೆ ಡೆವಲಪ್‌ಮೆಂಟ್ ಕಾರ್ಯಗಳಿಗೆ ಉಪಯೋಗಿಸಬೇಕೆಂದು ಸೂಚನೆ ಮಾಡುತ್ತೇನೆ.

ಶ್ರೀ ಎಸ್. ಶ್ರೀಕಂಠಯ್ಯ.—ರಾಮಕೃಷ್ಣಹೆಗಡೆಯವರು ಮತ್ತು ಮುಖ್ಯಮಂತ್ರಿಗಳು ಬೆಂಬಲಕೊಡುವಹಾಗಿದ್ದರೆ ನಾವೇ ಅಂತಹ ಒಂದು ನಿರ್ಣಯವನ್ನು ತರುತ್ತೇವೆ

ಶ್ರೀ ಶರಣಗೌಡ ಇನಾಂದಾರ್.—ಆ ರೀತಿ ನಾವು ನಿರ್ಣಯ ತರುವುದಕ್ಕಿಂತ ಅವರೇ ತಂದರೆ ಸರಿಹೋಗುತ್ತದೆ.

ಇನ್ನೊಂದು ವಿಷಯ. ಈಗ ಕರ್ನಾಟಕ ಯೂನಿವರ್ಸಿಟಿಯಲ್ಲಿ ಆ ಯೂನಿವರ್ಸಿಟಿ ಆಕ್ಟ್ ಪ್ರಕಾರ ವೈಸ್‌ಛಾನ್ಸಲರ್ ಡೈರೆಕ್ಟಾಗಿ ಚುನಾವಣೆಯ ಮೂಲಕ ಆರಿಸಿ ಬರುತ್ತಾರೆ. ಮೈಸೂರು ಮತ್ತು ಬೆಂಗಳೂರು ವಿಶ್ವವಿದ್ಯಾನಿಲಯದ ಯೂನಿವರ್ಸಿಟಿ ಆಕ್ಟ್ ಪ್ರಕಾರ ವೈಸ್‌ಛಾನ್ಸಲರನ್ನು ಸರ್ಕಾರದವರು ನಾಮಕರಣ ಮಾಡುವ ಪದ್ಧತಿ ಇದೆ. ಅಟಾನಮಸ್ ಬಾಡಿಗಳ ಆಡಳಿತದಲ್ಲಿ ಸರ್ಕಾರ ಹಸ್ತಕ್ಷೇಪ ಮಾಡುವುದು ಸರಿಯಲ್ಲ. ಆದ್ದರಿಂದ ಬೆಂಗಳೂರು ಮತ್ತು ಮೈಸೂರು ವಿಶ್ವವಿದ್ಯಾನಿಲಯಗಳಲ್ಲಿಯೂ ಆಕ್ಟ್ ಪ್ರಕಾರ ವೈಸ್ ಚಾನ್ಸಲರನ್ನು ನಾಮಕರಣ ಮಾಡತಕ್ಕ ಪದ್ಧತಿ ಇರುವುದರಿಂದ ಸರಿಯಾದ ನ್ಯಾಯ ಸಿಕ್ಕುವುದಿಲ್ಲ. ಈ ದೃಷ್ಟಿಯಿಂದ ಕರ್ನಾಟಕ ಯೂನಿವರ್ಸಿಟಿಯ ಆಕ್ಟ್ ಪ್ರಕಾರ ಈ ಎರಡು ವಿಶ್ವವಿದ್ಯಾನಿಲಯಗಳಲ್ಲಿಯೂ ವೈಸ್ ಚಾನ್ಸಲರನ್ನು ಚುನಾವಣೆಯ ಮೂಲಕ ಆರಿಸಿಕೊಳ್ಳುವುದಕ್ಕೆ ಅವಕಾಶ ಇರಬೇಕು.

10-30 A.M.

ಮೊನ್ನೆ ಬೆಂಗಳೂರು ಯೂನಿವರ್ಸಿಟಿಯಲ್ಲಿ ನಡೆದಂತಹ ಒಂದು ಗಲಾಟೆ ಒಂದು ನಿರ್ಣಯದಿಂದ ಸಮಾಧಾನವಾಗಿದೆ. ಶ್ರೀಮಾನ್ ಕಂಠಿಯವರು ಶ್ರೀಮಾನ್ ಮಲ್ಲಿಕಾರ್ಜುನಪ್ಪನವರನ್ನು

(ಶ್ರೀ ಶರಣಗೌಡ ಇನಾಂದಾರ್)

ಈ ವಿಶ್ವವಿದ್ಯಾನಿಲಯದಲ್ಲಿ ರಿಜಿಸ್ಟ್ರಾರನ್ನಾಗಿಯೂ, ಶ್ರೀಮಾನ್ ಗೋಕಾಕ್ ಅವರನ್ನು ವೈಸ್‌ಚಾನ್ಸಲರ್ ಆಗಿಯೂ ನೇಮಕ ಮಾಡಿದರು, ಅವರ ವಿಚಾರದಲ್ಲಿ ವಿದ್ಯಾರ್ಥಿಗಳು ಅಪಾರವಾದ ಒಂದು ಡಿಸ್‌ಪ್ಲೆಜರನ್ನು ವ್ಯಕ್ತ ಮಾಡಿದ್ದಾರೆ. ಬೆಂಗಳೂರು ವಿಶ್ವವಿದ್ಯಾನಿಲಯದ ಸೆನೆಟ್, ಸಿಂಡಿಕೇಟ್ ಮತ್ತು ಅಕೆಡಮಿಕ್ ಕೌನ್ಸಿಲ್ ಸದಸ್ಯರುಗಳು ಮತ್ತು 20 ಸಾವಿರ ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯದ ಆಡಳಿತದ ಬಗ್ಗೆ, ಆಡಳಿತ ವರ್ಗದವರ ನಿಲುವಿನ ಬಗ್ಗೆ, ಅವರ ಟ್ರೀಟ್‌ಮೆಂಟ್ ಬಗ್ಗೆ ಅಸಂತೋಷವನ್ನು ವ್ಯಕ್ತಪಡಿಸಿದ್ದಾರೆ. ಈ ಗಲಾಟೆಯಲ್ಲಿ ಸರ್ಕಾರದವರು ಹಸ್ತಕ್ಷೇಪ ಮಾಡುವುದಕ್ಕಾಗುವುದಿಲ್ಲ ಎಂದು ಆ ಗಲಾಟೆಯ ಬಗ್ಗೆ ಎನ್‌ಕ್ವೈರಿ ಮಾಡಲು ಯು.ಜಿ.ಸಿ.ಗೆ ಸರ್ಕಾರದವರು ಬರೆದಿದ್ದಾರೆ. ಅವರು ಅದನ್ನು ವಿಚಾರಣೆ ಮಾಡುತ್ತಾರೆ ಎಂದು ಏನೋ ಒಂದು ರೀತಿಯಲ್ಲಿ ಸರ್ಕಾರದವರೇ ಹೇಳಿದ್ದಾರೆ. ಅಂತೂ ಆಗ ಏನೋ ಒಂದು ರೀತಿಯಲ್ಲಿ ಅಲ್ಲಿ ವಿದ್ಯಾರ್ಥಿಗಳನ್ನು ಸಮಾಧಾನ ಮಾಡಿದ್ದಾಯಿತು. ಈಗ ನಾನು ತಮ್ಮ ಮುಖಾಂತರ ಕೇಳುವುದು ಇಷ್ಟೆ, ಆಗ ವಿಶ್ವವಿದ್ಯಾನಿಲಯದ ಆಡಳಿತಕ್ಕೆ ಸಂಬಂಧಪಟ್ಟ ಗಲಾಟೆಯ ವಿಷಯದಲ್ಲಿ ವಿಚಾರಣೆ ಮಾಡಲು ಯು.ಜಿ.ಸಿ.ಗೆ ಒಪ್ಪಿಸಿದ್ದೇವೆ ಎಂದು ಹೇಳುವುದು ಮುಖ್ಯವಲ್ಲ. ಆ ಬಗ್ಗೆ ಸರ್ಕಾರದವರು ಯು.ಜಿ.ಸಿ. ಯವರೊಡನೆ ಕೆಲವು ಪತ್ರ ವ್ಯವಹಾರವನ್ನು ಮಾಡಿರಬಹುದು ಆದರೆ ಅಷ್ಟು ಮಾತ್ರಕ್ಕೆ ಅದರಲ್ಲಿ ನಂಬಿಕೆ ಇಡುವುದಕ್ಕೆ ಸಾಧ್ಯವಿಲ್ಲ. ಏತಕ್ಕೆಂದರೆ ಅದು ಒಂದು ದೊಡ್ಡ ಸಮಸ್ಯೆ. ಅದು ದೊಡ್ಡ ಯೂನಿವರ್ಸಿಟಿ. ಅಲ್ಲಿ ಕೋಟ್ಯಾಂತರ ರೂಪಾಯಿಗಳು ಖರ್ಚಾಗುತ್ತವೆ. ವೈಸ್‌ಚಾನ್ಸಲರ್ ಮತ್ತು ರಿಜಿಸ್ಟ್ರಾರರು ತಪ್ಪು ಮಾಡಿದ್ದಾರೆಂದು ಯಾವುದೋ ಒಂದು ಭಾವನೆಯಿಂದ ಹುಡುಗರು ಗಲಾಟೆ ಮಾಡಿದರು. ಅಧಿಕಾರಿಗಳಾಗಲೀ ಅಥವಾ ಯಾರೇ ಆಗಲೀ, ವಿನಾ ಕಾರಣ ಅವರು ತಪ್ಪು ಮಾಡಿದ್ದರೆ ಅವರನ್ನು ಅಲ್ಲಿ ಉಳಿಸಬಾರದು. ಅವರಿಗೆ ಕಾಯಿದೆ ಪ್ರಕಾರ ಶಿಕ್ಷೆಯಾಗಬೇಕು. ಇಲ್ಲದಿದ್ದರೆ ಆಡಳಿತ ಚೆನ್ನಾಗಿ ನಡೆಯುವುದು ಕಷ್ಟವಾಗುತ್ತದೆ. ಈ ದೃಷ್ಟಿಯಿಂದ ಆಪಾದನೆಯ ಬಗ್ಗೆ ವಿಚಾರಣೆ ನಡೆಸಬೇಕು. ಬೆಂಗಳೂರು ಮತ್ತು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಆಗ ತಕ್ಕಂಥ ಅಪಾಯಿಂಟ್‌ಮೆಂಟುಗಳು ರಾಜಕೀಯದಿಂದ ಕೂಡಿದ ಅಪಾಯಿಂಟ್‌ಮೆಂಟ್‌ಗಳಾಗುತ್ತಿವೆ ಎನ್ನುವಂಥಾ ಆಪಾದನೆ ಇದೆ. ಅಂಥಾ ಆಪಾದನೆಗೆ ಅವಕಾಶವನ್ನು ಕೊಡಬಾರದು. ಕರ್ನಾಟಕ ಯೂನಿವರ್ಸಿಟಿಯ ಆಕ್ಟ್ ಪ್ರಕಾರ ಬೆಂಗಳೂರು ಮತ್ತು ಮೈಸೂರು ವಿಶ್ವವಿದ್ಯಾನಿಲಯದ ಆಕ್ಟನ್ನು ತಿದ್ದುಪಡಿ ಮಾಡಬೇಕು. ಈ ವಿಶ್ವವಿದ್ಯಾನಿಲಯಗಳಲ್ಲಿ ನೇರವಾಗಿ ವೈಸ್‌ಛಾನ್ಸಲರನ್ನು ಆರಿಸಿಕೊಳ್ಳುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕು. ಈ ಎರಡು ಯೂನಿವರ್ಸಿಟಿಗಳಿಗೆ ವೈಸ್‌ಛಾನ್ಸಲರನ್ನು ನಾಮಕರಣ ಮಾಡುವ ಪದ್ಧತಿಯನ್ನು ತೆಗೆದುಹಾಕಬೇಕು ಎಂದು ನಾನು ಸರ್ಕಾರದಲ್ಲಿ ವಿನಂತಿ ಮಾಡಿಕೊಂಡು ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

Sri B. B. SAYANAK (Belgaum).—Mr. Speaker, Sir, I rise to oppose the Mysore Appropriation (No. 2) Bill moved by the Hon. Finance Minister. In Mysore State what sort of treatment the Maharashtrians are getting is that we are supposed to be slaves in the border area. The police in Mysore State in the border area are not human beings; but they are brutes. 1st November 1969 was a black day and there was a hartal in Belgaum City. Everything was peaceful upto 8 P.M. There was a public meeting and one Shiv Sena leader Sri Dattaji Salvi had delivered his speech on the well-known gymkhana ground in Belgaun and after the meeting when people were going to their homes, one Mr. R. S. Mane, a Municipal Councillor, was beaten by the police by entering into the house of one man called kulhathi in Kelkar Bag. One lady who was going in search of her brother in Konwalgalli was mercilessly beaten. I have brought all these things to the notice of the S. P. Belgaum.

On 14th February 1970 there was a procession of the Syndicate President, Sri Nijalingappa. The Maharashtra Ekikaran Samithi members including some of the M.L.As, wanted to show Black flags to the

Syndicate President, Sri Nijalingappa. On that day the Government of Mysore brought a huge police force in Belgaum. What was the necessity for it ? Is Sri Nijalingappa, the President of the Syndicate Congress, the Governor of Mysore State or the President of India or the Chief Minister of Mysore State or the Prime Minister of India ? When the Maharashtra Ekikaran Samithi members and some of the M.L.As. were showing the black flags to Sri Nijalingappa, one Sri Sirdesai, a Member of this House, was beaten mercilessly by the police. They were again involved in a criminal case and a charge sheet is pending in a court of law. Such things are going on in border area.

23rd March 1970 was a colour day in Belgaum. One Sri Sahadeva Rama Prabhavalkar was beaten by the police and garlanded with chappals. Later on, one shoe was put in his mouth and he was paraded in the streets of Belgaum. Such a treatment is given to Maharastrians. What sort of treatment are the Government of Mysore giving to the Maharashtrians ?

2nd March was Bombay Bundh and there was Belgaum Bundh also. The people were carrying banners and shouting the slogan 'Shiv Sena Zindabad.' The police removed the banners and with the help of the medical college students wrote certain things on the walls depicting some illicit connection between the Home Minister and the Prime Minister of India. We wanted to wash off these writings on the walls. The police have beaten the people who were washing off these writings on the walls and the roads. Such things had been written against the Prime Minister of India and the Home Minister of India and we have taken snaps of those writings and shown it to the Prime Minister. If there is a tussle between Maharashtrians and Mysoreans, is this the way to condemn the Prime Minister and the Home Minister of India ? You may have a grudge against the Home Minister and the Prime Minister, but by doing like this you are lowering the prestige of the Home Minister and the Prime Minister of India in the eyes of the nation ? Not only that. Do you know what the Police are doing ? There is a High School called Maratha Mandal High School. The Police have beaten the Marathi students of that school by entering the school. Even the lady students of that School have been mercilessly beaten. The Police entered the house of a Maharashtrian lady in Chavalgalli, that lady was also beaten by the Police. Is that the treatment given to Maharashtrians in Marathi areas ? I warn the Mysore Government, a day will come when we will shoot the Police not only in the streets but also in the houses. That day will come. We are experiencing such things in West Bengal. Up till now our relationship with the Kannada people in the border area is very cordial. We are fighting for the merger of that border area in Maharashtra. Still our relations with the Kannadigas are very good. Now this Government is creating a bad atmosphere in the border area. They are telling that if this Mahajan Report is not implemented by the Centre, there will be blood bath and blood-stain. I request my friends not to speak of blood bath and not to think of the blood stain of the Maharashtrians. They must reserve

(SRI B. B. SAYANAK)

their valour, strength and courage for any future war between India and China and India and Pakistan. They should not wage war against the Maharashtrians. If they want to wage war against the Maharashtrians, I request my friends to take away the Police force from the border area and to come up in any number : we are going to face this challenge. I am saying this because of bad experience in border area.

I wish to say something about the Mahajan Commission Report. We are opposing the Mahajan Commission Report.

Mr. SPEAKER.—The Hon. Member should conclude. He is only indulging in repetitions.

Sri B. B. SAYANAK.—We are opposing this Mahajan Commission Report because that Report is perverse, one sided, partial and full of inconsistencies. That is why, we have been requesting the Central Government to solve this border dispute on the basis of village as a unit geographical contiguity and simple majority and wishes of the people.

Sir, I wish to touch one other matter and that is regarding transfers. According to me, this Mysore Government is a Government of Lingayat. I say this because generally Government officers are transferred from one place to another once in three years; they are transferred after three years. But one D.C. by name Sri Maharudriah is working there for more than 4½ years. He is kept there because he is a Lingayat. Otherwise, as in the case of other D.Cs., he too would have been transferred out.

Sri G. CHANDRAKANTH.—Sir, I take strong objection to mention of caste even though I am not a Lingayat.

Sri AZEEZ SAIT.—I rise to a point of order. Is it proper for the hon. Member Sri Sayanak to make allegations on the basis of community and on presumptions?

Mr. SPEAKER.—I uphold the point of order raised by Sri Azeez Sait. Sri Sayanak should not make allegation without knowing the rules. He could make general remarks. Sri Sayanak should conclude his speech.

Sri B. B. SAYANAK.—When the Opposition Leader and Sri H. Siddaveerappa have taken more than 1½ hours, why are you depriving me of my right?

Mr. SPEAKER.—I quite appreciate the grievance. But there should be self-regulation. The whole debate should have been over by 12 O'Clock. We should meet again at 2-30 P. M. In order to accommodate members, we are sitting a little longer. The hon. Member should not try to imitate others and exceed the time given. He can do the right thing and set an example.

Sri B. B. SAYANAK.—There was one Doctor at Bailhogal, who was due for retirement after one year. But he was transferred to another place although he was not due for transfer. So he requested the Government to continue him in that place.

Mr. SPEAKER.—The hon. member should not plead individual cases for transfers or cancellation, or promotions. The member is expected to speak in public interest and not in the interest of individuals.

Sri B. B. SAYANAK.—There should not be any injustice to any person in this State. That is my complaint. I will leave this transfer business here.

I have some comments about the Transport Department. The charges of the road transport are very high. The private buses are charging the lowest rate. There is a private bus plying from Bangalore to Hubli and the charge is Rs. 18.

Mr. SPEAKER.—This debate is not meant for going into details. On the Appropriation Bill, only general arguments are advanced.

B. B. SAYANAK.—I am sorry you are curbing my rights. If that is the case, I will stop my speech.

†ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ (ಚಿಕ್ಕನಾಯಕನಹಳ್ಳಿ).—ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ನಾವು ಈ ಅಪ್ರೋಪ್ರಿಯೇಶನ್ ಬಿಲ್ಲಿನ ಮುಖಾಂತರ ಈ ಹಣವನ್ನು ಮಂತ್ರಿಮಂಡಲಕ್ಕೆ ಖರ್ಚು ಮಾಡುವ ಅಧಿಕಾರ ಕೊಡುವ ಮುನ್ನ ಈ ಮಂತ್ರಿ ಮಂಡಲ ಎಂತಹ ಜನರಿಂದ ಕೂಡಿದೆ ಎಂದು ಯೋಚನೆ ಮಾಡುವ ಸಮಯ ಬಂದಿದೆ. ಈ ಮಂತ್ರಿ ಮಂಡಲವಾದರೂ 29 ಜನರಿಂದ ಕೂಡಿದೆ. ಅದರಲ್ಲಿ ಕೆಲವರು ರೋಗಪೀಡಿತ ಮಂತ್ರಿಗಳು. ಕೆಲವರು ಪಾನ-ಪ್ರಿಯರು, ಕೆಲವರು ವಿಲಾಸ-ಪ್ರಿಯರು, ಕೆಲವರು ನಾಮ್‌ಕಾವಾಸ್ತೆ ಇರುವ ಮಂತ್ರಿಗಳು, ಕೆಲವರು ಭ್ರಷ್ಟಾಚಾರದ ಮಂತ್ರಿಗಳು, ಮತ್ತು ಕೆಲವರು ಪ್ರಾಮಾಣಿಕ ಮಂತ್ರಿಗಳು ಈ ಮಂತ್ರಿಮಂಡಲದಲ್ಲಿ ಇದ್ದಾರೆ. ಇಂಥ ಮಂತ್ರಿಮಂಡಲವನ್ನು ನಾವು ಇವತ್ತು ನೋಡುತ್ತಿದ್ದೇವೆ. ಈ ಮಂತ್ರಿಗಳು ಎಷ್ಟು ಪ್ರಾಮಾಣಿಕರು, ಎಷ್ಟು ಸಭ್ಯರು, ಎಷ್ಟು ನೀತಿವಂತರು ಎಂಬುದನ್ನು ದೇಶದ ಜನತೆಗೆ ಇವರು ತೋರಿಸಬೇಕಾಗಿದೆ. ದೇಶದ ಜನತೆಗೆ ಇವರ ಮೇಲೆ ಎಂಥ ಅಭಿಪ್ರಾಯ ಇದೆ. ಎಂಬುದನ್ನು ನಾವು ಯೋಚಿಸಬೇಕಾಗಿದೆ. ಇವತ್ತು ಈ ಎಲ್ಲಾ ಮಂತ್ರಿಗಳು ಸರಿಯಾಗಿದ್ದ ಪಕ್ಷದಲ್ಲಿ ಇಡೀ ರಾಜ್ಯವೇ ಸರಿಯಾಗಿದೆ ಎಂಬ ವಾದವನ್ನು ನಾವು ಒಪ್ಪಿಕೊಳ್ಳಬಹುದು. ಇವತ್ತಿನ ದಿವಸ ಕೆಲವು ಮಂತ್ರಿಗಳು ಟಿ.ಬಿ.ಗೆ ಹೋದಾಗ, ಅಲ್ಲಿ ಟಿ.ಬಿ.ಯ ಇನ್‌ಚಾರ್ಜ್ ಇದ್ದಂತಹ ಜೂನಿಯರ್ ಇಂಜಿನಿಯರ್ಸ್ ಅಥವಾ ಅಸಿಸ್ಟೆಂಟ್ ಇಂಜಿನಿಯರ್ಸ್ ಇವರಿಗೆ ಪಾರ್ಟಿಯಗಳನ್ನು ಒದಗಿಸಬೇಕಾದುದು ಅವರ ಕೆಲಸ. ಅನೇಕ ಇಂಥ ಇಂಜಿನಿಯರುಗಳು, ಈ ಕಾಟ ತಡೆಯಲಾರದೆ, ನಮ್ಮನ್ನು ಬೇರೆ ಕಡೆಗೆ ಆದರೂ ವರ್ಗಮಾಡಿಸಿ ಎಂದು ಕೆಲವು ಎಂ. ಎಲ್. ಎ. ಗಳ ಹತ್ತಿರ ಕೇಳಿಕೊಂಡಿದ್ದಾರೆ. ಏಕೆಂದರೆ ಅವರಿಗೆ ಬರುವಂತಹ 200—250 ರೂಪಾಯಿ ಸಂಬಳದಲ್ಲಿ ಇವರಿಗೆ ಇದನ್ನೆಲ್ಲಾ ಒದಗಿಸಲು ತಮಗೆ ಸಾಧ್ಯವಾಗುವುದಿಲ್ಲವೆಂದು ಹೇಳುತ್ತಿದ್ದಾರೆ. ಇಂಥ ಪರಿಸ್ಥಿತಿ ಈ ಮಂತ್ರಿಗಳಿಗೆ ಬರಬಾರದು ಮತ್ತು ಈ ರೀತಿ ನಮ್ಮ ರಾಜ್ಯದಲ್ಲಿ ಆಗುತ್ತಿರುವುದು ನಮ್ಮ ದುರದೃಷ್ಟವೆಂದೇ ಹೇಳಬೇಕಾಗಿದೆ. ಇನ್ನು ರೋಗಪೀಡಿತ ಮಂತ್ರಿಗಳ ಬಗ್ಗೆ ಹೇಳುತ್ತೇನೆ. ಮೊನ್ನೆ ಮಾನ್ಯ ಸಿದ್ಧವೀರಪ್ಪನವರು ಅವರ ಬಗ್ಗೆ ಕೇಳಿದಾಗ, ಮಾನ್ಯ ಮುಖ್ಯಮಂತ್ರಿಗಳವರು, ಆ ಮಾತು ಹಾಗೆ ಹೇಳಬಾರದು ಎಂದು ಹೇಳಿದರು. ಇವೊತ್ತಿನ ದಿವಸ ನಾಲ್ಕನೇ ತರಗತಿಯ ನೌಕರನು ಕೂಡ ಕೆಲಸಕ್ಕೆ ಸೇರಬೇಕಾದರೆ, ಅವನಿಗೆ ಹೆಲ್ತ್ ಚೆನ್ನಾಗಿ ಇರಬೇಕು, ಫಿಸಿಕಲ್ ಫಿಟ್‌ನೆಸ್ ಇರಬೇಕು ಒಳ್ಳೆಯ ಕ್ಯಾರೆಕ್ಟರ್ ಇರಬೇಕು, ಮತ್ತು ಕ್ವಾಲಿಫಿಕೇಶನ್ ಇರಬೇಕೆಂದು ಇದೆ. ಆದರೆ ಮಂತ್ರಿಯಾಗುವವರಿಗೆ ಕ್ಯಾರೆಕ್ಟರೂ ಬೇಡ. ಫಿಸಿಕಲ್ ಫಿಟ್‌ನೆಸ್ಸೂ ಬೇಡ, ಕ್ವಾಲಿಫಿಕೇಶನ್ನೂ ಬೇಡ, ಸಭ್ಯತೆಯೂ ಬೇಡ, ವಿನಯಶೀಲತೆಯೂ ಬೇಡ, ಯಾವುದೂ ಬೇಡ. ದೇಶಕ್ಕೆ ಪ್ರಜಾಪ್ರಭುತ್ವ ಬಂದ ಮೇಲೆ ಅಧಿಕಾರಕ್ಕೆ ಬರುವ ಈ ರೀತಿಯ ಜನರನ್ನು ನೋಡಿದರೆ, ಈ ಪ್ರಜಾಪ್ರಭುತ್ವವೇ ಬೇಡವೆಂದು ಕಾಣುತ್ತದೆ, ಮತ್ತು ಇವರಿಂದ ಬೇಸರ ಪಡುವಂತಾಗಿದೆ. ನಮ್ಮಲ್ಲಿ ವಿಲಾಸಪ್ರಿಯ

(ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ)

ರಾಗಿ ಅನೇಕ ಜನರು ಚಿಕ್ಕವಯಸ್ಸಿನ ಮಂತ್ರಿಗಳು ಹೋಟೆಲಿನಲ್ಲಿ ಇದ್ದುದನ್ನು ನೋಡಿದ್ದೇನೆ. ನಾನು ಒಬ್ಬ ಮಂತ್ರಿ ಬೇರೆಯವರ ಕಾರಿನಲ್ಲಿ ಮೂರು ಜನರನ್ನು ಕೂಡಿಸಿಕೊಂಡು ಹೋಗುತ್ತಿದ್ದುದನ್ನು ನೋಡಿದ್ದೇನೆ. ಸಂಜೆ $5\frac{3}{4}$ ಗಂಟೆಯಲ್ಲಿ ಆಫೀಸಿನಲ್ಲಿ ಕದಹಾಕಿದ್ದರು ಯಾರೋ ಒಬ್ಬ ಆಫೀಸರು ಸ್ಕೂಲ್ ಟೀಚರ್ ಒಂದೇ ಸ್ಥಳದಲ್ಲಿ ಕಲೆತಿದ್ದರು. ಅದೂ ವಿಧಾನಸೌಧದಲ್ಲಿ. ಖಂಡಿತವಾಗಿ ಇದು ಶೋಚನೀಯ ವಿಚಾರ. ಮಂತ್ರಿಮಂಡಲದಲ್ಲಿಮಂತ್ರಿಗಳೇ ಈ ಮಟ್ಟಕ್ಕೆ ಇಳಿದರೆ, ಇನ್ನು ದೇಶದಲ್ಲಿ ಆಡಳಿತ ಯಾವರೀತಿ ಸ್ವಚ್ಛವಾಗಬಹುದೆಂದು ನಾನು ಕೇಳುತ್ತೇನೆ. ಕುಡುಕರು, ಹರಿಜನರು ಮತ್ತು ವಿಲಾಸಿಪ್ರಿಯರು ಇಂತಹವರ ಕೈಯಲ್ಲಿ ಆಡಳಿತ ಕೊಟ್ಟರೆ ಯಾವ ರೀತಿ ಇದು ಸರಿಹೋಗುತ್ತದೆ ? ಇದು ಸರ್ ಎಂ. ವಿಶ್ವೇಶ್ವರಯ್ಯ ಮತ್ತು ನಾಲ್ವಡಿ ಶ್ರೀ ಕೃಷ್ಣ ರಾಜೇಂದ್ರ ಒಡೆಯರ್ ಅವರು ರಾಜ್ಯಭಾರ ಮಾಡಿದ ದೇಶ. ಎಂತಹ ಪ್ರಭಾವಶಾಲಿಗಳು ಅಧಿಕಾರ ಮಾಡುತ್ತಿದ್ದ ದೇಶವಿದು ! ಅಂದಮೇಲೆ ಈಗಿನ ಸ್ಥಿತಿಗತಿಗಳನ್ನು ನೋಡಿದರೆ ನನಗೆ ಬಹಳ ದುಃಖವಾಗುತ್ತದೆ. ಈಗ 6 ತಿಂಗಳು, 8 ತಿಂಗಳು, ಒಂದು ವರ್ಷ ಆಸ್ಪತ್ರೆಗಳಲ್ಲಿ ಇದ್ದ ರೋಗಪೀಡಿತರಾದ ಮಂತ್ರಿಗಳನ್ನು ಏಕೆ ಇಟ್ಟುಕೊಂಡಿದ್ದೀರಿ ? ಅಂತಹವರಿಂದ ಏನು ಪ್ರಯೋಜನ ? ನನಗೆ ವೈಯಕ್ತಿಕವಾಗಿ ಯಾರ ಮೇಲೂ ದ್ವೇಷವಿಲ್ಲ. ಸಂಖ್ಯಾಬಲಕೋಸ್ಕರ ನಾವು ಸುಮ್ಮನೆ ಮಂತ್ರಿಗಳನ್ನು ಇಟ್ಟುಕೊಂಡು ರಾಜ್ಯಭಾರ ಮಾಡಿದರೇನು ಪ್ರಯೋಜನ ? ಇಂತಹ ಪರಿಸ್ಥಿತಿ ಇದ್ದರೆ, ದೇಶಕಟ್ಟುವ ದೃಷ್ಟಿಯಿಂದ ನಾನಾಗಿದ್ದರೆ ರಾಜೀನಾಮೆ ಕೊಡುತ್ತಿದ್ದೆ. ಆದ್ದರಿಂದ ಅಂತಹವರು ರಾಜೀನಾಮೆ ಕೊಟ್ಟರೆ ಒಳ್ಳೆಯದು. ಅವರೇ ನನ್ನ ಆರೋಗ್ಯ ಸ್ಥಿತಿ ಸರಿಯಾಗಿಲ್ಲ, ಕೋಟಿ ರೂಪಾಯಿಗಳನ್ನು ಕೊಟ್ಟರೂ ಈ ಕೆಲಸ ಬೇಡ, ದೇಶದ ಹಿತದೃಷ್ಟಿಯಿಂದ ನಾನು ರಾಜೀನಾಮೆ ಕೊಡುತ್ತೇನೆಂದು ಹೇಳಬಹುದಾಗಿತ್ತು.

ಇನ್ನು ಭ್ರಷ್ಟಾಚಾರ ಮಂತ್ರಿಗಳು ಬೇರೆ ಇದ್ದಾರೆ. ಕೈಗಾರಿಕೆ ಇಲಾಖೆ, ಪಿ. ಡಬ್ಲ್ಯು. ಡಿ. ಇಲಾಖೆ ಮತ್ತು ಫೈನಾನ್ಸ್ ಇಲಾಖೆ—ಈ ಮೂರು ಇಲಾಖೆಗಳಲ್ಲಿಯೂ ಭ್ರಷ್ಟಾಚಾರ ಅತಿರೇಖವಾಗುತ್ತಿದೆ. ಇವತ್ತು ನಮ್ಮ ಸರ್ಕಾರದ ಮೇಲೆ ಒಂದು ದೊಡ್ಡ ಹೊಣೆ ಬಿದ್ದಿದೆ. ಇಡೀ ಇಂಡಿಯಾ ದೇಶದಲ್ಲಿ ಮೈಸೂರಿನಲ್ಲಿ ಮತ್ತು ಗುಜರಾತಿನಲ್ಲಿ ಮಾತ್ರ ಕಾಂಗ್ರೆಸ್ (ಒ) ಆಡಳಿತದಲ್ಲಿದೆ. 1972ನೇ ಇಸವಿಯೊಳಗೆ ಈಗ ಇಬ್ಭಾಗವಾಗಿರುವುದನ್ನು ಕ್ರೋಢೀಕರಿಸುವ ಒಂದು ಅಧಿಕಾರ ಇವರಿಗೆ ಬೇಕಾಗಿದೆ. ಅದಕ್ಕೋಸ್ಕರವೇ ಇಷ್ಟೊಂದು ಭ್ರಷ್ಟಾಚಾರ ನಡೆಯುತ್ತಾ ಇದೆ. ಇವತ್ತಿನದಿವಸ ಎಲ್ಲಿ ಸರ್ಕಾರದ ಹಣವಿದೆಯೋ ಎಲ್ಲಿ ಜಾಸ್ತಿ ಚಲಾವಣೆಯಾಗುತ್ತಿದೆಯೋ ಅಲ್ಲಿ ಅನೇಕ ಮಂತ್ರಿಗಳ ಕೈವಾಡ ಇದೆ. ಅವರೂ ಸಹ ಭಾಗಸ್ಥರಾಗಿ ಹತ್ತಾರು ಕೋಟಿ ರೂಪಾಯಿಗಳ ಚಲಾವಣೆ ನಡೆಯುತ್ತಿದೆ. ಈಗ ಸರ್ಕಾರದವರು ಕೆಲವು ಸ್ಕೀಮುಗಳನ್ನು ತಯಾರುಮಾಡಿದ್ದಾರೆ. ಅವು ಅವರ ಪಕ್ಷದ ಸಲುವಾಗಿ ಆಗಿವೆ. ಪೂರ್ವದಲ್ಲಿ ರಾಜಮಹಾರಾಜರುಗಳು ಈ ದೇಶದಲ್ಲಿಹಣದ ಕೋಠಿಗಳನ್ನು ಕಟ್ಟುತ್ತಿದ್ದರು. ಹಾಗೆ ಅಂಥಾದ್ದನ್ನು ಕೆಲವು ವರ್ಷಗಳು ಇವರೂ ಸಹ ಇಟ್ಟುಕೊಳ್ಳಬೇಕೆಂಬ ಭಾವನೆ ಹೊಂದಿದ್ದಾರೆ. ಒಂದು ಕಡೆ ಎಗ್ಸಿಬಿಷನನ್ನು ರಾಜಕೀಯ ಪಕ್ಷಗಳ ಎಗ್ಸಿಬಿಷನ್ನಾಗಿ ಮಾಡುತ್ತಿದ್ದಾರೆ, ಈಗ ತುಮಕೂರಿನಲ್ಲಿ ಎಗ್ಸಿಬಿಷನ್ ಮಾಡುತ್ತಿದ್ದಾರೆ, ಜಿಲ್ಲಾಮಟ್ಟದಲ್ಲಿಯೂ ಕೆಲವು ಕಡೆಗಳಲ್ಲಿ ಮಾಡುತ್ತಿದ್ದಾರೆ, ಸಿದ್ಧಗಂಗಾ ಕ್ಷೇತ್ರದಲ್ಲಿ ಬೇರೆ ಎಗ್ಸಿಬಿಷನ್ ಮಾಡುತ್ತಿದ್ದಾರೆ. ಸರ್ಕಾರದ ಇಲಾಖೆಗಳೂ ಅವುಗಳಲ್ಲಿ ಭಾಗವಹಿಸುತ್ತಿವೆ. ಕಾಂಗ್ರೆಸ್ ಎಗ್ಸಿಬಿಷನ್ ಮಾಡಿ ನಾಲ್ಕಾರು ಲಕ್ಷ ರೂಪಾಯಿಗಳನ್ನು ಸರ್ಕಾರ ನಾನಾ ಇಲಾಖೆಗಳಿಂದ ಕೊಟ್ಟಿದ್ದಾರೆ. ಹೀಗೆ ದಾವಣಗೆರೆಯಲ್ಲಿ ಸಿಟಿ ಮುನಿಸಿಪಾಲಿಟಿಯವರು ಒಂದು ಎಗ್ಸಿಬಿಷನ್ ಮಾಡಿದರು. ಅಲ್ಲಿ ಒಂದು ವಸ್ತುಪ್ರದರ್ಶನವನ್ನು ಕಾಂಗ್ರೆಸ್ ಪಕ್ಷದಿಂದ ಮಾಡಿದ್ದಾರೆ. ಸಿಟಿ ಮುನಿಸಿಪಾಲಿಟಿಗಳಂತಹ ದೊಡ್ಡ ದೊಡ್ಡ ಸಂಸ್ಥೆಗಳು ಇರುವಾಗ ಅವರು ಇಂತಹ ವಸ್ತುಪ್ರದರ್ಶನಗಳನ್ನು ಮಾಡಲು ಸರ್ಕಾರದವರು ಏಕೆ ಅವರಿಗೆ ಅವಕಾಶಕೊಡಬಾರದು ! ಅವರಿಗೆ ಈಗ ಸರ್ಕಾರ ನೀಡಿದ ನೆರವು ಏನು, ಅವರಿಗೆ ಸರ್ಕಾರ ಕೊಟ್ಟ ಹಣವೆಷ್ಟು, ಕಾಂಗ್ರೆಸ್ ಪಕ್ಷದ ಎಗ್ಸಿಬಿಷನ್ ಮಾಡಿದವರಿಗೆ ಎಷ್ಟು ಹಣವನ್ನು ಕೊಟ್ಟಿದ್ದಾರೆ, ಎಷ್ಟು ಬೆಂಬಲ ಕೊಟ್ಟಿದ್ದಾರೆ ಎಂದು ನೋಡಿದರೆ ಒಂದಕ್ಕೊಂದು ಏನೂ ಸಂಬಂಧವಿಲ್ಲ. ತಮ್ಮ ಪಕ್ಷವನ್ನು ಉಳಿಸುವುದಕ್ಕೋಸ್ಕರ, ಕೆಲವು ವ್ಯಕ್ತಿಗಳನ್ನು ಸಾಕುವುದಕ್ಕೋಸರ ಈ ರೀತಿ ಖರ್ಚು ಮಾಡಿದರೆ, ಇಡೀ ಜನತೆಯ ಹಿತ ಇನ್ನೆಷ್ಟರಮಟ್ಟಿಗೆ ಪಾಲನೆಯಾಗುತ್ತದೆಂಬುದನ್ನು ನಾವು ಯೋಚನೆ ಮಾಡಬೇಕು. ಇವತ್ತಿನದಿವಸ ಇದನ್ನು ಖಂಡಿತವಾಗಿ ತಪ್ಪಿಸದೇ ಹೋದರೆ ಭ್ರಷ್ಟಾಚಾರ ಇನ್ನೂ ಜಾಸ್ತಿಯಾಗುತ್ತದೆಯೆಂದು ನಾನು ಹೇಳಿದರೆ ಖಂಡಿತವಾಗಿ ಅದು ತಪ್ಪಾಗಲಾರದು. ಎಂತಹ ಸಮಸ್ಯೆಯೇ ಆಗಲೀ ಎಂತಹ ಕೆಟ್ಟಕೆಲಸವಾಗಿರಲೀ, ಎಂತಹ ಭ್ರಷ್ಟಾಚಾರವಾಗಲೀ ಅದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಬಹಳ ವಿನಯದಿಂದ ಹಾಗೂ ನಮ್ರತೆಯಿಂದ ಉತ್ತರ ಹೇಳುತ್ತಾರೆ.

ಪ್ರೆಸ್ಸಿನವರು ಇಂಥಾದ್ದಕ್ಕೆ ಮಹತ್ವವನ್ನು ಕೊಟ್ಟು ಪ್ರಚಾರಮಾಡುತ್ತಾರೆ. ಹಿಂದೆ ರಾಮಪ್ರಿಯ ಬಿಲ್ಡಿಂಗ್ ವಿಷಯದಲ್ಲಿ ಏನಾಯಿತು ತಮಗೆ ಗೊತ್ತಿದೆ. ನಾವು ಹಣವನ್ನು ಕೊಡುವುದಕ್ಕೆ ಮುಂಚೆಯೇ ಬಹಳ ಯೋಚನೆ ಮಾಡಬೇಕು 17 ಕೋಟಿ ರೂಪಾಯಿಗಳನ್ನು ಸಾಲಕ್ಕೋಸ್ಕರ ಹಾಗೂ ಬಡ್ಡಿಗೋಸ್ಕರ ಕೊಡುತ್ತಿದಾರೆ. ನಾವು ಬಂಡವಾಳ ಹೂಡಿರುವ ಹಣ ಯಾವ್ಯಾವ ಸಹಕಾರಸಂಘಗಳಲ್ಲಿ ಎಷ್ಟು ಹಾಕಿದ್ದೇವೆ, ಮುನಿಸಿಪಾಲಿಟಿಗಳಲ್ಲಿ ಎಷ್ಟು ಹಾಕಿದ್ದೇವೆ, ಸಾರ್ವಜನಿಕ ಉದ್ದಿಮೆಗಳಿಗೆ ಎಷ್ಟು ಕೊಟ್ಟಿದ್ದೇವೆ, ನಮಗೆ ಬರಬೇಕಾದ ಹಣ ಎಷ್ಟು, ನಾವು ಕೊಡಬೇಕಾದ ಹಣ ಎಷ್ಟು ಇವನ್ನು ಒಂದೂ ಆಡಳಿತವರ್ಗದವರಿಗೆ ಹೇಳುವುದಕ್ಕಾಗುವುದಿಲ್ಲ. ಪ್ರತಿ ವರ್ಷವೂ 20—30 ಕೋಟಿ ರೂಪಾಯಿಗಳನ್ನು ಸಾಲಕ್ಕೆ ಮತ್ತು ಬಡ್ಡಿಗೆ ಕೊಡುತ್ತಿದ್ದೇವೆ. ಜನರು ಇನ್ನೆಷ್ಟು ವರ್ಷಗಳು ಹಾಗೆಯೇ ತೆರಿಗೆ ಕೊಡುತ್ತಾಇರಬೇಕು? ಹೀಗೆ ಮಾಡಿದರೆ ಆಡಳಿತ ಮಾಡುವುದು ಹೇಗೆ? 538 ಕೋಟಿ ರೂಪಾಯಿಗಳ ಖರ್ಚುಹಾಕಿ ಮುಂದಿನ ವರ್ಷ 3 ಕಾಸು ಉಳಿಯಲಿಲ್ಲವೆಂದು ಹೇಳಿದರೆ ಹೇಗೆ? ನಮ್ಮ ಕೋಆಪರೇಟಿವ್ ಮಿನಿಸ್ಟರ್ 30 ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ಹೇಳಿದ್ದಾರೆ. 120 ಕೋಟಿ ರೂಪಾಯಿಗಳನ್ನು ಬಂಡವಾಳಕ್ಕೆ ಸಹಾಯರೂಪವಾಗಿ ಕೊಟ್ಟಿದ್ದಾರೆಂದು ಅವರು ಹೇಳುತ್ತಾರೆ. ನಾವು ಕೊಟ್ಟಿದ್ದು ಎಷ್ಟು, ನಮಗೆ ವಾಪಸ್ಸು ಬಂದುದು ಎಷ್ಟು ಎಂಬುದನ್ನು ನೋಡಬೇಕು. ಅದರಲ್ಲಿ ಎಷ್ಟು ನ್ಯಾಯವಾಗಿದೆ, ಎಷ್ಟು ಮುಳುಗಿಹೋಗಿದೆ ಎಂಬುದನ್ನೂ ಹೇಳಬೇಕು. ಖಾಸಗೀ ಉದ್ದಿಮೆಗಳ ಬಗ್ಗೆ ಮಾನ್ಯ ಮಂತ್ರಿಗಳಾದ ಶ್ರೀ ರಾಜಶೇಖರಮೂರ್ತಿಯವರು 1947ನೇ ಇಸವಿಯಲ್ಲಿ ಬಂಡವಾಳದಲ್ಲಿ ಎಷ್ಟು ಉಳಿಯಿತು ಎಂದು ಕೇಳಿದ್ದಕ್ಕೆ 35 ಕೋಟಿ ರೂಪಾಯಿಗಳು ಉಳಿಯಿತೆಂದು ಹೇಳಿದರು. ಇವತ್ತು 165 ಕೋಟಿ ರೂಪಾಯಿಗಳು ಉಳಿಯಿತು ಎಂದು ಹೇಳುತ್ತಾರೆ. ಇದರಿಂದ ಹಿಂದೆ ಎಷ್ಟು ಪ್ರತಿಫಲ ಬರುತ್ತಿತ್ತು, ಈಗ 165ಕೋಟಿ ರೂಪಾಯಿಗಳಷ್ಟು ಬಂಡವಾಳ ಹೂಡಿರುವಾಗ ಎಷ್ಟು ಬರುತ್ತದೆಂದು ಹೇಳಲಿಲ್ಲ. ಇಂತಹ ಪೊಲಿಟಿಕಲ್ ಪ್ರಾಜೆಕ್ಟ್ಸ್ ಏಕೆ ತೆಗೆದುಕೊಳ್ಳಬೇಕು? ಮಾನ್ಯ ಶ್ರೀ ನಿಜಲಿಂಗಪ್ಪನವರು ಮತ್ತು ಶ್ರೀ ವೀರೇಂದ್ರಪಾಟೀಲ್ ಅವರು ಯಾವ ಪೌರಸಭೆಗಳಿಂದ ಹಣ ವಾಪಸ್ಸು ಬಾರದೇ ಇದ್ದರೆ ಸರ್ಕಾರದಿಂದ ಮೂರು ಕಾಸೂ ಕೂಡ ಕೊಡುವುದಿಲ್ಲವೆಂದು ಹೇಳಿದರು. ಚಿತ್ರದುರ್ಗ ಮುನಿಸಿಪಾಲಿಟಿಯವರು ಸರ್ಕಾರದ 5 ಲಕ್ಷ ರೂಪಾಯಿಗಳನ್ನು ಕೊಡುವುದಕ್ಕಾಗಲಿಲ್ಲ. ಅಂಥಾದ್ದಕ್ಕೆ ಇ ರು ಒಂದು ಕೋಟಿ ರೂಪಾಯಿಗಳ ಪೊಲಿಟಿಕಲ್ ಸ್ಕೀಮನ್ನು ಮಾಡಿದರು. ಅದು ಈಗ ಫೇಲಾಗಿದೆ. ಅದು ವಾಣೀವಿಲಾಸಸಾಗರದಿಂದ ಚಿತ್ರದುರ್ಗಕ್ಕೆ ನೀರು ಸಪ್ಲೈ ಮಾಡುವ ವಿಚಾರ. ತನ್ನ ಪಕ್ಷ ಇರುವ ಸಂಸ್ಥೆಗೆ, ತಮ್ಮ ಸ್ವಾಭಿಮಾನದಿಂದ ಮನ್ನಣೆ ಕೊಡುವುದು ಆಗಿದೆ. ಇಂತಹ ಪೊಲಿಟಿಕಲ್ ಸ್ಕೀಮ್ಸ್‌ನ್ನು ಏಕಮಾಡಬೇಕು?

11-00 A.M.

ಇದು ನಿಜವಾಗಿಯೂ ಕೂಡ ಶೋಚನೀಯವಾದ ವಿಚಾರ. ಅನೇಕ ಸ್ಕೀಂಗಳು ಹೀಗೆಯೇ ನಡೆಯುತ್ತಾ ಇವೆ. ಚಿಕ್ಕನಾಯಕನಹಳ್ಳಿಯಲ್ಲಿ ಅಲ್ಲಿನ ಅಸಿಸ್ಟೆಂಟ್ ಇಂಜನಿಯರ ಪ್ರಭಾವ ಎಷ್ಟು ಮಟ್ಟಿಗೆ ಇದೆ ಅಂತ ಅಂದರೆ ಚಿಕ್ಕಬಿದರೆ ಹಳ್ಳ ಅಂತ ಹೇಳಿ ಒಂದು ಹಳ್ಳ ಇದೆ, ಅದಕ್ಕೆ 10 ಸಾವಿರ ರೂಪಾಯಿನ ಎಸ್ಟಿಮೇಟ್ ಮಾಡಿ ರಿವಿಟ್‌ಮೆಂಟ್ ಕಟ್ಟಿಸುತ್ತಾ ಇದ್ದಾರೆ, ಅದರಂತೆ ಬೇಕಾದಷ್ಟು ಹಳ್ಳಗಳು ಇವೆ, ಅವಕ್ಕೆ ಹಿಂದೆ ಇಲ್ಲ, ಮುಂದೆ ಇಲ್ಲ, ಪಕ್ಕದಲ್ಲಿ ಇಲ್ಲ. ಈ ರೀತಿ ಕಟ್ಟಿಸುತ್ತಾ ಇರುವುದಕ್ಕೆ ಕಾರಣ ತಮಗೆ ಬೇಕಾದವರಿಗೆ ಸೇರಿದ ಹಳ್ಳ ಎಂಬುದಾಗಿ ಇದು ನ್ಯಾಯವೇ? ಈ ಅಸಿಸ್ಟೆಂಟ್ ಇಂಜನಿಯರು ಮತ್ತೊಬ್ಬ ಕಂಟ್ರಾಕ್ಟರ ಹೆಸರಿನಲ್ಲಿ ಕಂಟ್ರಾಕ್ಟ್ ಮಾಡುತ್ತಾ ಇದ್ದಾರೆ. ರಸ್ತೆಯ ಪಕ್ಕದಲ್ಲಿ ಕಲ್ಲು ನಿಲ್ಲಿಸುವ ಒಂದು ಹೊಸ ಕೆಲಸ ಮಾಡುತ್ತಾ ಇದ್ದಾರೆ. ಚಿಕ್ಕನಾಯಕನಹಳ್ಳಿಯಲ್ಲಿ ಎಲ್ಲಾ ರಸ್ತೆಗಳಿಗೂ ಸಂಬಂಧಪಟ್ಟಂತೆ 6 ಸಾವಿರ ರೂಪಾಯಿಗಳ ಕೆಲಸದ ಅಂದಾಜಾಗಿ ಆ ಬಗ್ಗೆ ಕಂಟ್ರಾಕ್ಟರ ಹೆಸರಿನಲ್ಲಿ ನಾಮ್ಕಾವಸ್ತೆ ಕೆಲಸ ಮಾಡಿಸಿ 4 ಸಾವಿರ ರೂಪಾಯಿ ಜೋಬಿಗೆ ತುಂಬಿಕೊಂಡಿದ್ದಾರೆ. ಕಲ್ಲಿಗೆ ಎರಡು ಲೈನ್ ಡ್ರೆಸ್ ಮಾಡಿಸಬೇಕು, ಎರಡು ಅಡಿ ಕಾಂಕ್ರೀಟ್ ಹಾಕಬೇಕು ಇದು ಯಾವುದೂ ಮಾಡದೆ ಬರೀ ನೆಲಸಾರಿಸಿದ ಹಾಗೆ ಸಿಮೆಂಟ್ ಹಾಕಿದ್ದಾರೆ, ಕಲ್ಲು ಸರಿಯಾಗಿ ಡ್ರೆಸ್‌ಮಾಡಿಲ್ಲ. ಇಲಾಖೆಗಳಲ್ಲಿ ಯಾವರೀತಿ ಕೆಲಸ ನಡೆಯುತ್ತಾ ಇದೆ, ಅಧಿಕಾರಿಗಳಿಗೆ ಬೇಕಾದವರು ಇರುವ ಕಡೆ, ಪುಡಾರಿಗಳು ಇರುವ ಕಡೆ, ಮತ್ತು ಮಂತ್ರಿಗಳ ಕ್ಷೇತ್ರವಾದ ಇರುವ ಕಡೆ ಯಾವ ರೀತಿ ಇದೆ ಎಂಬುದು ಆಡಿಟ್ ರಿಪೋರ್ಟ್‌ನಿಂದ ಸತ್ಯಾಂಶ ಗೊತ್ತಾಗುತ್ತಾ ಇದೆ. ಹೋದವರ್ಷ ಆಡಿಟ್ ರಿಪೋರ್ಟ್‌ನಲ್ಲಿ ಸುಮಾರು 17 ಸಾವಿರ ಲೋಪದೋಷ ಇವೆ, ಸುಮಾರು 30 ಕೋಟಿ ರೂಪಾಯಿ ಇನ್‌ವಾಲ್ವ್ ಆಗಿದೆ ಎಂದು ಹೇಳಿದ್ದರು, ಅದೇ ಆಡಿಟರು ಮತ್ತೆ 24 ಸಾವಿರ ಲೋಪದೋಷಗಳು ಇವೆ 80 ಕೋಟಿ ರೂಪಾಯಿ ಇನ್‌ವಾಲ್ವ್ ಆಗಿದೆ ಎಂದು ಹೇಳುತ್ತಾ

(ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ)

ಇದ್ದಾರೆ. ಋಣವನ್ನು ಖರ್ಚು ಮಾಡುವ ವಿಧಾನ ಎಷ್ಟು ಪ್ರಾಮಾಣಿಕವಾಗಿ, ಎಷ್ಟು ನ್ಯಾಯ ರೀತಿಯಲ್ಲಿ, ಯಾವ ಬಾಬಿಗೆ ಎಷ್ಟು ಖರ್ಚು ಮಾಡಬೇಕೋ ಆ ಉದ್ದೇಶಕ್ಕೆ ಅಷ್ಟು ಖರ್ಚಾಗುತ್ತಾ ಇದೆಯೋ ಎಂದರೆ ಅದು ಯಾವುದೂ ಕಂಡುಬರುವುದಿಲ್ಲ. ಹಾಗಿರುವಾಗ 538 ಕೋಟಿ ರೂಪಾಯಿಗಳನ್ನು ಇವರಿಗೆ ಕೊಡುವಾಗ ಯಾವ ರೀತಿ ಕೊಡಬೇಕೆಂದು ಒತ್ತಿ ಹೇಳಬೇಕಾಗುತ್ತದೆ. ಇದನ್ನು ಮಂತ್ರಿಮಂಡಲ ಎಚ್ಚರಿಕೆಯಿಂದ ನೋಡಬೇಕಾಗಿದೆ. ಇವತ್ತಿನ ದಿವಸ ನಡೆಯುತ್ತಾ ಇರುವ ಭ್ರಷ್ಟಾಚಾರ, ಸ್ವಜನ ಪಕ್ಷಪಾತ ಇದು ಖಂಡಿತವಾಗಿಯೂ ತಪ್ಪದಿದ್ದರೆ ನಾಳೆ ದಿವಸ ಈ ದೇಶದಲ್ಲಿ ಇನ್ನೊಂದು ಮಂತ್ರಿಮಂಡಲ ಸರ್ಕಾರದ ಜವಾಬ್ದಾರಿಯನ್ನು ವಹಿಸಿಕೊಂಡಾಗ ನೀವು ಪರಿಶೀಲನೆಗೆ ಗುರಿಯಾಗಬೇಕಾಗುತ್ತದೆ. ಏಕೆಂದರೆ ಈ ಭ್ರಷ್ಟಾಚಾರವನ್ನು ನಿಲ್ಲಿಸಲು ಜ್ಯುಡಿಷಿಯಲ್ ಎನ್‌ಕ್ವೈರಿ ಬಾಡಿ ಮಾಡಿ ಎಂದರೆ ತಾವು ಮಾಡುವುದಿಲ್ಲ. ಶರಾವತಿ, ಭದ್ರಾವತಿ ಇಂತಹ ದೊಡ್ಡ ದೊಡ್ಡ ವಿಷಯಗಳಲ್ಲೂ ಸಹ ನಿಜಾಂಶ ಹೊರಡಿಸಬೇಕು ಎಂದರೆ ಇದಕ್ಕೆ ಸರ್ಕಾರದ ಮನ್ನಣೆ ಇಲ್ಲ. ನನಗೆ ಗೊತ್ತಿದ್ದ ಹಾಗೆ ಪ್ರತಿವರ್ಷವೂ ಕೂಡ 20 ಕೋಟಿ ರೂಪಾಯಿ ಭ್ರಷ್ಟಾಚಾರದಿಂದ ಅನಾವಶ್ಯಕವಾದ ಕೆಲಸಗಳಿಗೆ ಮತ್ತು ಕೆಟ್ಟಿರುವ ಕಂಪೆನಿಗಳಿಗೆ ಬಂಡವಾಳ ಹೂಡುವುದರ ಮೂಲಕ ನಷ್ಟವಾಗುತ್ತಾ ಇದೆ. ತಾವು ಈ ಹಿಂದೆ ಮಾಡಿದ ತಪ್ಪಿಗೆ ಮುಂದೆ ಇದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಕಾಂಗ್ರೆಸ್ ಫಂಡಿಗೆ ನಿಜಲಿಂಗಪ್ಪನವರಿಗೆ ದುಡ್ಡು ಕೊಟ್ಟಿರುವುದು 10 ಲಕ್ಷ ರೂಪಾಯಿಗಳು. ಬೆಂಗಳೂರಿನಲ್ಲಿ ಎಐಸಿಸಿ ನಡೆದಾಗ ಅವರಿಗೆ ಯಾರು ಊಟ ಹಾಕಿಸಿದರು? ಅಥವಾ ಗೋವಾದಲ್ಲಿ ಎಐಸಿಸಿ ಆದಾಗ ಅಲ್ಲಿಗೆ ಹೋದ ಮೆಂಬರುಗಳಿಗೆ ಯಾರು ಏರೋಪ್ಲೇನ್ ಟಿಕೆಟ್ ಕೊಡಿಸಿದರು? ಇದರ ಹಿಂದೆ ಯಾರಾದರೂ ದೊಡ್ಡ ಕೈಗಾರಿಕೆಗಳವರು ಅಥವಾ ಉದ್ಯಮಿಗಳು ಇರುತ್ತಾರೆ. ಈ ತರಹ ಸರ್ಕಾರದಿಂದ ಪ್ರತ್ಯಕ್ಷವಾಗಿ ಹಣಕೊಟ್ಟು ಪರೋಕ್ಷವಾಗಿ ಕೆಲವು ವ್ಯಕ್ತಿಗಳಿಂದ ಹಣ ಪಡೆಯುತ್ತಾ ಇರುವುದು ಈ ಮೈಸೂರು ಸಂಸ್ಥಾನದಲ್ಲಿ ಹತ್ತಾರು ವರ್ಷಗಳಿಂದ ನಡೆದು ಬಂದಿದೆ. ಇದು ಒಂದು ದೊಡ್ಡ ಸಂಚಕಾರ ಎಂದರೆ ಖಂಡಿತವಾಗಿಯೂ ತಪ್ಪಾಗಲಾರದು. ಇದನ್ನು ಸರಿಪಡಿಸಿಕೊಳ್ಳದಿದ್ದರೆ ರಾಜಕೀಯ ಯಾವ ರೀತಿ ಆಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ, ಯಾರ ಅಳಿವು ಅಥವಾ ಉಳಿವು ಹೇಗೆ ಆಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ, ಮುಂದೆ ಬರತಕ್ಕ ಸರ್ಕಾರಕ್ಕೆ ತಾವು ಜವಾಬು ಕೊಡಬೇಕಾಗುತ್ತದೆ ಎಂಬ ಎಚ್ಚರಿಕೆಯನ್ನು ಕೊಟ್ಟು ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

† ಶ್ರೀ ಬಿ. ಎಂ. ಸಾಣಿಕೊಪ್ಪ (ಕಿತ್ತೂರು).—ಮಾನ್ಯ ಅಧ್ಯಕ್ಷರೆ, ಕೆಲವು ಮಾನ್ಯ ಸದಸ್ಯರು ಅನೇಕ ಟೀಕೆಗಳನ್ನು ಮಾಡಿದ್ದಾರೆ, ಎಲ್ಲಾ ಟೀಕೆಗಳಲ್ಲೂ ಅರ್ಥವಿಲ್ಲ ಎಂದು ನಾನು ಹೇಳುತ್ತಿಲ್ಲ. ಭ್ರಷ್ಟಾಚಾರವನ್ನು ಅಧಿಕಾರ ವೃಂದದವರು ಮಾಡುತ್ತಾರೆ ಎಂದು ಹೇಳುತ್ತಾರೆ, ನಿಜ. ಆದರೆ ಬಂಗಾಳ, ಬಿಹಾರ, ಯು.ಪಿ. ಮುಂತಾದ ಕಡೆ ನೋಡಿದರೆ ನಿಜವಾಗಿಯೂ ಇದೇನೂ ಅಂತ ದೊಡ್ಡದಲ್ಲ ಎಂದು ನಮಗೆ ಅನಿಸುತ್ತದೆ. ಉತ್ತಮವಾಗಿ ಕೆಲಸ ನಡೆದಂತಹ ಒಂದು ಪರಿಸ್ಥಿತಿ ನಮ್ಮಲ್ಲಿ ಇದೆ ಅಂತ ಹೇಳಬಹುದು. ಮಹಾರಾಷ್ಟ್ರ ಏಕೀಕರಣ ಸದಸ್ಯರಾದ ಶ್ರೀಮಾನ್ ಸ್ನೈನಕ್‌ರವರು ಕೆಲವು ಮಾತುಗಳನ್ನು ಹೇಳಿದರು. ಆ ಮಾತಿನಲ್ಲಿ ಏನೂ ಕಿಮ್ಮತ್ತಿಲ್ಲ ಎಂದು ಹೇಳುತ್ತೇನೆ. ನಾನು ಬೆಳಗಾಂ ಜಿಲ್ಲಾ ಕಾಂಗ್ರೆಸ್ ಕಮಿಟಿ ಅಧ್ಯಕ್ಷನಾಗಿ ಖಾನಪುರ ತಾಲ್ಲೂಕಿನವನಾಗಿರುತ್ತೇನೆ, ಅಲ್ಲಿನ ಪರಿಸ್ಥಿತಿಯನ್ನು ನೋಡಿದರೆ ಖಾನಾಪುರ ಆಗಲಿ, ಬೆಳಗಾಂ ಆಗಲಿ, ನಿಪ್ಪಾಣಿ ಭಾಗದಲ್ಲಾಗಲಿ ಎಷ್ಟು ಸುಧಾರಣೆ ಮಾಡಿದ್ದಾರೆ ಎಂದರೆ, ನೀರು ಕೊಟ್ಟಿದ್ದಾರೆ, ವಿದ್ಯುಚ್ಛಕ್ತಿ ಕೊಟ್ಟಿದ್ದಾರೆ, ರಸ್ತೆಗಳನ್ನು ಮಾಡಿಸಿಕೊಟ್ಟಿದ್ದಾರೆ, ಶಿಕ್ಷಣ ಸೌಕರ್ಯವನ್ನು ಮಾಡಿಕೊಟ್ಟಿದ್ದಾರೆ, ಹೀಗಿದ್ದೂ ಕೂಡ ನಮಗೇನೂ ಮಾಡಿಲ್ಲ ಎಂದು ಹೇಳಿದರೆ ಇದು ಬಹಳ ಕೆಡುಕಾದ ವಿಚಾರ. ಕಳೆದ ಹತ್ತು ವರ್ಷಗಳ ಒಂದು ಪರಿಸ್ಥಿತಿಯನ್ನು ನೋಡಿದರೆ ನಮಗೆ ಬೇಕಾದಷ್ಟು ಅನುಕೂಲವಾಗಿದೆ, ಸುಖವಾಗಿ ಊಟ ಮಾಡುತ್ತೇವೆ. ನಮ್ಮಲ್ಲಿ ನೀರು ಇದೆ, ಸರ್ಕಾರದ ಆಡಳಿತ ಸರಿಯಾಗಿದೆ ಎನ್ನುವಂತಹ ಮಾತು ಅಲ್ಲಿಯ ಜನರಲ್ಲಿ ಕೇಳಿಬರುತ್ತಿದೆ. ಮುಂಬೈ ಪ್ರಾಂತ್ಯದಲ್ಲಿ ಶಿವಸೇನೆಯ ಗಲಾಟೆಯಿಂದಾಗಿ ಕನ್ನಡಿಗರು ಬಹಳವಾಗಿ ನೊಂದರು. ನಮ್ಮ ಭಾಗದಲ್ಲಿ ಆದರೆ ಮಹಾರಾಷ್ಟ್ರೀಯರು, ಕನ್ನಡಿಗರು ಹೋಟೇಲುಗಳಲ್ಲಾಗಲಿ, ಅಂಗಡಿಗಳಲ್ಲಾಗಲಿ ಬಹಳ ಚೆನ್ನಾಗಿ ಹೊಂದಿಕೊಂಡು ಕೆಲಸಮಾಡುತ್ತಾರೆ, ಎಂದೆಂದೂ ಪ್ರಾಂತೀಯ ಭಾವನೆ ತೋರಿಸುವುದಿಲ್ಲ. ಸಾಮರಸ್ಯದಿಂದ ಇದ್ದಾರೆಯೇ ಹೊರತು ಎಂದೆಂದೂ ಕೂಡ ಅಂಗಡಿಗಳನ್ನು ಲೂಟಿ ಮಾಡಿದ್ದಾರೆ ಎಂಬ ಮಾತು ಕೇಳಿ ಬಂದಿಲ್ಲ, ಮಹಾರಾಷ್ಟ್ರಕ್ಕೆ ಹೋಗಲು ಜನ ಇಚ್ಛೆಪಡುವುದಿಲ್ಲ ಎಂಬ ಮಾತನ್ನು ತಿಳಿದುಕೊಳ್ಳಬೇಕು. ನಾವು ಬೆಳಗಾವಿಯಲ್ಲಿ ಒಂದು ಕಾನ್‌ಫರೆನ್ಸ್ ಮಾಡಿದೆವು, ಒಂದು ಲಕ್ಷ ಜನರು

ಅಲ್ಲಿ ಕೂಡಿ ನಮ್ಮ ಉದ್ದೇಶವನ್ನು ಸ್ಪಷ್ಟಪಡಿಸಿದೆವು, ಕೇವಲ ಬಾರ್ಡರ್ ವಿಚಾರದಲ್ಲಿ, ಕನ್ನಡ ಮತ್ತು ಮರಾಠಿ ಜನರ ಸಲುವಾಗಿ ಏನೂ ಮಾಡಲಿಲ್ಲ, ಶಾಂತ ರೀತಿಯಿಂದ ಕೂಡಿ ಒಂದು ಮೆರವಣಿಗೆ ಹೊರಡಿಸಿದೆವು, ಆಗ ಅನ್ಯಾಯ ನಡೆಯಿತು. ಆದರೆ ಶ್ರೀಯುತರುಗಳಾದ ಸರ್‌ದೇಶಾಯಿ, ಸ್ವೆಯನಕ್ ಮತ್ತು ನಂದಿಹಾಳ ಮುಂತಾದವರು ಏನೋ ಹೇಳುವರು. ಅವರಿಗೆ ಪ್ರಜಾಪ್ರಭುತ್ವ ಎಂದರೇನು ಎಂಬುದು ಅರಿವಾಗಿದೆಯೇ? ಶಾಂತ ರೀತಿಯಿಂದ ಮೆರವಣಿಗೆ ಹೊರಟರೆ ಜನರ ಮೇಲೆ ಕಲ್ಲು ತೂರಿದರು, ಚಪ್ಪಲಿ ಎಸೆದರು. ಆಗ ಪೋಲೀಸಿನವರು ಬಂದು ಅದನ್ನು ನಿಲ್ಲಿಸ ಬೇಕಾಯಿತು. ಆದರೆ ಅವರು ಬಡಿಗೆಯಲ್ಲಿ ಹೊಡೆದರು ಎಂದು ಆಕ್ಷೇಪಿಸಿರುವುದು ಸರಿಯಲ್ಲ. ನಿಜವಾಗಿಯೂ ಅಲ್ಲಿಗೆ ಬಂದಿದ್ದ ಬೇರೆ ಬೇರೆ ಜಿಲ್ಲೆಯ ಜನರು ಹೆದರಿದರು, ಆಗ ಪೋಲಿಸರು ಸಹಾಯ ಮಾಡಬೇಕಾಯಿತು. ಸಾಂಗಲಿಯಲ್ಲಿ ಮಧುವನ ಎಂಬ ಸಣ್ಣ ಹೋಟೆಲಿದೆ, ಮಂಗಳೂರಿನ ಜನರು ಅದನ್ನಿಟ್ಟಿದ್ದಾರೆ, ರೋಟರಿ ಕ್ಲಬ್‌ನವರು ವ್ಯವಸ್ಥೆ ಮಾಡಿದ್ದಾರೆ. ಅಲ್ಲಿ ಬೇಕಾದವರಿಗೆಲ್ಲಾ ಸಹಾಯ ಮಾಡುತ್ತಿರುವಾಗ ಲೂಟಿಮಾಡಿದ್ದಾರೆ. ಡಿಎಸ್‌ಪಿ ಆಫೀಸಿಗೆ ಕೇವಲ 150 ಅಡಿ ದೂರ ವಿರುವ ಈ ಸ್ಥಳದಲ್ಲಿ ಈ ರೀತಿ ನಡೆದಿದೆ. ಪೋಲೀಸಿನವರು ಸುಮ್ಮನಿದ್ದರು, ಕನ್ನಡಿಗ ಎಸ್.ಪಿ. ಇದ್ದರು, ಅವರಿಗೆ ಏನು ಮಾಡುವುದಕ್ಕೂ ಧೈರ್ಯ ಬರಲಿಲ್ಲ. ನಾವು ಶಾಂತ ರೀತಿಯಿಂದ ನಡೆಯುವವರು, ನಮ್ಮ ಜಿಲ್ಲಾಧಿಕಾರಿ ಯಾವ ಪ್ರಕಾರ ನಡೆಯುವರು ಎಂಬುದನ್ನು ನೋಡಬೇಕು. ಬೆಳಗಾವಿಯಲ್ಲಿ ನಿಜವಾಗಿ ನಮ್ಮ ಪೋಲೀಸು ಅಧಿಕಾರಿಗಳಾಗಲೀ ಅಥವ ರೆವೆನ್ಯೂ ಅಧಿಕಾರಿ ಗಳಾಗಲೀ, ಯಾರೂ ಕೂಡ ಅನ್ಯಾಯ ಮಾಡುವುದಿಲ್ಲ ಮತ್ತು ಮರಾಠಿ ಜನರಿಗೆ ಅನ್ಯಾಯವಾಗದ ರೀತಿ ನಡೆದುಕೊಳ್ಳುತ್ತಿದ್ದಾರೆ. ಮಹಾಜನ್ ವರದಿ ಪ್ರಕಾರ ನಮಗೆ ಬರಬೇಕಾದ ಪ್ರದೇಶ ಬರಬೇಕು, ಬೆಳಗಾವಿ ನಮ್ಮದು, ಅಲ್ಲಿ ಮರಾಠಿಗರಲ್ಲದೆ ಬೇರೆಯವರೂ ಇರಬಹುದು, ತೆಲುಗರು, ತಮಿಳರು, ಕ್ರಿಶ್ಚಿಯನ್ನರು, ಮುಸ್ಲೀಮರು ಇದ್ದಾರೆ. ನಿಜವಾಗಿಯೂ ಮಹಾಜನ್ ವರದಿಯಿಂದ ಬಹಳ ಸಂಪತ್ತು ನಮ್ಮದು ಹೋಗಿದೆ, ಖಾನಾಪುರದ ಅರಣ್ಯ ಹೋಯಿತು, ನಿಪ್ಪಾಣಿ ಪ್ರದೇಶ ಹೋಗುವುದು, ಹೇಗಾದರೂ ಬಾರ್ಡರ್ ಗಲಾಟೆಗೆ ಒಂದು ಕೊನೆ ಇರಬೇಕು ಎಂದು ಅದನ್ನು ನಾವು ಒಪ್ಪಿದೆವು. ಅಹಿಂಸಾತ್ಮಕವಾಗಿ ಹೋರಾಡಿ ನಮ್ಮ ನಿಲುವನ್ನು ಕೇಂದ್ರ ಸರ್ಕಾರಕ್ಕೆ ತಿಳಿಸುತ್ತಿದ್ದೇವೆ. ಆದರೆ ಅವರು ನಾವು ಹೇಳುವುದಕ್ಕೆ ಗಮನಕೊಡುವಂತೆ ಕಾಣುತ್ತಿಲ್ಲ. ನಾವು ಯಾರಿಗೂ ಅನ್ಯಾಯ ಮಾಡುತ್ತಿಲ್ಲ, ನಾವು ಇರಿಗೇಷನ್, ವಿದ್ಯುಚ್ಛಕ್ತಿ ಸೌಕರ್ಯ ಬೇಕಾದಷ್ಟು ಮಾಡಿದ್ದೇವೆ. ಅಕ್ಕಲಕೋಟೆ, ಜತ್ ಮುಂತಾದ ಭಾಗಗಳಲ್ಲಿ ಅಂತ ಸಂಪತ್ತೇನೂ ಇಲ್ಲ. ಅಲ್ಲಿ ಎಲ್ಲವೂ ಹೊಲಸು ರೀತಿಯಲ್ಲದೆ, ಬಸ್ ಸೌಕರ್ಯವಿಲ್ಲ, ಅವು ಕರ್ನಾಟಕಕ್ಕೆ ಸೇರುವುವು ಎಂದು ಅಲ್ಲಿ ಏನೂ ಸೌಕರ್ಯ ಮಾಡಿಲ್ಲ. ಆದರೆ ಕನ್ನಡ ಪ್ರದೇಶದಲ್ಲಿ ಮರಾಠಿಗರಿರುವ ಪ್ರದೇಶ ಎಂದೇನೂ ಭೇದವಾಡದೆ ಎಲ್ಲ ಕಡೆಗೂ ಬೇಕಾದ ಸೌಕರ್ಯ ಮಾಡಿಕೊಡುತ್ತಿರುವಾಗ ಟೀಕಿಸು ವುದು ಸರಿಯಲ್ಲ. ನಿಜವಾಗಿಯೂ ಮೈಸೂರು ರಾಜ್ಯದಲ್ಲಿರುವ ಮರಾಠಿಗರು ಸುಖವಾಗಿದ್ದಾರೆ ಎಂದು ಇಷ್ಟು ಹೇಳಿ ಮಾತನಾಡಲು ಅವಕಾಶಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ವಿ. ಎನ್. ಪಾಟೀಲ್ (ಹುಮ್ನಾಬಾದ್).—ಮಾನ್ಯ ಅಧ್ಯಕ್ಷರೇ, ಮೊದಲು ಒಂದು ವಿಷಯವನ್ನು ಅರಿಕೆ ಮಾಡಿಕೊಂಡು ಆಮೇಲೆ ಕೆಲವು ವಿಷಯಗಳನ್ನು ಹೇಳುತ್ತೇನೆ. ಕೆಲವು ಮಾನ್ಯ ಸದಸ್ಯರು ತಮ್ಮ ಭಾಷಣದ ಭರಾಟೆಯಲ್ಲಿ ಪ್ರಧಾನ ಮಂತ್ರಿಗಳ ಬಗ್ಗೆ ಕೆಲವು ಶಬ್ದಗಳನ್ನು ಉಪಯೋಗಿಸಿರುವುದು ಸರಿಯಾಗಿ ಕಾಣುವುದಿಲ್ಲವಾದ್ದರಿಂದ ಅವನ್ನು ಎಕ್ಸ್‌ಪಂಜ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಒಂದು ದೇಶದ ಪ್ರಧಾನಿಯ ಬಗ್ಗೆ ಈ ಸಭೆಯಲ್ಲಿ ಆ ಶಬ್ದಗಳನ್ನು ಉಪಯೋಗಿಸ ಬಾರದಾಗಿತ್ತು. Those words may be expunged.

Mr. SPEAKER.—We are hard-pressed for time. I shall look into it afterwards.

Sri V. N. PATIL.—With regard to the is ues faced by our State, I feel that our State is facing a dialemma. It is most unfortunate. A hostile atmosphere is created against the State Government with regard to the water problem, the border problem between Mysore and Maharashtra and so on. This kind of atmosphere has been created on account of the inactive attitude of our Government. The Government has taken these things very lightly. I humbly submit that our Government should have been more complacent in their approach. I do not want to bring all

(SRI V. N. PATIL)

the details before the House. But problems are coming up one after another and an embarrassing situation is being created between other States and Mysore and Mysore is being singled out. It is for the Cabinet to see as to how best they could rebut it and if it is not done, I should say that they are doing a great dis-service to the State. When we approach the D.M.K. people they say that some injustice is done to us and that they will stand by it. When Dr. K. L. Rao wrote a letter, there was a rift between Mysore and Tamil Nadu Members of Parliament, which has created several difficulties.

My friend Sri Sayanak is not here at present. He said several injustices have been done to Maharashtrians. The Language Commission Report is there, which has taken maximum care of the minorities. This Report clearly shows that the interests of Maharashtrians have been taken care of and no injustice is done to them.

As regards protection to minorities in Maharashtra they have every right to get protections. But I want to ask Maharashtrians why there should be a bundh of Belgaum and Bombay on one and the same day? Why a separate date for Belgaum bundh was not chosen? It is only when the green signal is received by them from the Shiva Sena, they agitate and observe bundh etc. I feel that instead of wasting our energies on the language issues, we could as well devote more attention to the problems of minorities, the problem of agrarian reforms and problems to fulfill our aim of giving the land to the tiller. We should concentrate our attention towards the economic progress of the States rather than devoting our attention and wasting our energies on these linguistic problems. I, for one, feel that we have lost sufficient opportunity to represent the interests of the people and the State during this Budget Session both before the State leaders as also before the Central leaders. Instead of creating conflicts between one State and the other, we should try to establish friendly relations between States and States. There must be a polarisation of political parties on political ideologies rather than creating differences among the parties.

Coming to the problem in regard to our aim to give land to the tiller, I asked the Hon. Revenue Minister several times to let me know how much land is vested under the religious institutions and how many of such institutions are in possession of the lands for more than a year, he always said that we are going to bring in a legislation to see that land is given to the tiller. Hundreds of cases are coming before the Courts and District authorities. But no action has been taken by the Government so far to bring such a legislation to fulfill the aim of land to the tiller. The Ministry must therefore, assure this hon. House that those religious institutions which hold these lands for years together would be evicted and the lands would be taken possession of by the Government and the proceeds by way of sale of those lands etc., would be utilised for all religious temples and institutions.

Another question I asked the Hon. Revenue Minister repeatedly is in regard to section 121A wherein a notice is being served on landholders asking them to file their objections, if any, within a period of 30 days. I do not know what sort of objections could be filed by our illiterate agriculturists in such a short time. I request the Hon. Minister to consider this problem with a humanitarian approach and see that the time limit is extended at least to six months or one year, so as to enable the illiterate agriculturists to file their objections in response to the notice, served on them.

During this month itself, in a place like Hundgi in Humnabad taluka vandalism prevailed in a horrible way. But the police there also could not take any action in the matter. Several houses of Christians were burnt and the persons having photos of Dr. Ambedkar and Lord Buddha were actually burnt to death. Even then the police was unable to control the situation and take action properly. Sir, the Hon. Minister for Finance has brought the Appropriation Bill before this House through which he wants us to give sanction to the money required by him. But unless he serves the State and fulfils his duty to see that the funds are properly utilised in the best interests of the people and the State, how can we give our sanction to this Appropriation Bill? It was the duty of the Government to protect these minorities. Sir, I am bringing this specific instance to the notice of the Government, because the Government may jump to say that it was not brought to their notice. In Hundgi taluka the vandalism went to the extent of dragging the ladies out of the houses and several huts were burnt.

One more thing I wish to mention here is in respect of Bidar District which is the only district where not even a single irrigation project has been taken up so far. It is the duty of the Government to see that Bidar district is brought on par with other districts in the State and to take up some irrigation projects there by allotting funds required for that. We have been hearing about 'Karanja Project' for the last so many years, but so far nothing has been done. I want to know why this Government wants to adopt indifferent attitude towards Bidar District?

Finally, I want to submit that every year during the months of June and July, the blackmarketeers are reaping money by selling the nationalised text books at abnormal prices. The books are not available in time and in required number. The Government must see that nationalised text books are available to the students in required number. If there is a proper check and arrangement it would not be difficult for the Government to make available these text books to the students at the price fixed by them. Even my own child could not secure a nationalised text-book and he had to borrow it from some other student. When we are having such an irresponsible Government which does not yield to the constructive suggestions offered by the opposition members, I want to ask, what right it has to survive?

I would plead with the Government in the name of humanity to stop the atrocities that are being committed on minority communities

(SRI V. N. PATIL)

like the Harijans, Girijans etc. It the Government fails to stop these atrocities, I warn that these minorities are bound to rise in revolt one day or the other and throw out this Government at any moment.

With these words, I conclude.

† ಶ್ರೀ ವಿ. ಎಲ್. ಶಿವಪ್ಪ (ತಿಪಟೂರು).—ಮಾನ್ಯ ಅಧ್ಯಕ್ಷರೇ, ಅಪ್ರೋಪ್ರಿಯೇಶನ್ ಬಿಲ್ ಮೂಲಕ 531 ಕೋಟಿ ರೂಪಾಯಿಗಳ ಹೊಂದಾಣಿಕೆಗೆ ನಾನು ವಿರೋಧಿಸುತ್ತಾ ಸರಕಾರಕ್ಕೆ ಕೆಲವು ಸೂಚನೆಗಳನ್ನು ಕೊಡಬೇಕಾಗಿದೆ. ಇದನ್ನು ತಮ್ಮ ಮೂಲಕ ಸರ್ಕಾರಕ್ಕೆ ತಿಳಿಸಲಿಚ್ಛಿಸುತ್ತೇನೆ. ಸ್ವಾಭಾವಿಕವಾಗಿ ಸರಕಾರವು ತನ್ನ ನೀತಿ ನಿರೂಪಣೆ ಮಾಡಿ ಆಡಳಿತ ನಡೆಸಬೇಕಾದ ಜವಾಬ್ದಾರಿ ಸರಕಾರದ ಮೇಲೆ ಇದೆ. ಆದರೆ ವಿರೋಧ ಪಕ್ಷದ ಸದಸ್ಯರು ಬಂದಿರತಕ್ಕಂಥ ಕೆಲವು ಪ್ರದೇಶದಲ್ಲಿ ಕಳೆದ ಹತ್ತು ಹನ್ನೆರಡು ವರ್ಷಗಳಲ್ಲಿ ಯಾವ ಅಭಿವೃದ್ಧಿ ಕೆಲಸವಾಗುತ್ತಿಲ್ಲ. ಇದರ ಉದ್ದೇಶ ಏನು ಅಂದರೆ ವಿರೋಧ ಪಕ್ಷದ ಸದಸ್ಯರ ಶಕ್ತಿ ಹೀನ ಮಾಡಬೇಕು, ಅವರಿಗೆ ಯೋಗ್ಯತೆ ಇಲ್ಲ, ಅವರಿಗೆ ಅವಕಾಶ ಇಲ್ಲ ಎನ್ನುವುದನ್ನು ಅಲ್ಲಿಯ ಜನರಿಗೆ ತೋರಿಸಬೇಕು ಎನ್ನುವ ಅಭಿಪ್ರಾಯ ಸರಕಾರ ಇಟ್ಟುಕೊಂಡಂತಿದೆ. ನಮ್ಮ ತಿಪಟೂರು ತಾಲ್ಲೂಕಿನಲ್ಲಿ ಎರಡು ಹೈ ಲೆವೆಲ್ ಕಾಜವೇ ಆಗಬೇಕಾಗಿದೆ. ಇದನ್ನು ಪ್ರಸ್ತಾಪ ಮಾಡಿದಾಗಲೆಲ್ಲಾ ಹಣದ ಕೊರತೆ ಇದೆ ಎಂದು ಸುಮಾರು ಕಳೆದ 12 ವರ್ಷಗಳಿಂದ ಹೇಳುತ್ತಲೇ ಇದ್ದಾರೆ. ತಿಪಟೂರು ತಾಲ್ಲೂಕಿನ ಜನ ಸರಕಾರಕ್ಕೆ ತೆರಿಗೆ ಕೊಡುತ್ತಾ ಇಲ್ಲವೇ? ಶ್ರೀಮಂತವಾಗಿರತಕ್ಕಂಥ ಈ ಒಂದು ತಾಲ್ಲೂಕಿನಿಂದ ಸರ್ಕಾರಕ್ಕೆ 8 ಕೋಟಿ ರೂಪಾಯಿ ಮಾರ್ಕೆಟ್ ಉತ್ಪತ್ತಿ ಇದೆ. ಇದಲ್ಲದೆ ತೆರಿಗೆ, ಇನ್‌ಕಂ ಟ್ಯಾಕ್ಸ್ ಮತ್ತು ಭೂಕಂದಾಯವನ್ನು ಸರಕಾರಕ್ಕೆ ಜನತೆ ಕೊಡುತ್ತಿದ್ದಾರೆ. ಆದರೂ ಕೂಡ ಈ ತಾಲ್ಲೂಕಿನಲ್ಲಿ ಹೈ ಲೆವೆಲ್ ಕಾಜವೇ ಮಾಡಲು ಸರಕಾರಕ್ಕೆ ಮನಸ್ಸು ಇಲ್ಲ. ಈ ಕಾಜವೇ ಖರ್ಚು ಸುಮಾರು ಒಂದು ಲಕ್ಷ ರೂಪಾಯಿ ಆಗಬಹುದು. ಈ ಕಾಮಗಾರಿಯ ಎಸ್ಟಿಮೇಟು ಆಗಿದ್ದು ಸ್ಯಾಂಕ್ಷನ್ ಆಗದೇ 12 ವರ್ಷದಿಂದ ನಿಂತಿದೆ ಅಂದರೆ ಎಷ್ಟರ ಮಟ್ಟಿಗೆ ಈ ತಾಲ್ಲೂಕಿನಲ್ಲಿ ಅಭಿವೃದ್ಧಿ ಕಾರ್ಯ ಮಾಡುತ್ತಿದ್ದಾರೆ ಎನ್ನುವುದನ್ನು ಅರ್ಥ ಮಾಡಿಕೊಳ್ಳಬಹುದು. ಈ ತಾಲ್ಲೂಕು ತೆಂಗಿನ ತೋಟಗಳಿಗಾಗಿ ಸುಪ್ರಸಿದ್ಧವಾಗಿದೆ. ತೆಂಗಿನ ತೋಟದ ಅಭಿವೃದ್ಧಿ ಬಗ್ಗೆ ಒಂದು ಯೋಜನೆ ಇಲ್ಲ. ಇಂಥ ಯೋಜನೆ ಸರಕಾರ ಮಾಡಬೇಕಲ್ಲವೇ? ಕಳೆದ ಮೂರು ವರ್ಷದಿಂದ ಒಂದು ಯೋಜನೆ ಮಾಡದೇ ಇದ್ದರೆ ಇಂಥ ಸರಕಾರ ಏತಕ್ಕೆ ಇರಬೇಕು? ಹಣದ ಕೊರತೆ ಇದೆ ಎಂದು ಹೇಳುವುದು ಸರಿಯಾದುದೇ? ಗಡಿ ವಿವಾದದ ನಿಯೋಗದ ಜೊತೆಗೆ ನಾನು ದಿಲ್ಲಿಗೆ ಹೋದಾಗ ಒಂದು ವಿಷಯದ ಪ್ರಸ್ತಾಪಕ್ಕೆ ಬಂತು. ಮುಖ್ಯ ಮಂತ್ರಿಗಳು ರಾಜಪುರೆಯವರಿಗೆ ಎಷ್ಟು ಬೇಕಾದರೂ ಖರ್ಚು ಮಾಡಬಹುದು ನಾನು ಹಣ ಒದಗಿಸುತ್ತೇನೆ ಎಂದು ಹೇಳಿದ್ದಾರಂತೆ. ಖರ್ಚು ಮಾಡಿದ ಇಂಥ ಹಣವನ್ನು ಯಾವ ಹೆಡ್ಡಿಗೆ ಖರ್ಚು ಹಾಕುತ್ತಾರೆ? ಈ ರೀತಿ ಖರ್ಚು ಮಾಡಲು ಸರಕಾರಕ್ಕೆ ಹಣ ಇದೆಯೇ? ಇದರಲ್ಲಿ ಇರತಕ್ಕ ನೀತಿ ಏನು? ಹೀಗೆ ಇರುವುದಾದರೆ ಈ ಅಪ್ರೋಪ್ರಿಯೇಷನ್ ಬಿಲ್ ಮುಖಾಂತರ ಬೇಡಿಕೆ ಇಟ್ಟಿರುವ 537 ಕೋಟಿ ಚಿಲ್ಲರೆ ರೂಪಾಯಿ ವ್ಯವಹಾರದಲ್ಲಿ ನೀತಿ ಬದ್ಧವಾಗಿ ಕೆಲಸ ಮಾಡುತ್ತಾರೆಯೇ? ಹದಿಮೂರು ವರ್ಷದಿಂದ ಬಾರ್ಡರ್ ಡಿಸ್ಪ್ಯೂಟ್ ಬಗೆಹರಿಸಲಿಲ್ಲ. ಏತಕ್ಕೆ ಬಗೆಹರಿಸಲಿಲ್ಲ? ಅಲ್ಲಿ ನಮಗೆ ಈ ಒಂದು ಪ್ರಶ್ನೆ ಹಾಕಿದರು. ಮೈಸೂರು ರಾಜ್ಯದಲ್ಲಿ ನಿಮಗೆ ಅಧಿಕಾರ ಇತ್ತು. ಏತಕ್ಕೆ ಬಗೆಹರಿಸಿಕೊಳ್ಳಲಿಲ್ಲ ಎಂದು ನಮ್ಮನ್ನು ಕೇಳಿದರು. ಅದಕ್ಕೆ ಯಜಮಾನರಾದವರು ಒಂದು ಮಾತು ಹೇಳಲು ಮನಸ್ಸು ಮಾಡಲಿಲ್ಲ. ಅದೇ ರೀತಿ ನೀರಿನ ವಿವಾದವನ್ನು ಕೂಡ ನಿಜಲಿಂಗಪ್ಪನವರು ಬಗೆಹರಿಸಲಿಲ್ಲ. ದೇಶಾದ್ಯಂತ ಗೊಂದಲ ಎಬ್ಬಿಸಿ ಆಡಳಿತ ನಡೆಸಬೇಕು ಎನ್ನುವ ದೃಷ್ಟಿ ಇವರಿಗೆ ಇದೆಯೇ? ಇವರಿಗೆ ಬೇರೆ ದೃಷ್ಟಿ ಇಲ್ಲವೇ? ಇಂದು ದೇಶದ ಆಡಳಿತ ಸರಿಯಾಗಿ ನಡೆಯುತ್ತಿಲ್ಲ. ಹೀಗಾದರೆ ಜನತೆಗೆ ರಕ್ಷಣೆ ದೊರೆಯುತ್ತದೆಯೇ? ಮಂತ್ರಿಗಳ ಬಗ್ಗೆ ಗೌರವ ಇರುತ್ತದೆಯೇ? ಆದರೆ ಹಣಕಾಸಿನ ಮಂತ್ರಿಗಳ ಬಗ್ಗೆ ನಮಗೆ ಹೆಚ್ಚು ಗೌರವ ಇದೆ. ಅವರು ಯಾವುದಕ್ಕೂ ಸಿಕ್ಕಿಕೊಂಡಿಲ್ಲ. ಅದಕ್ಕಾಗಿ ಬಹಳ ಸಂತೋಷಪಡುತ್ತೇನೆ. ನಿಮ್ಮ ಆಡಳಿತದ ಬಗ್ಗೆ ವ್ಯಕ್ತಿಗತವಾಗಿ ನಾನು ಗೌರವ ಕೊಡುತ್ತೇನೆ. ನಿಮ್ಮ ಹತ್ತಿರ ಸ್ವಾಭಾವಿಕವಾಗಿ ನಾವು ಬಂದಿಲ್ಲ. ದೇಶದ ಆಡಳಿತ ನಡೆಸುವ ಸರಕಾರದಲ್ಲಿ ಒಂದು ನೀತಿ ನಿಯಮ ಇರಬೇಕು. ಬೆಂಗಳೂರಿನ ಹತ್ತಿರ ನೆಲಮಂಗಲದಲ್ಲಿ ಮೊನ್ನೆ ನಡೆದ ಖಳ ನಾಯಕರ ಮೆರವಣಿಗೆಗಾಗಿ ರಸ್ತೆಯಲ್ಲಿ ಜನ ಸಂಚಾರಕ್ಕೆ ಎರಡು ಗಂಟೆಯವರೆಗೆ ಅವಕಾಶವಾಗಲಿಲ್ಲ. ಎರಡೂವರೆ ಗಂಟೆ ಕಾಲ ಜನ ಸಂಚಾರ ನಿಲ್ಲಿಸುವುದು ಯಾವ ನ್ಯಾಯ? ಇದರ ಬಗ್ಗೆ ಪತ್ರಿಕೆಯಲ್ಲಿ ಬಂದ ವರದಿ ಬೇಕಾದರೆ ನೋಡಬಹುದು. ಈಗಿನ ಮುಖ್ಯ ಮಂತ್ರಿಗಳು ಅಧಿಕಾರಕ್ಕೆ ಬಂದಾಗ್ಗೆ

ದೇಶಕ್ಕೆ ಒಂದು ಆಶ್ವಾಸನೆ ಕೊಟ್ಟಿದ್ದಾರೆ. ಸುಭದ್ರ ಆಡಳಿತ ಕೊಡುತ್ತೇವೆ. ದಕ್ಷತೆ ಹೆಚ್ಚಿಸುತ್ತೇವೆ ನೀತಿ ನಿರೂಪಣೆ ಮಾಡುತ್ತೇವೆ ಎಂಬುದಾಗಿ. ಸೀನಿಯಾರಿಟಿ ಪ್ರಶ್ನೆ ಬಂದಾಗ್ಗೆ ಅಯೋಗ್ಯರಾದವರನ್ನು ಅದಕ್ಷರಾದವರನ್ನು ಕಡ್ಡಾಯವಾಗಿ ರಿಟೈರ್ ಆಗುವಂತೆ ಮಾಡುತ್ತೇವೆ ಎಂದು ಹೇಳಿದರು. ಯೋಗ್ಯರಾದವರಿಗೆ ಪ್ರಮೋಷನ್ ಕೊಡುತ್ತೇವೆ ಎಂದು ಹೇಳಿದರು. ಆ ಮಾತುಗಳನ್ನು ಕೇಳಿದಾಗ ನಮಗೆಲ್ಲಾ ಬಹಳ ಸಂತೋಷವಾಗಿತ್ತು. ಆದರೆ ಆ ದಿವಸ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದ್ದರೆಂಬುದು ನಮಗೆಲ್ಲಾ ಈ ದಿವಸ ಅರ್ಥವಾಗುತ್ತಿದೆ. ಏನೆಂದರೆ ಯಾರು ಇವರು ಹೇಳಿದ ಹಾಗೆ ಕೇಳುತ್ತಾರೋ ಅಂಥವರನ್ನು ಮೇಲಕ್ಕೇರಿಸಿ, ಇನ್ನು ಕೆಲವು ಅಧಿಕಾರಿಗಳು ಎಷ್ಟೇ ದಕ್ಷರಾಗಿರಲಿ, ಮೇಧಾವಿಗಳಾಗಿರಲಿ ಆದರೆ ಅವರು ಈ ಮಂತ್ರಿಗಳು ಹೇಳಿದಂತೆ ಕೇಳದಿದ್ದರೆ ಅವರು ಎಷ್ಟೇ ಯೋಗ್ಯರಾಗಿದ್ದರೂ ಅವರನ್ನು ಕೆಲಸದಿಂದ ಅದಕ್ಷರೆಂದು ನಿವೃತ್ತಿ ಮಾಡುವುದಕ್ಕೆ ಇವರು ಪ್ರಯತ್ನ ಮಾಡಿದ್ದಾರೆಂದು ನಮಗೆ ಸ್ಪಷ್ಟವಾಗಿ ಕಂಡುಬರುತ್ತಿದೆ. ಇದು ಅಧಿಕಾರದ ದುರುಪಯೋಗವೆಂದು ಹೇಳದೆ ವಿಧಿಯಿಲ್ಲ. ಇದನ್ನೆಲ್ಲಾ ನೋಡಿದರೆ ಈ ದಿವಸ ನಮ್ಮ ರಾಜ್ಯದ ಆಡಳಿತ ಹುಚ್ಚರ ಕೈಗೆ ಸಿಕ್ಕಿದಂತಾಗಿದೆ ಎನ್ನುವುದರಲ್ಲಿ ಸ್ವಲ್ಪವೂ ಸಂಶಯವಿಲ್ಲ. ಇಂಥ ಹುಚ್ಚರ ಸರ್ಕಾರದಲ್ಲಿ ಯಾರಿಗೂ ರಕ್ಷಣೆ ಎನ್ನುವುದಿರುವುದಿಲ್ಲ. ಹುಚ್ಚರ ರಾಜ್ಯದಲ್ಲಿ ಯಾರಿಗೂ ರಕ್ಷಣೆಯಿಲ್ಲ ಎಂಬುದನ್ನು ಇತಿಹಾಸಗಳೇ ಸಾರುತ್ತಿವೆ. ಆದರೆ ನಮ್ಮ ನಾಡು ಬಹಳ ಸತ್ಯವಂತ ಜನರಿದ್ದ ನಾಡು. ಇಂಥ ನಾಡಿನಲ್ಲಿ ಒಂದು ಸುಳ್ಳು ಹೇಳುವುದಕ್ಕೂ ಕೂಡ ಆ ಹರಿಶ್ಚಂದ್ರ ಮನಸ್ಸನ್ನು ಬಿಟ್ಟು ಕೊಡಲಿಲ್ಲ. ಅಂಥ ಒಂದು ಸತ್ಯಸಂಧರಿದ್ದ ನಾಡಿನಲ್ಲಿ ಈ ದಿವಸ ಆಡಳಿತವನ್ನು ನಡೆಸತಕ್ಕ ಜನರು ಎಳ್ಳಷ್ಟೂ ಅಂಜಿಕೆಯಿಲ್ಲದೆ ನಿರ್ಭಯವಾಗಿ ದಿನಂಪ್ರತಿ ಸುಳ್ಳು ಹೇಳಿಕೊಂಡು ಆಡಳಿತವನ್ನು ನಡೆಸುತ್ತಿದ್ದಾರೆ. ಅಂಥ ಸುಳ್ಳನ್ನು ಹೇಳಿಕೊಂಡು ಸರ್ಕಾರವನ್ನು ನಡೆಸತಕ್ಕ ಜನರನ್ನು ದೇವರು ಹೇಗೆ ಸೃಷ್ಟಿ ಮಾಡಿದನೋ ಗೊತ್ತಾಗುತ್ತಿಲ್ಲ. ಇನ್ನಾದರೂ ಆಡಳಿತವನ್ನು ನಡೆಸತಕ್ಕ ಜನ ಈ ಅಧಿಕಾರವೆನ್ನುವುದು ಶಾಶ್ವತವಾದುದಲ್ಲ—ಇದು ಬರುತ್ತದೆ ಹೋಗುತ್ತದೆ ಆದರೆ ಇವರ ಹೆಸರು ಮಾತ್ರ ಉಳಿಯುತ್ತದೆ ಎಂಬುದನ್ನು ವಿಚಾರ ಮಾಡಿ ವಿವೇಕದಿಂದ ಈ 532 ಚಿಲ್ಲರೆ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಹಾಗೂ ನಾನು ಈ ಮಸೂದೆಯನ್ನು ವಿರೋಧಿಸುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಅಧ್ಯಕ್ಷರೇ, ನಾನು ಭಾಷಣವನ್ನು ಮಾಡುವುದಕ್ಕೆ ಮುಂಚೆ ನನಗೆ ಮಾತನಾಡುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟಿದ್ದಕ್ಕಾಗಿ ನಿಮಗೆ ನನ್ನ ಥ್ಯಾಂಕ್ಸ್‌ಗಳು.

ಈ ದಿವಸ ನಾವು ಐನೂರು ಮೂವತ್ತೆರಡೂವರೆ ಕೋಟಿ ರೂಪಾಯಿಗಳನ್ನು ಮಾನ್ಯ ಅರ್ಥಿಕ ಸಚಿವರಾದ ಹೆಗ್ಗಡೆಯವರ ಕೈಲಿ ಕೊಡಬೇಕಾಗಿದೆ. ಅವರು ಈ ಹಣವನ್ನು ಸರಿಯಾಗಿ ಭಾಗ ಮಾಡಿ ಎಲ್ಲರಿಗೂ ಹಂಚುತ್ತಾರೆಂಬ ಪೂರ್ಣ ವಿಶ್ವಾಸ ನನಗಿದೆ. ನಾನು ಅವರನ್ನು ಕಳೆದ 15 ವರ್ಷಗಳಿಂದಲೂ ನೋಡುತ್ತಿದ್ದೇನೆ. ನಾವು ಈ ಹಿಂದೆ ಈ ಸರ್ಕಾರದವರ ಕೈಗೆ ಕೊಟ್ಟಿದ್ದ ಹಣವನ್ನು ಯಾವ ರೀತಿ ಖರ್ಚು ಮಾಡುತ್ತಿದ್ದಾರೆಂಬುದನ್ನು ನೋಡಿ, ಈ ದಿವಸ ಯಾರು ನೋಡಿದರೂ ಇವರ ಕೈಗೆ ಇಷ್ಟು ಹಣವನ್ನು ಹೇಗೆ ಕೊಡುವುದು ಎಂದು ಹೇಳಿದ್ದನ್ನು ನೋಡಿದರೆ ನನಗೂ ಕೂಡ ಇವರ ಕೈಗೆ ಇಷ್ಟು ಹಣವನ್ನು ಕೊಡುವುದಕ್ಕೆ ಬಹಳ ಭಯವಾಗುತ್ತಿದೆ. ನಾವು ಈ ದಿವಸ ಇವರ ಕೈಗೆ ಕೊಡತಕ್ಕ ದುಡ್ಡೇನಿದೆ ಅದೇನೂ ಬಿಟ್ಟಿ ಬಂದ ದುಡ್ಡಲ್ಲ. ದೇಶದಲ್ಲಿರತಕ್ಕ ರೈತವರ್ಗ ಏನಿದೆ ಆ ಜನರು ತಮ್ಮ ಮೂಗಿನಿಂದ ಅರೆದು ಕಷ್ಟಾರ್ಜಿತದಿಂದ ಸಂಪಾದನೆ ಮಾಡಿದ ದುಡ್ಡನ್ನು ಇವರ ಕೈಗೆ ಹೇಗೆ ಕೊಡುವುದು ಎನಿಸುತ್ತಿದೆ. ನನಗೆ ಅಧ್ಯಕ್ಷರು ಬೆಲ್ಲನ್ನು ಮಾತ್ರ ಹೊಡೆಯಬಾರದು. I am not fond of hearing my own voice'. Though my voice is very sweet. I do not want to make anybody hear it. So please do not ring the bell and disturb me unnecessarily. ಹಾಗೆ ಮಧ್ಯೆ ಬೆಲ್ಲನ್ನು ಹೊಡೆದರೆ ನನ್ನ ಥಾಟ್ಸೆಲ್ಲಾ ಹೋಗಿಬಿಡುತ್ತವೆ.

ಅಧ್ಯಕ್ಷರು.—What are you talking ! I never rang the bell.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—You were going to ring it. I saw it. ನಾವು ಈ ದೇಶದ ಹಣಕಾಸಿನ ಮಂತ್ರಿಗಳಿಗೆ ಕೊಡತಕ್ಕ ಹಣವನ್ನು ಅವರು ಕೆಲವು ಮೆಂಬರುಗಳ ವಿಚಾರದಲ್ಲಾದರೆ ಹೇಗೆ ಖರ್ಚು ಮಾಡುತ್ತಾರೆ ಅವರಿಗೆಂಥ ಟ್ರೀಟ್‌ಮೆಂಟನ್ನು ಕೊಡುತ್ತಾರೆ, ಇನ್ನು ಕೆಲವು ಮೆಂಬರುಗಳಿಗಾದರೆ ಯಾವ ರೀತಿ ಟ್ರೀಟ್‌ಮೆಂಟ್ ಕೊಡುತ್ತಾರೆ, ಇವರು ಹಣವನ್ನು ಯಾವ ಪ್ರಕಾರ ಖರ್ಚು ಮಾಡುತ್ತಾರೆ ಅನ್ನುವುದಕ್ಕೆ ಯಾವ ಇತಿಮಿತಿಯೂ ಇದ್ದಂತೆ ಕಂಡುಬರುತ್ತಿಲ್ಲ.

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

ಉದಾಹರಣೆಗೆ ನಾನು ಹಳ್ಳಿ ಇಂದ ಬರತಕ್ಕ ಒಬ್ಬ ಸದಸ್ಯಳು. ನನ್ನ ಟಿ.ಎ. ವಿಚಾರದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ ನನಗೆ ಟಿ.ಎ. ಡ್ರಾ ಮಾಡುವುದರಲ್ಲಿ ನನ್ನ ಊರಿನಿಂದ ನಂಜನಗೂಡಿನ ವರೆಗೂ ನನಗೆ ಕಾರಿನಲ್ಲಿ ಬಂದುದಕ್ಕೆ ಟಿ.ಎ. ಕೊಟ್ಟಿದ್ದಾರೆ. ಅನಂತರ ನನಗೆ ನಂಜನಗೂಡಿನಿಂದ ಮೈಸೂರಿಗೆ III class ನಲ್ಲಿ ಮತ್ತು ಮೈಸೂರಿನಿಂದ ಬೆಂಗಳೂರಿಗೆ I class ರೈಲು ಛಾರ್ಜನ್ನು ಡ್ರಾ ಮಾಡಿದ್ದಾರೆ. ನನಗೆ ಸ್ವಂತ ಕಾರಿದ್ದರೂ ನಾನು ಬೆಂಗಳೂರಿಗೆ ಬರಬೇಕಾದರೆ ಮೂರನೆ ದರ್ಜೆ ರೈಲಿನಲ್ಲೇ ಬರಬೇಕಂತೆ. ನಾನು ಕಾರಿನಲ್ಲಿ ಬಂದರೆ ಅದಕ್ಕೆ ಆಗತಕ್ಕ ದುಡ್ಡನ್ನು ಕೊಡುವುದಿಲ್ಲವಂತೆ ಟ್ರೈನಿನಲ್ಲಿ ಬಂದರೆ ಕಾಲಹರಣ ಎಷ್ಟಾಗುತ್ತದೆ, ಅದರಿಂದ ಕೆಲಸಗಳೆಷ್ಟು ನಿಧಾನವಾಗುತ್ತವೆ ಎಂಬುದನ್ನು ಆಲೋಚನೆ ಮಾಡದೆ ಯಾರೋ ಮುಠ್ಠಾಳರು, ಅನಾಥರು, ದುಡಿಯುವುದಕ್ಕೆ ಕೈಲಾಗದಿದ್ದವರು ಸುಳ್ಳು ಟಿ.ಎ. ಡ್ರಾ ಮಾಡುತ್ತಾರೆಂದು ನನಗೂ ಅದೇ ರೀತಿ ಹೇಳುವುದಕ್ಕೆ ಹೊರಟಿದ್ದಾರೆ. ಈ ಟಿ.ಎ. ರೂಲ್ಸುಗಳಾದರೂ ಯಾವ ತರವಾರಿನಲ್ಲಿ ಬರೆದವುಗಳೋ? ಏನೋ! ನಾನು ಮೊದಲಿಂದಲೂ ಕಾರಿನಲ್ಲೇ ಬರುತ್ತಿದ್ದೇನೆಂಬುದು ಎಲ್ಲರಿಗೂ ಗೊತ್ತಿದೆ. ಆದರೆ ನನಗೆ ಕಾರಿನಲ್ಲಿ ಬಂದರೆ ಅದಕ್ಕೆ ತಕ್ಕಂಥ ಟಿ.ಎ. ಡ್ರಾ ಮಾಡುವುದಕ್ಕೆ ರೂಲ್ಸಿನಲ್ಲಿ ಅವಕಾಶವಿಲ್ಲವಂತೆ. ಆವರೆ ಇಲ್ಲಿ ಕುಳಿತಿರತಕ್ಕ ಮಂತ್ರಿಗಳು ಪ್ರತಿಯೊಬ್ಬರೂ ಅವರವರ ಕ್ಷೇತ್ರಗಳಿಗೆ ತಿಂಗಳಲ್ಲಿ ಯಾರು ಯಾರು ಎಷ್ಟೆಷ್ಟಾವರ್ತಿ ಅವರ ಕಾರುಗಳಲ್ಲಿ ಹೋಗಿಲ್ಲ? ಅವರು ಆ ಬಗ್ಗೆ ಟಿ.ಎ. ಡ್ರಾ ಮಾಡಿಲ್ಲ? ಮಂತ್ರಿಗಳು ಬೇಕಾದರೆ ಕಾರಿನಲ್ಲಿ ಎಷ್ಟು ಸಾರಿಬೇಕಾದರೂ ಹೋಗಿಬರಬಹುದು, ಟಿ.ಎ. ಡ್ರಾ ಮಾಡಬಹುದು. ಅವರಿಗೆ ಕೊಡತಕ್ಕ ಹಣಕ್ಕೆ ಲೆಕ್ಕವಿಲ್ಲ. ನಮಗೆ ಕೊಡತಕ್ಕ ಹಣಕ್ಕೆ ಮಾತ್ರ ಲೆಕ್ಕ. ಸರ್ಕಾರದವರು ಒಬ್ಬೊಬ್ಬ ಸದಸ್ಯರಿಗೂ ಯಾವ ಯಾವ ರೀತಿ ಟ್ರೀಟ್‌ಮೆಂಟನ್ನು ಕೊಡುತ್ತಿದ್ದಾರೆ ಎಂಬುದನ್ನು ಉದಾಹರಿಸುವುದಕ್ಕಾಗಿ ನಾನು ಈ ಕಾರಿನ ವಿಚಾರವನ್ನು ಹೇಳಿದೆ.

ಇನ್ನು ಅರಣ್ಯ ಇಲಾಖೆಯ ವಿಚಾರದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ನಮ್ಮ ಮುಖ್ಯ ಮಂತ್ರಿಗಳು ಸಭೆಯಲ್ಲಿಲ್ಲ; ಇಂದೆ ಅವರು ಯಾವ ಇಲಾಖೆಯಲ್ಲೇ ಆಗಲಿ ಅಂಥ ಕೃತ್ಯಗಳೇನಾದರೂ ಇದ್ದರೆ ನನಗೆ ಆ ವಿಚಾರವನ್ನು ತಂದು ಹೇಳಿ, ಆ ತಪ್ಪಿತಸ್ಥರನ್ನು ಕೂಡಲೆ ಪನಿಷ್ ಮಾಡುತ್ತೇನೆಂದು ನನಗೆ ಹೇಳುತ್ತಿದ್ದರು. ಆದರೆ ನನಗೆ ಚಳ್ಳಕೆರೆ ರೇಂಜ್ ಫಾರೆಸ್ಟಿಗೆ ಸೇರಿದಂತೆ ಒಂದು ಕಾಗದ ಬಂದಿದೆ. ಚಳ್ಳಕೆರೆಗೆ ನಾಲ್ಕು ಮೈಲಿಗಳ ದೂರದಲ್ಲಿ ಒಂದು ಫಾರೆಸ್ಟ್ ರಸ್ತೆಯನ್ನು ಮಾಡತಕ್ಕ ಬಗ್ಗೆ ಒಂಭತ್ತೂವರೆ ಲಕ್ಷ ರೂಪಾಯಿಗಳ ಒಂದು ಅಂದಾಜ ಕೂಡ ಮಂಜೂರಾಗಿ ಅಲ್ಲಿ ಜೆಲ್ಲಿ ಜಮಾವಣೆ ವಗ್ಯೆರೆ ಎಲ್ಲಾ ಆಗಿದೆ ಎಂದು ಹೇಳಿ ದುಡ್ಡನ್ನು ಡ್ರಾ ಮಾಡಿ ತಿಂದು ಹಾಕಿದ್ದಾರೆ. ಆದರೆ ಅಲ್ಲಿ ಜೆಲ್ಲಿನೂ ಇಲ್ಲ, ಜಮಾವಣೆಯೂ ಇಲ್ಲ; ರಸ್ತೆಯಂತೂ ಮೊದಲೇ ಇಲ್ಲ. ಆದರೆ ದುಡ್ಡು ಮಾತ್ರ ಖರ್ಚಾಗಿದೆ. ಈಗತಾನೆ ಮಾನ್ಯ ಮುಖ್ಯ ಮಂತ್ರಿಗಳೂ ಕೂಡ ಸಭೆಗೆ ಬಂದರು. ಅವರು ಹಿಂದೆ ಹೇಳುತ್ತಿದ್ದಂತೆ ಈಗ ಈ ವಿಚಾರವನ್ನು ನಾನು ಮಾನ್ಯ ಅಧ್ಯಕ್ಷರ ಮೂಲಕ ಈ ಕಾಗದವನ್ನು ಮುಖ್ಯ ಮಂತ್ರಿಗಳಿಗೆ ವಿಚಾರಣೆಗಾಗಿ ಕಳುಹಿಸುತ್ತಿದ್ದೇನೆ. ಅವರೇನು ವಿಚಾರಣೆ ಮಾಡುತ್ತಾರೋ ಮಾಡಲಿ. ನಾನು ಕಾಯ್ದು ನೋಡುತ್ತೇನೆ.

ಇನ್ನು ಕೋಆಪರೇಟೀವ್ ಸೊಸೈಟಿಗಳ ಬಗ್ಗೆ ಒಂದು ವಿಚಾರವನ್ನು ತಿಳಿಸಬೇಕಾಗಿದೆ. ಹಿಂದೆ ಮಾನ್ಯ ಉಪಮಂತ್ರಿಗಳಾದ ಶ್ರೀ ಬಿ. ಎಲ್. ಗೌಡರು ಏನಾದರೂ ಅಂಥ ತಪ್ಪಿತಸ್ಥರಿದ್ದರೆ ತಿಳಿಸಿ ಕೂಡಲೆ ಅವರನ್ನು ವರ್ಗಮಾಡುತ್ತೇನೆಂದು ಹೇಳಿದ್ದರು. ನಾನು ಒಬ್ಬ ಸೊಸೈಟಿಯ ನೌಕರನ ವಿಚಾರದಲ್ಲಿ ಒಂದು ದೂರನ್ನು ಅವರಿಗೆ ಕೊಟ್ಟಿದ್ದೆ. ಆದಕ್ಕೆ ಪಾಪ ಅವರು ಕೈ ಕೊಂಡ ಕಾರ್ಯಕ್ರಮವೇನೆಂದರೆ ಆ ತಪ್ಪಿತಸ್ಥನನ್ನು ವರ್ಗಮಾಡಿದರು. ಆದರೆ ಮುಖ್ಯ ಮಂತ್ರಿಗಳು ಅಲ್ಲಿಂದ ವರ್ಗಮಾಡುವುದಕ್ಕೆ ಬದಲಾಗಿ ಅತನನ್ನು 9 ತಿಂಗಳು ಕಾಲ ಅಲ್ಲೇ ಇಟ್ಟುಕೊಂಡು ತಪ್ಪಾಗಿದ್ದ ಲೆಕ್ಕಗಳನ್ನೆಲ್ಲ ತಿದ್ದಿಸಿ ಅವರು ಎಲ್ಲಿಯವರೆಗೂ ಹೋಗಿದ್ದಾರೆಂದರೆ ಆ ಆಡಿಟರನ್ನು ತನ್ನ ವಾದಿಯಲ್ಲಿ ಏನು ತಪ್ಪು ಎಂದು ಹೇಳಿದ್ದಾರೋ ಅದೆಲ್ಲಾ ಏನೂ ಇಲ್ಲ ಎಂದು ಹೇಳುವ ಮಟ್ಟಿಕ್ಕೆ ಹೋಗಿದ್ದಾರೆ. ಹಾಗೆ ತಪ್ಪು ಲೆಕ್ಕಗಳನ್ನು ಮತ್ತು ಆಡೀಟರನ್ನು ಒಳಗೊಂಡಂತೆ ಎಲ್ಲರನ್ನೂ ಸರಿಪಡಿಸುವುದಾದರೆ ಅಂಥಾ ಆಡಿಟ್ ಪದ್ಧತಿಯಾದರೂ ಏತಕ್ಕಿರಬೇಕು? ಅವಕ್ಕೇಕೆ ನಾವು ವ್ಯಥಾ ದುಡ್ಡನ್ನು ಹಾಳುಮಾಡಬೇಕು? ಆ ಆಡಿಟ್ ಪದ್ಧತಿಯನ್ನು ಕೂಡಲೆ ವಜಾಮಾಡಿ ಎಂದು ಹೇಳುತ್ತಿದ್ದೇನೆ. ಟಿ. ನರಸೀಪುರದಲ್ಲಿ ಮೊನ್ನೆತಾನೆ ಒಂದು ಸಹಕಾರಸಂಘದ ಚುನಾವಣೆ ನಡೆಯಿತು. ಅಲ್ಲಿ ಒಬ್ಬ ಅಸಿಸ್ಟೆಂಟ್ ರಿಜಿಷ್ಟ್ರಾರ್ ಯಾವಾಗಲೂ ದಿನವಹಿ ಆಡಳಿತದಲ್ಲಿ ಇಂಟರ್‌ಫಿಯರ್ ಮಾಡುತ್ತಿದ್ದಾನೆ ಅಲ್ಲಿ ಪೂರಾ ಮಾಲಡ್ಮಿನಿಸ್ಟ್ರೇಷನ್ ನಡೆಯುತ್ತಿದೆ. ಅದನ್ನು ಕೂಡಲೆ ವಿಚಾರಮಾಡಿ ಸರಿಪಡಿಸಬೇಕೆಂದು ಹೇಳುತ್ತಿದ್ದೇನೆ.

ಇನ್ನು 26 ನೇ ತಾರೀಖಿನ ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ "ಫೈಲ್ ಮಿಸ್ಸಿಂಗ್ ಫ್ರಂ ದಿ ಆಫೀಸ್" ಎಂಬ ಹೆಡ್ಡಿನಲ್ಲಿ ಒಂದು ಹೇಳಿಕೆ ಬಂದಿತ್ತು. ಅದನ್ನು ಎಲ್ಲರೂ ನೋಡಿರಬಹುದು. ಕೂರ್ಗ್ ರೇಂಜಿನಲ್ಲಿ ಒಂದು ದೊಡ್ಡ ಟಿಂಬರ್ ಸ್ಮಗ್ಲಿಂಗ್ ನಡೆಯಿತು. ಆ ಸಂಬಂಧವಲ್ಲಿ ಕೆಲವು ಜನರನ್ನು ಸಸ್ಪೆಂಡ್ ಮಾಡಲಾಗಿದೆ. ಅಲ್ಲಿನ ಕನ್‌ಸರ್ವೇಟರು ಆ ವಿಚಾರಣೆಯನ್ನು ಅಬೇಯನ್ಸ್‌ನಲ್ಲಿ ಇಟ್ಟಿದ್ದಾರಂತೆ; ಕಾರಣ ಕನೆಕ್ಟೆಡ್ ಫೈಲೇ ಇಲ್ಲ ಎಂದು ಅಂದಾಗ ಇನ್ನು ಎಲ್ಲವೂ ಮುಗಿದಂತೆಯೇ ಅಲ್ಲಿಗೆ ಕೇಸೂ ಹೋಯಿತು, ಸಸ್ಪೆನ್‌ಷನ್ನೂ ಹೋಯಿತು; ಎಲ್ಲಾ ಹೋಯಿತು. ಆದರೆ ಆ ದುಡ್ಡು ಏನಾಗಬೇಕು ? ಆ ಫೈಲ್ ಎಲ್ಲಿ ಹೋಯಿತು ? ನನಗೆ ತಿಳಿದುಬಂದಿರುವಂತೆ ಪ್ರತಿ ಒಂದು ಜಿಲ್ಲೆಯಿಂದಲೂ ದೊಡ್ಡವರಿಗೆ ಐದ್ಕೈದು ಸಾವಿರ ಮಾಮೂಲು ಬಂದು ಮುಟ್ಟುತ್ತಿದೆಯಂತೆ. ಅದನ್ನು ವಿಚಾರಮಾಡಬೇಕೆಂದು ಹೇಳುತ್ತಿದ್ದೇನೆ.

ಶ್ರೀ ಎಸ್. ವಿ. ಅಗ್ನಿಹೋತ್ರಿ.—ಮಾನ್ಯ ಸದಸ್ಯರು ಹೇಳುತ್ತಿರುವುದು ಬಹುಶಃ ಆಂಧ್ರದೇಶಕ್ಕೆ ಸೇರಿದ ವಿಷಯವೆಂದು ಕಾಣುತ್ತಿದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಾನು ಆಂಧ್ರದ ಅಸೆಂಬ್ಲಿಯಲ್ಲಿಲ್ಲ ಮೈಸೂರಿನವಳು ನಾನು ಮೈಸೂರಿನಲ್ಲಿದ್ದೇನೆ. ನೀವು ನನ್ನ ಥಾಟ್ಸ್ ಕೆಡಿಸಬೇಡಿ ಸುಮ್ಮನಿರಿ. ಇನ್ನು ನಾನು ಆರ್ಟಿಜಾನ್ ಟ್ರೈನಿಂಗ್ ಇನ್‌ಸ್ಟಿಟ್ಯೂಟಿನ ವಿಚಾರವಾಗಿ ಎರಡು ಮಾತನ್ನು ಹೇಳಬೇಕಾಗಿದೆ. ಇದರ ಮೈನ್ ಬ್ರಾಂಚ್ 22 ಮತ್ತು ಸಬ್ ಬ್ರಾಂಚ್‌ಗಳು 8 ಮಾತ್ರ. ಆದರೆ ನಾನೀಗ ಹೇಳುತ್ತಿರುವುದು ತುಮಕೂರಿನಲ್ಲಿರತಕ್ಕ ವಿಮೆನ್ ಆರ್ಟಿಜನ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್‌ನ ವಿಚಾರ. ಅಲ್ಲಿ ಹೆಂಗಸರಿಗೆ 12 ತಿಂಗಳು ಕಾಲ ಟ್ರೈನಿಂಗನ್ನು ಕೊಡಲಾಗುತ್ತದೆ. ಪ್ರತಿಯೊಬ್ಬ ಹೆಂಗಸರಿಗೂ ತಿಂಗಳಿಗೆ 40 ರೂಪಾಯಿ ಸ್ಟೈಫಂಡನ್ನು ಕೊಡಲಾಗುತ್ತಿದೆ. ಅಲ್ಲಿ ಅವರಿಗೆ ಗ್ಲಾಸ್ ಬೀಡ್ಸ್ ಡಾಯಮಂಡ್ ಹಾಯ್ ಜರಿ ಮ್ಯಾಟ್ ಮೇಕಿಂಗ್ ಮತ್ತು ಟೈಲರಿಂಗ್ ಈ ಬಾಬುಗಳಲ್ಲಿ ಟ್ರೈನಿಂಗನ್ನು ಕೊಡುತ್ತಿದ್ದಾರೆ. ಇಲ್ಲಿ ಇನ್‌ಸ್ಟ್ರಕ್ಟರುಗಳೇ ಇಲ್ಲ. ಸುಮಾರು ಹನ್ನೆರಡು ತಿಂಗಳಿಂದಲೂ ಇಲ್ಲಿ ಇನ್‌ಸ್ಟ್ರಕ್ಟರುಗಳು ಇಲ್ಲ ಎಂದು ಹೇಳುತ್ತಿದ್ದುದರಿಂದ ಇಲ್ಲಿಗೆ ಈಗ ಹತ್ತು ದಿನಗಳ ಕೆಳಗೆ ಒಬ್ಬರು ಇನ್‌ಸ್ಟ್ರಕ್ಟರನ್ನು ಕಳುಹಿಸಿದ್ದಾರೆ. ಈಗ ಪರೀಕ್ಷೆಯಾಗಬೇಕು ಅಷ್ಟರೊಳಗೆ ಪಾಠಗಳನ್ನು ಏನು ಹೇಳಿಕೊಡುತ್ತಾರೆ ಮತ್ತು ಯಾವ ರೀತಿ ಸರ್ಟಿಫಿಕೇಟು ಕೊಡುತ್ತಾರೆ? ಇಲ್ಲಿ ಇರುವ ಪ್ರತಿಯೊಬ್ಬ ಹುಡುಗರಿಗೂ ತಿಂಗಳಿಗೆ 40 ರೂಪಾಯಿಗಳಂತೆ ಸ್ಟೈಫಂಡು ಬೇರೆ ಕೊಡುತ್ತಿದ್ದಾರೆ. ಇಲ್ಲಿರುವ ಹುಡುಗರಿಗೆ ಕ್ವಾಲಿಫಿಕೇಷನ್ನೇ ಇಲ್ಲದೇ ಹೋದರೆ ಇವರೇನು ಮಾಡುತ್ತಾರೆ ? ಇದರಬಗ್ಗೆ ಸರಕಾರದವರು ಏನಾದರೂ ವಿಚಾರ ಮಾಡಿದ್ದಾರೆಯೇ ? ಇದರ ಕಡೆಗೆ ಸರಕಾರ ಲಕ್ಷ್ಯ ಕೊಡುತ್ತಿಲ್ಲ. ಮತ್ತು ನಾನಾಗಲೇ ಹೇಳಿದ ಹಾಗೆ ಫಾರೆಸ್ಟು ಡಿಪಾರ್ಟ್‌ಮೆಂಟಿನಲ್ಲಿ ಬಹಳ ಅನ್ಯಾಯವಾಗಿ ಖರ್ಚುಗಳಾಗುತ್ತಲಿವೆ. ಇದರ ಕಡೆಗೆ ಸರಕಾರ ಸ್ವಲ್ಪ ಯೋಚನೆ ಮಾಡಬೇಕು. ಮಾನ್ಯ ರೆವಿನ್ಯೂ ಮಂತ್ರಿಗಳಾದ ಶ್ರೀ ಕೌಜಲಗಿಯವರು ಇಲ್ಲೇ ಇದ್ದಾರೆ. ಲ್ಯಾಂಡ್ ರಿಫಾರಂಸ್ ವಿಚಾರದಲ್ಲಿ ಇವರು ಬಹಳವಾಗಿ ಹೇಳುತ್ತಿದ್ದಾರೆ. ಮತ್ತು ಮೊನ್ನೆ ದಿವಸ ನೆಲಮಂಗಲದಲ್ಲಿ ಬಹಳ ದೊಡ್ಡ ಭಾಷಣವನ್ನೇ ಮಾಡಿದ್ದಾರೆ. ಸ್ಮಾಲ್ ಹೋಲ್ಡರ್ಸ್‌ಗಳಿಗಾಗಿ ಒಂದು ದೊಡ್ಡ ಸ್ಕೀಂ ಹಾಕಿಕೊಂಡು ಅದಕ್ಕೆ ಬೇಕಾದಂತಹ ಎಲ್ಲಾ ಸೌಲಭ್ಯಗಳನ್ನೂ ಒದಗಿಸಿ ಕೊಡುತ್ತೇವೆಂದು ಹೇಳಿದ್ದಾರೆ. ನಾನು ಕೂಡ ಸ್ಮಾಲ್ ಲ್ಯಾಂಡ್ ಹೋಲ್ಡರುಗಳ ಪೈಕಿ ವಿಧವೆಯಾಗಿರುವವರಿಗೆ ಲ್ಯಾಂಡ್ ರಿಫಾರಮ್ಸ್ ಬಗ್ಗೆ ಸ್ವಲ್ಪ ರಿಲೀಫ್ ಕೊಡಿ ಎಂದು ಕೇಳುತ್ತಿದ್ದೇನೆ. ಹೆಣ್ಣು ಮಕ್ಕಳು ಮದುವೆಯಾದ ಮೇಲೆ ವಿಡೋ ಆದರೆ ಅವರೆಲ್ಲಾದರೂ ಒಬ್ಬರು ಟೀಚರಾಗಿ 120 ರೂಪಾಯಿ ಸಂಬಳ ಪಡೆಯುತ್ತಿದ್ದರೆ, ಮತ್ತು ಅವರಿಗೆ ಒಂದೆರಡು ಎಕರೆ ಜಮೀನು ಇದ್ದರೆ ಇಂತಹ ಸ್ಮಾಲ್ ಹೋಲ್ಡರುಗಳಿಗೆ ರಿಲೀಫ್ ಕೊಡದೆ ಅವರ ಜಮೀನನ್ನು ಕಿತ್ತುಕೊಂಡರೆ ಇದು ನ್ಯಾಯವಾಗಿರುತ್ತದೆಯೇ ? ಇಂತಹವರಿಗೆ ತಾವು ಸ್ವಲ್ಪ ರಿಲೀಫ್ ಕೊಡಬೇಕು. ನಿಜವಾಗಿಯೂ ನೀವು ಹೆಣ್ಣು ಮಕ್ಕಳ ಬಗ್ಗೆ ಸ್ವಲ್ಪ ದಯೆಯಿಂದ ಇರುವವರು ಎನ್ನುವುದು ನಮಗೆಲ್ಲರಿಗೂ ಗೊತ್ತಿದೆ. ಅವರೆ ಲ್ಯಾಂಡು ರಿಫಾರಂಸ್ ಬಗ್ಗೆ ನಾನು ಒಂದು ಡೆಲಿಗೇಷನ್‌ನಲ್ಲಿ ಬಂದಿದ್ದಾಗ ಮಾನ್ಯ ಸಚಿವರಾದ ಶ್ರೀ ಕೌಜಲಗಿಯವರು ಹೆಣ್ಣು ಮಕ್ಕಳ ಬಗ್ಗೆ ಬಹಳ ಅನುಕಂಪತೋರಿ ಕಣ್ಣೀರು ಕೂಡ ಬಿಡುವ ಪರಿಸ್ಥಿತಿಯಲ್ಲಿ ನಾವು ಹೇಳುವುದನ್ನೆಲ್ಲಾ ಒಪ್ಪಿಕೊಂಡರು. ಆದರೆ ಚೀಫ್ ಮಿನಿಸ್ಟರವರು ಹೇಳಿದರು ಎಂದು. ಅವರಿಗೇಕೆ ಇವರು ಹೆದರಬೇಕು ಎಂದು ನಾನು ಕೇಳುತ್ತೇನೆ. ಏನೋ ದೇವರು ತಮಗೆ ಅಧಿಕಾರ ಕೊಟ್ಟಿರುವಾಗ ತಮ್ಮ ಕಾಲದಲ್ಲಿ ಕೈಲಾದಮಟ್ಟಿಗೂ ಸ್ವಲ್ಪ ಜನಕ್ಕೆ ಒಳ್ಳೆಯದಾಗುವಂತೆ ಮಾಡಿ. ನಿಮ್ಮ ಕೈಯಲ್ಲಿ ಶಕ್ತಿ ಇರುವಾಗ ಮಾಡದೆ ಸುಮ್ಮನೆ ಮುಖ್ಯ ಮಂತ್ರಿಗಳಿಗಾಗಿ ಏಕೆ ಅಂಜಬೇಕು. ಹೋದರೆ ಮಂತ್ರಿಸ್ಥಾನ ಹೋಗಬಹುದು, ಹೋದರೆ ಕತ್ತೆ ಬಾಲ ಹೋಯಿತು. ಇಂತಹ ಹೆಣ್ಣು ಮಕ್ಕಳಿಗಾಗಿ ನಾಳೆ ತಾವೇ ಒಂದು ಆರ್ಡಿನೇಜು ಮಾಡಿ ಇದರಲ್ಲಿ ರಿಹ್ಯಾಬಿಲಿಟೇಟ್ ಮಾಡುವ ಪರಿಸ್ಥಿತಿ

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

ಬರಬಹುದು. ಹೆಣ್ಣು ಮಕ್ಕಳ ಬಾಳು ಬಹಳ ಕಷ್ಟದ ಬಾಳು. ಅವರು ಸೆರಗಿನಲ್ಲಿ ಬೆಂಕಿ ಕಟ್ಟಿಕೊಂಡು ಬದುಕಬೇಕು, ಯಾವ ತಂದೆ ತಾಯಿಯೂ ಮಗಳಿಗೆ ಗಂಡ ಸಾಯಲಿ ಎಂದು ಮದುವೆ ಮಾಡುವುದಿಲ್ಲ. ಅವಳೂ ಏನೋ ಮದುವೆಯಾಗಿ ಗಂಡನೊಂದಿಗೆ ಬಾಳುತ್ತಾಳೆಂದು ಇರುತ್ತಾರೆ. ಆದರೆ ದುರದೃಷ್ಟದಿಂದ ಅವರ ಗಂಡಂದಿರು ಮರಣಕ್ಕೆ ತುತ್ತಾದರೆ ಅವರಿಗೇನಾದರೂ ಮಾಡಬೇಡವೇ. ಮಾನ್ಯ ಸದಸ್ಯರಾಗಿದ್ದ ಶ್ರೀಮಾನ್ ಚಂದ್ರಶೇಖರ ಪಾಟೀಲ್‌ರವರೂ ಕೂಡ ಒಳ್ಳೆಯ ದೇಶಭಕ್ತರು. ಕಾರ್ಯನಿಪುಣರು ಆದರೆ ದಾರಿಯಲ್ಲೇ ಅವರು ಸತ್ತುಹೋದರು. ಇದೇ ರೀತಿ ಹಿಂದೆ ಪ್ರಧಾನ ಮಂತ್ರಿಗಳಾಗಿದ್ದ ಶ್ರೀಲಾಲ್‌ಬಹದ್ದೂರು ಶಾಸ್ತ್ರಿಯವರೂ ರಷ್ಯಕ್ಕೆ ಹೋದರು, ಆದರೆ ಅಲ್ಲಿಂದ ಬರುವಾಗ ಸತ್ತುಬಂದರು. ಇದೇ ರೀತಿ ಮಾನ್ಯ ಹೆಚ್. ಸಿ. ದಾಸಪ್ಪನವರೂ ರೈಲ್ವೆ ಮಂತ್ರಿಗಳಾಗಿ ಕೇಂದ್ರಕ್ಕೆ ಹೋದರು, ಆದರೆ ಬರುವಾಗ ಸತ್ತು ಬಂದರು. ಹಾಗೆ ಇಂದಲ್ಲ ನಾಳೆ ನೀವುಗಳು ಕೂಡ ಒಂದು ರೀತಿಯಾಗಿ ಅವರ ದಾರಿಯಂತೆಯೇ ಆಗಬಹುದು. ಆದರೆ ನೀವಿರುವ ಕಾಲದಲ್ಲಿ ನಿಮಗೆ ಶಕ್ತಿ ಇರುವಷ್ಟು ಇದರ ವಿಚಾರದಲ್ಲಿ ನಿಗಾ ಕೊಡಬೇಕು ಎಂದು ಮಾತ್ರ ಇಲ್ಲಿ ಹೇಳುತ್ತೇನೆ. ಇನ್ನು ನಮ್ಮ ಚೀಫ್ ಮಿನಿಸ್ಟರ್‌ರವರು ಸೆಕ್ಯುಲರು ಸ್ಟೇಟು ಎಂದು ಬಹಳ ದೊಡ್ಡದಾಗಿ ಹೇಳುತ್ತಾರೆ. ನಮ್ಮ ರೆವಿನ್ಯೂ ಮಂತ್ರಿಗಳು ಒಂದು ಸಾರಿ ಬೆಳಗಾಂಗೆ ಹೋಗಿದ್ದರು. ನಮ್ಮ ತಾಲ್ಲೂಕಿನಲ್ಲಿ ಒಬ್ಬರು ಮುಸಲ್ಮಾನರವರು ಸಬ್ ರಿಜಿಸ್ಟ್ರಾರ್ ಆಗಿದ್ದರು. ಇವರು ಇಲ್ಲಿಗೆ ಬಂದು ಒಂದು ವರ್ಷ ಹತ್ತು ತಿಂಗಳು ಮಾತ್ರ ಆಗಿತ್ತು. ಇವರನ್ನು ವರ್ಗ ಮಾಡಬೇಕಾದರೆ ನಾವು ಇವರನ್ನು ವರ್ಷದ ಮಧ್ಯಭಾಗದಲ್ಲಿ ಮಾಡಿದರೆ ಇವರ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಕಷ್ಟವಾಗುತ್ತದೆ ವರ್ಷವಾದ ಮೇಲೆ ಬೇಕಾದರೆ ಟ್ರಾನ್ಸ್‌ಫರು ಮಾಡಬಹುದು ಎಂದು ಹೇಳಿದ್ದೆವು. ಆದರೆ ನಮ್ಮ ರೆವೆನ್ಯೂ ಮಂತ್ರಿಗಳು ಬೆಳಗಾಂಗೆ ಹೋಗಿದ್ದಾಗಲೇ ಇವರನ್ನು ಮುಖ್ಯ ಮಂತ್ರಿಗಳು ಟ್ರಾನ್ಸ್‌ಫರು ಮಾಡಿಬಿಟ್ಟರು. ನಾನು ಇದರ ಬಗ್ಗೆ ಮಾನ್ಯ ರೆವೆನ್ಯೂ ಮಂತ್ರಿಗಳ ಬಗ್ಗೆ ಕೇಳಿದಾಗ ಅವರು ನಾನು ಇಲ್ಲದಾಗ ಮುಖ್ಯ ಮಂತ್ರಿಗಳೇ ಮಾಡಿದ್ದಾರೆ. ನಾನೇನು ಮಾಡಲಿ. ನಿಮಗೆ ಮಾತು ಕೊಟ್ಟಿದ್ದೆ. ಈಗ ಹೀಗಾಗಿದೆ ಎಂದು ಬಹಳ ಪಶ್ಚಾತ್ತಾಪಪಟ್ಟರು. ಮುಖ್ಯ ಮಂತ್ರಿಗಳು ಸಬ್ ರಿಜಿಸ್ಟ್ರಾರವರನ್ನು ವರ್ಗ ಮಾಡಿ ತಮಗೆ ಯಾರು ಸಹಾಯ ಮಾಡುತ್ತಾರೆಂದು ಇದ್ದರೋ ಅಂತಹವರನ್ನು ಮತ್ತು ಅದೇ ಊರಿನವರನ್ನು ಅಲ್ಲಿಗೇ ವರ್ಗಮಾಡಿದ್ದಾರೆ. ಹೀಗೆ ರೆವೆನ್ಯೂ ಖಾತೆ ಬಗ್ಗೆ ಇವರೇ ಕೆಲಸ ಮಾಡುವುದಾದರೆ ಇವರೇ ಅದೇ ಖಾತೆಯನ್ನು ವಹಿಸಿಕೊಂಡು ಸರಕಾರಕ್ಕೆ ಸ್ವಲ್ಪ ದುಡ್ಡನ್ನಾದರೂ ಉಳಿಸಿ ಎಂದು ಸಲಹೆ ಮಾಡುತ್ತೇನೆ. ಇನ್ನೊಂದು ವಿಚಾರ ಹೇಳುತ್ತೇನೆ. ನಮ್ಮ ಊರಿನಲ್ಲಿರುವ ಮುನಿಸಿಪಲ್ ಹೈಸ್ಕೂಲ್‌ನಲ್ಲಿ ಒಬ್ಬ ಕುರುಬರ ಹುಡುಗ ಟೀಚರಾಗಿ ಕೆಲಸ ಮಾಡುತ್ತಿದ್ದ. ಇವರು ಲೋಕಲ್ ಕ್ಯಾಂಡಿಡೇಟ್ ಆಗಿ ಇಲ್ಲ ಕೆಲಸ ಮಾಡಿಕೊಂಡು ಬರುತ್ತಿದ್ದರು. ಇವರ ಮೇಲೆ ಯಾರೋ ದೂರು ಕೊಟ್ಟರು ಎಂದು ಮುಖ್ಯ ಮಂತ್ರಿಗಳು ಇವರನ್ನು ಸಾಲಗ್ರಾಮಕ್ಕೆ ವರ್ಗ ಮಾಡಿಬಿಟ್ಟರು. ಹೀಗೆ ಚೀಫ್ ಮಿನಿಸ್ಟರಾದವರು ಒಬ್ಬ ಸಣ್ಣ ಉದ್ಯೋಗಿಯ ಟ್ರಾನ್ಸ್‌ಫರು ಮಾಡುವಂತಾದರೆ ಮಾನ್ಯ ಶಂಕರೇಗೌಡರು ಏಕೆ ವಿದ್ಯಾ ಸಚಿವರಾಗಿರಬೇಕು? ಅವರ ಖಾತೆಯನ್ನು ತಪ್ಪಿಸಿ ಅದನ್ನೂ ಇವರೇ ವಹಿಸಿಕೊಳ್ಳಬಹುದಲ್ಲ. ಇವರ ಸೆಕ್ಯುಲರಿಜಂ ಕಾಲದಲ್ಲಿ ಮುಸಲ್ಮಾನರೂ, ಕುರುಬರೂ ಮತ್ತು ಇತರರು ಜೀವಿಸಲೇಬಾರದೆ? ಒಬ್ಬ ಸಬ್ ರಿಜಿಸ್ಟ್ರಾರ್ ಹಾಗೂ ಒಬ್ಬ ಟೀಚರನ್ನು ಮುಖ್ಯ ಮಂತ್ರಿಗಳು ಟ್ರಾನ್ಸ್‌ಫರ್ ಮಾಡುತ್ತಾರೆ ಎಂದು ಹೇಳಿದರೆ ಇದಕ್ಕಿಂತ ಬೇರೆ ನಾಚಿಕೆಗೇಡಿನ ಕೆಲಸ ಬೇರೊಂದಿಲ್ಲ. ಮಾನ್ಯ ಶಂಕರಗೌಡರ ವಿದ್ಯಾ ಖಾತೆಯನ್ನೂ ಇವರೇ ಬೇಕಾದರೆ ವಹಿಸಿಕೊಂಡು ಸ್ವಲ್ಪ ಸರಕಾರಕ್ಕೆ ದುಡ್ಡನ್ನು ಉಳಿತಾಯ ಮಾಡಲು ಸಹಾಯ ಮಾಡಿ ಎಂದು ಮುಖ್ಯಮಂತ್ರಿಗಳಿಗೆ ಹೇಳುತ್ತೇನೆ. ನನಗೆ ಹೇಳಲು ಇನ್ನೂ ಬೇಕಾದಷ್ಟು ವಿಷಯಗಳಿದ್ದವು. ಆದರೆ ಈಗ ನನಗೆ ಟೈಂ ಇಲ್ಲ ಎಂದು ಮಾನ್ಯ ಅಧ್ಯಕ್ಷರು ಹೇಳಿದ್ದಾರೆ. ಅದರಲ್ಲೂ ನಾನು ಮಾನ್ಯ ಅಧ್ಯಕ್ಷರಲ್ಲಿ ಕೇಳಿಕೊಳ್ಳುವುದು ಸ್ವಲ್ಪ ಹೆಣ್ಣು ಮಕ್ಕಳ ಬಗ್ಗೆ ಸ್ವಲ್ಪ ಉದಾರತೆಯಿಂದ ವರ್ತಿಸಬೇಕು. ತಮ್ಮ ತಲೆಯ ಮೇಲೆಯೆ ತಕ್ಕಡಿ ಇದೆ. ಇದನ್ನು ತಾವು ನೋಡಿಕೊಂಡು ನಮ್ಮಂತಹ ಹೆಣ್ಣು ಮಕ್ಕಳ ಬಗ್ಗೆ ಸ್ವಲ್ಪ ಉದಾರವಾಗಿರಬೇಕೆಂದು ತಮ್ಮಲ್ಲಿ ಮನವಿಮಾಡಿಕೊಳುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ಮತ್ತು ತಾವು ಯಾವ ರೀತಿ ಎಲೆಕ್ಷನ್‌ನಲ್ಲಿ ಚುನಾವಣೆಯಾಗಿ ಬಂದಿದ್ದಾರೋ ಅದೇ ರೀತಿ ನನ್ನ ಕ್ಷೇತ್ರದಿಂದಲೂ ನಾನೂ ಚುನಾವಣೆಯಾಗಿ ಇಲ್ಲಿಗೆ ಬಂದಿದ್ದೇನೆ. ನಮ್ಮ ಅಧ್ಯಕ್ಷರು ಕೊನೆಯಲ್ಲಿ ಇಷ್ಟು ಹೊತ್ತು ಕಾದುದಕ್ಕೆ ಮತ್ತು ನನಗೆ ಹತ್ತು ನಿಮಿಷಗಳ ಅವಕಾಶ ಕೊಟ್ಟುದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Mr. SPEAKER.—The hon. lady member made some observation. I can tell her that I never do it.

† Sri D. B. KALMANKAR (Aland).—Mr. Speaker Sir, while opposing the Appropriation Bill, I want to speak on some points. As the time at my disposal is short, I will state them briefly.

I went through the Audit Report of 1970 and on page 3 of this report it is said:

> "Of the 17 concerns, whose accounts for their accounting years ending in 1968-69 were received in audit, two companies were in the stage of construction. 8 companies with a total paid up-capital of Rs. 364.46 lakhs made a profit of Rs. 27.61 lakhs (previous year Rs. 26.09 lakhs) while 7 other companies with a total paid-up capital of Rs 2,240·96 lakhs sustained a loss of Rs. 553.29 lakhs."

This is briefly the case of our Government Companies. It is very well known that affairs in the Bhadravati Iron and Steel Works and Mysore State Electricity Board are not up to the mark. I will speak on that when the Amending Bill of the Electricity Amendment Bill is taken up today afternoon.

I will show how the administration is not just. How every Minister whenever he goes and takes up a particular portfolio wants to do some good to his own constituency or to his own region, can be illustrated when we take the case of class II officers of the Educational Department of the Hyderabad Karnatak area. Some of the Class II Officers of the Education Department had put in 8 to 9 years of service as Head Masters in various places. But, all of a sudden when Sri S. R. Kanti became the Education Minister, the whole law was changed and they were reverted. There were many writ petitions in the High Court and the High Court gave a decision in their favour, Inter-State Seniority List was to be prepared.

The other day, I heard the Hon. Law Minister saying that they had nothing to do with the final Seniority list of the Department. It is the Central Government that does it. But when the file relating to the Teachers from the old Mysore area went very recently to the Hon. Education Minister, it was found that he had put a dissenting note and stated that this should not be done. The High Court has given time and directed that the final list must be prepared according to the instructions incorporated in the judgment. Again time was extended and now even though the opinion is in favour of those Teachers and even though the High Court has given judgment in the case, this Government has the audacity to go against that judgment and work according to its own whims and fancies and according to the whim and fancy of the Minister concerned. Since this is the attitude of the Government, how can it be stated that this Government is acting according to the true spirit of law? That is why, there is unrest among the Teachers and

(SRI D. B. KALMANKAR)

the personnel of the various Departments. Here is the case of poor Teachers. 84 Teachers are involved in this.

12-00 Noon

Now I would like to touch upon the affairs of the M.S.K. Mills. After the Mills were opened, the Management has been giving a deaf ear to the workers' legitimate demands. The strength of the workers which was 2,800, has been reduced to 1,200. Even then, the workers are giving the same production which 2,800 workers were giving. The quality has improved. Everything is all right with their work. Even the Management has admitted that it has made profits. In spite of all these favourable results, what has happened there? Even the just demands of the workers are not fulfilled. They are being victimised. These workers, without detriment to their work, have been on hunger strike since 31st December 1969. When the Hon. Minister for Industries came to Gulbarga, the workers were given an appointment to meet him; but before the appointed time for interview, the Hon. Minister disappeared from the place. The workers are still labouring under many difficulties. If that is the state of affairs in an industry under Government management, the plight of labourers under private managements can be imagined. Where are the Labour Laws working? The workers are made to work on Sundays and do work overtime on other days for one-fourth of the working hours. If Government fails to implement labour laws and follow anti-workers' policy in their own industries, how can they enforce those laws on other private managements and be in a position to dictate to them? Here the fate of 1,200 workers is involved. In all sincerity and fairplay, the demands of the MSK Mills workers should be considered very sympathetically. Their demands are reasonable and deserve to be fulfilled. Let there be no delay in granting them lest it may affect production. If production is affected, it will not be a loss to the particular individual or this Government. It should be considered as a national loss and waste.

With these observations, I conclude.

ಶ್ರೀ ರಾಮಕೃಷ್ಣ ಹೆಗಡೆ:—ಮಾನ್ಯ ಅಧ್ಯಕ್ಷರೇ, ಈ ಸಲದ ಹಣಕಾಸಿನ ವಿನಿಯೋಗದ ಮಸೂದೆಯ ಮೇಲೆ ಆದಂಥ ಚರ್ಚೆಯಲ್ಲಿ ಹಣಕಾಸಿನ ವಿಷಯಕ್ಕಿಂತಲೂ ಹೆಚ್ಚಾಗಿ ರಾಜಕೀಯ ವಿಷಯವೇ ಪ್ರಸ್ತಾಪವಾಗಿದೆ. ಮಾಂತ್ರಿಕ್ಕಿಂತ ಉಗುಳೇ ಹೆಚ್ಚಾಗಿ ಕಂಡುಬಂತು ಎಂದು ಹೇಳಬಹುದು. ಹಣಕಾಸಿನ ವಿನಿಯೋಗದ ಮಸೂದೆ ಸಾಮಾನ್ಯವಾಗಿ ರಾಜ್ಯದ ಹಣಕಾಸಿನ ಪರಿಸ್ಥಿತಿ ಮೇಲೆ ಬಹಳ ಮಿತವಾದ ಚರ್ಚೆಗೆ ಅವಕಾಶ ಮಾಡಿಕೊಡುತ್ತದೆ. ಆದರೆ ಈ ಮಸೂದೆಯ ಚರ್ಚೆಯಲ್ಲಿ ಭಾಗವಹಿಸಿದಂತಹ ಅನೇಕ ಮಾನ್ಯ ಸದಸ್ಯರು ಅದರ ವಿಚಾರ ಒಂದು ಬಿಟ್ಟು ಇನ್ನುಳಿದ ಅನೇಕ ವಿಷಯಗಳ ಬಗ್ಗೆ ಪ್ರಸ್ತಾಪಮಾಡಿದ್ದಾರೆ. ವಿರೋಧಪಕ್ಷದ ನಾಯಕರಾದ ಶ್ರೀಮಾನ್ ಶಿವಪ್ಪನವರು ಅಧಿವೇಶನದ ಆರಂಭದಲ್ಲಿ ಬಹಳ ಸೌಮ್ಯ ರೀತಿಯಿಂದ ಮಾತನಾಡುತ್ತಿದ್ದರು ಆದರೆ ಬಜೆಟಿನ ಕೊನೆಯ ದಿವಸ ಅವರ ಸೌಮ್ಯ ರೂಪ ಉಗ್ರವಾಗಿ ಕಂಡುಬಂತು.

ಶ್ರೀ ಎಸ್. ಶಿವಪ್ಪ.—ನಿಮ್ಮ ರೂಪ ಕೂಡ ಬದಲಾವಣೆಯಾಗಿದೆ. ಗಡ್ಡ ಬಿಟ್ಟಿದ್ದೀರಿ.

ಶ್ರೀ ರಾಮಕೃಷ್ಣ ಹೆಗಡೆ.—ಆರೀತಿಯ ಉಗ್ರ ರೂಪಕ್ಕೆ ಕಾರಣ ಏನು ಎಂಬುದು ಗೊತ್ತಿಲ್ಲ. ಅವರು ನನ್ನ ಗಡ್ಡದ ಬಗ್ಗೆ ಆಸ್ತೆ ತೋರಿಸಿದ್ದಾರೆ. ಒಂದು ಮಾತನ್ನು ಮಾತ್ರ ಹೇಳಬಲ್ಲೆ, Nobody is likely to come in contact with my beard.

Mr. SPEAKER.—Is it symbolic ?

ಶ್ರೀ ರಾಮಕೃಷ್ಣ ಹೆಗಡೆ.—ಆದ್ದರಿಂದ ಆ ಬಗ್ಗೆ ಅವರಿಗೆ ಅಷ್ಟೊಂದು ಇಂಟರೆಸ್ಟ್ ಅಗತ್ಯ ಇಲ್ಲ. ಶ್ರೀಮಾನ್ ಶಿವಪ್ಪನವರು ಮಾತನಾಡುವ ಶ್ಟೈಲ ಒಂದು ತರಹ ಇರುತ್ತದೆ. ಅವರು ಮಾತನಾಡುವಾಗ ಲಂಗುಲಗಾಮು ಇಲ್ಲದ ಕುದುರೆ ಬ್ರೇಕ್ ಇಲ್ಲದ ಗಾಡಿ ಎಂಬ ಪದಗಳನ್ನು ಉಪಯೋಗ ಮಾಡಿದರು. ಯಾವ ಕುದುರೆ, ಯಾವಬ್ರೇಕ್, ಯಾವಗಾಡಿ ಎಂಬುದು ನನಗೆ ಅರ್ಥ ವಾಗಲಿಲ್ಲ. ಇದು ಪ್ರಜಾಪ್ರಭುತ್ವದ ಆಧಾರದ ಮೇಲೆ ನಡೆಯುತ್ತಿರುವ ಒಂದು ಸರ್ಕಾರವಾಗಿದೆ. ಪ್ರಜಾಪ್ರಭುತ್ವದ ಪದ್ಧತಿಯ ಮೇಲೆ ಸರ್ಕಾರ ನಡೆಸಲು ಎಷ್ಟು ಲಂಗುಲಗಾಮು ಇರಬೇಕೋ ಅಷ್ಟು ಇದೆ. ಈ ಬಗ್ಗೆ ಹೇಳುವುದಾದರೆ ಹೈಕೋರ್ಟು ಇದೆ, ಈ ಸಭೆ ಇದೆ, ಪಾರ್ಲಿಮೆಂಟ್ ಇದೆ, ಸಂಪೂರ್ಣವಾಗಿ ಸ್ವತಂತ್ರವುಳ್ಳ ಪತ್ರಿಕೆಗಳು ಇವೆ. ಪಕ್ಷ ಇದೆ, ದ್ವಿಪಕ್ಷ ಇದೆ ಮತ್ತು ಸರ್ಕಾರ ದವರು ಕೈಕೊಳ್ಳುವ ಕೆಲಸಗಳಲ್ಲಿ ಎಲ್ಲಿ ತಪ್ಪಿದೆ ಎಂಬುದನ್ನು ಕಣ್ಣಲ್ಲಿ ಎಣ್ಣೆ ಹಾಕಿಕೊಂಡು ಬಹಳ ಸೂಕ್ಷ್ಮವಾಗಿ ನೋಡುವ 216 ಜನ ಸದಸ್ಯರು ಇದ್ದಾರೆ. ಆದ್ದರಿಂದ ಲಂಗುಲಗಾಮು ಇಲ್ಲದ ಕುದುರೆ ಎಂದು ಹೇಳುವುದು ಸರಿಯಲ್ಲ.

ಶ್ರೀ ಎಸ್. ಶಿವಪ್ಪ.—216 ಜನ ಸದಸ್ಯರ ಕಣ್ಣಿಗೂ ಮಣ್ಣೆರಚಿ ಕೆಲಸ ಮಾಡುತ್ತಿದ್ದೀರಿ.

ಶ್ರೀ ರಾಮಕೃಷ್ಣ ಹೆಗಡೆ.—ಅಪ್ಪಿ ತಪ್ಪಿ ಕೆಲವು ಕಡೆಗಳಲ್ಲಿ ತಪ್ಪಾಗಿರಬಹುದು. ಅಂತಹ ತಪ್ಪುಗಳನ್ನು ತಿದ್ದಿಕೊಳ್ಳದೆ ಸದಾಕಾಲ ಗುಪ್ತವಾಗಿ ಇಡುವುದಕ್ಕೆ ಸಾಧ್ಯವಾಗುವುದಿಲ್ಲ. ಎಕ್ಸೆಸ್ ಗ್ರಾಂಟ್ ಬಗ್ಗೆ ಕೂಡ ಸದಸ್ಯರು ಟೀಕೆ ಮಾಡಿದರು. ನಾವು ಎಷ್ಟೇ ಪ್ರಯತ್ನ ಮಾಡಿದರೂ ಕೂಡ ಕೆಲವೊಂದು ವಿಚಾರದಲ್ಲಿ ಹೆಚ್ಚಿನ ಖರ್ಚಾಗುವುದನ್ನು ತಪ್ಪಿಸುವುದಕ್ಕೆ ಸಾಧ್ಯವಾಗುವುದಿಲ್ಲ. ನಾವು ನಿರೀಕ್ಷೆ ಮಾಡಿದಷ್ಟು ಖರ್ಚಿನಲ್ಲಿ ಕೆಲಸವಾಗದಿದ್ದರೆ ಹೆಚ್ಚಿನ ಖರ್ಚಾಗುತ್ತದೆ. ಅದನ್ನು ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ನೋಡಿ ಆ ಬಗ್ಗೆ ಕೆಲವೊಂದು ಶಿಫಾರಸ್ ಮಾಡುತ್ತಾರೆ. ನಂತರ ಸಭೆಯ ಮುಂದೆ ಅನುಮತಿಗಾಗಿ ಬರುತ್ತದೆ. ಮಾನ್ಯ ಸಭೆಗೆ ಹೇಳುವುದೇನೆಂದರೆ ಸರ್ಕಾರ ದೊಡ್ಡ ಹೊಣೆಗಾರಿಕೆಯನ್ನು ಹೊತ್ತು ಕೊಂಡು ಕೆಲಸ ಮಾಡುತ್ತಿದೆ. ಆ ರೀತಿ ಮಾಡ ತಕ್ಕಂಥ ಕೆಲಸಗಳಲ್ಲಿ ಅತ್ಯಂತ ಸಮರ್ಪಕತೆ ಇರುತ್ತದೆ ಎಂದು ನಾನು ವಾದ ಮಾಡುವುದಿಲ್ಲ. ಏನು ತಪ್ಪಾಗುವುದಿಲ್ಲ ಎಂದು ನಾನು ವಾದಮಾಡುವುದಿಲ್ಲ. ಮಾಡಿದಂತ ಕೆಲಸಗಳು ಸಂಪೂರ್ಣ ವಾಗಿ ನಿರ್ದೋಷದಿಂದ ಇರುತ್ತದೆಂದು ನಾನು ವಾದ ಮಾಡುವುದಿಲ್ಲ. ಅಲ್ಲಲ್ಲಿ ದೋಷವಾಗಿರ ಬಹುದು. ಅಂತಹ ದೋಷವನ್ನು ತಿದ್ದಿಕೊಳ್ಳುವ ಮನೋಭಾವ ನಮಗೆ ಇದೆ ಮತ್ತು ದೋಷವನ್ನು ತಿದ್ದಿಕೊಳ್ಳುವ ಲವಲವಿಕೆ ನಮಗೆ ಇದೆ. ಪ್ರಜಾಪ್ರಭುತ್ವಕ್ಕೆ ವಿರುದ್ಧವಾಗಿ ಕೆಲಸ ಮಾಡುತ್ತೇನೆ, ಮಾನ್ಯ ಸಭೆಗೆ ಗೊತ್ತಿಲ್ಲದಂತೆ ಕೆಲಸ ಮಾಡುತ್ತೇವೆಂದು ಹೇಳಿದರೆ ಅದು ಶುದ್ಧ ತಪ್ಪು. ಮಾನ್ಯ ಸದಸ್ಯರ ಮನಸ್ಸಿನಲ್ಲಿ ಆ ರೀತಿಯ ಶಂಕೆ ಇದ್ದರೆ ಅದು ಸರಿಯಲ್ಲವೆಂದು ಹೇಳುತ್ತೇನೆ.

ಮಾನ್ಯ ಸದಸ್ಯರು ಪ್ರಸ್ತಾಪಮಾಡಿದಂತಹ ಕೆಲವು ವಿಚಾರಗಳ ಬಗ್ಗೆ ನಾಲ್ಕು ಮಾತುಗಳನ್ನು ಹೇಳುವ ಮೊದಲು ಮೂರು ನಾಲ್ಕು ಜನ ಮಾನ್ಯ ಸದಸ್ಯರು ಕೆಲವೊಂದು ಆರೋಪಣೆಗಳನ್ನು ಏನುಮಾಡಿದ್ದಾರೆ ಅದಕ್ಕೆ ನಾನು ಮೊದಲು ಉತ್ತರ ಕೊಡುತ್ತೇನೆ. ಮೊದಲನೆಯದಾಗಿ ಶ್ರೀ ಮಾನ್ ಸ್ವೈನಕ್ ಅವರು ಮಾತನಾಡುತ್ತಾ ಬಾರ್ಡರ್ ಏರಿಯಾದಲ್ಲಿ ಮೈಸೂರು ಸರ್ಕಾರ ಅತ್ಯಂತ ದಬ್ಬಾಳಿಕೆಯನ್ನು ಮರಾಠಿಗರ ಮೇಲೆ ಮಾಡಿದ್ದಾರೆ ಎನ್ನುವ ಒಂದು ಆರೋಪವನ್ನು ಮಾಡಿದ್ದಾರೆ. ಈ ಆರೋಪ ಅತ್ಯಂತ ಅಸತ್ಯವಾದದ್ದು. ಮೈಸೂರು ಜನತೆ ಸಹಿಷ್ಣುತೆಯ ಬಗ್ಗೆ ಹೆಸರಾದಂತಹ ಜನ. ಬಾರ್ಡರ್ ಏರಿಯಾದಲ್ಲಿರತಕ್ಕ ಬೇರೆ ಬೇರೆ ಭಾಷೆಯನ್ನು ಮಾತನಾಡತಕ್ಕಂಥ ಮೈನಾರಿಟಿ ಜನಗಳಿಗೆ ಮೈಸೂರು ಸರ್ಕಾರ ಎಲ್ಲಾ ತರಹ ರಕ್ಷಣೆಯನ್ನು ಕೊಡುತ್ತಾ ಬಂದಿದ್ದಾರೆ. ಇದನ್ನು ನಾನು ಹೇಳುವ ಅಗತ್ಯವಿಲ್ಲ. ಕೇಂದ್ರ ಸರಕಾರದ ಭಾಷಾ ಅಲ್ಪ ಸಂಖ್ಯಾತರ ಕಮೀಷ ನ್ನವರು ಕಳೆದ ಹಲವಾರು ವರ್ಷಗಳು ಕೊಟ್ಟಿರತಕ್ಕ ರಿಪೋರ್ಟೇ ಇದಕ್ಕೆ ಸಾಕ್ಷಿ. ಇದನ್ನು ನಾನು ಹೇಳಬೇಕಾದ್ದಿಲ್ಲ. ಮಹಾರಾಷ್ಟ್ರದಲ್ಲಿ ಕನ್ನಡ ಸ್ಕೂಲುಗಳಲ್ಲಿ 200 ಹುಡುಗರಿಗೆ ಒಬ್ಬರು ಶಿಕ್ಷಕರಿದ್ದಾರೆ. ಮೈಸೂರು ರಾಜ್ಯದಲ್ಲಿ ನಡೆಯತಕ್ಕ ಮರಾಠಿ ಸ್ಕೂಲುಗಳಲ್ಲಿ 40 ಹುಡುಗರಿಗೆ ಒಬ್ಬರು ಶಿಕ್ಷಕರಿದ್ದಾರೆ. ಬಾರ್ಡರ್ ಏರಿಯಾದ ಪ್ರತಿಯೊಂದು ವಿಭಾಗದಲ್ಲಿಯೂ ರಸ್ತೆಗಳು, ಸೇತುವೆಗಳು, ನೀರಾವರಿ, ಶಿಕ್ಷಣ ವಗೈರೆ, ಆರೋಗ್ಯದ ಅನುಕೂಲತೆ ಇತ್ಯಾದಿ ಪ್ರತಿಯೊಂದು

(ಶ್ರೀ ರಾಮಕೃಷ್ಣ ಹೆಗಡೆ)

ವಿಚಾರದಲ್ಲಿಯೂ ನಮ್ಮ ಜನತೆಯನ್ನು ಎಷ್ಟು ಪ್ರೀತಿ ವಿಶ್ವಾಸದಿಂದ ಸರ್ಕಾರದವರು ನೋಡುತ್ತಿರೆಯೋ ಅಷ್ಟೇ ಪ್ರೀತಿ ವಿಶ್ವಾಸದಿಂದ ಸರ್ಕಾರ ಅಲ್ಪಸಂಖ್ಯಾತರನ್ನು ನೋಡುತ್ತಿದೆ. ಅವರು ಒಂದು ಮಾತನ್ನು ಹೇಳಿದರು, ಏನೆಂದರೆ ಕಳೆದ 2–3 ತಿಂಗಳ ಹಿಂದೆ ಬೆಳಗಾವಿಯನಲ್ಲಿ ಒಂದು ರಾಜಕೀಯ ಪರಿಷತ್ತು ಆಯಿತು. ಅದಕ್ಕೆ ಸಾವಿರಾರು ಸಂಖ್ಯೆಯಲ್ಲಿ ಪೋಲೀಸಿನವರನ್ನು ಕರೆಸಿದ್ದರು ಮತ್ತು ಅಲ್ಲಿ ಕೆಲವರಿಗೆ ಲಾಠಿ ಚಾರ್ಜ್ ಮಾಡಿದರು ಎಂದು. ನಾನು ಆ ಸಂದರ್ಭದಲ್ಲಿ ಅಲ್ಲಿ ಇದ್ದೆ. ರಾಜಕೀಯ ಪರಿಷತ್ತಿಗೆ ಹೋದಂತಹ ಕೆಲವು ಡೆಲಿಗೇಟ್‌ಗಳು ಒಂದು ಓಣಿಗೆ ಹೋದರು. ಆಗ ಕೆಲವು ಪುಂಡರು ಮರಾಠಿಗರ ಹೆಸರಿನಲ್ಲಿ ಹಿಂದು ಮುಂದು ನೋಡದೆ ಕಾರಿನ ಮೇಲೆ ಕಲ್ಲು ಮಣ್ಣನ್ನು ತೂರಿದರು. ಕಲ್ಲಿನ ಸುರಿಮಳೆಯನ್ನೇ ಮಾಡಿದರು. ಕೂಗಾಡಿದರು. ಇದರಿಂದ ಅನೇಕರಿಗೆ ಗಾಯ ಆಗಿದೆ. ಮತ್ತು ಪುಂಡಾಟಿಕೆ ನಡೆದಿದೆ. ಪುಂಡಾಟಿಕೆ ನಡೆಸತಕ್ಕವರು ಮರಾಠಿಗರು ಮತ್ತು ಕನ್ನಡಿಗರು ಎಂದು ಭೇದಭಾವ ಮಾಡುವುದಿಲ್ಲ. ಮಧ್ಯರಾತ್ರಿಯಲ್ಲಿ ಮೆಡಿಕಲ್ ಕಾಲೇಜಿನ ಮೇಲೆ ಧಾಳಿ ನಡೆಸಿದರು. ಕಿಟಕಿ ಗಾಜನ್ನು ನುಚ್ಚು ನೂರು ಮಾಡಿದರು. ಆ ಸಂದರ್ಭದಲ್ಲಿ ಪೋಲೀಸಿನವರು ಸೂಕ್ತ ಕ್ರಮ ತೆಗೆದು ಕೊಳ್ಳದಿದ್ದರೆ ಜನತೆಗೆ ಸರ್ಕಾರದ ಮೇಲೆ ಇರತಕ್ಕಂಥ ವಿಶ್ವಾಸ ಕದಡಿ ಹೋಗುತ್ತದೆ. ನಮ್ಮ ಕರ್ತವ್ಯವನ್ನು ನಾವು ಮಾಡಲಿಲ್ಲ ಎಂದಾಗುತ್ತದೆ. ಶ್ರೀಮಾನ್ ಸ್ಯಾನಕ್ ಅವರು ಮುಂಬೈನಲ್ಲಿ ನಡೆದಂತಹ ಶಿವಸೇನೆಯ ಪುಂಡಾಟಿಕೆ ವಿಷಯದಲ್ಲಿ ಒಂದು ಮಾತನ್ನು ಹೇಳಲಿಲ್ಲ. ಅಲ್ಲಿ ಶಿವಸೇನೆಯವರು ಗಲಾಟೆ ಮಾಡಿದಂತಹ ಸಂದರ್ಭದಲ್ಲಿ ಕನ್ನಡಿಗರ ಹೋಟೇಲುಗಳು, ಮನೆ ಮಠ ಆಸ್ತಿಪಾಸ್ತಿಗಳನ್ನು ಸುಟ್ಟು ಸೂರೆ ಮಾಡಿದರು. ಆ ವಿಚಾರದಲ್ಲಿ ಶ್ರೀಮಾನ್ ಸ್ಯಾನಕ್ ಅವರ ಬಾಯಲ್ಲಿ ಒಂದು ಮಾತು ಬರಲಿಲ್ಲ. ಮೈಸೂರು ರಾಜ್ಯದಲ್ಲಿ ಯಾವುದೇ ಮೈನಾರಿಟಿ, ಲಿಂಗ್ವಿಸ್ಟಿಕ್ ಮೈನಾರಿಟಿ ಇರಲಿ ಅವರಿಗೆ ನಾವು ಸಂಪೂರ್ಣ ರಕ್ಷಣೆಯನ್ನು ಕೊಡುತ್ತಾ ಬಂದಿದ್ದೇವೆ. ಮುಂದೆಯೂ ಅವರಿಗೆ ರಕ್ಷಣೆಯನ್ನು ಕೊಡುತ್ತೇವೆ ಎನ್ನುವ ಮಾತನ್ನು ನಾನು ಹೇಳ ಬಯಸುತ್ತೇನೆ.

ಎರಡನೆಯದಾಗಿ ಮಾನ್ಯ ಸದಸ್ಯರಾದ ಶ್ರೀಮಾನ್ ಸಿದ್ಧವೀರಪ್ಪನವರು ಶ್ರೀಮಾನ್ ವೀರಪ್ಪಗೌಡರ ವಿಚಾರದಲ್ಲಿ ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ, ಅದು ಒಂದು ಕೇಸಿನ ವಿಷಯ. ಶ್ರೀಮಾನ್ ವೀರಪ್ಪಗೌಡರ ಮೇಲೆ ಕೇಸು ರಿಜಿಸ್ಟರ್ ಆದದ್ದು ಅವರು ಪಕ್ಷಾಂತರವಾಗುವುದಕ್ಕೆ ಮೊದಲು. ಶ್ರೀಮಾನ್ ಹುಚ್ಚಮಾಸ್ತಿಗೌಡರು ಮತ್ತು ಶಿವಪ್ಪನವರು ನೆಲಮಂಗಲದಲ್ಲಿ ನಡೆದ ಘಟನೆಯ ಬಗ್ಗೆ ಪ್ರಸ್ತಾಪ ಮಾಡುತ್ತಾ ರಾಜಕೀಯ ಮೋಟೀವ್ ಇತ್ತು ಸೇಡನ್ನು ತೀರಿಸಿಕೊಳ್ಳಬೇಕೆಂದು ಆ ರೀತಿ ಅಲ್ಲಿ ಮಾಡಿದರು ಎಂದು ಹೇಳಿದರು. ಆ ಬಗ್ಗೆ ಕೇಸು ನಡೆಯುತ್ತಿದೆ. ಆದ್ದರಿಂದ ಆ ಬಗ್ಗೆ ನಾನು ಏನು ಹೇಳುವುದಕ್ಕೆ ಬಯಸುವುದಿಲ್ಲ. ಒಬ್ಬ ಶ್ರೀಮಂತ ರೈತ 5–6 ಸಾವಿರ ರೂಪಾಯಿ ಕಂದಾಯದ ಬಾಕಿ ಕೊಡಬೇಕಾಗಿದ್ದರೆ ತಹಸೀಲ್ದಾರರು ಹೋಗುತ್ತಾರೆ, ಮತ್ತು ಇತರ ಆಫೀಸರು ಹೋಗುತ್ತಾರೆ. ಕಂದಾಯದ ಬಾಕಿ ಹಣವನ್ನು ಕೊಡಬೇಕು ಎಂದು ಕೇಳುತ್ತಾರೆ. ಆದರೆ ಅವರು ಆ ಹಣವನ್ನು ಕೊಡುವುದಕ್ಕೆ ಬದಲು ಅಕ್ರಮ ಮಾಡಿ, ಆಫೀಸರನ್ನು ಹೊಡೆದು, ಅವರಿಗೆ ಹಿಂಸೆ ಮಾಡಿದರೆ ಅವರ ಬಗ್ಗೆ ಕಾಯಿದೆ ಪ್ರಕಾರ ಕ್ರಮ ಕೈಗೊಳ್ಳಕೂಡದೆಂದು ಹೇಳಿದರೆ ಅದು ಯಾವ ಪ್ರಜಾಪ್ರಭುತ್ವ ರೀತಿಯೋ ನನಗೆ ಗೊತ್ತಾಗುವುದಿಲ್ಲ. ಅವರು ಆಕಸ್ಮಿಕವಾಗಿ ಶ್ರೀಮಾನ್ ಕಲೂರು ಹನುಮಂತಪ್ಪನವರಿಗೆ ವಿರೋಧವಾಗಿ ಚುನಾವಣೆಯಲ್ಲಿ ಸ್ಪರ್ಧೆ ಮಾಡಿದ್ದರು. ಕಾಂಗ್ರೆಸ್ ಅಭ್ಯರ್ಥಿಯ ವಿರುದ್ಧ ಸ್ಪರ್ಧಿಸಿದ್ದರು ಎಂದು ಅವರ ಮೇಲೆ ಕ್ರಮ ತೆಗೆದುಕೊಂಡು ಸೇಡು ತೀರಿಸಿಕೊಂಡಿದ್ದಾರೆ ಎಂದು ಹೇಳಿದರೆ ಹೇಗೆ? ಅದರಲ್ಲಿ ಯಾವ ಸೇಡಿನ ಮನೋಭಾವನೆಯೂ ಇಲ್ಲ ಎಂದು ನಾನು ಮಾನ್ಯ ಸದಸ್ಯರಿಗೆ ಹೇಳ ಬಯಸುತ್ತೇನೆ ಮತ್ತು ಶ್ರೀಮಾನ್ ಶಿವಪ್ಪನವರು ಮತ್ತು ಶ್ರೀಮಾನ್ ಹುಚ್ಚಮಾಸ್ತಿಗೌಡರು ಏನು ಆರೋಪ ಮಾಡಿದರು ಅದು ನಿಜವಾಗಿಯೂ ಅತ್ಯಂತ ಅಸಾಧುವಾದುದು.

ಶ್ರೀಮಾನ್ ರಾಜಯ್ಯಶೆಟ್ಟರು ಮಂತ್ರಿಗಳನ್ನು ವರ್ಗೀಕರಣ ಮಾಡಿ ಅಪ್ರಾಮಾಣಿಕ ಮಂತ್ರಿಗಳು, ವಿರಾಮ ಪ್ರಿಯ ಮಂತ್ರಿಗಳು ಹೀಗೆ ವರ್ಗೀಕರಣ ಮಾಡಿ ಹೇಳಿದ್ದಾರೆ. ಯಾರು ಯಾರು ಏನೇನು ಎನ್ನುವುದು ಎಲ್ಲರಿಗೂ ಗೊತ್ತುಂಟು. ಆಮೇಲೆ ಯಾರೋ ಒಬ್ಬರು ಟಿ. ಬಿ. ಯಲ್ಲಿ ಕೆಲಸ ಮಾಡತಕ್ಕವರು ಮಂತ್ರಿಗಳು ಪ್ರವಾಸ ಬಂದಾಗ ಟಿ. ಬಿ. ಯಲ್ಲಿ ಉಳಿದುಕೊಳ್ಳುವ ಮಂತ್ರಿಗಳ ಹತ್ತಿರ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲ ಬೇರೆ ಕಡೆ ವರ್ಗಮಾಡಿ ಎಂದು ತಮ್ಮಲ್ಲಿ ಕೇಳಿದ್ದಾರೆಂದು ಹೇಳಿದರು. ಆ ರೀತಿ ಅಧಿಕಾರಿಗೆ ತೊಂದರೆ ಕೊಟ್ಟಂತಹ ಮಂತ್ರಿಗಳು ಯಾರು, ಉಪಮಂತ್ರಿಗಳೇ, ಸ್ಟೇಟ್ ಮಂತ್ರಿಗಳೇ ಅಥವಾ ಮಂತ್ರಿಗಳೇ ಯಾರು ಎಂಬುದನ್ನು ತಿಳಿಸಿದರೆ ಒಳ್ಳೆಯದು.

ಶ್ರೀ ಎಸ್. ಶಿವಪ್ಪ.—ಅವರು ಅದರ ಜೊತೆಗೆ ವಿಧಾನಸೌಧದಲ್ಲಿ ಮಂತ್ರಿಯವರ ಕೋಣೆಯಲ್ಲಿ ಏನು ನಡೆಯುತ್ತಿದೆ ಎಂದು ಕೂಡ ಹೇಳಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ.—ಅವರು ಎಲ್ಲಾ ರೀಸರ್ಚ್ ಕೆಲಸ ಮುಗಿಸಿ ಹೇಳಿದರೆ, ಡಾಕ್ಟರೇಟ್ ಕೊಡಬಹುದೋ ಏನೊ. ಇನ್ನು ಮತ್ತೊಂದು ವಿಚಾರವನ್ನು ಹೇಳುತ್ತೇನೆ. ಅದು ಕಂದಾಯವನ್ನು ಬಿಟ್ಟು ಬಿಡತಕ್ಕ ವಿಚಾರ. ಮಾನ್ಯ ಹುಚ್ಚುಮಾಸ್ತಿಗೌಡರು ಅದನ್ನು ಪುನಃ ಪುನಃ ಒತ್ತಾಯ ಮಾಡುತ್ತಿದ್ದಾರೆ. ಅದೇ ರೀತಿ ಮತ್ತಿತರ ಮಾನ್ಯ ಸದಸ್ಯರುಗಳು ಕೂಡ ಪುನಃ ಪುನಃ ಅದು ಹೋಗಬೇಕು, ಅದು ಟಿಪ್ಪೂ ರಾಯನ ಕಾಲದ ಕಂದಾಯ, ಆಧುನಿಕ ರೀತಿಯಲ್ಲಿ ವೈಜ್ಞಾನಿಕ ರೀತಿಯಲ್ಲಿ ಅದು ಸರಿಯಾದುದಲ್ಲವೆಂದು ಹೇಳುತ್ತಿದ್ದಾರೆ. ಈ ಕಂದಾಯ ಟಿಪ್ಪೂ ರಾಯನ ಕಾಲದ್ದು ಏನೋ ನಿಜ. ಆದರೆ ಕಂದಾಯ ಮತ್ತು ವರಮಾನ ತೆರಿಗೆಯಲ್ಲಿ ಮೂಲ ಭೂತವಾದ ಬೇಧ ಇದೆ. ಅದೇನೆಂದರೆ, ವರಮಾನ ತರಿಗೆ – ಇದು ವರಮಾನದ ಮೇಲೆ ಹಾಕತಕ್ಕದ್ದು. ಆದರೆ ಕಂದಾಯವು ರಾಜ್ಯದಲ್ಲಿರತಕ್ಕ ಭೂಮಿಯ ಮೇಲೆ ಹಾಕತಕ್ಕದ್ದು. ಇವತ್ತು ರಾಜ್ಯದಲ್ಲಿರತಕ್ಕ ಎಲ್ಲಾ ಭೂಮಿಯೂ ಸರ್ಕಾರಕ್ಕೆ ಸೇರಿದ್ದು. ಆದ್ದರಿಂದ ಸರ್ಕಾರದ ಸ್ವಾಮಿತ್ವವನ್ನು ಒಪ್ಪಿಕೊಂಡು ಕೊಡತಕ್ಕ ಟ್ಯಾಕ್ಸ್. ಇದು ಸರ್ಕಾರಕ್ಕೆ ಕೊಡತಕ್ಕ ಕಾಣಿಕೆ ಎಂತಲೂ ಹೇಳಬಹುದು. ಈಗ ಕಂದಾಯವನ್ನು ತೆಗೆದುಹಾಕುವುದು ಸುಲಭ. ಆದರೆ ಅದರಿಂದ ರೈತರಿಗೆ ಯಾವ ತೊಂದರೆ ಯಾಗುತ್ತದೆಂಬುದನ್ನು ಯೋಚನೆ ಮಾಡಬೇಕಾಗಿದೆ. ಈಗ ರೆಕಾರ್ಡ್ಸ್ ಆಫ್ ರೈಟ್ಸ್ ಏನಿದೆ, ಅದರಿಂದ ರೈತರಿಗೆ ಯಾವ ರೀತಿ ತೊಂದರೆಯಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ರೆಕಾರ್ಡ್ಸ್ ಆಫ್ ರೈಟ್ಸ್ ಎಂಬುದು ಮೂಲಭೂತವಾದ ಹಕ್ಕಿನ ಪತ್ರಿಕೆ ಯಾಗಿದೆ. ಈಗ ಕಂದಾಯ ಹೊರಟು ಹೋದರೆ, ಆ ಜಮೀನನ್ನು ಮೈಂಟೈನ್ ಮಾಡುವವರು ಯಾರು ಎಂಬುದು ನೋಡಲು ಕಷ್ಟವಾಗುತ್ತದೆ.

ಶ್ರೀ ಎಸ್. ಶಿವಪ್ಪ.—ನೀವು ಎಕರೆಗೆ ಸರಾಸರಿ 8 ಆಣೆಯಂತೆ ಕಂದಾಯ ಹಾಕಿ ಮತ್ತು ರಿಕಾರ್ಡ್ಸ್ ಆಫ್ ರೈಟ್ಸ್ ಮೈಂಟೈನ್ ಮಾಡಿ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕಂದಾಯ ತೆಗೆದುಹಾಕುವುದಕ್ಕೂ ರಿಕಾರ್ಡ್ಸ್ ಆಫ್ ರೈಟ್ಸ್ ಮೈಂಟೈನ್ ಮಾಡುವುದಕ್ಕೂ ಏನು ಸಂಬಂಧ! ಯಾರು ಯಾರಿಗೆ ಎಷ್ಟು ಹಕ್ಕು ಇದೆ ಎಂಬುದಕ್ಕೆ ಕಂದಾಯ ಕೊಟ್ಟರೆ ಮಾತ್ರ ಗೊತ್ತಾಗುವುದೇ ?

ಶ್ರೀ ರಾಮಕೃಷ್ಣ ಹೆಗಡೆ.—ರೈತರಿಗೆ ಯಾವುದಕ್ಕೆ ಎಷ್ಟು ಹಣ ಕೊಟ್ಟಿದೆ ಎಂಬುದು ಸಂಪೂರ್ಣವಾಗಿ ಗೊತ್ತಿರಬೇಕಾಗುತ್ತದೆ. ಇದರಲ್ಲಿ ಕರಪ್ಷನ್ನಿಗಾಗಲಿ, ಕಿರುಕುಳಕ್ಕಾಗಲಿ, ಯಾವ ಅವಕಾಶವು ಇಲ್ಲ. ರೈತನಿಗೆ ಇಂತಹ ಎಕರೆಗೆ ಇಂತಿಷ್ಟು ಕೊಡಬೇಕೆಂದು ಜ್ಞಾನ ಇರಬೇಕಾಗುತ್ತದೆ. ಇದು ಈ ಟ್ಯಾಕ್ಸೇಶನಿನಲ್ಲಿರತಕ್ಕ ಒಳ್ಳೆಯ ಗುಣ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ಬಿಹಾರ ಮತ್ತು ಒರಿಸ್ಸಾಗಳಲ್ಲಿ ಈ ಕಂದಾಯವನ್ನು ತೆಗೆದುಹಾಕಿಲ್ಲವೇ ? ಅಲ್ಲಿ ಜಮೀನಿನಲ್ಲಿರುವ ಹಕ್ಕು ತೆಗೆದಿದ್ದಾರೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಅಲ್ಲಿ ಕಂದಾಯ ತೆಗೆದು ಹಾಕಿರುವುದು ರಾಜಕೀಯ ಕಾರಣಕ್ಕೋಸ್ಕರ ಹೊರತು, ಆರ್ಥಿಕ ಕಾರಣಕ್ಕಾಗಿ ಅಲ್ಲ.

Sri S. SIVAPPA.—They were honest to do what they said before election. But you are dishonest. You never fulfilled your promise.

Sri RAMAKRISHNA HEGDE.—That charge does not hold any water. It is true, before election we said that the Government is seriously considering the abolition of land revenue. The Government did consider very seriously and came to conclusion that it is not desirable to abolish land revenue in the interest of the ryots.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇದರ ಬಗ್ಗೆ ಒಂದು ಬಿಲ್ ಕೂಡ ತಯಾರಾದುದನ್ನು ನಿಮ್ಮ ಪಕ್ಷದವರು ಒಪ್ಪದೆ ಕೈಬಿಟ್ಟಿದ್ದಾರಲ್ಲವೇ ?

ಶ್ರೀ ಹಂಜಿ. ಶಿವಣ್ಣ.—ಪಾಯಿಂಟ್ ಆಫ್ ಆರ್ಡರ್ ಸ್ವಾಮಿ. ಆಡಳಿತ ಪಕ್ಷದವರು ಇದನ್ನು ತೆಗೆದು ಹಾಕುತ್ತೇವೆಂದು ಚುನಾವಣೆಯ ಸಮಯದಲ್ಲಿ ಜನರಿಗೆ ಹೇಳಿ, ಅವರಿಂದ ಓಟು ತೆಗೆದು ಕೊಂಡು ಬಂದು, ಈಗ ಅದನ್ನು ಮಾಡದೆ, ಜನರಿಗೆ ಮೋಸ ಮಾಡುತ್ತಿದ್ದಾರೆ. ಹಾಗೆ ಮಾಡಿ ಈಗ ಈ ರೀತಿ ಹೇಳತಕ್ಕದ್ದು ಸರಿಯಲ್ಲ; ಮತ್ತು ಕ್ರಮವಲ್ಲ. ನೀವು ಹೇಳಿದ ಹಾಗೆ ನಡೆದು ಕೊಳ್ಳಬೇಕು.

ಸಭಾಧ್ಯಕ್ಷರು.—ಅದರಲ್ಲಿ ಬಿಲ್‌ಕುಲ್ ಕ್ರಿಯಾಲೋಪ ಇಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ರೈತರ ಹಿತದೃಷ್ಟಿಯಿಂದ ಕಂದಾಯವನ್ನು ತೆಗೆದುಹಾಕತಕ್ಕದ್ದು ಒಳ್ಳೇಯದಲ್ಲವೆಂಬುದು ಸರ್ಕಾರದ ಅಭಿಪ್ರಾಯ. ಆದ್ದರಿಂದ ಅದರ ಬಗ್ಗೆ ಪುನರ್‌ವಿಮರ್ಶೆ ಮಾಡುವುದು ಅಗತ್ಯವಿಲ್ಲ.

Sri D. B. KALMANKAR.—On the other day you promised to abolish Kandayam.

ಶ್ರೀ ಎಸ್. ಎಸ್. ಅರಕೇರಿ.—1972ರಲ್ಲಿ ಚುನಾವಣೆ ಬಂದಾಗ ಮತ್ತೆ ಕಂದಾಯ ರದ್ದು ಮಾಡುತ್ತೇವೆಂದು ಸಾರುತ್ತೀರೇನು ?

ಶ್ರೀ ರಾಮಕೃಷ್ಣ ಹೆಗಡೆ.—ಇನ್ನು ಕೆಲವು ಮಾನ್ಯ ಸದಸ್ಯರು ಇಂದು ಪ್ರಜಾಪ್ರಭುತ್ವಕ್ಕೆ ಗಂಡಾಂತರ ಬಂದಿವೆ, ಪ್ರಜಾಪ್ರಭುತ್ವದ ಕಗ್ಗೊಲೆಯಾಗುತ್ತಿದೆ ಎಂದು ಕ್ರೂರವಾದ ಟೀಕೆಯನ್ನು ಮಾಡಿದ್ದಾರೆ. ಪ್ರಜಾಪ್ರಭುತ್ವಕ್ಕೆ ಮೈಸೂರು ರಾಜ್ಯದಲ್ಲಿ ಏನು ಗಂಡಾಂತರ ಬಂದಿದೆ ಎಂದು ಕಂಡು ಬರುತಾ ಇಲ್ಲ. ಇಲ್ಲಿ ಪ್ರಜಾಪ್ರಭುತ್ವ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದೆ ಪ್ರಜಾಪ್ರಭುತ್ವಕ್ಕೆ ಕನಿಷ್ಠ ಪಕ್ಷ ನಮ್ಮ ರಾಜ್ಯದಲ್ಲಿ ಯಾವ ತರದ ಭೀತಿಯೂ ಇಲ್ಲವೆಂಬ ವಿಶ್ವಾಸ ನನಗಿದೆ. ಇಲ್ಲಿರತಕ್ಕ ಮೈನಾರಟಿ ಪಕ್ಷದವರು ಏನು ಹೇಳಬೇಕೋ, ಅದನ್ನು ಹೇಳಿಬಿಡಬಹುದು. ಆದರೆ ಮೆಜಾರಿಟಿ ಪಕ್ಷದವರ ಅಭಿಪ್ರಾಯ ಮಾತ್ರ ನಡೆಯಬೇಕಾಗುತ್ತದೆ. 1967 ರಲ್ಲಿ ಚುನಾವಣೆಯಾದ ಮೇಲೆ ಈ ರಾಜ್ಯದ ಜನತೆ ಈ ನಮ್ಮ ಪಕ್ಷಕ್ಕೆ 5 ವರ್ಷ ಕಾರ್ಯಭಾರ ಮಾಡುವಂತಹ ಅಧಿಕಾರವನ್ನು ವಹಿಸಿದ್ದಾರೆ. ಅವರೆ ನಾವು ಮಾಡಿದ್ದನ್ನು ಅವರು ಒಪ್ಪುತ್ತಾರೆಯೋ ಇಲ್ಲವೋ ಎಂಬುದಕ್ಕೆ 1972ನೇ ಇಸವಿಯಲ್ಲಿ ಕಾಲ ಬರುತ್ತದೆ. ಆಗ ಅಗ್ನಿ ಪರೀಕ್ಷೆಗೆ ಎಲ್ಲರೂ ಒಳಗಾಗುತ್ತಾರೆ. ನಾವು ಒಳ್ಳೆಯ ಕೆಲಸ ಮಾಡಿದ್ದರೆ ಜನರು ನಮ್ಮನ್ನು ಇಲ್ಲಿಗೆ ಕಳಿಸುತ್ತಾರೆ. ಇಲ್ಲದಿದ್ದರೆ ನೀವು ಆರಿಸಿ ಈ ಜಾಗಕ್ಕೆ ಬರುತ್ತೀರಿ.

ಮಾನ್ಯ ಸದಸ್ಯರು ಈ ಸಂದರ್ಭದಲ್ಲಿ ಏನೋ ಒಂದು ಹೊಂಗನಸು ಕಾಣುತ್ತಾ ಇರುವ ಹಾಗೆ ಕಂಡುಬಂದಿದೆ. ಇವತ್ತು 3-4 ಜನರ ಭಾಷಣ ಕೇಳಿದಮೇಲೆ ಈ ರೀತಿ ಅನ್ನಿಸಿತು. ಶ್ರೀಮಾನ್ ಶಿವಪ್ಪನವರು, ಶ್ರೀಮಾನ್ ಸಿದ್ಧವೀರಪ್ಪನವರು, ಶ್ರೀಮಾನ್ ಹುಚ್ಚಮಾಸ್ತಿಗೌಡರು ಇವರ ಹೊಂಗನಸು ಏನೆಂದರೆ ಇಲ್ಲಿಯವರೆಗೂ ಏನೋ ಮೈಸೂರು ಸರ್ಕಾರ ಭದ್ರವಾಗಿ ಇತ್ತು ಈಗ ಆ ಭದ್ರತೆ ಹೊರಟು ಹೋಯಿತು, ಹೇಗಾದರೂ ಮಾಡಿ ಈ ಸರ್ಕಾರವನ್ನು ಉರುಳಿಸಬೇಕು, ಉರುಳಿಸುವುದಕ್ಕೆ ಸಾಧ್ಯ ಎಂಬ ಒಂದು ಕಲ್ಪನೆ ಇವರಲ್ಲಿ ಬಂದಿದೆ ಇದರಿಂದ ಅವರಿಗೆ ತುಂಬಾ ನಿರಾಶೆಯಾಗುತ್ತದೆ ಎಂದು ನಾನು ಹೇಳುತ್ತೇನೆ. ತುಂಬಾ ನಿರಾಶೆಯಾಗುತ್ತದೆ. ಯಾರು ಹೊಂಗನಸು ಕಾಣುತ್ತಾ ಇದ್ದಾರೋ ಅವರಿಗೆ ನಿರಾಶೆ ಕಟ್ಟಿಟ್ಟದ್ದು ಎಂದು ಹೇಳುತ್ತಾ ಇದ್ದೇನೆ. ಇದು ಅತಿಶಯೋಕ್ತಿಯಲ್ಲ. ಮೈಸೂರು ರಾಜ್ಯ ಸರ್ಕಾರ ಇವತ್ತು ಇಡೀ ದೇಶದಲ್ಲಿ ಸುಭದ್ರವಾದ ಸರ್ಕಾರ, ಇದಕ್ಕೆ ನಾವೆಲ್ಲರೂ ಅಭಿಮಾನ ಪಡಬೇಕು.

12-30 P.M.

Sri M. MALLIKARJUNASWAMY.—The Hon. Minister must understand that 'majority' and 'minority' are only political categories. What may be a majority today may become a minority tomorrow and what may be a minority today may become a majority tomorrow.

Sri RAMAKRISHNA HEGDE.—I agree with the views of the hon. Member, and there is no difference of opinion so far as that is concerned. But, what I maintain very strongly is that Mysore Government is the

most stable Government in the country. No economic development is possible without political stability. ಇಚೆಗೆ ಒಂದು ಹೊಸ ಪ್ಯಾಟ್ರನ್ ಬರುತ್ತಾ ಇದೆ. ಅದೇನೆಂದರೆ ಎಲ್ಲರ ಕಾನ್‌ಷನ್ಸ್ ಕೇಳಿ ಕಾನ್‌ಷನ್ಸ್ ಪ್ರಕಾರ ಓಟು ಮಾಡುತ್ತಾ ಇದ್ದಾರೆ, ಹೀಗಿರುವಾಗ ಈ ಹೊಸ ಪ್ಯಾಟ್ರನ್ ಈ ಒಂದು ಪಕ್ಷಕ್ಕೆ ಆಗಲಿ ಆ ಒಂದು ಪಕ್ಷಕ್ಕೆ ಆಗಲಿ ಸೀಮಿತವಾಗಿಲ್ಲ ಈ ಸಭೆಯ ಸದಸ್ಯರಲ್ಲಿ ನಿರೀಕ್ಷೆ ಮಾಡಿದಂತೆ ಓಟು ಬರಲಿಲ್ಲ ಎಂಬ ಒಂದೇ ಒಂದು ಕಾರಣದಿಂದ ಇವತ್ತು ಮನಸ್ಸಿನಲ್ಲಿ ಮುಂಡಿಗೆ ಮಾಡಿಕೊಳ್ಳುತ್ತಾ ಇದ್ದಾರೆ. ಅದೇನೆಂದರೆ ಈ ಪಾರ್ಟಿ ಕ್ರ್ಯಾಕ್ ಆಯಿತು, ಬಿದ್ದು ಹೋಯಿತು ನಾವು ಆ ಕಡೆಗೆ ಹೋಗೋಣ ಅಂತ ಆ ರೀತಿ ಇದ್ದರೆ :

" I tell them that they will be surely disappointed."

ಮಾನ್ಯ ಅಧ್ಯಕ್ಷರೇ, ನಾನು ಈ ರಾಜಕೀಯ ವಿಷಯ ಪ್ರಸ್ತಾಪ ಮಾಡಲಿಕ್ಕೆ ಹೋಗುತ್ತಾ ಇರಲಿಲ್ಲ. ಆದರೆ ಶ್ರೀಮಾನ್ ಸಿದ್ದವೀರಪ್ಪನವರು ನನ್ನನ್ನು ಕೆಣಕಿದ್ದಾರೆ. ಅವರು ಏನು ಹೇಳಿದರೂ ಶ್ರೀಮಾನ್ ನಿಜಲಿಂಗಪ್ಪನವರ ಹೆಸರು ಎತ್ತದೆ ಏನೂ ಹೇಳುವುದಿಲ್ಲ ಎಂದು ಈಗಾಗಲೇ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಅವರ ಹೆಸರು ಇಲ್ಲದೆ ಅವರ ಭಾಷಣ ಆಗುವುದಿಲ್ಲ. ಮತ್ತು ಭಾಷಣ ಮುಕ್ತಾಯ ಆಗುವ ಹಾಗೆ ಇಲ್ಲ. ಪಾಪ ಅವರು ಇಲ್ಲಿ ಈಗ ಮುಖ್ಯ ಮಂತ್ರಿಗಳಾಗಿ ಇಲ್ಲ. ಎರ್ಲೋ ಈ ರಾಜ್ಯವನ್ನು ಬಿಟ್ಟು ಹೊರಗೆ ಹೋಗಿದ್ದಾರೆ, ಆದರೂ ಕೂಡ ಶ್ರೀಮಾನ್ ಸಿದ್ದವೀರಪ್ಪನವರಿಗೆ ಸಮಾಧಾನ ಇಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ಅವರೇ ನಿಮ್ಮ ಪಕ್ಷದ ವಿಷಯವನ್ನು ಎತ್ತಿದವರು. ನಾನು ಹೇಳಿದ್ದೆಲ್ಲಾ ಕೇವಲ ಜುಜುಬಿ ಹೇಳಿದ್ದೇನೆ, ಹೆಚ್ಚು ಹೇಳಲಿಕ್ಕೆ ಹೋಗಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಸ್ವಲ್ಪ ಹೇಳಿದ್ದಕ್ಕಾಗಿ ನಾನು ತಮಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಶ್ರೀಮಾನ್ ಸಿದ್ದವೀರಪ್ಪನವರು ಏನು ಹೇಳಿದರು ? ಶ್ರೀಮಾನ್ ನಿಜಲಿಂಗಪ್ಪನವರು ಮೊನ್ನೆ ಎರ್ಲೋ ಮಾಡಿದ ಭಾಷಣವನ್ನು ಉದ್ಧರಿಸಿ ಅವರ ಬಗ್ಗೆ ಟೀಕೆ ಮಾಡಿದರು. ಇವತ್ತು ರಾಜಕೀಯ ವಾತಾವರಣ ಈ ದೇಶದಲ್ಲಿ ಎಷ್ಟು ಕಲುಷಿತವಾಗಿದೆ ಎಂದರೆ ಯಾರು ಯಾವ ರಾಜಕೀಯ ನೀತಿಯನ್ನು ಇಂದು ಅನುಸರಿಸುತ್ತಾರೆ ಅಂತ ಅನ್ನುವುದನ್ನು ಕಂಡುಹಿಡಿಯುವುದು ಕಷ್ಟವಾಗಿದೆ. ಒಂದು ಕಡೆ ಅವರ ಪಾರ್ಟಿ ಅಧ್ಯಕ್ಷರೇ ಒಂದು ಸಲ ಒರಿಸ್ಸಾಕ್ಕೆ ಹೋಗಿ ಸ್ವತಂತ್ರ ಪಾರ್ಟಿ ನೇತೃತ್ವದಲ್ಲಿರತಕ್ಕ ಸರ್ಕಾರವನ್ನು ಉರುಳಿಸಲಿಕ್ಕೆ ಏನು ಬೇಕೋ ಅದಕ್ಕೆ ಪ್ರಯತ್ನ ಮಾಡಿದರು. 4 ದಿವಸದ ನಂತರ ಅಹಮದಾಬಾದಿಗೆ ಹೋಗಿ ಅಲ್ಲಿ ಕಾಂಗ್ರೆಸ್ ಪಾರ್ಟಿಯನ್ನು ಉರುಳಿಸಲು ಏನು ಸಹಾಯ ಬೇಕೋ ಅದನ್ನು ಮಾಡುತ್ತೇವೆಂದು ಹೇಳಿದರು. ಇದು ಏನಾಗಿದೆ ಎಂದರೆ ಟಾಪ್ಲರ್ಸ್ ಅನ್‌ಲಿಮಿಟೆಡ್ ಕಂಪೆನಿ ಅಂತ ಸರ್ಕಾರವನ್ನು ಉಳಿಸುವ ಒಂದು ದೊಡ್ಡ ಕಂಪೆನಿಯೇ ಇದ್ದ ಹಾಗೆ ಕಾಣುತ್ತದೆ. ಇದರಿಂದ ಜನತೆಯ ಹಿತಕ್ಕೆ ಒಳ್ಳೆಯದಾಗುವುದಿಲ್ಲ.

Sri H. SIDDAVEERAPPA.—That started with your leader Sri S. Nijalingappa, who said : 'I do not rest until Indira Gandhi Government is toppled.'

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅದನ್ನು ಶುರು ಮಾಡಿದವರು ನೀವೇ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಈ ಪ್ರಜಾಪ್ರಭುತ್ವದ ಸೌಂದರ್ಯ ಏನೆಂದರೆ............

ಶ್ರೀ ಎಸ್. ಶಿವಪ್ಪ.—ಟಾಪ್ಲರ್ಸ್ ಕಂಪೆನಿಯೋ, ಟಾಪ್‌ಲೆಸ್ ಕಂಪೆನಿಯೋ ಯಾವುದು ? ಗೊತ್ತಾಗಲಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಒಂದು ವರ್ಷದ ಹಿಂದೆ ತಾವೇ ನೋಡಿಕೊಂಡು ಬಂದಿರಬೇಕು, ಅದರ ನೆನಪು ಈಗ ಆಗುತ್ತಾ ಇದೆಯೋ ಏನೋ ಅದಕ್ಕೆ ನಾನೇನು ಮಾಡಲ ;

ಮಾನ್ಯ ಅಧ್ಯಕ್ಷರೇ, ಪ್ರಜಾಪ್ರಭುತ್ವದ ಸೌಂದರ್ಯ ಏನೆಂದರೆ ಒಂದು ಸಲ ಚುನಾವಣೆಯ ಪರೀಕ್ಷೆಗೆ ಒಳಗಾಗಿ ನಾವು ಹೊರಗಡೆ ಬಂದ ಮೇಲೆ ಸಹಿಷ್ಣುತೆ ಇರಬೇಕು. ಯಾವುದೇ ಪಕ್ಷ ಸೂರ್ಯ ಚಂದ್ರ ಇರುವವರೆಗೂ ಆಡಳಿತ ಮಾಡುವುದಕ್ಕೆ ಹುಟ್ಟಿದ್ದು ಅಲ್ಲ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಒಂದು ಸಲ ಚುನಾವಣೆಯಾಗಿ ಜನತೆ ಒಂದು ತೀರ್ಪು ಕೊಟ್ಟ ಮೇಲೆ, ಜನತೆ ಇಂಥಹ ಕೆಲಸ ಮಾಡಿ ಅಂತ ಹೇಳಿ ಒಂದು ಮ್ಯಾಂಡೇಟ್ ಕೊಟ್ಟ ಮೇಲೆ, ಅಷ್ಟು

(ಶ್ರೀ ರಾಮಕೃಷ್ಣ ಹೆಗಡೆ)

ಅವಧಿಯಲ್ಲಿ ಅದಕ್ಕೆ ವಿರುದ್ಧವಾಗಿ ಕೆಲಸ ಕಾರ್ಯಗಳನ್ನು ಮಾಡಿ ಎಂದು ಹೇಳುವುದು ಧರ್ಮವೇ, ನ್ಯಾಯವೇ, ನೀತಿಯೇ ! ನಮ್ಮಲ್ಲಿ ಸಹಿಷ್ಣುತೆ ಇಲ್ಲ ಎಂದು ತಿಳಿದುಕೊಂಡರೆ ಅದು ತಪ್ಪು ಎಂದು ಹೇಳುತ್ತೇನೆ. ಈ ಮಂತ್ರಿಮಂಡಲ ಕಾರ್ಯದಕ್ಷತೆ ತೋರಿಸದಿದ್ದರೆ ಇದರ ಮೇಲೆ ಮಾಡಿಯೇ ಮಾಡುತ್ತೀರಿ, ಈ ಬಗ್ಗೆ ಬಹಳ ಪ್ರಾಮಾಣಿಕವಾಗಿ ಹೇಳುತ್ತಾ ಇದ್ದೇನೆ ಕಳೆದ ಎರಡು ವರ್ಷದಿಂದ ಈ ಮಂತ್ರಿಮಂಡಲ ಶ್ರೀಮಾನ್ ವೀರೇಂದ್ರ ಪಾಟೀಲ್‌ರವರ ನೇತೃತ್ವದಲ್ಲಿ ಇಡೀ ಮೈಸೂರು ರಾಜ್ಯದಲ್ಲಿ ಅಷ್ಟೇ ಅಲ್ಲ ಮೈಸೂರು ರಾಜ್ಯದ ಹೊರಗಡೆ ಇಡೀ ಹಿಂದೂಸ್ಥಾನದಲ್ಲೇ ದಕ್ಷ ಮತ್ತು ಶ್ರೇಷ್ಟ ಆಡಳಿತ ಅಂತ ಹೆಸರು ಪಡೆದಿದೆ. ಇದರಲ್ಲಿ ಅತಿಶಯೋಕ್ತಿಯೇನೂ ಇಲ್ಲ.

ಶ್ರೀ ಎಚ್. ಸಿದ್ಧವೀರಪ್ಪ.—ನಮ್ಮ ರಾಜ್ಯದಲ್ಲಿರತಕ್ಕ ಹಿರಿಯರು ಏನು ಹೇಳುತ್ತಾ ಇದ್ದಾರೆ ಎಂಬುದನ್ನು ನೋಡಿ. ಶ್ರೀಮಾನ್ ಮಾಸ್ತಿವೆಂಕಟೇಶ ಐಯ್ಯಂಗಾರ್ ಅವರು ಮೊನ್ನೆ ಭಾನುವಾರದ ಪ್ರಜಾವಾಣಿಯಲ್ಲಿ ಏನು ಬರೆದಿದ್ದಾರೆ ಎಂಬುದನ್ನು ಓದಿ ನೋಡಿ. ನಿಮ್ಮ ಬೆನ್ನು ನೀವೇ ಚಪ್ಪರಿಸಿಕೊಳ್ಳುವುದರಲ್ಲಿ ಏನೂ ಪ್ರಯೋಜನ ಇಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ನಮ್ಮ ಬೆನ್ನನ್ನು ನಾವೇ ಚಪ್ಪರಿಸಿಕೊಳ್ಳತಕ್ಕ ದೋಷ ಅಷ್ಟಿಷ್ಟಲ್ಲ ಎಂಬುದು ನನಗೆ ಗೊತ್ತು, ಆದರೆ ಬೇರೆಯವರು ಯಾವ ರೀತಿ ನೋಡುತ್ತಾ ಇದ್ದಾರೆ ಎಂಬುದನ್ನು ಹೇಳುತ್ತಾ ಇದ್ದೇನೆ.

ಶ್ರೀಮತಿ ನಾಗರತ್ನಮ್ಮನವರು ಮತ್ತು ಒಬ್ಬಿಬ್ಬರು ಸದಸ್ಯರು ಲಂಚದ ಬಗ್ಗೆ ಪ್ರಸ್ತಾಪ ಮಾಡಿದರು. ಲಂಚ ಆಡಳಿತದಲ್ಲಿ ಇಲ್ಲ ಎಂದು ನಾನು ಎಂದೆಂದೂ ಹೇಳಿಲ್ಲ. ಆದರೆ ಒಂದು ಮಾತನ್ನು ಉದ್ಧರಿಸಲು ಬಯಸುತ್ತೇನೆ. ಬೊಂಬಾಯಿನಿಂದ ಬಂದ ಒಬ್ಬ ಫಿಲಂಪ್ರೊಡ್ಯೂಸರ್ ಮೊನ್ನೆ ತಾನೆ ನನಗೆ ಸಿಕ್ಕಿದ್ದರು. ಅವರು ಏನು ಹೇಳಿದರು ಎಂದರೆ ನಿಮ್ಮ ಒಂದು ರಾಜ್ಯದಲ್ಲಿ ಎಷ್ಟೋ ಸಂದರ್ಭದಲ್ಲಿ ನಿಮ್ಮ ಅಧಿಕಾರಿಗಳ ಜೊತೆಗೆ ನನ್ನ ಸಂಪರ್ಕ ಬಂದಿತ್ತು, ಅವರಿಂದ ಎಷ್ಟೋ ಕೆಲಸ ಮಾಡಿಸಿಕೊಳ್ಳಬೇಕಾಗಿತ್ತು. ಆದರೆ ಒಂದು ಸಂದರ್ಭದಲ್ಲೂ ಯಾವ ಒಬ್ಬ ಅಧಿಕಾರಿಯಾಗಲಿ ನನ್ನ ಹತ್ತಿರ ಲಂಚ ಕೇಳಲಿಲ್ಲ ಎಂಬುದಾಗಿ ಇದಕ್ಕಿಂತ ಕ್ರೆಡಿಟ್ ಯಾವುದೂ ಇಲ್ಲ. ಹೊರಗಿನಿಂದ, ಬೊಂಬಾಯಿನಿಂದ ಬಂದಿರತಕ್ಕ ಒಬ್ಬ ಫಿಲಂ ಪ್ರೊಡ್ಯೂಸರ್ ಹೇಳಿದ್ದು ಇದು. ಸುಮ್ಮನೆ ಟೀಕೆ ಮಾಡುವುದೇ ತಮ್ಮ ಧರ್ಮ ಅಂತ ಅಂದರೂ, ತಿಳಿದುಕೊಳ್ಳುವುದೂ ಕೂಡ ಅವರ ಧರ್ಮ ಹೌದು. ಟೀಕೆ ಮಾಡಬೇಕು, ಸ್ವಲ್ಪ ತಾರತಮ್ಯ ನೋಡಿ ಮಾಡಬೇಕು. ಕೇವಲ ಕಣ್ಣು ಮುಚ್ಚಿಕೊಂಡು ಟೀಕೆ ಮಾಡಬಾರದು. ಟೀಕೆ ಮಾಡಬೇಕಾದರೆ ನ್ಯಾಯಾನ್ಯಾಯ, ಮತ್ತು ಯುಕ್ತಾಯುಕ್ತತೆಗಳನ್ನು ನೋಡಿಕೊಂಡು ಟೀಕೆ ಮಾಡಬೇಕು. ಇಲ್ಲಿರತಕ್ಕ ನಾವೆಲ್ಲರೂ ಕೂಡ ಒಂದಾಗಿ ಎಲ್ಲರ ಸಹಕಾರದಿಂದ ನಮ್ಮ ರಾಜ್ಯದ ಮೂರು ಕೋಟಿ ಜನತೆಯ ಸೇವೆ ಮಾಡಬೇಕು. ಆ ಅವಕಾಶ ಈಗ ನಮಗೆ ಸಿಕ್ಕಿದೆ, ಅನಾವಶ್ಯಕವಾದ ಮತ್ತು ಅಸತ್ಯವಾದ ಟೀಕೆಗಳನ್ನು ಮಾಡಬಾರದು, ಬರತಕ್ಕ ಟೀಕೆಗಳು ಸಾಧುವಾಗಿರಬೇಕು, ರಚನಾತ್ಮಕವಾಗಿರಬೇಕು ಎಂದು ಹೇಳುತ್ತೇನೆ.

ಶ್ರೀ ಎಚ್. ಸಿದ್ಧವೀರಪ್ಪ.—ನಿಮ್ಮ ಪ್ರೇಮ ಯಾವಾಗಲೂ ಧೃತರಾಷ್ಟ್ರ ಪ್ರೇಮ ಇದರಲ್ಲಿ ಏನೂ ಸಂಶಯ ಇಲ್ಲ.

ಶ್ರೀ ಅಜೀಜ್ ಸೇಟ್.—ಫಿಲ್ಮಂ ಆಕ್ಟರ್ ಬಂದು ಕ್ಲಾಸ್ ಒನ್ ಆಫೀಸರ್ ಹತ್ತಿರ ಕೆಲಸ ಮಾಡಿಸಿಕೊಂಡು ಯಾವರೀತಿಯೂ ಲಂಚರುಷುವತ್ತು ಕಂಡುಬಂದಿಲ್ಲ ಎಂದು ಹೇಳಿರಬಹುದು. ಲಂಚರುಷುವತ್ತುಗಳಲ್ಲಿ ಎಷ್ಟು ಕ್ಯಾಟಗರಿ ಇದೆ. ಬರೀ ಟೇಬಲ್‌ಗೆ ಇನ್‌ವೈಟ್ ಮಾಡಿ ಊಟ ಉಪಚಾರ ಮಾಡುತ್ತಾರೆ, ಅದು ಒಂದು ವಿಧವಾದ ಲಂಚರುಷುವತ್ತು.

ಶ್ರೀ ಹೆಚ್. ಎನ್. ನಂಜೇಗೌಡ.—ಫಿಲ್ಮಂ ಪ್ರೊಡ್ಯೂಸರ್‌ನ್ನು ನಿಮ್ಮ ಅಧಿಕಾರಿಗಳು ನೋಡಿದರೆ ಹೆದರಿಕೆ ಇರಬಹುದು. ಆದುದರಿಂದ ಕೆಲಸ ಮಾಡಿಕೊಟ್ಟಿದ್ದಾರೆ. ಬೇರೆಯವರು ಹೋಗಿದ್ದರೆ ಆಗುತ್ತಿರಲಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಇಷ್ಟು ಹೇಳಿ ಈ ವಿಧೇಯಕ ಏನಿದೆ ಅದಕ್ಕೆ ಮಾನ್ಯಸಭೆ ಯಾವುದೇ ತರಹ ಭಿನ್ನಾಭಿಪ್ರಾಯ ಇಲ್ಲದೆ ಬೆಂಬಲ ಕೊಡಬೇಕೆಂದು ಹೇಳುತ್ತೇನೆ. ಒದಗಿಸಿದಂತಹ ಹಣವನ್ನು ನಮ್ಮ ಜನತೆಯ ಹಿತಕ್ಕಾಗಿ ಅಭಿವೃದ್ಧಿಗಾಗಿ ಖರ್ಚುಮಾಡುತ್ತೇವೆ ಎಂದು ಆಶ್ವಾಸನೆ ಕೊಡುವುದಕ್ಕೆ ಬಯಸುತ್ತೇನೆ.

Sri S. SIVAPPA.—Sir, the Hon. Minister has not answered my point. I had made a charge against the atrocities committed by the police.

Sri VEERENDRA PATIL (Chief Minister).—Sir, there is also a calling attention notice on the same subject matter. I am going to make a statement tomorrow.

Sri S. SIVAPPA.—Sir, daily the Chief Minister is saying that he will make a statement tomorrow. Yesterday he said that he will make a statement to-day.

Sri VEERENDRA PATIL.—Sir, because the procedure requires that I have to send copies of the statement to the hon. Speaker who in turn will have to pass on the copies of the statement to the members concerned, I am saying that I will make a statement tomorrow. Otherwise, I am prepared to make a statement even to-day itself.

Sri K. H. PATIL.—Sir, I want to know whether the Hon. Minister for Co-operation is prepared to produce the documents and place it on the Table of this House in respect of the matter relating to Sri Veerappa Gowda. I also want to know whether it is a fact that he is involved in such a case, and whether there is any *prima facie* case involved against him and if so, what is the action proposed to be taken by the Government.

ಶ್ರೀ ಶರಣ್ ಗೌಡ ಇನಾಂದಾರ್.—ಮೇಲ್ಮನೆಯನ್ನು ಅಬಾಲಿಷ್ ಮಾಡುವ ಬಗ್ಗೆ ಮಂತ್ರಿಗಳು ಏನೂ ಹೇಳಲಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಹಿಂದೆ ಕೂಡ ಗೋಪಾಲಗೌಡರು ಒಂದು ಸೂಚನೆ ಮಾಡಿದ್ದರು ಅದಕ್ಕೆ ಉತ್ತರ ಕೊಟ್ಟಿದ್ದೇನೆ. ಅಪ್ಪರ್ ಹೌಸ್‌ನ ಯುಟಿಲಿಟಿ ಬಗ್ಗೆ ಭಿನ್ನಾಭಿಪ್ರಾಯ ಇರಬಹುದು. ಸದ್ಯಕ್ಕೆ ಅದನ್ನು ಅಬಾಲಿಷ್ ಮಾಡತಕ್ಕದ್ದಿಲ್ಲ. ಇದರಿಂದ ಕೋಟ್ಯಾಂತರ ರೂಪಾಯಿ ಖರ್ಚಾಗುವುದಿಲ್ಲ. ಮೇಲ್ಮನೆ ಇದ್ದರೆ ಅಲ್ಲಿ ಅನುಭವಿಕರು ಇರುತ್ತಾರೆ, ತಜ್ಞರು ಇರುತ್ತಾರೆ ಮತ್ತು ನಮಗೆ ಅನೇಕ ರೀತಿಯಿಂದ ಸಲಹೆ ಕೊಡುತ್ತಾರೆ. ಆದುದರಿಂದ ಇದನ್ನು ಉಪಯುಕ್ತವಾದುದು ಅಲ್ಲ ಎಂದು ಹೇಳುವುದಕ್ಕಾಗುವುದಿಲ್ಲ.

Mr. SPEAKER.—Now, I shall put the motion to the House. The question is :

"That the Mysore Appropriation (No. 2) Bill, 1970 be taken into consideration."

The motion was adopted.

Clauses

Mr. SPEAKER.—Now, I will put the clauses to the House. The questions is :

"That clauses 2 and 3 do stand part of the Bill."

The motion was adopted.

Clauses 2 and 3 were added to the Bill.

Mr. SPEAKER.—The question is:

"That the Schedule do stand part of the Bill."

The motion was adopted.

The Schedule was added to the Bill.

Mr. SPEAKER.—The question is:

"That clause 1, long Title and the Enacting formula do stand part of the Bill.

The motion was adopted.

Clause 1, etc., were added to the Bill.

Motion to pass.

Sri RAMAKRISHNA HEGDE.—Sir, I beg to move:

"That the Mysore Appropriation (No. 2) Bill, 1970 be passed."

Mr. SPEAKER.—The question is:

"That the Mysore Appropriation (No. 2) Bill, 1970 be passed."

The motion was adopted.

Mr. SPEAKER.—The House will now rise to meet again at 2-30 P.M.

The House adjourned at Forty-five Minutes past Twevle of the Clock and re-assembled at Forty Minutes past Two of the Clock.

[MR. SPEAKER in the Chair]

STARRED QUESTIONS

to which oral Answers were given

Work Charged Establishment in Public Works Department

302. Sri V. N. PATIL (Humnabad).—

Will the Minister for Public Works be pleased to state:—

(a) whether the Public Works Department has got on its working staff, employees known as coolies on daily wage basis for the maintenance and permanent up-keep of the road condition ;

(b) the reasons for not appointing these coolies known as 'Miles Coolies' on permanent basis and for not providing them assured employment benefits;

(c) whether the Public Works Department has any system of employing Works Inspectors and, if so, whether that post is a permanent one or whether the incumbents on the posts are given only 29 days attendance in a month and one day's attendance is being denied to them in order to retain them as temporary and unconfirmed employees;

(d) if so, the reasons for this injustice being perpetuated and why these officers are not being considered as permanent or confirmed officers;

(e) whether the Government has any proposal before it to regularise the services of all subordinate Engineering personnel who are working under the work charged establishment in the Public Works Department;

(f) (i) the meaning and definition given to the "Work-charged Establishment" and (ii) whether it was existing in the pre-integrated areas, and Old Mysore area and if so, the working rules governing these establishments in the respective areas;

(g) the strength of the work charged employees in the State;

(h) whether the Government has formulated any rules to regularise their services?

Sri B. V. MAGAVI (Deputy Minister for Public Works).—

(a) Yes.

(b) The Services of 'Coolies' are not required throughout the year. They are employed on daily wages for the period when the work in progress at sections necessitates such appointments.

(c) Yes. The posts of work Inspectors are not permanent. The work Inspectors are employed on monthly wage basis and are paid according to the number of days of work. The question of 29 days attendance does not arise.

(d) Does not arise in view of reply to clause (c).

(e) No.

(f) (i) Work Charged Establishment means such establishment as is employed upon the actual execution as distinct from the general supervision of a specific work or sub-works of a specific Project or upon the subordinate supervision of the Departmental Labour, Stores and machinery in connection with such works or sub-works, etc. The appointment to this Establishment is on temporary tenure.

(ii) it was existing in the pre-integrated areas including Old Mysore area. Extracts of rules governing this establishment in the

(SRI B. V. MAGAVI)

respective areas are indicated in Appendices I—IV placed on the Table of House.*

(*g*) 11,867.

(*h*) 1,600 posts of the different categories of work charged establishment have been converted as regular non-pensionable establishment for purposes of gratuity. Rules regarding the absorption of eligible persons against these posts have been framed.

ಶ್ರೀ ವಿ. ಎನ್. ಪಾಟೀಲ್.—(ಎಫ್) ಪ್ರಶ್ನೆಯ (2)ನೇ ಭಾಗದಲ್ಲಿ ಕೊಟ್ಟಿರುವ ಉತ್ತರ ನೋಡಿದರೆ ಸರಕಾರಿ ಇಲಾಖೆಯಲ್ಲೂ ಕೂಡ ಇಷ್ಟು ಮೋಸ ನಡೆಯುತ್ತಿದೆ ಎಂದು ತಿಳಿಯುವುದು. ವರ್ಷದಲ್ಲಿ ಒಂದು ದಿವಸ ಗ್ಯಾಪ್ ಕೊಡುವುದು ಫ್ರಾಡ್ ಅಲ್ಲವೇ ?

ಶ್ರೀ ಬಸವರಾಜ ಮಾಗಾವಿ.—ಫ್ರಾಡ್ ಅಲ್ಲ. ಮಾನ್ಯ ಸದಸ್ಯರು ತಪ್ಪಾಗಿ ಅರ್ಥ ಮಾಡಿಕೊಂಡಿದ್ದಾರೆ. ಮಾನ್ಯ ಸದಸ್ಯರು ಹಿಂದಿನ ಹೈದರಾಬಾದು ಪ್ರದೇಶ ಮುಂತಾದ ಕಡೆ ಹೇಗೆ ಇತ್ತು ಎಂದು ಕೇಳಿದ್ದಾರೆ, ಅದಕ್ಕೆ ಯಾವರೀತಿ ಇತ್ತು ಎಂದು ತಿಳಿಸಲಾಗಿದೆ. They are all governed by the the Mysore Public Works Departmental Code, Volume I.

ಶ್ರೀ ವಿ. ಎನ್. ಪಾಟೀಲ್.—ತಮ್ಮಲ್ಲಿರುವ ರಸ್ತೆ ಖಾಯಂ ಇದೆ, ರಸ್ತೆ ರಿಪೇರಿ ಕೆಲಸ ಖಾಯಂ ಆಗ ಆಗಬೇಕು. ಲಾರಿ, ಬುಲ್‌ಡೋಜರು ಮುಂತಾದ್ದು ಖಾಯಮಾಗಿವೆ. ಅದರೆ ಅವನ್ನು ನಡೆಸುವವರು ಕಾರ್ಮಿಕರು ಟೆಂಪೊರೆರಿ ಎಂದು ಸರಕಾರ ಹೇಳುವುದು. ಹತ್ತು ವರ್ಷ ಕೆಲಸ ಮಾಡಿದರೂ ಖಾಯಂ ಮಾಡದಿರುವುದು ಅನ್ಯಾಯವಲ್ಲವೇ ?

ಶ್ರೀ ಬಸವರಾಜ ಮಾಗಾವಿ.—ಕೆಲಸ ನಡೆಯುವವರೆಗೆ ನೇಮಕ ಮಾಡಿಕೊಳ್ಳುವುದರಿಂದ ಹಂಗಾಮಿಯಾಗಿ ಮುಂದುವರೆಸಿದೆ. ಈಗ ಅವರನ್ನು ಖಾಯಂ ಮಾಡಿದರೆ ಪೆನ್‌ಷನ್, ರಜ ಸಂಬಳ ಮುಂತಾದ್ದೆಲ್ಲಾ ಕೊಡಬೇಕಾಗುವುದು. ಆದರೂ ಈಗ ಸರಕಾರ ಒಂದು ನಿರ್ಣಯ ಮಾಡಿದೆ. ಕೆಲಸಗಾರರ ಸೀನಿಯಾರಿಟಿ ನೋಡಿ 10 ವರ್ಷಗಳಿಗೆ ಮೇಲ್ಪಟ್ಟು ಕೆಲಸ ಮಾಡಿರುವವರನ್ನು ಅಬ್ಸಾರ್ಬ್ ಮಾಡಬೇಕು ಎಂದು 1600 ಹುದ್ದೆಗಳಿಗೆ ಸಂಬಂಧಪಟ್ಟಂತೆ 1050 ಜನರನ್ನು ಈಗಾಗಲೆ ಅಬ್ಸಾರ್ಬ್ ಮಾಡಿಕೊಳ್ಳಲಾಗಿದೆ.

ಶ್ರೀ ಎಂ. ನಾಗಪ್ಪ.—ಲೇಬರರ್ಸನ್ನು ಒಂದು ಸಲ ನೇಮಕಮಾಡಿಕೊಂಡಮೇಲೆ ವರ್ಷವೆಲ್ಲ 365 ದಿವಸವೂ ಕೆಲಸಮಾಡಬೇಕು, ಈಗ 30 ವರ್ಷಗಳಿಂದ ಕೆಲಸ ಗ್ಯಾಂಗ್ ಲೇಬರ್ ಮಾಡುತ್ತಿದ್ದಾರೆ. ಅವರನ್ನು ಖಾಯಂ ಮಾಡಿ ಅವರಿಗೆ ಸರಕಾರದಲ್ಲಿರುವ ಸವಲತ್ತು ಕೊಡಲು ಪ್ರಯತ್ನ ಮಾಡುತ್ತೀರಾ ?

ಶ್ರೀ ಬಸವರಾಜ ಮಾಗಾವಿ.—ಮಾನ್ಯ ಸದಸ್ಯರು ಗವರ್ನಮೆಂಟ್ ಆರ್ಡರ್ ನಂ. 229 ಎಸ್.ಬಿ 163 ನೋಡಬೇಕು. 10 ವರ್ಷಗಳಿಗೆ ಮೇಲ್ಪಟ್ಟು ಕೆಲಸದಲ್ಲಿರುವವರನ್ನು ಕೆಲವು ಕಂಡೀಷನ್ ಮೇಲೆ ಮುಂಬಾಯಿ ಕರ್ನಾಟಕದಲ್ಲಿ ಅಬ್ಸಾರ್ಬ್ ಮಾಡಿಕೊಳ್ಳುತ್ತಿದೆ. ಹಂತ ಹಂತವಾಗಿ ಹಾಗೆ ಮಾಡಬೇಕೆಂದಿದೆ. All these appointments were made subject to availability of funds. We have found that there are people who have put in more than 10 years. Government are contemplating to absorb them in stages.

SRI B. B. SAYANAK.—May I know how many coolies were working, what was the daily wages paid to them and whether the daily wages were equal to the Minimum wages fixed under the Minimum Wages Act ?

SRI BASAVARAJ MAGAVI.—The hon. Member has not gone through the answer. The total number of such workers on daily wages is already mentioned. Their daily wages vary from Division to Division. It depends upon the prevailing wage rate in the particular P.W.D. Circles.

---

*Copies placed in the Mysore Legislature Library.

Sri B. B. SAYANAK.—Are the daily wages equal to the wages fixed under the Minimum Wages Act ?

Sri BASAVARJA MAGAVI.—We are not bound by the Minimum Wages Act. This is the wage prevailing in the particular P.W.D. Circles.

ಶ್ರೀ ಎಚ್. ಡಿ. ದೇವೇಗೌಡ.—(ಬಿ) ಪ್ರಶ್ನೆಗೆ ಉತ್ತರವಾಗಿ 11867 ಜನ ವರ್ಕ್ ಚಾರ್ಜ್ಡ್ ಎಂಪ್ಲಾಯೀಸ್ ಇದ್ದಾರೆಂದೇನು ತಿಳಿಸಿದೆ ಅದರಲ್ಲಿ 10 ವರ್ಷಗಳಿಗೆ ಮೇಲ್ಪಟ್ಟು ಕೆಲಸಮಾಡುತ್ತಿರುವವರೆಷ್ಟು ಮಂದಿ ಇದ್ದಾರೆ ? ಅವರನ್ನು ಅಬ್ಸಾರ್ಬ್ ಮಾಡುವಾಗ ಯಾವ ಕ್ರೈಟೀರಿಯ ಪ್ರಕಾರ ಮಾಡುತ್ತೀರಿ ?

ಶ್ರೀ ಬಸವರಾಜ ಮಾಗಾವಿ.—The Government Order is very long. If you will permit me, I will read.

Mr. SPEAKER.—If it is a long one, you may place it on the table of the House.

Sri BASAVARAJA MAGAVI.—I shall do that.

ಶ್ರೀ ಎಸ್. ಎಸ್. ಅರಕೇರಿ.—ಈಗ ನನ್ನ ಅನುಭವದ ಪ್ರಕಾರ ಮುಂಬಯಿ ಕರ್ಣಾಟಕದಲ್ಲಿ ಕೆಲವರು ಕೆಲಸ ಮಾಡುವವರು ರಿಟೈರ್ ಆಗುವ ಸ್ಟೇಜಿನಲ್ಲಿದ್ದಾರೆ, ಅವರಿಗೆ ವಯಸ್ಸಾಗಿದೆ, ಇಡೀ ಅವರ ಜೀವಮಾನವನ್ನು ಕೂಲಿ ಕೆಲಸದಲ್ಲಿ ಅವರು ಕಳೆದಿದ್ದಾರೆ. ಅವರಿಗೆ 10 ವರ್ಷಕ್ಕಿಂತ ಹೆಚ್ಚು ಸರ್ವಿಸ್ ಆಗಿದೆ. ಅವರು ಕೆಲವು ದಿವಸ ಟೆಂಪೊರೆರಿಯಾಗಿ ಕೆಲಸಮಾಡುವರು, ಕೆಲವು ದಿವಸ ಕೆಲಸವಿಲ್ಲದೆ ಇರುವುದು ಅವರಿಗೆ ವಯಸ್ಸಾಗಿರುವುದರಿಂದ ಮುಂದಾದರೂ ಒಂದು ಖಾಯಂ ಯೋಜನೆ ಮಾಡಿ ವರ್ಷಪೂರ್ತಿ ಅವರಿಗೆ ಕೆಲಸವಿರುವಂತೆ ಮಾಡಿ ಒಂದು ಕಡೆ ಕೆಲಸವಿಲ್ಲದಿದ್ದರೆ ಬೇರೆ ಡಿವಿಜನ್ನಿಗೆ ಕೆಲಸವಿರುವ ಕಡೆಗೆ ಕಳಿಸಿ ಕೆಲಸ ಯಾವಾಗಲೂ ದೊರೆಯುವಂತೆ ಮಾಡಿದರೆ ಒಳ್ಳೆಯದು. ಅಂಥ ಯೋಜನೆ ಮಾಡಲು ಸಾಧ್ಯವೇ ? ಅವರಿಗೆ ಕೆಲಸದ ಸೆಕ್ಯೂರಿಟಿ ಕೊಡುವಿರೇನು ?

ಶ್ರೀ ಬಸವರಾಜ ಮಾಗಾವಿ.—ಅವರಿಗೆ ಕೆಲಸ ಇರುವ ಕಡೆ ಕೊಡಲಾಗುತ್ತದೆ. 10 ವರ್ಷಗಳಿಗೆ ಮೇಲ್ಪಟ್ಟು ಕೆಲಸಮಾಡಿರುವವರ ವಿಚಾರವನ್ನು ಕೂಲಂಕಷವಾಗಿ ಪರಿಶೀಲಿಸಿ ಸರಕಾರಕ್ಕೆ ಪಟ್ಟಿ ಕಳಿಸಬೇಕೆಂದು ಚೀಫ್ ಇಂಜಿನಿಯರನ್ನು ಕೇಳಿದ್ದೇವೆ. ಬಂದನಂತರ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಜಿ. ದುಗ್ಗಪ್ಪ.—10 ವರ್ಷಕ್ಕೆ ಮೇಲ್ಪಟ್ಟು ಕೆಲಸ ಮಾಡಿರುವವರು ಎಷ್ಟು ಮಂದಿ ಇದ್ದಾರೆ ?

ಶ್ರೀ ಬಸವರಾಜ ಮಾಗಾವಿ.—ಆ ಇನ್‌ಫರ್ಮೇಷನ್ ನನ್ನಲ್ಲಿಲ್ಲ. ಎಲ್ಲರನ್ನೂ ಅಬ್ಸಾರ್ಬ್ ಮಾಡುವುದಿಲ್ಲ, ಗವರ್ನಮೆಂಟ್ ಆರ್ಡರಿನಲ್ಲಿರುವಂತೆ ಕೆಲವು ಕಂಡೀಷನ್ಸ್ ಇನಿವೆ ಅವುಗಳಿಗನುಗುಣವಾಗಿ ಇದ್ದರೆ ಅಬ್ಸಾರ್ಬ್ ಮಾಡಿಕೊಳ್ಳುತ್ತೇವೆ. ಇಂದು 1600 ಜನರನ್ನು ಅಬ್ಸಾರ್ಬ್ ಮಾಡಿಕೊಳ್ಳಬೇಕು, ಉಳಿದವರನ್ನು ಹಂತ ಹಂತವಾಗಿ ಅಬ್‌ಸಾರ್ಬ್ ಮಾಡಿಕೊಳ್ಳಬೇಕು ಎಂದಿದ್ದೇವೆ.

ಶ್ರೀ ಅಜೀಜ್ ಸೇಟ್.—ಇನ್‌ಕ್ರಿಮೆಂಟ್, ಹಾಲಿಡೇ ವೇಜಸ್, ಲಿವಿಂಗ್ ವೇಜಸ್ ಇವೆಲ್ಲ ಲೇಬರ್ ಆಕ್ಟ್ ಅನುಸರಿಸಿಕೊಡಬೇಕಾಗಿದೆ. ಆದುದರಿಂದ ಟೆಂಪೊರರಿಯಾಗಿ ಎಂದು ಇಟ್ಟುಕೊಂಡಿರುವವರಲ್ಲಿ ಹತ್ತು ವರ್ಷ ಸರ್ವಿಸ್ ಯಾರಿಗೆ ಆಗಿದೆ ಅವರನ್ನೆಲ್ಲ ಅಬ್ಸಾರ್ಬ್ ಮಾಡಲಾಗುತ್ತದೆಯೇ?

ಶ್ರೀ ಬಸವರಾಜ ಮಾಗಾವಿ.—ಹತ್ತು ವರ್ಷಕ್ಕೆ ಮೇಲ್ಪಟ್ಟವರನ್ನೆಲ್ಲ ಅಬ್ಸಾರ್ಬ್ ಮಾಡುತ್ತೇವೆ ಎಂದು ಹೇಳಲಿಲ್ಲ. ಆರ್ಡರ್‌ನಲ್ಲಿ ಕೆಲವು ಕಂಡೀಷನ್ಸ್ ಇವೆ. ಅದನ್ನು ಫುಲ್‌ಫಿಲ್ ಮಾಡಿರುವವರನ್ನು ನಮ್ಮ ಅವಶ್ಯಕತೆಗೆ ತಕ್ಕಂತೆ ಅಬ್ಸಾರ್ಬ್ ಮಾಡುತ್ತೇವೆಂದು ಹೇಳಿದ್ದೇನೆ. ಎಲ್ಲರನ್ನೂ ಅಬ್ಸಾರ್ಬ್ ಮಾಡಿದರೂ ಕೂಡ ಕೆಲಸದ ಮೇರೆ ಟೆಂಪೊರರಿ ಲೇಬರರ್ಸ್ ತೆಗೆದುಕೊಳ್ಳಬೇಕಾಗುತ್ತದೆ. It is a very essential phenomenon which we cannot avoid. So, this question is going to arise even in the future. The Government wants to be a little sympathetic to those who have put in more than 10 years. Temporary labour will have to be absorbed in future. We do not know how many people we require for a particular work. After a particular work is over, we cannot assure that they will continue in their posts.

ಶ್ರೀ ಪಿ. ವೆಂಕಟಗಿರಿಯಪ್ಪ.—ಕೂಲಿಗಳಲ್ಲಿ ಹೆಚ್ಚು ಹರಿಜನರಿರುವುದರಿಂದ, ಅವರ ಬಗ್ಗೆ ಈ ಸರ್ಕಾರಕ್ಕೆ ಇರತಕ್ಕ ಉದಾಸೀನ ಮನೋಭಾವದಿಂದ, ಇವರನ್ನು ಖಾಯಂ ಮಾಡುವುದಕ್ಕೆ ಯಾವ ಕಾರ್ಯಕ್ರಮ ತೆಗೆದುಕೊಳ್ಳಲು ಯೋಚನೆ ಮಾಡುತ್ತಿಲ್ಲ ಅಲ್ಲವೇ ?

ಶ್ರೀ ಬಸವರಾಜ ಮಾಗಾವಿ.—ಹರಿಜನರ ಬಗ್ಗೆ ಸರ್ಕಾರಕ್ಕೆ ಉದಾಸೀನ ಮನೋಭಾವವಿದೆ ಎನ್ನುವುದನ್ನು ನಾನು ಒಪ್ಪುವುದಕ್ಕಾಗುವುದಿಲ್ಲ. ಆರ್ಡರಿನಲ್ಲಿ ಹಾಕಿರುವ ಕಂಡೀಷನ್‌ಗಳನ್ನು ಯಾರು ಯಾರು ಫುಲ್‌ಫಿಲ್ ಮಾಡುತ್ತಾರೆಯೋ ಅವರೆಲ್ಲರನ್ನೂ ಅಬ್ಸಾರ್ಬ್ ಮಾಡುತ್ತೇವೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಮಾನ್ಯ ಉಪಸಚಿವರು ಗವರ್ನಮೆಂಟ್ ಆರ್ಡರ್ ವಿಷಯ ಹೇಳಿದರು. ಇದರಿಂದ ರಾಜ್ಯದ ಕೆಲವು ಭಾಗದ ನೌಕರರಿಗೆ ಮಾತ್ರ ಉಪಯೋಗವಾಗುತ್ತದೆ, ಎಲ್ಲರಿಗೂ ಸಾರ್ವತ್ರಿಕವಾಗಿ ಉಪಯೋಗವಾಗುವುದಿಲ್ಲ ಎನ್ನುವುದನ್ನು ಸರ್ಕಾರ ಗಮನಿಸಿದೆಯೇ? ಇವರನ್ನು ಖಾಯಂ ಸರ್ಕಾರಿ ನೌಕರರು ಎಂದು ಪರಿಗಣಿಸಿದರೆ ಎಷ್ಟು ಖರ್ಚಾಗುತ್ತದೆ, ಪೆನ್‌ಷನ್ ಮುಂತಾದ್ದು ಎಷ್ಟಾಗುತ್ತದೆ ಎನ್ನುವುದನ್ನು ಸರ್ಕಾರ ಪರಿಶೀಲನೆಗೆ ತೆಗೆದುಕೊಂಡಿದೆಯೇ ?

ಶ್ರೀ ಬಸವರಾಜ ಮಾಗಾವಿ.—ಇವರನ್ನು ಅಬ್ಸಾರ್ಬ್ ಮಾಡಿದ ಮೇಲೆ ಕೂಡ ಅವರಿಗೆ ಪೆನ್‌ಷನ್ ಸೌಲಭ್ಯವಿರುವುದಿಲ್ಲ, ಅವರಿಗೆ ಗ್ರಾಚುಯಿಟಿ ಮಾತ್ರ ದೊರೆಯುತ್ತದೆ. ಕೆಲವು ಭಾಗಗಳಿಗೆ ಮಾತ್ರ ಇದು ಅನ್ವಯವಾಗುತ್ತದೆ ಎನ್ನುವುದನ್ನು ನಾನು ಒಪ್ಪಿಕೊಳ್ಳುವುದಿಲ್ಲ. ಆಗಲೇ ಹೇಳಿದ ಹಾಗೆ ಪಬ್ಲಿಕ್ ವರ್ಕ್ಸ್ ಇಲಾಖೆಗೆ ಸಂಬಂಧಪಟ್ಟಂತೆ ಇಂಟಿಗ್ರೇಟೆಡ್ ಏರಿಯಾಸ್‌ನಲ್ಲಿ ಬೇರೆ ಬೇರೆ ಕಾಯಿದೆಗಳಿದ್ದು, ಅವೆಲ್ಲವನ್ನೂ ಸಮೀಕರಣ ಮಾಡಿ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್ ಕೋಡ್ ವಾಲ್ಯೂಂ ಒಂದರ ಕೆಳಗೆ ಎಲ್ಲವನ್ನೂ ಒಂದೇ ರೀತಿ ಮಾಡಿದ್ದೇವೆ. ಅದರ ಪ್ರಕಾರ ಯಾರು ಯಾರು ನಾನು ಹೇಳಿದ ಗವರ್ನ್‌ಮೆಂಟ್ ಆರ್ಡರ್ ಪ್ರಕಾರ ಎಲಿಜಿಬಲ್ ಆಗುತ್ತಾರೆ ಅವರೆಲ್ಲರನ್ನೂ ಅಬ್‌ಸಾರ್ಬ್ ಮಾಡುವುದಕ್ಕೆ ಬರುತ್ತದೆ. ಕೆಲ ಕೆಲವು ಭಾಗಕ್ಕೆ ಮಾತ್ರ ಅನುಕೂಲವಾಗುತ್ತದೆ ಎಂದು ಹೇಳುವುದು ಅಷ್ಟು ಸರಿಯಲ್ಲ.

ಶ್ರೀ ಬಿ. ದೊಡ್ಡಬೋರೇ ಗೌಡ.—11,867 ಜನ ಕೂಲಿಯವರನ್ನು ನೇಮಕ ಮಾಡಿಕೊಂಡಿರುವುದರಲ್ಲಿ 1600 ಹುದ್ದೆಗಳನ್ನು ನಿವೃತ್ತಿ ವೇತನ ಪಡೆಯುವ ಕ್ರಮವಾದ ಸಿಬ್ಬಂದಿ ವರ್ಗದವರನ್ನಾಗಿ ಪರಿವರ್ತಿಸಲಾಗಿದೆ ಎಂದುಹೇಳಿದ್ದಾರೆ. ನಿವೃತ್ತಿ ವೇತನ ಕೊಡದೆ ಹೋದರೆ, ಸಾಮಾನ್ಯವಾಗಿ ಕೂಲಿ ಮಾಡುವಂಥ ಜನ, ವಯಸ್ಸಾದಮೇಲೆ ಯಾವ ರೀತಿ ಜೀವನ ಮಾಡಬೇಕು ? ಮಂಡ್ಯ ಡಿವಿಜನ್‌ನಲ್ಲಿ ಮೂರು ತರಹ ಆಳುಗಳಿಗೆ ವೇತನ ಕೊಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಬಸವರಾಜ ಮಾಗಾವಿ.—ಈ ಜನರಿಗೆ ನಿವೃತ್ತರಾದಮೇಲೆ ಪೆನ್‌ಷನ್ ಸಿಕ್ಕುವುದಿಲ್ಲ, ಗ್ರಾಚುಯಿಟಿ ಮಾತ್ರ ದೊರೆಯುತ್ತದೆ. ಮಂಡ್ಯ ಡಿವಿಜನ್ ವಿಚಾರವಾಗಿ ಪ್ರತ್ಯೇಕ ಪ್ರಶ್ನೆ ಕೇಳಿದರೆ ಅದಕ್ಕೆ ಉತ್ತರ ತರಿಸಿಕೊಡಬಹುದು.

ಶ್ರೀ ಬಿ. ಎನ್. ಪಾಟೀಲ್.—ವರ್ಕ್ ಇನ್‌ಸ್ಪೆಕ್ಟರ್ ಎಂದು ಅಪಾಯಿಂಟ್ ಮಾಡಿದರು. ಅವರಿಗೆ ತಿಂಗಳಲ್ಲಿ 29 ದಿನ ಮಾತ್ರ ಸಂಬಳ ಸಿಕ್ಕುತ್ತದೆ. ಬಿದರೆ ಜಿಲ್ಲೆಯಲ್ಲಿ ಇಂಥ ಕೇಸುಗಳಿವೆ. ಅವರಿಗೆ ತಿಂಗಳು ಪೂರ್ತಿಯಾಗಿ ಸಂಬಳ ಕೊಡುವ ಆಶ್ವಾಸನೆಯನ್ನು ಕೊಡುತ್ತಾರೆಯೋ ? ಸರ್ಕಾರ ಮಾಡಿರುವ ರೂಲ್ಸ್ ಪ್ರಕಾರ 10 ವರ್ಷ ಸರ್ವಿಸ್ ಆದವರಿಗೆ ಮಾತ್ರ ಖಾಯಂ ಕೆಲಸ ಕೊಡುತ್ತಾರೆ. ಇಲ್ಲದವರಿಗೆ ಇಲ್ಲ. ಈಗ ಕೆಲಸ ಮಾಡುತ್ತಿರುವವರನ್ನು ಕೆಲಸದಿಂದ ತೆಗೆಯುವುದಿಲ್ಲ ಎಂದು ಆಶ್ವಾಸನೆಯನ್ನು ಕೊಟ್ಟಿರುವುದಾಗಿ ತಿಳಿದುಕೊಳ್ಳೋಣವೇ ?

ಶ್ರೀ ಬಸವರಾಜ ಮಾಗಾವಿ.—ಮಾನ್ಯ ಸದಸ್ಯರು 29 ದಿನಗಳ ಸಂಬಳ ಕೊಡುತ್ತಾರೆಯೋ ಎನ್ನುವ ವಿಷಯವನ್ನು ಪ್ರಶ್ನೆಯಲ್ಲಿ ಕೇಳಿದ್ದರಿಂದ ಅದರ ಬಗ್ಗೆ ನಾನು ಖಚಿತವಾಗಿ ತಿಳಿದುಕೊಂಡಿದ್ದೇನೆ. ಎಷ್ಟು ದಿವಸ ಅವರು ಕೆಲಸ ಮಾಡುತ್ತಾರೆಯೋ ಅಷ್ಟು ದಿವಸಗಳಿಗೆ ಸಂಬಳ ಅವರಿಗೆ ಕೊಡಲಾಗುತ್ತದೆ.

ಹತ್ತು ವರ್ಷಕ್ಕೆ ಮೇಲ್ಪಟ್ಟಿರುವವರನ್ನೆಲ್ಲ ಅಬ್ಸಾರ್ಬ್ ಮಾಡುತ್ತೇವೆಂದು ಹೇಳಲಿಲ್ಲ. ಅಬ್ಸಾರ್ಬ್ ಮಾಡುವುದಕ್ಕೆ ವೇಕೆನ್ಸಿ ಬೇಕಾಗುತ್ತದೆ. ಅವರು ಕೆಲವು ಕಂಡೀಷನ್‌ಗಳನ್ನು ಫುಲ್‌ಫಿಲ್ ಮಾಡಬೇಕಾಗುತ್ತದೆ. ಮಿನಿಮಂ ವೇಜಸ್ ಆಕ್ಟ್ ಇದಕ್ಕೆ ಅನ್ವಯವಾಗುವುದಿಲ್ಲ. ಟೆಂಪೊರರಿ ಕೂಲಿಗಳನ್ನು ತೆಗೆದುಕೊಳ್ಳುವ ಮುಂಚೆ ಪ್ರಿವೇಲಿಂಗ್ ರೂಲ್ಸ್ ಏನಿರುತ್ತವೆ ಅದರ ಪ್ರಕಾರ ತಗೆದುಕೊಳ್ಳುತ್ತಿದ್ದಾರೆ.

Mr. SPEAKER.—I put question No. 426

Exploitation of cultivators by watandars

426. Sri A. R. PANCHAGAVI (Arbhavi).—

Will the Minister for Revenue be pleased to state :—

(*a*) whether it is a fact that occupancy price and conversion charges for making the land partible and alienable (*i e*, full raitwar) are being recovered in respect of all lands, shown as paragana watans in the revenue records of the Bombay Karnataka Area ;

(*b*) whether the Government has tried to ascertain the extent of lands where the paragana watan grant is of the soil and not of revenue only ;

(*c*) whether it is a fact that in some cases of grant of revenue, only Government had to refund the O. P. recovered from occupants in possession ;

(*d*) whether Government is aware that in case of entire villages granted as paragana watans, it was only grant of revenue ; as there were occupants even before the grant and as such occupants are owners having all rights of raitwar and need not have to pay any O. P. ;

(*e*) whether Government is aware that in several cases, the watandars have recovered O. P. from occupants and have the same credited in their own (Watandars) name and got lands regranted in their own name and have thus exploited the poor cultivators ;

(*f*) whether Government is aware that in most cases, 26 times or even 52 times the land revenue is recovered from cultivators in addition to the rent from 1956 and cultivators are thus harassed and made to come to office several times ;

(*g*) whether Government is aware that due to such harassment, occupants are not able to get development loan and derive other benefits and thus cultivation has suffered ;

(*h*) the steps Government intends to take to redress the grievances of such cultivators and bring them on par with Raitwar Occupants ?

Sri H. V. KOUJALGI (Minister for Revenue).—

(*a*) Yes.

(*b*) The question was settled long ago when the Hereditary offices Act, 1874 came in force in Bombay State.

(*c*) Yes, in one case.

(*d*) No.

(*e*) No such cases have been brought to the notice of Government.

(*f*) In those cases where O.P. was not credited and grant of land obtained within the permitted time, the land was treated as Government land and rent was recovered from 1st May 1956 up to the date of grant

(SRI H. V. KOUJALGI)

at the rates permissible under B.T. and A.L. Act, Government is not aware of any harassment.

(*g*) Does not arise in view of item (*f*) above.

(*h*) The lands vested in Government and still remaining to be granted on account of non-payment of occupancy price by below the line kabjedars before 26th January 1969 are to be disposed of according to the New Land Grant Rules. Other vested lands in respect of which occupancy price has been paid are being disposed of according to law.

MR. SPEAKER.—There are no supplementaries. Then next question No. 462.

Appeals against enhancement of Compensation in Acquisition Cases of Mangalore Harbour

462. SRI P. V. AITHALA (Suratkal.)—

Will the Minister for Law, Labour and Parliamentary Affairs be pleased to state:—

(*a*) the number of applications under Section 18 of the Land Acquisition Act decided by the II-Additional Civil Judge of Mangalore, South Kanara relating to the acquisition of land for the Mangalore Harbour Project in which enhancement of compensation has been ordered by the said Court in 1968 and 1969 up to the latest convenient date ;

(*b*) of the cases referred to in (*a*) above, in how many the State preferred appeals against the enhancement and the number of cases in which appeals were not preferred against the enhancement ;

(*c*) the number of appeals filed against the orders for the grant of enhanced compensation where the quantum of enhancement granted is less than (i) Rs. 1,000 and (ii) Rs. 500 ;

(*d*) whether it is a fact that in every case in which the said Civil Court ordered enhancement of compensation under section 18, the Special Deputy Commissioner (Harbour and Railways), Mangalore has been recommending to the Government to prefer appeals irrespective of whether the amount of compensation enhanced is a few hundred Rupees ;

(*e*) whether it is the policy of the Government to prefer appeals against all cases of enhancement irrespective of the amount involved ?

Sri K. PUTTASWAMY (Minister for Law, Labour and Parliamentary Affairs.)—

(*a*) *1968* *1969* (*Up to the end of 1969*)
85 77

(*b*)—

	Year	No. in which appeals preferred.	No. in which appeals were not preferred
(i)	1968	80	5
(ii)	1969	65	12

(*c*)—

	Year	No. of appeals preferred where quantum of enhanced compensation is less than Rs. 1,000.	No. of appeals preferred where quantum of compensation is less than Rs. 500.
(i)	1968	Nil	9
(ii)	1969	1	5

(*d*) No.

(*e*) No. Appeals are preferred only in such cases where the quantum of enhancement of compensation awarded by courts is considered to be opposed to law, facts and probabilities of the case.

Sri P. V. AITHALA.—We find from the statement given that out of 80 cases decided in 1968 appeals were not filed in 5 cases only whereas in 1969 against 65 cases appeals were not filed only in 12 cases. Were the appeals not filed because they could not be filed within the time limit prescribed by law ?

Sri K. PUTTASWAMY.—That may not be correct.

Sri P. V. AITHALA.—Is it just and equitable that appeals should be filed even in cases where the court has granted enhancement to the extent of less than Rs. 500, especially when the acquisition is under the Land Acquisition Act which is an expropriation Act ?

Sri K. PUTTASWAMY.—It all depends on the extent of land involved Even though the extent of land is small, on account of the increase being considered rather not enough, appeals are preferred.

Sri K. H. RANGANATH.—May I know the time consumed for the decision in respect of 80 cases in 1968 and in respect of 65 cases in 1968?

Sri K. PUTTASWAMY.—I am not able to give that information.

Sri P. V. AITHALA.—May I know whether the Law Department is scrutinising every recommendation that is received from the Special Deputy Commissioner before according sanction or whether it is an administrative sanction that is being simply given by the Law Department?

Sri K. PUTTASWAMY.—After the Law Department goes through the judgment and considers it, decision is taken whether to prefer an appeal or not.

3-00 P.M.

Beating of a Municipal Councillor and M. E. S. Worker in Belgaum

478. Sri B. B. SAYANAK (Belgaum).—

Will the Chief Minister be pleased to state :—

(*d*) the departmental supervision provided for collection of sales tax over the sales of foodgrains ;

(*e*) since how long collection of arrears of sales tax on sales of foodgrains was overlooked ;

(*f*) the reasons for not demanding sales tax every year, so far ;

(*g*) whether the Government intends to take immediate action to waive such arrears of sales tax in the interest of service co-operative societies ?

Sri RAMAKRISHNA HEGDE (Minister for Finance, Planning and Youth Welfare).—

(*a*) Yes.

(*b*) Yes. Under the Sales Tax Law tax is leviable even though the seller does not collect it from his buyers.

(*c*)	*Fine*	*Med. Fine*	*Medium*	*Coarse*
Profit allowed per quintal of food-grains.	3-00	3-00	3-00	3-00
Sales tax leviable at 1½ per cent on raw rice.	1.58	1.50	1.44	1.41
Sales tax leviable at 1½ per cent on Boiled Rice.	1.56	1.49	1.43	1.40

(however this sales tax is to be separately collected and paid and the profit allowed would not be affected).

(*d*) The Food Department had permitted the retail dealers to collect sales tax from their customers in addition to the price and profit fixed by it.

(*e*) Collection of sales tax was never overlooked.

(*f*) Failure of the societies to get themselves registered and submit returns until such failure is detected by the Department is responsible for their not being assessed promptly.

(*g*) There is no proposal to waive the tax due from co-operative societies.

Notice *re*: Naxalites' activities in the State

Sri N. A. CHANNE GOWDA.—Sir, I had sent a call attention notice regarding Naxalites.

ಅಧ್ಯಕ್ಷರು.—ಆಮೇಲೆ ವಿಚಾರ ಮಾಡಿ.

ಶ್ರೀ ಎನ್. ಎ. ಚನ್ನೇಗೌಡ.—ನಾನು ಗಮನ ಸೆಳೆಯುವ ಸೂಚನೆಯ ನೋಟೀಸನ್ನು ಕೊಟ್ಟಿದ್ದೆ. ತಮ್ಮ ಆಫೀಸಿನಿಂದ ಒಂದು ಕಾಗದ ಬಂತು. ಆಮೇಲೆ ಅದನ್ನು ಇಲ್ಲಿ ವಿಚಾರ ಮಾಡ ಬಾರದೆಂದು ನನ್ನ ಕೈಯಲ್ಲಿ ಬರೆಸಿಕೊಂಡಿದ್ದಾರೆ. ಮೇಲ್ಮನೆಯಲ್ಲಿ ಇದರ ಬಗ್ಗೆ ಸರ್ಕಾರದವರು ಉತ್ತರ ಮಾಡಿದ್ದಾರೆ. ಕೇರಳ ಮೈಸೂರು ಬಾರ್ಡರ್ ವಿಷಯ ಮಾತನಾಡಿದ್ದಾರೆ. ಆದ್ದರಿಂದ ಈ ಸಭೆಯಲ್ಲಿ ನನ್ನ ಗಮನ ಸೆಳೆಯುವ ಸೂಚನೆಯ ಬಗ್ಗೆ ಏಕೆ ತಾರತಮ್ಯ ಮಾಡಿದ್ದೀರಿ ?

Mr. SPEAKER.—The question was about the border between Kerala and Mysore and whether there were activities of Naxalites. After certain discussion the hon. Member agreed not to press his call attention notice. The matter rests there. Now it is wrong on the part of the hon. Member to mention things which were confidentially disclosed to him.

Sri Siddaveerappa seeking permission to have a personal explanation *re* : accounts of Vidhana Soudha Construction

Sri H. SIDDAVEERAPPA.—Sir, I rise to make a personal explanation arising out of replies to starred Question No. 507 by Sri Mahadev Bankar.

Mr. SPEAKER.—Should not the hon. Member give me notice in writing ?

Sri H. SIDDAVEERAPPA.—Because this question has just now come up, I do not think there is any necessity of notice. Kindly permit me to say a few words.

The point is at that relevant point of time in July 1956 I was a member of the Mysore Government.

Mr. SPEAKER.—Is there any allegation against the hon· Member.?

Sri H. SIDDAVEERAPPA.—He has stated about the then Government. Government is not an impersonal body ; Government is a corporate body consisting of some individuals out of which I was also a member.

Mr. SPEAKER.—The hon. Member may please give his points in writing. I shall consider and then permit him.

Sri H. SIDDAVEERAPPA.—I do not think it is necessary to give in writing. Kindly permit me to raise it here because if the matter is allowed to be left like that, it will gather further dust. What I am now saying is that in July 1956 Sri Hanumanthaiah was the Chief Minister of Mysore when this Vidhana Soudha was constructed. At that time a special portfolio was created which was exclusively under the jurisdiction of Sri Hanumanthaiah. The amount that was spent for it was sanctioned by the Legislature. At that time some body raised a doubt. I do not want to mention names now. I would only say that there was some kind of trouble about the money spent.

Mr. SPEAKER.—I am very sorry. Hon. Member is making a statement. How is it relevant here ?

Sri H. SIDDAVEERAPPA.—When that doubt was raised, the Government appointed a Committee.

Sri K. H. SRINIVAS.—I rise to a point of order. ಈ ಪ್ರಶ್ನೆ ಇರತಕ್ಕಂಥಾದ್ದು ವಿಧಾನಸೌಧದ ಬಗ್ಗೆ. ಆ ವಿಷಯದಲ್ಲಿ ಒಂದು ಎನ್‌ಕ್ವೈರಿ ರಿಪೋರ್ಟ್ ಆಗಿತ್ತು. ಅದರ ಎನ್‌ಕ್ವೈರಿ ವಿಚಾರ ಕೇಳಿದ್ದಾರೆ. ಈ ಒಂದು ಪ್ರಶ್ನೆಯಲ್ಲಾಗಲೀ, ಉತ್ತರದಲ್ಲಾಗಲೀ ಬಹುಮುಖ್ಯವಾಗಿ ಮಾನ್ಯ ಶ್ರೀ ಸಿದ್ಧವೀರಪ್ಪನವರ ಬಗ್ಗೆ ಯಾವ ಒಂದು ಎಕ್ಸ್‌ಪ್ಲನೇಷನ್ ಬರಲಿಲ್ಲ. ಯಾವ ಅಲಿಗೇಷನ್ ಕೂಡ ಬರಲಿಲ್ಲ. ಹಿಂದಿದ್ದ ಸರ್ಕಾರದ ಬಗ್ಗೆ ಉತ್ತರದಲ್ಲಾಗಲೀ ಪ್ರಶ್ನೆಯಲ್ಲಾಗಲಿ ಯಾವ ವಿಧವಾದ ಅಲಿಗೇಷನ್ಸ್ ಬಂದುದು ಈ ಸಭೆಯ ಗಮನಕ್ಕೆ ಬರಲಿಲ್ಲ. ಈ ಸರ್ಕಾರದಲ್ಲಿ ಅವರು ಇದ್ದರು ಎಂಬ ಕಾರಣದಿಂದ ಅವರು ಹೇಳಿದ್ದು ರೂಲ್ಸ್ ಪ್ರಕಾರ ಸರಿಯಾಗಿಲ್ಲ.

ಶ್ರೀ ಅಜೀಜ್ ಸೇಟ್.—ಆ ಪಾಯಿಂಟ್ ಆಫ್ ಆರ್ಡರ್‌ನಲ್ಲಿ ಉಪ್ಪು ಇಲ್ಲ, ಕಾರ ಇಲ್ಲವೆಂದು ಹೇಳುತ್ತೇನೆ.

Mr. SPEAKER.—The point raised is, under what circumstances personal explanation can be permitted. According to Rules personal explanation can be permitted only when there is an allegation or some aspersion cast or some misunderstanding created out of a statement made here. As far as I could see, I do not find any allegation against Sri Siddaveerappa or against Sri K. Hanumanthaiah or against the Government or against anybody. I, therefore, think that there is no scope for personal explanation and so I request Sri Siddaveerappa not to proceed further.

Sri H. SIDDAVEERAPPA.—Whether there is any personal allegation or not, it is likely to lead misapprehension in the mind of the public.

Mr. SPEAKER.—Let the hon. Member give me notice and I will consider it.

Sri H. SIDDAVEERAPPA.—I have completed half of it and I shall complete it within half a dozen sentences.

Mr. SPEAKER.—I would request the Leader of the Congress (R) not to embarass me.

Sri H. SIDDAVEERAPPA.—This allegation is against the Government that was in existence here in the year 1956. The responsibility of the Government is joint and several. I want to make a personal explanation under rule 293.

Mr. SPEAKER.—The scope of rule 293 is limited. A personal explanation arises if there is some allegation against the hon. Member or aspersions direct or indirect, cast on him.

Sri H. SIDDAVEERAPPA.—The allegation is in relation to the various aspects of the state of accounts of the Vidhana Soudha construction. It was constructed when I was a member of the Cabinet.

Mr. SPEAKER.—Let the hon. Member give notice and I shall consider it.

Sri H. SIDDAVEERAPPA.—This question has been raised *mala fide* on the floor of the House. Therefore, I am bound to give personal explanation. This is designedly put after 14 years. I want the Hon. Chief Minister to place all the records on the table of the House so that this question may be looked into. That Government was good enough to appoint a committee against itself.

[Mr. Chairman (Sri D. M. Siddaiah) in the Chair]

Calling attention to a Matter of Urgent Public Importance *re* : difficulties experienced by workers in the twin houses at Mahalakshmipuram Extension, Bangalore.

Sri M. H. JAYAPRAKASH NARAYAN (Sirsi).—Sir, I call the attention of the Minister for Transport to the difficulties experienced by the workers residing in the twin houses at Mahalakshmipuram Extension, Bangalore.

† K. PUTTASWAMY (Minister for law, Labour and Parliamentary Affairs).—Sir, on behalf of the Minister for Transport I wish to make the following statement :

84 twin houses *i. e.* 168 houses have been constructed under the subsidised Industrial Housing scheme for Industrial workers at Mahalakshmipuram extension at Bangalore at a cost of Rs. 8,96,448. The cost per house works out to Rs. 5,336. All the houses have been allotted to the Industrial workers serving in various factories on rental basis. The houses are under occupation since July 1968. The rent per house is fixed at Rs. 32 per month in accordance with the Mysore Housing Board Rules 1964. The rent is considered to be reasonable. It has been represented that these houses are in a dilapidated condition and that there is every danger some of the houses collapsing at any time in the rainy season. This representation is not correct. Due to continuous rains for about 15 to 20 days in 1959, there was dampness in some of the houses and there was slight 'leakage' in some houses. After those defects were noticed, action has been taken by the Housing Board to get them rectified. There was a little delay in getting the defects set right as it required some time for notices to be issued to the contractors and for them to undertake errection of the works. There is no danger to life and property of the occupants.

Some of the occupants of the houses have in fact, submitted memoranda to Government for allotment of these houses on hire purchase system. If the houses were in a delapidated condition these allottees might not have desired to have these houses on hire-purchase system and to acquire ownership over the houses.

As these houses were constructed for allotment on rental basis, the allottees have been continued on rental basis only. There is great demand for allotment of these houses on rental basis from other workers.

Sri M. H. JAYAPRAKASH NARAYAN.—The Hon. Minister stated that the representation made by the member is not correct. ಮಳೆಗಾಲದಲ್ಲಿ ಗೋಡೆ ಬಿದ್ದು ಕೆಲವು ಮನೆಗಳಲ್ಲಿ ರೇಡಿಯೋ ಮತ್ತು ಇತರ ಸಾಮಾನುಗಳು ಒಡೆದು ಹೋದದ್ದು ನಿಜವೇ? ಇದರ ಮೇಲೆ ಹೌಸಿಂಗ್ ಬೋರ್ಡಿನವರು ರಿಪೇರಿಗಾಗಿ ವ್ಯವಸ್ಥೆ ಮಾಡತಕ್ಕ ರೀತಿಯಲ್ಲಿ

(SRI M. H. JAYAPRAKASH NARAYAN)

ಎಸ್ಟಿಮೇಟ್ ಮಾಡಿರಲಿಲ್ಲವೇ ? ಜೊತೆಗೆ ಮನೆಗಳು ಡಿಲಾಪಿಡೇಟೆಡ್ ಕಂಡೀಷನ್‌ನಲ್ಲಿ ಇದೆ ಎಂದು ಕನ್ನಡ ಪ್ರಭ ಮತ್ತು ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಆಗಿದ್ದ ನಷ್ಟವನ್ನು ಪ್ರಕಟಿಸಿ ಸರಕಾರದ ಮೇಲೆ, ಹೌಸಿಂಗ್ ಬೋರ್ಡಿನ ಮೇಲೆ ಬರೆದಿರಲಿಲ್ಲವೇ ? ಕುಂದುಕೊರತೆಗಳನ್ನು ನಿವಾರಣೆ ಮಾಡುವುದಕ್ಕೆ ಏನು ವ್ಯವಸ್ಥೆ ಮಾಡಿದ್ದೀರಿ ?

Sri K. PUTTASWAMY.—Perhaps it all depends upon what meaning the hon. Member attaches to the words 'dilapidated condition.' As far as my information goes, no wall had collapsed. I have already made it very clear in my statement that there was dampness and leakage and that had been set right.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಮತ್ತು ಕನ್ನಡ ಪ್ರಭದಲ್ಲಿ ಆಗಿರತಕ್ಕ ನಷ್ಟಗಳನ್ನು ಪ್ರಕಟಣೆ ಹೊರಡಿಸಿದ್ದು, ಲೇಖನಗಳು ಬರೆದಿದ್ದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಪುಟ್ಟಸ್ವಾಮಿ.—ಈ ವಿಚಾರ ಸರಕಾರದ ಗಮನಕ್ಕೆ ಬಂದಿದೆ.

Police atrocities in Shimoga

Sri G. CHANDRAKANT (Bidar).—Sir, I have to represent a very important matter. I have received a telegram from Shimoga with regard to the police atrocities committed against two Municipal Councillors. When a crowd of people went to the police station, a lathi charge was made on them aud firing was also resorted to.

Mr. CHAIRMAN.—I request the hon.Member to give written notice and it will be taken up the next day.

Sri G. CHANDRAKANT.—Sir, this is a very urgent and important matter, and therefore I request that immediate action may be taken to put a stop to tho police atrocities.

(The hon. Member passed on the telegram to the Chairman)

Steel Quota—Misuse of

† **ಶ್ರೀ ಎಚ್. ಎನ್. ನಂಜೇಗೌಡ** (ಅರಕಲಗೂಡು).—ಮಾನ್ಯ ಅಧ್ಯಕ್ಷರೇ, ನಾನು ರೂಲ್ 293ನೇ ಪ್ರಕಾರ ಒಂದು ನೋಟೀಸನ್ನು ಕೊಟ್ಟಿದ್ದೆ. ಅದಕ್ಕೆ ಸ್ಪಷ್ಟೀಕರಣ ನೀಡಬೇಕು. 25ನೇ ದಿನಾಂಕ ಕೈಗಾರಿಕೆ ಬೇಡಿಕೆಗಳ ಮೇಲೆ ಚರ್ಚೆ ಮಾಡಿದಂಥ ಕಾಲದಲ್ಲಿ ನನ್ನ ಗ್ರಹಚಾರ ವಶಾತ್ ಮಾನ್ಯ ಶ್ರೀ ಶಿವಪ್ಪನವರು ಇರಲಿಲ್ಲ.

Sri K. H. PATIL.—It is a personal explanation. He could give it later.

ಶ್ರೀ ಎಚ್. ಎನ್. ನಂಜೇಗೌಡ.—ನಾನು ಮಾತನಾಡಿದಂಥ ಕಾಲದಲ್ಲಿ ಮಾನ್ಯ ಶ್ರೀ ಶಿವಪ್ಪನವರು ಈ ಸಭೆಯಲ್ಲಿ ಉಪಸ್ಥಿತರಾಗಿರಲಿಲ್ಲ ಅವರು ರಿಕಾರ್ಡ್‌ನ್ನು ಸರಿಯಾಗಿ ನೋಡಲಿಲ್ಲ. ಅದನ್ನು ನೋಡಿದ್ದರೆ ಅವರು ಆ ಮಾತನ್ನು ನನ್ನ ಬಗ್ಗೆ ವ್ಯಕ್ತಪಡಿಸುತ್ತಾ ಇರಲಿಲ್ಲ. It is a mischievous allegation, I want to challenge that ಎಂದು ಅವರು ಹೇಳಿದರು. ಯಾವಾಗಲೂ

ನಾನು ಅಂತಹ ಎಲಿಗೇಶನ್ ಮಾಡತಕ್ಕ ಪ್ರಯತ್ನವನ್ನು ಮಾಡಲಿಲ್ಲ. ನಾನು ಅಂತಹ ಮನುಷ್ಯನಲ್ಲ. ಕಾರಣವೇನೆಂದರೆ ಮಾನ್ಯ ಶ್ರೀ ಶಿವಪ್ಪನವರ ಬಗ್ಗೆ ಅನುಮಾನ ಪಡತಕ್ಕ ಅವಕಾಶ ಇರಲಿಲ್ಲ. ಅವರು ರಿಪೋರ್ಟ್ ನೋಡದೆ ಈ ಮಾತನ್ನು ಹೇಳಿದ್ದಾರೆ. ನಾನು ಅವತ್ತು ಹೇಳಿದ್ದು ಸ್ಟೇನ್ ಲೆಸ್ ಸ್ಟೀಲ್ ಕೋಟಾವನ್ನು 12 ಜನರಿಗೆ ಹಾಸನದಲ್ಲಿ ಕೊಟ್ಟಿದ್ದಾರೆ, 4 ಜನರಿಗೆ ಅರಸೀಕೆರೆಯಲ್ಲಿ ಕೊಟ್ಟಿದ್ದಾರೆ. 3 ಜನರಿಗೆ ಚನ್ನಪಟ್ಟಣದಲ್ಲಿ ಕೊಟ್ಟಿದ್ದಾರೆ. ಅದನ್ನು ಪುಷ್ಟೀಕರಿಸಿ ಇವತ್ತು ನಾನು ಮಾತನಾಡುವುದಕ್ಕೆ ನಿಂತಿದ್ದೇನೆ. ನಾನು ಏನು ಹೇಳಿದ್ದು ಅಂದರೆ, ಅವರಿಗೆ ಕೊಟ್ಟಿರತಕ್ಕ ಕೋಟಾಗಳು ದುರುಪಯೋಗವಾಗಿವೆ ಎಂಬುದಾಗಿ. ಕೋಟಾ ಕೊಡಬೇಕಾದರೆ, ಲೈಸೆನ್ಸ್ ಕೊಡಬೇಕಾದರೆ ಒಂದು ಪ್ರೊಸೀಜರ್ ಇದೆ, ಒಂದು ಪದ್ಧತಿ ಇದೆ. ಮೊದಲು ಅಸಿಸ್ಟೆಂಟ್ ಡೈರೆಕ್ಟರ್ ಆಫ್ ಕಾಮರ್ಸ್ ಅವರು ಸ್ಟೇನ್‌ಲೆಸ್ ಷೀಟುಗಳನ್ನು ಉಪಯೋಗಿಸಿ ಅಲ್ಲಿ ಏನೇನು ಮಾಡಬೇಕೋ ಅದನ್ನು ಮಾಡಲು ಅಲ್ಲಿ ಮೆಷನರಿ ಇಟ್ಟಿದ್ದಾರೆಯೋ ಎಂದು ಸರ್ಟಿಫೈ ಮಾಡಿದ ಮೇಲೆ ಕೋಟಾ ಕೊಡುವುದು ವಾಸ್ತವ. ಆದರೆ ಈಗ ಅವರಿಗೆ ಕೋಟಾ ಕೊಟ್ಟಿರುವುದು ಬೋಗಸ್. ಆದ್ದರಿಂದ ಅದನ್ನು ಜನರು ದುರುಪಯೋಗಪಡಿಸುತ್ತಿದ್ದಾರೆ. ಕಾನೂನಿನಲ್ಲಿರುವ ಹಾಗೆ ನಡೆಯಬೇಕು. ಅದಕ್ಕೆ ಅಡ್ಡಿಯಾಗಿ ನಡೆಯುವುದಕ್ಕೆ ಯಾರಿಗೂ ಅವಕಾಶವಿಲ್ಲ. ಕಾನೂನು ಮೀರಿ ಯಾವುದೇ ವ್ಯವಹಾರ ಮಾಡಬೇಕಾದರೆ ಅಲ್ಲಿ ಲಂಚ ಹೊಡೆಯುತ್ತಿದ್ದಾರೆ, ಅಥವಾ ಇನ್ನು ಯಾರದೋ ಪ್ರಭಾವಕ್ಕೆ ಒಳಗಾಗಿ ಈ ರೀತಿ ಕೊಟ್ಟಿದ್ದಾರೆಂದು ನನಗೆ ಕಾಣುತ್ತದೆ.

ನಾನು ಇವತ್ತೂ ಕೂಡ ಯಾರನ್ನೂ ಸವಾಲು ಮಾಡುವುದಕ್ಕೆ ಹೋಗುವುದಿಲ್ಲ. 19 ಜನರಿಗೆ ಸ್ಟೇನ್‌ಲೆಸ್ ಸ್ಟೀಲ್ ಕೋಟಾವನ್ನು ಕೊಟ್ಟಿದ್ದಾರೆ. ಕೊಟ್ಟಿರುವ ಕೋಟಾವನ್ನು ಇವತ್ತು ಸರಿಯಾದ ರೀತಿಯಲ್ಲಿ ಉಪಯೋಗ ಮಾಡಿದ್ದಾರೆಯೋ ಎಂಬುದನ್ನು ಮಾನ್ಯ ಶ್ರೀ ಶಿವಪ್ಪನವರೇ ತನಿಖೆ ನಡೆಸಲಿ, ಮಾನ್ಯ ಶ್ರೀ ಅಪ್ಪಣ್ಣನವರು ನಡೆಸಲಿ. ಎಲ್ಲಾದರೂ ಸದುಪಯೋಗವಾಗಿದ್ದರೆ, ನಾನು ರಾಜೀನಾಮೆ ಕೊಡುತ್ತೇನೆ. ದುರುಪಯೋಗವಾಗಿದ್ದರೆ ಅವರು ರಾಜೀನಾಮೆ ಕೊಡಲಿ. ಬೋಗಸ್ ಲೈಸೆನ್ಸ್ ಕೊಟ್ಟವರ ಮೇಲೆ ಮತ್ತು ಅದನ್ನು ಯಾರು ಸರ್ಟಿಫೈ ಮಾಡಿದರೋ ಅಂತಹವರ ಮೇಲೆ ತಕ್ಕ ಕ್ರಮ ತೆಗೆದುಕೊಳ್ಳಬೇಕು ಎಂಬುದಾಗಿ ನಾನು ಹೇಳುತ್ತೇನೆ. ಅದನ್ನು ಪ್ರಾಮಾಣಿಕರಾದವರಿಗೆ ಕೊಟ್ಟಿದ್ದರೆ ನಾನು ಬೇಕಾದರೆ ರಾಜೀನಾಮೆ ಕೊಡುತ್ತೇನೆ. ಬೋಗಸ್ ಕೋಟಾ ಕೊಡುವುದಕ್ಕೆ ಯಾರ್ಯಾರು ಕಾರಣಕರ್ತರೋ ಅಂತಹ ಅಧಿಕಾರಿಗಳ ಮೇಲೆ ತಕ್ಕ ಕ್ರಮವನ್ನು ತೆಗೆದುಕೊಳ್ಳಿ. ಮಾನ್ಯ ಶ್ರೀ ಶಿವಪ್ಪನವರೇ ಸರ್ಟಿಫೈ ಮಾಡಲಿ, ಸೇಕಡ 100 ರಷ್ಟು ಸರಿಯೆಂದು ಹೇಳಲಿ, ನಾನು ರಾಜೀನಾಮೆ ಕೊಡುತ್ತೇನೆ.

Notice of Privilege motion by Sri K. H. Patil

ಶ್ರೀ ಕೆ. ಎಚ್. ಪಾಟೀಲ್.—20-3-1970 ನೇ ದಿವಸ ಅಸೆಂಬ್ಲಿಯಲ್ಲಿ ಸಹಕಾರ ವಿಷಯದ ಮೇಲೆ ಚರ್ಚೆಯಾಗುವ ಕಾಲಕ್ಕೆ ಮಾನ್ಯ ಮಂತ್ರಿಗಳಾದ ಶ್ರೀ ಪಿ. ಎಂ. ನಾಡಗೌಡರು ನನ್ನ ಮೇಲೆ ಕೆಲವು ಅಪಾದಾನೆಗಳನ್ನು ಮಾಡಿದರು. ಆ ಅಪಾದಾನೆಗಳು ಕೇವಲ ಅಪಾದಾನೆಗಳು ಅಷ್ಟೇ ಅಲ್ಲ. ಅವು ದೂರೀಪೂರಿತವಾಗಿರುವುದರಿಂದ ಈ ಸಭೆಯಲ್ಲಿ ನನ್ನ ಹಕ್ಕುಬಾಧ್ಯತೆಗೆ ಧಕ್ಕೆ ತಂದಿದ್ದಾರೆ. ಇನ್ನು 177 ನೇ ಕಾಲಂ ಪ್ರಕಾರ ಈಗಾಗಲೇ ನಾನು 21 ನೇ ತಾರೀಖಿನ ದಿವಸ ನೋಟೀಸ್ ಕೊಟ್ಟು ಪ್ರಿವಿಲೇಜ್ ಮೋಷನ್ ಮೂವ್ ಮಾಡಿದ್ದೇನೆ. ನೀವು ಹೇಳಿದ ಮಾತುಗಳು ತಪ್ಪು, ಅವನ್ನು ಇನ್ನೊಮ್ಮೆ ವಿಚಾರಮಾಡಿ, ಪರೀಕ್ಷೆಮಾಡಿ ಮಾತನಾಡಿ ಎಂದು ನಾನು ಎಚ್ಚರಿಕೆ ಕೊಟ್ಟಿದ್ದೇನೆ. 179 ನೇ ನಿಯಮದ ಪ್ರಕಾರ ಅಧ್ಯಕ್ಷರು ಪ್ರಮುಖವಾಗಿ ಒಂದಕ್ಕಿಂತ ಹೆಚ್ಚಿಗೆ ಹಕ್ಕುಬಾಧ್ಯತೆ ಪ್ರಶ್ನೆಗಳು ಬಂದಿವೆಯೋ ಎಂಬುದನ್ನು ನೋಡಬೇಕು. ಇತ್ತೀಚೆಗೆ ಅದಂಥ ಘಟನೆಗಳೇ ಮತ್ತು ಅವು ನಿಜವೇ ಎಂದು ನೋಡಬೇಕು. ಮೂರನೆಯದಾಗಿ ಇಲ್ಲಿ ಮಾತನಾಡಿರುವಂಥ ಮಾತುಗಳು ಕ್ರಿಮಿನಲ್ ಇನ್‌ಕ್ರಿಮಿನೇಷನ್ ಆಗಿರುವುದರಿಂದ, ಡಿಫಮೇಷನ್‌ಗೆ ದಾರಿ ಇದ್ದರೂ ಇದನ್ನು ಕಟ್ಟಳೆ ಮಾಡುವುದಕ್ಕೆ ಹಕ್ಕು ಇಲ್ಲದೇ ಇರುವುದರಿಂದ ನನ್ನ ಹಕ್ಕುಬಾಧ್ಯತೆ ನಿಲುವಳಿಯನ್ನು ಇಲ್ಲಿ ತರುವುದು ಒಂದೇ ದಾರಿ. ಇಲ್ಲಿ ಶ್ರೀಮಾನ್ ನಾಡಗೌಡರು ಇಲ್ಲದೇ ಇರುವಾಗ ನಾನು ಅದರ ಮೇಲೆ ಅಷ್ಟಾಗಿ ಹೇಳಬೇಕೆಂದು ಅಪೇಕ್ಷೆ ಪಡುವುದಿಲ್ಲ. ಇದನ್ನು ನಾಳೆಯ ದಿನ ವಿಚಾರಮಾಡಲು ಅವಕಾಶ ಕೊಟ್ಟರೆ ನನ್ನ ಅಭ್ಯಂತರವಿಲ್ಲ. ಈಗ ತಾವು ಕನ್‌ಸೆಂಟ್ ಕೊಟ್ಟು ನಾಳೆಯ ದಿನ ಇದನ್ನು ಮೂವ್ ಮಾಡುವುದಕ್ಕೆ ಅವಕಾಶ ಕೊಟ್ಟರೆ ಸಾಕು. 25 ಲಕ್ಷ ರೂಪಾಯಿಗಳನ್ನು ನಾನು ಎತ್ತಿಕೊಂಡು ಹೋಗಿದ್ದೇನೆಂದು ಹೇಳಿದರೆ ಹೇಗೆ? ಅಸೆಂಬ್ಲಿ ಮುಗಿದಮೇಲೆ ಅದನ್ನು

(ಶ್ರೀ ಕೆ. ಎಚ್. ಪಾಟೀಲ್)

ಮರೆಯಬಹುದು, ಇದು ನನ್ನ ಹಕ್ಕಿನ ಪ್ರಶ್ನೆ ಒಂದೇ ಅಲ್ಲ. ಜವಾಬ್ದಾರಿಯಾಗಿ ವರ್ತನೆ ಮಾಡಿದಂಥ ಮಂತ್ರಿಗಳಿಗೆ ಜವಾಬ್ದಾರಿಯುತವಾಗಿ ವರ್ತಿಸುವ ಹಾಗೆ ಮಾತನಾಡುವುದನ್ನು ನಾವು ಕಲಿಸಬೇಕು. ಇವತ್ತಿನ ದಿವಸ ನಾನು ಹಕ್ಕುಬಾಧ್ಯತೆಯ ನಿಲುವಳಿ ಸೂಚನೆಯನ್ನು ಕೊಟ್ಟಮೇಲೆ ಯಾವ್ಯಾವ ದುರಾಚಾರದ ಒತ್ತಾಯಗಳು ಸಹಕಾರಸಂಘಗಳಿಂದ ಬಂದಿವೆಯೋ ಗೊತ್ತಿಲ್ಲ. ಈಗಾಗಲೇ ಅಧಿಕಾರಿಗಳ ಕಡೆಯಿಂದ ಹಿಂದಿನ ತಾರೀಖನ್ನು ಹಾಕಿಸಿ ನಮಗೆ ಸಂಶಯ ಹುಟ್ಟಿಸುವ ಪ್ರಯತ್ನಗಳು ನಡೆಯುತ್ತಾ ಇವೆ. ಆದ್ದರಿಂದ ನನ್ನ ಈ ಹಕ್ಕು ಬಾಧ್ಯತೆಯ ನಿಲುವಳಿ ಸೂಚನೆಯನ್ನು ತಾವು ತೀವ್ರವಾಗಿ ವಿಚಾರಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

Mr. CHAIRMAN.—It is under the active consideration of the Speaker.

Mysore Electricity (Taxation on Consumption) (Amendment) Bill, 1970

(Introduction.)

Mr. SPEAKER.—I have received the following recommendation of His Excellency the Governor:

"In pursuance of clause (1) of Article 207 of the Constitution of India, I, Dharma Vira, Governor of Mysore, do hereby recommend that the Mysore Electricity (Taxation on Consumption) (Amendment) Bill, 1970, be introduced in the Mysore Legislative Assembly."

4–30 P.M.

Sri M. NAGAPPA.—On a point of order. Today is fixed for taking up non-official business. The Bill cannot be introduced today because this is Government business. Let them do it on a different day.

Mr. CHAIRMAN.—It is only just introduction. We will take up non-official business.

Sri B. RACHAIAH.—On behalf of the Chief Minister I beg to introduce the Mysore Electricity (Taxation on Consumption) (Amendment) Bill, 1970.

Mr. CHAIRMAN.—The Mysore Electricity (Taxation on Consumption) (Amendment) Bill, 1970 is introduced.

Non-official Resolution *re*: Change of Name of Mysore State as Kannada Nadu

(Debate contd.)

Mr. CHAIRMAN.—This Resolution was previously taken up on 10th September 1968. Now Sri Nanje Gowda may conclude his speech.

† ಶ್ರೀ ಎಚ್. ಎನ್. ನಂಜೇಗೌಡ.—ಮಾನ್ಯ ಅಧ್ಯಕ್ಷರೇ, ಹೋದ ಸಾರಿ ನಮ್ಮ ದೇಶಕ್ಕೆ ಕನ್ನಡ ನಾಡು ಎಂದು ಹೆಸರಿಡಬೇಕೆಂದು ಶ್ರೀಕಂಠಯ್ಯನವರು ತಂದಿದ್ದ ನಿರ್ಣಯದಮೇಲೆ ಮಾತನಾಡುತ್ತಿದ್ದೆ, ಅದಕ್ಕೆ ಶ್ರೀಮಾನ್ ಗಂಗಾಧರ್‌ರವರು ತಿದ್ದುಪಡಿ ಸೂಚಿಸಿ ಕರ್ನಾಟಕ ಎಂದು ಹೆಸರಿಡಬೇಕೆಂದು ತಿಳಿಸಿದ್ದಾರೆ. ರಾಜ್ಯಕ್ಕೆ ಯಾವುದೇ ಹೆಸರಿಡಬೇಕಾದರೂ ಕೂಡ ಒಂದು ಮನೋಭೂಮಿಕೆ-ಜನರ ಮನಸ್ಸಿನಲ್ಲಿ ತಯಾರಾಗಬೇಕು ಎಂದು ಹೋದ ಸಾರಿ ಮಾತನಾಡಿದಾಗ ಹೇಳುತ್ತಿದ್ದೆ. ಅವಾಗದೇಹೋದರೆ ಯಾವುದೇ ರೀತಿಯ ಒಂದು ನಿರ್ಣಯ ಕೈಕೊಳ್ಳುವುದಕ್ಕೆ ವಾತಾವರಣ ತಿಳಿಯಾಗಿರುವುದಿಲ್ಲ ಎಂದು ಹೇಳುತ್ತಾ ಅಂದು ನನ್ನ ಭಾಷಣ ನಿಲ್ಲಿಸಿದ್ದೆ. ಅಂದು ಪೂರ್ಣವಾಗಿ ಮನೋಭೂಮಿಕೆ ವಿಷಯವನ್ನು ಹೇಳುವುದಕ್ಕಾಗಲಿಲ್ಲ. ಇಂದು ನೇರವಾಗಿ ವಿವಿಧ ಪ್ರದೇಶ ಜನರಲ್ಲಿ ಯಾವರೀತಿ ಮನೋಭೂಮಿಕೆ ತಯಾರಾಗುವುದಕ್ಕೆ ಅಡ್ಡಿ ಬಂದಿದೆ ಮತ್ತು ಕಲ್ಮಷ ವುಂಟಾಗಿದೆ ಎಂದು ಅರ್ಥಮಾಡಿಕೊಳ್ಳುವುದಕ್ಕೆ ನಾವು ಪ್ರಯತ್ನಮಾಡಬೇಕು. ಇಂದು ಅಧಿಕಾರ ವರ್ಗದಲ್ಲಿ ಭಾರಿ ಅತೃಪ್ತಿಯಿವೆ ಎಂಬುದನ್ನು ವೀರೇಂದ್ರ ಪಾಟೀಲರ ಮಂತ್ರಿಮಂಡಲದಲ್ಲಿ ಸದಸ್ಯರಾಗಿರುವ ಶ್ರೀ ಅಪ್ಪಣ್ಣನವರು ಒಪ್ಪಿಕೊಂಡಿದ್ದಾರೆ. ಆಡಳಿತ ರಥದ ಸಾರಥ್ಯವನ್ನು ವಹಿಸಿರುವವರೇ ಅದನ್ನು ಒಪ್ಪಿದಮೇಲೆ ಹೆಚ್ಚು ಅನುಮಾನಕ್ಕೆ ಅವಕಾಶವಿಲ್ಲ ಎಂದು ನಾನು ತಿಳಿದಿದ್ದೇನೆ. ತಾರೀಖು 30ನೇ ಡಿಸೆಂಬರ್ 1969ರಲ್ಲಿ ಶ್ರೀ ಅಪ್ಪಣ್ಣನವರು ಮಡಕೇರಿಯಲ್ಲಿ ಮಾತನಾಡುವಾಗ ಹೇಳಿರುವುದು ಪತ್ರಿಕೆಗಳಲ್ಲಿ ದಪ್ಪಕ್ಷರದಲ್ಲಿ ವರದಿಯಾಗಿದೆ. ಇಂಟಿಗ್ರೇಷನ್ ಆದಮೇಲೆ ಕೊಡಗಿನ ಅಧಿಕಾರವರ್ಗ ಹಿಂದೇನಿತ್ತು, ಅದು ಈ ರಾಜ್ಯದೊಡನೆ ಸೇರಿದಮೇಲೆ ಅವರಲ್ಲಿ ಅತೃಪ್ತಿ ಹೆಚ್ಚಾಗಿದೆ, ಅದು ಹೊಗೆಯಾಡಿದೆ ಎಂದು ಹೇಳಿದ್ದಾರೆ. ಇದನ್ನು ಹೇಳುವುದೇಕೆಂದರೆ ಇಂದು ಎಲ್ಲರ ಮನೋಭೂಮಿಕೆ ತಯಾರಾಗಬೇಕು, ಎಲ್ಲರ ಮನಸ್ಸಿನಲ್ಲಿರುವ ಕಲ್ಮಷ ಹೋಗಬೇಕು, ಹಾಗೆ ಮಾಡಿದಾಗ ಇಂಥ ನಿರ್ಣಯ ಅಂಗೀಕಾರವಾಗಲು ಸಾಧ್ಯವಾಗಬಹುದು ಎಂಬುದು ನನ್ನ ಅಭಿಪ್ರಾಯ. ಇಂದು ಹೆಚ್ಚು ವಿದ್ಯಾವಂತರು ಅಧಿಕಾರ ಕ್ಷೇತ್ರದಲ್ಲಿದ್ದಾರೆ. ಅವರೇ ಅಭಿಪ್ರಾಯ ರೂಢಿಸುವವರು. ಅವರ ಮನಸ್ಸಿನಲ್ಲಿರುವ ಕಲ್ಮಷವನ್ನು ಮೊದಲು ತೊಳೆಯಬೇಕು. ಕಲ್ಮಷ ಅವರಲ್ಲಿರುವುದಕ್ಕೆ ಕೆಲವು ಕಾರಣಗಳಿವೆ. ಕೇವಲ 200 ರೂಪಾಯಿ ಸಂಬಳ ತೆಗೆದುಕೊಳ್ಳುವ ಟೈಪಿಸ್ಟ್ ವಿಶಾಲ ಮೈಸೂರಾದಮೇಲೆ 600 ರೂಪಾಯಿ ಸಂಬಳ ಪಡೆಯುವ ಅಂಡರ್ ಸೆಕ್ರೆಟರಿಯಾದರು, 1953ರಲ್ಲಿ ಅಸಿಸ್ಟೆಂಟ್ ಎಂಜಿನಿಯರಾಗಿದ್ದವರು ಈಗ ಚೀಫ್ ಎಂಜಿನಿಯರಾಗಿರುವರು, ಇದು ಸರಿಯೇ ಎಂದು ಅಧಿಕಾರವರ್ಗದವರು ಕೆಲವರು ನಮ್ಮನ್ನು ಕೇಳುವರು. ಇದರಿಂದ ಕೆಲವರಿಗೆ ಎಷ್ಟು ಅನ್ಯಾಯವಾಗಿದೆಯೆಂಬುದು ಕಾಣುತ್ತದೆ. ಆ ರೀತಿ ಕೇಳಿದಾಗ ಉತ್ತರ ಹೇಳುವುದೇನು ? ಇದಕ್ಕೆ ಕಾರಣವೇನೇ ಇರಲಿ, ಕೆಲವು ಭಾಗಗಳಿಂದ ಬಂದಿರುವವರು ಪುಣ್ಯವಂತರು ಎಂಬ ಭಾವನೆ ಕೆಲವರಿಗೆ ಬರುವುದು. ತಮಗೆ ಬೇಕಾದವರಿಗೆ-ನೆಂಟರಿಷ್ಟರಿಗೆ ಆ ರೀತಿ ಅನುಕೂಲಮಾಡಿದ್ದಾರೆ ಎಂಬ ಭಾವನೆ ಇದೆ. ಅದೇನೇ ಇರಲಿ, ಅಸಿಸ್ಟೆಂಟ್ ಎಂಜಿನಿಯರನ್ನು ಬೇಗ ಚೀಫ್ ಎಂಜಿನಿಯರ್ ಮಾಡಿದ್ದಾರೆ, ಟೈಪಿಸ್ಟನ್ನು ಅಂಡರ್ ಸೆಕ್ರೆಟರಿ ಮಾಡಿದ್ದಾರೆ, ಅವರು ಸಂಬಂಧಿಗಳಾದ್ದರಿಂದ ಹಾಗೆ ಮಾಡಿದ್ದಾರೆ ಎಂದು ಅನೇಕರಲ್ಲಿ ಅತೃಪ್ತಿಯನ್ನುಂಟುಮಾಡಿದೆ. ಇದರಿಂದ ಬೇರೆ ಅಧಿಕಾರಿಗಳ ಮನಸ್ಸಿನಲ್ಲಿ ಕಲ್ಮಷವುಂಟಾಗಲು ಕಾರಣವಾಗಿದೆ. 1956ಕ್ಕೆ ಮುಂಚೆ ಇದ್ದ ಮೈಸೂರು ರಾಜ್ಯದಲ್ಲಿ 9 ಜಿಲ್ಲೆಗಳಿದ್ದುವು, ಆಗ ಮೈಸೂರು ರಾಜ್ಯ ಚಿಕ್ಕದಾಗಿತ್ತು. ಆಗ ಕನ್ನಡನಾಡು ಎಂದು ಹೆಸರಿಡುತ್ತೇವೆ ಎಂದು ಹೇಳಿದ್ದರೆ ಅದನ್ನು ಸ್ವಾಗತಿಸುತ್ತಿದ್ದರು, ಆಗ ಮನೋಭೂಮಿಕೆ ಚೆನ್ನಾಗಿತ್ತು. ಈಗ ಜನರು ಒಪ್ಪುವುದಕ್ಕೆ ತಯಾರಿಲ್ಲ. ವೀರೇಂದ್ರ ಪಾಟೀಲರ ಪಕ್ಷದವರೂ ಒಪ್ಪುವುದಿಲ್ಲ. ಏಕೆಂದರೆ ಮನೋಭೂಮಿಕೆ ತಯಾರಾಗಿಲ್ಲ. ಆದ್ದರಿಂದ ಮೊದಲು ಇರುವ ಕಲ್ಮಷ ತೊಳೆಯಬೇಕು. 1954ರಲ್ಲಿ ಅಸಿಸ್ಟೆಂಟ್ ಎಂಜಿನಿಯರಾಗಿದ್ದ ಕೆಲವರು ಇಂದು ಚೀಫ್ ಎಂಜಿನಿಯರಾಗಿದ್ದಾರೆ, 15 ವರ್ಷದಿಂದ ಎಗ್ಸಿಕ್ಯುಟಿವ್ ಎಂಜಿನಿಯರಾಗಿರುವ ಕೆಲವರು ಹಾಗೇ ಇದ್ದಾರೆ ಎಂದು ಹೇಳಿದಾಗ ವಸ್ತುಸ್ಥಿತಿ ಯಾವರೀತಿ ಇದೆ ಎಂದು ಗೊತ್ತಾಗುತ್ತದೆ. ನಾನು ಹೇಳಿದ್ದ ಒಪ್ಪದಿರಬಹುದು. ಉದಾಹರಣೆ ಹೇಳುತ್ತೇನೆ, ಕೆಲವು ಆರ್ಡರುಗಳನ್ನು ಓದಿದರೆ ಗೊತ್ತಾಗಬಹುದು. ಅದರಲ್ಲಿ ನೋಡಿದರೆ ಬೇಕಾದವರನ್ನು ತೆಗೆದುಕೊಂಡಿರುವಂತೆ ಕಂಡುಬರುತ್ತದೆ. ಬಹುಶಃ ತಮ್ಮ ಭಾಗದಿಂದ ಬಂದಿರುವವರಮೇಲೆ ಹೆಚ್ಚು ಪ್ರೇಮವಿರಬಹುದು. ನನ್ನ ವಿಚಾರವೂ ತಮಗೆ ಗೊತ್ತಿರಬಹುದು, ಕೃಷ್ಣಾ ನೀರಿನ ವಿಚಾರ ಬಂದಾಗ ಅದರ ಚರ್ಚೆಯಲ್ಲಿ ನಾನು ಭಾಗವಹಿಸಿರುವುದು ಎಲ್ಲರಿಗೂ ಗೊತ್ತಿದೆ. ಈ ಸರಕಾರದ ತಪ್ಪು ಕೆಲವಿವೆ. ಪಿ.ಎಸ್.ಸಿ.ಯ ಒಂದು ಉದಾಹರಣೆ ಕೊಡುತ್ತೇನೆ. ಚೀಫ್ ಮಿನಿಸ್ಟರು ಡೈರೆಕ್ಟಿವ್ ಕೊಟ್ಟಿರುವುದಾಗಿ ಕೇಳಿದೆ. ಎಂ.ಬಿ.ಬಿ.ಎಸ್. ಆಗಿರುವ ಕೆಲವರನ್ನು ಲೋಕಲ್ ಕ್ಯಾಂಡಿಡೇಟ್ಸ್ ಆಗಿ ತೆಗೆದುಕೊಂಡಿದ್ದಾರೆ. ಜಿ.ಒ. ಬೇಕಾದರೆ ಹೇಳುತ್ತೇನೆ, ಎಸ್.ಆರ್.ಓ 1–11–ು–69 ಆಫ್ 68–69. ಈ ಆರ್ಡರ್‌ನಲ್ಲಿ ಕೆಲವರು ಲೋಕಲ್ ಕ್ಯಾಂಡಿಡೇಟ್ಸ್ ಇದ್ದಾರೆ. ಪಬ್ಲಿಕ್ ಸರ್ವಿಸ್ ಕಮಿಷನ್‌ನವರು ಪ್ರೊಬೇಷನ್ ಮೇಲೆ ಕೆಲವರನ್ನು ತೆಗೆದುಕೊಂಡಿದ್ದಾರೆ. ಎಂ.ಬಿ.ಬಿ.ಎಸ್.

(ಶ್ರೀ ಎಚ್. ಎಸ್. ನಂಜೇಗೌಡ)

ಆಗಿರುವವರು ಪೋಸ್ಟ್ ಗ್ರಾಜುಯೇಟ್ ಸ್ಟಡಿ ಮಾಡುವುದಕ್ಕೆ, ಡಿಗ್ರಿ ತೆಗೆದುಕೊಳ್ಳುವುದಕ್ಕೆ ಕನ್‌ಕರೆಂಟ್ ಡ್ಯೂಟೀಸ್ ಕೊಟ್ಟು ಪೋಸ್ಟ್ ಗ್ರಾಜುಯೇಟ್ ಡಿಗ್ರಿ ಓದುವುದಕ್ಕೆ ಅವಕಾಶ ಕೊಡಿ ಎಂದು ಕೇಳಿದರು, ಹಾಗೆ ಅವಕಾಶ ಕೊಡುವುದಕ್ಕೆ ಆಗುವುದಿಲ್ಲ, ಪೋಸ್ಟ್ ಗ್ರಾಜುವೇಟ್ ಡಿಗ್ರಿ ಓದಬೇಕಾದರೆ ರಜ ತೆಗೆದುಕೊಳ್ಳಿರಿ, ನಿಮಗೆ ಸ್ಟೈಪೆಂಡ್ ಕೊಡುತ್ತೇವೆ, ಡಾಕ್ಟರ್ ಆಗಿ ಕೆಲಸ ಮಾಡುತ್ತಿದ್ದೀರಿ ಎಂದು ಪರಿಗಣಿಸುವುದಕ್ಕೆ ಆಗುವುದಿಲ್ಲ ಎಂದು ಹೇಳಿದರು. ಅವರು ಸುಮ್ಮನಾದರು ಇವರುಗಳು ನೇಮಕವಾದನಂತರ ನೇಮಕವಾದಂಥ ಜನರು ಕೆಲವರಿದ್ದಾರೆ. ಈ 17 ಜನರು ಆ ಕಡೆಯಿಂದ ಬಂದವರು. ಇವರೆಲ್ಲ ಅವರಿಗೆ ನೆಂಟರಿರಬಹುದು. ನಾನು ಆ ಅರ್ಥದಲ್ಲಿ ತಿಳಿದುಕೊಂಡೆ; ಜನ ಕೂಡ ಅದೇ ಅರ್ಥದಲ್ಲಿ ತಿಳಿದುಕೊಂಡಿದ್ದಾರೆ. ಈ 17 ಜನರಿಗೆ ಸಂಬಂಧಪಟ್ಟಂತೆ ಒಂದು ಆರ್ಡರ್ ಹೊರಡಿಸಿ ಅವರಿಗೆ ಕನ್‌ಕರೆಂಟ್ ಡ್ಯೂಟೀಸ್ ಬೆನಿಫಿಟ್ ಕೊಟ್ಟಿದ್ದಾರೆ. ಇದರಿಂದ ಅವರಿಗೆ ಎರಡು ವರ್ಷ ಸರ್ವಿಸ್ ಆಯಿತು, ಪೋಸ್ಟ್ ಗ್ರಾಜುಯೇಟ್ ಡಿಗ್ರಿ ಕೂಡ ಆಯಿತು, ಈ ಭಾಗದವರು ರಜ ತೆಗೆದುಕೊಂಡು ಓದುವುದಕ್ಕೆ ಹೋದವರ ಮೇಲೆ ಎರಡು ವರ್ಷ ಸೀನಿಯಾರಿಟಿ ಕೂಡ ಬಂತು. ಅದೇ ಈ ಭಾಗದ ಜನಗಳಿಗೆ ಅಂಥ ರಿಯಾಯಿತಿ ಕೊಡದೆ ಹೋದರು. ಆ ಲಿಸ್ಟ್ ಕೂಡ ನನ್ನಲ್ಲಿದೆ. ಈ ಸರ್ಕಾರ ಮಾಡಿರುವ ಆರ್ಡರ್‌ನಲ್ಲಿ ಇರುವವರೆಲ್ಲ ಗುಲ್ಬರ್ಗ ಮತ್ತು ಹುಬ್ಬಳ್ಳಿಯ ಕೆ.ಎಂ.ಸಿ. ಹಾಸ್ಪಿಟಲ್‌ನಲ್ಲಿ ಕೆಲಸ ಮಾಡುತ್ತಿರುವವರು. ಬೆಂಗಳೂರು ಮೆಡಿಕಲ್ ಕಾಲೇಜಿನಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳಲ್ಲಿ 29 ಜನರಲ್ಲಿ ಯಾರಿಗೂ ಈ ರೀತಿ ಕನ್‌ಕರೆಂಟ್ ಡ್ಯೂಟೀಸ್ ಕೊಟ್ಟಿಲ್ಲ. ಎಂ. ಡಿ. ಎಂ. ಎಸ್. ಓದಬೇಕಾದರೆ ರಜ ಹಾಕಿ, ಮಂಜೂರು ಮಾಡುತ್ತೇವೆ, ಪೋಸ್ಟ್ ಗ್ರಾಜುಯೇಟ್ ಸ್ಟಡೀಸ್ ಆದ ನಂತರ ಪ್ರೊಬೇಷನರಿ ಪಿರಿಯಡ್ ಮುಗಿಸಿ ಎಂದು ಹೇಳಿದ್ದಾರೆ. ಇದ್ದರಿಂದ ಏನಾಗುತ್ತದೆ ಎಂದರೆ ಈ ಕಡೆಯ ಜನರಿಗಿಂತ ಆ ಕಡೆಯವರಿಗೆ ಸೀನಿಯಾರಿಟಿ ಬರುತ್ತದೆ. ಇದರಿಂದ ಈ ಭಾಗದ ಜನರ ಮನಸ್ಸಿನಲ್ಲಿ ಏನು ಪರಿಣಾಮವಾಗಿದೆ ಎನ್ನುವುದನ್ನು ಯೋಚನೆ ಮಾಡಬೇಕು. ನಾವೂ ಕೂಡ ಆ ಭಾಗದಲ್ಲಿಯೇ ಹುಟ್ಟಿದ್ದರೆ ಚೆನ್ನಾಗಿತ್ತು, ಆ ಕಡೆಯೇ ಸೇರಿದ್ದರೆ ಚೆನ್ನಾಗಿತ್ತು, ವೀರೇಂದ್ರ ಪಾಟೀಲರ ನೆಂಟರಾಗಿದ್ದರೆ ಚೆನ್ನಾಗಿತ್ತು, ನಮಗೂ ಈ ಸೌಲಭ್ಯ ಸಿಕ್ಕುತ್ತಿತ್ತು. ಈಗ ಎರಡು ವರ್ಷಗಳ ಸೀನಿಯಾರಿಟಿ ಹೋಗುತ್ತದೆ ಎನ್ನುವ ಭಾವನೆ ಈ ಕಡೆಯವರಲ್ಲಿ ಬಂದಿದೆ. ಅವರ ಅಭಿಪ್ರಾಯಗಳನ್ನು ನಾವು ಇಲ್ಲಿ ತಿಳಿಸುತ್ತಿದ್ದೇವೆ. ಈ ರೀತಿ ಆದರೆ ಅಧಿಕಾರ ವರ್ಗದಲ್ಲಿ ಯಾವ ಭಾವನೆ ಉಂಟಾಗುತ್ತದೆ? ನಮ್ಮ ರಾಜ್ಯ ಒಂದು, ನಾವೆಲ್ಲ ಅಣ್ಣತಮ್ಮಂದಿರು ಸಹೋದರರು, ಒಂದೇ ಮನೆಯ ಜನ ಎನ್ನುವ ಅಭಿಪ್ರಾಯ ರೂಪಿತವಾಗುತ್ತಿದೆಯೇ? ಇದು ಆಡಳಿತ ಮಾಡುವ ವೈಖರಿಯಲ್ಲ. ಒಂದು ಆರ್ಡರ್ ಮಾಡತಕ್ಕ ಮುಖಂಡರು ಅವರವರಲ್ಲಿ ಪಕ್ಷಪಾತ ತಂದು ಒಬ್ಬರಿಗೊಂದು, ಇನ್ನೊಬ್ಬರಿಗೆ ಇನ್ನೊಂದು ಎನ್ನುವ ರೀತಿಯಲ್ಲಿ ಆಡಳಿತ ನಡೆಸುತ್ತಿದ್ದಾರೆ.

ಇತ್ತೀಚೆಗೆ 64 ಜನ ಅಸಿಸ್ಟೆಂಟ್ ಇಂಜಿನಿಯರುಗಳನ್ನು ತೆಗೆದುಕೊಂಡರು. ಇಂಟರ್ ಸ್ಟೇಟ್ ಸೀನಿಯಾರಿಟಿ ಲಿಸ್ಟ್ ಕೆಲವಾರು ಬಾರಿ ಆಗಿದೆ. ಇದರ ವೈಖರಿ ಯಾವ ರೀತಿ ಇದೆ ಎಂದರೆ ಪದವೀಧರರಾಗಿ 8—10 ವರ್ಷ ಸರ್ವಿಸ್ ಆಗಿರುವವರ ಮೇಲೆ ಡಿಪ್ಲೊಮಾ ಮಾಡಿಕೊಂಡಿರುವವರನ್ನು ಹಾಕಿದ್ದಾರೆ. ಡಿಗ್ರಿ ಪಡೆದು, 18 ವರ್ಷ ಸರ್ವಿಸ್ ಆಗಿರುವವರು ಜೂನಿಯರ್ ಇಂಜಿನಿಯರ್ ಆಗಿಯೇ ಇದ್ದಾರೆ. ಎಸ್.ಎಸ್.ಎಲ್.ಸಿ. ಆದ ಮೇಲೆ ಒಂದು ವರ್ಷ ಡಿಪ್ಲೊಮಾ ಓದಿರುವವರಿಗೆ ಅಸಿಸ್ಟೆಂಟ್ ಇಂಜಿನಿಯರಾಗಿ ಪ್ರಮೋಷನ್ ಕೊಟ್ಟಿದ್ದಾರೆ. ಮಾನ್ಯ ಉಪ ಮಂತ್ರಿಯವರಾದ ಮಾಗಾಡಿಯವರಿಗೂ ಇವೆಲ್ಲ ಗೊತ್ತಿರಬಹುದು. ಪದವೀಧರರನ್ನೆಲ್ಲ ತುಳಿದು, ಡಿಪ್ಲೊಮಾ ಮಾಡಿದವರನ್ನು ಅವರ ಮೇಲೆ ತಂದು ಅಸಿಸ್ಟೆಂಟ್ ಇಂಜಿನಿಯರಾಗಿ ಮಾಡುವುದಾದರೆ ಹೆಚ್ಚು ಓದಿದ್ದರೂ, ಜೂನಿಯರ್ ಇಂಜಿನಿಯರಾಗಿಯೇ ಉಳಿದಿರುವವರ ಮನಸ್ಸಿನಲ್ಲಿ ಏನು ಭಾವನೆಯುಂಟಾಗುತ್ತದೆ ಎನ್ನುವುದನ್ನು ಸರ್ಕಾರದವರು ಯೋಚನೆ ಮಾಡಿದ್ದಾರೆಯೇ ?

ಅಸಿಸ್ಟೆಂಟ್ ರಿಜಿಸ್ಟ್ರಾರ್‌ಗಳ ಒಂದು ಸೀನಿಯಾರಿಟಿ ಪಟ್ಟಿ ಇದೆ. ಸೀನಿಯಾರಿಟಿ ಪಟ್ಟಿಯಲ್ಲಿ ಸೀರಿಯಲ್ ನಂಬರ್ 219 ರ ವರೆಗೆ ಬರೆವವರೆಗೂ 100 ಜನರನ್ನು ಇಂಟರ್‌ವ್ಯೂಗೆ ಕರೆದರು. ಉಳಿದವರು ಕೆಲವರು ರಿಟೈರಾಗಿದ್ದಾರೆ, ಕೆಲವರಿಗೆ ಪ್ರಮೋಷನ್ ಸಿಕ್ಕಿದೆ. ಪ್ರಮೋಷನ್ ಬೈ ಸೆಲೆಕ್ಷನ್ ಎಂದು ಮಾಡಿಕೊಂಡಿದ್ದಾರೆ. ಅದಕ್ಕಾಗಿ 219 ಸೀರಿಯಲ್ ನಂಬರ್ ತಲುಪುವ ಹೊತ್ತಿದೆ 100 ಜನರಿಗೆ ಇಂಟರ್‌ವ್ಯೂಗೆ ಕರೆದರು. ಅವರಲ್ಲಿ ಮೈಸೂರಿನವರು ಬರುತ್ತಾರೆ. ಮದ್ರಾಸ್ ಏರಿಯಾದವರು ಬರುತ್ತಾರೆ. ಹೈದರಾಬಾದ್ ಏರಿಯಾದವರು ಬರುತ್ತಾರೆ, ಕೊಡಗಿನವರು ಬರುತ್ತಾರೆ. ಸೀನಿಯಾರಿಟಿ ಲಿಸ್ಟ್‌ನಲ್ಲಿ ಅನುಭವವಿರುವ ನೂರು ಜನರನ್ನು ಇಂಟರ್‌ವ್ಯೂಗೆ

ಕರೆದರು. 219 ರಿಂದ 225ರ ವರೆಗೆ ಕೆಲವರು ತೀರಿ ಹೋಗಿದ್ದಾರೆ, ಕೆಲವರಿಗೆ ಪ್ರಮೋಷನ್ ಆಗಿದೆ. ಆಮೇಲೆ 226 ರಿಂದ 246ರ ವರೆಗೆ ದೊಂಬಾಯಿ ಕರ್ಣಾಟಕದವರು. ಇವರಲ್ಲಿ ಒಬ್ಬಿಬ್ಬರು ರಿಟೈರಾಗಿದ್ದಾರೆ, ಒಬ್ಬಿಬ್ಬರು ಗತಿಸಿ ಹೋಗಿರಬಹುದು. ಇನ್ನು ಐದಾರು ಜನಗಳಿಗೆ ಪ್ರಮೋಷನ್ ಸಿಕ್ಕಿದೆ. ಉಳಿದ 10 ಜನಗಳಿಗೆ ಇಂಟರ್‌ವ್ಯೂಗೆ ಕರೆದರು. ಈ ಹತ್ತು ಜನರ ಪೈಕಿ 9 ಜನರಿಗೆ ಡೆಪ್ಯುಟಿ ರಿಜಿಸ್ಟ್ರಾರ್ ಆಗಿ ಪ್ರಮೋಷನ್ ಕೊಟ್ಟರು. ಉಳಿದ ನೂರು ಜನಗಳಲ್ಲಿ ಉಳಿದ ಎಲ್ಲ ಭಾಗಗಳವರೂ ಇದ್ದಾರೆ. ಅವರಲ್ಲಿ 12—14 ಜನರನ್ನು ತಗೆದುಕೊಂಡರು. ಈ ವೈಖರಿಯನ್ನು ನೋಡಿದರೆ ಜನತೆಯಲ್ಲಿ ಏನು ಮನೋಭೂಮಿಕೆ ಇರುತ್ತದೆ, ಒಳ್ಳೆಯ ಅಭಿಪ್ರಾಯ ಅವರಲ್ಲಿ ಬರುತ್ತದೆಯೋ, ಸಹೋದರ ಭಾವ ಮೂಡಿಸುವಂಥ ಆಡಳಿತವನ್ನು ಈ ಸರ್ಕಾರ ನಡೆಸುತ್ತಿದೆಯೋ ಎನ್ನುವುದು ಗೊತ್ತಾಗುತ್ತದೆ. ದಯಮಾಡಿಟ್ಟು ಇದನ್ನು ನೀವೇ ಯೋಚನೆಮಾಡಿ.

ಶ್ರೀ ಎಂ. ನಾಗಪ್ಪ.—ಹಾಗಾದರೆ ಮೈಸೂರು ಎಂಬ ಹೆಸರು ಇದ್ದರೆ ಈ ದೋಷ ಹೋಗುತ್ತದೇನು ?

ಶ್ರೀ ಎಚ್. ಎನ್. ನಂಜೇಗೌಡ.—ಈ ಸಂದರ್ಭದಲ್ಲಿ ನಾನು ಒಂದು ಎಚ್ಚರಿಕೆ ಕೊಡುತ್ತೇನೆ. ಸರಕಾರದ ಆಡಳಿತ ಯಂತ್ರದಲ್ಲಿರುವ ಅಧಿಕಾರಿ ವರ್ಗದಲ್ಲಿ ಅತೃಪ್ತಿ ಉಂಟಾಗಿದೆ, ಅವರು ಅಸಹಕಾರ ಮಾಡುವ ಸನ್ನಿವೇಷ ಬರಬಹುದು. ಆದುದರಿಂದ ಗಲಾಟೆಯಾಗುವುದಕ್ಕೆ ಅವಕಾಶ ಕೊಡದೆ ಹತೋಟಿಯಲ್ಲಿ ಇಟ್ಟುಕೊಳ್ಳಲು ಸೂಕ್ತ ಕ್ರಮ ತಗೆದುಕೊಳ್ಳಬೇಕಾದುದು ಸರಕಾರದ ಕರ್ತವ್ಯವಾಗಿದೆ ಎಂದು ಎಚ್ಚರಿಕೆ ಕೊಡುತ್ತೇನೆ. ಒಂದು ಜನಸಂಖ್ಯೆಯನ್ನು ಪ್ರತಿನಿಧಿಸುವ, ಒಂದು ಭಾಷೆಯನ್ನು ಪ್ರತಿನಿಧಿಸುವ, ಭಾವನೆಗಳನ್ನು ಪ್ರಚೋದಿಸುವ, ರೀತಿಯಲ್ಲಿ ಮೈಸೂರು ಎಂಬ ಹೆಸರು ಹುಟ್ಟಿದ್ದಲ್ಲ, ಮೈಸೂರು ಎಂಬ ಪದ ಜಾತ್ಯಾತೀತವಾಗಿದೆ. ಇದರಲ್ಲಿ ಎಲ್ಲವೂ ಸೇರಿಕೊಂಡಿದೆ. ಹಿಂದಕ್ಕೆ ಮೈಸೂರು ರಾಜ್ಯದಲ್ಲಿ ಶ್ರೀಮಾನ್ ಹನುಮಂತಯ್ಯನವರು ಮುಖ್ಯ ಮಂತ್ರಿಗಳಾಗಿದ್ದಾಗ 126 ಲಕ್ಷ ರೂಪಾಯಿ ವೆಚ್ಚದಲ್ಲಿ ಈ ವಿಧಾನ ಸೌಧ ಕಟ್ಟಡ ಕಟ್ಟಿಸಲಾಯಿತು. ಈ ಖರ್ಚು ವೆಚ್ಚಗಳ ಬಗ್ಗೆ ಆಪಾದನೆ ಬಂದ ಕೂಡಲೆ ಅವರೇ ಸ್ವತಃ ಒಂದು ವಿಚಾರಣಾ ಸಮಿತಿಯನ್ನು ನೇಮಕ ಮಾಡಿದರು. ಆದರೆ ಹುಬ್ಬಳ್ಳಿಯಲ್ಲಿ ಮೆಡಿಕಲ್ ಕಾಲೇಜಿಗೆ 226 ಲಕ್ಷ ರೂ. ಖರ್ಚಾಗಿದೆ. ಹುಬ್ಬಳ್ಳಿ ಮೆಡಿಕಲ್ ಕಾಲೇಜಿಗೆ ಖರ್ಚಾದ 226 ಲಕ್ಷ ರೂಪಾಯಿಗಳಲ್ಲಿ ಹಣ ದುರುಪಯೋಗವಾಗಿದೆ ಎಂದು ಅಪಾದನೆ ಇವೆ. ಆದರೆ ಇವರ ಬಗ್ಗೆ ವಿಚಾರಣೆ ಮಾಡಲಿಲ್ಲ. ಶರಾವತಿಯ ಯೋಜನೆಯಲ್ಲಿ ತಾರಾಪೋರೇವಾಲಾರವರಿಗೆ ಕ್ಷತುಂಬಾ ದುಡ್ಡು ಕೊಟ್ಟರು. ಆ ಕಥೆಯನ್ನು ನಾನು ಹೆಚ್ಚಿಗೆ ಹೇಳಲು ಹೋಗುವುದಿಲ್ಲ. ಶರಾವತಿಯಲ್ಲಿ ಅನ್ಯಾಯವಾಯಿತು, ಕಾವೇರಿ ನೀರಿನ ವಿಚಾರದಲ್ಲಿ ರಾಜ್ಯದ ಹಿತವನ್ನು ಬಲಿ ಕೊಟ್ಟರು ಕೃಷ್ಣಾ ಯೋಜನೆ ವಿಚಾರದಲ್ಲಿ ಕೆ. ಎಲ್. ರಾವ್ ಅವರ ದಾಕ್ಷಿಣ್ಯಕ್ಕೆ ಒಳಗಾಗಿದ್ದಾರೆ. ಶರಾವತಿ ಯೋಜನೆಯಲ್ಲಿ ಗಂಟು ಹೊಡೆದು ಬಿಟ್ಟರು, ಮತ್ತು ಅದನ್ನು ಮುಚ್ಚಿಕೊಳ್ಳಲು ರಾಜ್ಯದ ಹಿತವನ್ನು ಬಲಿಕೊಟ್ಟು. ತ್ಯಾಗ ಮಾಡಬೇಕು ಎಂದು ಸತ್ಯ ಹರಿಶ್ಚಂದ್ರನ ಹಾಗೆ ಹೇಳಲು ಬಂದಿದ್ದಾರೆ. ಕೌರವರ ಪಕ್ಷದಲ್ಲಿ ದುರ್ಯೋಧನ ಇದ್ದಹಾಗೆ ಇವರು ಇದ್ದಾರೆ. ಇವತ್ತಿನ ದಿವಸ ಒಂದು ಮಾತು ಹೇಳುತ್ತೇನೆ. ಈ ತರೆ ಮಾರಿನವರು ಇರುವವರೆಗೆ ಇಂಥ ಹೆಸರನ್ನು ಬದಲಿಸುವುದಕ್ಕೆ ಕ್ರಮ ಕೈಕೊಳ್ಳಲು ಸಾಧ್ಯವಾಗುವುದಿಲ್ಲ. ಜನರ ಮನೋಭಾವ ಏನು ಇದೆ ಇದನ್ನು ಅರ್ಥ ಮಾಡಿಕೊಂಡು ನಾನು ಹೇಳುತ್ತೇನೆ. ಒಂದು ವೇಳೆ ಹೆಸರು ಬದಲಿಸಿ ಹೊಸ ಹೆಸರು ಇಟ್ಟು ಬಿಡುತ್ತೇವೆ ಎಂದು ಏನಾದರೂ ಕಾರ್ಯಕ್ರಮ ಕೈಕೊಂಡರೆ, ನಮ್ಮ ರಾಜ್ಯದಲ್ಲಿ ಭಾರೀ ಗಲಾಟೆಯಾಗಿ ರಕ್ತ ಪಾತವಾಗತಕ್ಕಂಥ ವಾತಾವರಣ ಉಂಟಾಗಬಹುದು. ಹಿಂದಕ್ಕೆ ಕರ್ನಾಟಕ ಆಗಬೇಕು ಎನ್ನತಕ್ಕಂಥ ಜನರು ಇಂದು ಮೂರ ಗುಂಪಾಗಿದ್ದಾರೆ. ಕರ್ನಾಟಕ ಆಗಬೇಕು ಎಂದು ಇದೇ ಮಾನ್ಯ ಸಭೆಯಲ್ಲಿ ಶ್ರೀಮಾನ್ ಚೆನ್ನಯ್ಯನವರು ಮತ್ತು ಶ್ರೀಮಾನ್ ಹನುಮಂತಯ್ಯನವರು ವಾದ ಮಾಡಿದರು. ಆದರೆ ತಮ್ಮ ದೇಹದಲ್ಲಿ ರಕ್ತದ ಕೊನೆಯ ಹನಿ ಇರುವವರೆಗೆ ಕರ್ನಾಟಕ ರಾಜ್ಯ ಆಗುವುದಕ್ಕೆ ಕೊಡುವುದಿಲ್ಲ ಎಂದು ಮಂಡ್ಯದ ಸಮ್ಮೇಳನದಲ್ಲಿ ಶ್ರೀಮಾನ್ ಶಂಕರಗೌಡರು ಮತ್ತು ಶ್ರೀಮಾನ್ ಲಕ್ಕಪ್ಪನವರು ಹೇಳಿ ಭಾರಿ ಹಾರ ಹಾಕಿಸಿಕೊಂಡು ಮೆರವಣಿಗೆ ಮಾಡಿಸಿಕೊಂಡಿಲ್ಲವೇ ? ಅಂಥವರ ಬಿಸಿ ರಕ್ತ ಇವತ್ತು ಎಲ್ಲಿ ಹೋಯಿತು ? ಶಂಕರಗೌಡರ ಮತ್ತು ಲಕ್ಕಪ್ಪನವರ ರಕ್ತದ ಕೊನೆಯ ಕಣ ಎಲ್ಲಿ ಹೋಯಿತು ? ಎಲ್ಲರೂ ಕಾಕ್‌ಕ್ರೋಚಸ್ ಆದರೇನು ? ಯಾರ ಬಗ್ಗೆಯೂ ದೋಷಾರೋಪಣೆ ಮಾಡಲು ನಾನು ಹೋಗುವುದಿಲ್ಲ. ಆದರೆ ಇಂಥ ಒಂದು ಪರಿಸ್ಥಿತಿ ನಡೆದಿದೆ. ಇದರ ಬಗ್ಗೆ ನನ್ನ ಮನಸ್ಸಿನಲ್ಲಿ ಯಾರ ಬಗ್ಗೆಯೂ ಕಲ್ಮಷವಿಲ್ಲ. ನನ ಮನಸ್ಸು ನಿರಾಳವಾಗಿದೆ. ಇವತ್ತು ರಾಜಕೀಯದಲ್ಲಿ ಬಾರ್ಡರ್ ಗಡಿ ನಿರ್ಧಾರದ ಸಮಸ್ಯೆ ಇದೆ. ಇಂದು ರಾಜ್ಯದಲ್ಲಿ ಜನತೆಯ ಪ್ರತಿನಿಧಿಗಳು ಏನು ಮಾಡುತ್ತಿದ್ದಾರೆ ? ಏತಕ್ಕೆ ಇದ್ದಾರೆ ಕರ್ನಾಟಕ ರಾಜ್ಯ ಆಗಬೇಕು ಎನ್ನತಕ್ಕಂಥವರನ್ನು

(ಶ್ರೀ ಎಚ್. ಎನ್. ನಂಜೇಗೌಡ)

ಎಲ್ಲರನ್ನೂ ಮೂಲೆಗುಂಪು ಮಾಡಿದರು. ಹೋರಾಟ ಮಾಡಿದವರು ಮೂಲೆಗುಂಪಾದರು. ಇದರಲ್ಲಿ ರಾಜಕೀಯ ನಡೆದಿದೆ. ತಮ್ಮ ಬೇಳೆ ಬೇಯಲು ಬೇಕಾದರೆ ಮುಳ್ಳಿನಿಂದ ಮುಳ್ಳು ತೆಗೆಯಬೇಕೆಂದು, ಇದರಲ್ಲಿ ರಾಜಕೀಯ ಮಾಡಿ ಹನುಮಂತಯ್ಯನವರನ್ನು ಅಧಿಕಾರದಿಂದ ತೆಗೆಯಲು ಚೆನ್ನಯ್ಯನವರನ್ನು ಇದಕ್ಕೆ ಉಪಯೋಗಿಸಿಕೊಂಡರು. ನಂತರ ಚೆನ್ನಯ್ಯನವರನ್ನು ರಾಜಕೀಯದಿಂದ ತೆಗೆಯಬೇಕು ಎಂದು ವೀರಣ್ಣಗೌಡರನ್ನು ಉಪಯೋಗಿಸಿದರು. ವೀರಣ್ಣಗೌಡರನ್ನು ತೆಗೆಯುವುದಕ್ಕೆ ಶಂಕರಗೌಡರನ್ನು ಉಪಯೋಗಿಸಿದರು, ಇವರನ್ನು ತೆಗೆಯುವುದಕ್ಕೆ ವೆಂಕಟಪ್ಪನವರನ್ನು ಉಪಯೋಗಿಸಿದರು, ಇದೇ ರೀತಿ ಸಿದ್ಧವೀರಪ್ಪನವರನ್ನು ತೆಗೆಯುವುದಕ್ಕೆ ಗಾಂಜಿ ವೀರಪ್ಪನವರಿಗೆ ಪ್ರೋತ್ಸಾಹ ಕೊಟ್ಟರು. ಚೆನ್ನಬಸಪ್ಪನವರನ್ನು ತೆಗೆಯಲು ಡಿ. ಎಂ. ಸಿದ್ಧಯ್ಯನವರ ಪ್ರಭಾವ ಉಪಯೋಗಿಸಿದರು. ಗುರುಪಾದಸ್ವಾಮಿಯವರನ್ನು ತೆಗೆಯುವುದಕ್ಕೆ ಮೂಲೆಯಲ್ಲಿ ಇರತಕ್ಕಂಥ ರಾಜಶೇಖರ ಮೂರ್ತಿಯವರನ್ನು ಬೆಳಕಿಗೆ ತಂದರು. ಗಣಮುಖಿಯವರನ್ನು ತೆಗೆಯಲು ಪಾಟೀಲರನ್ನು ಮುಂದು ಮಾಡಿದರು. ನಮ್ಮ ರಾಜ್ಯದಲ್ಲಿ ಒಂದನೇ ದರ್ಜೆಯ ರಾಜಕಾರಣಿಗಳು ಇರಲೇ ಕೂಡದು ಎಂದು ತೀರ್ಮಾನ ಮಾಡಿದ ಹಾಗೆ ಇದೆ. ಉಳಿದವರನ್ನು ಇಲ್ಲದಂತೆ ಮಾಡಿದರೆ ನಾನೇ ಸರ್ವಾಧಿಕಾರಿಯಾಗುತ್ತೇನೆ ಎಂಬ ಭಾವನೆ ಬಂದಿದೆ. ಆದರೆ ಒಳ್ಳೇ ಸ್ನೇಹಿತರ ಸಹಕಾರದಿಂದ ಶ್ರೀಮಾನ್ ವೀರೇಂದ್ರ ಪಾಟೀಲರವರು ರಾಜ್ಯದಾಡಳಿತವನ್ನು ಮುಂದುವರಿಸುತ್ತಿದ್ದಾರೆ. ಆದರೆ ರಾಜ್ಯದ ಪ್ರತಿನಿಧಿಗಳಿಗೆ ಬಹುಶಃ ಸಂಸ್ಥೆಯಲ್ಲಿ ಎಷ್ಟು ಪ್ರಭಾವ ಇರಬೇಕಿತ್ತೋ ಅಷ್ಟು ಪ್ರಭಾವ ಇಲ್ಲ. ಶ್ರೀಮಾನ್ ಚೆನ್ನಬಸಪ್ಪನವರು ಅಧಿಕಾರದಲ್ಲಿ ಇರುವವರೆಗೆ ಕಾವೇರಿ ನೀರಿನ ಬಗ್ಗೆ ಕೃಷ್ಣಾ ನೀರಿನ ಬಗ್ಗೆ ಯೋಜನೆ ಕೈಕೊಳ್ಳಲು ಬಹಳ ಒತ್ತಾಯ ಪೂರ್ವಕ ಪ್ರಯತ್ನ ಮಾಡಿದರು. ಅವರು ಹಾಕಿ ಕೊಟ್ಟ ದಾರಿಯಲ್ಲಿಯೇ ಇಂದು ವೀರೇಂದ್ರ ಪಾಟೀಲರವರು ಇದನ್ನು ಮುಂದುವರಿಸುತ್ತಿದ್ದಾರೆ. ಆದರೂ ಕೂಡ ರಾಜ್ಯದ ಹಿತ ರಕ್ಷಣೆಯ ವಿಚಾರದಲ್ಲಿ ತಿಳುವಳಿಕೆ ಇದ್ದು, ಆಗುಹೋಗುಗಳ ಬಗ್ಗೆ ಅರ್ಥ ಮಾಡಿಕೊಳ್ಳುವ ಜನರ ಬಗ್ಗೆ ಪ್ರೀತಿಯಿಂದ ನೋಡುತ್ತಿಲ್ಲ. ಇದರಿಂದ ನಿರಾಶಾಭಾವನೆ ಉಂಟಾಗಿ ಕಾರ್ಯ ಪ್ರವೃತ್ತಿ ಸ್ಥಗಿತವಾದಂತಾಗಿದೆ.

5–00 P.M.

ಇದನ್ನೆಲ್ಲಾ ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ನಮಗೆ ಕಾವೇರಿ ಕೃಷ್ಣಾ ನದಿಗಳ ಅಣೆ ಕಟ್ಟುಗಳ ಕೆಲಸವಾಗಬೇಕು. ನಮಗೆ ಕಾವೇರಿ ಜಲಾನಯನ ಪ್ರದೇಶದಲ್ಲಿ ಹರಿಯತಕ್ಕ ನೀರಿನ ರಕ್ಷಣೆಯಾಗಬೇಕು, ರಾಜ್ಯದ ಸಮಗ್ರ ಭಾಗಗಳು ಸಮಗ್ರವಾಗಿ ಏಕರೀತಿಯಿಂದ ಅಭಿವೃದ್ಧಿಗೆ ಬರುತ್ತವೆಂಬ ಭಾವನೆ ಎಲ್ಲ ಜನರಲ್ಲೂ ಮೂಡಬೇಕು ಆ ರೀತಿ ಇಷ್ಟ ಮೊದಲು ಕೆಲಸಗಳು ನಡೆಯುತ್ತಿವೆ ಎಂಬ ಆಸೆ ಜನರಲ್ಲಿ ಮೂಡಬೇಕು. 1964 ರಿಂದ ಇಲ್ಲಿಯವರೆಗೂ ನಮ್ಮ ಮುಖ್ಯ ಮಂತ್ರಿಗಳು ಏನೇನು ಮಾಡಿದ್ದಾರೆಂಬುದು ನನಗೆ ಎಲ್ಲವೂ ಗೊತ್ತಿದೆ. ಇವರು ಮೊದಲು ಒಂದು ರಿಸೋರ್ಸ್ ಕಮಿಟಿ ಅಂತ ಮಾಡಿದರು. ಅದರ ಜೊತೆಯಲ್ಲೇ ಒಂದು ಟೆಕ್ನಿಕಲ್ ಕಮಿಟಿ ಅಂತ ಬೇರೆ ಮಾಡಿದರು. ಆ ಕಮಿಟಿಗಳ ರಿಪೋರ್ಟ್‌ನ್ನು ಮೂಲೆಗೆ ಹಾಕಿದ್ದಾರೆ. ಅವುಗಳ ಡೀಟೈಲ್ಸ್ ಎಲ್ಲವೂ ನನ್ನಲ್ಲಿವೆ. ಆ ವರದಿಯನ್ನು ಕೊಟ್ಟ ದಿವಸ ಕೃಷ್ಣಾ ಬೇಸಿನ್‌ಲ್ಲಿ ನಡೆಯತಕ್ಕ ಕೆಲಸಗಳಿಗೆ ಹೆಚ್ಚಿನ ಸಹಾಯವನ್ನು ನೀಡಿದರು. ಮತ್ತು ಅಲ್ಲಿ ನಡೆಯತಕ್ಕ ಕೆಲಸಗಳ ಪ್ರೋಗ್ರೆಸ್ ಬಗ್ಗೆ ಮೂರು ತಿಂಗಳಲ್ಲೇ ಒಂದು ವರದಿಯನ್ನು ಕಳುಹಿಸುವಂತೆ ಮಾಡಿದರು. ಅಷ್ಟೇ ಅಲ್ಲದೆ ಆಗ ನಾರ್ತ್ ಜೋನಿನಲ್ಲಿ ಖರ್ಚಾಗದೆ ಹಾಗೆ ಉಳಿದಿದ್ದ ಮೊಬಲಗನ್ನು ಈ ಕೆಳಕಂಡ ಕಾಮಗಾರಿಗಳಿಗೆ ಹಂಚಿಕೆ ಮಾಡಿದರು ಹೇಮಾವತಿ ಯೋಜನೆಗೆ 135 ಲಕ್ಷ, ಕೊಳಜಿ ಅಡ್ಡಗಟ್ಟೆಗೆ 130 ಲಕ್ಷ, ಹಾರಂಗಿ ಯೋಜನೆಗೆ 56 ಲಕ್ಷ, ಕಂಬದಕಡಕ್ಕೆ 20 ಲಕ್ಷ, ಸುವರ್ಣಾವತಿಗೆ 50 ಲಕ್ಷ, ಯಗಚಿಗೆ 15 ಲಕ್ಷ, ವರುಣ ನಾಲೆಗೆ 10 ಲಕ್ಷ, ಗುಂಡಲ್ ಹೊಳೆಗೆ 5 ಲಕ್ಷ; ಮಂಚನ ಬೆಲೆಗೆ 5 ಲಕ್ಷ, ತಾರಕಾ ಪ್ರಾಜೆಕ್ಟಿಗೆ 5 ಲಕ್ಷ, ಹೆಬ್ಬಳ್ಳ ಯೋಜನೆಗೆ 5 ಲಕ್ಷ ಲಕ್ಷ್ಮಣತೀರ್ಥ ಯೋಜನೆಗೆ 5 ಲಕ್ಷ, ಲಕ್ಷ್ಮಣ ತೀರ್ಥಗೆ 5 ಲಕ್ಷ, ಸಾಗರ ದೊಡ್ಡ ಕೆರೆ ಯೋಜನೆಗೆ 5 ಲಕ್ಷ—ಹೀಗೆ ಒಟ್ಟು ಕಾವೇರಿ ಬೇಸಿನ್ನಿಗೆ 4.51 ಕೋಟಿ ರೂಪಾಯಿಗಳನ್ನೂ ಮತ್ತು ತುಂಗಭದ್ರಾ ಪ್ರಾಜೆಕ್ಟಿಗೆ 30 ಲಕ್ಷ, ಭದ್ರಾ ಪ್ರಾಜೆಕ್ಟಿಗೆ 30 ಲಕ್ಷ, ದೇವರ ಬೆಳಕೆರೆಗೆ 10 ಲಕ್ಷ ಮತ್ತು ಕೃಷ್ಣಾ ಬೇಸಿನ್ ಬಗ್ಗೆ 244 ಲಕ್ಷ, ಈ ರೀತಿ ಒಟ್ಟು 314 ಲಕ್ಷ ರೂಪಾಯಿಗಳನ್ನು ಒದಗಿಸಿದರು. ಅಂದರೆ ಸೌತ್ ಜೋನ್ ಮತ್ತು ನಾರ್ತ್ ಜೋನ್ ಎರಡಕ್ಕೂ ಒಟ್ಟು ಏಳು ಕೋಟಿ 65 ಲಕ್ಷ ರೂಪಾಯಿ

ಗಳನ್ನು ಒದಗಿಸಿದಂತಾಯಿತು. ಆದರೆ ಇವರ ಕೈಲಿ ಆಗ ದುಡ್ಡಿರಲಿಲ್ಲ. ಸಿಬ್ಬಂದಿಯ ಖರ್ಚಿಗಾಗುವಷ್ಟು ಹಣಮಾತ್ರ ಇತ್ತೆಂದು ಕಾಣುತ್ತದೆ. ಅಂದಾಗ ನಾನು ಇವರಿಗೆ ಒಂದು ಗೌರವವನ್ನು ಕೊಡಬೇಕಾದರೆ ಎ ಡಿಲಿಜೆಂಟ್ ಮೆಂಬರಾಫ್ ದಿಸ್ ಆನರಬಲ್ ಹೌಸ್ ಅವರು ಏನು ಮಾಡಿದರೆಂದರೆ ಬೀಸುವದೊಣ್ಣೆಗೆ ತಲೆ ತಪ್ಪಿಸಿಕೊಂಡರೆ ಮತ್ತೆ ಸಾವಿರ ವರ್ಷ ಆಯುಸ್ಸೆಂದ ಹಾಗೆ ಇವರು ಆಗೊಂದು ಕಮಿಟಿಯನ್ನು ನೇಮಕ ಮಾಡಿಬಿಟ್ಟರು. ಆ ಕಮಿಟಿಯನ್ನಾದರೂ ಏತಕ್ಕೆ ಮಾಡಿದರು? ಆ ಕಮಿಟಿ ಏನು ಒಂದು ವರದಿಯನ್ನು ಕೊಡುತ್ತದೋ ಅವನ್ನು ಅನುಸರಿಸಿ ರಾಜ್ಯದ ಹಿತದೃಷ್ಟಿಗೆ ತಕ್ಕಂತೆ ಕೆಲಸಗಳನ್ನು ಕೈಗೊಳ್ಳಬೇಕು ಅನ್ನುವುದೇ ಆ ಸಮಿತಿ ನೇಮಕದ ಉದ್ದೇಶವಾಗಿತ್ತು. ಹಾಗೆ ಸಮಿತಿಗಳನ್ನು ಇವರು ನೇಮಕ ಮಾಡಿದ ಮೇಲೆ ಆ ಟೆಕ್ನಿಕಲ್ ಸಮಿತಿಯವರೇನು ಶಿಫಾರಸುಗಳನ್ನು ಕೊಟ್ಟರು? ರಿಸೋರ್ಸಸ್ ಕಮಿಟಿಯವರೇನು ಶಿಫಾರಸುಗಳನ್ನು ಕೊಟ್ಟರು? ಅವರು ಕೊಟ್ಟಿರತಕ್ಕ ಶಿಫಾರಸುಗಳ ಪ್ರಕಾರ ಕಾವೇರಿ ಕಣಿವೆಯ ಯೋಜನೆಗಳನ್ನು ಕೈಗೊಳ್ಳುವುದಕ್ಕೇನು ತೊಂದರೆ ಇವರಿಗಿತ್ತು? ಆದರೆ ಆ ದಿವಸ ಈ ಸರ್ಕಾರದವರು ಒಂದು ಆರ್ಡರನ್ನು ನಂ. ಎಫ್.ಡಿ. 109 ಪಿ.ಯು.ಡಿ. 1969, ಬೆಂಗಳೂರು, ಡೇಟೆಡ್: 30 ಜನವರಿ 1970ರಲ್ಲಿ ಹೊರಡಿಸಿದರು. ಈ ಆಜ್ಞೆಯ ಪ್ರಕಾರ ದುಡ್ಡನ್ನು ಉಳಿಸಿಬಿಟ್ಟರು. ಹಣದ ಅನಾನುಕೂಲತೆಯನ್ನು ನೋಡಿಕೊಂಡು ಈ ಕೆಲಸಗಳನ್ನು ಲೋಕೋಪಯೋಗಿ ಇಲಾಖೆಯವರು ಮುಂದುವರಿಸತಕ್ಕದ್ದು ಎಂಬುದಾಗಿ ಮಾನ್ಯ ಶ್ರೀ ಕೆ. ಲಕ್ಕಪ್ಪನವರೂ ಮತ್ತು ಶ್ರೀ ಮಾಗಾವಿಯವರೂ ಹೇಳಿಬಿಟ್ಟರು. ಪಂಚಪಾಂಡವರು ದ್ರೌಪದಿಯ ಸರ್ಕಾರದಲ್ಲಿ ಹಣವನ್ನು ಖರ್ಚುಮಾಡತಕ್ಕ ವಿಧಾನ ಇದು. ಆದರೆ ಶ್ರೀಮಾನ್ ಬಿ. ರಾಚಯ್ಯನವರು ಕೊಡಗಿನಲ್ಲಿ ಒಂದು ಕಡೆ ಕಳೆದ ಜನವರಿ 5ನೇ ತಾರೀಖು ಸೋಮವಾರದ ದಿನ ಒಂದು ಭಾಷಣವನ್ನು ಮಾಡುತ್ತಿದ್ದ ಕಾಲದಲ್ಲಿ ಅವರು ಹೀಗೆ ಹೇಳಿದ್ದಾರೆ: ''ಕೇಂದ್ರದಲ್ಲಿ ನಮ್ಮ ರಾಜ್ಯದ ವರ್ಚಸ್ಸನ್ನು ಬೀರಿ ನಮಗೆ ಅಲ್ಲಿಂದ ಸಾಕಷ್ಟು ಸಹಾಯವನ್ನು ಪಡೆಯತಕ್ಕಂಥ ಒಂದನೇ ದರ್ಜೆಯ ನಾಯಕರನ್ನು ಇಲ್ಲಿಯವರು ಹಾಳು ಮಾಡಿದ್ದಾರೆ. ಅದರಿಂದ ಮೈಸೂರಿನ ಪ್ರಭಾವ ಕೇಂದ್ರದಲ್ಲಿ ಕಡಮೆಯಾಗಿ ಅವರು ನಮಗೆ ಮಲತಾಯಿ ಧೋರಣೆ ತೋರಿಸುವುದಕ್ಕೆ ಪ್ರಾರಂಭಮಾಡಿದರು'' ಎಂಬುದಾಗಿ. ನಮ್ಮ ರಾಜ್ಯದಲ್ಲಿದ್ದ ಒಂದನೇ ದರ್ಜೆಯ ನಾಯಕರನ್ನು ಶ್ರೀ ನಿಜಲಿಂಗಪ್ಪನವರೂ, ಮತ್ತು ಶ್ರೀ ವೀರೇಂದ್ರ ಪಾಟೀಲರೂ ತುಳಿದು ತಾವು ಮುಂದೆ ಬಂದಿದ್ದಾರೆ. ಆದರೆ ಇವರಿಗೆ ಹಾಗೆ ಅಲ್ಲಿ ಒಂದು ಪ್ರಭಾವ ಬೀರಲು ಸಾಧ್ಯವೇ? ನನ್ನಲ್ಲಿ ಆ ಭಾಷಣದ ಕಟ್ಟಿಂಗನ್ನು ಇಟ್ಟುಕೊಂಡಿದ್ದೇನೆ ಇಂಥ ಬುದ್ಧಿವಂತರು ಮಾಡಿದ ಭಾಷಣಗಳನ್ನು ಕಟ್‌ಮಾಡಿಟ್ಟುಕೊಂಡು ಅವುಗಳನ್ನು ನೋಡುತ್ತಿದ್ದರೆ ನಮಗೂ ಬುದ್ಧಿ ಜಾಸ್ತಿಯಾಗುತ್ತದೆ ಅನ್ನುವ ದೃಷ್ಟಿಯಿಂದ ನಾನು ಆ ಭಾಷಣದ ಕಟ್ಟಿಂಗನ್ನು ಇಟ್ಟುಕೊಂಡಿದ್ದೇನೆ. ಶ್ರೀಮಾನ್ ರಾಚಯ್ಯನವರು ಹೇಳಿದ ಹಾಗೆ ಈ ದಿವಸ ನಮ್ಮಲ್ಲಿ ಒಂದನೇ ದರ್ಜೆಯ ನಾಯಕರು ರಾಜ್ಯದ ಒಳಗೂ ಇಲ್ಲ—ಹೊರಗೂ ಇಲ್ಲ. ಈಗಲೂ ಕೂಡ ಆಳಿತಪಕ್ಷದಲ್ಲಿ ಒಂದನೇ ದರ್ಜೆಯ ನಾಯಕರಿಲ್ಲ ಎಂಬುದು ಸ್ಪಷ್ಟ. ಅದು ಸ್ವಾಭಾವಿಕವಾದದ್ದೂ ಹೌದು. ಆದರೆ ಸುದೈವದಿಂದ ಇನ್ನೂ ಇತ್ತ ಕಡೆ ಇರತಕ್ಕ ಸದಸ್ಯರಲ್ಲಿ ಕೆಲವರು ಒಂದನೇ ದರ್ಜೆಯ ನಾಯಕರು ಇದ್ದಾರೆ. ಅವರೆಲ್ಲರಿಗೂ ತಾವು ಅನುಕೂಲ ಮಾಡಿಕೊಡಿ, ಅದರಿಂದ ರಾಜ್ಯಕ್ಕೆ ಒಳ್ಳೆಯದಾಗುತ್ತದೆಂದು ನಾನು ತಮ್ಮಲ್ಲಿ ಅರಿಕೆಮಾಡಿಕೊಳ್ಳುತ್ತೇನೆ.

ಇನ್ನು ಕರ್ಣಾಟಕದ ಹೆಸರಿನ ಬಗ್ಗೆ ಹೇಳುವುದಾದರೆ—ಶ್ರೀ ನಾಗಪ್ಪನವರು ಕರ್ಣಾಟಕ ಎಂಬ ಹೆಸರನ್ನು ಏತಕ್ಕೆ ಇಡಬಾರದು ಎಂದು ಕೇಳುತ್ತಿದ್ದಾರೆ. ಒಂದು ಹೆಸರನ್ನು ಇಡತಕ್ಕ ವಿಚಾರದಲ್ಲೂ ಹೆಸರನ್ನು ಕೇಳಿದರೆ ಅದು ಇಂಪಾಗಿರಬೇಕು, ಮಾಧುರ್ಯವಾಗಿರಬೇಕು, ಉದಾಹರಣೆಗೆ-ಮಲ್ಲಿಗೆ, ಹೆಸರನ್ನು ಕೇಳಿದ ಕೂಡಲೆ ಅದರ ಸುವಾಸನೆ, ಅದರ ಮೃದುತ್ವ ಮನಸ್ಸಿಗೆ ಬರುತ್ತದೆ, ಹಾಗೇ ''ಕತ್ತೆ'' ಎಂಬ ಹೆಸರನ್ನು ಕೇಳಿದ ಕೂಡಲೆ ಅದರ ಒರಟು ಧ್ವನಿ, ಅದರ ಕರ್ಕಶ ಕಿರುಚಾಟ, ಒರಟಾದ ಕೂದಲು ಇವೆಲ್ಲಾ ಮನಸ್ಸಿನಲ್ಲಿ ಉದ್ಭವವಾಗುತ್ತವೆ. ಹಾಗೇ ಮೊದಲು ''ಕರ್ಣಾಟಕ'' ಎಂಬ ಹೆಸರು ಮಲ್ಲಿಗೆಯ ಹಾಗಿತ್ತು. ಈಗ ಅದನ್ನು ಕತ್ತೆಯನ್ನಾಗಿ ಪರಿವರ್ತನೆ ಮಾಡಿದ್ದಾರೆ. ಕರ್ಣಾಟಕ ಅನ್ನುವ ಹೆಸರು ಈ ದಿವಸ ಬಹಳ ಕಳಂಕ ಹೊಂದಿದೆ. ಅದಕ್ಕೆ ಕಾರಣ ಆ ಹೆಸರನ್ನು ಬಳಸಿದವರೇ. ಆ ಹೆಸರನ್ನು ಬಳಸಿದವರು ಯಾರು ಎಂಬುದನ್ನು ನೋಡಿ—ಕರ್ಣಾಟಕ ಟ್ರೇಡರ್ಸ್—ಕರ್ಣಾಟಕ ಕನ್‌ಸ್ಟ್ರಕ್ಷನ್—ಕರ್ಣಾಟಕ ಕಾರ್ಪೊರೇಷನ್—ಕರ್ಣಾಟಕ ಎಕ್ಸ್‌ಪೋರ್ಟರ್ಸ್ ಈ ಸಂಸ್ಥೆಯವರು ಆ ಹೆಸರಿನ ಗೌರವವನ್ನು ಕಳೆದುಬಿಟ್ಟಿದ್ದಾರೆ. ಆದ್ದರಿಂದ ಈ ದಿವಸ ಸುಮ್ಮನೆ ''ಕರ್ಣಾಟಕ'' ಎಂದರೆ ಸಾಕು ಅದರ ಮುಂದೆ ಟ್ರೇಡರ್ಸ್ ಅಥವಾ ಅದೇ ರೀತಿಯ ಇನ್ನಾವುದೋ ಒಂದು ದುರ್ವ್ಯವಹಾರದ ಕಂಪೆನಿ ಇರಬೇಕೆಂಬ ಭಾವನೆ ಜನರಲ್ಲಿ ಬರುವಂತಾಗಿದೆ.

ಶ್ರೀ ಎಂ. ನಾಗಪ್ಪ.—ಆಗಲೂ ಕೂಡ ಆ ಕೆಟ್ಟ ಹೆಸರು ಮೊದಲು ಮೈಸೂರಿಗೆ ಸೇರುತ್ತದೆ. ಹೇಗೆಂದರೆ ಅವರಿಗೆಲ್ಲಾ ಸಹಾಯಕರಾಗಿರತಕ್ಕವರು ''ಮೈಸೂರು-ಸರ್ಕಾರದವರು........ ಎಂಬುದನ್ನು ಮಾನ್ಯ ಸದಸ್ಯರು ಮರೆಯಬಾರದೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಎನ್. ನಂಜೇಗೌಡ.—ಹಾಗೆ ಗುರುರಾಜಾ ಅಂಡ್ ಕಂಪೆನಿ ಮತ್ತು ಕರ್ಣಾಟಕ ಟ್ರೇಡರ್ಸ್ ಹೀಗೆ ಇನ್ನೂ 7-8 ಕಂಪೆನಿಗಳನ್ನು ಶ್ರೀಮಾನ್ ನಿಜಲಿಂಗಪ್ಪನವರ ಸ್ನೇಹಿತರ ಹೆಸರಿನಲ್ಲಿ ಅವರಿಗೆ ಬೇಕಾದ ಇಷ್ಟ ಮಿತ್ರರ ಹೆಸರಿನಲ್ಲಿ ನಡೆಸಲಾಗುತ್ತಿದೆ. ಹೀಗಾಗಿ ಕರ್ಣಾಟಕ ಎಂಬ ಹೆಸರು ಬಹಳ ಮಲಿನವಾಗಿದೆ. ಸಗಣಿಯನ್ನು ಹೊರತಕ್ಕವನ ಸಂಗಡ ಸರಸವಾಡುವುದಕ್ಕಿಂತ ಗಂಧೂಡಿಯುವನ ಕೈಲಿ ಗುದ್ದಾಡುವುದು ಲೇಸೆಂಬಂತೆ ಈ ಒಳ್ಳೆಯ ಹೆಸರು ಕಳಂಕಕ್ಕೆ ಈಡಾಗಿದೆ. ಆದ್ದರಿಂದ ಮೊದಲು ಆ ಕಂಪೆನಿಗಳನ್ನು ಲಿಕ್ವಿಡೇಟ್ ಮಾಡಬೇಕೆಂದು ಹೇಳುತ್ತೇನೆ. ಅನಂತರ ಆ ಕಂಪೆನಿಯವರು 1956ಕ್ಕೆ ಹಿಂದೆ ಯಾವ ಸ್ಥಿತಿಯಲ್ಲಿದ್ದರು ಎಂಬುದನ್ನು ಸಹ ನೋಡಬೇಕು. 1961ರಲ್ಲಿ ಹೇಗಿತ್ತು? 1947ರಲ್ಲಿ ಯಾವ ರೀತಿ ಇತ್ತು ಮತ್ತು 1952ರಲ್ಲಿ ಈ ಕಂಪನಿಗಳು ಹೇಗೆ ಆದವು? ಮತ್ತು 1956ರಲ್ಲಿ ಷೇರು ಹೋಲ್ಡರುಗಳು ಯಾವರೀತಿ ಆದರು? ಮತ್ತು 1956ರಿಂದ 1962ರ ವರೆಗೆ ಹೇಗಾಯಿತು ಇವನ್ನೆಲ್ಲಾ ನಾವು ವಿಚಾರ ಮಾಡಬೇಕು. ಪೂರ್ವದಲ್ಲಿ ಇದರಲ್ಲಿ ಯಾವ ರೀತಿ ದೆವ್ವದ ನೃತ್ಯಕಾಂಡಗಳು ಆದವು ಎನ್ನುವುದನ್ನು ನಾವು ಪರಿಶೀಲನೆ ಮಾಡಬೇಕಾದರೆ 1952 ರಿಂದ 1956 ರ ವರೆಗೆ ಹೇಗಿತ್ತು? 1962ರ ವರೆಗೆ ಯಾವ ರೀತಿ ಪ್ರಭಾವಯುತವಾಗಿತ್ತು ಎನ್ನುವುದನ್ನು ವಿಚಾರ ಮಾಡಬೇಕು.

ಶ್ರೀ ಎನ್. ಎ. ಚನ್ನೇಗೌಡ.—ಇವೆಲ್ಲಾ ಶನಿಸಂತಾನಗಳು. ಇವರ ಬಗ್ಗೆ ಈಗೇಕೆ?

ಶ್ರೀ ಎಚ್. ಎನ್. ನಂಜೇಗೌಡ.—ಹೌದು, ತಾವು ಹೇಳುವ ಹಾಗೆ ಅದರ ವಿವರಗಳೆಲ್ಲಾ ಇಲ್ಲಿ ಅನಗತ್ಯ ಆದರೂ ಇಲ್ಲಿಯವರೆಗೆ ಯಾವ ರೀತಿ ಕೆಲಸಕಾರ್ಯಗಳನ್ನು ಯಾವ ರೀತಿ ಪ್ರಭಾವಕ್ಕೆ ಒಳಗಾಗಿ ಮಾಡಿದ್ದಾರೆ ಎನ್ನುವುದನ್ನು ತೋರಿಸಬೇಕಾಗಿದೆ. ಹಿಂದೆ ನಾವು ಇದರ ಬಗ್ಗೆ ಹೇಳಿದಾಗ ಅವರೇ ಇದನ್ನು ಒಪ್ಪಿಕೊಂಡಿದ್ದಾರೆ. ಆದುದರಿಂದ ಜನರ ಮನಸ್ಸಿನಲ್ಲಿರುವ ಕಲ್ಮಷವನ್ನು ತೊಳೆಯಬೇಕಾದರೆ ನೀವೇ ಇದಕ್ಕೆ ಸರಿಯಾದ ಕಾರ್ಯಕ್ರಮಗಳನ್ನು ಮಾಡಿ ಜನರಿಗೆ ತೋರಿಸಿಕೊಡಬೇಕು. ಹೇಗಾದರೂ ಪರವಾಗಿಲ್ಲ. ನಾವು ಮಾಡುವುದನ್ನು ಮಾಡುತ್ತೇವೆ ಎಂದು ಹೇಳಬಹುದು. ನಾವು ದೇಶದಲ್ಲಿ ಇರುವ ಜನತೆಯ ಮುಂದೆ ನೀವು ಇದುವರೆಗೆ ಏನು ಮಾಡಿದ್ದೀರಿ ಎನ್ನುವುದನ್ನು ತೋರಿಸಬೇಕಾಗಿದೆ. ಇದಕ್ಕಾಗಿ ನಾವು ಸರಕಾರವನ್ನು ಸೆನ್ಸರು ಮಾಡಿದರೂ ಪರವಾಗಿಲ್ಲ ಎಂದು ಹೇಳಬಹುದು. ನಮ್ಮ ಹಳ್ಳಿಗಾಡಿನಲ್ಲಿರುವ ಜನ ಈಗ ಇರುವ ಆಡಳಿತದ ಬಗ್ಗೆ ಯಾವ ರೀತಿ ಮಾತಾಡುತ್ತಿದ್ದಾರೆ ಎಂದರೆ ಇಂದು ಆಡಳಿತ ಪಕ್ಷದಲ್ಲಿರುವ ಜನ ಎಲ್ಲ ಬರೀ ಕೈ ಎತ್ತುವವರೇ ಆಗಿದ್ದಾರೆ. ನಾವು ವಿರೋಧ ಪಕ್ಷದಲ್ಲಿರುವ ಜನ ಸರಕಾರದ ದೋಷಗಳನ್ನು ಎತ್ತಿ ತೋರಿಸಿದರೂ ಅದರ ಬಗ್ಗೆ ಸರಕಾರ ಯಾವ ಕಾರ್ಯಕ್ರಮವನ್ನೂ ತೆಗೆದುಕೊಳ್ಳುತ್ತಿಲ್ಲ. ಇದರಿಂದಾಗಿ ಇಂದು ನಮ್ಮ ಸದಸ್ಯರ ಬಗ್ಗೆ ಜನರಲ್ಲಿ ನಂಬಿಕೆಯೇ ಹೋಗಿ ಬಿಟ್ಟಿದೆ. ಪರಿಸ್ಥಿತಿ ಹೀಗಿರುವಾಗ ಸರಕಾರದ ಮೇಲೆ ಈ ಸಭೆ ಏನು ಕಾರ್ಯಕ್ರಮ ಕೈಗೊಳ್ಳಬೇಕಾದರೂ, ನಾನು ಮೊದಲೇ ಹೇಳಿದಂತೆ ಕರ್ಣಾಟಕ ಹಾಗೂ ನಿಜಲಿಂಗಪ್ಪ ಕಂಪನಿಗಳವರು 'ಏನೇನು ವ್ಯವಹಾರಗಳನ್ನು ಮಾಡಿದ್ದಾರೋ ಅದರ ಬಗ್ಗೆ ಏನು ಕ್ರಮಗಳನ್ನು ಮಾಡಿದ್ದಾರೆ ಅವುಗಳ ವಿವರಗಳನ್ನು ಈ ಸಭೆಗೆ ಒದಗಿಸಬೇಕು. ಈ ಕರ್ಣಾಟಕ ಕಂಪೆನಿಯವರು ನಿಜಲಿಂಗಪ್ಪನವರ ಹೆಸರಿನಲ್ಲಿ ಇಲ್ಲದಿದ್ದರೂ ಬೇರೆಯವರ ಹೆಸರಿನಲ್ಲಿ ಎಷ್ಟು ಮನೆಗಳನ್ನು ರಾಜಾಜಿನಗರದಲ್ಲಿ ಹಾಗೂ ಸದಾಶಿವನಗರದಲ್ಲಿ ಕಟ್ಟಿದ್ದಾರೆ? ಇದರ ವಿಚಾರಗಳನ್ನು ಗಮನಕ್ಕೆ ತೆಗೆದುಕೊಂಡು ಇವರ ಮೇಲೆ ಏನು ಕ್ರಮ ಕೈಗೊಂಡಿದೆ ಎನ್ನುವುದು ಇದುವರೆಗೂ ತಿಳಿಯಲಿಲ್ಲ. ಇವನ್ನೆಲ್ಲಾ ಮುಟ್ಟುಗೋಲು ಹಾಕುವ ವ್ಯವಸ್ಥೆ ಬರುವುದಿಲ್ಲ. ಇಂತಹ ವಿಚಾರಗಳು ಹೇಳಬೇಕಾದರೆ ಬೇಕಾದಷ್ಟಿವೆ. ಇದು ಹೇಗಿದೆ ಎಂದರೆ ಶರೀರಕ್ಕೆ ತೊನ್ನು ಕಚ್ಚಿದರೆ ಯಾವ ರೀತಿ ಶರೀರವನ್ನೇ ತಿನ್ನುತ್ತೋ ಹಾಗೆ ಈ ಕಂಪೆನಿಗಳು ರಾಜ್ಯದಾದ್ಯಂತ ಹರಡಿಕೊಂಡಿವೆ. ಇವರ ಮೇಲೆ ಸರಿಯಾದ ಕ್ರಮ ತೆಗೆದುಕೊಂಡು ಈಗ ಬಂದಿರುವ ಕಲ್ಮಷವನ್ನು ತೊಳೆಯಬೇಕೆಂದು ಇಲ್ಲಿ ಹೇಳುತ್ತೇನೆ. ಈಗ ಸಭೆಯ ಮುಂದೆ ಬಂದಿರತಕ್ಕ ನಿರ್ಣಯವನ್ನು ವೋಟಿಗೆ ಹಾಕುವುದಕ್ಕೆ ಮುಂಚೆ ಜನರಲ್ಲಿ ಸರಿಯಾದ ನಂಬಿಕೆ ಬರಲು ನಿಜಲಿಂಗಪ್ಪ ಕಂಪೆನಿಗಳವರಿಂದ ಆಗಿರುವ ಕಲ್ಮಷವನ್ನು ತೊಡೆಯಲು ಸೂಕ್ತವಾದ ಕಾರ್ಯಕ್ರಮ ಕೈಗೊಳ್ಳಬೇಕಾದುದು ಆವಶ್ಯಕ ಎಂದು ಹೇಳುತ್ತೇನೆ. ಸರಕಾರ ನೂರು ತಪ್ಪು ಮಾಡುತ್ತವೆ. ಇದರಲ್ಲಿ ವಿರೋಧ ಪಕ್ಷದವರು ಸುಮಾರು ಹತ್ತು ತಪ್ಪುಗಳನ್ನು ಪತ್ತೆಹಚ್ಚಬಹುದು. ಆದರೆ 90 ತಪ್ಪುಗಳು ಹಾಗೆ ಉಳಿಯುತ್ತವೆ. ಆದರಲ್ಲೂ ನಮ್ಮ ಮುಖ್ಯ ಮಂತ್ರಿಗಳಾಗಿರುವ ಶ್ರೀ ವೀರೇಂದ್ರ ಪಾಟೀಲರವರ ನಾಯಕತ್ವದಲ್ಲಿ ಇದರ ಬಗ್ಗೆ ಹೇಳಿದರೂ ಏನೂ ಆಗುವುದಿಲ್ಲ.

ಇದಕ್ಕೆ ಕಾರಣವೇನು ? ಇದರ ಬಗ್ಗೆ ಹೇಳುವಾಗ ಇಲ್ಲಿ ಒಂದು ವಿಚಾರ ಹೇಳಬೇಕಾಗಿದೆ. ಹಿಂದೆ ನಮಗೆ ರಷ್ಯಾ ದೇಶದಿಂದ ಕೆಲವು ವಿಧವಾದ ಚಿತ್ರಗಳುಳ್ಳ ಪತ್ರಿಕೆಗಳು ಬರುತ್ತಿದ್ದವು. ಇದರಲ್ಲಿ ಅವರ ನಾಯಕರಾದ ಲೆನಿನ್ ಹಾಗೂ ಇನ್ನಿತರ ನಾಯಕರ ಫೋಟೋಗಳು ಇರುತ್ತಿದ್ದವು. ಅದರಂತೆ ಇಂದು ನಮ್ಮ ಶಾಸಕರಿಗೆ ಒಂದು ಚಿತ್ರವುಳ್ಳ ಪ್ರಕಟಣೆಯು ಪುಸ್ತಕ ನಮಗೆ ಬಂದಿದೆ. ಇದರಲ್ಲಿ ನಮ್ಮ ಮಾನ್ಯ ಮುಖ್ಯ ಮಂತ್ರಿಗಳ ಫೋಟೋ ಹಾಗೂ ಇನ್ನಿತರ ಫೋಟೋಗಳನ್ನು ಹಾಕಿಸಿ ಪ್ರಚಾರ ಶಾಖೆಯ ಮೂಲಕ ಅಚ್ಚು ಹಾಕಿಸಿ ಕಳುಹಿಸಿದ್ದಾರೆ. ಈಚೆಗೆ ನಮ್ಮ ಮುಖ್ಯ ಮಂತ್ರಿಗಳು ಪಿ. ಬಿ. ಶ್ರೀನಿವಾಸ್‌ರವರನ್ನು ಪ್ರೆಸ್ ಸೆಕ್ರೆಟರಿಯಾಗಿ ನೇಮಿಸಿ ಕೊಂಡಿದ್ದಾರಂತೆ. ಇವರು ಇಲ್ಲಿ ಸರ್ವಾಧಿಕಾರಿಯಂತೆ ವರ್ತನೆ ಮಾಡುತ್ತಾ ಇಂತಹ ಫೋಟೋಗಳಿಂದ ಕೂಡಿರುವ ಕೆಲವು ಪ್ರಕಟಣೆಗಳನ್ನು ಹೊರತರುತ್ತಿದ್ದಾರೆ. ಇವರ ವ್ಯವಹಾರ ಯಾವ ರೀತಿ ನಡೆಯುತ್ತಿದೆ ಎನ್ನುವುದೂ ನಮಗೆ ಸರಿಯಾಗಿ ಗೊತ್ತಾಗುತ್ತಿಲ್ಲ. ನಮ್ಮ ದೇಶದ ಭಾವೈಕ್ಯತೆಗೆ ಏನೇನು ಸಾಧನೆ ಮಾಡಬೇಕು ಎನ್ನುವುದನ್ನು ಬಿಟ್ಟು ಜನರನ್ನು ಸ್ಪೈಡ್ ಟ್ರಾಕ್ ಮಾಡುವ ಹಾಗೆ ಮಾಡಿದರೆ, they have to reap the benefit. ಇನ್ನು ಸ್ಟೇಟ್ ರಿ-ಆರ್ಗನೈಜೇಷನ್ ರಿಪೋರ್ಟ್ ಬಗ್ಗೆ ಕೆಲವು ವಿಚಾರಗಳನ್ನು ಹೇಳಬೇಕಾಗಿದೆ. ಈ ಒಂದು ವರದಿಯ ಆಧಾರದ ಮೇಲೆ ರಾಜ್ಯಪುನರ್ವಿಂಗಡಣೆಯಾಯಿತು. ಈ ವರದಿಯ 91ನೇ ಪೇಜ್‌ನಲ್ಲಿ ಏನು ಹೇಳಿದೆ ಎಂಬುದನ್ನು ಹಿಂದೆಯೇ ಹೇಳಿದ್ದೆ. ಪೇಜ್ 65ರಲ್ಲಿ " Overemphasis on the historical factor is likely to lead to a feeling of rivalry and exclusive narrowness in different regions." ಎಂಬುದಾಗಿ ಹೇಳಿದೆ. ಚಿಕ್ಕ ರಾಜ್ಯ ಇದ್ದರೆ ಏನಾಗುತ್ತದೆ, ದೊಡ್ಡ ರಾಜ್ಯ ಇದ್ದರೆ ಏನಾಗುತ್ತದೆ ಎಂಬ ಬಗ್ಗೆ ಕೆಲವು ಸೂಚನೆಗಳನ್ನು ಸಹ ಕೊಟ್ಟಿದ್ದಾರೆ. ಈ ವರದಿಯಲ್ಲಿರುವ ಹಲವು ಅಂಶಗಳನ್ನು ಗಮನದಲ್ಲಿಟ್ಟುಕೊಂಡು ರಾಜ್ಯ ಪುನರ್ವಿಂಗಡಣೆಯಾಯಿತು ಎಂಬುದನ್ನು ನಾವು ನೆನೆದುಕೊಂಡು ಬೇರೆ ವಿಚಾರಗಳ ಬಗ್ಗೆ ಮುಂದುವರೆಯಬೇಕಾಗುತ್ತದೆ. ಇದೇ ಸಮಯದಲ್ಲಿ ಶ್ರೀಮಾನ್ ನಿಜಲಿಂಗಪ್ಪನವರ ಬಗೆ ಒಂದು ವಿಚಾರ ಹೇಳಬೇಕಾಗಿದೆ. ಇವತ್ತು ದಾವಣಗೆರೆಯಲ್ಲಿ ಗಪ್ಪಾ ಅವರ ಅಂದರೆ ನಿಜಲಿಂಗಪ್ಪನವರ ಸಪೋರ್ಟರ್ಸ್ ಕೆಲವರು ಇದ್ದಾರೆ. ದಾವಣಗೆರೆಯಲ್ಲಿರುವ ಗಣೇಶ ಟೆಕ್ಸ್‌ಟೈಲ್ಸ್ ಮತ್ತು ಶಂಕರ ಟೆಕ್ಸ್‌ಟೈಲ್ಸ್ ಮಿಲ್‌ಗಳನ್ನು ನಡೆಸುತ್ತಿರುವವರು ನಿಜಲಿಂಗಪ್ಪನವರ ಸಪೋರ್ಟರ್ಸ್ ಆಗಿದ್ದಾರೆ. ಈ ಮಿಲ್‌ಗಳಿಗೆ ಸರ್ಕಾರದವರು ಬೇಕಾದಷ್ಟು ಹಣವನ್ನು ಸಾಲವಾಗಿ ಕೊಟ್ಟಿದ್ದಾರೆ. ಎಷ್ಟು ಕೊಟ್ಟಿದ್ದಾರೆ ಎಂಬುದನ್ನು ನಾನು ಹೇಳುವುದಕ್ಕಿಂತ ಸರ್ಕಾರದವರೇ ಹೇಳಿದರೆ ಒಳ್ಳೆಯದಾಗುತ್ತದೆ. ಮತ್ತು ಅದರ ವಿವರಗಳನ್ನು ಸಭೆಯ ಮುಂದಿಡಬೇಕೆಂದು ಕೇಳಿಕೊಳ್ಳುತ್ತೇನೆ. ಇಷ್ಟೊಂದು ಭಾರಿ ಹಣವನ್ನು ಅವರಿಗೆ ಕೊಟ್ಟು ಇವರ ಬೊಜ್ಜನ್ನು ಬೆಳೆಸುವುದಕ್ಕೆ ಕಾರಣವೇನು ಎಂಬುದನ್ನು ಹೇಳಬೇಕು. ಆ ರೀತಿ ಕೊಡುವುದಕ್ಕೆ ಗುರುತರವಾದ ಕಾರಣ ಏನಿತ್ತು ಎಂಬುದನ್ನು ಸಹ ಹೇಳಬೇಕು. ಈ ಮಿಲ್‌ನವರಿಗೆ ಸರ್ಕಾರದಿಂದ ಸಾಲವಾಗಿ ಹಣ ಕೊಟ್ಟು ಅವರಿಂದ ಬೇರೆ ರೂಪದಲ್ಲಿ ಹಣ ತೆಗೆದುಕೊಳ್ಳುವುದಕ್ಕೆ ಇವರು ಅವಕಾಶ ಮಾಡಿಕೊಂಡಿದ್ದಾರೆ. ಇವತ್ತು ರಾಜ್ಯದ ಹೆಸರನ್ನು ಬದಲಾವಣೆ ಮಾಡುವ ಬಗ್ಗೆ ಈ ರಾಜ್ಯದ ಜನರ ಮನೋಭೂಮಿಕೆ ಕೆಟ್ಟುಹೋಗಿದೆ. ಈ ಸಭೆಯಲ್ಲಿರುವ ಮಾನ್ಯ ಸದಸ್ಯರ ಮನೋಭೂಮಿಕೆಯೂ ಕೂಡ ಈ ವಿಷಯದಲ್ಲಿ ಕೆಟ್ಟು ಹೋಗಿದೆ. ಇದಕ್ಕೆ ಈಗಿನ ಸರ್ಕಾರವೇ ಕಾರಣ ಎಂದು ಹೇಳಬಹುದು. ಈಗಿನ ಆಡಳಿತ ಪದ್ಧತಿಯನ್ನು ನೋಡುವುದಾದರೆ ನಿಜವಾಗಿಯೂ ಜನರಲ್ಲಿ ಭಾವೈಕ್ಯಸಾಧನೆಯಾಗುವುದಿಲ್ಲವೆಂದು ಹೇಳುತ್ತೇನೆ. ಕೆಲವೊಂದು ವಿಚಾರಗಳಲ್ಲಿ ರಾಜ್ಯದ ಜನರು ಬಡಿದಾಡುವ ಸ್ಥಿತಿಯಲ್ಲಿದ್ದಾರೆ. ಈ ಒಂದು ಸಂದೇಹ ಆ ಕಡೆಯ ಸದಸ್ಯರಲ್ಲಿಯೂ ಸಹ ಇದೆ. ಈಗಿನ ಸರ್ಕಾರದ ಆಡಳಿತದ ಬಗ್ಗೆ ಆ ಕಡೆಯ ಕೆಲವು ಸದಸ್ಯರಿಗೆ ಜಿಗುಪ್ಸೆ ಬಂದಿದೆ. ಅಂತಹ ಸದಸ್ಯರು ಈಕಡೆಗೆ ಬರುವುದಕ್ಕೆ ಸಮಯ ನೋಡುತ್ತಿದ್ದಾರೆ. ಜಾತಕಪಕ್ಷಿ ಯಾವಾಗಲೂ ಮಳೆಯ ನೀರಿಗಾಗಿ ಕಾಯುತ್ತಿರುತ್ತದೆ. ಅದು ನೆಲದಲ್ಲಿರುವ ನೀರನ್ನು ಕುಡಿಯುವುದಿಲ್ಲ ಮಳೆ ಬಂದಾಗ ಆಕಾಶಕ್ಕೆ ಬಾಯಿ ಮಾಡಿಕೊಂಡು ಮಳೆ ನೀರನ್ನು ಕುಡಿಯುತ್ತದೆ. ಅದರಂತೆ ಆ ಕಡೆಯ ಕೆಲವು ಮಾನ್ಯ ಸದಸ್ಯರು ಈ ಕಡೆಗೆ ಬರುವುದಕ್ಕೆ ಸಮಯ ನೋಡುತ್ತಿದ್ದಾರೆ. ನಾನಾದರೂ ಹೇಳುತ್ತೇನೆ, ಈಗ ಈಕಡೆಗೆ ಬರುವುದಕ್ಕೆ ಕಾಲ ಪಕ್ವವಾಗಿದೆ ಎಂಬುದನ್ನು. ಕೆಲವರಿಗೆ ಶ್ರೀ ಶಿವಪ್ಪನವರನ್ನು ಮುಖ್ಯಮಂತ್ರಿಯನ್ನಾಗಿ ಮಾಡುವುದು ಇಷ್ಟವಿಲ್ಲದಿರಬಹುದು. ಏಕೆಂದರೆ ಅವರು ಪಿ. ಎಸ್.ಪಿ. ಕಡೆಯವರಾಗಿದ್ದಾರೆಂದು. ಈಗ ಕೆಲವು ಕಾಂಗ್ರೆಸ್‌ನವರೇ ಈಕಡೆ ಬಂದಿರುವುದರಿಂದ ಅವರ ನೇತೃತ್ವದಲ್ಲಿ ಬೇಕಾದರೆ ಸರ್ಕಾರ ರಚಿಸುವುದಕ್ಕೆ ಈಗ ಕಾಲ ಪಕ್ವವಾಗಿದೆ. ಆದ್ದರಿಂದ ಜಾತಕ ಪಕ್ಷಿಯ ಹಾಗೆ ಕಾಯುತ್ತಿರುವವರು ಈಗ ಈಕಡೆಗೆ ಬರುವುದು ಒಳ್ಳೆಯದು. ಕೋಗಿಲೆ ವರ್ಷದ ಎಲ್ಲ ಕಾಲದಲ್ಲಿಯೂ ಗಾನವನ್ನು ಹಾಡುವುದಿಲ್ಲ. ವಸಂತಕಾಲ ಬಂದಾಗ ಮಾತ್ರ ಅದು ಹಾಡುತ್ತದೆ. ಅದರಂತೆ

(ಶ್ರೀ ಎಚ್. ಎನ್. ನಂಜೇಗೌಡ)

ಈಗ ವಸಂತಕಾಲ ಬಂದಿದೆ. ಇಲ್ಲಿಯವರೆಗೆ ಶ್ರೀ ನಿಜಲಿಂಗಪ್ಪನವರ ಮತ್ತು ಶ್ರೀ ವೀರೇಂದ್ರ ಪಾಟೀಲ್‌ರ ಕಾಡಿನೊಳಗೆ ಬೀಡನ್ನು ಮಾಡಿಕೊಂಡು ಕೆಲವು ಕಾಲ ತಳ್ಳಿ ಬೇಜಾರಾಗಿರುವವರು ಈ ಕಡೆಗೆ ಬರುವುದಕ್ಕೆ ಕಾಲ ಪಕ್ವವಾಗಿದೆ ಎಂದು ಹೇಳುತ್ತೇನೆ. ಈಕಡೆಗೆ ಬರಬೇಕೆಂದು ಮನಸ್ಸಿನಲ್ಲಿಯೇ ಮಂಡಿಗೆ ತಿನ್ನುತ್ತಾ ಕುಳಿತಿದ್ದವರು ಈ ಸಮಯದಲ್ಲಿ ಈಕಡೆಗೆ ಬಂದುಬಿಡುವುದು ಒಳ್ಳೆಯದೆಂದು ಸೂಚನೆ ಕೊಡುತ್ತೇನೆ. ಈಗಿನ ಸರ್ಕಾರ ಬದಲಾವಣೆಯಾಗುವವರೆಗೆ ಹೆಸರಿನ ಬದಲಾವಣೆಯ ಬಗ್ಗೆ ರಾಜ್ಯದ ಜನರ ಮನೋಭೂಮಿಕೆ ತಯಾರಾಗುವುದಿಲ್ಲವೆಂಬ ತೀರ್ಮಾನಕ್ಕೆ ಬಂದಿದ್ದೇನೆ. ಈ ರಾಜ್ಯದ ಜನರಲ್ಲಿ ಭಾವೈಕ್ಯತೆ ಉಂಟಾಗಬೇಕಾದರೆ ಸರ್ಕಾರ ಬದಲಾವಣೆಯಾಗಬೇಕು. ಸರ್ಕಾರವನ್ನು ಬದಲಾವಣೆ ಮಾಡಲು ಈಗ ಕಾಲ ಪಕ್ವವಾಗಿದೆ. ಶ್ರೀಮಾನ್ ಅಗ್ನಿಹೋತ್ರಿ ಅವರು ಈಕಡೆಗೆ ಬಂದರೆ ಕ್ಷೇಮ ಎಂದು ಹೇಳುತ್ತೇನೆ. ಇವತ್ತು ಒಳ್ಳೆಯ ಜನರ ಕೈಗೆ ಆಡಳಿತ ಕೊಡುವುದು ಅವಶ್ಯಕವಾಗಿದೆ.

ಶ್ರೀ ಎನ್. ಎ. ಚನ್ನೇಗೌಡ.—ಆಲೂರು ಹನುಮಂತಪ್ಪನವರು ಈಕಡೆಗೆ ಬರುವುದು ಬೇಡವೇ?

ಶ್ರೀ ಎಚ್. ಎನ್. ನಂಜೇಗೌಡ.—ಅವರು ಈಕಡೆಗೆ ಬಂದರೆ ಸೇರಿಸುವುದು ಬೇಡ. ಅವರಂತೆ ನಿರಾಳವಾಗಿ, ಸರಳವಾಗಿ ಮತ್ತು ಹಗುರವಾಗಿ ಆಡಳಿತದ ಅಧಿಕಾರವನ್ನು ಕೈಗೆ ತೆಗೆದುಕೊಂಡಿರುವವರನ್ನು ನಾನು ಇದುವರೆಗೆ ನೋಡಿಲ್ಲ. ಆದ್ದರಿಂದ ಅವರು ಅಲ್ಲಿಯೇ ಇರಲಿ. ಶ್ರೀ ವಿಠಲ್‌ದಾಸಸೆಟ್ಟರು ಈಗ ಈಕಡೆಗೆ ಬರುವುದಕ್ಕೆ ಕಾಲ ಪಕ್ವವಾಗಿದೆ ಎಂದು ಹೇಳುತ್ತೇನೆ. ರಾಜ್ಯದ ಹೆಸರನ್ನು ಬದಲಾವಣೆ ಮಾಡುವುದನ್ನು ನಾವು ಗಂಭೀರವಾಗಿ ತೆಗೆದುಕೊಳ್ಳಬೇಕಾಗಿದೆ. ಏಕೆಂದರೆ ಈ ವಿಷಯದಲ್ಲಿ ಜನರ ಮನಸ್ಸು ಒಂದೇ ರೀತಿ ಇಲ್ಲ. ಸರ್ಕಾರದವರು ವಾತಾವರಣವನ್ನು ಹದಗೆಡಿಸಿದ್ದಾರೆ. ಇವತ್ತು ನಾನು ಮತ್ತು ಶ್ರೀಮಾನ್ ಮಂಚೇಗೌಡರು ಒಬ್ಬರಿಗೊಬ್ಬರು ಯುದ್ಧ ಮಾಡುವಂಥ ಸನ್ನಿವೇಶವನ್ನು ಈ ಸರ್ಕಾರದವರು ತಂದೊಡ್ಡಿದ್ದಾರೆ.

[Mr. SPEAKER in the Chair]

ಆದ್ದರಿಂದ ನಾವು ವಸ್ತುಸ್ಥಿತಿಯನ್ನು ಅರ್ಥ ಮಾಡಿಕೊಳ್ಳಬೇಕಾಗಿದೆ. ಇವತ್ತು ರಾಷ್ಟ್ರದಲ್ಲಿ ಏನಾಗುತ್ತಿದೆ ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ಏನಿತ್ತು ಎಂಬುದನ್ನು ನಾವು ನೋಡಿದ್ದೇವೆ. ಈಗ ಏನೇನು ನಡೆಯುತ್ತಿದೆ ಎಂಬುದನ್ನು ನೋಡುತ್ತಿದ್ದೇವೆ. ಆದ್ದರಿಂದ ಮುಂದೆ ನಾವು ಏನು ಮಾಡಬೇಕು ಎಂಬ ಪ್ರಶ್ನೆ ನಮ್ಮ ಮುಂದೆ ಬರುತ್ತದೆ.

Mr. SPEAKER.—How much more time the hon. Member is going to take ?

Sri H. N. NANJE GOWDA.—I am coming to an end.

Mr. SPEAKER.—Hon. Member has already taken half-an-hour. There are another two or three Members who want to speak to-day. I request the hon. Member to please conclude.

5-30 P.M.

ಶ್ರೀ ಎಚ್. ಎನ್. ನಂಜೇಗೌಡ.—ಈ ಅಧಿವೇಶನದಲ್ಲಿ ಕಾನೂನು ಪ್ರಕಾರ 5 ದಿವಸಗಳನ್ನು ಖಾಸಗೀ ಕಾರ್ಯಕಲಾಪಗಳಿಗೆ ಕೊಡಬೇಕು. ಆ ರೀತಿ ಮಾಡುವುದಾದರೆ ಈ ನಿರ್ಣಯದ ಮೇಲೆ ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ಸಿಕ್ಕುತ್ತದೆ.

ಅಧ್ಯಕ್ಷರು.—ನೀವು ಈಗಾಗಲೇ ಈ ನಿರ್ಣಯದ ಮೇಲೆ 225 ನಿಮಿಷ ಮಾತನಾಡಿದ್ದೀರಿ, ಬೇಗ ಮುಗಿಸಿ.

ಶ್ರೀ ಎಚ್. ಎನ್. ನಂಜೇಗೌಡ.—ಮನೋಭೂಮಿಕೆ ಬಗ್ಗೆ ಮಾತನಾಡಲು ನನಗೆ ಒಂದು ದಿವಸ ಹಿಡಿಯುತ್ತದೆ. ಮನೋಭೂಮಿಕೆ ತಯಾರಾಗಬೇಕಾದರೆ ಒಂದು ಒಳ್ಳೆಯ ವಾತಾವರಣ ಸೃಷ್ಟಿಯಾಗಬೇಕು. ಆದ್ದರಿಂದ ಆ ಒಂದು ವಾತಾವರಣ ಸೃಷ್ಟಿಯಾಗುವ ವಿಷಯದ ಬಗ್ಗೆ ನಾನು ಮಾತನಾಡುತ್ತಿದ್ದೇನೆ. ಈ ಬಗ್ಗೆ ಶ್ರೀಮಾನ್ ಅಗ್ನಿಹೋತ್ರಿಯವರ ಮನೋಭಿಪ್ರಾಯವನ್ನು

ತಿಳಿದುಕೊಳ್ಳಬೇಕು. ಶ್ರೀಮಾನ್ ನಾಗಪ್ಪನವರ ಮನೋಭಿಪ್ರಾಯವನ್ನು ತಿಳಿದುಕೊಳ್ಳಬೇಕು. ಶ್ರೀಮಾನ್ ಬಾಪುಗೌಡರ ಮನೋಭಿಪ್ರಾಯವನ್ನು ತಿಳಿದುಕೊಳ್ಳಬೇಕು. ಇನ್ನೂ ಕೆಲವು ಮಾನ್ಯ ಸದಸ್ಯರ ಮನೋಭಿಪ್ರಾಯವನ್ನು ತಿಳಿದುಕೊಳ್ಳಬೇಕು. ಅವರ ಮನೋಭಿಪ್ರಾಯವನ್ನು ತಿಳಿದುಕೊಳ್ಳಬೇಕಾದರೆ ದಿನಗಟ್ಟಲೇ ಬೇಕಾಗುತ್ತದೆ. ಕರ್ನಾಟಕ ಆಗಬೇಕೆಂದು ಹೇಳುತ್ತಿದ್ದ ಅನೇಕ ಜನ ಮೂಲೆಗುಂಪಾದರು. ಶ್ರೀಮಾನ್ ಚನ್ನಯ್ಯನವರು, ಶ್ರೀಮಾನ್ ಲಕ್ಕಪ್ಪನವರು, ಶ್ರೀಮಾನ್ ಮಂಚೇಗೌಡರು ತಮ್ಮ ದೇಹದಲ್ಲಿ ರಕ್ತದ ಕೊನೆಯ ಕಣ ಇರುವವರೆಗೂ ಕರ್ನಾಟಕ ಆಗಲು ಬಿಡುವುದಿಲ್ಲ ಎಂದು ಮಂಡ್ಯದ ಸಮ್ಮೇಳನದಲ್ಲಿ ಹೇಳಿದರು. ಅದೇ ರೀತಿ ಹೇಳಿದ ಶ್ರೀಮಾನ್ ಶಂಕರೇಗೌಡರು ಮತ್ತು ಶ್ರೀಮಾನ್ ಲಕ್ಕಪ್ಪನವರು ಇಂದು ಮಂತ್ರಿಗಳಾಗಿದ್ದಾರೆ. ಈಗ ಅವರು ರಕ್ತ ಇಲ್ಲದೆ ಹೋಗಿ ಜೀವಲೆಗಳಾಗಿದ್ದಾರೇನು ?

Mr. SPEAKER.—Only 3½ hours were allotted by the Business Advisory Committee for this resolution. The hon. Member has already taken 225 minutes. There are two more members who want to participate in it. I would therefore request the hon. Member to speak on what is relevant to the subject matter under discussion and conclude early.

Sri H. N. NANJE GOWDA.—Our leader Sri Sivappa has agreed that I must have my full say in this matter. I may also bring to the notice of the Chair that no member has objected to my continuing the speech. I do not know why the Chair is taking objection.

Mr. SPEAKER.—I would again request the hon. Member to be relevant to the subject matter and conclude early.

ಶ್ರೀ ಎಚ್. ಎನ್. ನಂಜೇಗೌಡ.—ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಒಂದು ಹೆಸರನ್ನು ಬದಲಾವಣೆ ಮಾಡಬೇಕಾದರೆ ಮನೋ ಭೂಮಿಕೆ ಇವತ್ತು ಹೇಗಿದೆ ಎಂಬುದನ್ನು ನೋಡಿ ಹೇಳುವುದಕ್ಕೆ ಅವಕಾಶ ಕೊಡದಿದ್ದರೆ ಹೇಗೆ? ನಾನು ಹಿಂದೆ ಮಾತನಾಡಿದಾಗಲೂ ಹೇಳಿದ್ದೇನೆ, ಈಗ ದೇಶದಲ್ಲಿ ಒಂದು ಕಲುಷಿತ ವಾತಾವರಣ ಸೃಷ್ಟಿಯಾಗಿದೆ. ಅದಕ್ಕೋಸ್ಕರವಾಗಿ ಈಗ ಒಂದು ಒಳ್ಳೆಯ ವಾತಾವರಣ ಸೃಷ್ಟಿಯಾಗಬೇಕಾಗಿದೆ. ಹಿಂದೆ ಇಂಥಾದ್ದೆ ಒಂದು ಕಂಪ್ಲೆಂಟ್ ಬಂದಂಥಾ ಕಾಲದಲ್ಲಿ, ಹಿಂದೆ ರಾಜ್ಯದಲ್ಲಿ ಆಡಳಿತ ನಡೆಸಿದಂತಹ ಜನ ಒಳ್ಳೊಳ್ಳೆಯ ಅಭಿಪ್ರಾಯಗಳನ್ನು, ಒಳ್ಳೊಳ್ಳೆಯ ಮಾರ್ಗದರ್ಶನವನ್ನೂ ಮಾಡಿ ಹೋಗಿದ್ದಾರೆ. 1954 ನೇ ಇಸವಿಯಲ್ಲಿ ಕೂಡ ಒಂದು ಅಂಕಿ ಅಂಶಗಳ ಪರಿಶೀಲನಾ ಸಮಿತಿಯನ್ನು ಸರ್ಕಾರದವರು ನೇಮಕ ಮಾಡಿದ್ದರು. ಅದರಲ್ಲಿ ದೊಡ್ಡ ದೊಡ್ಡ ವ್ಯಕ್ತಿಗಳು ಇದ್ದರು. ಆಗ ಇಂಥಾ ಒಂದು ಸಮಸ್ಯೆಯ ಬಗ್ಗೆ ವಿರೋಧ ಬಂದಾಗ ಆಗ ಅವರ ಬಾಯನ್ನು ಮುಚ್ಚಿಸಿದರು. ಈಗ ಈ ರಾಜ್ಯ ಎರಡಾಗಬೇಕೆಂಬ ಕೂಗು ಎದ್ದಿದೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ನಿರ್ಣಯಕ್ಕೆ ಸಂಬಂಧಪಟ್ಟ ಹಾಗೆ ಮಾತನಾಡಬೇಕು.

ಶ್ರೀ ಎಚ್. ಎನ್. ನಂಜೇಗೌಡ.—ಹಾಗಾದರೆ ನೀವು ಒಂದು ಚೀಟಿ ಹಾಕಿಬಿಟ್ಟು, ಲಾಟರಿ ಎತ್ತಿದ ಹಾಗೆ ಎತ್ತಿಬಿಟ್ಟರೆ ಮುಗಿದು ಹೋಯಿತು. ಆಗ ಕನ್ನಡ ನಾಡು ಇರಬೇಕೇ, ಕರ್ಣಾಟಕ ಇರಬೇಕೇ ಎಂದು ಇತ್ಯರ್ಥ ಮಾಡಿದ ಹಾಗೆ ಆಯಿತು. ಈ ನಿರ್ಣಯದ ಬಗ್ಗೆ ನಾನು ಒಂದು ಅಭಿಪ್ರಾಯಕ್ಕೆ ಇನ್ನೂ ಬಂದಿಲ್ಲ. ನನ್ನ ಅಭಿಪ್ರಾಯ ಹೇಳುವುದಾದರೆ, ಹಿಂದೆ ಈ ಬಗ್ಗೆ ಒಂದು ಅಂಕಿ ಅಂಶವನ್ನು ತಯಾರು ಮಾಡುವುದಕ್ಕೆ ಒಂದು ಸಮಿತಿಯನ್ನು ಮಾಡಿದ್ದರು. ಈಗ ರಾಜ್ಯ ಒಂದಾಗಬೇಕೋ, ಎರಡಾಗಬೇಕೋ ಎಂಬ ಒಂದು ಗಲಾಟೆ ಇದೆ. ಹಿಂದೆ 1956ನೇ ಇಸವಿಗೆ ಮುಂಚೆ ಕನ್ನಡ ನಾಡು ಎಂದು ಹೆಸರು ಇಡುತ್ತಿದ್ದರೆ ಯಾರೂ ಬೇಡವೆಂದು ಹೇಳುತ್ತಿರಲಿಲ್ಲ. ಈಗ ಆ ಹೆಸರು ಕಂಡರೆ ತುಳಿಯತಕ್ಕ ವ್ಯವಹಾರ ನಡೆಯುತ್ತಿದೆ. ಇದಕ್ಕೆ ಪ್ರಚಾರ ಸಿಕ್ಕಿ ಗಲಾಟೆಯಾಗತಕ್ಕ ವಾತಾವರಣದಲ್ಲಿ ಅದನ್ನು ಹೇಳದಿದ್ದರೆ ಹೇಗೆ ? ಈ ಕಲ್ಮಶ ವಾತಾವರಣವನ್ನು ತೆಗೆದು ಹಾಕಬೇಕಾದರೆ, ಕನಿಷ್ಠ ಪಕ್ಷ ಜುಡಿಶಿಯಲ್ ಫ್ಯಾಕ್ಟ್ ಫೈಂಡಿಂಗ್ ಇಲ್ಲದಿದ್ದರೂ, ಹಿಂದೆ ಏನು ಒಂದು ಕಮಿಟಿ ನೇಮಿಸಿದರು, ಆ ತರಹ ಒಂದು ಕಮಿಟಿಯಾದರೂ ನೇಮಿಸತಕ್ಕದ್ದು ಅಗತ್ಯ. ನಮಗೆ ಇಂದಿನವರೆಗೆ ಆಗಿರುವ ಅನುಭವದ ಪ್ರಕಾರ ಈ ಭಾಷಾವಾರು ಪ್ರಾಂತ್ಯ ರಚನೆಯಾದ ನಂತರ ಬಹಳ ಗಂಡಾಂತರಕಾರಿಯಾದ ಘಟನೆಗಳು ನಡೆದಿದೆಯೆಂದು ನಾನಾದರೂ ತಿಳಿದು ಕೊಂಡಿದ್ದೇನೆ. ಮಾನ್ಯ ಸಂಜೀವರೆಡ್ಡಿಯವರು ಹೇಳಿದ್ದರು, ಇನ್ನೊಂದು ಎಸ್. ಆರ್. ಸಿ. ಕಮಿಷನ್ ಆಗಬೇಕಾಗುತ್ತದೆ ಎಂದು.

Mr. SPEAKER.—I am sorry the hon. Member is not talking relevantly. We have nothing to do with the S. R. C. so far as the present resolution is concerned ; this is not the forum to discuss it now.

ಶ್ರೀ ಎಚ್. ಎಸ್. ನಂಜೇಗೌಡ.—ನೀವು ರಿಲವೆಂಟ್ ಅಲ್ಲ ಅಂದರೆ, ರಿಲವೆಂಟ್ ಹೌದು ಎಂದು ಹತ್ತು ನಿಮಿಷ ಚರ್ಚೆ ಮಾಡಬೇಕಾಗುತ್ತದೆ.

Mr. SPEAKER.—The hon. Member should respect the Chair's observations ?

Sri H. N. NANJE GOWDA.—I promise that I shall close at 6 O'clock.

Mr. SPEAKER.—Hon. Member should be relevant to the subject matter.

Sri H. N. NANJE GOWDA.—Everything I have spoken is relevant.

Mr. SPEAKER.—We are not here to sit in judgment over integration of other areas with New Mysore State. That is not relevant. We are not discussing here whether there is going to be another reorganisation of States and adduce argument for and against and make allegations and enter into controversies. The only question now is whether the New Mysore State which has come into existence under the S. R. Act, 1956, should retain the present name, or it should be called 'Kannada Nadu' as proposed by Sri L. Srikantaiah or "Karnataka". The hon. Member may confine his remarks to these three alternatives. Reference to reorganisation of the State and such other matters are all irrelevant.

Sri H. N. NANJE GOWDA.—I am very sorry for the Chair's remarks because "ನಾನು ಇಲ್ಲಿ ಸಂತೆ ಭಾಷಣ ಮಾಡುವುದಕ್ಕೆ ಬಂದವನಲ್ಲ." My feelings are wounded on account of the remarks of the Hon. Speaker. I took so much of pains to study this problem ; I was studying up to early morning 3-30 A.M. to equip myself for the debate ; I even consulted my neighbours. When I have laboured so hard to enlighten myself and others, you cannot talk so lightly. I repeat that my feelings are wounded. How can you say that all that I have talked is irrelevant ? It may be incorrect according to you, but it is correct according to me. ಹರಿಯಾಣ ಪಂಜಾಬ್ ಇವತ್ತು ಎರಡು ಆಗಲಿಲ್ಲವೇ ? ಹಾಗೆ ವಿದರ್ಭದವರು ಬೇರೆ ಆಗಬೇಕೆಂದು ಹೇಳುತ್ತಿದ್ದಾರೆ, ಗಲಾಟೆ ಮಾಡುತ್ತಿದ್ದಾರೆ, ತೆಲಂಗಾಣದವರು ಬೇರೆ ರಾಜ್ಯವಾಗಬೇಕೆಂದು ಹೇಳುತ್ತಿದ್ದಾರೆ. ಇಲ್ಲಿಯೂ ಎರಡು ಆಗಬೇಕೆಂದು ಗಲಾಟೆಯಾಗುತ್ತಿದೆ. ಇದಕ್ಕೆಲ್ಲಾ ಇದು ಸಂಬಂಧವಿಲ್ಲವೆಂದರೆ ಹೇಗೆ ? ಸಂಬಂಧ ಇದ್ದೇ ಇದೆ.

Mr. SPEAKER.—The hon. Member may bring in a motion to that effect. He cannot make a reference to that while speaking on the resolution before the House.

ಶ್ರೀ ಕೆ. ಎಚ್. ಶ್ರೀನಿವಾಸ್.—ಈ ಸದನದ ಮುಂದೆ ಮೈಸೂರು ಆಫ್ಟರ್ ಇಂಟಿಗ್ರೇಷನ್ ಎಂಬುದರ ಬಗ್ಗೆ ಎರಡು ದಿವಸದ ಮಟ್ಟಿಗೆ ಚರ್ಚೆಯಾಗಬೇಕೆಂದು ಈಗಾಗಲೇ ನಿರ್ಧಾರವಾಗಿದೆ. ಆದ್ದರಿಂದ ಈಗ ಮಾನ್ಯ ಸದಸ್ಯರು ಏನು ಹೇಳುತ್ತಾರೋ, ಅದನ್ನು ಎಲ್ಲಾ ಆಗ ಹೇಳುವುದಕ್ಕೆ ಉತ್ತಮವಾದ ಸಂದರ್ಭ ಇರುತ್ತದೆ. ಆದ್ದರಿಂದ ಅಧ್ಯಕ್ಷರು ಕೊಟ್ಟಿರುವ ಡೈರೆಕ್ಷನನ್ನು ಮಾನ್ಯ ಮಾಡಿ, ಉಳಿದ ಸದಸ್ಯರಿಗೆ ಮಾತನಾಡಲು ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ದೊಡ್ಡಬೋರೇಗೌಡ. ಶ್ರೀಮಾನ್ ನಿಜಲಿಂಗಪ್ಪನವರು ಮೊನ್ನೆ ನೆಲಮಂಗಲದಲ್ಲಿ ಏನು ಹೇಳಿದ್ದಾರೆ ಅದನ್ನು ಸಹ ಹೇಳಲಿ.

Mr. SPEAKER.—ಅದಕ್ಕೂ ಇದಕ್ಕೂ ಏನೂ ಸಂಬಂಧವಿಲ್ಲ. What Sri Nijalingappa has stated elsewhere is not relevant here. I do not take into account what he has stated elsewhere. I am here to conduct the proceedings in accordance with Rules.

ಶ್ರೀ ಬಿ. ದೊಡ್ಡಬೋರೇಗೌಡ.—ಅವರು ಈ ಮನೆಯ ಸದಸ್ಯರು ಸ್ವಾಮಿ.

Mr. SPEAKER.—Everybody is expected to talk relevantly. To me Rules are "Gita." I recognise nothing but rules. The hon. Member can talk only with regard to the subject on hand not with regard to extraneous matters.

ಶ್ರೀ ಎಚ್. ಎನ್. ನಂಜೇಗೌಡ.—ಈಗ ಹೆಸರಿಡಬೇಕಾದರೆ, ಅದಕ್ಕೆ ಒಂದು ಜಿಯಾಗ್ರಾಫಿಕಲ್ ಯುನಿಟ್ ಮೇಲೆ, ಒಂದು ಆಧಾರದ ಮೇಲೆ ಇಡಬೇಕಾಗುತ್ತದೆ. ಶ್ರೀಕಂಠಯ್ಯನವರು ತಂದಿರತಕ್ಕ ನಿರ್ಣಯ ಎರಡು ಜಿಲ್ಲೆಯ ಕುರಿತು, 9 ಜಿಲ್ಲೆಯ ಕುರಿತು ಹೆಸರಿಡತಕ್ಕ ನಿರ್ಣಯ ತಂದಿಲ್ಲ. ಅವರು ಜಿಯಾಗ್ರಾಫಿಕಲ್ ಫೀಚರ್ಸ್ ಮೇಲೆ, ಆಧಾರದ ಮೇಲೆ ಮೈಸೂರು ರಾಜ್ಯಕ್ಕೆ ಕನ್ನಡ ನಾಡು ಎಂದು ಹೆಸರಿಡಬೇಕೆಂದು ಹೇಳಿದ್ದಾರೆ. ಕರ್ಣಾಟಕ ಎಂದು ಕರೆಯಬೇಕೆಂದು ಗಂಗಾಧರ್ ಹೇಳಿದ್ದಾರೆ. ಜಿಯಾಗ್ರಾಫಿಕಲ್ ಏರಿಯಾ ಬದಲಾವಣೆಯಾದರೆ ಹೆಸರು......

ಅಧ್ಯಕ್ಷರು.—ಈಗ ಹೆಸರು ಏನು ಇಡಬೇಕೆಂಬುದರ ಬಗ್ಗೆ ಹೇಳಿ.

ಶ್ರೀ ಎಚ್. ಎನ್. ನಂಜೇಗೌಡ.—ನಮ್ಮನ್ನು ಅಷ್ಟು ಲಘುವಾಗಿ ನೀವು ಭಾವಿಸಬೇಡಿ. ನಾನು ಕೆಲವು ದಿವಸ ಇದರ ಬಗ್ಗೆ ಅಭ್ಯಾಸ ಮಾಡಿ ಬಂದಿದ್ದೇನೆ. ಈಗ ನೀವು ಹೀಗೆ ಹೇಳಿದರೆ ನನಗೆ ನೋವಾಗುತ್ತದೆ. I cannot admit that we are incompetent. I cannot admit that my friends are incompetent to express opinion on the S. R. Act. We are as competent as anybody in this country to express opinion. And this is the relevant occasion when I have to express certain views and offer suggestions. I am a responsible member of this society; I am a responsible Member of this august House; I am a responsible citizen of this country—India. ಆದ್ದರಿಂದ ನಮ್ಮ ರಾಷ್ಟ್ರದ ಸಮಸ್ಯೆಯ ಬಗ್ಗೆ ಇಂಥ ಒಂದು ಕೆಟ್ಟ ಪ್ರಸಂಗ ಬಂದಿರತಕ್ಕ ಸಮಯದಲ್ಲಿ ನಾವು ಎಲ್ಲಾ ವಿಚಾರಗಳನ್ನು ಹೇಳಬೇಕಾಗುತ್ತದೆ.

Sri D. B. KALMANKAR.—I rise to a point of order. The hon. Member was speaking in Kannada. Can he switch over to English ?

Mr. SPEAKER.—Since Sri Nanje Gowda commenced his speech in Kannada, he may continue it in Kannada.

ಶ್ರೀ ಎಚ್. ಎನ್. ನಂಜೇಗೌಡ.—ಆದ್ದರಿಂದ ನಾವು ಈ ರಾಜ್ಯಕ್ಕೆ ಹೆಸರಿಡಬೇಕಾದರೆ, ಈ ರಾಜ್ಯ ಇದೇರೀತಿಯಲ್ಲಿ ಉಳಿದುಕೊಳ್ಳುತ್ತದೆಯೇ ಎಂಬುದನ್ನು ನೋಡಬೇಕು. ಮೊದಲು ಸಣ್ಣ ಪುಟ್ಟ ಗಡಿಗಳು ನಮಗೆ ಸೇರಬೇಕು. ಕನ್ನಡ ನಾಡಿನಲ್ಲಿ ಒಂದೇ ಭಾಷೆಯ ಜನರು ಒಂದೇ ಕಡೆ ಬಂದು ಅಲ್ಲಿ ವಾಸಮಾಡತಕ್ಕ ಪ್ರದೇಶವಾಗಿರಬೇಕು. ಅಂತಹ ಪ್ರದೇಶಗಳು ಇಲ್ಲಿ ಉಳಿದುಕೊಳ್ಳಬೇಕು. ಏಕೆಂದರೆ ನನಗೆ ಗೊತ್ತಿರುವ ಹಾಗೆ ಇವತ್ತು ಒಂದು ಫೀಲಿಂಗ್ ಡೆವಲಪ್ ಆಗುತ್ತಿದೆ. ಅನೇಕ ಸಮಸ್ಯೆಗಳು ಈ ರಾಜ್ಯದಲ್ಲಿ ಹುಟ್ಟಿಕೊಂಡಿವೆ. ಇದರ ಬಗ್ಗೆ ಕೊನೆಯ ತೀರ್ಮಾನ ಮಾಡುವುದಕ್ಕೆ ಇನ್ನೊಂದು ಎಸ್.ಆರ್.ಸಿ. ಕಮಿಷನ್ ಮಾಡಬೇಕೆನ್ನುವ ಅಭಿಪ್ರಾಯ ಈಗ ರೂಪಿತವಾಗಿದೆಯೆಂದು ನಾನು ಅರ್ಥಮಾಡಿಕೊಂಡಿದ್ದೇನೆ. ಆದ್ದರಿಂದ ಈ ಸಂದರ್ಭದಲ್ಲಿ ನಾನು ಒಂದು ಸೂಚನೆಯನ್ನು ಕೊಡುತ್ತೇನೆ. ಅಂತಹ ಕಮಿಷನ್ ಆದರೆ ನಾನೂ ಕೂಡ ಸ್ವಾಗತ ಮಾಡುತ್ತೇನೆ. ಏಕೆಂದರೆ ದಿನ ಬೆಳಿಗ್ಗೆ ಈ ಗಡಿ ಗಲಾಟೆಯೇ. ಇವತ್ತು ಮಹಾಜನ್ ಕಮಿಷನ್ ವರದಿ ಬಂತು ಎಂದು ಹೇಳಿ ಇದಕ್ಕೆ ಹೆಸರಿಡುವುದನ್ನು ಇನ್ನೂ ಚರ್ಚೆಮಾಡುತ್ತಿದ್ದೇವೆ.

Mr. SPEAKER.—Hon. Member must talk relevantly.

ಶ್ರೀ ಎಚ್. ಎನ್. ನಂಜೇಗೌಡ.—ತಾವು ಒಂದು ನೋಟು ಕೊಟ್ಟು ಮಾತನಾಡತಕ್ಕವರು ಇಂತಹ ಮಾರ್ಗವನ್ನು ಅನುಸರಿಸಿ ಎಂದು ಹೇಳಿದರೆ ಆಗ ನಮಗೆ ಅನುಕೂಲವಾಗುತ್ತದೆ. ನೀವು ಯಾವುದೋ ರೀತಿಯಲ್ಲಿ ಅರ್ಥಮಾಡಿಕೊಂಡಿರುತ್ತೀರಿ.

Mr. SPEAKER.—Hon. Member is an advocate practising in court. Is this the way relevancy is decided in court ?

ಶ್ರೀ ಎಚ್. ಎನ್. ನಂಜೇಗೌಡ.—ನಾನು ಆ ರೀತಿ ಪ್ರಾಕ್ಟೀಸ್ ಮಾಡಿದಂಥ ಅಡ್ವೋಕೇಟ್ ಅಲ್ಲ. ನಾನು ಕೋರ್ಟಿಗೆ ಹೋಗಿಲ್ಲ. ಆದ್ದರಿಂದ ಈಗ ಮೈಸೂರಿಗೆ ಹೆಸರಿಡುವುದರ ಮೇಲೆ ಮಾತನಾಡಿ ಎಂದು ಹೇಳಿದರೆ ಮಾತನಾಡುತ್ತೇನೆ.

Mr. SPEAKER.—Hon. Member has spoken for four hours ?

ಶ್ರೀ ಎಚ್. ಎನ್. ನಂಜೇಗೌಡ.—ನಾನು ನನ್ನ ಮಾತನ್ನು ಮುಗಿಸುವುದಕ್ಕೆ ಬರುತ್ತಿದ್ದೇನೆ. ನೀವು ಅದಕ್ಕೆ ಅವಕಾಶ ಕೊಡುವುದಿಲ್ಲ. ನಾನು ಏನು ಮಾಡಲಿ ? ಈಗ ಇಲ್ಲಿ ಒಂದು ವಿಷಯ ನನಗೆ ಅರ್ಥವಾಗುತ್ತಾ ಇಲ್ಲ. ಸರ್ಕಾರದವರು ಈ ನಿರ್ಣಯದ ಮೇಲೆ ಈಗ ಉತ್ತರ ಕೊಡುತ್ತಾರೆಂದು ನಾನು ನಿರೀಕ್ಷಣೆ ಮಾಡುತ್ತಿದ್ದೇನೆ. ಇದರಲ್ಲಿ ಏನು ನಿರೀಕ್ಷಣೆ ಎಂದರೆ, ಚಾರಿತ್ರಕವಾದ ಅಥವಾ ಅಧಿಕೃತವಾದ ಅರ್ಥದಲ್ಲಿ ಹಿಂದೆ ಈ ರಾಜ್ಯಕ್ಕೆ ಕನ್ನಡನಾಡು ಅಥವಾ ಕರ್ಣಾಟಕವೆಂದು ಹೇಳಿ ಸರ್ಕಾರದ ಮಟ್ಟದಲ್ಲಿ ಅಧಿಕೃತವಾಗಿ ಹೆಸರಿಡತಕ್ಕಂಥ ಉದಾಹರಣೆಗಳು ಸಿಗುವ ಹಾಗೆ ಇಲ್ಲ. ಇದಕ್ಕೆ ವಿಜಯನಗರ ರಾಜ್ಯ, ಹೊಯಿಸಳ ರಾಜ್ಯ, ಮೈಸೂರು ರಾಜ್ಯವೆಂದು ಹೆಸರಿದ್ದುದು ಗೊತ್ತು. ಆದರೆ ಕನ್ನಡನಾಡು ಎಂದಾಗಲೀ, ಕರ್ಣಾಟಕವೆಂದಾಗಲೀ ಇದಕ್ಕೆ ಹೆಸರು ಚಾರಿತ್ರಿಕವಾಗಿ ಇದ್ದಂಥ ಒಂದು ಉದಾಹರಣೆಯೂ ನನಗೆ ಕಂಡುಬಂದಿಲ್ಲ. ಹಿಂದೆ ರಾಜರು ಮತ್ತು ಮಹಾರಾಜರುಗಳು ಇಟ್ಟ ಹೆಸರು ಪರಂಪರೆಯಾಗಿ ನಡೆದುಕೊಂಡು ಬಂದಿವೆ. ಈಗ ಜನತೆ ಹಿಂದಿನ ಹೆಸರುಗಳು ಏತಕ್ಕೆ, ಈಗ ಯಾವುದಾದರೂ ಒಂದು ಒಳ್ಳೆಯ ಹೆಸರನ್ನು ಇಡಬೇಕೆಂದು ಹೇಳುತ್ತಾರೆ. ಮಾನ್ಯ ಶ್ರೀಕಂಠಯ್ಯನವರು ಭಾಷಣ ಮಾಡುವಾಗ ಒಳ್ಳೆಯ ವಿದ್ವತ್‌ಪೂರಿತವಾದ ವಿಚಾರಗಳನ್ನು ಹೇಳಿದರು. ಅನೇಕ ಸಾಹಿತ್ಯಗಳನ್ನು ರೆಫರ್‌ಮಾಡಿ ಭಾಷಣ ಮಾಡಿದರು. ಅವರು ಈಗಲೂ ಕನ್ನಡನಾಡು ಅಥವಾ ಕರ್ಣಾಟಕವೆಂದು ಅಧಿಕೃತವಾಗಿ ಸರ್ಕಾರದ ಮಟ್ಟದಲ್ಲಿ ಹೆಸರಿಡುವುದಕ್ಕೆ ಉದಾಹರಣೆಗಳು ಇದ್ದರೆ, ತಿಳಿಸಲಿ.

ಶ್ರೀ ಕೆ. ಎಚ್. ಶ್ರೀನಿವಾಸ.—ಪಕ್ಕದವರು ತಮಿಳುನಾಡು ಎಂದು ಹೆಸರಿಟ್ಟಿದ್ದಾರಲ್ಲ.

ಶ್ರೀ ಎಚ್. ಎನ್. ನಂಜೇಗೌಡ.—ಅವರು ಒಗ್ಗಟ್ಟಾಗಿರಬೇಕೆಂದು ಆ ರೀತಿ ಮಾಡಿದ್ದಾರೆ ನೀವು ದಾಯಾದಿ ಮತ್ಸರದಿಂದ ಕಣ್ಣಿಗೆ ಕಾಣದ ಉದಾಹರಣೆಗಳನ್ನು ಕೊಟ್ಟಿದ್ದೀರಿ. ಇದರ ಬಗ್ಗೆ ನನ್ನ ನಿಲುವನ್ನು ಸ್ಪಷ್ಟವಾಗಿ ಹೇಳಿದ್ದೇನೆ. ಈ ರಾಜ್ಯಕ್ಕೆ ಕನ್ನಡನಾಡು ಎಂದು ಹೆಸರಿಡಿ ಅಥವಾ ಕರ್ಣಾಟಕವೆಂದು ಹೆಸರಿಡಿ. ಯಾವ ಹೆಸರಿಟ್ಟರೇನು ?

ಶ್ರೀ ಕೆ. ಎಚ್. ಶ್ರೀನಿವಾಸ್.—ಅವರು ಈ ರೀತಿ ಸ್ಪಷ್ಟಪಡಿಸಿದಮೇಲೆ ಮತ್ತೇಕೆ ಅವರ ಭಾಷಣ ?

ಶ್ರೀ ಎಚ್. ಎನ್. ನಂಜೇಗೌಡ.—ಇದರ ಬಗ್ಗೆ ಏನು ಮಾಡಬೇಕೆಂಬುದನ್ನು ನನಗೆ ಇರತಕ್ಕ ಬುದ್ಧಿಯಿಂದ, ವಿವೇಕದಿಂದ ಹೇಳುತ್ತಿದ್ದೇನೆ. ಇವತ್ತು ನಾನು ಸ್ಪಷ್ಟೀಕರಣೆ ಕೊಟ್ಟಿದ್ದೇನೆ. ನಾನು ಮಾತನಾಡಿದಾಗ ಮಾನ್ಯ ಶ್ರೀ ಶ್ರೀನಿವಾಸ ಅವರು ಇರಲಿಲ್ಲ. ನಮ್ಮ ರಾಜ್ಯಕ್ಕೆ ಕನ್ನಡ ನಾಡು ಅಥವಾ ಕರ್ಣಾಟಕ ಅಥವಾ ಮೈಸೂರು ಎಂದು ಹೆಸರು ಇಡುವುದಕ್ಕೆ ಒಪ್ಪುತ್ತೇನೆ. ಆದರೆ ಈ ಹೆಸರಿನಲ್ಲಿ ಏನಿದೆ, ನಿಜವಾಗಿ ನಾನು ಹೆಸರಿಗೆ ಅಷ್ಟೊಂದು ಮಹತ್ವ ಕೊಡುವುದಿಲ್ಲ. ಆದರೆ ಈ ರಾಜ್ಯದಲ್ಲಿ ವೃಥಾ ಅನಗತ್ಯವಾಗಿ ಜನಗಳನ್ನು ಪ್ರೊವೋಕ್ ಮಾಡುವುದು ಬೇಡ.

6-00 P.M.

Sri N. A. CHANNE GOWDA.—It is already 6 O' Clock.

Mr. SPEAKER.—Sri Srikantiah the Leader of Second Delegation which visited Delhi in connection with the border question has to lay a report of his delegetion.

SRI N. A. CHANNE GOWDA.—We cannot sit beyond 6 O' Clock. There were two sittings to-day.

MR. SPEAKER.—I thought the time should have been used much better. I do not know whether anybody's case has been served.

SRI R. DAYANANDA SAGAR (Chamarajpet).—Unfortunately, we are having a meeting to-day. We are unable to sit any further. We thought the Session would close at 6 O' Clock. We have to retire from the House. Let him continue tomorrow.

Report of the II Delegation to Delhi in connection with Border Question.

SRI L. SRIKANTIAH.—I place on the Table the second report of the second delegation about its Delhi Visit.

MR. SPEAKER.—Now the House will rise and meet tomorrow at 1 P.M.

The House adjourned at Five Minutes past Six of the Clock to meet again at One of the Clock on Wednesday, the 1st April 1970.

WD 14804—GPB—550—22-8-1970

ಮೈಸೂರು ವಿಧಾನ ಸಭೆ

MYSORE LEGISLATIVE ASSEMBLY

Wednesday, 1st April 1970.

The House met in the Assembly Chamber, Vidhana Soudha, Bangalore, at One of the Clock.

Mr. SPEAKER (Sri S. D. Kothauale) in the Chair.

STARRED QUESTIONS

(to which oral answers were given):

POSTING OF A LADY DOCTOR AT DODDAHEJJAJI COMBINED HOSPITAL

499: Sri G. RAME GOWDA (Doddaballapur).—

Will the Minister for Health be pleasd to state :—

(*a*) when the Combined Hospital at Doddahejjaji was started ;
(*b*) when a lady doctor was posted and how long she worked there:
(*e*) the reasons for transfering the lady doctor within two months
(*d*) the arrangement made to post a lady doctor ?

Sri G. BASAVANNAPPA (Deputy Minister for Health).—

(*a*) On 24th February 1968.
(*b*) On 6th August 1969. She worked there for two months. ?
(*c*) She has been transferred at her request.
(*d*) One lady candidate by name Dr. Smt. J. Nirmala has been posted on 24th November 1969 and she has not yet reported for duty.

ಶ್ರೀ ಜಿ. ರಾಮೇಗೌಡ.—ಈ ಆಸ್ಪತ್ರೆಯಲ್ಲಿ ತಾವು ಎಷ್ಟೋ ದಿವಸಗಳಿಂದ ಮಹಿಳಾ ಡಾಕ್ಟರ್ ಇಲ್ಲವೆಂದು ಹೇಳಿದ್ದೀರಿ, ಆ ಸಮಯದಲ್ಲಿ ಆ ಆಸ್ಪತ್ರೆಯಲ್ಲಿ ಹೇಗೆ ಕೆಲಸ ನಡೆಯುತ್ತಿತ್ತು.

†ಶ್ರೀ ಜಿ. ಬಸವಣ್ಣಪ್ಪ.—ಅಲ್ಲಿ ೭ನೇ ಆಗಸ್ಟ್ ೧೯೬೯ರಂದು ಒಬ್ಬ ಲೇಡಿ ಡಾಕ್ಟರ್ ವಿ. ಶಾರದಮ್ಮ ಎಂಬುವರನ್ನು ಪೋಸ್ಟ್ ಮಾಡಿತ್ತು. ಅವರು ಅಲ್ಲಿ ಕ್ವಾರ್ಟರ್ಸ್ ಸೌಕರ್ಯ ಇಲ್ಲ, ಮತ್ತು ಇತರ ಸೌಲಭ್ಯವಿಲ್ಲ ಕಷ್ಟವಾಗುತ್ತದೆಂದು ಹೇಳಿ, ಟ್ರಾನ್ಸ್‌ಫರ್ ಬೇಕೆಂದು ಕೇಳಿದ ಪ್ರಕಾರ ಅವರನ್ನು ಅಲ್ಲಿಂದ ಟ್ರಾನ್ ಫರ್ ಮಾಡಲಾಯಿತು. ಅಲ್ಲಿಂದ ಮೇಲೆ ಅಲ್ಲಿ ಲೇಡಿ ಡಾಕ್ಟರು ಇರಲಿಲ್ಲ.

ಶ್ರೀ ಜಿ. ರಾಮೇಗೌಡ.—ಕಾನೂನು ಪ್ರಕಾರ ಎರಡು ವರ್ಷಗಳ ಮೊದಲು ಯಾವ ಡಾಕ್ಟರನ್ನೂ ಬದಲಾವಣೆ ಮಾಡಬಾರದು ಎಂದು ಇದೆ ಆದರೆ ಇಲ್ಲಿ ಎರಡು ತಿಂಗಳ ಒಳಗೆ ಬದಲಾವಣೆ ಮಾಡುವುದಕ್ಕೆ ಅವರು ಮಂತ್ರಿಯವರ ಹತ್ತಿರ ಉಪಯೋಗಿಸಿದ ಪ್ರಭಾವವೇನು ?

ಶ್ರೀ ಜಿ. ಬಸವಣ್ಣಪ್ಪ.—ಎರಡು ವರ್ಷದೊಳಗೆ ಟ್ರಾನ್ಸ್‌ಫರ್ ಮಾಡಬಾರದು ಎಂದು ಸರ್ಕಾರದ ಉದ್ದೇಶ ಇದೆ. ಆದರೆ ಲೇಡಿ ಡಾಕ್ಟರಿಗೆ ಯಾವ ಸೌಲಭ್ಯವೂ ಇಲ್ಲದಿರುವುದರಿಂದ ಹಾಗೆ ಅವರು ಮನವಿ ಮಾಡಿಕೊಂಡಿರುವರು ಮತ್ತು ಅದರಂತೆ ವರ್ಗಾವಣೆ ಮಾಡಲಾಯಿತು. ಈಗ ಅಲ್ಲಿಗೆ ಜೆ. ನಿರ್ಮಲ ಎಂಬ ಡಾಕ್ಟರನ್ನು ಪೋಸ್ಟ್ ಮಾಡಲಾಗಿದೆ.

ಶ್ರೀ ಆರ್. ಮುನಿಸ್ವಾಮಯ್ಯ.—ಈ ನಿರ್ಮಲಾ ಎನ್ನತಕ್ಕವರು ಹೊಸದಾಗಿ ನೇಮಕಗೊಂಡವರೇ, ಅಥವಾ ಬೇರೆ ಕಡೆಯಿಂದ ಟ್ರಾನ್ಸ್‌ಫರ್ ಮಾಡಲ್ಪಟ್ಟವರೇ ?

ಶ್ರೀ ಜಿ. ಬಸವಣ್ಣಪ್ಪ.—ಅವರನ್ನು ಹೊಸದಾಗಿ ನೇಮಕ ಮಾಡಲಾಗಿದೆ. ಅವರನ್ನು ಅಲ್ಲಿಗೆ ಪೋಸ್ಟು ಮಾಡಲಾಗಿದೆ, ಆದರೆ ಅವರು ರಿಪೋರ್ಟು ಮಾಡಿಕೊಂಡಿಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶ್‌ನಾರಾಯಣ್.—ಈ ದೊಡ್ಡಹೆಜ್ಜಾಜಿ ಆಸ್ಪತ್ರೆಯಲ್ಲಿ ಮಹಿಳಾ ಡಾಕ್ಟರ್ ಕೆಲಸ ಮಾಡುತ್ತಾ ಇಲ್ಲ. ಇದೇ ತರ ರಾಜ್ಯದಲ್ಲಿ ಅನೇಕ ಆಸ್ಪತ್ರೆಗಳಲ್ಲಿ ಮಹಿಳಾ ಡಾಕ್ಟರು ಇಲ್ಲದಿರತಕ್ಕದ್ದು ವಿಶೇಷವಾಗಿದೆ ಆದ್ದರಿಂದ ಮಹಿಳಾ ವೈದ್ಯರು ಹಳ್ಳಿಗಳ ಆಸ್ಪತ್ರೆಗಳಲ್ಲಿ ಕೆಲಸಮಾಡ ತಕ್ಕಂತಹ ಅಟ್ರಾಕ್ಟಿವ್ ಸ್ಕೀಂ ಏನಾದರೂ ಮಾಡಿದ್ದೀರಾ ?

ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ಸದಸ್ಯರು ಹೇಳಿದ ಹಾಗೆ ಈಗಾಗಲೇ ೩೧೦ ಲೇಡಿ ಡಾಕ್ಟರುಗಳ ಪೋಸ್ಟು ವೇಕೆಂಟ್ ಇದೆ. ಅದರ ಬಗ್ಗೆ ರೂರಲ್ ಏರಿಯಾದಲ್ಲಿ ಲೇಡಿ ಡಾಕ್ಟರ್ಸ್ ಮತ್ತು ಇತರ ಡಾಕ್ಟರ್ಸ್ ಕೆಲಸ ಮಾಡುವುದಕ್ಕೆ ಒಂದು ರೂರಲ್ ಅಲೋಯೆನ್ಸ್ ಕೊಡುವುದಕ್ಕೆ ವ್ಯವಸೆ ಮಾಡಿದ್ದೇವೆ.

ಶ್ರೀ ಎಸ್. ವಿ. ಅಗ್ನಿಹೋತ್ರಿ.—ಕ್ವಾರ್ಟರ್ಸ್ ಇಲ್ಲದಿರುವುದರಿಂದ ಮುಂಚಿನ ಡಾಕ್ಟರ್ ವರ್ಗ ಮಾಡಿಕೊಂಡು ಹೋಗಿದ್ದಾರೆಂದು ಹೇಳಿದ್ದೀರಿ. ಈಗ ಹೊಸದಾಗಿ ನೇಮಕವಾದಂತಹ ಡಾಕ್ಟರಿಗೆ ಅದೇ ರೀತಿಯ ಕ್ವಾರ್ಟರ್ಸ್ ತೊಂದರೆ ಇಲ್ಲವೇ ?

ಶ್ರೀ ಜಿ. ಬಸವಣ್ಣಪ್ಪ.—ಈಗ ಕ್ವಾರ್ಟರ್ಸ್ ಬಗ್ಗೆ ಅಲ್ಲಿ ಸ್ಥಳೀಯ ಮುಖ್ಯಸ್ಥರು ಏನಾದರೂ ವ್ಯವಸ್ಥೆ ಮಾಡಲು ಮುಂದೆ ಬಂದರೆ ಅನುಕೂಲವಾಗುತ್ತದೆ. ಮೊದಲು ಯಾವ ವ್ಯವಸ್ಥೆಯೂ ಇಲ್ಲದಿರುವುದರಿಂದ ಲೇಡಿ ಡಾಕ್ಟರು ನಿಲ್ಲಲಿಲ್ಲ.

Asterisks indicate that remarks or speeches have not been revised by the member concerned.

ಶ್ರೀ ಎ ಆರ್. ಬದರೀನಾರಾಯಣ್:—ಸಾಮಾನ್ಯವಾಗಿ ಹಳ್ಳಿಯ ಪ್ರದೇಶಗಳಲ್ಲಿ ಕ್ವಾರ್ಟರ್ ಫ್ಯಾಸಿಲಿಟಿ ಇಲ್ಲದೇ ಇರುವುದರಿಂದ ಹೆಂಗಸರು ಡಾಕ್ಟರುಗಳು ಬಾರದೇ ಇರುವುದರಿಂದ ಅದಕ್ಕೆ ಯಾವ್ಯಾವ ವ್ಯವಸ್ಥೆಗಳನ್ನು ಮಾಡುವುದಕ್ಕೆ ಏರ್ಪಾಡು ಮಾಡಿದ್ದೀರಿ?

ಶ್ರೀ ಜಿ. ಬಸವಣ್ಣಪ್ಪ:—ಅದರ ಬಗ್ಗೆ ಸರ್ಕಾರ ಶೀಘ್ರವಾಗಿ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತಿದೆ. ಗ್ರಾಮಾಂತರ ಪ್ರದೇಶಗಳಲ್ಲಿರುವವರು ಲೇಡಿ ಡಾಕ್ಟರುಗಳಿಗೆ ಮತ್ತು ಡಾಕ್ಟರುಗಳಿಗೆ ಹೆಚ್ಚಿನ ಸೌಲಭ್ಯಗಳನ್ನು ಕೊಟ್ಟರೆ ಅವರಿಗೆ ಅನುಕೂಲವಾಗುತ್ತದೆ.

ಶ್ರೀ ಎಂ. ನಾಗಪ್ಪ:—ಲೇಡಿ ಡಾಕ್ಟರನ್ನು ಎರಡು ತಿಂಗಳುಗಳಲ್ಲಿ ವರ್ಗಮಾಡಿವೆ ಎಂಬುದಾಗಿ ಹೇಳಿದಿರಿ. ಸರ್ಕಾರದವರು ಲೇಡಿ ಡಾಕ್ಟರುಗಳಿಗೆ ಸೌಲಭ್ಯ ಹೆಚ್ಚಿಗೆ ನೀಡುತ್ತಾರೋ ಅಥವಾ ಜನತೆಗೆ ಸೌಲಭ್ಯಗಳನ್ನು ಹೆಚ್ಚಿಗೆ ನೀಡುತ್ತಾರೋ? ಡಾಕ್ಟರು ಇಲ್ಲದೆಬಹಳ ಕಷ್ಟವಾಗಿದೆ. ಆದ್ದರಿಂದ ಸರ್ಕಾರದವರು ಜನರಿಗೆ ಸೌಲಭ್ಯ ಕೊಡಲು ತಕ್ಕ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಜಿ. ಬಸವಣ್ಣಪ್ಪ:—ಸರ್ಕಾರ ಜನತೆಗೆ ಸೌಕರ್ಯ ನೀಡಬೇಕೆಂಬುದೇ ಮೂಲ ಉದ್ದೇಶ. ಅಲ್ಲಿನ ಜನಗಳು ಮುಂದೆ ಬಂದರೆ ಡಾಕ್ಟರುಗಳಿಗೆ ಹೆಚ್ಚಿಗೆ ಅನುಕೂಲವಾಗುತ್ತದೆ.

ಶ್ರೀ ಎಸ್.ಹೆಚ್. ಪುಟ್ಟರಂಗನಾಥ್:—ಆ ಲೇಡಿ ಡಾಕ್ಟರನ್ನು ಟ್ರಾನ್ಸ್‌ಫರ್ ಮಾಡುವಾಗ ಅವರು ಅಲ್ಲಿಯೇ ಇರುತ್ತೇನೆಂದು ತಮಗೆ ಪತ್ರ ಬರದಿದ್ದರೂ ಅವರನ್ನು ಯಾವುದೋ ಒಂದು ರಾಜಕೀಯ ಒತ್ತಾಯದಿಂದ ಬೇರೆ ಕಡೆಗೆ ಟ್ರಾನ್ಸ್‌ಫರ್ ಮಾಡಿದ್ದು ನಿಜವೇ?

ಶ್ರೀ ಜಿ. ಬಸವಣ್ಣಪ್ಪ:—ಇದರಲ್ಲಿ ಯಾವ ರಾಜಕೀಯ ಒತ್ತಾಯವೂ ಇಲ್ಲ.

ಶ್ರೀ ದೊಡ್ಡಬೋರೇಗೌಡ:—ಆ ಡಾಕ್ಟರನ್ನು ಅವರ ಕೋರಿಕೆ ಮೇರೆಗೆ ವರ್ಗ ಮಾಡಿದೆಯೆಂದು ಹೇಳಿದ್ದೀರಿ. ಹಾಗಿದ್ದರೆ ಈ ರಾಜ್ಯದಲ್ಲಿ ಇನ್ನುಮುಂದೆ ಮಹಿಳಾ ಡಾಕ್ಟರುಗಳು ಅವರಿಗೆ ಬೇಕಾದಂಥ ಸ್ಥಳಗಳನ್ನು ಕೇಳಿದರೆ, ಇದೇ ರೀತಿಯಲ್ಲಿ ಆ ಸೌಲಭ್ಯವನ್ನು ಒದಗಿಸಿಕೊಡುತ್ತೀರಾ?

ಶ್ರೀ ಜಿ. ಬಸವಣ್ಣಪ್ಪ:—ಹಾಗಾಗುವುದಿಲ್ಲ. ಅದನ್ನು ಅನೇಕ ರೀತಿಯಲ್ಲಿ ವಿಚಾರ ಮಾಡಿ ತೀರ್ಮಾನಮಾಡಲಾಗಿದೆ.

ಶ್ರೀ ಎಸ್. ಬಂಗಾರಪ್ಪ:—೨೪ನೇ ನವೆಂಬರ್ ೧೯೬೯ರಂದು ಡಾ. ಜಿ. ನಿರ್ಮಲ ಅವರನ್ನು ಅಲ್ಲಿಗೆ ನೇಮಿಸಿದ್ದೀರಿ. ಅವರು ಕೆಲಸಕ್ಕೆ ಹಾಜರಾಗಲಿಲ್ಲವೆಂದು ಉತ್ತರ ಕೊಟ್ಟಿದ್ದೀರಿ. ಅವರು ರಜದಮೇಲೆ ಇದ್ದರೆ, ಅವರು ಕೆಲಸಕ್ಕೆ ಹಾಜರಾಗದೇ ಇದ್ದರೆ, ಈ ಕಾನೂನು ಪ್ರಕಾರ ಅವರ ಮೇಲೆ ಕ್ರಮ ಕೈಕೊಳ್ಳುವುದಕ್ಕೆ ಸಾಧ್ಯವಿದೆಯೇ?

ಶ್ರೀ ಜಿ. ಬಸವಣ್ಣಪ್ಪ:—ಕ್ರಮ ತೆಗೆದುಕೊಂಡಿದ್ದರಿಂದ ಇಲ್ಲಿಯುವರೆಗೂ ಅವರಿಗೆ ಯಾವ ಹುದ್ದೆಯನ್ನೂ ಕೊಟ್ಟಿಲ್ಲ.

ಶ್ರೀ ಎಂ. ಮಲ್ಲಪ್ಪ:—ವಸತಿ ಸೌಕರ್ಯಗಳು ಇಲ್ಲದೇ ಇರುವುದರಿಂದ ಡಾಕ್ಟರುಗಳು ಗ್ರಾಮಾಂತರ ಪ್ರದೇಶಗಳಿಗೆ ಹೋಗುತ್ತಾ ಇಲ್ಲ. ಆದ್ದರಿಂದ ಪ್ರಸೂತಿ ಗೃಹಗಳನ್ನು ಕಟ್ಟುವುದಕ್ಕೆ ಮುಂಚೆ ವಸತಿ ಗೃಹಗಳನ್ನು ಕಟ್ಟಿಸಿ ಅನಂತರ ಆಸ್ಪತ್ರೆಗಳನ್ನು ಮಂಜೂರು ಮಾಡಿದರೆ ಒಳ್ಳೆಯದಾಗಿರುತ್ತದೆ. ಆದ್ದರಿಂದ ಮೊದಲು ವಸತಿ ಗೃಹಗಳನ್ನು ಕಟ್ಟಿಸುತ್ತೀರಾ?

ಶ್ರೀ ಜಿ.ಬಸವಣ್ಣಪ್ಪ:—ವಸತಿ ಗೃಹಗಳನ್ನು ಕಟ್ಟುವುದಕ್ಕೆ ಮುಂಚೆ ಪ್ರಸೂತಿ ಗೃಹಗಳನ್ನು ಕಟ್ಟಿಸುವ ಅವಶ್ಯಕತೆ ಬಹಳ ಜಾಸ್ತಿ ಇದೆ. ಅದಕ್ಕೋಸ್ಕರ ಆ ರೀತಿ ಮಾಡುವುದಕ್ಕಾಗುವುದಿಲ್ಲ.

ಶ್ರೀ ಜಿ. ರಾಮೇಗೌಡ:—ಈ ವರ್ಗಾವಣೆಯನ್ನು ಆರೋಗ್ಯ ಖಾತೆಯ ಮಂತ್ರಿಗಳು ಮಾಡಿದ್ದಾರೋ ಅಥವಾ ಮಾನ್ಯ ಮುಖ್ಯಮಂತ್ರಿಗಳು ಮಾಡಿದ್ದಾರೋ?

ಶ್ರೀ ಜಿ. ಬಸವಣ್ಣಪ್ಪ:—ಅದನ್ನು ಆರೋಗ್ಯಮಂತ್ರಿಗಳು ಮಾಡಿದ್ದು.

CADRE AND RECRUITMENT RULES IN BANGALORE CITY CORPORATION.

502 SRI T. R. SHAMANNA (Fort) —

Will the Minister of State for Municipal Administration be pleased to state:—

(a) whether the Bangalore City Corporation has finalised the Cadre and Recruitment Rules;

(b) the year in which preparation of the Cadre and Recruitment Rules was taken up and since how long it is pending?

SRI B. M PATIL (Minister of State for Muncipal Administration).—

(a) Yes.

(b) 1960. Pending since then

SRI T.R. SHAMANNA:—May I request the Hon. Minister whether he is aware of the fact that, not preparing the cadre and Recruitment Rules is one of the main reasons for superseding the Bangalore Corporation and even after the supersession, why it has not been prepared even after three years?

† SRI B.M. PATIL:—Details are not with me now but the finalisation of the cadre and recruitment rules is now in the final stage.

SRI T.R. SHAMANNA:—The Cadre and Recruitment Rules were ready to be sent to Government when the Corporation was superseded and now the period of supersession is coming to a close, yet the cadre and recruitment rules have not been completed even though that was the main reason for superseding the Corporation. Can I ask the Hon. Minister through the Hon. Speaker why not Government be superseded for not taking action for which the Corporation was at that time condamned?

SRI B.M. PATIL:—When the administration of the Corporation was vested with the elected members, in the year 1966 draft cadre and recruitment rules were there. After that, there were referred to the Administrator; the Administrator referred them to the P.S C. All these formalities have been gone through and completed. After obtaining the remarks and recommendations of the P.S.C recently the Adminstrator has sent them to Government and they are now being processed in the Government.

Sri T.R. Shamanna:—The Corporation gave the same reasons and said that the delay involved in preparing and finalising the cadre and recruitment rules were that the matter had to be sent to the P.S.C. and P.S.C. had not returned it. And in this process there was delay. Even though we offered the same reason, the court held that the Corporation has to be superseded. Now the same reason is being given to us. I strongly urge that the Government must be superseded since it is for that reason that the Corporation was superseded.

Sri B. M. Patil:—That is not the only ground on which the Corporation was superseded. Among so many other things, this was one reason. I just now told my Hon Friend Sri T R. Shamanna that the cadre and recruitment rules were sent the P.S.C. in the year 1969 after the Administrator has scrutinised them on 29th December 1969. The cadre and recruitment rules were delayed from 1960 to 1966 when the control of the Corporation vested in the elected members. But during the last two years, all formalities have been completed, the recommendations of the P.S.C. are incorporated and now it is in the final stage of processing in the Government.

ಶ್ರೀ ಎಸ್.ವಿ. ಅಗ್ನಿಹೋತ್ರಿ:—ಈ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಬೆಂಗಳೂರು ಕಾರ್ಪೊರೇಷನ್ನಿಗೆ ಅನ್ವಯಿಸುವಾಗ ಹುಬ್ಬಳ್ಳಿ ಮತ್ತು ಧಾರವಾಡ ಕಾರ್ಪೊರೇಷನ್ನಿಗೂ ಅದನ್ನು ಏಕೆ ಅನ್ವಯಿಸಬಾರದು?

ಶ್ರೀ ಬಿ. ಎಂ. ಪಾಟೀಲ್;— ಮಾನ್ಯ ಸದಸ್ಯರು ಹೇಳಿದ ಪ್ರಕಾರ ಅದೇ ರೀತಿ ರೂಲ್ಸನ್ನು ಹುಬ್ಬಳ್ಳಿ ಮತ್ತು ಧಾರವಾಡ ಕಾರ್ಪೊರೇಷನ್ನಿಗೂ ಅನ್ವಯಮಾಡಬೇಕೆಂದು ಸರ್ಕಾರದ ಅಭಿಪ್ರಾಯ.

ಶ್ರೀ ಎಂ. ಹೆಚ್. ಜಯಪ್ರಕಾಶ್ ನಾರಾಯಣ್: ೧೦ ವರ್ಷಗಳವರೆಗೆ ಮಂದಗಾಮಿತನದಲ್ಲಿ ಸಿ. ಅಂಡ್ ಆರ್. ರೂಲ್ಸ್ ಜಾರಿಗೆ ತಂದಿರುವ ಹಾಗೆ ಮಾಡಿದ್ದೀರಿ. ಅದು ಫೈನಲ್ ಸ್ಟೇಜಿಗೆ ಬಂದಿದೆ. ಇಷ್ಟರಲ್ಲೇ ಜಾರಿಗೆ ತರುತ್ತೇವೆಂದು ಅಭಯ ಹೇಳುತ್ತಿದ್ದೀರಿ. ನಾನು ಕಮೀಷನರ್ ಹತ್ತಿರ ಹೋಗಿ ಬಂದಿದ್ದೇನೆ. ಅಲ್ಲಿ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್‌ಗೆ ಅನುಗುಣವಾಗಿ ಮಾಡಿರುವುದರಿಂದ ೧೫-೩ ಪ್ರಮಾಣದಲ್ಲಿ ಹುದ್ದೆಗಳನ್ನು ಕೊಡುತ್ತಿದ್ದೇವೆಂದು ಹೇಳಿದರು. ಪ್ರತಿಯೊಂದು ದರ್ಜೆಯಲ್ಲಿಯೂ ನೇಮಕವಾದಂಥ ಹುದ್ದೆಗಳು ಈ ಪ್ರಮಾಣದಲ್ಲಿರುತ್ತದೆಂದು ಹೇಳಿದರು. What is the percentage promotions to vacancies in the reserve quota? ಕಾರ್ಪೊರೇಷನ್ನಿನಲ್ಲಿ ಸಿ. ಅಂಡ್ ಆರ್ ರೂಲ್ಸ್‌ನಲ್ಲಿ ಡೈರೆಕ್ಟ್ ರಿಕ್ರೂಟ್‌ಮೆಂಟಿನಲ್ಲಿ ಎಷ್ಟು ಪರ್ಸೆಂಟೇಜ್ ಕೊಟ್ಟಿದ್ದಾರೆ, ಪ್ರೊಮೋಷನಲ್ಲಿ ವೇಕನ್ಸಿಗಳಲ್ಲಿ ಎಷ್ಟು ಪರ್ಸೆಂಟೇಜ್ ರಿಜರ್ವೇಷನ್ ಕೋಟಾ ಕೊಟ್ಟಿದ್ದಾರೆ?

ಶ್ರೀ ಬಿ. ಎಂ. ಪಾಟೀಲ್:—ಮಾನ್ಯ ಮಿತ್ರರ ಅಭಿಪ್ರಾಯ ಸರಿಯಾಗಿಲ್ಲವೆಂದು ಹೇಳುತ್ತೇನೆ. ೧೦ ವರ್ಷಗಳ ವಿಳಂಬವಾಗಿಲ್ಲ. ಸರ್ಕಾರ ಅಡ್ಮಿನಿಸ್ಟ್ರೇಷನ್ನನ್ನು ವಹಿಸಿಕೊಂಡದ್ದು ೧೯೬೬ರಲ್ಲಿ. ಅಲ್ಲಿಯವರೆಗೆ ಕಾರ್ಪೊರೇಷನ್ನಿನ ಆಡಳಿತ ಪ್ರತಿನಿಧಿಗಳ ಕೈಯಲ್ಲಿ ಇತ್ತು. ಕೆಲಮಟ್ಟಿಗೆ ೧೯೬೬ರಿಂದ ಎರಡು ವರ್ಷಗಳಲ್ಲಿ ಅದನ್ನು ಫೈನಲೈಜ್ ಮಾಡಿದ್ದೇವೆ. ಹಿಂದುಳಿದ ಜನಾಂಗದವರಿಗೆ ಸರ್ಕಾರದ ನಿಯಮದ ಪ್ರಕಾರ ಎಷ್ಟು ರಿಸರ್ವ್ ಮಾಡಬೇಕು ಎಂಬುದನ್ನು ಗಮನದಲ್ಲಿಟ್ಟುಕೊಂಡು ಫೈನಲೈಜ್ ಮಾಡುತ್ತಿದ್ದೇವೆ.

ಶ್ರೀ ಎಂ. ನಾಗಪ್ಪ:— ೧೯೬೦ ರಿಂದ ಈ ಬೆಂಗಳೂರು ಕಾರ್ಪೊರೇಷನ್ನಿನವರು ಕೇಡರ್ ರಿಕ್ರೂಟ ಮೆಂಟ ರೂಲ್ಸ್ ಫೈನಲ್ ಮಾಡದೆ ಇಟ್ಟಿದ್ದಾರೆ. ಈ ಒಂದು ಕಾರಣವನ್ನು ಉಪಯೋಗಿಸಿಕೊಂಡು ಕಾರ್ಪೊರೇಷನನ್ನು ಸೂಪರಸೀಡ ಮಾಡಬೇಕು ಎಂಬ ಉದ್ದೇಶದಿಂದಲೇ ಹಾಗೆ ಪೆಂಡಿಂಗ್ ಇಟ್ಟಿದ್ದಾರೆಯೆ? ಈ ಒಂದು ಕಾರಣ ಉಪಯೋಗಿಸಿಕೊಂಡದ್ದು ನಿಜವೇ?

ಶ್ರೀ ಬಿ. ಎಂ. ಪಾಟೀಲ:– ಮಾನ್ಯ ಮಿತ್ರರಾದ ನಾಗಪ್ಪನವರು ಸರಿಯಾಗಿ ತಿಳಿದುಕೊಂಡಿಲ್ಲ. ಆದುದರಿಂದ ಕಾರ್ಪೊರೇಷನ್ ಕೇಡರ ಅಂಡ್ ರಿಕ್ರೂಟಮೆಂಟ ರೂಲ್ಸ ಮಾಡಬೇಕಾದರೆ ಮೊದಲು ಡ್ರಾಫ್ಟ ರೂಲ್ಸ ಮಾಡಿ ಸ್ಟ್ಯಾಂಡಿಂಗ್ ಕಮಿಟಿ ಅದನ್ನು ಅನುಮೋದಿಸಿ ಅನಂತರ ಸರಕಾರಕ್ಕೆ ಕಳುಹಿಸಬೇಕು. ೧೯೬೦ ರಿಂದ ೬೭ರವರೆಗೆ ಅದನ್ನು ಸರಕಾರಕ್ಕೆ ಕಳುಹಿಸಿಲ್ಲ ಸರಕಾರಕ್ಕೆ ಕಳುಹಿಸಿದ ಮೇಲೆ ಅಪ್ರೂವ ಮಾಡುವ ಪ್ರಶ್ನೆ ಬರುತ್ತದೆ. ಸರಕಾರ ಕಾರ್ಪೊರೇಷನ್ನು ವಹಿಸಿಕೊಂಡದ್ದು ೧೯೬೭ರಿಂದ.

SRI ABDUL KHUDDUS ANWAR:—Does this rule reply to shimoga Municipality also?

SRI B. M. PATIL:—Government is also contemplating to constitute a Municipal administration service and a common cadre and Recruitment rules for all municipal employees.

ಶ್ರೀ ಟಿ ಆರ್. ಶಾಮಣ್ಣ:— ಉತ್ತರ ಕೊಡುತ್ತಾ ಇದು ಒಂದೇ ಕಾರಣ ಅಲ್ಲ. ಕಾರ್ಪೊರೇಷನ್ ಸುಪರಸೀಡ ಮಾಡುವುದಕ್ಕೆ ಬೇರೆ ಬೇರೆ ಕಾರಣಗಳು ಇದೆ ಎಂದು ಹೇಳಿದಿರಿ. ೧೪ ಚಾರ್ಜಸ್ ಹಾಕಿದ್ದಿರಿ. ಕೋರ್ಟಿನಲ್ಲಿ ೧೧ ಚಾರ್ಜಸ್ ಫ್ರಿವಿಲಸ್ ಎಂದು ಹೇಳಿದ್ದಾರೆ. ಇನ್ನು ಉಳಿದದ್ದು ಮೂರು ಚಾರ್ಜಸ್. ಕೇಡರ ರಿಕ್ರೂಟಮೆಂಟ್ ರೂಲ್ಸ ಮಾಡದೆ ಇರುವುದು ಒಂದು ಚಾರ್ಜ. ಇನ್ನೊಂದು ಫ್ರೀವಾಟರ್ ಅಲೋಯನ್ಸ ಡಿಮಾಂಡ್. The Estimates committee has given more than what we have asked or and therefore that charge is not valid.

MR. SPEAKER:—the Hon. member should confine himself th cadre and Recruitment rules only.

SRI T R. SHAMANNA:—I put it that the impression is that the Government snperseded the corporation not for valid reasons but want only just to see that an elected body is not allowed to function. will the Minister accept it?

MR. SPEAKER:—that supplementry is not allowed as it is out side the scope of the question.

SUB-TRANSMISSION LINES

564. SRI K. M. PUTTASWAMY (Chickballapur).—

Will the Chief Minister be pleased no state:—

(*a*) whether sanction was accorded long back for drawing a Sub-transmission line from Henegal to Kethenahalli and on to Yerramarenahalli.

(*b*) if so the action taken by the Department in implementing this work.

(c) if not the reasons for the delay?

Sri D. Parameswarappa (Deputy Minister for major irrigetion and electricity on behalf of Sri Veerendra Patil:—(Chief Minister)

(a) Yes, in 1964.

(b) The work was started during June 1967 and the line extended up to Ittappanahalli.

(c) The delay was due to the fact that it was then decided to kepe in abeyance extension of Sub-transmition lines non linked up with any Rural Electrification and power supply to I. P. scheme. However, this decision was relaxed in 1967 and work was taken up for execution.

ಶ್ರೀ ಕೆ. ಎಂ. ಪುಟ್ಟಸ್ವಾಮಿ:— ಕೇತನಹಳ್ಳಿಗೆ ೧೯೬೪ರಲ್ಲಿ ಲೈನ್ ಎಳೆಯುಬೇಕೆಂದು ಸಾಂಕ್ಷನ್ ಕೊಟ್ಟರು ತಿರುಗಿ ವರ್ಕ್ಸ್ ತೆಗೆದುಕೊಂಡದ್ದು ೧೯೬೭ರಲ್ಲಿ. ಲೈನ್ ಎಳ್ಳಷ್ಟು ಮುಂದೆ ಎಳೆದಿಲ್ಲ. ಇದಕ್ಕೆ ಏನು ಕಾರಣ? ಅಲ್ಲಿಯ ಜನರು ದ್ವೀಪದಲ್ಲಿ ಇದ್ದಹಾಗೆ ಇದ್ದಾರೆ.

ಶ್ರೀ ಡಿ. ಪರಮೇಶ್ವರಪ್ಪ:— ೧೯೬೪ರಲ್ಲಿ ೧ ಲಕ್ಷ ೨೮ ಸಾವಿರ ಚಿಲ್ಲರೆಗೆ ೧೧ ಕೆ. ವಿ. ಲೈನ್ ಹಾಕಬೇಕೆಂದು ಒಂದು ಎಸ್ಟಿಮೇಟ್ ಸಾಂಕ್ಷನ್ ಆಯಿತು. ಆದರೆ ರೂರಲ್ ಎಲೆಕ್ಟ್ರಿಫಿಕೇಷನ್ ಪ್ರೋಗ್ರಾಂ ಮತ್ತು ಐ. ಪಿ ಸೆಟಿಗೆ ಆನುಕೂಲವಾಗದೆ ಇರುವಾಗ ಸಬ್‌ಲೈನ್ ತೆಗೆದುಕೊಂಡು ಹೋಗುವುದು ಸೂಕ್ತವಲ್ಲ ಎಂದು ಪಾಲಿಸಿ ಡಿವಿಷನ್ ಬೋರ್ಡಿನವರು ತೆಗೆದುಕೊಂಡಿದ್ದಾರೆ. ಆದಕ್ಕೋಸ್ಕರ ತಾತ್ಕಾಲಿಕವಾಗಿ ಕೆಲಸ ನಿಲ್ಲಿಸಿದರು. ಪಾಲಸಿ ರಿವೈಜಮಾಡಿ ಲೈನ್ ಹಾಕಬೇಕೆಂದು ಒಂದು ಅಭಿಪ್ರಾಯಕ್ಕೆ ಬಂದು ೧೯೬೭ರಲ್ಲಿ ಈ ಕೆಲಸ ಪುನಃ ಮುಂದುವರಿಸಿದರು. ಈಗಾಗಲೆ ಅನೇಕ ಪಂಪುಸೆಟ್ಟುಗಳನ್ನು ಹಾಕುವುದಕ್ಕೆ ಕೂಡ ಮುಂದೆ ಬಂದಿದ್ದಾರೆ. ಕೆಲಸವನ್ನು ತೀವ್ರವಾಗಿ ಮಾಡುವುದಕ್ಕೆ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಕೆ ಎಂ. ಪುಟ್ಟಸ್ವಾಮಿ:— ಸುಮಾರು ೬ ವರ್ಷಗಳಿಂದ ಜನ ಹಿಂಸೆಪಟ್ಟಿದ್ದಾರೆ. ಪಂಪುಸೆಟ್ಟುಗಳಿಗೂ ಆಪ್ಲಿಕೇಷನ್ ಕೊಟ್ಟಿದ್ದಾರೆ. ಆದುದರಿಂದ ಇನ್ನು ಆರು ತಿಂಗಳೊಳಗೆ ಕರಂಟ್ ಕೊಡುವುದಕ್ಕೆ ಸಾಧ್ಯವಾಗುತ್ತದೆಯೇ?

ಶ್ರೀ ಡಿ. ಪರಮೇಶ್ವರಪ್ಪ: - ಇದುವರೆಗೂ ೪೧ ಐ. ಪಿ. ಸೆಟ್ಸ್‌ಗೆ ಆಪ್ಲಿಕೇಷನ್ ಬಂದಿದೆ. ರಿಪೋರ್ಟ ನೋಡಿದರೆ ಇನ್ನೂ ಅಪ್ಲಿಕೇಷನ್ಸ್ ಬರಬೇಕಾಗುತ್ತದೆ. ಡಿಪಾರ್ಟಮೆಂಟಿನವರು ಅದಷ್ಟು ಜನಗಳಿಗೆ ತಿಳುವಳಿ ಕೊಟ್ಟು ಹೆಚ್ಚಿಗೆ ಆಪ್ಲಿಕೇಷನ್ಸ್ ಬರುವಹಾಗೆ ಮಾಡುತ್ತಿದ್ದಾರೆ ಮುಂದೆ ಇನ್ನೂ ತೀವ್ರವಾಗಿ ಮಾಡುವುದಕೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಎಂ. ಪುಟ್ಟಸ್ವಾಮಿ:— ಇತ್ತಪ್ಪನಹಳ್ಳಿಯಿಂದ ಕೇತನಹಳ್ಳಿ ಮತ್ತು ಉರಮಾರವನಹಳ್ಳಿವರೆಗೆ ಲೈನ್ ಎಳೆದಿದ್ದಾರೆ. ಅಲ್ಲಿ ದುಡ್ಡು ಇರುವವರು ಇದ್ದಾರೆ ಇಲ್ಲದೆ ಇರುವವರು ಇದ್ದಾರೆ ಇನ್ನೂ ಹೆಚ್ಚಿಗೆ ಪಂಪುಸೆಟ್ಟುಗಳಿಗೆ ಪವರ್ ತಗೆದುಕೊಳ್ಳುವ ಸಂಭವ ಇದೆ. ಇವರು ಆರು ತಿಂಗಳೊಳಗೆ ಮುಗಿಸುವುದಿಲ್ಲ ಎನ್ನುವ ಭಾವನೆ. ಬಂದಿದೆ. ಆದುದರಿಂದ ಕೆಲಸಗಳನ್ನು ಆದಷ್ಟು ಬೇಗನೆ ತಗೆದುಕೊಂಡು ಮುಗಿಸುತ್ತೀರಾ?

ಶ್ರೀ ಡಿ. ಪರಮೇಶ್ವರಪ್ಪ:— ಇದಕ್ಕೆ ಒಂದು ಪ್ರೊಸೀಜರ್ ಇದೆ. ಬೋರ್ಡನವರು ಒಂದು ಫಾರ್ಮಾಲಟೀಸ್ ಅಬಸರ್ವ್ ಮಾಡಬೇಕಾಗುತ್ತದೆ. ಪಂಪುಸೆಟ್ಟುಗಳನ್ನು ಹಾಕುವುದಕ್ಕೆ ಕಂಪ್ಲಿಷನ್ ರಿಪೋರ್ಟ್ ಬಂದನಂತರ ಕೆಲಸ ತೆಗೆದುಕೊಳ್ಳಬೇಕಾಗುತ್ತದೆ. ಫಾರ್ಮಾಲಟೀಸ್ ಆಬಸರ್ವ್ ಮಾಡಿದರೆ ಬೇಗ ಕೆಲಸ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ.

MISAPPROPRIATION IN PANAMBUR SERVICE CO-OPERATIVE SOCIETY, S. K. DISTRICT

565 SRI P. V. AITHALA (Suratkal):—

Will the Minister for Development be pleased to refer to the replies given to Starred question No. 576 of Sri Ratankumar Kattemar on 2nd April 1969 and state:—

(*a*) whether the enquiry of the case about the misappropriation of funds to the tune of Rs. 18,000 under section 64 has been completed; if not, the stage of the enquiry, what has happened to the complaint given to the police in August, 1969.-

(*b*) whether the person who is alleged to have Misappropriated, the amount has brought a search warrant against the Manager of the Society who is newly appointed Government servant.

(*c*) whether amount Misappropriated has been recovered. if so, the amount recovered and the balance yet to be recovered.

(*d*) whether any civil or criminal action has been instituted by the Government on the Ex- Secretary of the said society for the alleged, Misappropriation os funds of the society. if so, the result of the action taken in that behalf?

SRI B L. GOWDA (deputy Minister for co-operation):

(*a*) Enquiry completed, complaint was filed by the president of the Society in August, 1968 and not in August, 1969.

(*b*) Yes.

(*c*) Yes, partly recovered Amount recovered Rs. 3,900

Balance .... Rs. 14,100

(*d*) Action on Criminal side is taken. But action on the civil side is under consideration.

SRI P. V. AITHALA:—Is it a fact that because this Secretary is a member of the D.C.C. and the only person who put up a welcome board to the Chief Minister when he visited the Harbour area last time, he is being protected and no civil or criminal action is taken yet?

SRI B. L. GOWDA:—No. A criminal complaint is lodge and we have also issued instructions to file a civil dispute.

Sri P.V. Aithala: No charge sheet is filed so far on the other hand, this person and the D. C. C. members took out a search warrant against a Government official to snatch away the Government record which reveals this misappropiation.

Sri B.L.Gowda:– I do not know what he means by D.C.C.members but I can say that the Secretary has been prosecuted the Department has filed a complaint with the police. It is the duty of the police to file charge sheet and that is not the duty of the department. we have also instructed the officers of the committee of Management to file a civil dispute also. There is no protection given and we have not extended any patronage to anybody.

Sri P.V. Aithala:—May I know when the charge sheet was filed before the court?

Sri B.L. Gowda:—The complaint was filed on 29th January 1970.

ಶ್ರೀ ಕೆ. ಎಚ್. ರಂಗನಾಥ;—೧೪ ಸಾವಿರ ರೂಪಾಯಿ ಬಾಕಿ ಇದೆ ಎಂದು ಹೇಳಿದಿರಿ. ೧೪೦೦೦ ರೂಪಾಯಿ ವಸೂಲುಮಾಡದೆ ಇರುವುದಕ್ಕೆ ಕಾರಣ ಏನು?

Sri B. L. Gowda:–We have given instrutions to attach his properties under section 103.

ಶ್ರೀ ಕೆ.ಎಚ್. ರಂಗನಾಥ:—ಅತನಿಗೆ ಎಷ್ಟು ಆಸ್ತಿ ಇದೆ ಎಂದು ಹೇಳುವುದಕ್ಕೆ ಸಾಧ್ಯವೇ?

Sri B. L. Gowda:—That information is not available.

ಶ್ರೀ ಎಂ ಎಂ. ಜಾಲಿಸಟಗಿ:—ಪೋಲೀಸ ಕಂಪ್ಲೇಂಟ್ ಕೊಟ್ಟಿದ್ದು ಯಾವಾಗ? ಇನ್‌ವೆಸ್ಟಿಗೇಷನ್ ಎಷ್ಟು ಕಾಲದವರೆಗೆ ನಡೆಯಿತು? ೧೪ ಸಾವಿರ ರೂಪಾಯಿಗಳು ವಸೂಲಾಗಬೇಕಾದರೆ ಎಷ್ಟು ವರ್ಷಗಳು ಬೇಕಾಗಬಹುದು? ಅವರಿಗೆ ಸ್ಥಿರ ಸ್ವತ್ತು ಇಲ್ಲವೇ? ಅವರು ಪ್ರದೇಶ ಕಾಂಗ್ರೆಸ್ ಕಮಿಟಿ ಪ್ರೆಸಿಡೆಂಟರ ಸಂಬಂಧಿಕರು ಎಂದು ವಿಳಂಬ ಮಾಡುತ್ತಿದ್ದೀರಾ?

ಶ್ರೀ ಬಿ. ಎಲ್. ಗೌಡ :—ಪ್ರಥಮವಾಗಿ ಪ್ರದೇಶ ಕಾಂಗ್ರೆಸ್ ಕಮಿಟಿ ಅಧ್ಯಕ್ಷರಿಗೂ ಇದಕ್ಕೂ ಸಂಬಂಧವಿಲ್ಲ. ಆ ಅಲಿಗೇಷನ್‌ನನ್ನು ಒಪ್ಪುವುದಿಲ್ಲ. ೧೬ನೇ ಸೆಪ್ಟೆಂಬರ್ ೧೯೬೯ರಲ್ಲಿ ಪೋಲೀಸ್ ಇನ್‌ಕ್ವೈರಿಗೆ ಕಳುಹಿಸಿದ್ದೆವು. ೨೧ನೇ ಜನವರಿ ೧೯೭೦ರಲ್ಲಿ ರಿಪೋರ್ಟ್ ಕೊಟ್ಟಿದ್ದಾರೆ. ಅವರ ಆಸ್ತಿ ಆಟಾಚ್ ಮಾಡಿದ್ದೇವೆ.

ಶ್ರೀ ಕೆ. ಎಚ್. ಪಾಟೀಲ್ ;—ಈ ಸಂಘದಲ್ಲಿ ಇಷ್ಟು ದೊಡ್ಡ ಪ್ರಮಾಣದಲ್ಲಿ ದುರುಪಯೋಗವಾದದ್ದು ತಮ್ಮ ಜನರಿಗೆ ಬಂದ ಮೇಲೂ ಸಹ ಇದರ ಆಡಳಿತವನ್ನು ತಮ್ಮ ವಶಕ್ಕೆ ತೆಗೆದುಕೊಳ್ಳಲಿಕ್ಕೆ ಆಗಲಿ ಅಥವಾ ಸೂಪರ್‌ಸೀಸ್ ಮಾಡಲಿಕ್ಕೆ ಆಗಲಿ ಕ್ರಮ ತೆಗೆದುಕೊಳ್ಳದೇ ಇರುವುದಕ್ಕೆ ಕಾರಣವೇನು ? ಕೇಸ್ ಹಾಕಲಿಕ್ಕೆ ಪ್ರಯತ್ನಪಟ್ಟಿದ್ದೀರಿ, ಅದರ ಪರಿಣಾಮ ಏನಾಗಿದೆ ?

ಶ್ರೀ ಬಿ. ಎಲ್ ಗೌಡ ;—ಅಕ್ಟೋಬರ್ ೧೯೬೮ರಲ್ಲಿ ನಮ್ಮ ಗಮನಕ್ಕೆ ಬಂತು, ಸೆಕ್ಷನ್ ೬೪ರ ಪ್ರಕಾರ ಎನ್‌ಕ್ವೈರಿ ಮಾಡಿದ್ದೇವೆ. ಅದರ ರಿಪೋರ್ಟ್ ೧೯೭೦ರ ಜನವರಿಯಲ್ಲಿ ನಮ್ಮ ಕೈಗೆ ಬಂದಿದೆ, ಬಂದ ತಕ್ಷಣ ೧೦೩ನೇ ಸೆಕ್ಷನ್ ಪ್ರಕಾರ ಕಂಪ್ಲೆಂಟ್ ಹಾಕಿ ಆಸ್ ಅಟ್ಯಾಚ್ ಮಾಡಿದೆ ಎಂದು ಹೇಳಿದ್ದೇನೆ. ಕಾನೂನು ಪ್ರಕಾರ ಕ್ರಮ ತೆಗೆದುಕೊಂಡಿದ್ದೇವೆ, ಮುಂಜಾಗರೂಕತೆಯ ಕ್ರಮ ಕೈಗೊಂಡು ಅಟ್ಯಾಚ್ ಮೆಂಟ್ ಆರ್ಡರ್ ಮಾಡಿದ್ದೇವೆ.

ಶ್ರೀ ಕೆ. ಎಚ್. ಪಾಟೀಲ್ ;-ಸೂಪರ್‌ಸೀಡ್ ಮಾಡದೇ ಇರುವುದಕ್ಕೆ ಕಾರಣವೇನು ಎಂದು ಕೇಳಿದೆ, ಅದಕ್ಕೆ ಹೇಳಲಿಲ್ಲ.

ಶ್ರೀ ಬಿ. ಎಲ್. ಗೌಡ .—ಆಡಳಿತದವರು ತಪ್ಪು ಮಾಡಿಲ್ಲ ಸೆಕ್ರೆಟರಿಯವರು ತಪ್ಪು ಮಾಡಿದ್ದಾರೆ ಅವರ ಮೇಲೆ ಕ್ರಮ ತೆಗೆದು ಕೊಂಡಿದ್ದೇವೆ.

ಶ್ರೀ ಹಂಜೆ ಶಿವಣ್ಣ .—ಸೊಸೈಟಿ ಮತ್ತು ಪಂಚಾಯಿತಿಗಳಲ್ಲಿ ಹಣ ದುರುಪಯೋಗವಾಗುವುದು ಒಂದು ಕ್ರಮ ಜಾರಿಯಲ್ಲಿ ಬಂದಿದೆ. ಈ ಹಣದ ಮೇಲೂ ಕೂಡ ಬಡ್ಡಿ ಹಾಕುತ್ತೀರಾ ? ಅಥವಾ ಯಾರಿಗಾದರೂ ಬೇಕಾದವರು ಅಂಥ ಹೇಳಿ ಹಾಗೆಯೇ ಬಿಡುತ್ತೀರಾ ?

ಶ್ರೀ ಬಿ. ಎಲ್. ಗೌಡ.—ಎಲ್ಲದರ ಮೇಲೂ ಪೀನಲ್ ಇಂಟರೆಸ್ಟ್ ಹಾಕುತ್ತೇವೆ.

ಶ್ರೀ ಬಿ. ಎಂ. ಇದಿನಬ್ಬ .—ಈ ಆಪಾದನೆಗಳಿಗೆ ಒಳಗಾದಂತಹ ವ್ಯಕ್ತಿ ಶ್ರೀಮಂತರು ಅಂತ ಅನ್ನುವುದು ಗೊತ್ತಿಲ್ಲವೇ ? ಅವರಿಂದ ಭಾಗಶಃವಾದರೂ ಬರುತ್ತದೆ ಎಂಬ ಆಲೋಚನೆ ಇದೆಯೇ ?

ಶ್ರೀ ಬಿ. ಎಲ್. ಗೌಡ .—ಅವರು ಶ್ರೀಮಂತರೋ, ಬಡವರೋ ಆ ವಿಷಯ ಗೊತ್ತಿಲ್ಲ.

SRI C. K. RAJIAH SHETTY :—May I know whether the property is attached ?

SRI B. L. GOWDA :—I have already replied to that.

SRI P. V. AITHALA ;—Is it a fact that since the last two years representation were made to Sri Nadagouda, Minister for Development requesting him to take civil and criminal action by letters addressed by Sri Ratnakumar Kattemar and myself and no replies have been received because the person involved is a close associate of the M.P.C.C. President ?

SRI B. L. GOWDA ;—I have already said that we have filed a criminal complaint and that orders have been passed to attach his properties.

LOCALISATION OF CROP PATTERN IN T. B. P.

584. SRI G. AMARE GOWDA (Sindhnur).—Wi l the Chief Minister be pleased to state :—

(a) Whether there is any proposal before the Government to reconsider localisation of the crop pattern under the Tungabhadra Project Ayacut ;

(*b*) if so, the measures the Government would take, if the localized crops fail to fatch a reasonable price in the market atleast to meet the cost of production ?

Sri D. Parameshwarappa ; (Deputy Minister for Major Irrigation and Electricity) on behalf of Sri Veerendra Patil (Chief Minister)

(*a*) No.

(*b*) Does not arise.

ಶ್ರೀ ಅಮರೇ ಗೌಡ :—ಆ ಪ್ರಶ್ನೆಗೆ ಉತ್ತರವಾಗಿ ಉದ್ಭವಿಸುವುದಿಲ್ಲ ಎಂದು ಹೇಳಿರುವುದು ಸ್ವಲ್ಪ ಸಂದಿಗ್ಧವಾಗಿದೆ.

Sri D. Parameswarappa :—Fixation of crop pattern has no relationship to the question of price. As my friend knows, price is determined by supply and demand.

Sri G. Amare Gowda ;—The Government is imposing a particular crop on the ryot and if he is not able to realise the cost of procuction, are they going to giue him any subsidy or guarantee the price ?

Sri D. Parameswarappa ;—There is no question of giving subsidy Localisation of crop pattern is done on the basis of certain technical opinion and soil survey classification and on the basis of the recommendations of the Agriculture Department and the Revenue Department.

Sri Tirumala Devaraya ;—I want to know whether the Agrlculture Department has recommended the rotation of crops because of the deterioration in land and crops. Therefore, is it not better to change the localised pattern ?

Sri D. Parameswarappa ;—I want notice. I do not know whether the Agriculture Department has recommended for changing the crop pattern.

Sri H. Siddaveerappa ;—I want to know from the Hon. Minister whethe this crop pattern is a permanent feature or is variable according to the season and what steps have the Government taken to so that a particular cultivator has the prior knowledge as to the ecrp that he has to raise on his land ?

Sri D. Parameswarappa ;—I have already stated that a particular land owner must adhere to a particular crop pattern prescribed by the Government. The Government intends to make it a permanent feature and when special circumstances arise necessitating change in the crop pattern, the matter will be considered.

SRI H. SIDDAVEERAPPA :—According to the crop pattern they will have to pay water rate. Supposing I have been raising paddy and they say that I am assigned sugarcane, I will have to pay more water rate. Then, all these difficulties will arise.

ಶ್ರೀ ಎಸ್. ಎಂ. ಗುರೆಡಿ .—ತುಗಭದ್ರಾ ಕಾಲುವೆಯಲ್ಲಿ ನೀರು ಪಡೆಯುವಂತಹ ಜನ ಲೈಟ್ ಇರಿಗೇಷನ್ ಮಾಡಬೇಗಿದ್ದು ಹೆವಿ ಇರಿಗೇಷನ್ ಮಾಡುತ್ತಾ ಇದ್ದಾರೆ, ಭೂಮಿ ಕೂಡ ಕೆಟ್ಟು ಹೋಗುತ್ತಾ ಇದೆ, ಇಂಥಾದ್ದನ್ನು ನಿಲ್ಲಿಸುವುದಕ್ಕೆ ಪ್ರಯತ್ನ ಮಾಡಿದ್ದೀರಾ ? ಮತ್ತು ಈ ಲೋಕಲೈ-ಸೇಷನ್ ನಿಂದ ಟೇಲ್ ಎಂಡ್‌ನಲ್ಲಿ ಇರುವ ಜಮೀನಿಗೆ ನೀರು ಸಿಕ್ಕುವುದಿಲ್ಲ ಇದಕ್ಕೆ ಏನು ಹೇಳುತ್ತೀರಿ ?

ಶ್ರೀ ಡಿ. ಪರಮೇಶ್ವರಪ್ಪ .—ಲೈಟ್ ಇರಿಗೇಷನ್ ಇದ್ದ ಕಡೆಯಲ್ಲಿ ನೀರು ಹೆಚ್ಚು ತೆಗೆದು-ಕೊಳ್ಳುತ್ತಾ ಇದ್ದಾರೆ, ಅಂತಹ ಕೆಲವು ನಿದರ್ಶನಗಳು ಇವೆ. ಈಗಾಗಲೇ ನಾವು ತಿಳಿವಳಿಕೆಯನ್ನು ಕೊಟ್ಟಿದ್ದೇವೆ, ಅಂಥಾದ್ದು ಇದ್ದರೆ ಸರ್ವೆ ಮಾಡಿ ತಿಳಿಸಬೇಕೆಂದು ಹೇಳಿದ್ದೇವೆ, ಸೂಕ್ತ ಕ್ರಮ ತೆಗೆದು ಕೊಳ್ಳುತ್ತೇವೆ.

ಶ್ರೀ ಎಂ. ನಾಗಪ್ಪ .—ತುಂಗಭದ್ರಾ ಲೆಫ್ಟ್ ಬ್ಯಾಂಕ್ ಕೆನಾಲ್‌ನಲ್ಲಿ ಮೊದಲು ಮಾಡಿದಂತಹ ಕ್ರಾಪ್ ಪ್ಯಾಟ್ರನ್ ಇವತ್ತಿಗೂ ಉಳಿದಿದೆಯೇ ? ಯಾವ ಯಾವ ತಾಲ್ಲೂಕುಗಳಲ್ಲಿ ಉಳಿದಿವೆ ? ಯಾವ ಯಾವ ತಾಲ್ಲೂಕುಗಳಲ್ಲಿ ಬದಲಾಯಿಸಿದ್ದೀರಿ ? ಕ್ರಾಪ್ ಪ್ಯಾಟ್ರನ್ ಒಂದು ಸಾರಿ ಮಾಡಿದರೆ ಅದು ಪರ್ಮನೆಂಟ್ ಫೀಚರ್ ಅಂತ ಹೇಳುತ್ತಾ ಇದ್ದೀರಿ, ಸೆಕ್ಷನ್ ೨೭ರ ಪ್ರಕಾರ ಕಮಿಟಿಯವರ ಆಗಾಗ್ಗೆ ಅಲ್ಲಿಯ ವಾಸ್ತವಿಕಾಂಶಗಳನ್ನು ನೋಡಿ ಬದಲಾವಣೆ ಮಾಡಬೇಕೆಂದು ಇದೆ. ಇದರ ಬಗ್ಗೆ ತಿದ್ದುಪಡಿ ಮಾಡ-ಬೇಕೆಂಬ ಉದ್ದೇಶ ಇದೆಯೇ ? ಯಾರಾದರೂ ಅರ್ಜಿ ಕೊಟ್ಟರೆ ಡಿಪಾರ್ಟಮೆಂಟಿನವರು ಸಾಯಲ್ ಟೆಸ್ಟಿಂಗ್ ಲ್ಯಾಬೋರೇಟರಿಗೆ ಕಳುಹಿಸಿ ಅವರ ಸರ್ಟಿಫಿಕೇಟ್ ಜೊತೆಗೆ ಅರ್ಜಿಕೊಟ್ಟಿಲ್ಲ ಎಂದು ಹೇಳುವುದು ತಮ್ಮ ಗಮನಕ್ಕೆ ಬಂದಿದೆಯೇ ? ಈಗ ತಾವು ಯಾವ ಲೋಕಲೈಸೇಷನ್ ಪ್ಯಾಟ್ರನ್ ಮಾಡಿದ್ದೀರಿ ಆ ಪ್ರಕಾರ ಅಲ್ಲಿ ಬೆಳೆ ಬೆಳೆಯುತ್ತಿಲ್ಲ. ವಾಟರ್ ರೇಟ್ ಮಾತ್ರ ಕ್ಲೈಂ ಮಾಡುತ್ತಾ ಇದ್ದೀರಿ, ಆದ್ದರಿಂದ ಅಂತಹ ಕೆಲವು ಭೂಮಿಗಳಲ್ಲಿ ಲೋಕಲೈಸೇಷನ್ ಬದಲಾವಣೆ ಮಾಡಲಿಕ್ಕೆ ಪ್ರಯತ್ನ ಮಾಡುತ್ತೀರಾ ?

SRI D. PARAMESWARAPPA :— I have already stated that so far as localisation of *ayacut* is concerned, when the circumstances warrant, Government are considering such cases. But so far as other details are concerned, I have no details at present, I want notice.

SRI A. R. BADRINARAYAN :— When the Government exercise the right to fix the crop pattern, has it not got the responsibility of sub-sidising ?

MR. SPEAKER :— Does "subsidising" come under this question ?

SRI D. PARAMESWARAPPA :— It does not arise here.

ಶ್ರೀ ಸದಾಶಿವಪ್ಪ ಪಾಟೀಲ್ :— ಕ್ರಾಪ್ ಪ್ಯಾಟರ್ನ್ ಮಾಡಿದ ಬಳಿಕ ಲೋಕಲೈಸ್ಡ್ ಏರಿಯಾ ಡಿಕ್ಲೇರ್ ಮಾಡಿದ ನಂತರ ಕನ್‌ಸಲ್ಟೇಟಿವ್ ಕಮಿಟಿಗೆ ಬಾರದೆ ಆಫಿಷಿಯಲ್ ಕಮಿಟಿಯಲ್ಲಿ ಡಿಲೀಟ್ ಮಾಡುವುದಕ್ಕೆ ಅಧಿಕಾರವಿದೆಯೇ ?

ಶ್ರೀ ಡಿ. ಪರಮೇಶ್ವರಪ್ಪ :— ಕನ್‌ಸಲ್ಟೇಟಿವ್ ಕಮಿಟಿಯಲ್ಲಿ ಡಿಸ್‌ಕಸ್ ಮಾಡಿಯೇ ಡಿಸಿಷನ್ ತೆಗೆದುಕೊಳ್ಳುವುದು.

VANDALISM AGAINST THE HOTELS IN TIPTUR TOWN

599. Sri V. L. Shivappa (Tiptur) :—

Will the Chief Minister be pleased to state :—

(a) the aggregate damage caused to the hotels in Tiptur Town due to the Vandalism on 10th December 1969;

(b) the reasons for the strike ;

(c) whether Government had reports about the impending strike by students and possible damage to property even a week previous to the incident ;

(d) the precautionary measures, if any, taken by the authorities to prevent injury to property ;

(e) whether it is true that the vandalism and loot began at one end of the town and continued for over two hours-hotel after hotel being looted and the police in good numbers followed the students and stood by without taking any action ;

(f) whether the Government has any proposal before it to grant suitable compensation for the loss incurred by the Hoteliers ?

Sri Manik Rao Patil :— (Deputy Minister for Home) on behalf of. Sri Veerendra Patil (Chief Minister) :—

(a) About Rs. 20,000.

(b) Agitation for the reduction of price of eatables in Hotels.

(c) There was no definite and specific information.

(d) Proper bandobust arrangements had been made.

(e) No.

(f) No.

ಶ್ರೀ ವಿ. ಎಲ್. ಶಿವಪ್ಪ :— (೩) ಪ್ರಶ್ನೆಗೆ ಉತ್ತರ ಕೊಡುತ್ತಾ, ಖಂಡಿತವಾದ ಹಾಗೂ ನಿರ್ದಿಷ್ಟವಾದ ಮಾಹಿತಿ ಯಾವುದೂ ಇರಲಿಲ್ಲ ಎಂದು ತಿಳಿಸಲಾಗಿದೆ. ನಾಲ್ಕನೆಯ ತಾರೀಖಿನ ದಿವಸ ಸ್ಟೂಡೆಂಟ್ಸ್ ಯೂನಿಯನ್ನಿನವರು ಒಂದು ನಿರ್ಣಯ ಮಾಡಿದರು, ಬೆಲೆಗಳನ್ನು ಇಳಿಸದಿದ್ದರೆ ಚಳುವಳಿ ಮಾಡುತ್ತೇವೆ ಎಂದು ಸಾರಿದರು. ಸಾಯಂಕಾಲ ಅಸಿಸ್ಟೆಂಟ್ ಕಮೀಷನರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಬೆಲೆ ನಿಗದಿ ಮಾಡಿದರು. ಆ ಪ್ರಕಾರ ಬೆಲೆ ಇರಬೇಕೆಂದು ತಿಳಿಸಿದರು. ನಂತರ ೭ ನೆಯ ತಾರೀಖು ಪುನಃ ಚಳವಳಿ ಮಾಡುವುದಾಗಿ ಪ್ರಕಟಿಸಿದರು. ೧೦ನೆಯ ತಾರೀಖು ಲೂಟಿ ಆಯಿತು. ಮುಂಚೆ ನಿರ್ದಿಷ್ಟವಾಗಿ ಚಳವಳಿ ಮಾಡುವುದಾಗಿ ತಿಳಿಸಿರಲಿಲ್ಲವೇ ?

Sri Manik Rao Patil :— All those days, right from 4 to 7, the procession of the students went on very peacefully. But unfortunately

(SRI MANIK RAO PATIL)

on the 10th some untoward incidents have taken place. That is why, the Government has mentioned here that the Government did not have definite and specific information.

ಶ್ರೀ ವಿ. ಎಲ್. ಶಿವಪ್ಪ :— ಈಗ ಅವರು ಹೇಳಿದ್ದು ನನಗೆ ಗೊತ್ತಾಗಲಿಲ್ಲ, ಅದನ್ನು ಭಾಷಾಂತರ ಮಾಡಿ ಕನ್ನಡದಲ್ಲಿ ತಿಳಿಸಿದರೆ ಬೇರೆ ಪ್ರಶ್ನೆ ಹಾಕುತ್ತೇನೆ.

ಶ್ರೀ ಎಸ್. ಶಿವಪ್ಪ :— ಅಧಿಕೃತ ಭಾಷೆ ಕನ್ನಡ. ಮಂತ್ರಿಗಳಿಗೆ ಕನ್ನಡ ಬರುವುದಿಲ್ಲವೆಂದರೆ ಏನು ಮಾಡಬೇಕು.

SRI AZEEZ SAIT :— As the Hon Leader of the Opposition stated, Kannada is the official language of this State. But all of us speak impure Anglo-Kannada because Government have not provided facilities to learn good Kannada at all.

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು) :— ಮಾನ್ಯ ಸದಸ್ಯರು ಹೇಳಿದಂತೆ ಕಲ್ಪತರು ಕಾಲೇಜು ವಿದ್ಯಾರ್ಥಿಗಳು ಈ ರೀತಿ ಚಳುವಳಿ ಮಾಡಬೇಕೆಂದು ನಿರ್ಣಯ ಮಾಡಿದರು. ಆ ಚಳುವಳಿ ಮೊದಲು ೩ನೇ ಡಿಸೆಂಬರ್ ೧೯೬೭ ರಲ್ಲಿ ಆಗಬೇಕಾಗಿತ್ತು. ಆದರೆ ೪ನೇ ಡಿಸೆಂಬರ್ ೧೯೬೭ ರಲ್ಲಿ ಅಸಿಸ್ಟೆಂಟ್ ಕಮೀಷನರ್ ಅಧ್ಯಕ್ಷತೆಯಲ್ಲಿ ಒಂದು ಮೀಟಿಂಗ್ ಆಗಿ ಬಹುಶಃ ಈ ದರದಲ್ಲಿ ಹೋಟೆಲುಗಳವರು ಮಾರಬೇಕು ಎಂದು ನಿರ್ಣಯವಾಯಿತು. ಆದಾದ ಮೇಲೆ ಬಹುಶಃ ಮತ್ತೆ ಚಳವಳಿಯಾಗುವುದೆಂಬ ಭಯ ವಿರಲಿಲ್ಲ ಆದರೆ ವಿದ್ಯಾರ್ಥಿಗಳ ನಾಯಕರು ಮೀಟಿಂಗಿನಲ್ಲಿ ತೀರ್ಮಾನವಾಗಿರುವುದನ್ನು ಹೇಳಿದಾಗ ವಿದ್ಯಾರ್ಥಿಗಳು ಕೆಲವರು ಒಪ್ಪಲಿಲ್ಲ. ಅದಕ್ಕೆ ೬ನೆಯ ತಾರೀಖು ಮೊದಲು ಮೆರವಣಿಗೆ ಮಾಡಿದರು. ೭ ಮತ್ತು ೮ನೆಯ ತಾರೀಖು ಹೋಟಲುಗಳನ್ನು ಮುಚ್ಚಿದ್ದರು, ೭, ೮ ಮತ್ತು ೯ನೆಯ ತಾರೀಖುಗಳಲ್ಲಿ ೩ ದಿನ ಏನೂ ಆಗಲಿಲ್ಲ ಆದರೆ ೧೦ನೇ ತಾರೀಖು ಹೋಟೆಲುಗಳನ್ನು ತೆರೆದ ಮೇಲೆ ಮತ್ತೆ ಗಲಾಟೆ ಆಯಿತು. ಆ ದಿವಸ ದೊಡ್ಡ ಪ್ರೊಸೆಷನ್ ಆಗಿ ಟಿಯರ್ ಗ್ಯಾಸ್ ಪ್ರಯೋಗ, ಲಾಠಿಛಾರ್ಜ್ ಮುಂತಾದ್ದು ಆಯಿತು.

ಶ್ರೀ ವಿ. ಎಲ್. ಶಿವಪ್ಪ :— ೧೦ ನೆಯ ತಾರೀಖು ಲೂಟಿಯಾಗುವುದಕ್ಕೆ ಮುಂಚೆ ಇಂಥ ದಿವಸ ಮುಷ್ಕರ ಮಾಡುತ್ತೇವೆಂದು ತಿಳಿಸಿದ್ದರು. ಮುಷ್ಕರ ಮಾಡುವುದು ಮೊದಲು ಗೊತ್ತಿದ್ದರಿಂದ ಹೋಟೆಲುಗಳಿಗೆ ರಕ್ಷಣೆ ಕೊಡಬೇಕಾಗಿತ್ತು. ಅಲ್ಲಿ ಎರಡು ಮೈಲಿಗಳಲ್ಲಿ ೮ ಹೋಟೆಲುಗಳಿವೆ, ಲಿಂಗಾಯಿತರ ಹೋಟೆಲು, ಬ್ರಾಹ್ಮಣರ ಹೋಟೆಲು ಅಲ್ಲಿವೆ. ಕೆಲವರು ದರ ಇಳಿಸಿ ಮತ್ತು ಕೆಲವರು ಇಳಿಸದೆ ಉದ್ರೇಕಕ್ಕೆ ಕಾರಣವಾಗಿ ಲೂಟಿಯಾಗಲು ಅವಕಾಶವಾಯ್ತು. ಈ ಬಗ್ಗೆ ಪೋಲೀಸ್ ವರದಿ ಇದೆ. ಇದು ನಿಜವಲ್ಲವೇ ? ಜಾತಿವಾದದ ಮೇಲೆ ಲೂಟಿಯಾಗಿಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್ ;— ಆ ರೀತಿ ಜಾತಿವಾದದ ಮೇಲೆ ಏನಾದರೂ ನಡೆದಿರುವ ಬಗ್ಗೆ ಇನ್‌ಫರ್ಮೇಷನ್ ಇಲ್ಲ. ಹೆಚ್ಚು ಬೆಲೆ ಕೊಡುವುದಿಲ್ಲವೆಂದು ಹುಡುಗರು ಹೇಳಿದಾಗ ಗಲಾಟೆಯಾಗಿ ತಕ್ಷಣ ಹೋಟೆಲುಗಳನ್ನು ಮುಚ್ಚಿದ್ದರು. ಅದಾದ ನಂತರ ಪ್ರೊಸೆಷನ್ ಮುಂತಾದ್ದು ಆಗಿ ಕೆಲವು ಹೋಟೆಲುಗಳಿಗೆ ಡ್ಯಾಮೇಜ್ ಆಗಿದೆ.

ಶ್ರೀ ಹಂಜಿ ಶಿವಣ್ಣ :— ಹೋಟಲುಗಳಲ್ಲಿ ಬೆಲೆಗಳನ್ನು ಮನಸ್ಸಿಗೆ ಬಂದಂತೆ ಹಾಕುವುದು ಎಲ್ಲ ಕಡೆಯು ಇದೆ. ತಿಪಟೂರಿನಲ್ಲಿಯೂ ಇದೆ. ಆಹಾರ ಧಾನ್ಯಗಳ ಬೆಲೆಯನ್ನು ಸರ್ಕಾರ ನಿಗದಿ ಮಾಡುವಾಗ ಹೋಟೇಲುಗಳಲ್ಲಿ ಇಷ್ಟೇ ದರದಲ್ಲಿ ತಿಂಡಿ ಮಾರಬೇಕು ಎಂದು ವಿಧಿಸಿ, ಹೋಟೆಲುಗಳ ಮುಂದೆ ದರದ ಪಟ್ಟಿಯನ್ನು ಹಾಕಿ ಮಾರಾಟ ಮಾಡಬೇಕೆಂದು ಲೈಸೆನ್ಸ್ ಕೊಡುವಾಗ ಕಂಡೀಷನ್ ಹಾಕುವುದಕ್ಕೆ ವ್ಯವಸ್ಥೆ ಮಾಡುತ್ತಾರೆಯೇ ?

ಶ್ರೀ ವೀರೇಂದ್ರ ಪಾಟೀಲ್ :— ಈ ಹೊತ್ತಿನ ದಿವಸ ನಮ್ಮ ರಾಜ್ಯದಲ್ಲಿರುವ ಕಾನೂನುಗಳ ಪ್ರಕಾರ ಹೋಟೆಲುಗಳವರು ಇಷ್ಟೇ ಚಾರ್ಜ್ ಮಾಡಬೇಕು ಎಂದು ಒತ್ತಾಯ ತರುವುದಕ್ಕೆ ಅವಕಾಶವಿಲ್ಲ.

ಶ್ರೀ ವಿ. ಎಲ್. ಶಿವಪ್ಪ :—ಪರಿಹಾರ ಕೊಡುವ ಬಗ್ಗೆ "ಇಲ್ಲ ಎಂದು ಹೇಳಿದ್ದಾರೆ. ಲೂಟಿಯಾಗಿರುವುದರಿಂದ ಸಂಬಂಧಪಟ್ಟವರು ನಿರ್ಗತಿಕರಾಗಿ ಹೋಗತಕ್ಕ ಪರಿಸ್ಥಿತಿ ಒದಗಿದೆ ಅದರಿಂದ ಅವರಿಗೆ ಪರಿಹಾರ ಕೊಡುವುದಕ್ಕೆ ಯೋಚನೆ ಮಾಡುತ್ತಾರೆಯೇ?

ಶ್ರೀ ವೀರೇಂದ್ರ ಪಾಟೀಲ್:—ಪರಿಹಾರ ಕೋಡುತ್ತೇನೆಂದು ಹೇಳಲಿಕ್ಕೆ ಆಗುವುದಿಲ್ಲ. ಕೆಳಗಿನಿಂದ ರಿಪೋರ್ಟ್ ಯಾವ ರೀತಿ ಬರುತ್ತದೆಯೋ ಅದನ್ನು ನೋಡಿಕೊಂಡು ಮುಂದಿನ ಕ್ರಮತೆಗೆದುಕೊಳ್ಳುತ್ತೇನೆ

BURGLERY AND DACOITY COMMITTED IN RAICHUR

626. Sri M. Nagappa (Raichur) —

Will the Chief Minister be pleased to state —

(*a*) whether it is a fact that the Houses of the District and Sessions Judge, Raichur and Executive Engineer, M.S.E.B., Raichur were burgled and any dacoity was committed in the village Anwar, Taluk Raichur in the year 1969:

(*b*) if so, whether any detection of culprits was made by the Raichur Police and property recovered.

(*c*) if not, the reasons for non-detection of culprits (in all the three cases ?)

Sri Manik Rao Patil (Deputy Minister for Home) [On behalf ofe Sri Vereendra Patil (Chief Minister) —

(*a*) Yes

(*b*) Only the case of dacoity has been detected and the properties valued in all Rs. 480 have been recovered.

(c) There is no clue so far in respect of the burglaries inspite of the best efforts made by the Police to detect them.

ಶ್ರೀ ಎಂ ನಾಗಪ್ಪ .—ಕ್ರೈಮ್ ಡಿಟೆಕ್ಟ್ ಆಗಿ ೪೮೦ ರೂಪಾಯಿವರೆಗಿನ ಮಾಲು ರಿಕವರಿ ಮಾಡಿದ್ದಾರೆಂದು ಉತ್ತರದಲ್ಲಿ ಹೇಳಿದ್ದಾರೆ: ವಾಸ್ತವಿಕವಾಗಿ ಅಲ್ಲಿ ಹೋದಂಥ ಆಸ್ತಿ ಎಷ್ಟು, ಎಷ್ಟು ಜನ ಅಪರಾಧಿಗಳು ಅದರಲ್ಲಿ ತೊಡಗಿದ್ದರು, ಅಪರಾಧಿಗಳು ಸಿಕ್ಕಿದ್ದಾರೆಯೇ ? ಎಲ್ಲ ಅಪರಾಧಿಗಳೂ ಸಿಕ್ಕಿದ್ದರೆ ಉಳಿದ ವಸ್ತುಗಳನ್ನು ಏಕೆ ರಿಕವರಿ ಮಾಡಿಲ್ಲ.

Sri Manik Rao Patil .—In all Rs. 5,561 worth of articles of gold-and silver ornaments, cloth and cash have been lost in this offence. About 15 persons including one Kuripud Thimmiah, have heen arrested on 7th December 1969 and a case has been charge sheeted.

ಶ್ರೀ ಎಂ. ನಾಗಪ್ಪ :—ಉಳಿದ ಮಾಲನ್ನು ಏಕೆ ವಹಿಸಿಕೊಂಡಿಲ್ಲ? ಡಿಸ್ಟ್ರಿಕ್ಟ್ ಜಡ್ಜ್ ಇರುವ ಮನೆಯಲ್ಲಿ ಇದು ಮೂರನೆಯ ಸಲ ಕಳ್ಳತನವಾಗುತ್ತಿರುವುದು ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಮುನಿಸೀಫ್ ಮ್ಯಾಜಿಸ್ಟ್ರೇಟರಾಗಿದ್ದು ನಂದೀಶ್ ಅವರು ಇದ್ದಾಗ ಒಮ್ಮೆ ಕಳ್ಳತನವಾಯಿತು, ಇನ್ನೊಬ್ಬ

.(ಶ್ರೀ ಎಂ. ನಾಗಪ್ಪ)

ಮ್ಯಾಜಿಸ್ಟ್ರೇಟರು ಬಂದಾಗ ಕಳ್ಳತನವಾಯಿತು. ಈಗ ಸೆಷನ್ಸ್ ನ್ಯಾಯಾಧೀಶರು ಬಂದ ನಂತರವೂ ಅದೇ ಮನೆ ಯಲ್ಲಿ ಕಳ್ಳತನವಾಗಿದೆ. ಅಲ್ಲಿ ಕಳ್ಳತನವಾಗಲಾರದಂತೆ ನೋಡಿಕೊಳ್ಳುವುದಕ್ಕೆ ಏನಾದರೂ ಪ್ರಯತ್ನ ಮಾಡುತ್ತಾರೆಯೇ?

SRI MANIK RAO PATIL :—I have stated that the total value involved in this offence is Rs. 5,561. In the investigation the police were able to collect Rs. 480 and about 15 persons have been arrested and a case has been charge sheeted.

SRI M. NAGAPPA:—Iam sorry. What I asked for has not been replied. Either the Deputy Minister is incapatle of answering or he does not know. Let the Chief Minister answer. I have stated that offence has taken place in the District and Sesslon's Judge's residence not once but sevaral times. For that the Minister has not given answer.

SRI MANIK RAO PATIL —According to the report available at present the offence did take place in the residence of the District and Sessions Judge. So far as other offences that the Hon. Member mentioned *i. e*,, about thefts in his prediccssor's time are concerned, I do not have that information.

SRI SHARAN GOWDA INAMDAR .—Is it a fact that because the Judges have ordered for acquittal of several cases booked by the police falsely, as a revenge .the police have avoided proper investigation of these cases

MR. SPEAKER ,—Hon. Member is meaking an allegation against judiciary.

SRI SHARAN GOWDA INAMDAR —I can bring to your notice several cases. In Gulbarga in the residences of Sessions Judge and Munsiff even though burglaries have taken place police are not taking interest.

MR. SPEAEER .—I cannot permit ailegations against judiciary.

ಶ್ರೀ ಎಸ್. ಬಂಗಾರಪ್ಪ :—ಅಪರಾಧಿಯ ಪತ್ತೆಯಾಯಿತೇ ಎನ್ನುವುದಕ್ಕೆ ಉತ್ತರವನ್ನು ಕೊಟ್ಟಿಲ್ಲ. ನ್ಯಾಯಾಧೀಶರು ಇರತಕ್ಕ ಮನೆಗಳಲ್ಲಿ ರಾತ್ರಿ ಕಾಲದಲ್ಲಿ ಪೋಲೀಸರು ಬೀಟು ಹೋಗುವಾಗ ಅವರ ಮನೆ ಗಳಲ್ಲಿ ಇಟ್ಟಿರುವ ಬೀಟ್ ಪುಸ್ತಕದಲ್ಲಿ ಡ್ಯೂಟಿ ಮಾಡಿರುವುದಕ್ಕೆ ರುಜು ಮಾಡಿ ಬರಬೇಕಾಗಿದೆ. ಹೀಗಿದ್ದರೂ ಕೂಡ ಕಳ್ಳತನ, ಕನ್ನ ಹಾಕುವುದು ಇವೆಲ್ಲ ಆಗುತ್ತಿವೆ. ಪೋಲೀಸರು ಮತ್ತು ಕನ್ನ ಹಾಕುವವರು ಸೇರಿ ಇದನ್ನೆಲ್ಲ ಮಾಡುತ್ತಿದ್ದಾರೆ ಎನ್ನುವ ಅನುಮಾನವಿದೆ. ಇದು ನಿಜವೇ ಸ್ವಾಮಿ.

SRI MANIK RAO PATIL,—Inspite of our best efforts we could not detect these cases. Therefore we have submitted B report. Regarding the beat system seems it is prevailing in Raichur and every nigh beat jawans visit the houses of respectable persons particularly

persons like Sessions Judge It is not correct to say that with the connivance of theives and beat jawans, these things have happened.

2-00 P. M.

Sri H. Siddaveerapa:—The question of Sri Sharanagouda has not been correctly understood. His question was, the judge was impartial in deciding the case and he has acquitted the case for want of evidence. Is it because the Judge has acquitted the case for want of evidence, the Police took cudgel and helped burglery to take place and they did not detect the case?

Sri Manik Rao Patil:—It is not our concern whether any body has been convicted or acquitted. Our job is only to investigate the case and file a charge-sheet before the Magistrate. It is for the Magistrate to acquit or convict the persons involved in it. Therefore the Police have nothing to do with the acquittal or conviction.

Sri D. B. Kalmankar:—What is the value of the property stolen in the house of the Session Judge and also in the house of the Excutive Engineer, M. S. E. B ?

Sri Manik Rao Patil:—The property lost in the residence of Session Judge is amounting to Rs. 991 and the property lost in the residence of the Executive Engineer, M. S. E. B., is amounting to Rs. 4,731. These cases are still under investigation.

ಶ್ರೀ ಎಂ. ನಾಗಪ್ಪ:—ಸೆಶನ್ಸ್ ಜಡ್ಜರವರ ಮನೆಯಲ್ಲಿ ಕಳ್ಳತನ ಆಗಿದೆ. ಐರನ್ ಸೇಫ್ ಮನೆಯಿಂದ ತೆಗೆದುಕೊಂಡು ಹೋಗಿದ್ದಾರೆ. ಬಾಗಿಲ ತೆಗೆದು ಐರನ್ ಸೇಫ್ ತೆಗೆದುಕೊಂಡು ಹೋಗಿದ್ದರೂ ಕೂಡ ಸರಿಯಾಗಿ ಇನ್‌ವೆಸ್ಟಿಗೇಷನ್ ಆಗಿಲ್ಲ. ಪೋಲೀಸ್ ಇನ್‌ವೆಸ್ಟಿಗೇಷನ್ ಯಾವ ಮಟ್ಟದಲ್ಲಿ ಇದೆ, ಸರಿಯಾಗಿ ಇನ್‌ವೆಸ್ಟಿಗೇಷನ್ ಮಾಡುತ್ತಿಲ್ಲ ಎಂಬುದು ಇದರಿಂದ ಗೊತ್ತಾಗುವುದಿಲ್ಲವೇ?

Sri Manik Rao Patil:—All the details are not available with me. Any how the case is still under investigation.

Sri A. R. Badrinarayan:—Since the residence of the District Judge is vulnerable for theft, what steps the Government have taken to prevent recurring of theft?

Sri Manik Rao Patil:—Regular Beat arrangement has been made so that further offences could be avoided.

HIGH SCHOOLS UNDER THE MANAGEMENT OF T. D. B., HOLENARASIPUR

672. SRI H. D. DEVE GOWDA (Holenarasipur):—

Will the Minister for Development be pleased to state:—

(*a*) the number of High Schools which are running under the management of the T. D. B., Holenarasipur;

(*b*) whether the T. D. B., has constructed any pucca building as per the direction of the Education Department for three High Schools;

(*c*) whether it has come to the notice of Government that the T. D. B., Holenarasipur, has collected public contribution before starting these High Schools;

(*d*) if so, the extent of amount so collected for each High Schools;

(*e*) whether any steps taken by the T. D. B., to construct pucca buildings?

SRI B. L. GOWDA (Deputy Minister for Co-operation):—

(*a*) 3 (Three)

(*b*) No.

(*c*) Yes.

(*d*) (i) Rs. 10,000 for Gubbi High School.

(ii) No amount is collected for other Schools.

(*e*) The T. D. B., Holenarasipur has resolved to pay its contribution of 25 per cent of cost of the building for all the three High Schools on Condition that 25 per cent should come from the public.

ಶ್ರೀ ಎಚ್. ಡಿ. ದೇವೆಗೌಡ :—ಹೊಳೆನರಸೀಪುರ ತಾಲ್ಲೂಕ್ ಡೆವಲಪ್‌ಮೆಂಟ್ ಬೋರ್ಡ್ನ ಹೈಸ್ಕೂಲು ಪ್ರಾರಂಭಿಸುವುದಕ್ಕೆ ಮುಂಚೆ ಫಂಡ್ ಕಲೆಕ್ಟ್ ಮಾಡಿದ್ದಾರೆ, ಆದುದರಿಂದ ಸರಕಾರ ಕೊಡಬೇಕಾದ ಹಣ ಒದಗಿಸಿ ಪಕ್ಕಾ ಬಿಲ್ಡಿಂಗ್ ಕಟ್ಟಿಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ?

†ಶ್ರೀ ಬಿ.ಎಲ್. ಗೌಡ.—ಗ್ರಾಂಟ್ ಇನ್ ಏಡ್ ಕೋಡ್ ಪ್ರಕಾರ ಟಿಡಿಬಿ ಯವರು ೫೦ ಪರ್ಸೆಂಟ್ ಹಣ ಪಾವತಿ ಮಾಡಿದ ಮೇಲೆ ನಾವು ಕೊಡುತ್ತೇವೆ. ಅವರು ತಮ್ಮ ಭಾಗ ಇನ್ನೂ ಕೊಟ್ಟಿಲ್ಲ. ೨೫ ಪರ್ಸೆಂಟ್ ಕೋಡುತ್ತೇವೆ ಎಂದು ಹೇಳಿದ್ದಾರೆ. ಹಾಕಿ ಹಣ ಜಮಾಯಿಸಿ ಕೊಟ್ಟರೆ ೫೦ ಪರ್ಸೆಂಟ್ ಗ್ರಾಂಟ್ ಇನ್ ಏಡ್ ಕೋಡ್ ಪ್ರಕಾರ ವಿದ್ಯಾ ಇಲಾಖೆಯಿಂದ ಕೊಡಿಸುತ್ತೇನೆ.

MR SPEAKER:—Question Hour is over. Now short notice question.

Short Notice Question and Answer

FIRE ACCIDENTS IN LINGAPUR VILLAGE OF ANEKAL TALUK

16. Sri R. Muniswamaiah (Anekal).—

Will the Chief Minister be pleased to state:—

(*a*) whether itis a fact that on the night of 28th February 1970 houses and hay stacks in Lingapur village of Kasaba Hobli, Anekal taluk were gutted;

(*b*) whether it is a fact that Fire brigade from Bangalore came and extinguished the fire;

(*c*) the number of houses and the hay stacks gutted;

(*d*) whether it is a fact that the villagers from Haragadde went to Lingapur and set the fire to houses, etc. ;

(*e*) the names of the miscreants who set the fire;

(*f*) the names of persons who suffered lose;

(*g*) the reasons for the Sub-Inspector of police, Anekal in not arresting the miscreants so for;

(*h*) the relief granted to the poor people who suffered and we e put to loss and further action proposed to be taken in this behalf?

Sri Manik Rao Patil (Deputy Minister for Home).—

Sri Veerendra Patil (Chief Minister).—

(*a*) Yes.

(*b*) Yes.

(*c*) Two hay stacks and the thatched roof of hut.

(*d*) No.

(*e*) Does not arise in view of reply to clause (*d*).

(*f*) Sriyuths : Timmarayappa and Dodda Muniyappa.

(*g*) Does not arise in view of reply to (*d*).

(*h*) Financial relief of Rs. 150 has been granted to Sriyuths: Thimmarayappa and Dodda Muniyappa respectively.

ಶ್ರೀ ಆರ್. ಮುನಿಸ್ವಾಮಯ್ಯ :—ಲಿಂಗಾಪುರದಲ್ಲಿ ಮನೆಗಳು ಮೆದೆಗಳು ಸುಟ್ಟು ಹೋಗಿರುವುದಕ್ಕೆ ಕಾರಣ ಏನು ಸ್ವಾಮಿ ?

† Sri Manik Rao Patil.:—It is only accidentaly fire.

ಶ್ರೀ ಆರ್. ಮುನಿಸ್ವಾಮಯ್ಯ :—ಪೋಲೀಸ ಅಧಿಕಾರಿಗಳು ಆ ಹಳ್ಳಿಗೆ ವಿಜಿಟ್ ಕೊಟ್ಟಿದ್ದಾರೇನು ಸ್ವಾಮಿ?

Sri Manik Rao Patil: —Yes. They have paid a visit.

ಶ್ರೀ ಆರ್. ಮುನಿಸ್ವಾಮಯ್ಯ :—ಹಾರಗಡೆ ಹಳ್ಳಿಯಲ್ಲಿ ಜನರ ಹೊಡೆದಾಟ ನಡೆಯಲಿಲ್ಲವೇ ಸ್ವಾಮಿ ?

Sri Manik Rao Patil :— No doubt on 28th February 1970 a complaint was lodged in the Police Station by Puttappa to the effect that a person from Haragada village has assaulted him by forming an unlawfull assembly. In this regard a case has been registered under 14 , 144 (3) of I. P. C.

Sri Muniswamaiah.—Is it not a fact that the person who assaulted is from the Lingapur Village

Sri Manik Rao Patil :— A person from Haragada village has assualted.

Sri R. Muniswamaiah —May I know where exactly the assault took place

Sri Manik Rao Patil .— I am sorry that I cannot locate the exact place where the assault took place. Any way a case been registered.

Starred Questions and Answers

MINOR IRRIGATION SCHEMES IN VILLAGES OF BELGAUM TALUK

(323) SRI P. B. NANDIHALLI (Uchagaon).—

Will the Minister of State for Minor Irrigation be pleased to state :—

(*a*) whether Government is aware that there is a great necessity to take up irrigation schemes in the following villages of Belgaum Taluk:

(1) Bekinkere (2) Atiwad (3) Karle (4) Bhaddarwadi (5) Ranakundaye (6) Kinaye (Tank) (7) Basu te (8) Khadarwadi (9) KangraliBudruk(10) Mahalenahatti (11) Ningennatti (12) Bodakenhatti and Kuri hal (13) Kudremani;

(*b*) if so, the action Government propose to take in this behalf?

SRI A. J. DODDAMETI (MINISTER OF STATE FOR MINOR IRRIGATION).

(*a*) Government is aware that representations have been made for taking up of these works.

(*b*) (1) Bekinkere	...	Under investigation.
(2) Atiwad	...	Yet to be investigated.
(3) Karle	...	Not feasible.
(4) Baddarwadi	...	Plans and estimates are being prepared.
(5) Ranakandaya	...	do
(6) Kinaya	...	Work completed.
(7) Basurti	...	Under investigation.
(8) Khadarwadi	...	do
(9) Kangral Budruk	...	do.
(10) Mahalenahatti	...	Yet to be investigated.
(11) Ningenahatti	...	do
(12) Bodakenahatti and Kurihal	...	do
(13) Kudremani	...	do

ARRANGEMENT TO FINANCE THE CULTIVATORS

(367) Sri I. Somasekarappa (Hosanagar).—

Will the Minister for Development be pleased to state :—

(*a*) the out come of the recent talks the Chief Minister had with the Presidents of the Central Co-op. Banks and the representatives of the Nationalised Banks regarding agricultural finance;

(*b*) whether the question of financing the 7 Central Banks figured during the talks;

(*c*) whether any arrangements heve been made to finance the cultivators in the area of operation of the 7 Central Banks;

(*d*) if so, the arrangements made ?

Sri P. M. Nadgowda (Minister for Development).—

(*a*) It was decided that the financial needs of all the members of some of the Primary Agricultural Co-operative Credit Societies in Bangalore, Kolar, Tumkur, Chitradurga, Gulbarga, Hassan and Mysore Districts be met by the Nationalised and the Commercial Banks.

(*b*) No.

(*c*) Arrangements are being made.

(*d*) Arrangements are not yet finalised.

LAND MORTGAGE BANK AT KHANAPUR

538. SRI N. S. SIRDESAI (Khanapur).—

Will the Minister for Development be pleased to state:—

(a) the amount of loan disbursed to the loanees every year since the establishment of the Land Mortgage Bank at Khanapur;

(b) the number of Kannada speaking and Marathi speaking applicants who have been advanced loan amounts ?

SRI P. M. NADGOUDA (Minister for Development) —

(a)

Year	*Nos.*	*Amount* Rs.
1968-69	48	68,150
1969-70 (from 1-7-69 to 31-12-1969)	61	82,375
Total...	109	1,50,525

(b)—

Language	No. of applications sanctioned and disbursed
1. Kannada	97
2. Marathi	12
	109

DRY-*CUM*-WET SCHEME UNDER TUNGABHADRA PROJECT IN BELLARY TALUK

58 . SRI ALLUM KARIBASAPPA (Kurugod).—

Will the Chief Minister be pleased to state :—

(a) the object of the then Madras Government for introducing the dry-*cum*-wet scheme under the Tungabhadra Project particularly in Bellary Taluk;

(b) whether about 20,000 acres of land was included in the original scheme of the Tungabhadra Project of High Level Canal East of Hagari River under the composite Madras State comprising of Rupanagudi Yalpe, Kaggal, etc., about 15 villages;

(*c*) if so, the reasons for not taking up this area for irrigation purposes by the Government;

(*d*) whether it is a fact that the people of this area (East of Hagari river) represented to the Chief Minister, when he visited Chellagurki Muth in Bellary Taluk about a year ago;

(*e*) whether Government has got a descretionary right to delete any area without the consent of the ryots of that area which was included in the original scheme by the then Madras Government?

Sri Veerendra Patil (Chief Minister).—

(*a*) This being an area of scanty rainfall, where the dry crops have been often failing due to want of water at the time of maturity of crops assistance of an irrigation project to supply water during the period when water was required for the maturing of the crop, was inevitably required, hence the project was conceived largely for that purpose. The other aspect is that instead of concentrating irrigation benefits in a smaller area by giving heavy irrigation facilities, the introduction of dry crops has enabled to spread the irrigation benefits to a larger area, thereby larger number of people get the irrigation benefits. The soils are also suited for the dry crops except in low lying areas.

(*b*) About 20,000 acres have been included in the H.L.C. Scheme of Tungabhadra Project.

(*c*) The proposal of constructing an Aqueduct across Hagari River for taking the water to feed the lands of the villages is found to be very uneconomical, however, final decision has not yet been taken on this issue.

(*d*) Representations have been received requesting for providing irrigation benefits to that area.

(*e*) Does not arise in view of reply to clause (*c*) above.

CONSTITUTION OF TOWN MUNICIPALITY FOR DANDELI

692. Sri B. P. Kadam (Karwar).—

Will the Minister of State for Municipal Administration be pleased to state:—

(*a*) since how long the Notified Area Committee, Dandeli is in existence;

(*b*) whether it is a fact that its members are nominated; if so who are they;

(Sri B. P. KADAM)

(c) whether it is fact the people of Dandeli are agitating for the consititution of a full-fledged town municipality and whether innumerable representations in this connection have been sent to Government;

(d) if so, the decision taken by Government on these representations?

SRI B. M. PATIL (Minister of State for Municipal Administration)

(a) Since 28th January, 1966.

(b) Yes:

1	The Deputy Commissioner, North Kanara District	Chairman
2	Sri C. L. Maheswari	Member
3	Sri K. S. Lauly	Member
4	Sri Mahammed Akbar	Member
5	Sri G. D. Kambadkone	Member

(c) No formal representation is made to Government in this behalf though a few people started distributing printed pamphlets addressed to the public for the constitution of Town Municipality.

(d) Does not arise in view of reply to clause (c).

FINANCIAL POSITION OF MANGALORE MUNICIPALITY

708. SRI B. M. IDINABBA (Mangalore)·—

Will the Minister of State for Municipal Administration be pleased to state:—

(a) whether the Mangalore Town Municipality is now running under profit or loss, and whether it has incurred loans;

whether due to non-levy of octroi the profit of the Municipality is affected,

(c) whether Government have made any suggestions to them to levy octroi?

SRI B. M. PATIL (Minister of State for Municipal Administration.

(a) The Municipality is neither at profit nor at loss, but it has incurred loans.

(b) No.

(c) There is no need to suggest like that.

RURAL ELECTRIFICATION IN SHAHAPUR TALUK

722. Sri K. R. Nadgouda (Yadgir).—

Will the Chief Minister be pleased to state :—

(a) whether it has come to the notice of the Government that the Rural Electrification is being done only in half of Shahapur taluk and the other half is completely neglected ;

(b) whether there is any representation from the people of Wadagera village, Shahapur Taluka for electrification of their villages and whether any assurance was given to them by the Chief Minister in 1968 ;

(c) whether the Government have a proposal before them to take up electrification of Wadagera village ?

Sri Veerendra Patil (Chief Minister).—

(a) No.

(b) Representations have been received by the Mysore State Electricity Board. An assurance was also given for favourable consideration of the request for electrification of the Village. Accordingly, he village is included in the current year's progamme of rural electrification.

(c) The matter is being pursued by the Mysore State Electricity Board.

ADJOURNMENT MOTION RE: POLICE FIRING AT SHIMOGA ON 31st MARCH 1970

Leave to move the motion (Grant of)

Mr. Speaker.—I have received nine Adjournment motions regarding the incidents said to have occurred at Shimoga during the last 2 to 3 days. As all the motions pertain to the same subject, I have decided to give consent to one of nine motions. Since the motion of Hon. Member Sri S. Bangarappa is the first in the order, of receipt as per Rule 54 of the Rules of Procedure, I call upon Sri Bangarappa to rise in his place and ask for leave to move the adjournment of the Assembly.

Sri S. Bangarappa (Sorab) : I beg leave of the House to move the adjournment of the Assembly.

Sri N. CHIKKE GOWDA.—Sir, just now the Hon. Minister laid the Annual Financial Statement on the Table of the House. But we have not yet received copies of the same.

MR. SPEAKER.—The Hon. Minister has laid it on the Table of the House. That Statement has nothing to do with the Bill that is now being sought to be moved for consideration. The Hon. Minister may move the consideration motion.

MYSORE ELECTRICITY (TAXATION) CONSUMPTION (AMENDMENT) BILL 1970

Motion to Consider

Sri K. PUTTASWAMY.(Minister for Parliamentary Affairs): Sir, As per your direction, I would like to move the motion once again. I beg to move.

"That the Mysore Electricity (Taxation on Consumption) Amendment) Bill, 1970, be taken into consideration."

MR. SPEAKER.—Motion moved.

"That the Mysore Electricity (Taxation) on Consumption) (Amendment) Bill, 1970, be taken into consideration.

There are amendments proposed by Hon, Members Sri Shamanna and Sivappa they may also be moved.

Sri T. R. SHAMANNA(Fort):-Sir, I move the following Amendment.

"That the Mysore Electricity (Taxation on Consumption) (Amendment) Bill, 1969 be circulated for eliciting public opinion by one months."

MR. SPEAKER.— Amendent moved.

"That the Mysore Electricity (Taxation on Cosumption) (Amendment) Bill, 1970 be circulated for eliciting public opinion by one month."

Sri S. SIVAPPA.—Sir, I beg to move.

"That the Mysore Electricity (Taxation on Consumption) (Amendemnt) Bill 1970 be circulated for eliciting public opinion within 90 days."

Mr. Speaker.—Amendment moved.

"That the Mysore Electricity (Taxation on Consumption) (Amendent) Bill, 1970 be circulated for eliciting public opinion on within 90 days."

All the three months are before the House for discussion.

(*Mr. Deputy Speaker in the Chair*)

† Sri K. Puttaswamy :— As you rightly observed, the Bill is very simple, in the sense that it is very short. Sir, the amendment seeks to amend Section 3 of the Mysore Electricity Taxation on Consumption Act, 1959. As the House is aware, under Section 3 of the Act, the tax leviable on every unit of electrical energy consumed should not exceed 3 paise. Sir, under this provision Government have issued a notification levying a tax on energy on several categories of consumers. Sir, the present amendment is to substitute six paise in place of three paise. If this is agreed to by the Hon. Home, Government will get power to levy a tax on every unit of electrical energy........

Sri S. Sivappa:— On a point of order, Sir. The present Bill is with regard to taxation of electricity energy and the concerned port-folio Minister is present in the House. But the Bill is being moved by the Minister for Parliamentary Affairs.

Mr. Deputy Speaker:— The Minister for Parliamentary Affairs has already moved the motion. He is only explaining the provisions of the Bill.

Sri K. Puttaswamy :— If this amendment is approved by this Hon'ble House, Government gets the power to levy tax not exceeding six paise on every unit of electrical energy, consumed.

Sir, a question was raised and a pertinent question was raised by the Hon. Member Sri Siddaveerappa about the realisation of the tax if the present amendment is agreed to. Sir, as I have already said, on the basis of the present levy of 3 paise, we are now realising Rs. 3,33,36,000. I have also said that the Government have not levied 3 paise on every category of consumer, on certain categories 3 paise is levied, on certain other categories one paise is levied and on some industries, 5 paise is levied. It varies from category to category. If the Government increases the tax by 50 per cent under this Bill, Government is likely to realise Rs. 4,98,18,000.

Sri L Srikantiah:— If at three crores you get a certain income, at double the taxation, it must give you double that, namely 6 crores and odd.

SRI K. PUTTASWAMY:— Suppose Government increases the tax by 50 per cent, we are going to realise Rs. 4,98,18,000, which means 1.65 crores extra At present Government has no intention of levying maximum tax. Only it empowers Government to levy tax not exceeding 6 paise. Government will have to consider separately......

SRI L. SRIKANTIAH:— What is the proportionate increase in each item?

SRI K. PUTTASWAMY:— Sir, I think it is much better I give you categories of consumers who are paying 3 paise tax:

Domestic lighting, fan
domestic power
commercial lighting, fans
commercial power
L. T. industries.

These are cases where the Government is levying 3 paise for every unit of electrical energy.

High tension industries	1.5 paise
Street lighting	1.00 paise
I. P. sets	1.00 paise
water works light	3 paise
water works H. T.	1.5 paise
MISL	.5 paise

Kolar Gold Mining Undertaking-no-tax-This is the tax being levied on every category of electrical energy consumed. If this is increased by 50 per cent, Government is going to realise Rs. 1,65,000 more. If this is increased by hundred per cent, they will realise Rs. 333 lakhs.

SRI L. SRIKANTAIAH.— I would like to have the information thi way. You have given the rate for each item After the increase in rate the maximum would be 6 paise. We would like to know industry-wise or sectorwise by how much the Government intented to increase, what is the proportionate income and what is the actual return ?

4-00 P. M.

SRI K. PUTTASWAMY.—I was stating that the present Act empowers Government to levy a tax not exceeding 3 paise. If the Bill is agreed to by this House, it empowers Government to levy a tax not exceeding 6 paise and so it is not possible to calculate and tell the House how much we are going to realise.

SRI S. SIVAPPA.— So it is a blank cheque.

SRI K. PUTTASWAMY.— It is not a blank cheque. I gave information about the present realisation from each category of

consumers Suppose it is increased by 50%, we are going to get Rs. 165 lakhs.

Sri S. Sivappa.— You have not decided by how much it has to be increased.

Sri K. Puttaswamy.— That is a thing which will have to be done after knowing the opinion of the House.

Sri S. Sivappa.— Sir, I request you not to permit the Minister to proceed with the consideration of this Bill because the Government are not clear in their own minds as to what is the percentage of increase in the tax they want to take. They want to take blank cheque from this House. They want to mislead this House. They are not in a position to give a clear picture as to by how much they are going to increase and what is the amount they are going to realise. They only say that if this is done we are likely to get this. We do not want ifs' and 'buts', we want accurate figure as to what is the percentage of tax increase, what is the figure they want to realise, etc. We are not prepared to give them a blank cheque. From that point of view this Bill is not properly drafted and I request you to direct the Hon. Minister to take back this Bill and bring up a fresh Bill giving all the details.

Sri P Venkatagiriyappa.— There is no financial memorandum attached to this Bill.

Sri L. Srikantaiah.— We want certain clarifications. The Minister said that if we agree to the proposed increase then it will be 6 paise. But he has given a figure to the effect that we are getting Rs. 165 lakhs, but he has not made clear what is the proportionate increase on each item and on each sector. He simply assumes that the increase is by 50%. On what basis did he arrive at this figure of Rs. 165 lakhs? What is the proportionate increase on each item? We want this information.

Sri B. B. Sayanak.— May I know why the Government has not supplied copies of this statement to us?

Sri K. Puttaswamy.— I am prepared to give whatever information Hon. Members want. I can also give the break-up of the tax collection that the Government are now getting :-

	Rs. (in lakhs)
Domestic lighting and fans	47.7
Domestic power	15
Commercial lighting and fans	15.6

(Sri K. PUTTASWAMY)

Commercial power	...	...	7.5
L. T. Industries	...	...	55.42
H. T. Industries	...	...	108.99
Street lighting	...	...	4.6
I. P. Sets	...	...	17.6
Water Works H. T.	...	...	4.5
Water Works L. T.	...	...	2.25
M. I. S. L.	...	...	.75
Kolar Gold Fields	...	...	Nil
Sandur Manganese Ore Co.	...	...	2.125
Indian Aluminium Co., Belgaum	...	...	3.72

As far as the tax that we are likely to realise is concerned, it all depends upon at what rate we are going to levy. The Bill asks for power to levy the tax up to 6%. Now the Legislature has given power to Government to tax up to 3%, but in all cases we have not levied at the rate of 3% which is the maximum. In certain cases the Government have levied at 1 paisa, 1.5 paise, and .25 paisa. Therefore, it is not possible to say what exactly is the amount that Government is going to get during 1970-71; it all depends upon the notification that the Government is going to issue.

SRI L. SRIKANTAIAH.— You have given the figures of Rs. 4 crores and Rs. 165 lakhs. What is the relation between the two?

SRI K. PUTTASWAMY.— If Government were to increase the tax by 50% they would get Rs. 4,98,18,000.

SRI L. SRIKANTAIAH.— That is by increasing the existing taxation by 50%.

SRI K. PUTTASWAMY.— Yes, but that depends upon the rate that we are going to notify. I would like to know the views of this House. When the Bill is discussed, I am sure, Hon. Members will give expression to their opinion regarding the reasonable tax for each category of consumers. Government will take note of it and will then issue a notification levying the tax. In a tax of this kind it is not possible to levy at a uniform rate on all categories of consumers.

SRI L. SRIKANTAIAH.— It cannot be exactly Rs. 165 lakhs. Government stated in the beginning that at present the maximum rate is 3 paise and that has not been charged on all items in all categories and that the tax is charged at 1 paisa and .5 paisa etc.

Sri K. Puttaswamy.— As far as the tax that the Government are going to levy under the provisions of this Bill, is concerned, it all depends upon the opion that is going to be expressed in this House. I can assure this House that Government will take note of the opinion expressed in the House and then issue the notification. However, I want to bring to the notice of this House only one factor that from only one item, namely, High Tension Industries, we are getting Rs. 108.99 lakhs ; nearly one-third of the tax is being realised from the industries which are taking power from High Tension.

Sri L. Srikantaiah.— K.G.F. is a Central Undertaking. Why are you not charging this tax to K.G.F. ? What is the special preference for the Central Undertaking ?

Sri K. Puttaswamy.—I will explain why no tax is levied on that. Hon. Members know that K.G.F. Undertaking is not a very profitable concern. Government are continuing it becase they want to mine the gold from this area, otherwise, it is going to result in unemployment.

Sri L. Srikataiah.— Would the Government give the same concession to all industries which are undergoing a loss ?

Sri K. Puttaswamy.— That is a point on which I would like to have the views of this House. With these observations, I request the Hon. House to kindly take up this Bill for consideration.

Mr. Deputy Speaker.— The House will now adjourn for half an hour.

The House rose at Ten Minutes past Four of the Clock and reassembled at Five of the Clock.

[Mr. Deputy Speaker in the Chair]

ADJOURNMENT MOTION. REGARDING POLICE FIRING AT SHIMOGA

Dated 31st March 1970

Mr. Deputy Speker :—Now we shall take up tte adjournment motion. Hon Member Sri S. Bangarappa to motion.

Sri S. Bangarappa (Sorab) · Sri, I beg to move the move.

"That this House do now stand adjourned for the purposes of discussing a matter of urgent public importance, viz., the situation arising out of firing in Shimoga town that took place on 31st March 1970.

MR. DEPUTY SPEAKER :—Motion moved.

"That this House do now stand adjourned for the purposes of discussing a matter of urgent public importance, viz., the situation arising out of firing in Shimoga town that took place on 31st March 1970"

† ಶ್ರೀ ಎಸ್. ಬಂಗಾರಪ್ಪ :—ಸ್ವಾಮಿ, ಅಧ್ಯಕ್ಷರೇ, ಈ ನಿರ್ಣಯವನ್ನು ನಾನು ಮಂಡಿಸುವುದಕ್ಕೆ ಹಲವಾರು ಕಾರಣಗಳು ಇವೆ. ಶಿವಮೊಗ್ಗ ನಗರ ಇರುವುದು ಮಲನಾಡು ಪ್ರದೇಶದಲ್ಲಿ. ಶಿವಮೊಗ್ಗ ಜಿಲ್ಲೆ ಸಂಪೂರ್ಣವಾಗಿ ಮಲನಾಡು ಪ್ರದೇಶ. ಅಲ್ಲಿ ಜನಗಳು ಯಾವ ಗಲಾಟೆಯಾಗಲಿ ಶಾಂತಿಗೆ ಭಂಗ ತರತಕ್ಕ ಕೆಲಸಗಳನ್ನಾಗಲಿ ಅಥವಾ ಸರಕಾರದ ಆದೇಶಗಳನ್ನು ಅದರಲ್ಲೂ ರಕ್ಷಣೆ ಇಲಾಖೆಗೆ ಸಂಬಂಧಪಟ್ಟ ಆದೇಶಗಳನ್ನು ವಿರೋಧಮಾಡಿ ಜೀವನವನ್ನು ನಡೆಸತಕ್ಕಂಥವರಲ್ಲ, ಅವರು ಯಾವತ್ತಿಗೂ ಶಾಂತಿಯನ್ನು ಪರಿಪಾಲನೆ ಮಾಡಿಕೊಂಡು ಹೋಗತಕ್ಕ ಜನ, ಶಿಸ್ತಿನ ಜನ. ಆದರೆ ಅವರಿಗೆ ಒಂದು ಮಾತ್ರ ಆಜನ್ಮಸಿದ್ಧ ವಾದಹಕ್ಕು ಬಂದಿದೆ. ನ್ಯಾಯ ಬದ್ಧವಾದ ಬೇಡಿಕೆಗಳನ್ನು ಇಡೇರಿಸಿಕೊಳ್ಳುವಾಗ ಅವರ ಹಕ್ಕಿಗೇನಾದರೂ ಕೊಂಚ ಅಡ್ಡಿ ಅಡಚಣೆಗಳು ಬಂದಾಗ ಮಾತ್ರ ಅವರು ಎದ್ದು ನಿಲ್ಲತಕ್ಕ ಜನ ಶಿವಮೊಗ್ಗ ನಗರದಲ್ಲಿ ನನಗೆ ಗೊತ್ತಿರುವಹಾಗ ಕಳೆದ ೨೦-೨೫ ವರ್ಷಗಳಿಂದ ಯಾವಾಗಲೂ ಒಂದು ಫೈರಿಂಗ ಕೂಡ ನಡೆದಿರಲಿಲ್ಲ, ರಕ್ಷಣಾ ಇಲಾಖೆ ಯವರು ಗುಂಡು ಹಾರಿಸುವುದು ರಕ್ಷಣಾ ಇಲಾಖೆಯವರು ಬೆತ್ತವನ್ನು ಪ್ರಯೋಗ ಮಾಡಿ ಜನಗಳಿಗೆ ತೊಂದರೆ ಕೊಡುವುದು ಸಾಮಾನ್ಯವಾಗಿ ಯಾವಾಗಲೂ ನಡೆದಿರಲಿಲ್ಲ. ಶಿವಮೊಗ್ಗ ಜನ ಅಷ್ಟೊಂದು ಶಾಂತಿ ಪ್ರಿಯ ಜೀವನ ಮಾಡತಕ್ಕ ಜನ ಆಗಿದ್ದಾರೆ. ಸ್ವಾಮಿ, ಅಧ್ಯಕ್ಷರೇ, ಸರಕಾರಕ್ಕೆ ಸೇರಿರತಕ್ಕ ಕೆಲವು ಜನ ಅಧಿಕಾರಿಗಳು ಕಾನೂನನ್ನು ದುರುಪಯೋಗ ಮಾಡಿಕೊಳ್ಳುವುದಕ್ಕೆ ಪ್ರಯತ್ನಿಸಿದಾಗ ಜನ ಕೆಲವುಸಾರಿ ಎದ್ದು ನಿಲ್ಲುತ್ತಾರೆ ಪ್ರಜೆಗಳ ಹಕ್ಕುಗಳು ರಕ್ಷಣೆ ವಿಚಾರದಲ್ಲಿ ಸರಕಾರದ ಅಧಿಕಾರಿಗಳಲ್ಲಿ ಎರಡು ವಿಧವಾದಜನಗಳು ಇದ್ದಾರೆ, ಕೆಲವರು ಅಧಿಕಾರಕ್ಕೆ ಅನುಗುಣವಾಗಿ ತಮ್ಮ ವರ್ತನೆಯನ್ನು ಅಳವಡಿಸಿಕೊಂಡು ಹೋಗತಕ್ಕ ಜನ ಜನಕ್ಕೆ ತೊಂದರೆ ಬಂದರೆ ಅಥವಾ ಸಂಕಟಪಡತಕ್ಕ ಸಂದರ್ಭ ಬಂದರೆ ಆ ತೊಂದರೆ ತಪ್ಪಿಸುವುದಕ್ಕೆ ಪ್ರಯತ್ನ ಮಾಡತಕ್ಕ ಜನರು ಇದ್ದಾರೆ. ಇನ್ನು ಕೆಲವರು ಪ್ರಜಾಸತ್ತೆ ವಿಷಯ ಮರೆತು ಪ್ರಜಾತಂತ್ರ ಆಡಳಿತದ ವಿಷಯ ಮರೆತು ನಾವೇ ಬಲಾಢ್ಯರು ಸಾಕಷ್ಟು ನಮಗೆ ರಕ್ಷಣೆ ಅಧಿಕಾರ ಇದೆ, ಏನು ಮಾಡಿದರೂ ಈ ದೇಶದಲ್ಲಿ ನಮ್ಮ ಕೆಲಸವನ್ನು ಗೆದ್ದುಕೊಳ್ಳಬಲ್ಲೆವು, ನಮ್ಮ ಚಲವನ್ನು ತೀರಿಸಿಕೊಳ್ಳಬಲ್ಲೆವು, ಹಟಸಾಧನೆ ಮಾಡಬಲ್ಲವು ಎನ್ನುವವರು ಇದ್ದಾರೆ. ಶಿವಮೊಗ್ಗ ಜಿಲ್ಲೆಯಲ್ಲಿ ಎರಡು ಮುಖ್ಯ ಅಧಿಕಾರಿಗಳು ಇದ್ದಾರೆ ಅವರ ಹೆಸರನ್ನು ಹೇಳಲೇಬೇಕು, ಶ್ರೀಮಾನ್ ಆದಿರಾಜಯ್ಯನವರು ಜಿಲ್ಲಾಧಿಕಾರಿ ಮುಖ್ಯಸ್ಥರು. ಶ್ರೀಮಾನ್ ಚೋಪ್ರಾರವರು ಅವರು ಐ. ಪಿ. ಎಸ್. ಪಂಜಾಬನವರು, ಈಗ ಪೋಲಿಸ್ ಸೂಪರಿಂಟೆಂಡೆಟ್ ಆಗಿ ಶಿವಮೊಗ್ಗ ಜಿಲ್ಲೆಯಲ್ಲಿ ಇದ್ದಾರೆ. ಪೋಲೀಸ್ ಸೂಪರಿಂಟೆಂಡೆಂಟ ಬಗ್ಗೆ ಹೆಚ್ಚಿನ ಮಾಹಿತಿ ನನಗೆ ಗೊತ್ತಿಲ್ಲ, ಒಂದು ಮಾತನ್ನು ಮಾತ್ರ ಅವರ ಬಗ್ಗೆ ಹೇಳಿ ಮುಗಿಸುವುದಕ್ಕೆ ಇಷ್ಟಪಡುತ್ತೀನೆ. ಶಿವಮೊಗ್ಗ ಜಿಲ್ಲೆಯಲ್ಲಿ ಬೇರೆ ಕಡೆ ನಡದಹಾಗೆ ಅನೇಕ ಕೊಲೆಗಳು ನಡೆದಿವೆ. ಈ ವಿಷಯದಲ್ಲಿ ಶಿವಮೊಗ ಜಿಲ್ಲೆಯಲ್ಲಿ ಇರತಕ್ಕ ಹಲವಾರು ಜನ ಶಾಸನ ಸಭಾ ಸದಸ್ಯರು, ವಿಧಾನಪರಿಷತ್ತಿನ ಸದಸ್ಯರು ಸರಕಾರಕ್ಕೆ ಬೇಕಾದಷ್ಟು ಮನವಿ ಪತ್ರ ಅರ್ಪಿಸಿದ್ದಾರೆ. ಪೋಲೀಸ್ ಸೂಪರಿಂಟೆಂಡ ಅವರಿಗೆ ನಾನೇ ಖುದ್ದಾಗಿ ತಿಳಿಸಿದ್ದೀನೆ. ಇಂತಹ ಕೊಲೆ ಮಾಡಿರತಕ್ಕ ಅಪರಾಧಿಗಳನ್ನು ಪತ್ತೆ ಹಚ್ಚಲು ಯಾತಕ್ಕೆ ನಿಮ್ಮ ಸಿಬ್ಬಂಧಿಯವರನ್ನು ಕಳುಹಿಸಲಿಲ್ಲ ಎಂದು ನಾನೇ ಹೋಗಿ ಅವರನ್ನು ಹೇಳಿದ್ದೀನೆ. ಅದಕ್ಕೆ ಅವರು ನಾನೇ ಕೆಲವು ಕೇಸುಗಳನ್ನು ತೆಗೆದುಕೊಳ್ಳುತ್ತೀನೆ ಎಂದು ಹೇಳಿದರು. ಅವರು ಯಾವುದನ್ನೂ ಮಾಡದ ಪೋಬಾಯ ಆಗಿದ್ದಾರೆ. ಇಂತಹವರು ರಕ್ಷಣಾ ಇಲಾಖೆಯ ಮುಖ್ಯಸ್ಥರಾಗಿದ್ದಾರೆ. ಜಿಲ್ಲಾಧಿಕಾರಿ ಆದಿರಾಜಯ್ಯನವರ ವಿಷಯ ಸಾಕಷ್ಟು ಸದಸನದ ಸದಸ್ಯರಿಗೆ ತಿಳಿದಿರಬಹುದು. ಇವರು ಬೆಂಗಳೂರು ಡೈರಿಯಲ್ಲಿ ಇದ್ದರು. ಬೆಣ್ಣೆ ಕರಗಿಸಿರತಕ್ಕ ವಿಚಾರದಲ್ಲಿ ಅವರ ಮೇಲೆ ಸಾಕಷ್ಟು ಅಪಾದನೆ ಇದೆ, ಇನಕ್ವೈರಿ ನಡೆದಿದೆ ಎಂದು ಕೇಳಿದ್ದೀನೆ. ಇದರಿಂದ ಲಕ್ಷಾಂತರ ರೂಪಾಯಿ ಸರಕಾರಕ್ಕೆ ನಷ್ಟವಾಗಿದೆ ಇಂತಹ ಮೇಧಾವಿ ವ್ಯಕ್ತಿ ತಮ್ಮ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ ಎಂದು ಹೇಳಿದ್ದೀನೆ. ಈಗ ಅವರು ಶಿವಮೊಗ್ಗ ಜಿಲ್ಲೆಯ ಜಿಲ್ಲಾಧಿಕಾರಿಗಳಾಗಿದ್ದಾರೆ. ಶಿವಮೊಗ್ಗ ಜಿಲ್ಲಾಧಿಕಾರಿಯಾಗಿ ಯಾತಕ್ಕೆ ಬಂದರು ಎಂದು ಇತ್ತೀಚೆಗೆ ಗೊತ್ತಾಯಿತು. ಶ್ರೀಮಾನ್ ಆದಿರಾಜಯ್ಯನವರು ತನ್ನ ಅಧಿಕಾರವನ್ನು ಹಿಂದೆ ಮುಂದೆ ನೋಡದೆ ಚಲಾವಣೆಮಾಡುತ್ತೀನೆ ಎಂದು ಪಬ್ಲಿಕ ಮೀಟಿಂಗನಲ್ಲಿ ಒಂದು ಸಲ ಹೇಳಿದ್ದಾರೆ, ಶಾಸನಸಭಾ ಸದಸ್ಯರು ಅವರ ಆಫೀಸಿಗೆ ಹೋಗಿ ಅವರ ಆಟಾಟೋಪವನ್ನು ನೋಡಿದ್ದಾರೆ. ಅವರು ಬ್ಯೂರೋಕ್ರಾಟಿಕ್ ಟೈಪ ಅಧಿಕಾರಿ. ಮಹಾರಾಜರ ಕಾಲದಲ್ಲಿ

ನಿರಂಕುಶಅಧಿಕಾರ ಹೇಗೆ ನಡೆಯುತ್ತಿತ್ತೋ ಹಾಗೆ ನಡೆಸುತ್ತಿದ್ದಾರೆ ಅವರು ಒಂದು ಕಡೆಯಿಂದ ಇನ್ನೊಂದು ಕಡೆಗೆ ಫೈಲನ್ನು ಬಿಸಾಡುವ ವರ್ತನೆಯನ್ನು ನೋಡಿದರೆ ಅವರ ವರ್ತನೆ ಯಾವರೀತಿ ಇದೆ ಎಂದು ನಮಗೆ ಗೋತಾಗುತ್ತದೆ ಅವರು ಶ್ರೀಮಾನ ಕೆ. ಟಿ. ಶಾಮಯ್ಯಗೌಡರು ಜಮೀನು ಅತಿಕ್ರಮಣ ಮಾಡಿರುವುದ ರಿಂದ ಅವರ ಮೇಲೆ ಕ್ರಮ ತೆಗೆದುಕೊಂಡಿದ್ದೇವೆ ಎಂದು ಹಲವಾರು ಬಾರಿ ಹೇಳಿಕೊಂಡಿದ್ದಾರೆ ನಾನು ಬಲಿಷ್ಟಅಧಿಕಾರಿ ಎನ್ನುವ ಮಾತನ್ನು ತೋರಿಸುವುದಕ್ಕೋಸ್ಕರ ಆ ಮಾತನ್ನು ಇತರರ ಮುಂದೆ ಹೇಳುತ್ತಿದ್ದಾರೆ.

ಕೆ. ಟಿ. ಶಾಮೆಗೌಡರು ನನಗೆ ಏನೂ ಮಾಡುವುದಕ್ಕೆ ಆಗುವುದಿಲ್ಲ ಎಂದು ನಮ್ಮ ಸ್ನೇಹಿತರ ಹತ್ತಿರ ಕೂಡ ಹೇಳಿದ್ದಾರೆ. ಶಾಸನ ಸಭಾಸದಸ್ಯರನ್ನು, ದೇಶದ ಜವಾಬ್ದಾರಿ ಹೊತ್ತಿರತಕ್ಕ ಜನರನ್ನು, ಸಾರ್ವಜನಿಕ ಜೀವನದಲ್ಲಿರತಕ್ಕ ಮುಖ್ಯಸ್ಥರನ್ನು ವಿರೋಧ ಹಾಕಿಕೊಂಡು ಬಚಾವು ಆಗಬಲ್ಲೆವು, ತಮ್ಮ ಅಧಿಕಾರವನು ಚಲಾವಣೆಗೆ ಇಡಬಲ್ಲೆವು ಎಂಬ ಧೈರ್ಯ ಅವರಲ್ಲಿ ಬಹಳವಾಗಿ ಇದೆ. ಈ ವಿಚಾರದಲ್ಲಿ ಚೀಫ್ ಮಿನಿಸ್ಟರು ವೀರೇಂದ್ರ ಪಾಟೀಲರ ಹತ್ತಿರವೇ ಮಾತನಾಡಿದ್ದೇನೆ. ಆದರೆ ಇದರ ಬಗ್ಗೆ ನನಗೆ ಏನೂ ಮಾಡುವುದಕ್ಕಾಗು ವುದಿಲ್ಲ ಎಂಬ ಮಾತನ್ನು ಜಿಲ್ಲಾಧಿಕಾರಿಗಳು ನನ್ನ ಸ್ನೇಹಿತರ ಹತ್ತಿರ ಹೇಳಿದ್ದಾರೆ. ಸರ್ಕಾರದವರಿಗೆ ನಾನೆಲ್ಲಾ ತಿಳಿಸಿದ್ದೇನೆ, ವೀರೇಂದ್ರ ಪಾಟೀಲರು- ಮುಖ್ಯಮಂತ್ರಿಗಳವರ ಹತ್ತಿರ ಮಾತನಾಡಿಯೇ ಕ್ರಮ ತೆಗೆದು ಕೊಂಡಿದ್ದೇನೆ ಎಂಬ ಮಾತನ್ನು ಹೇಳಿದ್ದಾರೆ, ಇದರ ಬಗ್ಗೆ ತಮಗೆ ಸಾಕಾದಷ್ಟು ತಿಳಿವಳಿಕೆ ಕೊಟ್ಟಿದ್ದೇವೆ. ಅಧಿಕಾರಿಗಳಿಗೆ ಹೀಗೆಲ್ಲ ವರ್ತಿಸಲು ಅವಕಾಶಕೊಡುವುದು ಒಳ್ಳೆಯದಲ್ಲ, ಈ ರೀತಿ ಅಧಿಕಾರ ಚಲಾವಣೆ ಮಾಡುವುದು ಒಳ್ಳೆಯದಲ್ಲ ಎಂದು ಹೇಳಿದ್ದೇವೆ.

ಹೀಗೆಯೇ ಬಡವರನ್ನು ಬೇಕಾದಷ್ಟು ಧ್ವಂಸ ಮಾಡಿದ್ದಾರೆ. ಇದಕ್ಕೆ ಇನ್ನೊಂದು ಉದಾಹರಣೆ ಕೊಡುವುದಾದರೆ ಬಡವರಿಗೆ ರಕ್ಷಣೆ ಸಿಕ್ಕಿದೆಯೇ ಎಂಬ ಮಾತಿಗೆ ಹಿನ್ನೆಲೆಯಾಗಿ ಮಾನ್ಯ ಅಧ್ಯಕ್ಷರ ಮೂಲಕ ಈ ಸದನದ ಮುಂದೆ ಈ ವಿಷಯವನ್ನು ಪ್ರಸ್ತಾಪ ಮಾಡುತ್ತಾ ಇದ್ದೇನೆ. ಶಿಕಾರಿಪುರ ತಾಲ್ಲೂಕು ಶ್ರೀಮಾನ್ ಬಸವಣ್ಣಪ್ಪನವರ ಕ್ಷೇತ್ರ ಅಲ್ಲಿ ಹೊಟ್ಟೆಗೆ ಅನ್ನ ಇಲ್ಲದೆ ಬಡ ಜನರು ಜಮೀನಿನಲ್ಲಿ ಬೆಳೆ ಬೆಳೆ ದಿದ್ದರು ಅಲ್ಲಿಗೆ ಬೇರೆಯ ಜನರನ್ನು ಪ್ರಚೋದನೆ ಮಾಡಿ ಅವರ ದನಗಳನ್ನು ಆ ಜಮೀನಿನಲ್ಲಿ ನುಗ್ಗಿಸಿ ಬೆಳೆಯನ್ನು ನಾಶಮಾಡಿದ್ದಾರೆ. ಶಿವಮೊಗ್ಗಾ ತಾಲ್ಲೂಕಿನ ತಹಸೀಲ್ದಾರರಿಗೆ ಹೇಳಿಕೊಟ್ಟು, ಭದ್ರಾವತಿ ತಾಲ್ಲೂಕಿನ ತಹಸೀಲ್ದಾರರಿಗೆ ಹೇಳಿಕೊಟ್ಟು ಜನರನ್ನು ಪ್ರಚೋದನೆ ಮಾಡಿ ಈ ಡೆಪ್ಯೂಟಿ ಮೀಷನರು ಇಂತಹ ಕಾರ್ಯಗಳನ್ನು ಮಾಡಿಸಿದ್ದಾರೆ. ನಾನು ದರ್ಪ ತೋರಿಸಬಲ್ಲೆ, ನಾನೊಬ್ಬ ಅಧಿಕಾರಿ, ಯಾರನ್ನು ಬೇಕಾದರೂ ಮಟ್ಟ ಹಾಕಿ ಬಿಡಬಲ್ಲೆ ಎಂದು ಹೇಳಿ ಜನರ ಕಣ್ಣಿಗೆ ಮಣ್ಣು ಎರಚಿದ ಹಾಗೆ, ವೀರೇಂದ್ರ ಪಾಟೀಲರ ಮಂತ್ರಿಮಂಡಲಕ್ಕೂ ಕೂಡ ಕಣ್ಣಿಗೆ ಮಣ್ಣು ಎರಚತಕ್ಕ ಪ್ರಯತ್ನ ಇದು ಆಗಿದೆಯೇ ಹೊರತು ಮತ್ತೆ ಯಾವುದೂ ಅಲ್ಲ ಅಂತ ಅನ್ನುವುದನ್ನು ಈ ಸಭೆಯ ಅವಗಾಹನೆಗೆ ತರುತ್ತೇನೆ.

ಈ ವ್ಯಕ್ತಿಯ ಹಿನ್ನೆಲೆ ಇಷ್ಟೆಲ್ಲಾ ಇದೆ. ಈ ಸಂದರ್ಭದಲ್ಲಿ ಇನ್ನೂ ಒಂದು ಮಾತನ್ನು ಹೇಳಬಹುದು. ಇವರು ಕೋರ್ಟ್ ನಡೆಸುತ್ತಾರೆ, ಇವರು ಜಿಲ್ಲಾಧಿಕಾರಿಗಳು, ಕೋರ್ಟಿನ ಮಾಜಿಸ್ಟ್ರೇಟರು, ಇವರು ಲಾಯರುಗಳಿಗೆ ಕೊಡತಕ್ಕ ಟ್ರೀಟ್‌ಮೆಂಟ್ ನೋಡಬೇಕು. ಶಾಸನಸಭೆಯ ಸದಸ್ಯನಾಗಿ, ಅಡ್ವೋಕೇಟ್ ಆಗಿರುವ ನನಗೆ ಇವರು ಯಾವ ರೀತಿ ಮಾತನಾಡುತ್ತಾರೆ ಎಂಬುದು ಗೊತ್ತಿದೆ. ಏಕವಚನದಲ್ಲೂ ಕೂಡ ಮಾತನಾಡಿದ್ದಾರೆ. ಇದರ ಬಗ್ಗೆ ನಾನು ಪ್ರತಿಭಟನೆ ಮಾಡಿದ್ದೇನೆ. "ನಾಲಿಗೆ ಹಿಡಿದು ಮಾತನಾಡುವುದು ಒಳ್ಳೆಯದು ಆದಿರಾಜಯ್ಯನವರೇ" ಅಂತ ಕೂಡ ನಾನು ಹೇಳಿದ್ದೇನೆ. ಪ್ರತಿಯೊಬ್ಬ ವ್ಯಕ್ತಿಗೂ ಮಾನ. ಮರ್ಯಾದೆ ಇದೆ. ಕೊಡತಕ್ಕ ಮರ್ಯಾದೆಯನ್ನು ಕಡಿಮೆ ಮಾಡಿದರೆ, ಮಾಡತಕ್ಕ ಮರ್ಯಾದೆಗೆ ಧಕ್ಕೆ ತಗಲಿದರೆ ಪ್ರತಿಭಟನೆಮಾಡಿ ಅದನ್ನು ಉಳಿಸಿಕೊಳ್ಳತಕ್ಕ ಹಕ್ಕು ಪ್ರತಿಯೊಬ್ಬ ವ್ಯಕ್ತಿಗೂ ಇದೆ, ಅದನ್ನು ಉಳಿಸಿಕೊಳ ಬೇಕಾಗುತ್ತದೆ.

ಇಂತಹ ಹಿನ್ನೆಲೆಯಿರತಕ್ಕ ವ ಕ್ತಿ ಅವರು ಕಾನೂನಿನ ಚೌಕಟ್ಟಿನಲ್ಲಿ ಕೆಲಸ ಮಾಡಬೇಕಾಗಿರತಕ್ಕ ವ್ಯಕ್ತಿ, ಕಾನೂನು ರಕ್ಷಣೆ ಮಾಡಬೇಕಾಗಿರತಕ್ಕ ವ್ಯಕ್ತಿ ಶಿವಮೊಗ್ಗಾ ಜಿಲ್ಲಾಧಿಕಾರಿ ಯಾರಿದ್ದಾರೆ ಇವರ ಕೈಗೆ ಕಾನೂನು ರಕ್ಷಣೆ ಮಾಡತಕ್ಕ ಜವಾಬ್ದಾರಿಯನ್ನು ಕೊಟ್ಟಿದ್ದೇವೆ ಎಂಬ ಅಂಶವನ್ನು ಅಧ್ಯಕ್ಷರ ಗಮನಕ್ಕೆ ತರಲು ಆಶಿಸುತ್ತೇನೆ. ಈ ವ್ಯಕ್ತಿ ಏನು ಮಾಡಿದರು, ಈಗ ನಡೆದಿರತಕ್ಕ ಘಟನೆಗೆ ಹಿನ್ನೆಲೆಯೇನು ಎಂದರೆ, ೧೭ನೇ ತಾರೀಖು ಈ ಘಟನೆ ನಡೆದಿರುವುದು. ನಾರಾಯಣರಾವ್ ಒಬ್ಬ ಬಡ ಟೈಲರು, ಅವರ ಹೆಂಡತಿ ಕೂಡ ಟೈಲರಿಂಗ್ ಕೆಲಸ ಮಾಡುತ್ತಾರೆ, ಒಂದು ಅಂಗಡಿಯಲ್ಲಿ ಟೈಲರಿಂಗ್ ಮೆಷಿನ್ ಇಟ್ಟುಕೊಂಡು ಬಟ್ಟೆ ಹೊಲಿಯುತ್ತಾರೆ. ಈ ಬೇಸಿಗೆ ಕಾಲದಲ್ಲಿ ಶಿವಮೊಗ್ಗಾದಲ್ಲಿ ಶೆಖೆ ಬಹಳ ಜಾಸ್ತಿ, ಆದರೂ ಅಂದು ರಾತ್ರಿ ಒಂಭತ್ತೂವರೆವರೆಗೂ ತಮ್ಮ ಅಂಗಡಿಯಲ್ಲಿ ಕೆಲಸ ಮಾಡಿದ್ದಾರೆ. ಅವರಿಗೆ ಹೈಸ್ಕೂಲು ಮಿಡ್ಲಸ್ಕೂಲಿನಲ್ಲಿ ಓದುತ್ತಾ ಇರತಕ್ಕ ಮಕ್ಕಳೂ ಕೂಡ ಇದ್ದಾರೆ. ೨೫ ವರ್ಷಗಳಿಂದ ಅವರು ಅಲ್ಲೇ ಖಾಯಂ ಆಗಿ ವಾಸ

(ಶ್ರೀ ಎಸ್. ಬಂಗಾರಪ್ಪ)

ಹಾಗಿದ್ದಾರೆ. ಅವತ್ತಿನ ದಿವಸ ಅವರು ಗಂಡ ಹೆಂಡತಿ ತಮ್ಮ ಕೆಲಸವೆಲ್ಲಾ ಮುಗಿದು, ಊಟವಾದಮೇಲೆ ಬಹಳ ಶೆಖೆ ಅಂತ ಹೇಳಿ ಜಸ್ಟ್‌ಫಾರ್ ಎ ಸ್ಟೈಟ್ ಸ್ಟ್ರೋಲ್ ತಿರುಗಾಡಿಕೊಂಡು ಬರೋಣ ಅಂತ ಹೇಳಿ ಹೋಗಿದ್ದರು, ಜನ ಸಾಕಾದಷ್ಟು ಪ್ರಮಾಣದಲ್ಲಿ ಓಡಾಡುತ್ತಾ ಇದ್ದರು, ಮುನಿಸಿಪಲ್ ಆಫೀಸಿನ ಪಕ್ಕದಲ್ಲಿ ಪಾರ್ಕ್ ಇದೆ. ಅಲ್ಲಿಗೆ ಹೋಗಿದ್ದರು. ಆ ಪಾರ್ಕಿನ ಸುತ್ತಮುತ್ತಲೂ ತಾಲ್ಲೂಕು ಆಫೀಸೂ ವೀರಶೈವ ಕಲ್ಯಾಣ ಮಂದಿರ ಇತ್ಯಾದಿಗಳು ಇವೆ. ನಾಲ್ಕು ಜನ ಪೋಲೀಸ್ ಕಾನ್‌ಸ್ಟೇಬಲ್‌ಗಳು ಅವರನ್ನು ಪ್ರಶ್ನೆ ಮಾಡಿ ಪೋಲೀಸ್ ಸ್ಟೇಷನ್‌ಗೆ ಕರೆದುಕೊಂಡು ಬಂದಿದ್ದಾರೆ. ಪಾರ್ಕ್‌ನಿಂದ ಬರುವಾಗ ಅವರನ್ನು ಹಿಡಿದು ಹೊಡೆದಿದ್ದಾರೆ. ಆಗ ಹತ್ತೂವರೆ ಹತ್ತೂಮುಕ್ಕಾಲು ಗಂಟೆ ಇರಬಹುದು. ನಾರಾಯಣರಾವ್ ಅವರನ್ನು ಪೋಲೀಸ್‌ನವರು ಈ ಹೆಂಗಸನ್ನು ಇಷ್ಟು ಹೊತ್ತಿನಲ್ಲಿ ಎಲ್ಲಿಗಯ್ಯ ಹಾರಿಸಿಕೊಂಡು ಹೋಗುತ್ತಾ ಇದ್ದೀಯ ಅಂತ ಕೇಳಿದಾಗ ನಾರಾಯಣರಾವ್ ಹೇಳಿದರು ; ಏಕೆ ಸ್ವಾಮಿ ಹೀಗೆ ಕೇಳುತ್ತೀರಿ ಬಹಳ ಶೆಖೆ ಅಂತ ಹೇಳಿ ಗಾಳಿಗೋಸ್ಕರ ಸುತ್ತಾಡಿಕೊಂಡು ಬರೋಣ ಅಂತ ಬಂದಿದ್ದೇವೆ; ಈಕೆ ನನ್ನ ಹೆಂಡತಿ ಅಂತ. ಜೊತೆಗೆ ಈ ನಾರಾಯಣರಾವ್ ಹೋಂ ಗಾರ್ಡ್ ಬೇರೆ. ಪೋಲೀಸ್‌ನವರ ಜೊತೆಯಲ್ಲಿ ಸೇರಿಸಿಕೊಂಡು ಅನೇಕವೇಳೆ ಕೆಲಸ ಮಾಡಿದ್ದಾನೆ. ಟ್ರಾಫಿಕ್ ಕಂಟ್ರೋಲ್ ಮಾಡುವಾಗ, ಏನಾದರೂ ಸಮಾರಂಭಗಳು ನೆರವೇರಿದಾಗ ಹೋಂ ಗಾರ್ಡ್ ಆಗಿ ಕೆಲಸ ಮಾಡತಕ್ಕ ಮನುಷ್ಯ. ಸುಮಾರು ೬-೭ ವರ್ಷದಿಂದ ಹೋಂ ಗಾರ್ಡ್ ಆಗಿ ಕೆಲಸ ಮಾಡಿ ಪೋಲೀಸರ ಪರಿಚಯ ಇರತಕ್ಕ ಮನುಷ್ಯ, ಒಳ್ಳೆಯ ಹೆಸರನ್ನು ಪಡೆದುಕೊಂಡಿದ್ದಾನೆ. ಆತ ಆಕೆ ನನ್ನ ಹೆಂಡತಿ ಅಂತ ಕೂಡ ಹೇಳಿದ್ದಾನೆ. ಆಕೆ ಈತ ನನ್ನ ಗಂಡ ಅಂತ ಹೇಳಿದ್ದಾಳೆ. ಇಷ್ಟಾದರೂ ಕೂಡ ಅದುಯಾವುದನ್ನೂ ಕೇಳದೆ ಈ ಹೆಂಗಸನ್ನು ಹಾರಿಸಿಕೊಂಡು ಹೋಗುತ್ತಾ ಇದ್ದೀಯ ಅಂತ ಹೇಳಿ ಗಂಡ ಹೆಂಡತಿ ಇಬ್ಬರನ್ನೂ ಕೂಡ ಪೋಲೀಸ್‌ನವರು ಸಿಕ್ಕಾಪಟ್ಟೆ ಹೊಡೆದಿದ್ದಾರೆ. ಒಂದು ಫರ್ಲಾಂಗ್ ದೂರದ ವರೆಗೂ ಅದೇ ರೀತಿ ಹೊಡೆದುಕೊಂಡು ಹೋಗಿದ್ದಾರೆ. ನಾರಾಯಣರಾವ್‌ನ ಬೆನ್ನಿನ ಮೇಲೆ ೭-೮ ಬರೆಗಳು ಬಿದ್ದಿವೆ, ಕಾಲ ಮೇಲೆ ಘಾಯ. ಮೈಮೇಲೆಲ್ಲಾ ಗಾಯಗಳಾಗಿವೆ. ಇದಕ್ಕೆಲ್ಲಾ ಇಲಾಜು ಮಾಡಿಸಿದ್ದಾನೆ. ಮರ್ಯಾದೆ ಹೋಗುತ್ತದೆ ಅಂತ ಹೇಳಿ ಯಾರ ಹತ್ತಿರವೂ ಹೇಳುವುದಕ್ಕೆ ಅವನಿಗೆ ಮನಸ್ಸಾಗಿಲ್ಲ ಆದರೂ ಅವನ ಹತ್ತಿರದ ಕೆಲವು ಜನ ಸ್ನೇಹಿತರ ಹತ್ತಿರ ಈ ವಿಚಾರವನ್ನೆಲ್ಲಾ ಹೇಳಿದ್ದಾನೆ. ಇಷ್ಟೆಲ್ಲಾ ಆದ ನಂತರ ೩ ಗಂಟೆ ಹೊತ್ತಿಗೆ ಪಕ್ಕದಲ್ಲಿದ್ದ ಪೆಟ್ರೋಲ್ ಬಂಕಿನ ಬೈರೋಜಿ ಈ ಗಲಾಟೆ ಕೇಳಿ ಓಡಿಬಂದ ಮೇಲೆ ಈ ವಿಷಯ ಗೊತ್ತಾಯಿತು. ಗೊತ್ತಾದ ಮೇಲೆ ಎರಡು ಮೂರು ದಿನದ ನಂತರ ಶಿವಮೊಗ್ಗ ಮುನಿಸಿಪಲ್ ಕೌನ್ಸಿಲ್‌ರ್ ಎಸ್. ಎಸ್. ಭರಮಪ್ಪ ಅನ್ನುವವರು, ಎಸ್.ಎಸ್‌ಪಿ ಮತ್ತು ಇತರ ಎಲ್ಲಾ ಪಕ್ಷದವರೂ ಸೇರಿ ಒಂದು ಬಹಿರಂಗ ಸಭೆ ಕರೆದಿದ್ದರು.

ಸಿಟಿಜನ್ಸ್ ಫೋರಂ ಎಂದು ಮಾಡಿದ್ದಾರೆ ಬಹಿರಂಗ ಸಭೆ ಮಾಡಿದ್ದಾರೆ. ಭರ್ಮಪ್ಪನವರು ಸಿಟಿ ಮುನಿಸಿಪಲ್ ಕೌನ್ಸಿಲರುಗಳು ಮುಂತಾದವರು ಬಹಳ ವರ್ಷಗಳಿಂದ ಮರ್ಯಾದೆಯನ್ನುಳಿಸಿ ಕೊಂಡಿರುವವರು ಭರ್ಮಪ್ಪನವರು ಈ ಸಭೆಯ ಸದಸ್ಯರಾಗುವುದಕ್ಕೆ ಅರ್ಹರು ಅವರ ಅಧ್ಯಕ್ಷತೆಯಲ್ಲಿ ಸಭೆ ನಡೆದು ಪೋಲೀಸಿನವರ ದೌರ್ಜನ್ಯವನ್ನು ಖಂಡಿಸಿದ್ದಾರೆ. ಟೆಲಿಗ್ರಾಂ ಮಾಡಿದ್ದಾರೆ. ಎನ್‌ಕ್ವೈರಿಗೆ ಅದು ಹೋಗಿದೆ ಎಂದು ಗೊತ್ತಾಗಿದೆ. ಬಹಿರಂಗ ಸಭೆಯಲ್ಲಿ ಅವರನ್ನು ಕಂಡಂ ಮಾಡಿರುವುದರಿಂದ ಪೋಲೀಸಿನವರಿಗೆ ಸಿಟ್ಟು ಬಂತು ಎಂದು ಕಾಣುತ್ತದೆ. ಆ ದಿನ ಎಸ್. ಎಸ್. ಭರ್ಮಪ್ಪನವರು ಅಧ್ಯಕ್ಷತೆ ವಹಿಸಿದ್ದರು ಶ್ರೀನಿವಾಸಯ್ಯಂಗಾರ್‌ರವರು, ಸೀತಾರಾಮಯ್ಯಂಗಾರ್ಯರು ಭಾಷಣ ಮಾಡಿದರು. ಅವರು ಡೈಲಿ ಪತ್ರಿಕೆಯ ಸಂಪಾದಕರು. ಅವರ ಮೇಲೆ ಎಸ್. ಪಿ. ಕಣ್ಣಿಟ್ಟಿರಬೇಕು. ಮೊನ್ನೆ ಸೋಮವಾರ ೩೦ನೆಯ ತಾರೀಖು ಶಿವಮೊಗ್ಗದಲ್ಲಿ ಗಡಿ ವಿವಾದದ ಬಗ್ಗೆ ಮಹಾಜನ್ ವರದಿಯನ್ನು ಅನುಷ್ಠಾನಕ್ಕೆ ತರಬೇಕೆಂದು ಒತ್ತಾಯಮಾಡಲು ಬಂದ್ ಆಚರಿಸಿದ್ದರು. ಅಂದು ಇಡೀ ನಗರ ಶಾಂತಿಯುತವಾಗಿತ್ತು. ಹಳ್ಳಿಗಳಿಂದಲೂ ಜನರು ಬಂದಿದ್ದರು. ಯಾವ ಗಲಾಟೆಯೂ ಇಲ್ಲದೆ ಬಂದನ್ನು ಶಾಂತಿಯಿಂದ ಯಶಸ್ವಿಯಾಗಿ ಆಚರಿಸಿದರು. ಅಂಥ ನಗರ ಶಿವಮೊಗ್ಗ ಆ ದಿವಸ ಎಸ್. ಪಿ. ಥೋಪುರವರು ಮುನಿಸಿಪಲ್ ಆಫೀಸಿಗೆ ಹೋಗಿದ್ದಾಗ ನಾರಾಯಣರಾವ್ ಒಳ್ಳೆಯ ಮರ್ಯಾದಸ್ಥರು, ಗಂಡ ಹೆಂಡತಿ ಇಬ್ಬರೂ ಬಹಳ ಒಳ್ಳೆಯವರು ಅವರಿಗೆ ತೊಂದರೆ ಮಾಡಿದ್ದೀರಿ, ಅದು ಸರಿಯೇ ಎಂದು ಮುನಿಸಿಪಲ್ ಕೌನ್ಸಿಲರುಗಳು ಕೇಳಿದರು. ಆ ಬಗ್ಗೆ ಪರ್ಸನಲ್ಲಾಗಿ ಕಂಪ್ಲೈಂಟ್ ಕೊಟ್ಟರೂ, ಫೋನ್ ಮಾಡಿದರೂ ಏನೂ ಮಾಡಿಲ್ಲ. ಎನ್‌ಕ್ವೈರಿ ಕೂಡ ಮಾಡಿಲ್ಲ. ೧೭ನೆಯ ತಾರೀಖು ಗಲಾಟೆಯಾಗಿ ೧೪ ದಿವಸವಾದರೂ ಏನೂ ಕ್ರಮ ತೆಗೆದುಕೊಂಡಿಲ್ಲ, ಕಾರಣವೇನು ಎಂದು ಕೇಳಿದರೆ ಅದು ನನಗೆ ಸಂಬಂಧಪಟ್ಟಿದ್ದು, ನೀವು ಈ ವಿಚಾರಗಳಲ್ಲಿ ಇಂಟರ್‌ಫಿಯರ್ ಮಾಡಬಾರದು ಎಂದು ಎಸ್‌ಪಿ ಹೇಳಿದ್ದಾರೆ. ಕೇಳುವುದಕ್ಕೆ ಹಕ್ಕಿದೆ ಜವಾಬ್ದಾರಿ ಹೊತ್ತಿರುವ ಮುನಿಸಿಪಲ್ ಕೌನ್ಸಿಲರುಗಳಿಗೆ ಕೇಳಲು ಹಕ್ಕಿದೆ ಎಲ್ಲ ಪಕ್ಷಪಂಗಡಗಳ ಕೌನ್ಸಿಲರುಗಳೂ ಮುನಿಸಿಪಾಲಿಟಿಯಲ್ಲಿದ್ದಾರೆ ಅವರೆಲ್ಲಾ ಹೇಳಿದ್ದಾರೆ ಹೀಗೆ ಮಾಡುವುದು ಸರಿಯಲ್ಲ

ಮಾನವಂತರಿಗೆ ಮರ್ಯಾದೆಗೆ ಧಕ್ಕೆ ಬರುವುದು ಎಂದು ಹೇಳಿದ್ದಾರೆ. ಭೂಸಂಬಂಧವಾದ ಚಳವಳಿ ಯಾವಾಗಲೂ ಭರ್ಮಪ್ಪನವರು ಸೂಕ್ತ ಕ್ರಮ ತೆಗೆದುಕೊಂಡಿದ್ದಾರೆ. ಮುನಿಸಿಪಲ್ ಕೌನ್ಸಿಲರುಗಳು ಅಧ್ಯಕ್ಷರು ಮುಂತಾದ ಗಣ್ಯರು ಹೇಳಿದಾಗ ನಿಮ್ಮ ಮೇಲೆ ಹೇಗೆ ಕ್ರಮ ತೆಗೆದುಕೊಳ್ಳಬೇಕೆಂಬುದು ನನಗೆ ಗೊತ್ತಿದೆ ಕೆಲವೇ ಗಂಟೆಗಳಲ್ಲಿ ನಿಮ್ಮ ಮೇಲೆ ಸಿವಿಯರ್ ಆಕ್ಷನ್ ತೆಗೆದುಕೊಳ್ಳಬಲ್ಲೆ ನಿಮಗೆ ತೊಂದರೆ ಮಾಡಬಲ್ಲೆ''-ಎಂದು ಎಸ್‌ಪಿ ಹೇಳಿದ್ದಾರೆ. ೩೦ನೆಯ ತಾರೀಖು ಹತ್ತೂವರೆ ಗಂಟೆಯಲ್ಲಿ ಗೋಪಿ ಹೋಟಲು ಮತ್ತು ಹೆಚ್‌ಪಿಸಿ ಸಿನೀಮಾ ಟಾಕೀಸ್ ಬಳಿ ಫೈರಿಂಗ್ ಮಾಡಿದ್ದಾರೆ. ಎಸ್‌ಪಿ ಮೊದಲು ಇನ್‌ಸ್ಟ್ರಕ್ಷನ್ ಕೊಟ್ಟರು. ಎಸ್‌ಪಿ ಮತ್ತು ಡಿ ಸಿ ಮಾತನಾಡಿಕೊಂಡು ಫೈರಿಂಗ್ ಮಾಡಿದ್ದಾರೆ. ಮುನಿಸಿಪಲ್ ಕೌನ್ಸಿಲ್ಲಿನಲ್ಲಾಗಿರುವ ಕೆಲವು ನಿರ್ಣಯಗಳನ್ನು ಸಸ್ಪೆಂಡ್ ಮಾಡಿದ್ದಾರೆ, ಡಿ. ಸಿ ಮತ್ತು ಮುನಿಸಿಪಲ್ ಕೌನ್ಸಿಲರುಗಳಿಗೆ ಆಗುವುದಿಲ್ಲ. ಗೋಪಿ ಸರ್ಕಲ್ ಬಳಿ ಪೋಲೀಸಿನವರು ಕೆಲವರು ಕಳ್ಳತನ ಮಾಡಿರುವವರು ಇದ್ದರೆಂದು ಸ್ಥಳೀಯ ಜನರು ಹೇಳುತ್ತಾರೆ. ಪೋಲೀಸರು ಅವರಲ್ಲಿ ಕೆಲವರನ್ನು ಅಲ್ಲಿದ್ದು ಹೋಟಲು ಮತ್ತು ಸಿನಿಮಾ ಮೇಲೆ ಕಲ್ಲುಗಳನ್ನು ತೂರಬೇಕೆಂದು ಹೇಳಿದ್ದಾರೆ. ಅದು ಒಳ್ಳೆ ಜನಭರಿತವಾದ ಸ್ಥಳ ಭರ್ಮಪ್ಪನವರು ಮತ್ತಿತರರು ಕೆಲವರು ಎಲ್ಲಾದರೂ ಗಲಾಟೆ ಆದರೆ ಅಲ್ಲಿಗೆ ಹೋಗಿ ಜನರಲ್ಲಿ ಶಾಂತಿಯನ್ನುಂಟುಮಾಡಲು ಯತ್ನಿಸುತ್ತಿದ್ದರು. ಅವರು ಅಲ್ಲಿದ್ದುದನು ನೋಡಿ ಪೋಲೀಸರು ಕಲ್ಲು ತೂರುವಂತೆ ಮಾಡಿದ್ದಾರೆ. ಕಲ್ಲು ಹೊಡೆದಾಗ ಪೋಲೀಸರು ಸರ್ಕಲ್ ಹತ್ತಿರವೇ ಇದ್ದರು ಆಗ ಸಿನಿಮಾದ ಎರಡನೇ ಷೋ ನಡೆಯುತ್ತಿತ್ತು. ಆಗ ವಿಷಯ ಗೊತ್ತಾಗಿ ಭರ್ಮಪ್ಪನವರು ಮತ್ತು ಲೋಕಲ್ ಪೇಪರ್ ಕರೆಸ್‌ಪಾಂಡೆಂಟರು ಪಿಟಿ ಐ ಕರೆಸ್‌ಪಾಂಡೆಂಟರು ಆದ ಶ್ರೀನಿವಾಸಯ್ಯಂಗಾರ್ ರವರೂ ಇತರರೂ ಹೋಗಿ ಕಲ್ಲು ಹೊಡೆಯಬಾರದು ಮನೆಗೆ ಹೋಗಿ ಎಂದು ಅಲ್ಲಿದ್ದ ಹುಡುಗರು ಮುಂತಾದವರನ್ನು ಚದುರಿಸಿದರು. ಆಮೇಲೆ ಭರ್ಮಪ್ಪನವರು ಎಕ್ಸ್-ವೈಸ್‌ಪ್ರೆಸಿಡೆಂಟರು ಮುಂತಾದ ಮೂರು ಜನರು ಸೇರಿ ಮನೆಗೆ ಹೋಗುವಾಗ ಸರ್ಕಲ್ ಬಳಿ ಬಂದಾಗ ಅಲ್ಲಿದ್ದ ಕೆಲವರು ಪೋಲೀಸಿನವರು ಭರ್ಮಪ್ಪ ಬಂದರು ಎಂದು ಹೇಳಿದರು. ಯೂಸೂಫ್‌ಖಾನ್ ಬಂದರು ಶ್ರೀನಿವಾಸಯ್ಯಂಗಾರ್ ಬಂದರು ಎಂದು ಹೇಳಿದರು. ಆಗ ಹೊಡೆಯಿರಿ ಎಂದು ಹೇಳಿದರು ಕಲ್ಲಿನಿಂದ ಹೊಡೆದರು ಲಾಠಿಯಿಂದ ಹೊಡೆದರು ಭರ್ಮಪ್ಪನವರಿಗೆ ಗಾಯವಾಗಿದೆ ಇಲಾಜು ಮಾಡಿಸಿಕೊಂಡಿದ್ದಾರೆ. ಶ್ರೀನಿವಾಸಯ್ಯಂಗಾರ್ ರವರಿಗೆ ಪೆಟ್ಟು ಬಿದ್ದಿದೆ. ಯೂಸೂಫ್‌ಖಾನರು ತಪ್ಪಿಸಿಕೊಂಡು ಹೋಗಿ ಬೇರೆಯವರಿಗೆ ಇನ್‌ಫರ್ಮೇಷನ್ ಕೊಟ್ಟರು ಪೋಲೀಸರು ಹೊಡೆದು ಬಾಯಿಗೆ ಉಚ್ಚೆ ಹೊಯ್ಯಬೇಕೆಂದಿದ್ದಾಗ ಯೂಸೂಫ್‌ಖಾನರು ಕೆಲವರೊಂದಿಗೆ ಬರುವುದು ಗೊತ್ತಾದಾಗ ಚೆನ್ನಾಗಿ ಹೊಡೆದಿದ್ದಾರೆ. ಶ್ರೀನಿವಾಸಯ್ಯಂಗರ್‌ರವರಿಗೆ ಎಚ್ಚರ ತಪ್ಪುವ ಸ್ಟೇಜ್ ಬಂತು ಆಗ ಪೋಲೀಸರು ಅವರನ್ನು ಎಸೆದು ಮುಂದೆ ಹೋದರು. ಜನರು ಕಾನೂನಿಗೆ ಹೆದರಿದರು; ರಾತ್ರಿ ಹನ್ನೊಂದುವರೆ-೧೨ ಇರಬಹುದು ಆಗ ಪೋಲೀಸರು ಮತ್ತೆ ಬಂದು ಭರ್ಮಪ್ಪ ಶ್ರೀನಿವಾಸಯ್ಯಂಗಾರ್ ಕುಡಿದಿದ್ದಾರೆ ಎಂದು ಡಿಸ್ಟ್ರಿಕ್ಟ್ ಸರ್ಜನ್‌ರನ್ನೂ ಕರೆಸಿದರು. ಡಿಸ್ಟ್ರಿಕ್ಟ್ ಸರ್ಜನ್ ಪುಕ್ಕಲು ಮನುಷ್ಯ, ಪುಂಜ ಎಂಬ ಅವರು ದಕ್ಷಿಣ ಕನ್ನಡದವರು ಅವರು ಬಹಳ ಒಳ್ಳೆಯ ಕೆಲಸಮಾಡುತ್ತಿದ್ದರು. ಅವರಿಗೆ ಹೆದರಿಸಿ ರಾತ್ರಿ ಒಂದೂವರೆ ಗಂಟೆಯಲ್ಲಿ ಫೋನ್ ಮಾಡಿಸಿ ಆರ್ಡರು ಮಾಡಿದ್ದಾರೆ ಎಂದು ಹೇಳಿ ಆಸ್ಪತ್ರೆಗೆ ಕರೆಸಿದರು, ಕುಡಿದಿದ್ದಾರೆಂದು ಸರ್ಟಿಫೈ ಮಾಡಲು ಅವರನ್ನು ಕರೆಸಿದರು. ಸ್ಪೆಷಲ್ಲಾಗಿ ಅವರನ್ನು ಕರೆಸುವ ಅವಶ್ಯಕತೆ ಏನಿತ್ತು ? ಆರ್ ಎಂ ಓ ಮತ್ತು ರಾತ್ರಿ ಡ್ಯೂಟಿ ಆಫೀಸರು ಇದ್ದರು. ಆದರೂ ಇದು ಮುಖ್ಯವಾದ ವಿಷಯ ಎಂದು ಅವರು ಡಿಸ್ಟ್ರಿಕ್ಟ್ ಸರ್ಜನ್ನರನ್ನೇ ಕರೆಸಿದರು. ಬೇರೆ ಸಿಬ್ಬಂದಿ ಬೇಕಾದಷ್ಟು ಇದ್ದರೂ ಡಿಸ್ಟ್ರಿಕ್ ಸರ್ಜನರನ್ನು ಕರೆಸಿದರು. ಬುಕ್ ಮಾಡಬೇಕೆಂದು ಕಳ್ಳು ಕುಡಿದಿದ್ದಾರೆಂದು ಸರ್ಟಿಫೈ ಮಾಡಿಸಿ ಕೇಸ್ ರಿಜಿಸ್ಟರ್ ಮಾಡಿಕೊಂಡು ಅರೆಸ್ಟ್ ಮಾಡಿದರು. ಈ ವಿಚಾರದಲ್ಲಿ ಮೊನ್ನೆ ಒಂದೂಕಾಲು ಗಂಟೆಯಲ್ಲಿ ಫೋನ್ ಬಂತು, ಹೊಡೆದರು ಗಾಯವಾಗಿದೆ ಆಸ್ಪತ್ರೆಗೆ ಸೇರಿಸಿದ್ದಾರೆ ಎಂದು ಕೇಳಿದಾಗ ಕೂಡಲೆ ನಾನು ಮತ್ತು ಇತರ ಸ್ನೇಹಿತರು ಆಸ್ಪತ್ರೆಗೆ ಹೋದಾಗ ಎಸ್‌ಪಿ ಅಲ್ಲೆ ಇದ್ದರು ಕುಡಿದಿದ್ದಾರೆಂದು ಸರ್ಟಿಫಿಕೇಟ್ ಪಡೆಯಲು ಅಲ್ಲಿದ್ದರು ಡಿಸ್ಟ್ರಿಕ್ಟ್ ಸರ್ಜನ್ ಸಹ ಅಲ್ಲಿದ್ದರು. ಸಬ್ ಇನ್‌ಸ್ಪೆಕ್ಟರು, ಡಿವೈಎಸ್‌ಪಿ ಮುಂತಾದ ಎಲ್ಲಾ ಪೋಲೀಸ್ ಫೋರ್ಸ್ ಅಲ್ಲಿತ್ತು ರಿಸರ್ವ್ ಪೋಲೀಸ್ ಇರುವ ೨-೩ ವ್ಯಾನುಗಳಿದ್ದುವು ಅಲ್ಲಿನ ಕೆಲಸವಾದ ಮೇಲೆ ಅವರನ್ನು ಕಳಿಸಿದರು.

5 30 P. M

ಈ ಕರಾಳ ದೃಶ್ಯವನ್ನು ಕಣ್ಣಾರೆ ಕಂಡೆವು. ನಾನು ಮತ್ತು ವಿಧಾನ ಪರಿಷತ್ತಿನ ಸದಸ್ಯರಾದ ವೈ. ಆರ್. ಪರಮೇಶ್ವರಪ್ಪ ಎಲ್ಲ ಒಟ್ಟಿಗೆ ಹೋಗಿ ಏಕೆ ಹೊಡೆದದ್ದು ಎಂದು ಎಸ್. ಪಿ. ಅವರನ್ನು ಕೇಳಿದೆವು. ಆವಾಗ ಅವರು ಹೇಳಿದರು, ನನಗೇನೂ ಗೊತ್ತಿಲ್ಲ, ನಾನು ನಿಮ್ಮ ಹಾಗೆಯೇ ಬಂದಿದ್ದೇನೆ ಎಂದು ಅವರು ಹೇಳಿರುವ ಮಾತುಗಳು ಇವು. ಅವರು ಹೇಗೆ ಸುಳ್ಳು ಹೇಳಿದರು ಎನ್ನುವುದನ್ನು ಈ ಸದನದ ಅವಗಾಹನೆಗೆ ತರುತ್ತೇನೆ. ನಾನೂ ಕೂಡ ಹತ್ತು ನಿಮಿಷದ ಹಿಂದೆ ಬಂದೆ, ನಿಮಗೆ ಎಷ್ಟು ಗೊತ್ತಾಗಿದೆಯೋ ನನಗೂ ಅಷ್ಟೇ ಗೊತ್ತು. ಏನು ನಡೆದಿದೆ ಎನ್ನುವುದನ್ನು ತಿಳಿದುಕೊಳ್ಳಬೇಕಾಗಿದೆ ಎಂದು

(ಶ್ರೀ ಎಸ್. ಬಂಗಾರಪ್ಪ)

ಹೇಳಿದರು. ಆಗ ಅವರಿಗೆ ಏನೂ ಗೊತ್ತಿಲ್ಲ ಎನ್ನುವ ಭಾವನೆ ನನಗೆ ಬಂತು. ಡಿವೈ ಎಸ್. ಪಿ. ಹತ್ತಿರ ಕೆಲವು ಪ್ರಶ್ನೆಗಳನ್ನು ನಾನು ಹಾಕಬೇಕಾದರೆ, ಎಸ್. ಪಿ. ಅವರಾಗಿಯೇ ಮಧ್ಯೆ ಪ್ರವೇಶಮಾಡಿ ಹಾಗಲ್ಲ ಹೀಗೆ, ಹೀಗಲ್ಲ ಹಾಗೇ ಎಂದು ಸಂಪೂರ್ಣವಾಗಿ ನಡೆದುದೆಲ್ಲವನ್ನೂ ಹೇಳುತ್ತಿದ್ದರು. ಪ್ರತಿಯೊಂದು ಉತ್ತರ ಕೊಡುವುದಕ್ಕೆ ಅವರೇ ಮುಂದಾಗುತ್ತಿದ್ದರು. ಡೆಪ್ಯುಟಿ ಕಮಿಷನರು ಮಾತ್ರ ಮನೆಯಲ್ಲಿ ಉಳಿದಿದ್ದರು. ಪ್ರಾಯಶಃ ತಾವು ಬುದ್ಧಿವಂತರೆಂದು ಅವರು ಭಾವಿಸಿದ್ದರು ಎಂದು ಕಾಣುತ್ತದೆ. ಇಷ್ಟೆಲ್ಲ ಆದಮೇಲೆ, ಜಾಮೀನಿನ ಮೇಲೆ ಅವರನ್ನು ಬಿಡಿ ಎಂದು ಕೇಳಿದಾಗ ಆಗುವುದಿಲ್ಲ ಎಂದು ಎಸ್. ಪಿ. ಹೇಳಿದರು. ಆಗ ನಾನು ಇದು ಪ್ರಜಾಸತ್ತೆ, ಪೋಲೀಸ್ ರಾಜ್ಯ ಆಗುವುದಕ್ಕೆ ಸಾಧ್ಯವಿಲ್ಲ, ಮೈಸೂರು ರಾಜ್ಯದಲ್ಲಿ ಹಲವಾರು ಕಡೆ ಗಲಾಟೆಗಳಾಗಿವೆ. ಈಚೆಗೆ ದಕ್ಷಿಣ ಕನ್ನಡ ಜಿಲ್ಲೆಯ ಕಾಪು ಎಂಬಲ್ಲಿ ಬಹಳ ಗಲಾಟೆಯಾಗಿ ವಿಚಾರಣೆ ಮಾಡಬೇಕೆಂದಾಗಿದೆ. ಮಧುಗಿರಿಯಲ್ಲಿ ಹಿಂದೆ ಆಗಿದೆ , ಹಲವಾರು ಕಡೆ ಹಾಗಾಗಿದೆ. ಪೋಲೀಸರ ದೌರ್ಜನ್ಯ ನಡೆಯುವುದಕ್ಕೆ ಸಾಧ್ಯವಿಲ್ಲ, ಜವಾಬ್ದಾರಿ ಹೊಂದಿರತಕ್ಕ ಮನುಷ್ಯರ ಮೇಲೆ ಈ ರೀತಿ ಮಾಡುವುದು ಸರಿಯಲ್ಲ ಎಂದು ಹೇಳಿದಾಗ ಜಾಮೀನು ತಂದುಕೊಟ್ಟರೆ ಬಿಡಿಸುತ್ತೇನೆ ಎಂದು ಶುದ್ಧ ಒರಟುತನದಲ್ಲಿ ಜನರ ಪ್ರತಿನಿಧಿ ಹೋದಾಗ ಕೊಡಬೇಕಾದ ಮರ್ಯಾದೆಯನ್ನು ಕೂಡ ಕೊಡದೆ ಒರಟು ರೀತಿಯಲ್ಲಿ ಹೇಳಿದರು. ಕೊನೆಗೆ ಜಾಮೀನಿನ ಮೇಲೆ ಬಿಡದೆ ಇದ್ದರೆ, ಅವರಿಗೆ ಇನ್ನೂ ತೊಂದರೆ ಕೊಟ್ಟರೆ ನಿಮಗೆ ಒಳ್ಳೆಯದಾಗುವುದಿಲ್ಲ, ಜನ ರೊಚ್ಚಿಗೆ ಹೇಳುತ್ತಾರೆ, ನೀವಾಗಿಯೇ ಜನರನ್ನು ರೊಚ್ಚಿಗೆ ಎಬ್ಬಿಸುತ್ತೀರಿ ಎಂದು ಹೇಳಿ ಬಂದೆ. ಆ ಮೇಲೆ ರಾತ್ರಿ ಅವರನ್ನೆಲ್ಲಾ ತೆಗೆದುಕೊಂಡು ಹೋಗಿ ಪೋಲೀಸ್ ಸ್ಟೇಷನ್‌ನಲ್ಲಿ ಹಾಕಿಕೊಂಡರು. ಮತ್ತೆ ಹೊಡೆಯುತ್ತಾರೆ ಎಂದು ನೋಡಿದೆವು, ಹೊಡೆಯಲಿಲ್ಲ. ಇಷ್ಟು ವಿಷಯವೆಲ್ಲ ಜನತೆಗೆ ಗೊತ್ತಾಯಿತು. ಬೆಳಿಗ್ಗೆ ಸುಮಾರು ಏಳೆಂಟು ಸಾವಿರ ಜನ ಹತ್ತು ಸಾವಿರಜನ ಸೇರಿರಬಹುದು ಶಿವಮೊಗ್ಗ ನಗರದಲ್ಲಿ ಶಿವಮೊಗ್ಗ ನಗರ ಸಭೆಯ ಜವಾಬ್ದಾರಿ ಹೊತ್ತುಕೊಂಡು ಕೆಲಸಮಾಡ ತಕ್ಕ ಅಧ್ಯಕ್ಷರು. ಎಲ್ಲಾ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಪಬ್ಲಿಕ್ ರೋಡಿನಲ್ಲಿ, ಹೊಡೆದಿದ್ದಾರೆ ಕೆಡವಿದ್ದಾರೆ ಮಾಡತಕ್ಕಘಾಯ ಮಾಡಿದ್ದಾರೆ ಮುಖಕ್ಕೆ ಉಗುಳಿದ್ದಾರೆ ಉಚ್ಚೆ ಬಾಯಿಗೆ ಹುಯ್ಯುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಎಂದು ಕೇಳಿದಾಗ, ಡಿಸ್ಟ್ರಿಕ್ಟ್ ಸರ್ಜನ್ ಸರ್ಟಿಫಿಕೇಟ್ ಕೊಟ್ಟಿದ್ದಾರೆ. ರಯಟಿಂಗ್‌ಕೇಸ್ ಹಾಕಿ ಕುಡಿದಿದ್ದರು. ಎನ್ನುವ ಕಾರಣವನ್ನು ಹಾಕಿದ್ದಾರೆ ಎನ್ನುವುದನ್ನು ತಿಳಿದಾಗ ಜನ ಅದರ ಬಗ್ಗೆ ಜಾಗೃತರಾಗಿ, ಜನ ಸೇರಿ, ನ್ಯಾಯಾಂಗ ತನಿಖೆ ಆಗಬೇಕಾಗಿದೆ, ವಿಚಾರಣೆಯಾಗಬೇಕು ಎಂದು ಹರತಾಳ ವನ್ನು ಆಚರಿಸಿ, ಅಂಗಡಿಗಳನ್ನು ಮುಚ್ಚಿ ರಸ್ತೆಯನ್ನು ಬ್ಲಾಕ್‌ಮಾಡಿ, ಎಲ್ಲರೂ ಸೇರಿ ಇಡೀ ಊರಿನಲ್ಲಿ ಮೆರವಣಿಗೆ ಬಂದು, ತಾಲ್ಲೂಕು ಆಫೀಸ್ ಹತ್ತಿರ ಬರಬೇಕಾದರೆ ರಿಸರ್ವ್ ಪೋಲೀಸ್, ಸ್ಟೀಲ್ ಹೆಲ್‌ಮೆಟೆಡ್ ಪೋಲೀಸ್ ಎಲ್ಲರೂ ಬಂದಿದ್ದಾರೆ. ಆವಾಗ ಡೆಪ್ಯುಟಿ ಕಮೀಷನರು ಕೂಡ ಹಾಜರಿದ್ದರು. ಡಿ. ಐ. ಜಿ. ಅವರು ಚನ್ನಗಿರಿಯಿಂದ ಭದ್ರಾವತಿ ಮೂಲಕ ಅಲ್ಲಿಗೆ ಬಂದಿದ್ದರು. ಅವರು ಬಂದಮೇಲೆ ಶ್ರೀ. ವೈ. ಆರ್. ಪರಮೇಶ್ವರಪ್ಪ ಮತ್ತು ಇತರರು ಅವರನ್ನು ಭೇಟಿ ಮಾಡಿದಾಗ ಶಾಂತಿಯಿಂದ ಇರಬೇಕು. ಗಲಾಟೆ ಮಾಡುವುದು ಬೇಡ ಎಂದು ಹೇಳಿದ್ದಾರೆ ಅವರು ಸಮಾಧಾನ ಮಾಡುವುದಕ್ಕೆ ಪ್ರಯತ್ನಪಟ್ಟರು ಡಿ. ಐ. ಜಿ. ಡೆಪ್ಯುಟಿ ಕಮಿಷನರು ಇವರೆಲ್ಲರೂ ಕೂಡ ಸರ್ಕ್ಯೂಟ್ ಹೌಸ್‌ಗೆ ಹೋದರು ಅದು ಈ ಸ್ಥಳದಿಂದ ಸುಮಾರು ಒಂದೂವರೆ ಮೈಲಿ ಆಗುತ್ತದೆ. ಗಲಾಟೆಗೆ ಅವಕಾಶ ಕೊಡಬಾರದು, ಹಾಗೇ ಮಾಡಬೇಕು, ಹೀಗೆ ಮಾಡಬೇಕು, ಎನ್ನುವ ಸ್ಥಿತಿಯಲ್ಲಿ ಇರಬೇಕಾದರೆ, ಡೆಪ್ಯುಟಿ ಕಮಿಷನರು, ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು, ಫೈರಿಂಗ್ ಆರ್ಡರ್ ಕೊಡಬೇಕಾದ ವ್ಯಕ್ತಿ ಇರಬೇಕಾದರೆ, ಫೈರಿಂಗ್ ಆರ್ಡರ್ ಯಾರು ಮಾಡಿದರು? ಫೈರಿಂಗ್‌ನಿಂದ ೬೬ ಜನರಿಗೆ ಬ್ಲೀಡಿಂಗ್ ಇಂಜರೀಸ್ ಆಗಿವೆ, ಎಲ್ಲರನ್ನೂ ತೆಗೆದುಕೊಂಡು ಹೋಗಿ ಅವರಲ್ಲಿ ೨೫–೩೦ ಜನರನ್ನು ಆಸ್ಪತ್ರೆಯಲ್ಲಿ ಅಡ್ಮಿಟ್ ಮಾಡಿದ್ದಾರೆ. ಮಂಗಳವಾರ, ನಿನ್ನೆಯದಿನ, ಶಿವಮೊಗ್ಗ, ಸಂತೆ. ಹಳ್ಳಿಯ ಜನ ವಿಪರೀತವಾಗಿ ಸಂತೆಗೆ ಬಂದಿದ್ದಾರೆ. ಫೈರಿಂಗ್ ಮಾಡಿದಾಗ ಅನೇಕರಿಗೆ ಗಾಯಗಳಾಗಿವೆ. ಇದಕ್ಕೆ ಯಾರು ಜವಾಬ್ದಾರರು ಎಂದು ಕೇಳುತ್ತೇನೆ.

ಫೈರಿಂಗ್ ಆರ್ಡರ್ ಮಾಡಿದ್ದು ಯಾರು ಎನ್ನುವುದು ಗೊತ್ತಾಗಲಿಲ್ಲ. ಅವರಿಗೆ ಯಾರು ಅಧಿಕಾರವನ್ನು ಕೊಟ್ಟರು ಎನ್ನುವುದು ಗೊತ್ತಿಲ್ಲ. ವಿಧಾನ ಪರಿಷತ್ತಿನ ಸದಸ್ಯರು, ಮುನಿಸಿಪಲ್ ಕೌನ್ಸಿಲರುಗಳು, ಮುನಿಸಿಪಲ್ ಪ್ರೆಸಿಡೆಂಟ್, ವೈಸ್ ಪ್ರೆಸಿಡೆಂಟ್ ಎಲ್ಲ ಇದ್ದು ಕೇಳಿದ್ದಾರೆ. ಹೀಗಿರಬೇಕಾದರೆ ಯಾರು ಫೈರಿಂಗ್ ಆರ್ಡರ್ ಕೊಟ್ಟರು? ಡೆಪ್ಯುಟಿ ಕಮಿಷನರು ಫೈರಿಂಗ್ ಆರ್ಡರ್ ಕೊಟ್ಟಿಲ್ಲ? ಹಾಗಾದರೆ ಫೈರಿಂಗ್ ಆರ್ಡರ್ ಯಾರು ಕೊಟ್ಟರು? ಒಂದುವೇಳೆ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಸರ್ಕ್ಯೂಟ್ ಹೌಸಿನಲ್ಲಿದ್ದಾಗ ಸಬ್‌ಡಿವಿಜನಲ್ ಆಫೀಸರಿಗೆ ಆ ಅಧಿಕಾರವನ್ನು ಡೆಲಿಗೇಟ್ ಮಾಡಿದ್ದರೆ? ಹಾಗೆ ಡೆಲಿಗೇಟ್ ಮಾಡಿದ್ದು ಸಬ್‌ಡಿವಿಜನಲ್ ಆಫೀಸರು ಫೈರಿಂಗ್ ಆರ್ಡರ್ ಕೊಟ್ಟಿದ್ದರೆ ಅದು ಬೇರೆ ವಿಷಯ. ಡಿಸ್ಟ್ರಿಕ್ಟ್ ಮ್ಯಾಜಿ-ಸ್ಟ್ರೇಟರು ಊರಿನಲ್ಲಿಯೇ ಇದ್ದರು, ಅವರು ಮೀಟಿಂಗಿಗೆ ಹೋಗಿದ್ದರು. ಆ ಸಂದರ್ಭದಲ್ಲಿ ಗೋಳಿಬಾರು ಆಗಿದೆ. ಏಕೆ ಆಗಿದೆ ಎನ್ನುವ ಪ್ರಶ್ನೆ ಇದೆ? ಇದಕ್ಕೆ ಸರ್ಕಾರದವರು ಉತ್ತರ ಕೊಡಬೇಕು.

ಇಷ್ಟೆಲ್ಲ ಗಲಾಟೆಯಾದ ಮೇಲೆ ಡೆಪ್ಯುಟಿ ಕಮಿಷನರು ವಿಚಾರಣೆ ಮಾಡುತ್ತೇನೆಂದು ತಿರುಗಿ ಬಂದಿದ್ದಾರೆ. ಕಲ್ಲೆಸತ ನಡೆದಿದೆ, ಜನ ತಿರುಗಿ ಹೊಡೆಯಬೇಕಾಗುತ್ತದೆ., ಆತ್ಮ ಸಂರಕ್ಷಣೆಗೆ ತೊಡಗ ಬೇಕಾಗುತ್ತದೆ. ಈ ದೃಷ್ಟಿಯಿಂದ ಜನರು ಕೂಡ ಆ ಸ್ಥಳದಲ್ಲಿ ಕಲ್ಲು ಎಸೆಯುವುದಕ್ಕೆ ಹೋಗಿದ್ದಾರೆ, ಫೈರಿಂಗ್ ಆಗಿದೆಯೆಂದು ಹೆದರಿಕೊಂಡಿದ್ದಾರೆ. ಡೆಪ್ಯುಟಿ ಕಮಿಷನರ ಮನಸ್ಸಿನಲ್ಲಿ ಏನಿತ್ತೋ ಒಬ್ಬ ಪೋಲೀಸಿನವನ ಸ್ಟೀಲ್ ಹೆಲ್‌ಮೆಟ್ ತಲೆಯಮೇಲೆ ಇಟ್ಟು ಒಂದು ಕಲ್ಲು ತೆಗೆದುಕೊಂಡು ಜನರನ್ನು ಓಡಿಸಿಕೊಂಡು ಹೋಗುತ್ತ ಇದ್ದರು. ಅವರು ಆ ಮಾಡುತ್ತಿದ್ದುದು ನಮಗೆ ಚನ್ನಾಗಿ ಕಾಣಿಸುತ್ತಿತ್ತು, ಎದುರು ಕಣ್ಣಿಗೆ ಅಲ್ಲಿನ ಚಿತ್ರ ಸಂಪೂರ್ಣವಾಗಿ ಕಾಣುತ್ತಿತ್ತು. ಕೂಗಿ ಹೇಳಿದರೂ ಅವರಿಗೆ ಕೇಳುವ ಹಾಗೆ ಇರಲಿಲ್ಲ ಅವರು ಕಲ್ಲು ತೆಗೆದುಕೊಂಡು ಜನರನ್ನು ಅಟ್ಟಿಸಿಕೊಂಡು ಹೋದರು. ಇದು ನಮ್ಮ ಕಣ್ಣು ಮುಂದೆ ನಡೆದಿರುವ ವಿಷಯ. ಅನೇಕ ಜನ, ಸಾವಿರಾರು ಜನ ಕಣ್ಣಾರೆ ನೋಡಿದ್ದಾರೆ. ಪೋಲೀಸ್ ಸೂಪರಿಂಟೆಂಡೆಂಟ್ ದೊಣ್ಣೆ ಹಿಡಿದುಕೊಂಡು ಹೊಡೆಯುವುದನ್ನು ಕಣ್ಣಾರೆ ಕಂಡಿದ್ದೇವೆ. ಡೆಪ್ಯುಟಿ ಕಮಿಷನರು ಮತ್ತು ಪೋಲೀಸ್ ಸೂಪರಿಂಟೆಂಡೆಂಟ್ ಆದವರೇ ಹೀಗೆ ಮಾಡಿದರೆ ಉಳಿದವರ ವಿಚಾರವನ್ನು ಹೇಳಬೇಕಾಗಿಯೇ ಇಲ್ಲ. ಲಾಠಿ ಚಾರ್ಜು ಹೇಗೆ ಮಾಡಬೇಕು, ಫೈರಿಂಗ್ ಹೇಗೆ ಮಾಡಬೇಕು. ಎಂದು ಟ್ರೇನಿಂಗ್ ಕೊಟ್ಟಿಲ್ಲ. ಸುಮಾರು ೭೬–೭೭ ಜನಗಳಿಗೆ ಏಟು ಪೆಟ್ಟಾಗಿದೆ., ೧೧ ಜನಗಳಿಗೆ ಬುಲೆಟ್ ಇಂಜರೀಸ್ ಆಗಿವೆ. ಮೂರುಜನ ಸೀರಿಯಸ್ ಆಗಿ ಆಸ್ಪತ್ರೆಯಲ್ಲಿದ್ದಾರೆ ಒಬ್ಬನು ಇಷ್ಟರಲ್ಲಿ ತೀರಿ ಹೋಗಿದ್ದಾನೆಂದು ಅನ್ನಿಸುತ್ತದೆ. ಅವನ ಹೊಟ್ಟೆಯಲ್ಲಿ ಬುಲೆಟ್ ಇದೆ. ಮುಸ್ಲಿಂ ಯುವಕ, ೨೫–೨೬ ವರ್ಷ ವಯಸು ಇರಬಹುದು. ಅನ್ಯಾಯವಾಗಿ ಬುಲೆಟ್‌ನಿಂದ ಹೊಡೆದಿದ್ದಾರೆ. ಏಳೆಂಟು ಜನ ಹಿಂದುಗಳು ಕೂಡ ಅವನ ಪ್ರಾಣವನ್ನು ಉಳಿಸಲು ರಕ್ತ ಕೊಟ್ಟಿದ್ದಾರೆ. ಅವನನ್ನು ಉಳಿಸಲು ಎಲ್ಲಾ ಜಾತಿಯವರೂ ಸತತ ಪ್ರಯತ್ನ ಮಾಡುತ್ತಿದ್ದಾರೆ. ಅವನು ಉಳಿಯುತ್ತಾನೋ ಇಲ್ಲವೋ ಗೊತ್ತಿಲ್ಲ. ಉಳಿಯುವುದಿಲ್ಲ. ಎನ್ನುವ ವರ್ತಮಾನವನ್ನು ಡಿಸ್ಟ್ರಿಕ್ಟ್ ಸರ್ಜನ್ ಅವರು ಕೊಟ್ಟಿದ್ದರು. ಅವನು ಉಳಿದರೆ ಬಹಳ ಸಂತೋಷ, ತಾವೂ ಕೂಡ ಸಂತೋಷ ಪಡುತ್ತೀರಿ ಎನ್ನುವ ವಿಷಯ ನನಗೆ ಗೊತ್ತಿದೆ.

ಅಲ್ಲಿ ಪೋಲಿಸರು ಷೆಲ್ ಪ್ರಯೋಗ ಮಾಡಿದ್ದಾರೆ. ಎಸ್ಸೆಸ್ಸೆಲ್ಸೀ ಪರೀಕ್ಷೆ ಕಟ್ಟಿದಂಥ ಒಂದು ಹುಡುಗಿಯು ದಾರಿಯಲ್ಲಿ ಹೋಗುತ್ತಿರುವಾಗ್ಗೆ ಆ ಹುಡುಗಿಗೆ ಷೆಲ್ ಬಂದು ಬಡಿದಿದೆ. ಯಾರಿಗೆ ಷೆಲ್ ಹೊಡೆಯಬೇಕು ಎನ್ನುವುದು ಪೋಲೀಸಿನವರಿಗೆ ಗೊತ್ತಿಲ್ಲ, ನಿರಪರಾಧಿ ಹುಡುಗಿಗೆ ಷೆಲ್ ಬಡಿದಿದೆ. ಇಷ್ಟೆ ಅಲ್ಲದೆ ಹಲವರಿಗೆ ಷೆಲ್ ಏಟು ಬಿದ್ದಿದೆ. ಅಲ್ಲಿ ಗಲಾಟೆ ಇದ್ದುದರಿಂದ ಮುಖಂಡರನ್ನು ಕಾಂಟಾಕ್ಟ್ ಮಾಡಲು ನನಗೆ ಸಾಧ್ಯವಾಗಲಿಲ್ಲ. ಆ ಗಲಾಟೆಯನ್ನು ತಾನು ಕಂಟ್ರೋಲಿಗೆ ತಂದೆನು ಎಂದು ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟರು ಹೇಳಿದ್ದಾರೆ. ಅಲ್ಲಿ ಬಹಳ ಜನ ಸುತ್ತುವರಿದಿದ್ದರು. ಜನರ ರಕ್ಷಣೆಗೋಸ್ಕರ ಮಾಡಬೇಕಾದ ಕೆಲಸ ಅಂದರೆ ಇದು ಅವರ ವರ್ತನೆಯೇ ? ಈ ರೀತಿ ಮಾತನಾಡತಕ್ಕಂಥಾದ್ದನ್ನು ಅಲ್ಲಿದ್ದ ಸಾವಿರಾರು ಜನ ಕೇಳಿದ್ದಾರೆ ಕಣ್ಣಾರೆ ಅದನ್ನು ನೋಡಿದ್ದಾರೆ ಇದಕ್ಕೆ ಏನುಕಾರಣ? ಜನ ಅಂದರೆ ಕುರಿ ಎಂದು ಅವರು ಭಾವಿಸಿದ್ದಾರೆಯೆ ? ಫೈರಿಂಗ್ ಮಾಡುವುದಕ್ಕೆ ಕಾರಣ ಏನು ? ತಾಲ್ಲೂಕ್ ಆಫೀಸಿಗೆ ಬೆಂಕಿ ಹಚ್ಚುವುದಕ್ಕೆ ಜನ ಹೋಗಿದ್ದರು ಎಂದು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಅದು ಸರಿಯಾದ ಹೇಳಿಕೆಯಲ್ಲ. ಪತ್ರಿಕೆಗಳಲ್ಲಿ ಹೇಳಿಕೆ ಕೊಟ್ಟು ಈ ರೀತಿ ಪ್ರಚಾರ ಮಾಡುವುದು ಸರಿಯಲ್ಲ. ಯಾವ ಆಫೀಸಿನಲ್ಲೂ ಯಾವ ಫೈಲೂ ಸುಟ್ಟಿಲ್ಲ. ಜನ ಬೆಂಕಿನೂ ಹಚ್ಚಿಲ್ಲ, ಕಲ್ಲನ್ನೂ ಹೊಡೆದಿಲ್ಲ. ಶಾಂತಿಯಿಂದ ವರ್ತನೆ ಮಾಡತಕ್ಕಂಥ ಜನರ ಮೇಲೆ ಷೆಲ್ ಪ್ರಯೋಗ ಮಾಡಿದ್ದಾರೆ, ಬುಲೆಟ್ ಹಾಕಿದ್ದಾರೆ, ಇಷ್ಟೊಂದು ಅನ್ಯಾಯ ಮಾಡಿದ್ದಾರೆ. ಪೋಲೀಸ್ ಆಕ್ಟ್ ಸೆಕ್ಷನ್ ೩೫ ಪ್ರಕಾರ ಜಾರಿಮಾಡಿದ್ದಾರೆ ಪೂರ್ತಿ ನಗರದಲ್ಲೆಲ್ಲಾ ಟೆನ್‌ಷನ್ ಇದೆ. ಶಿವಮೊಗ್ಗದಲ್ಲಿ ನಡೆದ ಇಷ್ಟೆಲ್ಲಾ ಘಟನೆಬಗ್ಗೆ ತಮ್ಮ ಅವಗಾಹನೆಗೆ ತಂದಿದ್ದೇನೆ. ಇಬ್ಬರು ಅಧಿಕಾರಿಗಳನ್ನು ಸಸ್ಪೆಂಡ್ ಮಾಡಬೇಕು ಎಂದು ಜನರ ಬೇಡಿಕೆ ಇದೆ. ಆದರೆ ಇದನ್ನು ಸರಿಯಾದ ರೀತಿಯಲ್ಲಿ ಪರಿಶೀಲನೆ ಮಾಡದೆ, ಮತ್ತು ಅವರು ತಪ್ಪಿತಸ್ಥರು ಎಂದು ತೀರ್ಮಾನವಾಗದೆ ಅವರನ್ನು ಡಿಸ್‌ಮಿಸ್ ಮಾಡುವ ಹಾಗೆ ಇಲ್ಲ. ಆದುದರಿಂದ ಅವರನ್ನು ಮೊದಲು ಸಸ್ಪೆಂಡ್ ಮಾಡಬೇಕು ಮತ್ತು ಈ ಘಟನೆ ನ್ಯಾಯಾಂಗ ತನಿಖೆಗೆ ಒಳಪಡಿಸ ಬೇಕು. I believe he will rise to the oc:asion and come to the con lusion that the judicial enquiry in the matter is a n-cesssity. ಈ ತೀರ್ಮಾನಕ್ಕೆ ಅವರು ಬರುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಇದಕ್ಕೆ ಬೇಕಾದಷ್ಟು ಸಾಕ್ಷಿ ಕೊಡುತ್ತೇವೆ. ಪುನಃ ಒತ್ತಾಯ ಪೂರ್ವಕ ಹೇಳುವುದು ಏನೆಂದರೆ, ಈ ಬಗ್ಗೆ ಜ್ಯುಡಿಷಿಯಲ್ ಇನ್‌ಕ್ವಾಯೆರಿ ಆಗ ಬೇಕು. ಅಲ್ಲಿಯ ಅಧಿಕಾರಿಗಳನ್ನು ಕೂಡಲೇ ಸಸ್ಪೆಂಡ್ ಮಾಡಬೇಕು. ಹಾಗು ೨೪ ಗಂಟೆಯಲ್ಲಿ ಅಧಿಕಾರಿಗಳನ್ನು ಟ್ರಾನ್ಸಫರ್ ಮಾಡಬೇಕು ಎಂದು ಈ ವಿಷಯ್ಯ ಪ್ರಸ್ತಾಪ ಮಾಡಿದ್ದೇನೆ. ಕೊನೆಯದಾಗಿ ಮತ್ತೊಮ್ಮೆ ಜ್ಯುಡೀಷಿಯಲ್ ಇನ್‌ಕ್ವಾಯರಿ ಮಾಡಬೇಕು ಎಂದು ಹೇಳಿ, ನನ್ನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ-ಅಧ್ಯಕ್ಷರಿಗೆ ವಂದನೆಗಳನ್ನು ಅರ್ಪಿಸಿ ನನ್ನ ಮಾತು ಮುಗಿಸುತ್ತೇನೆ.

†ಶ್ರೀ ಎಚ್. ಎನ್. ನಂಜೇಗೌಡ :— ಮಾನ್ಯ ಅಧ್ಯಕ್ಷರೇ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರ ದೇಶದಲ್ಲಿ ಪೋಲೀಸ್ ದೌರ್ಜನ್ಯ ಹೆಚ್ಚಾಗಿದೆ. ನಮ್ಮ ವೀರೇಂದ್ರ ಪಾಟೀಲರವರು ಗೃಹ ಖಾತೆ ವಹಿಸಿಕೊಂಡು ನಂತರ ಪ್ರತಿಯೊಂದು ದಿನವೂ ಗೋಳೀಬಾರ್ ಆಯಿತ್ತು, ಬುಲೆಟ್ ಹೇಟು ಬಿದ್ದು ಜನ ಸತ್ತರು ಎಂದು ವರ್ತಮಾನ ಬರುತ್ತಿರುವುದರಿಂದ ನಾವು ತಲೆ ತಗ್ಗಿಸಬೇಕಾದ ಮಟ್ಟಕ್ಕೆ ಬಂದಿದ್ದೇವೆ. ಪೋಲೀಸರು ಮಿತಿ ಮೀರಿ ವರ್ತಿಸುವುದರಿಂದ ಇಂಥ ಪರಿಸ್ಥಿತಿ ಉದ್ಭವವಾಗಿದೆ. ಹಿಂದಕ್ಕೆ ಇಂಥಾದ್ದು ಅಪರೂಪವಾಗಿತ್ತು, ಆದರೆ ಇವತ್ತು ಪ್ರತಿ ದಿನ ಪೋಲೀಸರು ಹದ್ದು ಮೀರಿ ವರ್ತಿಸುತ್ತಿದ್ದಾರೆ. ಇವತ್ತು ರಾಜ್ಯಾಂಗ ಬಾಹಿರವಾದ ಕೆಲಸಗಳನ್ನು ಪೋಲೀಸಿನವರು ಮಾಡುತ್ತಿದ್ದಾರೆ. ಇದರ ಬಗ್ಗೆ ಕಣ್ಣು ಮುಚ್ಚಿಕೊಂಡು ಕೂತಿರಲು ಆಗುವುದಿಲ್ಲ. ರಾಜ್ಯಾಂಗದಲ್ಲಿ ಇರತಕ್ಕಂಥ ಮೂಲ ಭೂತ ರಕ್ಷಣೆಗೆ ಗಮನ ಕೊಡುತ್ತಿಲ್ಲ. ಶ್ರೀಮಾನ್ ಒಗಾಂರಪ್ಪನವರು ಹೇಳಿದರು, ಇಬ್ಬರು ವ್ಯಕ್ತಿಗಳನ್ನು ಅಂದರೆ ಸತ್ಯನಾರಾಯಣ ಮತ್ತು ಅವರ ಶ್ರೀಮತಿಯುವರನ್ನು ಪೋಲೀಸಿನವರು ಹಿಡಿದುಕೊಂಡು ಹೋದರು ಎಂದು. ರಾಜ್ಯಾಂಗದಲ್ಲಿ ಚಾಪ್ಟರ್ ೩, ಆರ್ಟಿಕಲ್ ೨೧ರಲ್ಲಿ ಮೂಲ ಭೂತ ಹಕ್ಕು ಈ ರೀತಿ ಇದೆ.

Article 21 :

"No person shall be deprived of his l fe or pers nal lederty except according to procedure established by law."

ರಾಜ್ಯಾಂಗ ದತ್ತವಾದ ಮೂಲ ಭೂತ ಹಕ್ಕನ್ನು ರಕ್ಷಣೆ ಮಾಡುವುದರ ಬದಲು ಪೋಲೀಸಿನವರು ಈ ಹಕ್ಕನ್ನು ಮೊಟಕು ಮಾಡುವ ರೀತಿಯಲ್ಲಿ ಮದ್ಯ ಕುಡಿದು ದೌರ್ಜನ್ಯ ನಡೆಸತಕ್ಕಂತಾದ್ದು ಯಾವ ರಾಜ್ಯಾಂಗಕ್ಕೆ ಅನುಗುಣವಾಗಿದೆ? ಕುಡಿದ ಅಮಲಿನಲ್ಲಿ ಪೋಲೀಸ್ ಸ್ಟೇಷನ್ನಿಗೆ ಕರೆದುಕೊಂಡು ಹೋಗುವುದು, ಅವಮಾನ ಮಾಡುವುದು. ಇದು ಶಿವಮೊಗ್ಗದಲ್ಲಿ ಪ್ರತ್ಯೇಕವಾಗಿ ಕಂಡುಬಂದಿದೆ. ಪೋಲೀಸರ-ರಾಜ್ಯಾಂಗಕ್ಕೆ ವಿರೋಧವಾಗಿ ನಡೆಯುತ್ತಿದ್ದಾರೆ. ಆದುದರಿಂದು ಇದರ ಬಗೆ ಈ ಮಾನ್ಯ ಸಭೆ ಕಣ್ಣು ಮುಚ್ಚಿಕೊಂಡು ಕೂತುಕೊಳ್ಳ ಬಾರದು.

ದೇಶದಲ್ಲಿರತಕ್ಕ ಯಾವ ಒಬ್ಬ ಪ್ರಜೆಗೇ ಆಗಲಿ ರಾಜ್ಯಾಂಗದಲ್ಲಿ ಹೇಳಿರತಕ್ಕ ಆರ್ಟಿಕಲ್ ೧೯ರ ಒಳ ಆರ್ಟಿಕಲ್ (ಎ) (೧) ರ ಪ್ರಕಾರ ಹಾಗೂ ಆರ್ಟಿಕಲ್ ೧೯ರ ಪ್ರಕಾರ ಬಹಿರಂಗವಾಗಿ ಸಭೆಗಳನು ನಡೆಸುವುದಕ್ಕೂ ಮತ್ತು ಅಲ್ಲಿ ಭಾಷಣಗಳನ್ನು ಮಾಡತಕ್ಕ ವಾಕ್ ಸ್ವಾತಂತ್ರ್ಯಕ್ಕೂ ಹಕ್ಕನ್ನು ಪಡೆದವರಾಗಿದ್ದಾರೆ. ಇದು ರಾಜ್ಯದ ಎಲ್ಲ ಪ್ರಜೆಗಳಿಗೂ ಇರತಕ್ಕ ಒಂದು ಮೂಲಭೂತವಾದ ಹಕ್ಕು. ಈ ದಿವಸ ರಾಜ್ಯದಲ್ಲಿ ನಡೆಯುತ್ತಿರುವ ಅವ್ಯವಹಾರಗಳನ್ನು ಅಂದರೆ ಪೋಲೀಸರಿಂದ ಜರುಗುತ್ತಿರುವ ಅನಾಹುತಗಳನ್ನು ನೋಡಿದರೆ ನಮ್ಮ ರಾಜ್ಯದಲ್ಲಿ ಪ್ರಜಾಪ್ರಭುತ್ವ ಇದ್ದ ಹಾಗೆ ನಮಗೆ ಕಂಡುಬರುತ್ತಿಲ್ಲ. ಪೋಲಿಸಿನವರು ನಡೆಸಿರತಕ್ಕ ಅವ್ಯವಹಾರಗಳನ್ನೆಲ್ಲಾ ಪ್ರಜಾವಾಣಿ, ಪಿ.ಟಿ.ಐ. ಮತ್ತು ಕೌನ್ಸಿಲರ್—ಎಂಬ ಪತ್ರಿಕೆಗಳಲ್ಲಿ ವರದಿಯಾಗಿದೆ. ಜನರು ಹೀಗೆಲ್ಲಾ ಒಂದು ಸಭೆಯನ್ನು ಮಾಡಿದರೆ ಪೋಲೀಸಿನವರು ಅವರ ಮೇಲೆ ಕಣ್ಣಿಟ್ಟು, ಅವರನ್ನು ಕಾದು ಹೀಗೆ ಅವರಿಗೆ ತೊಂದರೆಗಳನ್ನು ಕೊಡತಕ್ಕದ್ದು ಒಂದು ಸಾಮಾನ್ಯ ವ್ಯವಹಾರವಾಗಿದೆ. ಹಾಗೇ ಇಲ್ಲಿಯೂ ಪೋಲೀಸಿನವರು ಇವರ ಮೇಲೆ ಕಣ್ಣಿಟ್ಟು, ಇವರು ರಾತ್ರಿ ಹೊರಗಡೆಗೆ ಗಾಳಿಸೇವನೆಗೆ ಹೋಗಿ ವಾಪಸ್ ಮನೆಗೆ ಬರುತ್ತಿದ್ದ ಕಾಲದಲ್ಲಿ, ಆರ್ಟಿಕಲ್ ೨೧ ಪ್ರಕಾರ ಯಾವಾಗ ಬೇಕಾದರೂ ಹೊರಗಡೆ ತಿರುಗಾಡುವುದಕ್ಕೆ ನಾಗರೀಕರಿಗೆ ಹಕ್ಕಿದೆ, ಅವರನ್ನು ಹಿಡಿದು ಅವರ ಮೇಲೆ ಒಂದು ರಯಟಿಂಗ್ ಕೇಸ್‌ಗೆ ಅವರನ್ನು ಬುಕ್ ಮಾಡಿದ್ದಾರೆ. ಪೋಲೀಸರ ದೌರ್ಜನ್ಯ ಇತ್ತೀಚೆಗೆ ಜಾಸ್ತಿಯಾಗಿದೆ. ರಾಜ್ಯಾಂಗದಲ್ಲಿ ಮೂರನೆ ಚಾಪ್ಟರಿನಲ್ಲಿ ನಾಗರೀಕರಿಗೆ ಕೊಟ್ಟಿರತಕ್ಕ ಮೂಲಭೂತ ಹಕ್ಕುಗಳನ್ನು ಪೋಲೀಸಿನವರು ಭಕ್ಷಣ ಮಾಡುತ್ತಿದ್ದಾರೆ. ಪೋಲೀಸಿನವರು ಹಕ್ಕನ್ನು ರಕ್ಷಣೆ ಮಾಡುತ್ತಿಲ್ಲ. ಅದನ್ನವರು ಭಕ್ಷಣೆ ಮಾಡುತ್ತಿದ್ದಾರೆ. ಇದು ನಮ್ಮೆಲ್ಲರಿಗೂ ನಾಚಿಕೆಗೇಡಿನ ಕೆಲಸ. ಇದಕ್ಕೆ ಈ ಸಭೆಯ ಪ್ರತಿ ಒಬ್ಬ ಸದಸ್ಯನೂ ತಲೆತಗ್ಗಿಸಬೇಕಾಗಿದೆ. ಇನ್ನು ಮುಂದಕ್ಕಾದರೂ ಇಂಥ ಕೆಲಸಕ್ಕೆ ಅವಕಾಶವಾಗದಿರಲಿ ಎಂದು ಆಶಿಸುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳಿಗೆ ಈ ಇಲಾಖೆಯಲ್ಲಿ ಆಡಳಿತ ದಕ್ಷತೆಯಿಂದ ಸಾಗುವಂತೆ ನೋಡಿಕೊಳ್ಳುವುದಕ್ಕೆ ಅವರಿಗೆ ಕೆಲಸಗಳ ಒತ್ತಡದಿಂದ ಬಿಡುವು ಇಲ್ಲದಿದ್ದರೆ ಅವರು ಈ ಗೃಹಖಾತೆಯನ್ನು ದಕ್ಷರಾದವರಿಗೆ ಬೇರೆ ಯಾರಿಗಾದರೂ ವಹಿಸಬೇಕೆಂದು ಹೇಳುತ್ತೇನೆ. ಇಲ್ಲವೇ ಅವರು ಇದಕ್ಕೆ ಸಾಕಷ್ಟು ಗಮನಕೊಟ್ಟು ಈ ಅವ್ಯವಹಾರವನ್ನು ಕೂಡಲೆ ತಪ್ಪಿಸಬೇಕೆಂದು ಹೇಳುತ್ತೇನೆ. ಪೋಲೀಸಿನವರನ್ನು ಬೇಟೆ ನಾಯಿಗಳನ್ನು ಸರಪಳಿಯಲ್ಲಿ ಯಾವಾಗಲೂ ಕಟ್ಟಿರುವಂತೆ ಈ ಪೋಲೀಸರನ್ನು ಸದಾ ಹದ್ದುಬಸ್ತಿನಲ್ಲಿಟ್ಟಿದ್ದರೆ ಸರಿ, ಇಲ್ಲವಾದರೆ ಇವರಿಂದ ದೇಶಕ್ಕೆ ಮರ್ಯಾದೆ ಬರುವುದಿಲ್ಲ. ಪೋಲೀಸರ ಕೆಲಸಗಳಿಂದ ನಾವು ತಲೆತಗ್ಗಿಸಬೇಕಾಗಿದೆ. ದಿನಬೆಳಗಾದರೆ ಪತ್ರಿಕೆಗಳಲ್ಲಿ ಈ ಪೋಲೀಸಿನವರು ಗುಂಡು ಹಾರಿಸಿದ ವಿಚಾರ ಇಲ್ಲದ ದಿನವಿಲ್ಲ ; ಪತ್ರಿಕೆಯಿಲ್ಲ. ಇದನ್ನು ತಡೆಗಟ್ಟುವುದಕ್ಕೆ ಸರ್ಕಾರದವರು ಕೂಡಲೆ ಪ್ರಬಲವಾದ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು. ಈ ವಿಚಾರದಲ್ಲಿ ನಮ್ಮ ಮುಖ್ಯಮಂತ್ರಿಗಳು

ಪ್ರೊಸೀಜರನ್ನು ನೋಡುತ್ತಾ ಕುಳಿತರೆ ಸಾಧ್ಯವಿಲ್ಲ. ಅವರನ್ನು ಮಟ್ಟಹಾಕಲೇಬೇಕು. ಪ್ರಜಾರಾಜ್ಯದಲ್ಲಿ ಪ್ರಜೆಗಳೇ ರಾಜರೆಂಬುದನ್ನು ಪೋಲೀಸಿನವರಿಗೆ ಮನವರಿಕೆಯಾಗುವಂತೆ ಮಾಡಬೇಕಾದ್ದು ಇಂದು ಅತ್ಯವಶ್ಯಕ. ಇಲ್ಲವಾದರೆ ದಿನಬೆಳಗಾದರೆ ರಾಜ್ಯದಲ್ಲಿ ನಾಚಿಕೆಗೇಡಿನ ಕೆಲಸಗಳು ಹೀಗ್ಗೆ ನಡೆಯುತ್ತಿರುತ್ತಿವೆ. ಮೊನ್ನೆ ಮಧುಗಿರಿಯಲ್ಲೂ ಹೀಗೆ ಆದದ್ದು. ಆ ಮಧುಗಿರಿ ಪ್ರಕರಣದಲ್ಲಿ ಮಂತ್ರಿಗಳಾಗಿದ್ದ ರಾಮರಾಯರು ರಾಜೀನಾಮೆ ಕೊಟ್ಟರು. ಈಗಲೂ ಸಹಾ ಅಂಥ ಕ್ರಮಕೈಗೊಳ್ಳುವುದಕೇ ಅವಕಾಶವುಂಟಾಗಿದೆ. ಮೊನ್ನೆ ನೆಲಮಂಗಲದಲ್ಲೂ ಹೀಗೆ ನಡೆಯಿತು. ಆದ್ದರಿಂದ ಪೋಲೀಸಿನವರನ್ನು ಹದ್ದುಬಸ್ತಿನಲ್ಲಿಡುವುದಕ್ಕೆ ಕೂಡಲೆ ಕ್ರಮಗಳನ್ನು ಕೈಗೊಳ್ಳಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎ. ಆರ್. ಬದರಿನಾರಾಯಣ್ (ಶಿವಮೊಗ್ಗ).—ಸನ್ಮಾನ್ಯ ಅಧ್ಯಕ್ಷರೇ, ನಾನೂ ಕೂಡ ಆ ಶಿವಮೊಗ್ಗ ನಗರದಲ್ಲಿ ನಡೆದ ದುರ್ಘಟನೆಯ ಬಗ್ಗೆ ಒಂದು ಅವಸರದ ನಿರ್ಣಯವನ್ನು ಕಳುಹಿಸಿದ್ದೇನೆ. ಈ ವಿಚಾರದಲ್ಲಿ ಪ್ರತ್ಯಕ್ಷವಾಗಿ ಸ್ಥಳದಲ್ಲಿದ್ದು ಹಾಗೂ ಅಲ್ಲಿ ನಡೆದ ಘಟನೆಗಳನ್ನು ಕಣ್ಣಲ್ಲಿ ಕಂಡ ಶ್ರೀ ಬಂಗಾರಪ್ಪನವರು ಈಗಾಗಲೇ ಎಲ್ಲ ವಿಚಾರಗಳನ್ನೂ ವಿಷದವಾಗಿ ತಿಳಿಸಿದ್ದಾರೆ. ಅವರು ವಿಷದವಾಗಿ ಎಲ್ಲವನ್ನೂ ೪೫ ನಿಮಿಷಗಳ ಕಾಲ ತಿಳಿಸಿರುವುದರಿಂದ ನಾನು ಅವುಗಳನ್ನು ಮತ್ತೆ ಪುನರುಕ್ತಿ ಮಾಡುವುದಕ್ಕೆ ಹೋಗದೆ ಕೆಲವು ಬೇರೆ ವಿಷಯಗಳನ್ನು ತಿಳಿಸಬೇಕೆಂದು ಈಗ ನಿಂತಿದ್ದೇನೆ. ಈ ವಿಚಾರವಾಗಲಿ ಅಥವಾ ಮತ್ತೆ ಯಾವ ಒಂದು ವಿಚಾರವೇ ಆಗಲಿ ನಾನೂ ಯಾವತ್ತೂ ಯಗ್ಜಾಜರೇಷನ್ ಮಾಡಿ ಹೇಳತಕ್ಕ ರೂಢಿ ನನಗಿಲ್ಲ. ಆದರೆ ನಾನೀದಿವಸ ಎದ್ದು ನಿಂತಿರುವುದು ಕೆಲವು ಮಾತುಗಳನ್ನು ಹೇಳಿ ದೇಶ ಪ್ರಜಾಪ್ರಭುತ್ವದಲ್ಲಿ ಎತ್ತ ಸಾಗುತ್ತಿದೆ ಎಂಬುದನ್ನೂ ಮತ್ತು ಪೋಲೀಸಿನವರ ದೌರ್ಜನ್ಯ ಎಷ್ಟರಮಟ್ಟಿಗೆ ನಡೆಯುತ್ತಿದೆ ಎಂಬುದನ್ನೂ ತಿಳಿಸುವುದಕ್ಕೆ ನಿಂತಿದ್ದೇನೆ. ಶಿವಮೊಗ್ಗದಲ್ಲಿ ನಡೆದಂಥ ದೊಡ್ಡ ದುರ್ಘಟನೆಗಳಲ್ಲಿ ಇದೇ ಪ್ರಪ್ರಥಮವಾದುದೆಂದು ಹೇಳುತ್ತಿದ್ದೇನೆ. ಸಾಮಾನ್ಯವಾಗಿ ಆ ಮಲೆನಾಡಿನ ಜನ ಅಂದರೆ ಶಿವಮೊಗ್ಗ ಜಿಲ್ಲೆಯ ಜನ ಬಹಳ ಸಭ್ಯರು. ಈಗ ನಾವು ಈ ದುರ್ಘಟನೆಗೆ ಹಿನ್ನೆಲೆಯೇನು ಎಂಬುದನ್ನು ವಿಮರ್ಶೆ ಮಾಡಬೇಕಾಗಿದೆ. ಇತ್ತೀಚೆಗೆ ಶಿವಮೊಗ್ಗದಲ್ಲಿ ಬಹಳ ಅನೀತಿಯುತವಾದ ಹಾಗೂ ಅನ್ಯಾಯವಾದ ಕೆಲಸಗಳು ನಡೆಯುತ್ತಿವೆ ಈ ವಿಚಾರದಲ್ಲಿ ನಾನು ಮಾನ್ಯ ಮುಖ್ಯಮಂತ್ರಿಗಳಿಗೂ ಮತ್ತು ಮಾನ್ಯ ಗೃಹಶಾಖೆಯ ಉಪ-ಮಂತ್ರಿಗಳಿಗೂ ಪತ್ರ ಬರೆದಿದ್ದೇನೆ; ಅಲ್ಲಿ ನಡೆಯತಕ್ಕ ಅಕೃತ್ಯಗಳನ್ನೆಲ್ಲಾ ಅವರ ಗಮನಕ್ಕೆ ತಂದಿದ್ದೇನೆ. ಇಲ್ಲಿಗೆ ಮೂರು ತಿಂಗಳ ಹಿಂದೆ ಅನಾಥ ಹೆಂಗಸಿನ ಮಗಳನ್ನು ಆಕೆಯ ಅಳಿಯ ವಿನಾಕಾರಣ ನಾಲೆಗೆ ತಳ್ಳಿ ತನ್ನ ಹೆಂಡತಿಯನ್ನು ಕೊಂದು ಹಾಕಿದ್ದಾನೆ. ಆ ಬಡ ಹೆಂಗಸು ಆಗಾಗ್ಗೆ ನನ್ನ ಬಳಿ ಬಂದು ಬಡಿದುಕೊಳ್ಳುತ್ತಿದ್ದಾಳೆ. ಈ ವಿಚಾರವನ್ನೂ ಕೂಡ ನಾನು ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ಅಲ್ಲಿನ ಸ್ಥಳೀಯ ಪೋಲೀಸರಿಗೂ ದೂರನ್ನು ಆಕೆ ಕೊಟ್ಟಿದ್ದಳು. ಆದರೆ ಪೋಲೀಸಿನವರು ಆ ಕೇಸಿನಲ್ಲಿ "ಬಿ" ಷೀಟನ್ನು ಕೊಟ್ಟಿದ್ದಾರೆ. ಆ ಮರಣಹೊಂದಿದ ಹೆಂಗಸಿನ ತಾಯಿ ಪೋಲೀಸರಲ್ಲಿ ಖುದ್ದಾಗಿ ಸಾಕ್ಷ್ಯಕೊಟ್ಟು ಆಕೆಯ ಅಳಿಯ ಉದ್ದೇಶಪೂರ್ವಕವಾಗೇ ಆಕೆಯ ಮಗಳನ್ನು ಕೊಂದು ಹಾಕಿದ್ದಾನೆಂದು ಸಾಕ್ಷ್ಯ ಕೊಟ್ಟರೂ ಆ ಕೇಸನ್ನು ವಿಚಾರಣೆನೇ ಮಾಡದೆ "ಬಿ" ಷೀಟನ್ನು ಹಾಕಿದ್ದಾರೆ. ಹೀಗೇ ಇನ್ನೂ ಅಲ್ಲಿ ೨—೩ ಖೂನಿ ಕೇಸುಗಳು ನಡೆದವುಗಳನ್ನು ಪೋಲೀಸರೇ ಮುಚ್ಚಹಾಕಿದ್ದಾರೆ. ಇನ್ನು ಆ ಶಿವಮೊಗ್ಗ ಟೌನಿನಲ್ಲಿ ಹಗಲಲ್ಲೇ ಆ ರೋಮಿಯೋಗಳ ಭಾಧೆಯನ್ನು ಶಾಲಾ ಬಾಲಕಿಯರಿಗೂ ಕಾಲೇಜ್ ಬಾಲಕಿಯರಿಗೂ ಹೇಳತೀರದಾಗಿದೆ. ಆ ರೋಮಿಯೋಗಳ ಕಾಟದಿಂದ ಜನ ಅಲ್ಲಿ ಬಹಳ ನೊಂದಿದ್ದಾರೆ. ಪೋಲೀಸಿನವರು ಈ ವಿಚಾರದಲ್ಲಿ ಯಾವ ಆಕ್ಷನ್ನನ್ನೂ ತೆಗೆದುಕೊಂಡಿಲ್ಲ, ನಾನು ಆ ಸತ್ಯನಾರಾಯಣ ಎಂಬುವವರನ್ನು ಬಲ್ಲೆ. ಅವರಿಗೆ ಸುಮಾರು ೪೦ ವರ್ಷ ವಯಸ್ಸಾಗಿದೆ. ಅವರಿಗೆ ಈಗ ೧೫ ವರ್ಷದ ಹಾಗೂ ೧೦ ವರ್ಷದ ಇಬ್ಬರು ಮಕ್ಕಳಿದ್ದಾರೆ. ಅವರು ಹವಾಕ್ಕೆ ಹೊರಗೆ ಹೋಗಿದ್ದರೇ ವಿನಾ ಬೇರೇನೂ ಇಲ್ಲ. ಅವರು ಮನೆಗೆ ಬರುತ್ತಿದ್ದಾಗ ಅವರನ್ನು ನೀವು ಕುಡಿದಿದ್ದೀರಿ ಎಂದು ಅಲ್ಲಿ ಹೋಗುತ್ತಿದ್ದ ಪೋಲೀಸಿನವರು ತಾವು ಕುಡಿದು ಪ್ರಜ್ಞೆಯಿಲ್ಲದಿದ್ದರೂ ಆ ಸತ್ಯನಾರಾಯಣ ಮತ್ತು ಅವರ ಕುಟುಂಬದವರನ್ನೂ ಪೋಲೀಸ್ ಸ್ಟೇಷನ್ನಿಗೆ ಕರೆದುಕೊಂಡು ಹೋಗಿ ಅವರನ್ನು ಹೊಡೆದು ಅವರಲ್ಲಿದ್ದ ೩೦ ರೂ.ಗಳನ್ನು ಕಿತ್ತುಕೊಂಡು ಅವರಿಗೆ ಅವಮಾನ ಮಾಡಿದ್ದಾರೆ. ಅಲ್ಲಿನ ಮುನಿಸಿಪಲ್ ಸದಸ್ಯರಿಗೂ ಹೀಗಾಗಿದೆ.

6-00 P.M.

ಇತ್ತೀಚೆಗೆ ಅಲ್ಲಿ ಕಳವುಗಳು ಜಾಸ್ತಿಯಾಗುತ್ತಿವೆ, ಅನ್ಯಾಯಗಳು ಜಾಸ್ತಿಯಾಗುತ್ತಿವೆ, ಇದನ್ನು ತಡೆಗಟ್ಟಬೇಕು ಎನ್ನುವ ದೃಷ್ಟಿಯಿಂದ ಒಂದು ಸಭೆಯನ್ನು ಕರೆದು ಶಿವಮೊಗ್ಗಾದಲ್ಲಿರುವ ಜನರೆಲ್ಲ ಸೇರಿಸಿದ್ದರು. ಈ ಸಭೆಯಲ್ಲಿ ಮುನಿಸಿಪಲ್ ಕೌನ್ಸಿಲಿನ ಸದಸ್ಯರೂ ಹಾಗೂ ಪ್ರೆಸಿಡೆಂಟರೂ ಹಾಗೂ

(ಶ್ರೀ ಏ. ಆರ್. ಬದರಿನಾರಾಯಣ್)

ಇನ್ನೂ ಇತರರು ಸೇರಿ ಅಲ್ಲಿ ಒಂದು ನಿರ್ಣಯವನ್ನು ಮಾಡಿ ಅಲ್ಲಿರುವ ಪೋಲೀಸು ಮೇಲ್ ಅಧಿಕಾರಿಗಳಿಗೆ ಆ ಬಗ್ಗೆ ತಕ್ಕ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ಒಂದು ಖಂಡನಾ ನಿರ್ಣಯ ಮಾಡಿದರು. ಈ ರೀತಿ ಪೋಲೀಸರ ಮೇಲೆ ಒಂದು ಖಂಡನಾ ನಿರ್ಣಯ ಮಾಡಿದರು ಎಂದು ದ್ವೇಷದಿಂದ ಅಲ್ಲಿರುವ ಪೋಲೀಸು ಅಧಿಕಾರಿಗಳು ಇವರ ಮೇಲೆ ಸೇಡನ್ನು ತೀರಿಸಿಕೊಳ್ಳುವುದ್ಕಾಗಿ ಇಂತಹ ಕಾರ್ಯಗಳಿಗೆ ಈಗ ಪ್ರಾರಂಭ ಮಾಡಿದ್ದಾರೆ. ಶ್ರೀಮಾನ್ ನಾರಾಯಣರಾವ್ ಹಾಗೂ ಅವರ ಕುಟುಂಬದ ಮೇಲೆ ಪೋಲೀಸಿನವರು ಮಾಡಿರುವ ಕೃತ್ಯಗಳು ಸರಿಯಾದುದಲ್ಲ. ಇವರನ್ನು ಸಪ್ರೈಸ್ ಮಾಡುವ ಉದ್ದೇಶದಿಂದ ಹೀಗೆ ಮಾಡಿದ್ದಾರೆ ಎಂದು ಅವರಿಂದ ನನಗೆ ಬಂದ ಅರ್ಜಿಯನ್ನು ಮಾನ್ಯ ಗೃಹ ಶಾಖೆ ಉಪಮಂತ್ರಿಗಳಿಗೆ ಕಳುಹಿಸಿ ಕೊಟ್ಟು ಇದರ ಬಗ್ಗೆ ತಕ್ಷಣ ವಿಚಾರಣೆ ಮಾಡಬೇಕೆಂದು ತಿಳಿಸಿ ನಾನು ಕೂಡ ಅವರಿಗೆ ಕಾಗದ ಬರಿದಿದ್ದೇನೆ. ಇಂತಹ ಅನ್ಯಾಯಗಳಿಗೆ ಹಾಗೂ ಇಂತಹ ಒಂದು ವಾತಾವರಣ ಉಂಟಾಗಲು ಇದರ ಹಿನ್ನೆಲೆಯೇನಿತ್ತು ಎನ್ನುವುದಕ್ಕಾಗಿ ತಮ್ಮಲ್ಲಿ ನಾನು ಈ ವಿಚಾರಗಳನ್ನೆಲ್ಲಾ ಹೇಳಬೇಕಾಗಿ ಬಂತು. ಅದುದರಿಂದ ಅಧಿಕಾರಿಗಳು ಪೋಲೀಸು ಅಧಿಕಾರಿಗಳೇ ಆಗಲೀ ಅಥವಾ ಜಿಲ್ಲಾಧಿಕಾರಿಗಳೇ ಆಗಲಿ ಅಥವಾ ಬೇರೆ ಯಾವ ಅಧಿಕಾರಿಗಳೇ ಆಗಲೀ ಅಲ್ಲಿನ ಜನರ ಬಗ್ಗೆ ಬಹಳ ಸೂಕ್ಷ್ಮವಾಗಿ ಹಾಗೂ ಸ್ವಲ್ಪ ನಯವಾಗಿ ವರ್ತಿಸಿದ್ದರೆ ಇಂತಹ ಅನಾಹುತಗಳನ್ನು ತಪ್ಪಿಸಬಹುದಾಗಿತ್ತು. ಇದಕ್ಕೆಲ್ಲಾ ಕಾರಣರು ಯಾರು ಎಂದರೆ ಅಲ್ಲಿನ ಅಧಿಕಾರಿಗಳೇ. ಅವರ ವರ್ತನೆ ಸರಿಯಾಗಿರಲಿಲ್ಲ ಎಂದು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಇದರಲ್ಲಿ ಇನ್ನೊಂದು ವಿಚಾರ ಹೇಳಬೇಕಾಗಿದೆ. ಶ್ರೀ ಭರಮಪ್ಪನವರು ಅಲ್ಲಿ ಮುನಿಸಿಪಲ್ ಕೌನ್ಸಿಲಿನ ಸದಸ್ಯರು ಮತ್ತು ಅವರು ಒಬ್ಬ ಗಣ್ಯವ್ಯಕ್ತಿಗಳು ಮತ್ತು ಬಹಳ ಒಳ್ಳೆಯ ಮನೆತನಕ್ಕೆ ಸೇರಿದವರು. ಇನ್ನೊಬ್ಬರು ಪಿಟಿಐ ಪತ್ರಿಕಾಕರ್ತರು. ಇವರಿಬ್ಬರನ್ನು ಪೋಲೀಸಿನವರು ನಡು ರಸ್ತೆಯಲ್ಲಿ ಹೊಡೆದು ಆನಂತರ ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಆ ಮೇಲೆ ಲಾಕ್ಅಪ್‌ನಲ್ಲಿಟ್ಟು ಹೀಗೆಲ್ಲ ಮಾಡಿದರೆ ಮುಂದೆ ಇದರ ಪರಿಣಾಮ ಏನಾಗುತ್ತದೆ ಎನ್ನುವುದನ್ನು ಅಲ್ಲಿನ ಪೋಲೀಸು ಅಧಿಕಾರಿಗಳು ನಿರೀಕ್ಷೆ ಮಾಡಬೇಕಾಗಿತ್ತು. ಅದನ್ನು ಹಾಗೆ ನಿರೀಕ್ಷೆ ಮಾಡಿದ್ದರೆ ಮುಂದೆ ಇದರ ಪರಿಣಾಮ ಏನಾಗುತ್ತದೆ ಇದಕ್ಕೆ ಯಾರು ಜವಾಬುದಾರರು ಎನ್ನುವುದನ್ನು ಯೋಚನೆ ಮಾಡಿದ್ದರೆ ಬಹಶಃ ಈ ಘಟನೆ ಆ ಮಟ್ಟಕ್ಕೆ ಹೋಗುತ್ತಿರಲಿಲ್ಲ ಎಂದು ನನಗನಿಸುತ್ತದೆ. ಅಲ್ಲಿರುವ ಪೋಲೀಸು ಅಧಿಕಾರಿಗಳು ಇನ್ನು ಮುಂದಕ್ಕಾದರೂ ತಮ್ಮ ವರ್ತನೆ ಸರಿ ಮಾಡಿಕೊಳ್ಳದಿದ್ದರೆ ಮುಂದೆ ಇದರಿಂದ ಇನ್ನು ಹೆಚ್ಚಿನ ಕೆಟ್ಟ ಪರಿಣಾಮಗಳು ಆಗತಕ್ಕ ಸೂಚನೆಗಳು ಇವೆ. ಯಾವ ಸಂದಭದಲ್ಲಿ ಇಂತಹ ಅನಾಹುತಗಳು ಸಂಭವಿಸುತ್ತವೆ ಏನುವುದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಆಗುವುದಿಲ್ಲ. ಇವೆಲ್ಲಾ ಈಚೆಗೆ ಪ್ರಾರಂಭವಾಗಿವೆ. ಯಾರು ಇದನ್ನು ಮೊದಲು ಪ್ರಚೋದನೆ ಮಾಡಿದರು ಏನುವುದನ್ನು ಇಲ್ಲಿ ವಿಮರ್ಶೆ ಮಾಡುವುದು ಅವಶ್ಯ. ಇದನ್ನು ವಿಮರ್ಶೆ ಮಾಡಿ ಮುಂದಕ್ಕೆ ಹೀಗಾಗದಂತೆ ತಡೆಗಟ್ಟದೆ ಹೋದರೆ, ಯಾರು ತಪ್ಪು ಮಾಡಿದ್ದಾರೆ ಅವರಿಗೆ ಶಿಕ್ಷೆ ಮಾಡದೇ ಬಹುಶಃ ಇನ್ನು ಸ್ವಲ್ಪಕಾಲದಲ್ಲೇ ಇಂತಹ ಅನಾಹುತಗಳು ಪುನಃ ಸಂಭವಿಸುವ ಕಾಲ ಬರಬಹುದು ಎನ್ನುವ ಭೀತಿ ನನಗಂತೂ ಉಂಟಾಗಿದೆ. ಈ ದೃಷ್ಟಿಯಿಂದ ಇದರ ಬಗ್ಗೆ ಒಂದು ಜುಡಿಷಿಯಲ್ ಎನ್‌ಕ್ವೈರಿ ಮಾಡಿ ಇದರಲ್ಲಿ ಯಾರು ತಪ್ಪಿತಸ್ಥರು ಎನ್ನುವುದನ್ನು ಕಂಡು ಹಿಡಿದು ಅವರಿಗೆ ಶಿಕ್ಷೆ ಮಾಡಿದ ಹೊರತು ಅಲ್ಲಿನ ಜನರಿಗೆ ಸಮಾಧಾನವಾಗುವುದಿಲ್ಲ. ಅದಕ್ಕಾಗಿ ಅಲ್ಲಿನ ಜನರಿಗೆ ಸಮಾಧಾನವಾಗುವ ರೀತಿಯಲ್ಲಿ ತಪ್ಪು ಮಾಡಿದವರು ಶಿಕ್ಷೆಗೆ ಒಳಗಾಗಲೇಬೇಕು. ಇದಕ್ಕಾಗಿ ಒಂದು ಜುಡಿಸಿಯಲ್ ಎನ್‌ಕ್ವೈರಿ ಮಾಡಬೇಕು ಎಂದು ಇದರ ಬಗ್ಗೆ ಒಂದು ಅವಸರದ ನಿರ್ಣಯವನ್ನು ತರಲು ಮಾನ್ಯ ಅಧ್ಯಕ್ಷರು ಅವಕಾಶ ಕೊಟ್ಟುದಕ್ಕಾಗಿ ಅವರಿಗೆ ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಮತ್ತು ಈ ವಿಚಾರದಲ್ಲಿ ಶಾಖೆಯನ್ನಿಟ್ಟುಕೊಂಡಿರುವ ಮಾನ್ಯ ಮುಖ್ಯ ಮಂತ್ರಿಗಳು ಇದರ ಬಗ್ಗೆ ತಕ್ಕ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† SRI D. B. KALMANKAR (Aland) :— Mr. Deputy Speaker, Sir Sri Bangarappa has categorically stated all the happenings that took place at Shimoga right from 17th March 1970. Sir, if the Officers of the rank of Superintendent of Police and the Deputy Commissioner take a vindictive attitude for something which is not justified, the result would be the innocent people will become the victims. This has happened in the case of firing at Shimoga Sir, Sri Narayana Rao and his wife went out for a stroll in the night. The Police knowing fully well that they are husband and wife, took them to the Police

Station and mal-treated them throughout that night. Although they were respectable people of that Town, they were put to all types of humiliation. The same kind of treatment had been given to journalist, the S.S.P. Councillors and some others. The leaders of the political parties will naturally form an opinion that these Police Offiicers are taking vindictive attitude towards the public. The attrocities of the police may raise a public revolt against the Police.

This matter had come up before the Assembly by way of calling attention notice and now it has come up by way of adjournment motion. Letters were also addressed to the Ministers to make enquiries and to take action against all these officers who are custodians of law. Being custodians of law and order, life and property of the public, they themselves took law into their hands. In order to take vengeance against the political leaders, these people wanted to punish them and put them to humiliation. I say these things are happening because there is protection to corrupt and ineffiocent officers in the Department.

I will add one more illustration in regard to the police excesses we have heard stories that while Benevolent Fund was being collected for the benefit of the police. people were put to all types of sufferings and they were threatened. Heavy amouts were collected from people in Bidar and Gulbarga for this fund. I do not understand why the present Government wants a police-State to be created in this State ? No regard is being given to the civil liberties. As a matter of fact, this Government must be a watch-dog and see that the rights and liberties of the public are safeguarded. On the other hand, this Government is bent upon suppressing the public and is trying to create ahorrer in the minds of the public, and if such things continue for long, I think the time is not far off when the people will have to take the law into their hands and protest squarely against the injustices that are being perpetrated against them. So, in all humility and in the interest of democratic traditions that are to be very soundly safeguarded in this country, I request the Hone ble Chief Minister not to brush aside the matter, because many such things are happening, but this thing has come to light, vindictive attitude is being taken against political opponents and things are going from bad to worse. He should see that these two officers are kept under suspension and then a judicial enquiry may be held so that the true fact may come to light.

With these few words I support this Resolution

ಶ್ರೀ ಎಂ. ನಾಗಪ್ಪ (ರಾಯಚೂರು) :—ಸನ್ಮಾನ್ಯ ಅಧ್ಯಕ್ಷರೇ, ಈ ಬಡ್ಜೆಟ್ ಸೆಷನ್‌ಗಾಗಿ ಸಭೆ ಸೇರಿದ ನಂತರ ಸಾಧಾರಣವಾಗಿ ನಾಲ್ಕು ಕಡೆ ಪೋಲೀಸ್ ಫೈರಿಂಗ್ ನಡೆದಿದೆ. ಮೊದಲನೆಯ ಫೈರಿಂಗ್ ಕೋಲಾರ ಜಿಲ್ಲೆಯಲ್ಲಿ ವಿಧ್ಯಾರ್ಥಿಗಳ ಮೇಲೆ ಎರಡನೆಯ ಫೈರಿಂಗ್ ಹುಬ್ಬಳ್ಳಿ ಧಾರವಾಡದಲ್ಲಿ ವಿದ್ಯಾರ್ಥಿಗಳ ಮೇಲೆ, ಮೂರನೆಯ ಫೈರಿಂಗ್ ಗುಲ್ಬರ್ಗದ ಕಾರ್ಮಿಕರ ಮೇಲೆ, ನಾಲ್ಕನೆಯದು ಎಂದರೆ ನೆನ್ನೆ ಶಿವಮೊಗ್ಗ ದಲ್ಲಿ ಫೈರಿಂಗ್ ಆಗಿರುವುದು. ಹೀಗೆ ಇನ್ನೂ ಈ ರಾಜ್ಯ ದಲ್ಲಿ ಮುಂದೆಯೂ ಕೂಡ ಎಷ್ಟು ಫೈರಿಂಗಗಳು

(ಶ್ರೀ ಎಂ ನಾಗಪ್ಪ)

ನಡೆಯುತ್ತವೋ ಗೊತ್ತಿಲ್ಲ. ಆ ಬಗ್ಗೆ ನಾನು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಪೋಲೀಸರ ಬಗ್ಗೆ ಒಂದು ವಿಚಾರ ಹೇಳ ಬೇಕೆಂದರೆ ಪಾರ್ಲಿಮೆಂಟ್ ಸದಸ್ಯರಾದ ಶ್ರೀ ಚಂದ್ರಶೇಖರ ಅವರು ಗುಲ್ಬರ್ಗದಲ್ಲಿ ಮೀಟಿಂಗ್ ಮಾಡುವಾಗ ಅವರನ್ನು ಯಾವ ದೃಷ್ಟಿಯಿಂದ ಅರೆಸ್ಟ್ ಮಾಡಿದರು ಎಂಬ ವಿವರ ಕೂಡ ನಮ್ಮ ಮುಂದೆ ಇದೆ. ಆ ಬಗ್ಗೆ ಚರ್ಚೆಯೂ ಕೂಡ ಆಗಿದೆ ಮೊನ್ನೆತಾನೆ ಶ್ರೀ ಭಾಸ್ಕರಶೆಟ್ಟರು ಪೋಲೀಸರು ನಡೆದುಕೊಂಡ ಬಗ್ಗೆ ಒಂದು ಉದಾಹರಣೆ ಕೊಟ್ಟಿದ್ದಾರೆ ಈಗ ಶಿವಮೊಗ್ಗದಲ್ಲಿ ನಡೆದಿದೆ. ಬಿದರೆ ಜಿಲ್ಲೆಯ ಭಾಲ್ಕಿಯಲ್ಲಿ ಒಬ್ಬ ಸಬ್‌ಇನ್ಸ್‌ಪೆಕ್ಟರ್ ತಾನೆ ಒಂದು ಕೊಲೆ ನಡೆಸಿದ್ದಾನೆ. ಇದನ್ನೆಲ್ಲಾ ನೋಡಿದರೆ ಡಾಕ್ಟರ ಲೋಹಿಯಾ ಅವರು ಹೇಳಿದ್ದ ಒಂದು ಮಾತು ಜ್ಞಾಪಕಕ್ಕೆ ಬರುತ್ತದೆ. ಶ್ರೀ ಪಟ್ಟಂಥಾನುಪಿಳ್ಳೆಯವರು ಕೇರಳಾದ ಮುಖ್ಯಮಂತ್ರಿಗಳಾಗಿದ್ದಾಗ ಒಂದು ಫೈರಿಂಗ್ ಮಾಡಿಸಿದರು. ಆಗ ಡಾಕ್ಟರ ಲೋಹಿಯಾ ಅವರು ಜೈಲಿನಲ್ಲಿ ಇದ್ದರು. ಜೈಲಿನಿಂದಲೇ ಕೇರಳಾದ ಮುಖ್ಯಮಂತ್ರಿಗಳಿಗೆ ಒಂದು ಟೆಲಿಗ್ರಾಮನ್ನು ಕಳಿಸಿದರು. ರಾಜಕೀಯ ಕಾರಣಕ್ಕಾಗಿ ಫೈರಿಂಗ್ ಮಾಡಿಸುವುದಕ್ಕೆ ನಿಮಗೆ ಅಧಿಕಾರ ಇಲ್ಲ. ಆದ್ದರಿಂದ ರಾಜಕೀಯ ಪಕ್ಷಕ್ಕೆ ರಾಜೀನಾಮೆ ಕೊಡಿ ಎಂದು ಟೆಲಿಗ್ರಾಮನಲ್ಲಿ ಕೇಳಿದ್ದರು. ಈ ಒಂದು ವಾದದಿಂದ ಆ ಸಮಯದಲ್ಲಿ ಪಿ. ಎಸ್. ಪಿ, ಮತ್ತು ಎಸ್. ಎಸ್. ಪಿ ಎಂದು ಎರಡು ಪಕ್ಷಗಳಾದವು. ಇದು ಒಂದು ಐತಿಹಾಸಿಕವಾದ ಘಟನೆಯಾದ್ದರಿಂದ ಆ ಬಗ್ಗೆ ನಾನು ಹೆಚ್ಚು ಹೇಳುವುದಿಲ್ಲ. ಮುಖ್ಯವಾಗಿ ಡಾಕ್ಟರ್ ಲೋಹಿಯಾ ಅವರು ಒಂದು ಮಾತನ್ನು ಹೇಳುತ್ತಿದ್ದರು, ಏನೆಂದರೆ ಸರ್ಕಾರದವರು ಫೈರಿಂಗ್ ನಡೆಸುವುದಕ್ಕೆ ಮೊದಲು ನಮ್ಮ ದೇಶವನ್ನು ೨೦೦ ವರ್ಷಗಳ ಕಾಲ ಆಳಿದ ಬ್ರಿಟೀಷರು ಎಷ್ಟು ಸಲ ಫೈರಿಂಗ್ ಮಾಡಿದ್ದರು ಎಂಬುದನ್ನು ವಿಚಾರ ಮಾಡಿ ಎಂಬುದಾಗಿ. ಅವರ ಕಾಲಕ್ಕೂ ನಮ್ಮ ಪ್ರಜಾಸತ್ತೆಯ ಕಾಲಕ್ಕೂ ಲೆಕ್ಕ ಹಾಕಿದರೆ ಅವರ ಕಾಲದಲ್ಲಿ ಬಹಳ ಕಡಿಮೆ ಫೈರಿಂಗ್ ಆಗಿತ್ತು. ಬ್ರಿಟೀಷರು ಒಂದು ಫೈರಿಂಗ್ ನಡೆಸಿದ್ದರೆ ಪ್ರಜಾಸರ್ಕಾರ ಬಂದಮೇಲೆ ಒಂದಕ್ಕೆ ೮ ರಷ್ಟು ಫೈರಿಗ್ ಆಗುತ್ತಿವೆ ಎಂದು ಹೇಳುತ್ತೇನೆ. ಅಂತಹ ಒಂದು ಪರಿಸ್ಥಿತಿ ಬಂದಿದೆ. ವೆಸ್ಟ್‌ಬೆಂಗಾಳನಲ್ಲಿ ನಮ್ಮ ರಾಜ್ಯಕ್ಕಿಂತಲೂ ಹೆಚ್ಚಿನ ಫೈರಿಂಗ್ ಆಗುತ್ತಿದೆ ಎಂದು ತಾವು ಹೇಳಬಹುದು ಆದರೆ ನಮ್ಮ ರಾಜ್ಯವನ್ನು ಎರಡನೆಯ ವೆಸ್ಟ್‌ಬೆಂಗಾಳ ಮಾಡುವುದಕ್ಕೆ ಹೋಗಬೇಡಿ ಎಂದು ಹೇಳುತ್ತೇನೆ. ಆ ರೀತಿ ಏನಾದರು ಆದರೆ ನಮ್ಮ ಜೀವನವನ್ನು ರಕ್ಷಣೆ ಮಾಡಿಕೊಳ್ಳಲು ನಾವೂಸಹ ಒಂದು ಪಿಸ್ತೂಲನ್ನು ಇಟ್ಟುಕೊಂಡು ಜೀವನ ಮಾಡಬೇಕಾಗುತ್ತದೆ. ಇವತ್ತು ಮರ್ಯಾದೆಯಿಂದ ಜೀವನ ನಡೆಸುವುದು ಕಷ್ಟವಾಗಿದೆ. ಈ ಸರ್ಕಾರದಿಂದ ಜೀವನ ರಕ್ಷಣೆಯಾಗುತ್ತಿಲ್ಲ, ಆಸ್ತಿ ರಕ್ಷಣೆಯಾಗುತ್ತಿಲ್ಲ. ೨೯ ಜನ ಮಂತ್ರಿಗಳಿದ್ದಾರೆ, ಪೋಲೀಸ್ ಇಲಾಖೆಗೆ ಇಷ್ಟೊಂದು ಹಣ ಖರ್ಚಾಗುತ್ತಿದ್ದರೂ ಕೂಡ ಹೆಂಗಸರು ಮರ್ಯಾದೆಯಿಂದ ಜೀವನ ಮಾಡುವುದು ಕಷ್ಟವಾಗಿದೆ. ಗಂಡಸರಿಗೆ ರಕ್ಷಣೆ ಇಲ್ಲವಾಗಿದೆ. ಮಾನಮರ್ಯಾದೆ ಯಿಂದ ಜೀವನ ಮಾಡಲು ರಕ್ಷಣೆಯಿಲ್ಲವಾಗಿದೆ. ಬೆಂಗಾಳನ ಪರಿಸ್ಥಿತಿ ಈ ರಾಜ್ಯಕ್ಕೆ ಬರುತ್ತಿದೆ. ರಾಜ್ಯ ಸರ್ಕಾರದ ಸಡಿಲ ಆಡಳಿತ ನೀತಿಯೇ ಇದಕ್ಕೆ ಕಾರಣ ಎಂದು ಹೇಳುತ್ತೇನೆ ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುತ್ತೇನೆ, ಮಾನ್ಯ ಸದಸ್ಯರು ಏನಾದರು ಪೋಲೀಸ್ ಇಲಾಖೆಯ ಬಗ್ಗೆ ಪ್ರಶ್ನೆ ಕೇಳಿದರೆ ಆ ಬಗ್ಗೆ ಸಂಬಂಧಪಟ್ಟ ಸಬ್‌ಇನ್ಸ್‌ಪೆಕ್ಟರ್ ಯಿಂದಲೇ ವರದಿಯನ್ನು ತರಿಸಿಕೊಂಡು ಮಂತ್ರಿಗಳು ಅದನ್ನು ಇಲ್ಲಿ ಓದಿ ಬಿಡುತ್ತಾರೆ. ಇದು ಅಭ್ಯಾಸವಾಗಿಬಿಟ್ಟಿದೆ. ಈ ಒಂದು ನೀತಿಯನ್ನು ಬದಲಾಯಿಸುವವರೆಗೂ ಕೂಡ ಈ ರಾಜ್ಯದ ಆಡಳಿತದಲ್ಲಿ ಬಿಗಿ ಬರುವುದಕ್ಕೆ ಸಾಧ್ಯವಿಲ್ಲವೆಂದು ಹೇಳುತ್ತೇನೆ. ಇಂತಹ ವಿಚಾರಗಳಲ್ಲಿ ಸಂಬಂಧಪಟ್ಟ ಸಬ್‌ಇನ್ಸ್‌ಪೆಕ್ಟರೆಗಳಿಂದಲೇ ವರದಿಯನ್ನು ತರಿಸಿಕೊಳ್ಳುವುದಕ್ಕೆ ಬದಲು ಸ್ಪೆಷಲ್ ಸ್ಕ್ವಾಡನು ಇಟ್ಟು ಅವರನ್ನು ಅಲ್ಲಿಗೆ ಕಳಿಸಿ ವರದಿ ತರಿಸುವುದು ಒಳ್ಳೆಯದು, ಈ ಬಗ್ಗೆ ಒಂದು ಉದಾಹರಣೆಯನ್ನು ಕೊಡುತ್ತೇನೆ. ಮಾನ್ಯ ಚೆನ್ನಬಸಪ್ಪನವರು ಗೃಹ ಮಂತ್ರಿಗಳಾಗಿದ್ದಾಗ ನಾವು ಕೆಲವರು ಒಬ್ಬ ಸಬ್‌ಇನ್ಸ್‌ಕ್ಟರ್ ನಾಲ್ಕು ಕಡೆ ಲಂಚ ತಿಂದಿದ್ದಾನೆಂದು ಹೇಳಿ ಮತ್ತೆ ನಾವುಊರಿಗೆ ಹೋಗುವುದಕ್ಕೆ ಮೊದಲೇ ಅಲ್ಲಿಗೆ ಸ್ಪೆಷಲ್ ಸ್ಕ್ವಾಡನ್ನು ಕಳಿಸಿ ಆ ಸಬ್‌ಇನ್ಸ್‌ಪೆಕ್ಟರನ್ನು ಸಸ್‌ಪಂಡಿನಲ್ಲಿ ಇಟ್ಟು ವಿಚಾರಣೆಗೆ ಗುರಿಪಡಿಸಿದರು. ಅದರಂತೆ ತಾವು ಕೂಡ ಸ್ಪೆಷಲ್ ಸ್ಕ್ವಾಡನ್ನು ಇಟ್ಟು ವಿಚಾರಣೆ ನಡೆಸುವ ಪದ್ಧತಿಯನ್ನು ಜಾರಿಗೆ ತರಬೇಕು. ಇದಕ್ಕೆ ಎಷ್ಟಾದರು ದುಡ್ಡು ಖರ್ಚಾಗಲಿ, ಈ ಪದ್ಧತಿಯನ್ನು ಜಾರಿಗೆ ತನಿ. ಇದರಿಂದ ಆಡಳಿತದಲ್ಲಿ ಬಿಗಿ ಬರುತ್ತದೆ. ಇವತ್ತು ತಾವು ರಾಜಕೀಯಕ್ಕಾಗಿ ಪೋಲೀಸ್ ಅಧಿಕಾರಿ ಗಳನು ಮತ್ತು ಕಲೆಕ್ಟರ್‌ಗಳನ್ನು ಉಪಯೋಗಿಸಿಕೊಂಡು ಅವರಿಗೆ ರಕ್ಷಣೆ ಕೊಡುತ್ತಿದ್ದೀರಿ. ಇವತ್ತು ನೀವು ರಾಜಕೀಯಕ್ಕಾಗಿ ಅಧಿಕಾರಿಗಳನ್ನು ಒಂದು ಕೇಸಿನಲ್ಲಿ ಉಪಯೋಗಿಸಿಕೊಂಡರೆಅವರು ತಮ್ಮ ಅನುಕೂಲಕಾಗಿ ೧೦ ಕೇಸ್‌ಗಳನ್ನು ಉಪಯೋಗಿಸಿಕೊಳ್ಳುತ್ತಾರೆಂಬುದನ್ನು ತಾವು ಮರೆಯಬಾರದು. ಬೇಕಾದರೆ ಈ ವಿಚಾರದಲ್ಲಿ ಅನೇಕ ಉದಾಹರಣೆಗಳನ್ನು ಕೊಡ ಬಹುದು. ಇನ್ನು ಮುಂದೆಯಾದರೂ ಕೂಡ ಪೋಲೀಸ್ ನೀತಿಯ ಬಗ್ಗೆ ಬದಲಾವಣೆ ಯಾಗಬೇಕಾಗಿದೆ. ಎಂತಹ ಸಮಯದಲ್ಲಿ ಫೈರಿಂಗ್ ಮಾಡಬೇಕೆಂಬ ಬಗ್ಗೆ ಒಂದು ಕಾಯಿದೆಯನ್ನು ಮಾಡಬೇಕು. ಇವತ್ತು ೨೫೦ ರೂಪಾಯಿ ಸಂಬಳ ತೆಗೆದುಕೊಳ್ಳುವ ತಹಶೀಲ್‌ದಾರರಿಗೂ ಕೂಡ ಫೈರಿಂಗ್ ನಡೆಸಲು ಅಧಿಕಾರ ಕೊಟ್ಟಿದ್ದಾರೆ. ಇದರಿಂದ ಪೋಲೀಸ್

ಅಧಿಕಾರಿಗಳು ತಮಗೆ ಬೇಕಾದಾಗಲೆಲ್ಲಾ ತಹಶೀಲ್‌ದಾರರ ಬಳಿ ವಾರಂಟ್ ತೆಗೆದುಕೊಂಡು ಹೋಗಿ ಅದಕ್ಕೆ ಸಹಿ ಮಾಡಿಸಿಕೊಂಡು ಫೈರಿಂಗ್ ಮಾಡುತ್ತಿದ್ದಾರೆ. ಇದರಿಂದ ನಮ್ಮ ರಕ್ಷಣೆ ಮಾಡಿಕೊಳ್ಳುವುದು ಕೊಳ್ಳುವುದು ಕಷ್ಟವಾಗಿದೆ. ಕಳೆದ ಎರಡು ತಿಂಗಳಲಿಯೇ ನಾಲ್ಕು ಫೈರಿಂಗ್‌ಗಳು ಆಗಿವೆ ಇನ್ನು ಮುಂದೆ ಎಷ್ಟು ನಡೆಯಬಹುದೋ ಗೊತ್ತಿಲ್ಲ. ನಾನು ಮತ್ತು ಶ್ರೀ ಎನ್. ಜಿ. ಹಾಲಪ್ಪನವರು ೩೧ನೇ ತಾರೀಖು ಬೆಳಿಗ್ಗೆ ೯ ಗಂಟೆಯ ಸಮಯದಲ್ಲಿ ಮುಖ್ಯಮಂತ್ರಿಗಳನ್ನು ಭೇಟಿ ಮಾಡುವುದಕ್ಕೆ ಹೋದಾಗ ಶಿವಮೊಗ್ಗದಲ್ಲಿ ನಡೆದ ಫೈರಿಂಗ್ ಬಗ್ಗೆ ಇನ್‌ಫರ್‌ಮೇಷನ್ ಬಂದಿಲ್ಲವೆಂದು ಹೇಳಿದರು. ಅಲ್ಲಿ ಫೈರಿಂಗ್ ನಡೆದ ದಿವಸವೇ ಮುಖ್ಯಮಂತ್ರಿಗಳಿಗೆ ಟೆಲಿಗ್ರಾಮು ಕಳಿಸಿದ್ದರು ಕೂಡ ಮತ್ತು ಅದೇ ದಿನ ರಾತ್ರಿ ೧೨ ಗಂಟೆಯ ಸಮಯದಲ್ಲಿ ಈ ಬಗ್ಗೆ ಅಲ್ಲಿಯ ಪುರಸಭೆಯವರು ಒಂದು ನಿರ್ಣಯವನ್ನು ಪಾಸ್ ಮಾಡಿ ಅದನ್ನು ಟೆಲಿಗ್ರಾಮು ಮೂಲಕ ಮುಖ್ಯಮಂತ್ರಿಗಳಿಗೆ ಕಳಿಸಿದ್ದರೂ ಕೂಡ ಬೆಳಿಗ್ಗೆ ಒಂಭತ್ತೂವರೆಗಂಟೆಯವರೆಗೆ ಮುಖ್ಯಮಂತ್ರಿಗಳಿಗೆ ಯಾವ ಇನ್ಫರಮೇಷನ್ ಕೂಡ ಬಂದಿರಲಿಲ್ಲ. ಇದಕ್ಕಾಗಿ ನಾನು ವಿಷಾದ ಪಡುತ್ತೇನೆ. ಇಂತಹ ವಿಷಯದಲ್ಲಿ ಕೂಡಲೇ ಕ್ರಮ ತೆಗೆದುಕೊಳ್ಳುವುದು ಅವಶ್ಯಕವೆಂದು ಹೇಳುತ್ತೇನೆ. ಮಾನ್ಯಮುಖ್ಯ ಮಂತ್ರಿಗಳಲ್ಲಿ ಅಂತಿಮವಾಗಿ ಕೇಳಿಕೊಳ್ಳುವುದು ಇಷ್ಟೆ ಮೈಸೂರು ರಾಜ್ಯವನ್ನು ಎರಡನೆಯ ಬೆಂಗಾಳ್ ಆಗಿ ಮಾಡಬೇಡಿ ಎಂಬುದಾಗಿ. ಇಷ್ಟು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎಂ. ಮಲ್ಲಪ್ಪ (ಬಿರೂರು):—ಮಾನ್ಯ ಅಧ್ಯಕ್ಷರೇ, ನಾನೂ ಈ ಅಡ್ಜರ್ನ್‌ಮೆಂಟ್ ಮೋಷನ್ನಿಗೆ ಸಹಿ ಹಾಕಿದ್ದೇನೆ. ಇವೊತ್ತು ಮುಂಜಾನೆ ಶ್ರೀ ವೈ. ಆರ್. ಪರಮೇಶ್ವರಪ್ಪನವರು ಶಿವ ಮೊಗ್ಗದಲ್ಲಿ ಪ್ರತ್ಯಕ್ಷದರ್ಶಿಗಳಾಗಿ ನೋಡಿ ಕಣ್ಣಾರ ಕಂಡ ವಿಷಯಗಳನ್ನು ಹೇಳಿದಾಗ ನನಗೆ ಎದೆ ಝಲ್ ಎಂದಿತು. ಶ್ರೀಮಾನ್ ಬಂಗಾರಪ್ಪನವರು ಪ್ರತ್ಯಕ್ಷದರ್ಶಿಗಳಾಗಿ ಶಿವಮೊಗ್ಗದಲ್ಲಿ ಏನು ನಡೆದಿದೆ ಎಂಬು ದನ್ನು ನೋಡಿ ಕೊಂಡು ಬಂದು ಇಲ್ಲಿ ವಿಷಯಗಳನ್ನು ತಿಳಿಸಿದ್ದಾರೆ. ಇವೆಲ್ಲವನ್ನೂ ನಾವು ಅವಲೋಕಿ ಸಿದಾಗ ನಿಜವಾಗಿಯೂ ನಮಗೆ ಭಯಉಂಟಾಗುತ್ತದೆ. ನಾನೇನು ಇಲ್ಲಿ ಪ್ರಜಾರಾಜ್ಯದಲ್ಲಿ ಇದ್ದೇವೆಯೋ ಅಥವಾ ಪೋಲೀಸ್ ರಾಜ್ಯದಲ್ಲಿದ್ದೇವೆಯೋ ಎನ್ನುವ ಶಂಕೆಯುಂಟಾಗಿದೆ. ದಿನೇ ದಿನೇ ರಾಜ್ಯದಲ್ಲಿ ಪೋಲೀಸಿನವರ ಹಿಂಸಾಕೃತ್ಯ ದಬ್ಬಾಳಿಕೆ ಹೆಚ್ಚಾಗುತ್ತಿದೆ. ಇನ್ನು ಮುಂದೆ ನಾಗರೀಕರು ತಮ್ಮ ಮನೆ ಪ್ರಾಣ ಮತ್ತು ಆಸ್ತಿಪಾಸ್ತಿಗಳಿಗೆ ಪೋಲೀಸರಿಂದ ರಕ್ಷಣೆಯನ್ನು ಪಡೆಯುವುದು ಕಷ್ಟವಾಗುತ್ತದೆ. ಎಲ್ಲರಿಗೂ ಮನವರಿಕೆಯಾಗಿರುವ ಹಾಗೆ ಬಡ್ಜೆಟ್ ಅಧಿವೇಶನ ಪ್ರಾರಂಭವಾದಮೇಲೆ ನಾನಾಕಡೆ ಗೋಲಿ ಬಾರ್ ಆಗಿರುವುದನ್ನು ನೋಡಿದರೆ ಎಂಥಾ ನಾಗರೀಕನೂ ಕೂಡ ತಲೆ ತಗ್ಗಿಸಬೇಕಾಗಿದೆ. ಪೋಲೀಸಿನವರಿಗೆ ಸರ್ಕಾರದ ರಕ್ಷಣೆ ಮತ್ತು ಸಹಾಯ ಯಾವತ್ತೂ ಇದ್ದುದೆ. ಇದಕ್ಕೆ ಕಾರಣ ಲಂಚ ತಿನ್ನುವರು ಜಾಸ್ತಿ ಯಾಗಿದ್ದಾರೆ. ಪೋಲೀಸ್ ಇಲಾಖೆಯಲ್ಲಿ ಕೆಳಗಿನ ಅಧಿಕಾರಿಗೆ ಮಾಮೂಲು ಕೊಡುತ್ತಾನೆ. ಯಾರ್‍ಯಾರಿಗೆ ಎಟುಎಷ್ಟು ಲಂಚವನ್ನು ಮಾಮೂಲಾಗಿ ಕೊಡಬೇಕೆಂಬುದು ನಿಗದಿ ಮಾಡಿಕೊಂಡಿದ್ದಾರೆ. ಇದರಿಂದ ಪೋಲೀಸು ಅಧಿಕಾರಿಗಳಿಗೆ ಸಂಬಂಳಕ್ಕಿಂತ ಗಿಂಬಳವೇ ಜಾಸ್ತಿಯಾಗಿದೆ. ಒಬ್ಬ ಪೋಲೀಸ್ ಸಬ್ ಇನ್ ಸ್ಪೆಕ್ಟರನ್ನು ಬೇರೆ ಕಡೆಗೆ ವರ್ಗ ಮಾಡುತ್ತೇವೆ ಎಂದು ಹೇಳಿದರೂ ಅವನು ಹೆದರುವುದಿಲ್ಲ. ಏತಕ್ಕೆಂದರೆ ಮೇಲಿನ ಅಧಿಕಾರಿ ಶಿಕ್ಷೆಯನ್ನು ಕೊಡುವುದಿಲ್ಲ ಎನ್ನುವ ನಂಬಿಕೆ ಅವನಿಗೆ ಇದೆ. ಕಾರಣ ಅವನು ಮಾಮೂಲು ಕೊಡುವುದು. ಇವುಗಳನ್ನೆಲ್ಲಾ ನೋಡಿದರೆ ನಮ್ಮ ರಾಜ್ಯ ದಿನೇ ದಿನೇ ಪೋಲೀಸ್ ರಾಜ್ಯವಾಗುತ್ತಿದೆ. ಶಿವಮೊಗ್ಗ ಪ್ರಕರಣದಲ್ಲಿ ಜುಡಿಷಿಯಲ್ ಎನ್‌ಕ್ವೈರಿ ಆಗಬೇಕು. ಮೊದಲು ತಪ್ಪಿತಸ್ಥರನ್ನು ಸಸ್‌ಪೆನ್‌ಷನ್‌ನಲ್ಲಿಡಬೇಕು. ಜನತೆಗೆ ನ್ಯಾಯ ದೊರಕಿಸಬೇಕೆಂದು ನಾನು ಸರ್ಕಾರದಲ್ಲಿ ಒತ್ತಾಯ ಮಾಡುತ್ತೇನೆ.

‡ Sri G. Chandrakanth (Bidar):—Sir, Regarding this Shimoga firing incident I had received a telegram sometime back which passed on to the Hon. Chair. My hon. friend Sri Bangarappa has dealt at length the details of the incident and I do not want to go deep into the matter. I would just like to mention a few points on this occasion.

Sir, Shimoga is not the only place where this firing incident has taken place. There are several other places in the State where the police have committed attrocities. Even in Bidar the Circle Inspector is a man who has committed several attrocities and I am told he has

(Sri G. Chandrakanth)

been transferred. But it seems he is again trying to retain himself in the same place. In regard to collection of the police Benevolent Fund he collected about 2½ lakhs of rupees with all his force from the black-marketers and others. I had sent a telegram to the Government about this matter. But unfortunately, no action was taken by the Government in this matter. If only an investigation had been conducted in the matter, all these things would have come to light. But no such enquiry was conducted in this matter. Sir, I feel when once these attrocities or excesses of police are brought to the notice of the Government, immediate action should be taken to avoid recurrence of such incidents again and again.

In this particular firing incident at Shimoga town, I would urge upon the Government to immediately order a judicial enquiry, so that it may become a lesson or example to others.

With these words, I conclude.

† Sri Abdul Khoddus Anwar (Bhadravati):—Sir, I support what Hon. Member Sri Bangarappa and Sri Badrinarayan have stated, I would like to add in this connection only a few words.

†Sir, the police Inspector from Kote Police Station and Sub-Inspector of Doddapete police station who deputed there for duty, were mainly responsible for this firing incident. They are also responsible for the arrest of three honourable citizens viz., Sri Srinivasa Iyengar, Sri Yousuf Khan and Sri Bharamappa. They were moving near the Amir Ahmed circle and it seems these persons were telling before them in a very vulgar language as " ಇವರೇ ಸೂಳೆ ಮಕ್ಕಳು ಹಿಡಕೊಳ್ಳಿರೋ and they were arrested and taken to the police station where they were butchered like anything and subsequently they were taken to the hospital. Thereafter what has happened has been explained in detail by my hon. friend Sri Bangarappa and others. The police officials pore themselves as masters and think they can do anything they like. They are very haughthand are in no way amenable to the public and they take the law into their own hands.

I humbly request the Hon. Chief Minister to see that these police officials are immediately kept under suspension and a judicial enquiry is conducted at once.

With these words, I conclude.

ಶ್ರೀ ಕೆ. ಎಚ್. ಶ್ರೀನಿವಾಸ್:—(ಸಾಗರ್) ಸನ್ಮಾನ್ಯ ಉಪಾಧ್ಯಕ್ಷರೇ, ಶಿವಮೊಗ್ಗಾದಲ್ಲಿ ಇತ್ತೀಚೆಗೆ ಮೂರು ಘಟನೆಗಳು ನಡೆದಿವೆ. ಮಾರ್ಚಿ ೧೭ ರಂದು ರಾತ್ರಿ ಶೆಖೆ ಎಂದು ಹೇಳಿ ಹೊರಗಡೆ ವಿರಾಮ ವಾಗಿ ತಿರುಗಾಡಿಕೊಂಡು ಬರುವುದಕ್ಕೆ ಹೋಗಿದ್ದಂತಹ ಶ್ರೀ ಸತ್ಯನಾರಾಯಣರಾವ್ ಮತ್ತು ಅವರ ಪತ್ನಿ ಯನ್ನು ಪೋಲೀಸಿನವರು ವಿನಾ ಕಾರಣ ಪೋಲೀಸ್ ಠಾಣೆಗೆ ಹೊಯ್ದು ಇಲ್ಲದ ಸಲ್ಲದ ಹಿಂಸೆಯನ್ನು ಕೊಟ್ಟು ಅವರಿಗೆ ಅವಮಾನ ಮಾಡಿದಂತಹದು ಒಂದು ಘಟನೆ. ಅನಂತರ ಮಾರ್ಚಿ ೨೧ನೇ ತಾರೀಖು

ಹಳೆಯ ರಾಜಕೀಯ ಕಾರ್ಯಕರ್ತರಾದ ಹಾಗೂ ಎಸ್. ಎಸ್. ಪಿ ನಾಯಕರಾದ ಶ್ರೀ ಭರಮಪ್ಪನವರ ಅಧ್ಯಕ್ಷತೆಯಲ್ಲಿ ಅಲ್ಲಿ ಒಂದು ಬಹಿರಂಗ ಸಭೆಯನ್ನು ನಡೆಸಿ ೧೭ನೇ ತಾರೀಖು ರಾತ್ರಿ ಪೋಲೀಸಿನವರು ಮಾಡಿದಂತಹ ಕೃತ್ಯವನ್ನು ಅನೇಕ ಜನ ಖಂಡಿಸಿದ್ದಾರೆ. ಸಹಜವಾಗಿ ಸ್ಥಳೀಯ ಪತ್ರಿಕಾ ಕಾರ್ಯಕರ್ತರು ಎಲ್ಲರು ಕೂಡಿ ಆ ಸಭೆಯಲ್ಲಿ ಭಾಗವಹಿಸಿದ್ದರು. ಪತ್ರಿಕೆಗಳವರು ಇದಕ್ಕೆ ಯಥೋಚಿತವಾದ ಒಂದು ಪಬ್ಲಿಸಿಟಿ ಕೊಡತಕ್ಕಂಥಾದ್ದರಲ್ಲಿ ತಪ್ಪಿಲ್ಲ. ಇಂಥಾ ಸಂಬರ್ಭಗಳನ್ನು ಸರಿಯಾದ ರೀತಿಯಲ್ಲಿ ಜನಗಳಿಗೆ ಗೊತ್ತುಮಾಡತಕ್ಕದ್ದು ಅವರ ಕರ್ತವ್ಯ. ಅದಾದನಂತರ ೨೯ನೇ ತಾರೀಖು ರಾತಿ ಎಸ್. ಎಸ್. ಪಿ. ನಾಯಕರಾದ ಶ್ರೀ ಭರಮಪ್ಪನವರು ಮತ್ತು ಮುನಿಸಿಪಲ್ ಕೌನ್ಸಿಲರ್ ಯೂಸೂಫ್ ಖಾನ್ ಅವರನ್ನು ಹಾಗೂ ಸ್ಥಳೀಯ ಒಂದು ಪತ್ರಿಕೆಗೆ ಸಂಪಾದಕರೂ ಮತ್ತು ಪಿ. ಟಿ. ಐ. ಕರೆಸಪಾಂಡೆಂಟ್ ರೂ ಆದ ಶ್ರೀ ಶ್ರೀನಿವಾಸಐಯಂಗಾರ್ ಈ ಮೂವರುಗಳ ಮೇಲೆ ಪೋಲೀಸರು ಕೈ ಮಾಡಿ ಅವರನ್ನು ಬಲಾತ್ಕಾರವಾಗಿ ಆಸ್ಪತ್ರೆಗೆ ವೊಯ್ದು ಅವರು ವದ ಪಾನ ಮಾಡಿದ್ದಾರೆ ಎಂದು ಸರ್ಟಿಫಿಕೇಟ್ ಮಾಡಿಸಿದ್ದಾರೆ. ಆದ್ದರಿಂದ ೩೦ರ ರಾತ್ರಿ ಸಹಸಾರು ಜನ ಇದರ ಬಗ್ಗೆ ಬೇಸತ್ತು ರೊಚ್ಚಿಗೆದ್ದು ಪ್ರತಿಭಟನೆ ವ್ಯಕ್ತ ಮಾಡಿದ್ದಾರೆ. ಈ ಸಂದರ್ಭದಲ್ಲಿ ೨೩ ರೌಂಡ್ ಗೋಲಿಬಾರ್ ಆಗಿದೆ ಎನ್ನತಕ್ಕಂಥಾದ್ದು ಅತ್ಯಂತ ಒಂದು ಭಯಂಕರ ಸುದ್ದಿ ನಮಗೆ ಸಂಜೆ ತಲುಪಿದೆ.

6-30 p. m.

ಈಗಾಗಲೇ ಹಿಂದೆ ನಡೆದಂತಹ ಘಟನೆಯ ಬಗ್ಗೆ ಗಮನ ಸೆಳೆಯುವ ಸೂಚನೆಯನ್ನು ನಾನೂ ಕಳಿಸಿದ್ದೆ. ಈತನ್ಮಧ್ಯೆ ಬಂಗಾರಪ್ಪನವರ ನಿಲುವಳಿ ಸೂಚನೆಗೆ ಅವಕಾಶ ಒದಗಿ ನನಗೆ ಗೊತ್ತಿರತಕ್ಕ ವಿಷಯವನ್ನು ಹೇಳುವುದಕ್ಕೆ ಅವಕಾಶವಾಯಿತು. ಇವತ್ತು ಒಂದು ವಿಚಾರವೇನೆಂದರೆ, ಸರ್ಕಾರ ಮತ್ತು ಸರ್ಕಾರದ ಇಲಾಖೆಗಳು ಒಂದೇ ಅಲ್ಲ, ನಾವು ಇದರಲ್ಲಿ ಯಾವಾಗಲೂ ಜಾಗ್ರತೆಯಾಗಿರಬೇಕು. ಮುಖ್ಯವಾಗಿ ಮಂತ್ರಿಮಂಡಲದ ನೇತೃತ್ವವನ್ನು ಯಾರು ವಹಿಸಿರುತ್ತಾರೆ, ಅವರು ಯಾವಾಗಲೂ ತಮ್ಮನ್ನು ತಾವು ಸಂಪೂರ್ಣವಾಗಿ ಇಲಾಖೆಯ ಜೊತೆಗೆ ಐಡೆಂಟಿಫೈ ಮಾಡಿಕೊಳ್ಳತಕ್ಕದ್ದು ಬಹಳ ದೊಡ್ಡ ಪ್ರಮಾದ ವಾಗುತ್ತದೆ. ಬಹುಶಃ ಮಾನ್ಯ ಬಂಗಾರಪ್ಪನವರಾಗಲಿ, ಬದ್ರಿನಾರಾಯಣರಾಗಲಿ, ಅಬ್ದುಲ್ ಖುದ್ದೂಸ್ ಆಗಲಿ ಅಥವಾ ನಾನಾಗಲಿ, ಇದಕ್ಕೆ ಸರ್ಕಾರವನ್ನು ಜವಾಬ್ದಾರಿಯನ್ನಾಗಿ ಮಾಡಿ, ವೀರೇಂದ್ರ ಪಾಟೀಲರು ಅಧಿಕಾರವನ್ನು ಬಿಡಬೇಕೆಂದು ಹೇಳತಕ್ಕದ್ದು ಅಷ್ಟು ಸಮಂಜಸವಾಗುವುದಿಲ್ಲ ಮತ್ತು ಸರಿಯಾಗುವುದಿಲ್ಲ. ಒಂದು ವೇಳೆ ಅಧಿಕಾರಿಗಳು ಸಂಪೂರ್ಣವಾದ ಹತೋಟಿ ತರದೆ ಜನರ ಮೇಲೆ ದಬ್ಬಾಳಿಕೆ ಮಾಡುತ್ತಾ ಇದ್ದರೆ, ಜವಾಬ್ದಾರಿ ಇರತಕ್ಕ ಜನರು ಆ ವಿಚಾರವನ್ನು ಸರ್ಕಾರದ ಗಮನಕ್ಕೆ ತಂದರೂ ಅದನ್ನು ಸರ್ಕಾರ ದವರು ಅಥವಾ ಮಂತ್ರಿಯವರು ಗಮನಕ್ಕೆ ತೆಗೆದುಕೊಳ್ಳದೆ, ಅಧಿಕಾರಿಗಳು ಏನು ಹೇಳುತ್ತಾರೆ ಅದೇ ವೇದ ವಾಕ್ಯವೆಂದು ವರ್ತನೆ ಮಾಡುತ್ತಾ ಹೋದರೆ, ಆಗ ಅದನ್ನು ಹೇಳಬಹುದು. ಇದಕ್ಕೆ ಒಂದು ಉದಾಹರಣೆಯನ್ನು ಹೇಳಬಹುದು. ಹಿಂದೆ ಪರೀಕ್ಷಿತ ರಾಜನು ಒಂದು ಸರ್ಪಯಾಗವನ್ನು ಮಾಡಿದ ಆಗ ಆ ಸರ್ಪಯಾಗಕ್ಕೆ ಎಲ್ಲಾ ಸರ್ಪಗಳು ಬಂದು ಬಿದ್ದುವು. ಆದರೆ ತಕ್ಷ ಎಂಬ ಒಂದು ಸರ್ಪವು ಇನ್ನು ನಾನೂ ಬೀಳಬೇಕಾಗುತ್ತದೆಂದು ಇಂದ್ರನ ಸಿಂಹಾಸನವನ್ನು ಹೋಗಿ ಗಟ್ಟಿಯಾಗಿ ಸುತ್ತು ಹಾಕಿ ಹಿಡಿದು ಕೊಂಡಿತು. ಆಗ ಆ ಯಾಗದ ನೇತೃತ್ವವನ್ನು ವಹಿಸಿದ್ದ ಋಷಿಯು ''ತಕ್ಷಕಾಯ ಇಂದ್ರಾಯ ಸ್ವಾಹ'' ಎಂದು ಹೇಳಿದ. ತಕ್ಷಣ ಇಂದ್ರನೂ ಆ ಹಾವೂ, ಎರಡು, ಬಂದುಬಿಟ್ಟಿತು. ಹಾಗೆ ಒಂದು ವೇಳೆ ಪೋಲೀಸರು ಹಾಗೆ ಸರ್ಕಾರವನ್ನು ಹಿಡಿದುಕೊಂಡು ಹಾಗೆ ಮಾಡಿದರೆ, ಆಗ ಪೋಲೀಸರನ್ನೂ ಸರ್ಕಾರ ವನ್ನೂ. ಇಬ್ಬರನ್ನೂ ಕೆಳಗಿಳಿಸಬಹುದು. ಅದೇ ರೀತಿ ಈಗ ಆ ಶಿವಮೊಗ್ಗದಲ್ಲಿ ನಡೆದಿರತಕ್ಕ ಆ ಘಟನೆಯಲ್ಲಿ ವೀರೇಂದ್ರ ಪಾಟೀಲರ ಸರ್ಕಾರ ಅಥವಾ ಅವರ ದಕ್ಷತೆಯ ಬಗ್ಗೆ ಪ್ರಶ್ನೆ ಇನ್‌ವಾಲ್ವ್ ಆಗುವುದಿಲ್ಲ. ಇರತಕ್ಕ ಪ್ರಶ್ನೆ ಏನೆಂದರೆ. ಯಾವುದೇ ಇಲಾಖೆಯ ಸವಾರಿಯಾಗಿದೆ ಅಲ್ಲಿ ಪೋಲೀಸರ ದೌರ್ಜನ್ಯ ನಡೆದಿದೆ, ಆದ್ದರಿಂದ ಪೋಲೀಸ್ ಅಧಿಕಾರಿಗಳ ಸವಾರಿಯನ್ನು ಬದಲಾಯಿಸಿದರೆ ಸರಿಹೋಗುತ್ತದೆ. ಅಲ್ಲಿ ಎಂತಹ ಅನ್ಯಾಯ ನಡೆದಿದೆ ಎಂದು ಎಲ್ಲರಿಗೂ ಗೊತ್ತಿದೆ. ಮಾರ್ಚಿ ೧೭ನೇ ರಾತ್ರಿ ಶಿವಮೊಗ್ಗದ ಬಡಪಾಯಿ ದಂಪತಿಗಳ ಮೇಲೆ ಅತ್ಯಾಚಾರ ನಡೆದಿದೆ. ಇದರಲ್ಲಿ ಯಾರಿಗೂ ಭಿನ್ನಾಭಿಪ್ರಾಯವಿಲ್ಲ. ಇದು ಅತ್ಯಂತ ಹೇಯವಾದ ವಿಚಾರ. ಮಾನ್ಯ ಮುಖ್ಯಮಂತ್ರಿಯವರನ್ನು ಕೇಳಿಕೊಳ್ಳುವುದೇನೆಂದರೆ ಇದಕ್ಕೆ ಕಾರಣರಾಗಿರ ತಕ್ಕ ಪೋಲೀಸ್ ಅಧಿಕಾರಿಗಳನ್ನು ಮೊದಲು ಸಸ್ಪೆಂಡ್ ಮಾಡಿ ಎಂದು. ಇನ್ನು ಅಲ್ಲಿ ನಡೆದಂತಹ ಪೋಲೀಸ್ ಫೈಯರಿಂಗ್ ವಿಚಾರ, ಇವತ್ತು ನೀವು ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಏನು ನೇಮಿಸುತ್ತೀರಿ ಅವರಿಗೆ ಬರೀ ಕ್ವಾಲಿಫಿಕೇಶನ್ ಇದ್ದರೆ ಸಾಲದು. ಅವರಿಗೆ ಬಹಳ ಮಟ್ಟಿನ ಲೀಡರ್‌ಷಿಪ್ ಕ್ವಾಲಿಟಿ ಕೂಡ ಇರಬೇಕಾಗುತ್ತದೆ ಮತ್ತು ಜನರ ಜೊತೆಯಲ್ಲಿ ಹೇಗೆ ವರ್ತನೆ ಮಾಡಬೇಕು, ಯಾವ ಸಂದರ್ಭ ಉಚಿತ, ಯಾವುದು ಅನುಚಿತ ಎಂಬ ಪ್ರಜ್ಞೆ ಇರಬೇಕಾಗುತ್ತದೆ. ಇವು ಇಲ್ಲದಿರತಕ್ಕ ಅಧಿಕಾರಿಗಳನ್ನು ನಮ್ಮ ಮೇಲೆ ಯಾವ ಕಾರಣಕ್ಕೆ ನಮ್ಮ ಜಿಲ್ಲೆಯ ಮೇಲೆ ಅವರನ್ನು ಹೇರಿದ್ದೀರಿ ಎಂದು ವಿನಯಪೂರ್ವಕವಾಗಿ ಕೇಳಬೇಕಾಗಿದೆ. ಅಂಥ ಜನರನ್ನು ಜಿಲ್ಲಾ ಅಧಿಕಾರಿಗಳನ್ನಾಗಿ ಹಾಕಿದರೆ, ಅವರು ಜನರ ಮೇಲೆ ದಬ್ಬಾಳಿಕೆ

(ಶ್ರೀ ಕೆ. ಹೆಚ್. ಶ್ರೀನಿವಾಸ್)

ಮಾಡುವುದಲ್ಲದೆ, ನಮ್ಮ ಸರ್ಕಾರದ ದಕ್ಷ ಆಡಳಿತಕ್ಕೆ ಹಾಗೂ ದಕ್ಷಾಡಳಿತಕ್ಕೆ ಹೆಸರಾದ ನಮ್ಮ ಮಂತ್ರಿ ಮಂಡಲಕ್ಕೆ ಒಳ್ಳೆಯ ಹೆಸರು ತರುವುದಿಲ್ಲ. ಇದಲ್ಲದೆ ಶೀಘ್ರದಲ್ಲಿಯೇ ಅವರು ಈ ಸರ್ಕಾರದ ದಕ್ಷ ಆಡಳಿತಕ್ಕೆ ಮಸಿ ಬಳಿಯತಕ್ಕ ಕೆಲಸವನ್ನು ಮಾಡುತ್ತಾರೆಂಬುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಅದಲ್ಲದೆ ಅಲ್ಲಿಯ ಮಾನ್ಯ ಆದಿರಾಜಯ್ಯನವರ ಬಗ್ಗೆ ಮತ್ತು ಮಾನ್ಯ ಜೋತ್ರರವರ ಬಗ್ಗೆ ಮಾನ್ಯ ಬಂಗಾರಪ್ಪನವರು ಬಹಳವಾಗಿ ಹೇಳಿದ್ದಾರೆ. ಅವರನ್ನು ಏತಕ್ಕೋಸ್ಕರ ಡೆಪ್ಯುಟಿ ಕಮಿಷನರನ್ನಾಗಿ ಮಾಡಿದ್ದೀರೆಂದು ನನಗೆ ಅರ್ಥವಾಗುತ್ತಾ ಇಲ್ಲ. ನಾನು ಹಲವಾರು ಸಾರಿ ಈ ಪ್ರಶ್ನೆಯನ್ನು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತಂದಿದ್ದೇನೆ. ನಾನು ಅಧಿಕಾರಿಗಳ ಬಗ್ಗೆ ಚಾಡಿ ಹೇಳಬೇಕೆಂಬ ಹವ್ಯಾಸದಿಂದ ಹೇಳುತ್ತಿಲ್ಲ. ಸಂದರ್ಭ ಬಂದಾಗ ಏನು ಹೇಳಬೇಕಾಗುತ್ತದೋ, ಅದನ್ನು ಹೇಳಬೇಕಾಗುತ್ತದೆ. ಒಂದು ಸಾರಿ ನಾನು ಇಲ್ಲಿಂದ ಊರಿಗೆ ಹೋದಾಗ ದೊಡ್ಡದೊಡ್ಡ ಚಪ್ಪರಗಳು ಅಲ್ಲಿ ಇದ್ದಿತು. ನಾನು ತಿಳಿದುಕೊಂಡೆ, ಬಹುಶಃ ನನಗೆ ಗೊತ್ತಿಲ್ಲದೆ ಮುಖ್ಯಮಂತ್ರಿಯವರು ಈ ಮಾರ್ಗದಲ್ಲಿ ಎಲ್ಲಿಯಾದರೂ ಹೋಗಿದ್ದಾರೋ ಏನೊ. ಅಥವಾ ಕೇಂದ್ರ ಸರ್ಕಾರದ ನಾಯಕರು ಯಾರಾದರೂ ಬಂದಿರಬಹುದೋ ಏನೋ ಎಂದು. ಆದರೆ ಕೊನೆಗೆ ತಿಳಿಯಿತು ಹೊಸ ಜಿಲ್ಲಾಧಿಕಾರಿಯನ್ನು ಸ್ವಾಗತಿಸುವುದಕ್ಕೋಸ್ಕರ ಮಾಡಿದಂತಹ ಚಪ್ಪರಗಳು ಅವು ಎಂದು. ಇದಲ್ಲದೆ ಜಿಲ್ಲಾಭಿವೃದ್ಧಿ ಸಮಿತಿಯ ಸಭೆಗೆ ಒಮ್ಮೆ ಮಾನ್ಯ ರೆವಿನ್ಯೂ ಮಂತ್ರಿಗಳಾದ ಕೌಜಲಗಿ ಅವರು ಆಗಮಿಸಿದ್ದರು. ಇಂಡೋ ಬರ್ಮಾ ಅಗ್ರಿಮೆಂಟ್ ಪ್ರಕಾರ ಅನೇಕ ಜನರು ನಮ್ಮ ದೇಶಕ್ಕೆ ವಾಪಸ್ಸು ಬಂದಿದ್ದಾರೆ. ಅದರಲ್ಲಿ ಕೆಲವರು ನಮ್ಮ ಶಿವಮೊಗ್ಗ ಜಿಲ್ಲೆಗೆ ಬಂದಿದ್ದಾರೆ. ಆ ಜನರಲ್ಲಿ ೧೫-೨೦ ಜನರು, ಊಟ ವಸತಿ ಇಲ್ಲದೆ ಸಾಯುವ ಸ್ಥಿತಿಯಲ್ಲಿದ್ದರು. ಅವರ ಬಗ್ಗೆ There are standing orders of the Government of India to give them certain facilities'' ಇತ್ಯಾದಿ ಆರ್ಡರ್ ಇದೆ ಎಂದು ಹೇಳಿ. ಆ ಅಂಶವನ್ನು ಆದಿರಾಜಯ್ಯನವರ ಗಮನಕ್ಕೆ ತಂದಾಗ, ''ಅವರು ಸತ್ತರೆ ಸಾಯಲಿ, ಆದರಿಂದ ನಿಮಗೆ ಏನು ಆಯಿತು?'' ಎಂದು ಹೇಳಿದರು. ಆಗಲೇ ನಾನು ಹೇಳಿದ್ದೇನೆ, ಇಂಥ ಜಿಲ್ಲಾ ಅಧಿಕಾರಿ ಇದ್ದ ಜಿಲ್ಲಾ ಅಭಿವೃದ್ಧಿ ಸಭೆಗೆ ನಾನು ಹಾಜರಾಗುವುದಿಲ್ಲ ಎಂದು. ಈ ರೀತಿ ವರ್ತನೆ ಮಾಡತಕ್ಕ ಜನ ಹೇಗೆ ಜನರಲ್ಲಿ ವಿಶ್ವಾಸವನ್ನು ಇಟ್ಟುಕೊಳ್ಳುತ್ತಾರೆ ? ಅವರಿಗೆ ಜನರಲ್ಲಿ ಹೇಗೆ ನಡೆದುಕೊಳ್ಳಬೇಕೆಂಬುದು ತಿಳಿಯುವುದಿಲ್ಲ. ಅದೇ ರೀತಿ ಬಂಗಾರಪ್ಪನವರು ಮತ್ತು ಇನ್ನೊಬ್ಬ ನಮ್ಮ ಮಿತ್ರರು ಅವರನ್ನು ಒಂದು ಸಾರಿ ಕಾಣಲಿಕ್ಕೆ ಹೋದಾಗ, ಅವರು ವರ್ತಿಸಿದ ರೀತಿಯನ್ನು ನನಗೆ ಇನ್ನೊಬ್ಬ ಮಿತ್ರರು ಹೇಳಿದರು, ''ಬಂಗಾರಪ್ಪನವರೇ ನಾವಿನ್ನು ಸುಮ್ಮನೆ ಕುಳಿತುಕೊಂಡರೆ ಪ್ರಯೋಜನವಿಲ್ಲ, ಮೈನಾರಿಟಿಯವರು ಸುಮ್ಮನೆ ಕೂತುಕೊಳ್ಳಬಾರದು, ನೋಡಿ ನಾನು ಸುಮ್ಮನೆ ಕುಳಿತ ಕಾರಣ ನನಗೆ ಎಂದೋ ಸಿಕ್ಕ ಬೇಕಾಗಿದ್ದಂತ ಡೆಪ್ಯೂಟಿ ಕಮೀಷನರ್ ಹುದ್ದೆಯನ್ನು ಕೊಡದೆ ನಿಧಾನ ಮಾಡಿದ್ದರು ಈಗ ಕೊಟ್ಟಿದ್ದಾರೆಂದು ಹೇಳಿದರಂತೆ. ಇದನ್ನು ನಾನು ನಂತರ ಬಂಗಾರಪ್ಪನವರಲ್ಲೂ ಕೇಳಿಕೊಂಡು ಕನ್‌ಫರ್ಮ್ ಮಾಡಿಕೊಂಡೆ. ಇಂಥ ಅಧಿಕಾರಿಯನ್ನು ಅಂಥ ಜವಾಬ್ದಾರಿ ಸ್ಥಾನದಲ್ಲಿ ಒಂದು ಕ್ಷಣ ಇಟ್ಟರೆ ದೊಡ್ಡ ಪ್ರಮಾದವಾಗುತ್ತದೆ. ಇವತ್ತಿನ ದಿವಸ ಜೋಪ್ರರವರು ಪೋಲೀಸ್ ಇಲಾಖೇಲಿ ಬುದ್ಧಿವಂತರಿರಬಹುದು. ಅವರು ಎಬೌದಿ ಬೋರ್ಡ್ ಇರಬಹುದು, ಆದರೆ ಅಂಥ ಅಧಿಕಾರಿಗಳು ಜನತೆಯ ಜೊತೆಗೆ ಸಂಬಂಧ ಇಟ್ಟುಕೊಳ್ಳಬೇಕು. ಹಾಗಿಟ್ಟುಕೊಂಡರೆ ಜಯಸಿಂಗ್‌ನವರಂತೆ ಇದೆಲ್ಲವನ್ನೂ ಅವರೂ ಕಂಟ್ರೋಲ್ ಮಾಡಬಹುದು. ಇವತ್ತು ಸೆಕ್ರೆಟೇರಿಯೆಟ್‌ನಲ್ಲಿರತಕ್ಕಂಥಹ ಸೀನಿಯರ್ ಐ.ಪಿ.ಎಸ್. ಆಫೀಸರ್ಸ್ ಏನಿದ್ದಾರೆ ಅವರ ಜೊತೆಗೆ ಮಾತನಾಡುವುದು ಅತ್ಯಂತ ಸುಲಭ. ಆದರೆ ಯಾರಿಗೂ ಕೂಡ ನಮ್ಮ ಜಿಲ್ಲೆಯ ಡೆಪ್ಯುಟಿ ಕಮಿಷನರ ಹತ್ತಿರ ಮಾತನಾಡುವುದಕ್ಕೆ ಧೈರ್ಯವಿಲ್ಲ. ಅವರು ಏನು ಮಾತನಾಡುತ್ತಾರೆ ಏನು ಬಿಡುತ್ತಾರೆ ಎಂದು ಹೇಳಲಿಕ್ಕಾಗುವುದಿಲ್ಲ. ಈ ಗಲಭೆ ಯಾವ ಪಕ್ಷ, ಪಂಗಡಗಳಿಗೂ ಸೇರಿದ್ದಲ್ಲ. ಇದು ರಾಜಕೀಯ ಪ್ರಶ್ನೆಯಲ್ಲ. ನಮ್ಮ ಜಿಲ್ಲೆಗೆ ಜನರಲ್ ಟ್ರಾನ್ಸ್‌ಫರ್ ಕಾಲಕ್ಕೆ ಇರತಕ್ಕ ಜಿಲ್ಲಾಧಿಕಾರಿಗಳನ್ನು ಬದಲಾವಣೆ ಮಾಡಿ ಒಳ್ಳೆಯ ಒಬ್ಬ ಜಿಲ್ಲಾಧಿಕಾರಿಗಳನ್ನು ಕೊಡಿ ಎಂದು ಕೇಳಿದ್ದಕ್ಕೆ, ನಮ್ಮ ದುರಾದೃಷ್ಟದಿಂದ ಇವರು ಬಂದು ಕೂತುಕೊಂಡು ಬಿಟ್ಟರು. ಈ ವರ್ಗಾವರ್ಗಿ ವೇಳೆ ಇವರನ್ನು ಮತ್ತೆ ತಿರುಗಿಸಿ ಇವರನ್ನು ಬೇರೆ ಜಿಲ್ಲೆಗೆ ಹಾಕಿ ಅಲ್ಲಾದರೂ ಅವರು ಇಂಥ ದಬ್ಬಾಳಿಕೆ ಮಾಡದ ಹಾಗೆ ಮಾಡಬೇಕು. ಶಿವಮೊಗ್ಗದಲ್ಲಿ ಏನು ಘಟನೆ ನಡೆದಿದೆ, ಇದಕ್ಕೆ ಬಹುಮಟ್ಟಿಗೆ ಕಾರಣ ಇಂತಹ ಅಧಿಕಾರಿಗಳ ವರ್ತನೆಗಳೇ ಎಂದು ಹೇಳಬಹುದು. ಇವರು ಸಂಬಂಧಪಟ್ಟ ವಿಷಯಗಳ ಬಗ್ಗೆ ತಕ್ಷಣ ಕ್ರಮ ತೆಗೆದುಕೊಂಡು ಜನತೆಯ ವಿಶ್ವಾಸವನ್ನು ಪಡೆಕೊಳ್ಳುವುದರಲ್ಲಿ ಅಸಫಲರಾಗಿದ್ದಾರೆ; ಮತ್ತು ಅದಕ್ಕೆ ಪ್ರತಿಯಾಗಿ ಜನತೆಯ ಮೇಲೆ ದಬ್ಬಾಳಿಕೆಯನ್ನು ನಡೆಸುತ್ತಿದ್ದಾರೆ. ಕೆಲವು ದಿವಸಗಳ ಹಿಂದೆ ಒಂದು ಹೋಟೇಲ್ ಬಗ್ಗೆ ಚಳುವಳಿ ನಡೆಯಿತು. ಇವರು ಚಳುವಳಿಗಾರರ ಜೊತೆಯಲ್ಲಿ ಲೀಡರ್‌ನ ಹಾಗೆ ದೊಡ್ಡ ಹಾರ ಹಾಕಿಕೊಂಡು ಬಂದರೆ ಏನು ಔಚಿತ್ಯ ಇರುತ್ತದೆ ? ಈ ರೀತಿ ಅಧಿಕಾರಿಗಳು ವರ್ತಿಸುತ್ತಿದ್ದರೆ ಹೇಗೆ ? ಆದ್ದರಿಂದ ಇಂತಹ

ಜಿಲ್ಲಾಧಿಕಾರಿಯನ್ನು ಅಲ್ಲಿಯೇ ಇಟ್ಟರೆ, ಅವರು ಇದೇ ರೀತಿ ದಬ್ಬಾಳಿಕೆ ಮಾಡುತ್ತಾ ಇದ್ದರೆ ಈ ದಕ್ಷ ಆಡಳಿತದ ಮಂತ್ರಿಮಂಡಲಕ್ಕೆ, ಈ ಮಂತ್ರಿಮಂಡಲದ ಕೀರ್ತಿಗೆ ಮತ್ತು ಇವರಲ್ಲಿರುವ ಉತ್ಸಾಹಕ್ಕೆ ಧಕ್ಕೆ ಬರುತ್ತದೆ. ಮತ್ತು ಈ ಮಂತ್ರಿಮಂಡಲದಲ್ಲಿ ಈ ಪೋರ್ಟ್‌ಫೋಲಿಯೋವನ್ನು ಇಟ್ಟುಕೊಂಡಿರುವವರ ಬಗ್ಗೆಯೂ ದುರಭಿಪ್ರಾಯ ಉಂಟಾಗುವುದಕ್ಕೆ ಅವಕಾಶವಾಗುತ್ತದೆ. ಇಂಥದಕ್ಕೆ ಎಡೆಕೊಡದೆ, ಈ ಇಲಾಖೆಯಲ್ಲಿರುವ ತಪ್ಪುಗಳನ್ನು ನಿವಾರಣೆ ಮಾಡಬೇಕಾದುದು ಈ ಮಂತ್ರಿ ಮಂಡಲದ ಜವಾಬ್ದಾರಿಯಾಗಿದೆ. ಇಲಾಖೆಯೇ ಬೇರೆ, ಮಂತ್ರಿಮಂಡಲವೇ ಬೇರೆ. ಅಲ್ಲಿಂದ ರಿಪೋರ್ಟ್ ಬಂದ ತಕ್ಷಣ ಸೂಕ್ತ ಕ್ರಮವನ್ನು ಕೈಗೊಳ್ಳದಿದ್ದರೆ ನಮ್ಮ ಜವಾಬ್ದಾರಿಯನ್ನು ನಾವು ನಿರ್ವಹಣೆ ಮಾಡಿದ ಹಾಗೆ ಆಗುವುದಿಲ್ಲ. ಆದರಲ್ಲಿಯೂ ಪೋಲೀಸ್ ಇಲಾಖೆಯ ಮೇಲೆ ಒಳ್ಳೆಯ ನಿಕಟವಾದಂಥ ಸೂಪರ್‌ವಿಷನ್ನನ್ನು ಮಂತ್ರಿ ಮಂಡಲದ ಮಟ್ಟದಲ್ಲಿ ಇಟ್ಟುಕೊಳ್ಳುವುದು ಅಗತ್ಯ. ಒಂದು ದೃಷ್ಟಿಯಿಂದ ಈ ನಿಲುವಳಿ ಸೂಚನೆಗೆ ಸಂಬಂಧಪಟ್ಟ ಹಾಗೆ ನಾವು ಆಡಿರತಕ್ಕ ಮಾತನ್ನು ತಾವು ಪರಿಗಣಿಸಬೇಕು ಎಂಬುದಾಗಿ ನಾನು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡುತ್ತೇನೆ. ಇದರಲ್ಲಿ ಬೇರೆ ಬೇರೆ ಪಕ್ಷಗಳ ಭಿನ್ನಾಭಿಪ್ರಾಯ ಇರತಕ್ಕ ಪ್ರಶ್ನೆಯಲ್ಲ ಇದು. ನನಗೆ ಈಗತಾನೇ ಶಿವಮೊಗ್ಗಾ ಜಿಲ್ಲಾ ಕಾಂಗ್ರೆಸ್ ಕಮಿಟಿಯಿಂದ ಒಂದು ಟೆಲಿಗ್ರಾಂ ಬಂತು. ಅದು ಈ ರೀತಿ ಇದೆ.

SHIMOGA DISTRICT CONGRESS COMMITTEE-THE DISTRICT CONGRESS COMMITTEE ORGANISATION CONGRESS-O

> "At an emergent meeting condemned the lathi charge and firing of yesterday-demanded immediate judicial enquiry-also urged immediate suspension of Deputy Commissioner and Superintendent of Police-the Meeting further urged adequate Compensation to the injured forthwith-D.C.C. General Secretary.

ಈ ಟೆಲಿಗ್ರಾಂನ್ನು ತಮ್ಮ ಮೂಲಕ ಮುಖ್ಯಮಂತ್ರಿಗಳಿಗೆ ಕಳುಹಿಸುತ್ತಿದ್ದೇನೆ. ಇದನ್ನು ಒಂದು ಒಳ್ಳೆಯ ದೃಷ್ಟಿಯಿಂದ ಅವರು ನೋಡಬೇಕು. ನಮ್ಮ ಜಿಲ್ಲೆಗೂ ಒಳ್ಳೆಯ ಯೋಗ್ಯವಾದ ಅಧಿಕಾರಿಗಳನ್ನು ತಕ್ಷಣವೇ ಪೋಸ್ಟ್ ಮಾಡಿ ಅಲ್ಲಿ ಯಾವತ್ತೂ ಒಂದು ಒಳ್ಳೆಯ ಸ್ಥಿತಿ ನೆಲೆಸುವುದಕ್ಕೆ ಇದೂ ಒಂದು ಕಾರಣವಾಗಬೇಕು. ಬಹುಶಃ ನಿಲುವಳಿ ಸೂಚನೆಯ ತಾತ್ಪರ್ಯವೂ ಅದೇ ಇರಬಹುದು. ಅದನ್ನು ಮಂಡಿಸಿದ ಮಾನ್ಯ ಶ್ರೀ ಬಂಗಾರಪ್ಪನವರ ದೃಷ್ಟಿಯಿಂದ ಇವತ್ತು ಆ ಅಧಿಕಾರಿಗಳ ದೌರ್ಜನ್ಯ ತಪ್ಪಿಸಬೇಕು ಎಂಬುದು ವಿನಾ ಅವರಿಗೆ ಇವರ ಮೇಲೆ ಸೆನ್ಸಾರ್ ಮಾಡಬೇಕೆಂಬ ಅಭಿಪ್ರಾಯವಿರಲಿಲ್ಲ ಎಂದು ನಾನು ಭಾವಿಸಿದ್ದೇನೆ.ಈ ಸಭೆಯ ರೂಲ್ಸ್ ಆಫ್ ಪ್ರೊಸೀಜರ್ ಪ್ರಕಾರ ಇದರ ತೀವ್ರತೆಯನ್ನು ಸರ್ಕಾರದ ಗಮನಕ್ಕೆ ತರಬೇಕೆಂಬುದಕ್ಕೆ ಇರತಕ್ಕ ಒಂದು ಮಾರ್ಗ ಇದು ಅಷ್ಟೆ. ಆದ್ದರಿಂದ ಇದರ ಬಗ್ಗೆ ತಕ್ಕ ಕಾರ್ಯಕ್ರಮಗಳನ್ನು ಮಾನ್ಯ ಮುಖ್ಯಮಂತ್ರಿಗಳು ಕೈಗೊಳ್ಳುವುದರಲ್ಲಿ ಹಿಂದುಮುಂದು ನೋಡುವುದಿಲ್ಲವೆಂಬ ವಿಶ್ವಾಸವನ್ನು ವ್ಯಕ್ತಪಡಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† Sri H. Siddaveerappa:—Sir, I am one of the signatories to this ad ournment motion. I did not like to speak, but having heard my young friend Sri Srin vas I am inspired to speak on this occasion because it is a rare performance of his that I have heard in this House, very exuberant, eloquent and at the same time I feel very effective. The theory that he propounded is something strange. I am a student of politics. I took first class marks in politics. Even today I read books on political science.

Sri K.H. Srinivas:—I was also a First Class Student in Political Science.

SRI H. SIDDAVEERAPPA:—Very good. The theory that he propodunde is that for whatever that has happened the Minister is not responsible but the officers are responsible. This is something astounding. It is a thing which can never be seen in any country, in any civilized country and under any Constitution. If we follow democratic countries where democracy is nurtured as in England we have read reports that even though an offence is committed by an ordinary Daffedar or some constable, there are instances where the concerned Home Minister has resigned. Even the late Sri Lal Bahadur Shastri has resigned for something that happened in the Railway Administration. He was not responsible, he was neither the Guard or the Engine Driver nor even the Station Master, but still he felt that being the head of the Department, as the concerned Minister holding the portfolio it was his moral duty to have given protection and he thought that he was responsible for the frequent railway accidents and he resigned. But here the Chief Minister is sitting very calmly. Probably I do not know what he is feeling. During the last 14 days or so there has not been a single day without our hearing about such incidents of police atrocities. What does that show? I know how our police are functioning-rather intimately with my knowledge of the working of the Department. Unless and until there is some force that has engineered, they will not be the people to do any illegal acts. There must be some motivating force which has been responsible for this kind of thing. I place the responsibility for this fairly and squarely on the shoulders of the ruling party I know that these gentlemen-Constables, Sub-Inspectors and even higher-ups-are never tired of interfering sometimes excessively and if anything is done according to their desire it is said that he is a very good officer, he is an officer for whom President's medal may be given even annually; but if there is an officer who does his duty conscientiously and without fear or favour, immediately trouble starts. It is in this way they have polluted the very fountain source of administration They have polluted and corrupted the whole administration beyond repair and this requires, as I have often been saying on the floor of this House, not merely palliatives but some surgical operation I therefore join hands with my friend Sri Srinivas in asking for a judicial enquiry in this matter. We are governed by a law which says every man is innocent until he is proved to be guilty. May be. I am not holding any brief, but it is a fact that such atrocities have been committed in Shimoga which is my neighbouring district. I know Shimoga more intimately than my own district. The people there are peace-loving and so I feel that there must be some provocation that has been responsible for this. What is more, Mr. Jay Singh, the D.I.G of the Division, is a very sobre officer. He wanted some gentlemen to go there and he wanted to have some sort of conciliation. He called some people to the Circuit House to discuss this matter I do not know what is the version that the Government has got, but it is a fact that something has happened, may be a reckless affair or a thoughtless act or there must have been some sort of

provocation. Whatever it may be, it did not merit the opening of fire. They ought not to have opened fire. All this happened in the name of our "Bundh" to show sympathy with the border issue.

Sri K.H. Srinivas;—This has nothing to do with Bundh.

Sri H Siddaveerappa:—That is what has been reported in the Press. This happened on the 29th. but the other provocation is something that happened on 17th. They tag it on to this incident. Whatever it is, the best thing would be, in order to clear all these doubts Government should not sit on izzat. Mere izzat will not solve the problem. Let them institute a judicial inquiry. After the inquiry if anybody is found guilty, then they may be dealt with. Somebody suggested some officers must be transferred. I do not subscribe to that theory. If a coin is bad, it is bad everywhere and you cannot pass it on to some others. It is sought to be transferred to Chitradurga District. We are immunised because we have received even worse coins and we are not bothered about this. But I would say if an officer is found guilty, mere transfer is no punishment. Where is it stated that transfer is punishment? If on enquiry an officer is found guilty then there are other ways of punishing him and not mere transfer as my friend Sri Srinivas has been advocating. Please do not send him to Chitradurga District, because in Chitradurga we are quiet and peace-loving people.

It is unfortunate that some people have been injured. From the reports I haveheard nearly 70to 80 people have been injured by the lathi charge,tear gas shells and by opening fire. Therefore,it is a very serious matter that has happened. I would request the Chief Minister to examine and see that he agrees for the appointment of a judicial committee that will give the quietus for the issue. Let the enquiry committee give its report and then we may examine as to what should be done.

†ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು) :— ಮಾನ್ಯ ಅಧ್ಯಕ್ಷರೇ, ಶಿವಮೊಗ್ಗದಲ್ಲಿ ನಡೆದ ಘಟನೆ ಬಗ್ಗೆ ಶ್ರೀಮಾನ್ ಬಂಗಾರಪ್ಪನವರು ಮತ್ತು ಅನೇಕ ಸ್ನೇಹಿತರು ತಮ್ಮ ಅಸಮಾಧಾನ ಮತ್ತು ವ್ಯಸನವನ್ನು ವ್ಯಕ್ತಮಾಡಿದ್ದಾರೆ. ಶಿವಮೊಗ್ಗದಲ್ಲಿ ಏನು ಘಟನೆ ನಡೆದಿದೆ ಅದು ಸರಕಾರಕ್ಕೆ ಏನು ಸಮಾಧಾನ ತಂದಿಲ್ಲ. ಆ ಘಟನೆ ಬಹಳ ದುರ್ದೈವದ ಒಂದು ಘಟನೆ ಮತ್ತು ಪ್ರತಿಯೊಬ್ಬರಿಗೂ ಮನಸ್ಸಿಗೆ ನೊವು ಉಂಟುಮಾಡುವ ಘಟನೆ ಎಂದು ನಾನು ತಿಳಿದುಕೊಂಡಿದ್ದೇನೆ. ನಾನು ಈ ಘಟಣೆ ಬಗ್ಗೆ ಹೇಳುವುದಕ್ಕಿಂತ ಮೊದಲು, ನಿನ್ನಿನ ಕಲ್ಲು ಎಸೆತ ಲಾಟಿ ಚಾರ್ಜ ಮತ್ತು ಟಿಯರ್ ಗಾಸ್ ಷೆಲ್ಲ ಹೊಡೆಯುದವುದರಿಂದ ಮತ್ತು ಫೈಯರಿಂಗನಿಂದ ಯಾರು ಯಾರಿಗೆ ನೋವು ಉಂಟಾಗಿದೆ ಕಷ್ಟವಾಗಿದೆ ಅನಾನುಕೂಲತೆಯಾಗಿದೆ ಅವರೆಲ್ಲರ ಬಗ್ಗೆ ನಾನು ಸಹಾನುಭೂತಿ ವ್ಯಕ್ತಮಾಡುವಂಥದ್ದು ನನ್ನ ಕರ್ತವ್ಯ ಎಂದು ನಾನು ತಿಳಿದುಕೊಂಡಿದ್ದೇನೆ. ಈ ಒಂದು ಘಟನೆ ಬಗ್ಗೆ ಅನೇಕ ಮಾನ್ಯ ಸದಸ್ಯರು ಅಭಿಪ್ರಾಯ ವ್ಯಕ್ತಮಾಡುತ್ತಾ ಪೋಲೀಸ್ ಡಿಪಾರ್ಟಮೆಂಟ್ ಮತ್ತು ಪೋಲೀಸ್ ಫಂಕ್ಷನ್ನಿನ ಬಗ್ಗೆ ಕೆಲವು ವಿಚಾರಗಳನು ಹೇಳಿದ್ದಾರೆ, ಆ ಪ್ರಶ್ನೆ ನಮ್ಮ ಮುಂದೆ ಇಲ್ಲ. ನಮ್ಮ ಮುಂದೆ ಇರುವಂಥ ಪ್ರಶ್ನೆ ಶಿವಮೊಗ್ಗದಲ್ಲಿ ಈ ತರಹ ದುರ್ಗಟನೆ ಆದುದಕ್ಕೆ ಏನು ಕಾರಣ ಯಾತಕ್ಕೆ ಈ ರೀತಿ ಆಗಿದೆ ಮತ್ತು ಪರಿಸ್ಥಿತಿ ಏನು ಇದೆ ಎನ್ನುವಂಥದ್ದು. ಈ ಒಂದು ಪ್ರಶ್ನೆ ಬಗ್ಗೆ ಮಾತನಾಡುತ್ತಾ ಡೆಪ್ಯುಟಿಕಮೀಷನರ ಬಗ್ಗೆ ಮತ್ತು ಪೋಲೀಸ್ ಸೂಪರಿಡೆಂಟರ ಬಗ್ಗೆ ಮತ್ತು ಇನ್ನೂ ಇತರ ಅಧಿಕಾರಿಗಳ ಬಗೆ ಅನೇಕ ಮಾನ್ಯ

(ಶ್ರೀ ವೀರೇಂದ್ರ ಪಾಟೀಲ್)

ಸದಸ್ಯರು ತಮ್ಮ ಅಭಿಪ್ರಾಯವನ್ನು ವ್ಯಕ್ತಮಾಡಿದ್ದಾರೆ. ಅದರ ಬಗ್ಗೆ ನಾನು ಈವೊತ್ತು ಏನು ಹೇಳುವುದಕ್ಕೂ ಹೋಗುವಹಾಗಿಲ್ಲ. ಮತ್ತು ಈವೊತ್ತು ಪ್ರಥಮದಲ್ಲಿ ಈ ವಿಚಾರ ಸ್ಪಷ್ಟಮಾಡುತ್ತೇನೆ. ಕೇವಲ ಡಿಪಾರ್ಟ್‌ಮೆಂಟಿನಲ್ಲಿ ಇರುವ ಅಧಿಕಾರಿಗಳು ಏನು ಮಾಡಲು ಅವರಿಗೆ ಪ್ರೊಟೆಕ್ಷನ್ ಕೊಡುವಂಥದ್ದು, ಡಿಫಂಡ, ಮಾಡುವಂಥದ್ದು ನಮ್ಮ ಕರ್ತವ್ಯ ಇದೆ ಎಂದ ನಾನು ತಿಳಿದುಕೊಂಡಿಲ್ಲ. ಅನೇಕ ಘಟನೆಗಳು ಆಗಿವೆ, ಅನೇಕ ಸನ್ನಿವೇಶಗಳಲ್ಲಿ ನಮ್ಮ ಪೋಲೀಸ ಅಧಿಕಾರಿಗಳ ಮೇಲೆ ಚಾರ್ಜ್‌ಷೀಟ್ ಮಾಡಿದ್ದೇವೆ, ಅರೆಸ್ಟ ಮಾಡಿದ್ದೇವೆ. ಕೇಸ್ ನಡೆಸಿದ್ದೇವೆ, ಕನವಿಕ್ಷನ್ ಮಾಡಿಸಿದ್ದೇವೆ, ಇಲ್ಲಿ ಬಿಟ್ಟು ಹೋದರೆ ಸುಪ್ರೀಂ ಕೋರ್ಟಿನವರೆಗೂ ಬಡಲಾರದಂತೆ ನಾವು ಅನೇಕ ಕಾರ್ಯ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಪೋಲಿಸ್ ಇಲಾಖೆ ಪೋಲೀಸ್ ಸಿಬ್ಬಂದಿ ಬಹಳ ದೊಡ್ಡ ಸಿಬ್ಬಂದಿ. ಅದರಲ್ಲಿ ಇರುವವರೆಲ್ಲರೂ ದೇವತಾ ಪುರುಷರು ಇದ್ದಾರೆ ಎಂದು ನಾನು ಹೇಳುವಹಾಗಿಲ್ಲ. ಅವರು ನಮ್ಮ ಸೊಸೈಟಿ ಅಂಗವಾಗಿದ್ದಾರೆ. ಕೆಳದರ್ಜೆಯಲ್ಲಿ ಇರುವಂಥ ಪೋಲಿಸ್ ಕಾನ್‌ಸ್ಟೇಬಲ್ ಆಗಲಿ, ಹೆಡ್ ಕಾನ್‌ಸ್ಟೇಬಲ್ ಆಗಲಿ, ಸಬ್ ಇನ್‌ಸ್ಪೆಕ್ಟರ್ ಆಗಲಿ ಅವರು ನಮ್ಮ ಸೊಸೈಟಿಯ ಅಂಗವಾಗಿದ್ದಾರೆಯೇ ಹೊರತು ಬೇರೆ ಎಲ್ಲಿಂದಲೋ ಬಂದಿದ್ದಾರೆ ಅದಕ್ಕಾಗಿ ಯಾರು ತಪ್ಪುಮಾಡುವ ಹಾಗಿಲ್ಲ, ಪೋಲೀಸ್ ಏನು ಮಾಡಿದರೂ ಕ್ರಮವಾಗಿ ಮಾಡಿದ್ದಾರೆ ಎನ್ನುವವಾದ ಹೇಳುವುಹಾಗಿಲ್ಲ. ಆದರೆ ಎಲ್ಲಿ ಆದರೂ ಒಂದು ಘಟನೆ ಆದರೆ, ಅಥವಾ ಘಟನೆಯಲ್ಲಿ ಪೋಲಿಸರಿಂದ ಒಂದು ರೀತಿ ದುರಾಕ್ರಮವಾದರೆ ಹದ್ದುಮೀರಿ ನಡೆದಿದ್ದರೆ ಇಡೀ ಪೋಲೀಸ್ ಡಿಪಾರ್ಟಮೆಂಟೇ ಆ ರೀತಿ ಮಾಡುತ್ತಾರೆ ಎಂದು ಹೇಳುವಂಥಾದ್ದು ತಪ್ಪಾಗುತ್ತದೆ. ಆ ರೀತಿ ಹೇಳುವುದರಿಂದ ಡಿಪಾರ್ಟಮೆಂಟ್ ಡಿಪಾರ್ಟಮೆಂಟಿಗೆ ನಾವು ದೂಷಣೆ ಮಾಡಿದಂತಾಗುತ್ತದೆ. ಮತ್ತು ಕೆಲಸ ಮಾಡುವವರಿಗೆ ನಿರುತ್ಸಾಹಮಾಡಿದಂತಾಗುತ್ತದೆ, ಡೀಮಾರಲೈಜ್ ಮಾಡಿದಂತಾಗುತ್ತದೆ, ಅದಕ್ಕಾಗಿ ಎಲ್ಲಿ ತಪ್ಪುಮಾಡಿದ್ದಾರೋ ಅಲ್ಲಿ ಅವರಿಗೆ ಪ್ರೊಟೆಷನ್ ಕೊಡಬೇಕು ಎನ್ನುವ ವಿಚಾರದವನು ನಾನು ಅಲ್ಲ. ನಮ್ಮ ಅಧಿಕಾರಿಗಳು ತಪ್ಪುಮಾಡಿದ್ದರೆ, ಅವರು ಸರಿಯಾಗಿ ಮಾಡಿದ್ದಾರೆ ಎನ್ನುವ ವಿಚಾರದವನು ನಾನು ಅಲ್ಲ. ಎಲ್ಲಿ ತಪ್ಪು ಮಾಡಲಿ ಅಲ್ಲಿ ಶಿಕ್ಷಿಸಲೇ ಬೇಕು. ಬೆಂಗಳೂರಿನಲ್ಲಿ ಯಾರೋ ಒಬ್ಬ ಹುಡುಗನನ್ನು ಹಿಡಿದು ತಲೆ ಬೋಳಿಸಿದ್ದಾರೆ ಎಂದು ವರದಿ ಬಂದಾಗ, ಸೂಪರಿಂಟೆಂಡೆಂಟ್ ಆಫ್‌ಪೋಲಿಸ್ ಅವರು ತಕ್ಷಣ ಅಲ್ಲಿಗೆ ಧಾವಿಸಿ,ಆವಾಗಲೇ ಕ್ರಮ ತೆಗೆದುಕೊಂಡಿದ್ದಾರೆ.

7-00 P. M.

ಈ ರೀತಿಯಿಂದ ಕೆಲವು ಕಡೆ ತಪ್ಪು ಮಾಡಿದ್ದರೆ ನಾವು ಬಿಡುತ್ತಾ ಇಲ್ಲ. ಆದ್ದರಿಂದ ಇದನ್ನು ಪೂರ್ತಿ ಡಿಪಾರ್ಟ್‌ಮೆಂಟಿಗೆ ಅನ್ವಯಿಸಿ ಡಿಪಾರ್ಟ್‌ಮೆಂಟ್ೇ ಹೊಲಸಾಗಿದೆ, ಅದೇ ರೀತಿ ಜನರು ಇದ್ದಾರೆ ಅಂತ ಹೇಳುವುದು ಅಷ್ಟೊಂದು ಸಾಧುವಾದದ್ದಲ್ಲ ಎಂದು ಹೇಳುತ್ತಾ ಇದ್ದೇನೆ. ನನಗೂ ಕೂಡ ಕಳೆದ ಎರಡು ದಿವಸಗಳಿಂದ ರಿಪೋರ್ಟಗಳು ಬರುತ್ತಾ ಇವೆ, ವೈರಲೆಸ್ ಮೆಸೇಜಸ್ ಬರುತ್ತಾ ಇವೆ ಪರಿಸ್ಥಿತಿ ಏನಾಗಿದೆ ಎಂಬುದನ್ನು ತಿಳಿದುಕೊಳ್ಳಲು ಸತತ ಪ್ರಯತ್ನ ಮಾಡಿದ್ದೇನೆ. ನನಗೆ ಅನಿಸುತ್ತದೆ ಪೂರ್ತಿ ಯಾಗಿ ಪರಿಸ್ಥಿತಿ ತಿಳಿದುಕೊಂಡರೆ ಒಳ್ಳೆಯದು. ಎಂದು ಈ ಒಂದು ಪರಿಸ್ಥಿತಿ ಉಂಟಾಗುವುದಕ್ಕೆ ಮೂಲ ಭೂತವಾದ ಕಾರಣ ಏನಾದರೂ ಇದ್ದರೆ; ಬೇಸಿಸ್—ಬೀಜ ಏನಾದರೂ ಇದ್ದರೆ ಅದು ೧೮ನೇ ತಾರೀಖು ರಾತ್ರಿ ಒಂದು ಗಂಟೆಯಲ್ಲಿ ನಡೆದ ಆ ದುರ್ಘಟನೆಯೇ ಇರಬೇಕು ಎಂದು ಅನಿಸುತ್ತದೆ. ಇವತ್ತು ಶ್ರೀಮಾನ್ ಬಂಗಾಪ್ಪನವರು ಹೇಳಿದ್ದಾರೆ, ಶ್ರೀಮಾನ್ ಬದರಿ ನಾರಾಯಣನವರು ಹೇಳಿದ್ದಾರೆ, ಆದರೆ ನನಗೆ ಬಂದಿರುವ ವರದಿ ಪ್ರಕಾರ ಸತ್ಯನಾರಾಯಣರಾವ್ ಮತ್ತು ಸರೋಜಮ್ಮ ಇವರಿಬ್ಬರೂ ೧೮ನೇ ತಾರೀಖಿನ ದಿವಸ ಮಧ್ಯರಾತ್ರಿ (ಮಿಡ್‌ನೈಟ್) ಒಂದು ಗಂಟೆಗೆ ಯಾವುದೋ ಒಂದು ಪಾರ್ಕಿನಲ್ಲಿ ಈಗ ಬಂದ ಕಂಪ್ಲೇಂಟ್ ಪ್ರಕಾರ–ಮನಸ್ಸಿಗೆ ಬಂದಂತೆ ವ್ಯವಹಾರ ಮಾಡುತ್ತಾ ಇದ್ದರು, ಇಂಡೀಸೆಂಟಾಗಿ ಬಿಹೇವ್ ಮಾಡುತ್ತಾ ಇದ್ದರು ಎಂದು ರಿಪೋರ್ಟ್ ಬಂದದ್ದರಿಂದ ಪೋಲೀಸ್ ನವರನ್ನು ಕಳುಹಿಸಿ ಅವರನ್ನು ಕರೆದುಕೊಂಡು ಬಂದು ಲಾಕ್ ಅಪ್‌ನಲ್ಲಿ ಇಟ್ಟು ಅನಂತರ ಅರ್ಲಿಮಾರ್ನಿಂಗ್ ಎರಡೂವರೆ, ಎರಡೂ ಮುಕ್ಕಾಲು ಗಂಟೆಯಲ್ಲಿ ಅವರನ್ನು ಬಿಡಿಸಿಕೊಂಡು ಹೋದ ಪ್ರಸಂಗವಾಗಿರುವುದರಿಂದ, ಇದು ಬಹಳ ಮಟ್ಟಿಗೆ ಅಲ್ಲಿನ ಜನತೆಗೆ ಒಂದು ಅಸಮಾಧಾನ ಬಂದಿದೆ ಎಂದು. ಅವರು ಗಂಡ ಹೆಂಡತಿ ಎಂಬ ವಿಚಾರ, ಅನಂತರ ಅವರು ಅರ್ಜಿಕೊಟ್ಟಿದ್ದಾರೆ, ಇದರ ಪರಿಣಾಮ ಜನರ ಮನಸ್ಸಿನ ಮೇಲೆ ಆಗಿದೆ. ಇದನ್ನು ಒಪ್ಪಬೇಕಾಗುತ್ತದೆ. ೩೦ನೇ ತಾರಿಖು ಏನಾಗಿದೆ ಅದು ನಿನ್ನೆ ಬೆಳಿಗ್ಗೆ ಸುಮಾರು ೩ ಗಂಟೆಗೆ ನಡೆದುದಾಗಿದೆ. ಇದಕ್ಕ ಹಿನ್ನಲೆ ಇದೆ. ಹಿನ್ನೆಲೆ ಇಲ್ಲದೆ ಒಮ್ಮಿಂದ ಒಮ್ಮೆಗೆ ಆಗಿರುವಂತಹ ವಿಷಯ ಅಲ್ಲ ಎಂದು ಹೇಳುತ್ತಾ ಇದ್ದೇನೆ. ೧೮ನೇ ತಾರೀಖು ಅವರಿಬ್ಬರನ್ನೂ ಪೋಲಿಸ್ ಕಾನ್‌ಸ್ಟೇಬಲ್ ಹಿಡಿದುಕೊಂಡು ಹೋಗಿ ಲಾಕ್ ಅಫ್‌ನಲ್ಲ ಇಟ್ಟು ಅನಂತರ–ಅವರ ಅರ್ಜಿನಲ್ಲಿ ಕೊಟ್ಟಿದ್ದಾರೆ–ಹೊಡೆದಿದ್ದಾರೆ ಬಯ್ದಿದ್ದಾರೆ ಎಂದು ಹೇಳಿದ್ದಾರೆ, ಒಂದು ಕೇಸು ಇದೆ, ವಿಚಾರಣೆ ನಡೆಯುತ್ತಾ ಇದೆ, ಆ ಬಗ್ಗೆ ವಿಶೇಷವಾಗಿ ಹೇಳಬೇಕಾಗಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ ;— ಅವರು ಗಂಡಹೆಂಡತಿಯೇ ಅಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್ :— ಅವರು ಅರ್ಜಿಕೊಟ್ಟಿದ್ದಾರೆ, ನಾವಿಬ್ಬರೂ ಗಂಡಹೆಂಡತಿ ಅಂತ ಹೇಳಿದ್ದಾರೆ,

ಶ್ರೀ ಎಚ್. ಸಿದ್ದವೀರಪ್ಪ :— ಇಬ್ಬರು ಮಕ್ಕಳೂ ಇದ್ದಾರೆ ಗಂಡಹೆಂಡತಿ ಅಂತ ಹೇಳುತ್ತಾರೆ.

ಶ್ರೀ ವೀರೇಂದ್ರ ಪಾಟೀಲ್ ;— ಅದನ್ನು ನಾನು ಕಾಂಟ್ರಡಿಕ್ಟ್ ಮಾಡಲಿಲ್ಲ.

ಶ್ರೀ ಎಚ್, ಸಿದ್ದವೀರಪ್ಪ ;— ಗಂಡಹೆಂಡತಿ ಆಗಿರತಕ್ಕವರು ಆ ಪಾರ್ಕಿನಲ್ಲಿ ಹೋಗಿ ಅಷ್ಟು ಹೊತ್ತಿನಲ್ಲಿ ಏಕೆ ಕುಳಿತುಕೊಳ್ಳುತ್ತಾ ಇದ್ದರು?

ಶ್ರೀ ವೀರೇಂದ್ರ ಪಾಟೀಲ್ ;— ನಾನು ಹೇಳುವಂತಹದು ಏನೆಂದರೆ ಇದರಿಂದ ಶಿವಮೊಗ್ಗ ನಗರದ ಜನತೆಗೆ ಅಸಮಾಧಾನವಾಗಿದೆ. ಪೋಲೀಸರ ಬಗ್ಗೆ ಬಂದಿರತಕ್ಕಂತಹ ದೂರು, ಈ ಘಟನೆ ಆದ ಮೇಲೆ ನಡೆದಿರತಕ್ಕಂತಹ ಸಬ್ಸೀಕ್ವೆಂಟ್ ಡೆವಲಪ್‌ಮೆಂಟ್ಸ್ ಏನಿದೆ ಅದಕ್ಕೆ ಯಾರು ಮೂಲಭೂತವಾಗಿ ಕಾರಣ ಎಂದರೆ ಇವರೇ. ಹಿಂದಿನ ದಿನ ಅದು ಆಗದೇ ಇದ್ದಿದ್ದರೆ ಸೆನ್ಸ್ ಆಗುತ್ತಾ ಇರಲಿಲ್ಲ ಎಂದು ಅನಿಸುತ್ತದೆ. ಇದನ್ನು ಪ್ರತಿಭಟನೆ ಮಾಡಬೇಕೆನ್ನುವುದಕ್ಕೆ ೨೩ನೇ ತಾರೀಖು ಎಸ್.ಎಸ್.ಪಿ (ಸಂಯುಕ್ತ ಸೋಷಿಯಲಿಸ್ಟ್ ಪಾರ್ಟಿ)ಯವರು ಒಂದು ಪಬ್ಲಿಕ್ ಮೀಟಿಂಗ್ ಮಾಡಿದ್ದಾರೆ, ಒಂದು ಪ್ರೊಟೆಸ್ಟ್ ಮೀಟಿಂಗ್ ಮಾಡಿದ್ದಾರೆ. ಅಲ್ಲೂ ಕೂಡ ಯಾವುದೇ ಗದ್ದಲ ಆಗಿಲ್ಲ. ಬಹುಶ: ಠರಾವು ಪಾಸ್ ಮಾಡಿಕೊಂಡು ಹೋಗಿರಬಹುದು.

ಶ್ರೀ ಎಚ್. ಸಿದ್ದವೀರಪ್ಪ:— ೧೮ನೇ ತಾರೀಖು ಆದಮೇಲೆ ಕ್ರಮ ತೆಗೆದುಕೊಂಡಿದ್ದರೆ ಈ ಪರಿಸ್ಥಿತಿ ಆಗುತ್ತಾ ಇರಲಿಲ್ಲ.

ಶ್ರೀ ವೀರೇಂದ್ರ ಪಾಟೀಲ್:— ಇವತ್ತು ನನ್ನ ಹತ್ತಿರ ಏನು ರಿಪೋರ್ಟ್ ಬಂದಿದೆ ಅದನ್ನು ಈ ಮನೆಯಲ್ಲಿ ಇಡಬೇಕಾಗುತ್ತದೆ, ಇದರ ಮೇಲೆ ಮುಂದೆ ಯಾವ ರೀತಿಯಿಂದ ಮಾಡಬೇಕು ಎಂಬುದನ್ನು ವಿಚಾರ ಮಾಡೋಣ

ಶ್ರೀ ಎಚ್. ಸಿದ್ದವೀರಪ್ಪ;— ಶ್ರೀಮಾನ್ ಶ್ರೀನಿವಾಸರವರು ಹೇಳಿದ್ದು ಅವರು ಬರೆದುಕೊಟ್ಟಿರುವ ರಿಪೋರ್ಟ್ ವಿಚಾರಣೆ ಮಾಡಿರಿ ಅಂತ.

ಶ್ರೀ ವೀರೇಂದ್ರ ಪಾಟೀಲ್:—ಘಟನೆ ಏನು ಆಗಿದೆ,ಅದರ ಬಗ್ಗೆ ವರದಿ ಏನು ಬಂದಿವೆ ಎಂಬುದನ್ನು ತಮ್ಮ ಮುಂದೆ ಇಡಲು ಬಯಸುತ್ತೇನೆ. ಅದು ಅವಶ್ಯಕ ಇಲ್ಲ ಎಂದರೆ, ಅದನ್ನು ಕೇಳುವುದಕ್ಕೆ ಮನಸ್ಸು ಇಲ್ಲ ಎಂದರೆ ಆ ಮಾತು ಬೇರೆ.

ಮಾನ್ಯ ಸಿದ್ದವೀರಪ್ಪನವರು ಗೃಹಸಚಿವರಾಗಿದ್ದರು, ವರದಿಯಲ್ಲಿದೆ, ಅದಕ್ಕೆ ಹೇಳುತ್ತಿದ್ದೇನೆ-ಎಂದಲ್ಲ ನನಗೆ ಪ್ರತಿ ದಿವಸ ವರದಿ ಬರುವುದು, ಮೆಸೇಜ್ ಬರುವುದು, ಅದನ್ನು ನೋಡಿ ಅಸೆಸ್‌ಮಾಡಿ ಒಂದು ನಿರ್ಣಯಕ್ಕೆ ಬರುತ್ತಿದ್ದೇನೆ. ಘಟನೆ ಏನಾಗಿದೆ ಎಂದು ಹೇಳುತ್ತಿದ್ದೇನೆ. ೨೩ ರಂದು ಎಸ್ ಎಸ್ ಪಿ ಪ್ರೊಟೆಸ್ಟ್ ಮೀಟಿಂಗ್ ಆಯಿತು, ಆಗ ಯಾವ ರೀತಿಯ ಘಟನೆಯೂ ಆಗಿಲ್ಲ. ಮೀಟಿಂಗ್ ಶಾಂತಿಯುತವಾಗಿ ಮುಕ್ತಾಯವಾಗಿದೆ. ೩೦ ರಂದು ಬಂದ್ ಆಚರಿಸಿದರು. ಕೇವಲ ಕೇಂದ್ರ ಸರಕಾರ ಮಹಾಜನ್ ಕಮಿಷನ್ ವರದಿಯನ್ನು ಜಾರಿಗೆ ತರಬೇಕು, ಅಂಗೀಕಾರ ಮಾಡಬೇಕು ಎಂದಲ್ಲ, ಹಿಂದಿನ ಸಿಟ್ಟು ಕೂಡ ಇತ್ತು. ಬಂದ್‌ನಲ್ಲಿ ಭಾಗವಹಿಸಿರುವವರಿಗೆ ಹೀಗಿತ್ತು ಮನಸ್ಸಿನಲ್ಲಿ ಎಂದು ಹೇಳಬೇಕಾಗಿದೆ. ಬಂದ್ ಆ ದಿವಸ ಆದ ಮೇಲೆ ಆ ಬಂದ್ ಜೊತೆಯಲ್ಲೇ ಮೀಟಿಂಗ್ ಸಹ ಆಗಿದೆ. ಆಗ ಎಸ್ ಎಸ್ ಪಿ ಸದಸ್ಯರು, ನಾಯಕರು, ಬಂಗಾರಪ್ಪನವರು ಮುಂತಾದವರು ಮಾತನಾಡಿದ್ದಾರೆ ಆಗ ಬಂದ್ ವೇಳೆಯಲ್ಲಿ ಬಹುಶಃ ಪೋಲೀಸರನ್ನು ಕಟುವಾಗಿ ಟೀಕೆ ಮಾಡಿರುವುದೂ ಅಲ್ಲದೆ ಸ್ವಲ್ಪಮಟ್ಟಿಗೆ ಜನರು ಪೋಲೀಸರ ವಿರುದ್ಧ ಏನಾದರೂ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿದ್ದಾರೆಂದು ವರದಿಯಾಗಿದೆ. ಇದರ ಪರಿಣಾಮ ಜನರ ಮೇಲೆ ಆಗಿದೆ.

ಆ ಮೀಟಿಂಗಿನಲ್ಲಿ, ಭಾಗವಹಿಸಿರುವುದರ ಪರಿಣಾಮವಾಗಿ ರಾತ್ರಿ ಹನ್ನೊಂದೂವರೆಯಲ್ಲಿ ಗೋಪಿ ಸರ್ಕಲ್ ಬಳಿ ಭರ್ಮಪ್ಪನವರು, ಶ್ರೀನಿವಾಸಯ್ಯಂಗಾರ್‌ರವರು, ಇನ್ನೂ ಅನೇಕರು ಅಲ್ಲಿದ್ದರು. ಆಗ ಎಚ್ ಪಿ ಸಿ ಟಾಕೀಸಿಗೆ ಕಲ್ಲೆಸೆಯುವುದು ಪ್ರಾರಂಭವಾಯ್ತು. ಪೋಲೀಸಿನವರು ಹೆಣ್ಣು ಮಕ್ಕಳನ್ನು ಲಾಕಪ್ಪಿನಲ್ಲಿ ಇಡುವುದಕ್ಕೂ ಟಾಕೀಸ್‌ಗೂ ಏನು ಸಂಬಂಧ, ಕಲ್ಲೆಸೆಯುವುದು ಏಕೆ ಎಂಬುದು ಗೊತ್ತಾಗಿಲ್ಲ. ಕಲ್ಲೆಸೆದ ಮೇಲೆ ಅನೇಕರು ಚದರಿದರು. ಭರ್ಮಪ್ಪನವರು, ಮತ್ತು ಶ್ರೀನಿವಾಸಯ್ಯಂಗಾರ್‌ರವರು ಅಲ್ಲಿರುವ ಅಧಿಕಾರಿಗಳ ಜೊತೆಯಲ್ಲಿ ಬಹುಶಃ ಚರ್ಚೆಮಾಡುವುದಕ್ಕೆ ಪ್ರಾರಂಭಮಾಡಿದರು ಅವರ ಜೊತೆ ವಾಗ್ಯುದ್ಧ ಮಾಡುವುದು ಪ್ರಾರಂಭವಾಯ್ತು. ಅದರ ಪರಿಣಾಮವಾಗಿ ಅನೇಕರನ್ನು ಹಿಡಿದುಕೊಂಡು ಹೋದ ಮೇಲೆ ಪೋಲೀಸು ಸ್ಟೇಷನ್ನಿನಲ್ಲಿ ಕುಡಿದಿದ್ದಾರೆ ಎಂದು ಗೊತ್ತಾಗಿ ಅದಕ್ಕೆ ಡಿಸ್ಟ್ರಿಕ್ಟ್ ಆಸ್ಪತ್ರೆಗೆ ಹೋಗಿ ಎಗ್ಜಾಮಿನ್ ಮಾಡಿಸಿದ್ದಾರೆ. ಆ ದಿವಸ ಬಹುಶಃ ರಾತ್ರಿ ಎಸ್ ಪಿ ಮತ್ತು ಡಿ ಸಿ ಹೋಗಿದ್ದಾರೆ. ಬೆಳಿಗ್ಗೆ ಎದ್ದ ಕೂಡಲೇ ೬-೩೦ ಅಥವಾ ೭ ಗಂಟೆಗೆ ಕೆಲವು ನಾಯಕರು ಡೆಪ್ಯುಟಿ ಕಮಿಷನರಿಗೆ ಈ ರೀತಿಯಿಂದ ರಾತ್ರಿ ನಮ್ಮ ಇಬ್ಬರು ಕೌನ್ಸಿಲರುಗಳಿಗೆ ಪೋಲೀಸರು ಬಹಳ ದೌರ್ಜನ್ಯದಿಂದ ನಡೆದುಕೊಂಡಿದ್ದಾರೆ, ಈ ರೀತಿ ಮಾಡಿದ್ದಾರೆ ಆ ರೀತಿ ಮಾಡಿದ್ದಾರೆ, ಎನ್ನುವಂಥ ಮಾತು ಹೇಳಿದಾಗ, ಅವರೇ ಸಮಾಧಾನದಿಂದ ಏನಾದರೂ ಮಾಡೋಣ ಎನ್ನುವಂಥ ಮಾತು ಹೇಳಿದರು ತಾಲ್ಲೂಕು ಕಚೇರಿ ಆವರಣದಲ್ಲಿ ಸಾವಿರಾರು ಜನ ಸೇರಿದ್ದರು. ಆವಾಗ ತಾಲ್ಲೂಕು ಕಚೇರಿಗೆ ಬಂದು ಏನಾದರೂ ಸಮಾಧಾನ ಮಾಡೋಣ ಎಂದು ಹೇಳಿದರು, ಇವರೂ ಕೂಡ ಹೇಳಿದ್ದಾರೆ, ಏನು ನಡೆದಿದೆ ಎಂದು ವಿಚಾರ ಮಾಡುತ್ತೇವೆ, ನೀವೆಲ್ಲರೂ ಹೊರಗಡೆ ಕಾಂಪೌಂಡಿನಲ್ಲಿ ಕುಳಿತು ಏನಾದರೂ ಮಾಡಬಹುದು, ಹೊರಗಡೆಗೆ ಹೋಗಿ, ಅವರಿಗೆ ಹೊರಗಡೆ ಕಳುಹಿಸಿ, ನಂತರ ಏನಾದರೂ ಮಾಡೋಣ, ಬಗೆ ಹರಿಸೋಣ ಎಂದು ಡಿ. ಐ.ಜಿ. ಹೋಗಿದ್ದಾರೆ, ಎಸ್.ಪಿ. ಮತ್ತು ಡೆಪ್ಯುಟಿ ಕಮಿಷನರಿದ್ದಾರೆ ಅವರು ನಾಯಕರನ್ನು ಕರೆದುಕೊಂಡು ಸರ್ಕ್ಯೂಟ್ ಹೌಸಿಗೆ ಅಲ್ಲಿ ಮಾತುಕತೆ ನಡೆಯುವ ಮುಂದೆ ಜನತೆ ಬಹುಶಃ ತಿರುಗಿ ಬಿದ್ದು, ಸಾವಿರಾರು ಜನ ಸೇರಿ, ಎಲ್ಲರೂ ತಾಲ್ಲೂಕು ಆಫೀಸಿನಲ್ಲಿ ಹೋಗಿ ಐ. ಡಿ ಲಿಕರ್ ಅಲ್ಲಿ ಏನಿತ್ತು, ಅದಕ್ಕೆ ಬೆಂಕಿ ಹಚ್ಚಿ ಹೊರಗೆ ಲಿಕರ್ ತಂದು ಬೆಂಕಿ ಹಾಕುವುದಕ್ಕೆ ಪ್ರಯತ್ನ ವಾಯಿತು. ಕಲ್ಲು ಎಸೆಯುವುದಕ್ಕೆ ಪ್ರಾರಂಭ ಮಾಡಿದರು; ಲಾಠಿ ಚಾರ್ಜ್ ಆಯಿತು, ಟಿಯರ್ ಗ್ಯಾಸ್ ಷೆಲ್ ಉಪಯೋಗಿಸಿದರು, ಮೈಕ್ರೋಫೋನ್ ಮೂಲಕ ವಾರ್ನಿಂಗ್ ಕೊಟ್ಟರು. ಹತೋಟಿಗೆ ಬರಲಿಲ್ಲ. ತಾಲ್ಲೂಕು ಮ್ಯಾಜಿಸ್ಟ್ರೇಟರು ಫೈರಿಂಗ್ ಆರ್ಡರ್ ಮಾಡಿದ್ದಾರೆ. ಅದರ ಪರಿಣಾಮವಾಗಿ ೧೨ ಜನರಿಗೆ ಬುಲೆಟ್ ಇಂಜುರೀಸ್ ಆಗಿವೆ, ೬೩ ಜನರಿಗೆ ಗದ್ದಲದಲ್ಲಿ, ಕಲ್ಲು ಎಸೆಯುವುದರಿಂದ, ಲಾಠಿ ಚಾರ್ಜಿನಿಂದ ಗಾಯಗಳಾಗಿವೆ. ಡಿ. ಎಸ್. ಪಿ.ಗೆ ಗಾಯಗಳಾಗಿವೆ, ಸರ್ಕಲ್ ಇನ್‌ಸ್ಪೆಕ್ಟರಿಗೆ ಗಾಯಗಳಾಗಿವೆ, ೨೭ ಜನ ಪೋಲೀಸ್ ಅಧಿಕಾರಿಗಳಿಗೆ ಗಾಯಗಳಾಗಿವೆ. ಈ ರೀತಿಯಿಂದ ನಿನ್ನೆಯ ದಿನದ ಘಟನೆ ನಡೆದಿದೆ. ಅದನ್ನು ನಾನು ಈ ಹೊತ್ತು ಹೇಳಬೇಕಾಗಿದ್ದರೆ, ನಾನು ಮೊದಲೇ ಹೇಳಿದ ಹಾಗೆ ಇದು ಯಾರಿಗೂ ಸಮಾಧಾನ ತರುವಂಥ ಘಟನೆಯಲ್ಲ. ನಾನು ಅದನ್ನು ಒಪ್ಪುತ್ತೇನೆ. ಆದರೆ ಈ ಹೊತ್ತಿನ ದಿವಸ ನಾನು ಹೇಳುವಂಥದ್ದು ಇಷ್ಟೆ ಈಗ ನಾವು ಯಾರೋ ಕೆಲವರು ಮಾಡಿದ್ದಾರೆಂದು ಅದರಿಂದ ಡಿಪಾರ್ಟಮೆಂಟನ್ನು ಡೀಮಾರಲೈಸ್ ಮಾಡುವಂಥ ಪ್ರಯತ್ನ ಮಾಡಬಾರದು ಎಂದು ಬಹಳ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಯಾರದಾರೂ ತಪ್ಪಿತಸ್ಥರಿದ್ದರೆ ಅವರಿಗೆ ಶಿಕ್ಷೆ ಮಾಡುವುದಕ್ಕೆ ನಾನೇನೂ ಹಿಂದು ಮುಂದು ನೋಡುವುದಿಲ್ಲ. ಯಾವ ಹುದ್ದೆಯವರಿರಬಹುದು, ಯಾವ ರ್‍ಯಾಂಕ್‌ನವರಿರಬಹುದು, ಯಾರಾದರೂ ಇರಲಿ, ಯಾರಾದರೂ ತಪ್ಪು ಮಾಡಿದ್ದರೆ, ಯಾರಾದರೂ ತಮ್ಮ ಅಧಿಕಾರ ಮೀರಿ, ಕಾನೂನು ಮೀರಿ ಏನಾದರೂ ವರ್ತನೆ ಮಾಡಿದ್ದರೆ ಅವರ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಎಂದೂ ಹಿಂದು ಮುಂದು ನೋಡುವುದಿಲ್ಲ. ಒಂದು ವಿಚಾರವನ್ನು ತಮ್ಮ ಮುಂದೆ ಬಹಳ ಕಳಕಳಿಯಿಂದ ಹೇಳುತ್ತೇನೆ. ಏಕೆಂದರೆ ಈ ಹೊತ್ತು ದೇಶದಲ್ಲಿ ಲಾ ಅಂಡ್ ಆರ್ಡರ್ ಇರಬೇಕು, ದೇಶದಲ್ಲಿ ಶಾಂತಿ ಇರಬೇಕು, ದೇಶದಲ್ಲಿ ಪ್ರತಿಯೊಬ್ಬ ನಾಗರಿಕನ ಮನಸ್ಸಿನಲ್ಲಿ ರೆಸ್ಪೆಕ್ಟ್ ಆಫ್ ಲಾ ಬರಬೇಕಾದ್ದು ಬಹಳ ಅವಶ್ಯವಿದೆ. ಒಂದು ವೇಳೆ ರೆಸ್ಪೆಕ್ಟ್ ಆಫ್ ಲಾ ಹೋದರೆ, ದೇಶದಲ್ಲಿ ಶಾಂತಿ ಉಳಿಯುವುದಕ್ಕೆ ಸಾಧ್ಯವಿಲ್ಲ, ಲಾ ಅಂಡ್ ಆರ್ಡರ್‌ಗೆ ಮಹತ್ವವಿರುವುದಿಲ್ಲ. ಕಿಮ್ಮತ್ತು ಇರುವುದಿಲ್ಲ. ಬಹುಶಃ ಈ ತರಹ ಘಟನೆಗಳು ಬೇಕಾದಷ್ಟು ಆಗಬಹುದು. ಬಹುಶಃ ಅಡ್ಮಿನಿಸ್ಟ್ರೇಷನ್ನಿಗೆ ಮತ್ತು ರೂಲ್ ಆಫ್ ಲಾಗೆ ಯಾವ ತರಹ ಕಿಮ್ಮತ್ತೂ ಬರಲಾರದ ಪರಿಸ್ಥಿತಿ ಬರುತ್ತದೆ. ಅದನ್ನು ನೋಡಿಕೊಂಡು ಹೋಗಬೇಕಾದ್ದು ಬಹಳಷ್ಟು ಅವಶ್ಯವಿದೆ. ಅಲ್ಲಲ್ಲಿ ಘಟನೆಗಳಾಗಿವೆ ಎನ್ನುವುದನ್ನು ನಾನು ಒಪ್ಪುತ್ತೇನೆ. ಎರಡನೇ ರಾಜ್ಯಗಳಲ್ಲಿ ಏನು ಪರಿಸ್ಥಿತಿ ನಡೆಯುತ್ತಿದೆ ಎನ್ನುವುದನ್ನು ನೋಡಿದರೆ ಅಂಥ ಪರಿಸ್ಥಿತಿ ನಮ್ಮಲ್ಲಿ ಬರಲಾರದಂತೆ ನಾವು ನೋಡಬೇಕಾಗಿದ್ದರೆ, ಪ್ರತಿಯೊಬ್ಬ ನಾಗರಿಕನಿಗೂ ಕೂಡ ನಮ್ಮ ಅಥಾರಿಟಿ ಬಗ್ಗೆ, ರೂಲ್ ಆಫ್ ಲಾ ಬಗ್ಗೆ, ಲಾ ಅಂಡ್ ಆರ್ಡರ್ ಬಗ್ಗೆ ರೆಸ್ಪೆಕ್ಟ್ ಬರಬೇಕಾದ್ದು ಬಹಳ ಆವಶ್ಯವಾಗಿದೆ. ಯಾರು ತಪ್ಪು ಮಾಡುತ್ತಾರೆ, ತಪ್ಪು ಮಾಡಿದ ಕೂಡಲೇ ಅವರ ಮೇಲೆ ನಾವೇ ಕ್ರಮ ತೆಗೆದುಕೊಳ್ಳುತ್ತೇವೆಂದರೆ, ಕಾನೂನು ಬೇಕಾಗಿಲ್ಲ, ಕಾಯಿದೆ ಬೇಕಾಗಿಲ್ಲ, ಕಚೇರಿಗಳು ಬೇಕಾಗಿಲ್ಲ, ಯಾವುವು ಬೇಕಾಗಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ:-- ಅದಕ್ಕೆ ಕಾರಣವಿಷ್ಟೆ ನೀವು ಕ್ರಮ ತೆಗೆದುಕೊಳ್ಳುವುದಿಲ್ಲ ಎಂದು ತಿಳಿದುಕೊಂಡು ಅವರೇ ಕ್ರಮ ತೆಗೆದುಕೊಳ್ಳುವುದಕ್ಕೆ ಹೊರಟಿದ್ದಾರೆ.

ಶ್ರೀ ವೀರೇಂದ್ರ ಪಾಟೀಲ್:— ಕ್ರಮ ತೆಗೆದುಕೊಳ್ಳುವುದಕ್ಕಾಗುತ್ತದೆ ಅಥವಾ ಇಲ್ಲ ಎನ್ನುವ ವಿಚಾರ ಮಾನ್ಯ ಸಿದ್ದವೀರಪ್ಪನವರಿಗೂ ಗೊತ್ತು. ಒಂದು ಸಲ ಜನರಲ್ಲಿ ಒಂದು ತರಹ ಎಮೋಷನ್ ರೈಸ್ ಆದರೆ ಅದನ್ನು ಕಂಟ್ರೋಲ್ ಮಾಡುವುದು ಬಹಳ ಕಷ್ಟವಾಗುತ್ತದೆ. ನನಗೆ ರಿಪೋರ್ಟ್ ಬಂದ ಪ್ರಕಾರ ಎಲ್ಲ ಲೀಡರ್ಸ್, ಡಿ. ಐ. ಜಿ , ಎಸ್. ಪಿ., ಡೆಪ್ಯುಟಿ ಕಮಿಷನರು ಇದ್ದರು. ಅನೇಕ ಲೀಡರ್ಸ್, ಬಂಗಾರಪ್ಪ ಮುಂತಾದವರೆಲ್ಲ ಕೈ ಜೋಡಿಸಿ ಹೇಳುತ್ತಿದ್ದರು, ಏನೂ ಮಾಡಬೇಡಿ, ಹೋಗಿ, ನಾವು ಮಾತನಾಡುತ್ತೇವೆ, ನಾವು ಸಮಾಧಾನ ಮಾಡುತ್ತೇವೆ ಎಂದು ಹೇಳುತ್ತಿದ್ದರು. ಯಾರಿಗೂ ಕಂಟ್ರೋಲ್ ಮಾಡಲಿಕ್ಕೆ ಆಗಲಿಲ್ಲ. ಜನರಲ್ಲಿ ಭಾವನೆಗಳು ಉದ್ರೇಕಗೊಂಡ ಮೇಲೆ ಪರಿಸ್ಥಿತಿ ಕಂಟ್ರೋಲ್ ಮಾಡುವುದು ಕಷ್ಟವಾಗುತ್ತದೆ. ಈ ಮಾನ್ಯ ಸಭೆಯಲ್ಲಿ ಅನೇಕ ಮಾನ್ಯ ಸದಸ್ಯರು ಅಭಿಪ್ರಾಯ ವ್ಯಕ್ತಮಾಡಿದ್ದಾರೆ. ಶ್ರೀಮಾನ್ ಬದ್ರೀನಾರಾಯಣರವರು ಆ ಕಡೆ ಕೂತಿರಬಹುದು, ಈ ಕಡೆ ಕೂತಿರಬಹುದು ಅವರ ಅಭಿಪ್ರಾಯದ ಬಗ್ಗೆ ನನ್ನ ಮನಸ್ಸಿನಲ್ಲಿ ಒಂದು ಭಾವನೆ ಮೂಡಿದೆ. ಅವರು ಬೇಜವಾಬ್ದಾರಿಯಿಂದ ಬೈಯಬೇಕು ಎಂಬ ಉದ್ದೇಶದಿಂದ ಅವರು ಹೇಳಿಲ್ಲ. ಶ್ರೀಮಾನ್ ಶ್ರೀನಿವಾಸರವರು ಈ ಕಡೆ ಇರುವವರು.

ಶ್ರೀ ಎಸ್. ಬಂಗಾರಪ್ಪ:—ಒಂದು ವಿಷಯ. ನಾನು ಪ್ರಚೋದನೆ ಮಾಡುವಂಥ ಭಾಷಣ ಮಾಡಿದೆ. ಎಂದು ಹೇಳುವುದು ಸಾಧುವಾದುದು ಅಲ್ಲ. ಹರತಾಳ ಮಾಡುವ ಬಗ್ಗೆ ಭಾಷಣ ಮಾಡಿದೆ ವೆಸ್ಟ್ ಬಂಗಾಲ ಉದಾಹರಣೆ ಹೇಳಿದೆ. ಆದರೆ ಲಾ ಅಂಡ್ ಆರ್ಡರ್ ಮೆಂಟೇನ್ ಮಾಡುವ ಜವಾಬ್ದಾರಿ ಸರಕಾರಕ್ಕೆ ಇದೆ. ಪೋಲೀಸಿನವರು ಈ ರೀತಿ ಅನ್ಯಾಯ ಮಾಡಲು ಪ್ರಾರಂಭ ಮಾಡಿದಾಗ ಜನ ರಕ್ಷಣೆ ಮಾಡಲು ಕೈ ಹಾಕಬೇಕಾಗುತ್ತದೆ. ವೆಸ್ಟ್ ಬೆಂಗಾಲ ಪ್ರಶ್ನೆ ಬೇರೆ. ಅದಕ್ಕೆ ಅವಕಾಶ ಕೊಡ ಬಾರದು, ಶಾಂತಿ ರಕ್ಷಣೆಗೆ ಗಮನ ಕೊಡಬೇಕು ಎಂದು ಹೇಳಿದೆ. ನಾನು ಹೇಳಿದ್ದು ಸವಿಸ್ತಾರವಾಗಿ ಪತ್ರಿಕೆಯಲ್ಲಿ ರಿಪೋರ್ಟ್ ಆಗಿದೆ. ನಾನು ಪ್ರಚೋದನೆ ಮಾಡಿದೆ ಎಂದು ಹೇಳುವುದು ಸರಿಯಲ್ಲ. ಇನ್ನು ಎರಡನೇ ವಿಷಯ ಅಂದರೆ ಡಿ. ಸಿ. ಪೋಲೀಸ್ ಸೂಪರಿಂಟೆಂಡೆಂಟ್ ಸಬ್ ಇನಸ್ಪೆಕ್ಟರ್ಸ್ ಎಲ್ಲರೂ ಇದ್ದರು. ಪೋಲೀಸ್ ಸ್ಟೇಷನ್ನಿಗೆ ಸಬ್ ಇನ್‌ಸ್ಪೆಕ್ಟರರೂ ಬಂದಿದ್ದರು. ಅಷ್ಟೂ ಜನ ಸೇರಿ ಇದು ಕಂಬೈಂಡ್ ಆಗಿದೆ.

ಶ್ರೀ ವೀರೇಂದ್ರ ಪಾಟೀಲ್:— ಮಾನ್ಯ ಸದಸ್ಯರು ಕ್ಲಾರಿಫಿಕೇಷನ್ ಕೊಟ್ಟಿದ್ದಾರೆ. ನನ್ನ ಹತ್ತಿರ ಬಂದಿರುವ ರಿಪೋರ್ಟ್‌ನಲ್ಲಿ ಏನು ಇದೆ ಅದನ್ನು ನಾನು ಹೇಳಿದ್ದೇನೆ. ಅದು ಏನೇ ಇರಲಿ ನನಗೆ ಅನಿಸುತ್ತದೆ, ಇದೆಲ್ಲಾ ರಿಪೋರ್ಟ್ ಮುಂದೆ ಇಟ್ಟುಕೊಂಡು ಮಾನ್ಯ ಸದಸ್ಯರು ಏನು ಅಭಿಪ್ರಾಯ ಪಟ್ಟಿದ್ದಾರೊ ಆ ಅಭಿಪ್ರಾಯಕ್ಕೆ ಕೂಡ ಮನ್ನಣೆಕೊಡಬೇಕಾಗುತ್ತದೆ. ಅವರು ಏನೋ ಅಭಿಪ್ರಾಯ ಪಟ್ಟಿದ್ದಾರೆ, ಅವರು ಹಾಗೆ ಹೇಳುತ್ತಾರೆ ನಾನು ಹೀಗೆ ಮಾಡುತ್ತೇನೆ ಎಂದು ಅಲ್ಲ. ನಾನು ಆತ್ಮ ಸಾಕ್ಷಿಯಾಗಿ ಇದನ್ನು ಮಾಡಬೇಕಾಗುತ್ತದೆ. ಈರಿಪೋರ್ಟ್ ನೋಡಿದರೆ ೧೮ನೇ ತಾರೀಖಿನ ಮಧ್ಯ ರಾತ್ರಿ ನಡೆದ ದುರ್ಘಟನೆ ಇದಕ್ಕೆ ಏನೋ ಎಂದು ನನಗೆ ಅನಿಸುತ್ತದೆ. ಅಂದು ರಾತ್ರಿ ಗಂಡ ಹೆಂಡತಿ ಇದ್ದರು ಈ ಪ್ರಶ್ನೆಗೆ ನಾನು ಹೋಗುವುದಿಲ್ಲ. ಅಂದು ಮಧ್ಯ ರಾತ್ರಿಯಲ್ಲಿ ಶ್ರೀಮಾನ್ ಸತ್ಯನಾರಾಯಣರಾವ್ ಮತ್ತು ಸರೋಜಮ್ಮ ಈ ಇಬ್ಬರನ್ನೂ ಪೋಲೀಸ್ ಸ್ಟೇಷನ್ನಿಗೆ ಹಿಡಿದುಕೊಂಡು ಹೋಗಿರುವ ಪೋಲೀಸ್ ಕಾನ್‌ಸ್ಟೇಬಲ್ ಗಂಗಾನಾಯಕ, ಅಮೀರ್ ಅಹಮ್ಮದ್ ವೆಂಕಟರಾಯಪ್ಪ ಮತ್ತು ಗಂಗಾಧರ ಡ್ಯೂಟಿಯಲ್ಲಿ ಅಂದು ಇದ್ದರು ಅವರೇ ಹಿಡಿದುಕೊಂಡು ಹೋಗಿರ ಬಹುದು ಎಂದು ಅನಿಸುತ್ತದೆ. ಪೂರ್ತಿ ರಿಪೋರ್ಟ್ ಓದಿಲ್ಲ. ಅವತ್ತಿನ, ದಿವಸ ಅವರೀರ್ವರನ್ನೂ ಪೋಲೀಸ್ ಸ್ಟೇಷನ್ನಿಗೆ ಹಿಡಿದುಕೊಂಡು ಹೋಗಿ ಬಹಳ ಹೊತ್ತು ಇಟ್ಟುಕೊಂಡು ಇರತಕ್ಕ ಪರಿಸ್ಥಿತಿಗೆ ಕಾರಣರಾದಂಥ ಪೋಲಿಸ್ ಕಾನ್‌ಸ್ಟೇಬಲ್‌ರು ಎಂದು ನನಗೆ ಅನಿಸುತ್ತದೆ. ಎಲ್ಲಾ ವಿಚಾರ ಮಾಡಿ ನೋಡಿದರೆ ಈ ಪೋಲೀಸ್ ಕಾನ್‌ಸ್ಟೇಬಲ್‌ರು ತಮ್ಮ ಎಲ್ಲೆ ಮೀರಿದ್ದಾರೆ ಎಂದು ನನಗೆ ಅನಿಸುತ್ತದೆ. ಏಕೆಂದರೆ ನಾನು ಈ ಮಾತನ್ನು ಅನೇಕ ಸಾರಿ ಹೇಳಿದ್ದೇನೆ ಪೋಲೀಸ್‌ನವರು We must function and give an impression to the people that we are friends, philosophers and gudeis ಅವರಿಗೆ ಅನೇಕ ಸಾರ್ತಿ ನಾನು ಈ ಮಾತುಗಳನ್ನು ಹೇಳಿದ್ದೇನೆ. ಆದರೆ ನನಗೆ ಅಸಿಸುತ್ತಿದೆ ಆ ದಿವಸ ಪೋಲೀಸಿನವರು ಆ ಇಬ್ಬರನ್ನೂ ಪೋಲೀಸ್ ಸ್ಟೇಷನ್ನಿಗೆ ಕರೆದುಕೊಂಡು ಹೋಗುವುದಕ್ಕೆ ಬದಲಾಗಿ ಅವರನ್ನು ಆವರ ಮನೆಗೆ ಕರೆದುಕೊಂಡು ಹೋಗಿ ಬಿಟ್ಟಿದ್ದಿದ್ದರೆ ಬಹಳ ಗ್ರೇಸ್‌ಫುಲ್ಲಾಗಿತ್ತು ಅಂತ ನನಗೆ ಅನಿಸುತ್ತಿದೆ ಆದರೆ ನಾನಾಗಲೇ ಅವರ ಬಗ್ಗೆ ಈ ಸಂಬಂಧದಲ್ಲಿ ಎನ್‌ಕ್ವೈರಿ ಮಾಡುವುದಕ್ಕೆ ನಿರ್ಣಯವನ್ನು ಮಾಡಿದ್ದೇನೆ. ಅಲ್ಲಿ ಏನು ದುರ್ಘಟನೆಯಾಗಿದೆ ಅದಕ್ಕೆ ಕಾರಣಗಳೇನು ಎಂಬುದನೆಲ್ಲಾ ಪೋಲೀಸಿನವರಿಂದ ತಪಾಸಣೆ ಮಾಡಿಸುವುದಲ್ಲದೆ ಅದಕ್ಕೆ ಇನ್ನೂ ಬೇರೆ

ಮಾರ್ಗಗಳಿವೆ, ಆ ಮಾರ್ಗದಲ್ಲಿ ಪ್ರಯತ್ನವನ್ನು ಮಾಡಿ ಆದರ ನಿಜಾಂಶವನ್ನು ತಿಳಿದುಕೊಂಡು ಆ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುತ್ತೇನೆ ಆದರೆ ಇಂಥದಕ್ಕೆಲ್ಲಾ ಜುಡಿಷಿಯಲ್ ಎನ್‌ಕ್ವೈರಿ ನಡೆಸಬೇಕೆಂದರೆ ಅದು ಸಾಧ್ಯವಿಲ್ಲ. ನಾನು ತಮಗೆ ಬಹಳ ಆತ್ಮ ವಿಶ್ವಾಸಪೂರ್ವಕದಿಂದ ಹೇಳುತ್ತೇನೆ ಈ ವಿಚಾರವನ್ನು ನಾನು ಅತ್ಯಂತ ಪ್ರಾಮಾಣಿಕ ರೀತಿಯಲ್ಲಿ ಒಬ್ಬ ಉನ್ನತಮಟ್ಟದ ಆಧಿಕಾರಿಯನ್ನು ನೇಮಕ ಮಾಡಿ ಅಂದರೆ ಒಬ್ಬ ಐ. ಎ. ಎಸ್. ಅಧಿಕಾರಿಯನ್ನು ಹಾಕಿ ಆ ಬಗ್ಗೆ ಪೂರ್ಣತಪಾಸೆ ಮಾಡಿಸುತ್ತೇನೆ. ನನ್ನ ಮಾತಿನಲ್ಲಿ ದಯವಿಟ್ಟು ಎಲ್ಲರೂ ವಿಶ್ವಾಸವಿಡಿ ಇದನ್ನು ನಾನು ಬಹಳ ಟ್ಯಾಕ್ಟ್‌ಫುಲ್ಲಾಗಿ ವಿಚಾರಣೆ ಮಾಡಿಸುತ್ತೇನೆ. ಮುಂದಿನ, ಕ್ರಮ ಕೈಗೊಳ್ಳಬೇಕೊ ಅದನ್ನು ಕೈಗೊಳ್ಳೋಣ ಎಂದು ಈ ನಾಲ್ಕು ಮಾತುಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್ ಬಂಗಾರಪ್ಪ: ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿ ಕುಳಿತಿರತಕ್ಕ ನಮಗೆಲ್ಲರಿಗೂ ಏನೊ ಮನಸ್ಸಿಗೆ ಸ್ವಲ್ಪ ಸಮಾಧಾನವಾಗತಕ್ಕ ರೀತಿಯಲ್ಲಿ ಒಂದು ದಾರಿಯನ್ನು ತೋರಿಸಿದ್ದಾರೆ. ಆದರೆ ಅವರು ತಮ್ಮ ಒಂದು ಸಂಪೂರ್ಣ ಜವಾಬ್ದಾರಿ ಏನಿತ್ತೋ ಅಷ್ಟನ್ನೂ ಪೂರ್ಣವಾಗಿ ಅವರು ನಿರ್ವಹಿಸಿಲ್ಲ ಎಂದು ನನ್ನ ಮನಸ್ಸಿಗೆ ಅನಿಸುತ್ತಿದೆ. ಈಗ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದೆಲ್ಲಾ ಆ ೧೮ ನೇ ತಾರೀಖಿನಲ್ಲಿ ನಡೆದ ವಿಚಾರದಲ್ಲಿ ಆ ೪ ಜನರ ಪೋಲಿಸಿನವರ ವಿಚಾರವಾಯಿತು. ಆದರೆ ವಿನಾಕಾರಣ ಅಲ್ಲಿ ಫೈರಿಂಗಾದ ಬಗ್ಗೆ ಯಾವ ತೀರ್ಪನ್ನೂ ಹೇಳಲಿಲ್ಲ ಅನೇಕರು ಈ ಸಭೆಯ ಸದಸ್ಯರು ಕಣ್ಣಾರೆ ಕಂಡ ವಿಚಾರಗಳನ್ನು ಇಲ್ಲಿ ಹೇಳಿದ್ದರೂ ಆ ಬಗ್ಗೆ ಮುಖ್ಯ ಮಂತ್ರಿಗಳೇನೂ ಉತ್ತರ ಕೊಟ್ಟ ಹಾಗೆ ಕಾಣುತ್ತಿಲ್ಲ. ಅಲ್ಲಿ ಆ ದಿವಸ ಹೆಲ್ಮೆಟ್ಟನ್ನು ಹಾಕಿಕೊಂಡಿದ್ದ ಡಿ. ಸಿ. ಅವರು ಪೋಲೀಸರಿಂದ ಕಲ್ಲುಗಳನ್ನು ತರಿಸಿ ಜನರ ಮೇಲೆ ಬೀರಿದ್ದಾರೆ. ಇದನ್ನು ಅನೇಕ ಸದಸ್ಯರು ನೋಡಿದ್ದಾರೆ. ಆ ದಿವಸ ಆ ಡಿ ಎಸ್. ಪಿ. ಕೂಡ ಹಾಗೆ ದುರ್ವರ್ತನೆ ಮಾಡಿದ್ದಾರೆ. ಅಲ್ಲದೆ ಅಲ್ಲಿದ್ದ ಕೌನ್ಸಿಲ್ ಮೆಂಬರುಗಳಿಗೆ ಇನ್ನು ಮೂರು ದಿನಗಳಲ್ಲಿ ನಿಮ್ಮನ್ನೆಲ್ಲಾ ನೋಡಿಕೊಳ್ಳುತ್ತೇನೆಂದು ಬೇರೆ ಭೀತಿ ಇಟ್ಟಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಉನ್ನತ ಅಧಿಕಾರಿಗಳ ಮೂಲಕ ವಿಚಾರಣೆ ಮಾಡಿಸುವುದು ಏನೆಂಬುದು ಅವರಿಗೂ ಗೊತ್ತಿದೆ ನಮಗೂ ಗೊತ್ತಿದೆ. ಆದರೆ ಈ ವಿಚಾರದಲ್ಲಿ ಅವರಿಗೆ ನಮಗೆ ಯಾರಿಗೂ ಮುಚ್ಚುಮರೆ ಬೇಡ. ಆ ಜಿಲ್ಲಾಧಿಕಾರಿ ಮತ್ತು ಡಿ. ಎಸ್. ಪಿ. ಯವರನ್ನು ಮೊದಲು ಸಸ್‌ಪೆಂಡ್ ಮಾಡಬೇಕೆಂಬುದು ನನ್ನ ಪ್ರಾರ್ಥನೆ. ಆದರೆ ಈಗ ಮಾನ್ಯ ಮುಖ್ಯ ಮಂತ್ರಿಗಳೇನು ಒಬ್ಬ ಉನ್ನತ ಅಧಿಕಾರಿಯಿಂದ ತನಿಖೆ ಮಾಡಿಸುತ್ತೇನೆಂದು ಹೇಳಿದ್ದಾರೆ ಆ ಬಗ್ಗೆ ನನಗೇನೋ ಅವರಲ್ಲಿ ನಂಬಿಕೆಯಿಲ್ಲ. ಆದ್ದರಿಂದ ನಾನು ಕೇಳಿಕೊಳ್ಳುವುದು ದಯವಿಟ್ಟು ಆ ಇಬ್ಬರನ್ನೂ ಮೊದಲು ಸಸ್‌ಪೆಂಡ್ ಮಾಡಿ ಅವರನ್ನು ಜುಡಿಷಿಯಲ್ ಎನ್‌ಕ್ವೈರಿಗೆ ಒಪ್ಪಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಕಾರಣವಿಲ್ಲದೆ ಅವರು ಫೈರಿಂಗ್ ಮಾಡುವುದಕ್ಕೆ ಅವಕಾಶವಿಲ್ಲ. ಈ ದಿವಸ ಸರ್ಕಾರದವರಿಗೇನೆ ತಪ್ಪಿತಸ್ಥರ ಬಗ್ಗೆ ಒಂದು ನ್ಯಾಯಾಂಗ ವಿಚಾರಣೆ ನಡೆಸಿ ಅವರಿಗೆ ಶಿಕ್ಷೆ ಮಾಡುತ್ತೇನೆಂಬ ಧೈರ್ಯ ಇಲ್ಲದಿರುವಾಗ ಇನ್ನು ಸಾಧಾರಣ ಮನುಷ್ಯನಿಗೆ ನಿತ್ಯ ವ್ಯವಹಾರದಲ್ಲಿ ಹೇಗೆ ಅವರಿಗೆ ಧೈರ್ಯ ಬರಬೇಕು? ಆದ್ದರಿಂದ ನಾನು ಅಧ್ಯಕ್ಷರ ಮೂಲಕ ಸರ್ಕಾರಕ್ಕೆ ನನ್ನ ಮನವಿ ಏನೆಂದರೆ ಆ ಇಬ್ಬರು ಅಧಿಕಾರಿಗಳನ್ನು ಅಲ್ಲಿಂದ ವರ್ಗ ಮಾಡುತ್ತೇನೆ ಎಂಬ ಪದ ಸೈತ ಮುಖ್ಯಮಂತ್ರಿಗಳ ಬಾಯಿಂದ ಬರಲಿಲ್ಲ. ಆದ್ದರಿಂದ ನನಗೆ ತಮ್ಮ ಭರವಸೆಯಿಂದ ಮತ್ತಷ್ಟು ಅನುಮಾನ ಬಂದಿದೆ. ಸಧ್ಯಕ್ಕೆ ಅವರನ್ನು ಅಲ್ಲಿಂದ ವರ್ಗ ಮಾಡುತ್ತೇವೆಂಬ ಒಂದು ಮಾತಾದರೂ ತಮ್ಮ ಬಾಯಿಂದ ಬರಬಹುದಿತ್ತು. ಅದೂ ಕೂಡ ಬರಲಿಲ್ಲ.

ಸರ್ಕಾರದವರು ನಾವು ಕೊಡತಕ್ಕ ಹೇಳಿಕೆ ಗಳನ್ನು ಗಮನಕ್ಕೆ ತೆಗೆದುಕೊಂಡು ಇಲ್ಲಿ ಉತ್ತರ ಕೊಡುವುದಿಲ್ಲ ಡೆಪ್ಯುಟಿಕಮೀಷನರು ಏನು ಹೇಳಿದ್ದಾರೆ ಅದರಪ್ರಕಾರ ಉತ್ತರ ಕೊಡುತ್ತಿದ್ದಾರೆಯೇ ವಿನು ಅಲ್ಲಿಗೆ ಬಂದಿದ್ದ ಜನ ಏನು ಹೇಳಿದ್ದಾರೆ ಎಂಬುದನ್ನು ಗಮನಕ್ಕೆತೆಗೆದುಕೊಂಡು ಇದರಲ್ಲಿ ತಪ್ಪು ಮಾಡಿದವರಿಗೆ ಶಿಕ್ಷೆ ಮಾಡಬೇಕು ಎಂದು ನಾವು ಸಲಹೆ ಮಾಡಿದ್ದರೂ ಕೆಲವು ಕೆಳದರ್ಜೆಯ ನೌಕರರುಗಳನ್ನು ಸಸ್‌ಪೆಂಡು ಮಾಡುತ್ತೇವೆ. ಎಂದು ಹೇಳುವುದು ಸರಿಯಲ್ಲ. ಕೊನೆಯ ಪಕ್ಷ ನಾನು ಹೇಳಿದ ಅಲಿಗೇಷನ್ ಗಳನ್ನಾದರೂ ಸರಿಯಾಗಿ ಪರಿಶೀಲನೆ ಮಾಡಬೇಕಾದರೆ ಸರಕಾರ ಯೋಗ್ಯವಾದ ಒಂದು ನ್ಯಾಯಾಂಗ ವಿಚಾರಣೆಗೆ ಗುರಿ ಮಾಡಿದರೆ ಸರಿಹೋಗುತ್ತದೆ ಎಂದು ಹೇಳಿದೆ ನಾನು ಕೇಳಿದ ಮೂರು ವಿಷಯಗಳನ್ನೂ ಬಿಟ್ಟು ಇಲ್ಲಿ ಮುಖ್ಯ ಮಂತ್ರಿಗಳು ಸ್ಟೇಟುಮೆಂಟು ಕೊಟ್ಟಿರುವುದನ್ನು ನೋಡಿದರೆ ಇದರಲ್ಲೇನೊ ನಮಗೆ ಒಂದು ರೀತಿಯ ಅನುಮಾನ ಬರಲು ಕಾರಣವಾಗಿದೆ. ಅವರನ್ನು ಸಸ್‌ಪೆಂಡು ಮಾಡಬೇಕು ಎನ್ನುವ ವಿಚಾರ ಹೇಳಿದ್ದಾರೆಯೇ ಹೊರತು ಇದರಲ್ಲಿ ಇವರನ್ನು ಟ್ರಾನ್ಸ್‌ಫರು ಮಾಡುತ್ತೇವೆ ಅಥವ ಇಲ್ಲ ಎನ್ನುವ ಬಗ್ಗೆ ಏನನ್ನು ಹೇಳಲಿಲ್ಲ. ಇದಕ್ಕಾಗಿ ನಮ್ಮ ಮೊದಲನೇ ಬೇಡಿಕೆ ನ್ಯಾಯ ವಿಚಾರಣೆ ಮಾಡಿದರೆ ಇದರಿಂದ ಎಲ್ಲರಿಗೂ ಅನುಕೂಲವಾಗುತ್ತದೆ. ಎಂಬುದು ಇದರ ಬಗ್ಗೆ ಮೊದಲು ಮಾನ್ಯ ಮುಖ್ಯ ಮಂತ್ರಿಗಳು ಅನುಮಾನಕ್ಕೆ ಎಡೆ ಕೊಡದೆ ಮಂತ್ರಿಗಳು ಒಂದು ಹೇಳಿ ಕೊಡಬೇಕು ಎಂದು ನಾನು ಅಧ್ಯಕ್ಷರ ಮೂಲಕ ಬೇಡಿಕೊಳ್ಳುತ್ತೇನೆ.

ಶ್ರೀ ಹೆಚ್.ಎನ್. ನಂಜೇಗೌಡ:—ಸ್ವಾಮೀ, ಮಾನ್ಯ ಮುಖ್ಯ ಮಂತ್ರಿಗಳು ಅಪ್ಪಣೆ ಕೊಡಿಸಿದರು ಇದರೊಳಗೆ ಇರುವ ಕೆಲವು ಸಣ್ಣ-ಪುಟ್ಟ ಅಧಿಕಾರಿಗಳನ್ನು ಸಸ್‌ಪೆಂಡು ಮಾಡುತ್ತೇವೆ ಎಂದು. ಅದನ್ನು ಹೇಗಾದರೂ ಮಾಡಲಿ, ಬಿಡಲಿ, ನನಗನಿಸುವುದು ಕೆಲವು ಕಾನ್‌ಸ್ಟೇಬಲ್‌ಗಳ ಮೇಲೆ ಮಾತ್ರ ಕ್ರಮತೆ ಗೆದುಕೊಂಡು ಅದರ ಮೇಲೆ ಇರುವ ಎಸ್ ಪಿ ಹಾಗೂ ಇನ್ನಿತರ ಅಧಿಕಾರಿಗಳನ್ನು ಬಿಟ್ಟರೆ ಇದರಲ್ಲಿ ಸರಕಾರ ಅವರಿಗೆ ರಕ್ಷಣೆ ಕೊಡುತ್ತದೆ ಎಂದು ಜನರಲ್ಲಿ ಅನುಮಾನ ಬರುತ್ತದೆ. ಇದರಲ್ಲಿ ಕ್ರಮ ತೆಗೆದುಕೊಂಡು ಶಿಕ್ಷೆ ಮಾಡಬೇಕಾದರೆ ಎಲ್ಲರನ್ನೂ ಒಟ್ಟಿಗೆ ವಿಚಾರಣೆ ಮಾಡಿ ಕ್ರಮ ತೆಗೆದುಕೊಳ್ಳಬೇಕು. ಹಿಂದೆ ಕೂಡ ಇದೇ ರೀತಿ ಒಂದು ಸಂದರ್ಭ ಬಂದಿದ್ದಾಗ ಸರಕಾರ ಪೋಲೀಸಿನವರ ಮೇಲೆ ಯಾವ ರೀತಿ ಕ್ರಮಕ್ಕೆಗೊಂಡರ ಎನ್ನುವುದು ನಮಗೂ ಗೊತ್ತಿದೆ. ಇದರಲ್ಲಿ ಸರಕಾರ ಕ್ರಮ ಕೈಗೊಳ್ಳುವಾಗ it is a derection of duty ಎಂದು ಶಿಕ್ಷೆಮಾಡುವಾಗ ಬರೀ ಬಡ ನೌಕರರುಗಳಾದ ಪೋಲೀಸು ಕಾನ್‌ಸ್ಟೇಬಲ್‌ಗಳ ಮೇಲೆಮಾತ್ರ ಕ್ರಮ ತೆಗೆದುಕೊಂಡು ಇತರೆ ಅಧಿಕಾರಿಗಳನ್ನು ಬೇ ಡುವುದು ಅಷ್ಟು ಸರಿಯಿಲ್ಲ. ಸಸ್ಪೆಂಡು ಮಾಡುತ್ತೇವೆನ್ನುವುದಾದರೆ ಸೂಪರಿಂಡೆಂಟರನ್ನು ಸಸ್‌ಪೆಂಡು ಮಾಡಬೇಕು; ಬಾಕಿ ಅಧಿಕಾರಿಗಳನ್ನು ನೆಡಬೇಕು It will be a fail treatment. ಇದನ್ನು ಬಿಟ್ಟು ಬರೀ ನಾಲ್ಕು ಜನ ಪೋಲೀಸು ಕಾನ್‌ಸ್ಟೇಬಲ್‌ಗಳನ್ನು ಸಸ್‌ಪೆಂಡು ಮಾಡಿದರೆ ಇದರಿಂದೇನೂ ಆಗವುದಿಲ್ಲ. ಬರೀ ನಾಲ್ಕು ಬಡ ಜನಕ್ಕೆ ಶಿಕ್ಷೆ ಮಾಡಿದರು ಇತರರಿಗೆ ರಕ್ಷಣೆ ಎನ್ನುವ ಅರ್ಥ ಬರುವಂತೆ ಮಾಡುವುದು ಬೇಡ. ಕಾರ್ಯಕ್ರಮ ತೆಗೆದುಕೊಳ್ಳುವುದು ಎಂದು ಇದ್ದರೆ ಸಹೃದಯಂತೆಯಿಂದ ಎಲ್ಲ ಅಧಿಕಾರಿಗಳ ಮೇಲೆಯೂ ವಿಚಾರ ಮಾಡಿ ಕ್ರಮ ತೆಗೆದುಕೊಳ್ಳುವುದ ಸರಿಯಾಗಿರುತ್ತದೆ.

ಶ್ರೀ ವೀರೇಂದ್ರ ಪಾಟೀಲ್:—ಸ್ವಾಮೀ ಮಾನ್ಯ ಶ್ರೀ ಬಂಗಾರಪ್ಪನವರಲ್ಲಿ ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಅಡ್ಮಿನಿಸ್ಟ್ರೇಷನ್ ವಿಚಾರದಲ್ಲಿ ಅವರು ಹೇಳಿದಂತೆ ಡೆಪ್ಯುಟಿ ಕಮೀಷನರುವರು ಹಾಗೂ ಎಸ್ ಪಿ ಇವರುಗಳನ್ನು ಸಸ್‌ಪೆಂಡು ಮಾಡವುದು ಎಂದು ಹೇಳಿದರೆ ಆ ರೀತಿ ಮಾಡುವುದು ಬಹಳ ಕಷ್ಟವಾಗುತ್ತದೆ. ನಾನು ಆಗಲೇ ಹೇಳಿದ್ದೆ, ಯಾರೇ ತಪ್ಪಿತಸ್ಥರಿರಲಿ, ಅವರು ಎಷ್ಟೇದೊಡ್ಡ ಹುದ್ದೆ ಯಲ್ಲಿರಲಿ, ಇಷ್ಟು ಮಾತ್ರ ಮಾನ್ಯ ಸಭೆಗೆ ಹೇಳುತ್ತೇನೆ, ನಾನು ಯಾವ ಉನ್ನತ ಅಧಿಕಾರಿಗಳನ್ನು ಅಲ್ಲಿಗೆ ವಿಚಾರ ಮಾಡಲು ಕಳುಹಿಸುತ್ತೇನೋ ಅವರಿಂದ ಬರುವ ರಿಪೋರ್ಟನ್ನು ತರಿಸಿಕೊಂಡು ಅದರ ಮೇಲೆ ಮುಂದಿನ ಕ್ರಮಕ್ಕೆ ಗೊಳ್ಳುತ್ತೇನೆ. ಇದರಲ್ಲಿ ಯಾವ ಅನುಮಾನವನ್ನೂ ಇಟ್ಟುಕೊಳ್ಳುವುದು ಬೇಡ ಎಂದ-ನಾನು ಸ್ಪಷ್ಟವಾಗಿ ಆಗಲೇ ಕಳಿಕಳಿಯಿಂದ ಈ ಮನೆಯಲ್ಲಿ ಹೇಳಿದ್ದೇನೆ. ಇಂತಹ ಒಂದರ ಘಟನೆ ಪೋಲೀಸು ಡಿಪಾರ್ಟ್‌ಮೆಂಟಿನವರಿಂದ ಆಗಿದ್ದಲ್ಲಿ ಅದರಿಂದ ಸರಕಾರಕ್ಕೆ ಕೆಟ್ಟಹೆಸರು ಬರುತ್ತದೆ ಎಂಬುದನ್ನು ನಾನೂ ಬಲ್ಲೆ ಅದಕ್ಕಾಗಿ ಜಾಗರೂಕತೆಯಿಂದ ಕ್ರಮ ತೆಗೆದುಕೊಳ್ಳುವುದು ನನ್ನ ಧರ್ಮ. ಅದಷ್ಟು ಜಾಗ್ರುತೆ ನಮ್ಮ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸುತ್ತೇನೆ. ಅವರಿಂದ ಇದು ಪರಿಶೀಲನೆ ಯಾಗುತ್ತದೆ. ಅವರು ಯಾವ ತರಹದ ರಿಪೋರ್ಟು ಕೊಡುತ್ತಾರೋ ಅದುನಮಗೆ ಗೊತ್ತಿಲ್ಲ ಆದುದರಿಂದ ನಾನು ಮತ್ತೊಮ್ಮೆ ಕಳಿಕಳಿಯಿಂದ ಇಲ್ಲಿ ವಿನಂತಿಮಾಡಿಕೊಳ್ಳುವುದು ನೀವು ಅನೇಕ ವಿಚಾರಗಳನ್ನು ಇದರಲ್ಲಿ ಹೇಳಿದ್ದೀರಿ. ನಿಮ್ಮ ಮನಸ್ಸಿಗೆ ನೋವುಂಟಾಗಿದೆ, ಎನ್ನುವುದರ ಅರಿವು ನಮಗೂ ಉಂಟಾಗಿದೆ ಇದರ ಜವಾಬುದಾರಿಯನ್ನು ನನಗೆ ಬಿಟ್ಟು ಬಿಡಿ. ನನ್ನ ಮೇಲೆ ಯಾವ ರೀತಿಯ ಒತ್ತಾಯವನ್ನೂ ತರಬೇಡಿ ಮತ್ತೊಮ್ಮೆ ತಮ್ಮೆಲ್ಲರಲ್ಲಿ ನಾನು ಕಳಿಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಚ್. ಎನ್ ನಂಜೇಗೌಡ: — ಬರೀ ಕಾನ್‌ಸ್ಟೇಬಲ್‌ಗಳನ್ನು ಸಸ್‌ಪೆಂಡು ಮಾಡುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಇದರಲ್ಲಿ ಯಾರು ತಪ್ಪಿತಸ್ಥರು ಎನ್ನುವುದು ಗೊತ್ತಾಗುವುದೂ ಇಲ್ಲ, ಹಿಂದೆ ಕೂಡ ಇದೇ ರೀತಿ ಅಸೆಂಬ್ಲಿಯಲ್ಲಿ ಚರ್ಚೆ ಆಡ ಒಂದು ಸಂದರ್ಭದಲ್ಲಿ ಇಲಾಖಾ ಮೂಲಕ ಆದ ವಿಚಾರಣೆಗಳು ಯಾವ ರೀತಿ ಆಗಿವೆ ಮತ್ತು ಇದರ ವ್ಯವಹಾರ ಹೇಗಾದವು ವನ್ನುವುದು ನಮಗೆ ಗೊತ್ತಿದೆ.

ಶ್ರೀ ವೀರೇಂದ್ರ ಪಾಟೀಲ್: ಮಾನ್ಯ ಸದಸ್ಯರು ಹಾಗೆ ಹೇಳಿದರೆ ತಪ್ಪಾಗುತ್ತದೆ. 'ಡೆರಿಲಿಕನ್‌ಅಫ್ ಡ್ಯೂಟಿ' ಎಂದು ಹೇಳುವಾಗ 'ಕಮೀಷನರ್'ಎಂದು ಹೇಳಿದರೆ ಅದೇಬೇರೆ. 'ಒಮಿಷನ್' ಎಂದರೆ ಅದೇ ಬೇರೆ ಯಾಗುತ್ತದೆ, ಈಕೇಸಿನಲ್ಲಿ ಏನಾಗಿದೆ ಎಂದರೆ ಇದರಲ್ಲಿ ಇನ್ನೂ ಪ್ರಿಲಿಮಿನರಿ ಎನ್‌ಕ್ವೈರಿಯೇ ಆಗಿಲ್ಲ. ಇದರ ಬಗ್ಗೆ ವಿವರಗಳನ್ನು ಸರಿಯಾಗಿ ತಿಳಿಯದೆ ಹೇಳುವುದು ಕಷ್ಟ. ಮತ್ತೊಂದು ವಿಷಯ ಇದರಲ್ಲಿ ಬಂದಿರುವುದು ಅವರೇ ಹೇಳುವಂತೆ ನೇರವಾಗಿ ಇವೊತ್ತು ನಾವು ಊಹೆ ಮಾಡುವಂತೆ ಇದರಲ್ಲಿ ಅಫೆನ್ಸ್ ಮಾಡಿದ್ದಾರೆ ಇದರ ಬಗ್ಗೆ ತಕ್ಕ ಕ್ರಮ ತೆಗೆದುಕೊಂಡು ಶಿಕ್ಷೆ ಮಾಡಬೇಕು ಎಂದು ಹೇಳಿದರೆ ಅದೇ ಬೇರೆ. ಗ್ರ್ಯಾವಿಟಿ ಆಫ್ ಅಫೆನ್ಸ್ ಎನ್ನುವುದರ ಅರ್ಥವೇನು ಎನ್ನುವುದನ್ನು ಮಾನ್ಯ ಸದಸ್ಯರು ಚೆನ್ನಾಗಿ ತಿಳಿದುಕೊಳ್ಳಬೇಕು,

(ಶ್ರೀ ವೀರೇಂದ್ರ ಪಾಟೀಲ್)

ಆ ಲೆಕ್ಕದಿಂದ ಹೇಳುತ್ತಿದ್ದೇನೆ. ನೇರವಾಗಿ ಈ ಬಗ್ಗೆ ಕಾರಣರಾದವರ ಬಗ್ಗೆ ವರದಿ ಬಂದಮೇಲೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ. ಮೊದಲೇ ಪೋಲೀಸ್‌ನವರು ಸರಿಯಾಗಿ ನಡೆದುಕೊಂಡಿದ್ದರೆ ಈ ರೀತಿಯ ಪರಿಸ್ಥಿತಿ ಬರುತ್ತಿರಲಿಲ್ಲ. ಕೆಳಗಿನವರನ್ನು ಶಿಕ್ಷೆಗೆ ಗುರಿಪಡಿಸಬೇಕು, ಮೇಲಿನವರಿಗೆ ರಕ್ಷಣೆ ಕೊಡಬೇಕು ಎಂಬುದು ನನ್ನ ಮನಸ್ಸಿನಲ್ಲಿ ಇಲ್ಲ. ಮಾನ್ಯ ನಂಜೇಗೌಡರಿಗೆ ಪೋಲೀಸ್ ಕಾನ್ಸ್‌ಟೇಬಲ್ಸ್ ಬಗ್ಗೆ ಇದ್ದಕ್ಕಿದ್ದಂತೆ ಸಿಂಪತಿ ಹುಟ್ಟಿದಂತೆ ಕಾಣುತ್ತದೆ ನನ್ನ ಬಗ್ಗೆ ಹೇಳುವುದಾದರೆ ಈ ಕೇಸ್‌ನಲ್ಲಿ ನನಗೆ ಯಾರ ಬಗ್ಗೆಯೂ ಸಿಂಪತಿ ಇಲ್ಲ. ಯಾರ ಬಗ್ಗೆಯೂ ಎರಡನೆಯ ಅಭಿಪ್ರಾಯವನ್ನು ಇಟ್ಟುಕೊಂಡಿಲ್ಲ. ತಪ್ಪು ಯಾರು ಯಾರು ಮಾಡಿದ್ದಾರೆ ಎಂಬುದು ತನಿಖೆ ಮಾಡಿಸಿದ ನಂತರ ಗೊತ್ತಾಗುತ್ತದೆ, ನಂತರ ಮುಂದಿನ ಕ್ರಮ ತೆಗೆದುಕೊಳ್ಳಬಹುದು.

7-30 P. M.

SRI H. SIDDAVEERAPPA:—I will suggest that he may get it examined through the Law Department whether he has powers to keep them under suspension.

ಶ್ರೀ ವೀರೇಂದ್ರಪಾಟೀಲ್:—ನಾನೇ ಸಸ್‌ಪೆಂಡ್ ಮಾಡುತ್ತೇನೆ ಎಂದು ಹೇಳಲಿಲ್ಲ. ಸಂಬಂಧಪಟ್ಟ ಮೇಲಿನ ಅಧಿಕಾರಿಗಳು ತಪ್ಪಿತಸ್ಥರನ್ನು ಸಸ್‌ಪೆಂಡ್‌ನಲ್ಲಿಡುತ್ತಾರೆಂದು ಹೇಳಿದೆ.

ಶ್ರೀ ಎಸ್. ಬಂಗಾರಪ್ಪ:—ಮಾನ್ಯ ಮುಖ್ಯಮಂತ್ರಿಗಳು ಕಳಕಳಿಯಿಂದ ನನ್ನನ್ನೇ ವಿನಂತಿ ಮಾಡಿಕೊಂಡರು. ಅದು ಬಹಳ ಆಶ್ಚರ್ಯವಾಗಿ ಕಾಣುತ್ತದೆ. ಮುಖ್ಯಮಂತ್ರಿಗಳು ಬಹಳ ದಕ್ಷ ಆಡಳಿತಗಾರರಾಗಿದ್ದಾರೆಂದು ಶ್ರೀಮಾನ್ ಶ್ರೀನಿವಾಸನ್ ಅವರು ಹೇಳಿದರು. ಆದರೆ ಈಗ ಮುಖ್ಯಮಂತ್ರಿಗಳು ನನ್ನನ್ನೇಕೆ ಕಳಕಳಿಯಿಂದ ವಿನಂತಿಮಾಡಿಕೊಂಡರು? ಅನ್ಯಾಯ ಅಧಿಕಾರಿಗಳಿಂದ ನಡೆದಿರುವುದನ್ನು ನಾನು ನನ್ನ ಕಣ್ಣಾರೆ ನೋಡಿದ್ದೇನೆ. ಅದು ಅಸತ್ಯ ಎಂದು ರುಜುವಾತು ಪಡಿಸುವುದಕ್ಕೆ ಯಾರಿಗೂ ಸಾಧ್ಯವಿಲ್ಲ. ಅದೇ ಅಧಿಕಾರಿಗಳನ್ನು ಅಲ್ಲಿ ಇಟ್ಟು ವಿಚಾರಣೆ ನಡೆಸಿದರೆ ನ್ಯಾಯ ಸಿಗುತ್ತದೆ ಎಂಬ ನಂಬಿಕೆ ನನಗೆ ಇಲ್ಲ. ಮಾನ್ಯ ಮುಖ್ಯಮಂತ್ರಿಗಳು ಕೆಟ್ಟ ಅಧಿಕಾರಿಗಳನ್ನು ಎತ್ತಿ ಹಿಡಿಯುವುದಕ್ಕೆ ಹೊರಟಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಂಥ ಹೇಳಿಕೆಯನ್ನು ಆ ಕಡೆ ಇರುವಂಥ ಮಾನ್ಯ ಸದಸ್ಯರೆಲ್ಲರೂ ಒಪ್ಪುತ್ತಾರೆಯೇ ಎಂದು ನಾನು ಕೇಳುತ್ತೇನೆ. ಆ ಅಧಿಕಾರಿಗಳನ್ನು ಸಸ್ಪೆಂಡ್ ಮಾಡುವುದಕ್ಕೆ ಆಗದಿದ್ದರೆ ಕೊನೆಯಪಕ್ಷ ಬೇರೆ ಕಡೆಗೆ ವರ್ಗವನ್ನಾದರೂ ಮಾಡಿಸಬೇಕೆಂದು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಮತ್ತು ಇದಕ್ಕೆ ಆ ಕಡೆಯ ಸದಸ್ಯರು ಸಹ ಒಪ್ಪಬೇಕೆಂದು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ ಹಿಂದೆ ಇಂಥ ಕೇಸ್‌ಗಳು ನಡೆದಾಗ ಸಂಬಂಧಪಟ್ಟ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿ ನಂತರ ವಿಚಾರಣೆ ನಡೆಸಿದ ಉದಾಹರಣೆಗಳು ಎಷ್ಟೋ ಇವೆ. ಆದ್ದರಿಂದ ಕೊನೆಯಪಕ್ಷ ಆ ಅಧಿಕಾರಿಗಳನ್ನು ಬೇರೆ ಕಡೆಗೆ ವರ್ಗವನ್ನಾದರೂ ಮಾಡಿಸಬೇಕೆಂದು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

SRI M. N. RAMANNA:—It is already 7-25 P. M. You said earlier that we could sit up to 7 P. M May I know how long can we sit? It is not fair to sit beyond the time fixed.

MR SPEAKER:—Rule 56 prescribes the minimum time of 2 hours. It reads like this:

> "The Speaker may, if he is satisfied that there has been adequate debate, put the question at 6 P. M. or at such other hour not being less than two hours from the time of commencement of the debate."

Now two hours time is over and time has to be extended.

I will extend the time up to 7-45 P. M. The Hon. Chief Ministee made a detiailed reply in detail. Naturally it took some time Thr deleate shall close at 7-45 P. M.

ಶ್ರೀ ಕೆ. ಎಚ್. ಶ್ರೀನಿವಾಸ್:—ಈಗ ನಾನು ಪ್ರತಿಯೊಂದಕ್ಕೂ ಜ್ಯುಡಿಷಿಯಲ್ ಎನ್‌ಕ್ವೈರಿಯನ್ನು ಮಾಡಬೇಕೆಂದು ಹೇಳುವವನಲ್ಲ. ಜ್ಯುಡಿಷಿಯಲ್ ಎನ್‌ಕ್ವೈರಿಯಾದರೆ ಮಾತ್ರ ಸತ್ಯವನ್ನು ಎತ್ತಿ ತೋರಿಸುತ್ತದೆ ಎಂದು ಹೇಳವವನು ನಾನಲ್ಲ. ನಿಷ್ಪಕ್ಷಪಾತವಾದ ವಿಚಾರಣೆಯನ್ನು ಮಾಡತಕ್ಕಂಥ ದಕ್ಷತೆಯಿರುವ ಅಧಿಕಾರಿಗಳಿದ್ದಾರೆಂಬ ನಂಬಿಕೆ ನನಗೆ ಇದೆ. ಅಲ್ಲಿಯ ಅಧಿಕಾರಿಗಳನ್ನು ವರ್ಗ ಮಾಡುವ ಬಗೆ ನಾನು ಹೇಳುವುದು ಇಷ್ಟೆ. ಅವರನ್ನು ವರ್ಗ ಮಾಡದೆ ಅಲ್ಲಿಯೇ ಇಟ್ಟರೂ ಕೂಡ ತನಿಖೆ ನಡೆಸುವಾಗ ಸಾಕ್ಷಿ ಕೊಡುವುದಕ್ಕೆ ಬರುವ ಬಡ ಪರದೇಶಿಗಳಿಗೆ ಯಾವ ರೀತಿಯಿಂದಲೂ ತೊಂದರೆಯಾಗದಂತೆ ನೋಡಿಕೊಳ್ಳಬೇಕು ಮತ್ತು ನಿಷ್ಪಕ್ಷಪಾತವಾಗಿ ತನಿಖೆ ನಡೆಸಬೇಕೆಂದು ಕೇಳಿಕೊಳ್ಳುತ್ತೇನೆ. ಅಂತಹ ಒಂದು ಭರವಸೆ ಸಿಕ್ಕಿದರೆ ನಾನು ತೃಪ್ತಿಪಟ್ಟುಕೊಳ್ಳುವುದಕ್ಕೆ ಸಿದ್ಧನಿದ್ದೇನೆ. ಮತ್ತು ಅಂತಹ ಒಂದು ಭರವಸೆಯಿಂದ ಮಾನ್ಯ ಬಂಗಾರಪ್ಪನವರು ಸಹ ತೃಪ್ತಿಪಟ್ಟುಕೊಳ್ಳುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಎಸ್. ಬಂಗಾರಪ್ಪ:—ಈಗ ಎನ್‌ಕ್ವೈರಿ ಮಾಡುವುದಾದರೆ ಅಲ್ಲಿ ಡೆಪ್ಯುಟಿ ಕಮಿಷನರು, ಸೂಪರಿನ್‌ಟೆಂಡ್ ಆಫ್ ಪೋಲೀಸ್, ಸಬ್ ಇನ್‌ಸ್ಪೆಕ್ಟರು ಎಲ್ಲಾ ಸೆಟ್ಟೂ ಇದೆ. ಅವರೆಲ್ಲರನ್ನೂ ಎನ್‌ಕ್ವೈರಿ ಮಾಡಬೇಕಾಗುತ್ತದೆ. ಆದ್ದರಿಂದ ಅವರನ್ನು ಆ ಸ್ಥಳದಿಂದ ಬೇರೆ ಕಡೆಗೆ ಟ್ರಾನ್ಸ್‌ಫರ್ ಮಾಡಿ ಎನ್‌ಕ್ವೈರಿ ಮಾಡಬೇಕು. ಮಾನ್ಯ ಸದಸ್ಯರಾದ ಶ್ರೀ ಕೆ. ಎಚ್. ಶ್ರೀನಿವಾಸ್ ಅವರಿಗೂ ಅದೇ ಭಾವನೆ ಇದೆಯೆಂದು ನಾನು ತಿಳಿದುಕೊಂಡಿದ್ದೇನೆ. ಆ ರೀತಿ ಮಾಡುತ್ತೀರಾ?

ಶ್ರೀ ಎಸ್. ಹುಚ್ಚಮಾಸ್ತಿಗೌಡ:—ಜಿಲ್ಲಾ ಮಟ್ಟದ ಅಧಿಕಾರಿಗಳಾದ ಡೆಪ್ಯುಟಿ ಕಮಿಷನರು, ಪೋಲೀಸ್ ಸೂಪರಿನ್‌ಟೆಂಡೆಂಟರು ಇಂಥವರು ಇದರಲ್ಲಿ ಇದ್ದಾರೆ. ಅವರ ಮೇಲೆ ಅಪಾದನೆಗಳು ಇವೆಯೆಂಬುದು ಗೊತ್ತಿದೆ. ಆ ಆಫೀಸರನ್ನು ವಿಚಾರಣೆ ಮಾಡುವಾಗ ಅವರು ಸ್ಥಳದಲ್ಲಿಯೇ ಇದ್ದರೆ ಪ್ರಭಾವ ಬೀರುತ್ತಾರೆ. ಈ ವಿಷಯ ಮುಖ್ಯ ಮಂತ್ರಿಗಳಿಗೂ ಅರಿವಾಗಿದೆ. ಆದ್ದರಿಂದ ಈ ಬಗ್ಗೆ ಸೂಕ್ತವಾಗಿ ಏನು ಕ್ರಮವನ್ನು ಕೈಗೊಳ್ಳಬೇಕೋ ಅದನ್ನು ಕೈಗೊಳ್ಳಬೇಕು. ಮತ್ತು ಆ ಬಗ್ಗೆ ನಿಷ್ಪಕ್ಷಪಾತವಾಗಿ ವಿಚಾರಣೆ ಮಾಡಬೇಕು. ಆ ಅಧಿಕಾರಿಗಳು ಸ್ಥಳದಲ್ಲಿಯೇ ಇದ್ದರೆ ತಮ್ಮ ಪ್ರಭಾವ ಬೀರುತ್ತಾರೆ. ನಿಷ್ಪಕ್ಷಪಾತವಾಗಿ ವಿಚಾರಣೆ ಮಾಡುವುದಕ್ಕೆ ಅವಕಾಶವಾಗುವುದಿಲ್ಲ. ಆದ್ದರಿಂದ ಈ ಬಗೆ ಸಾರ್ವಜನಿಕ ದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡಬೇಕು. ಇಲ್ಲದಿದ್ದರೆ ಪ್ರಯೋಜನವಾಗುವುದಿಲ್ಲ.

ಶ್ರೀ ವಿ. ಎನ್. ಪಾಟೀಲ್:—ಈ ಪ್ರಕರಣದಲ್ಲಿ ಕಾನ್‌ಸ್ಟೇಬಲ್‌ಗಳು ಇನ್‌ವಾಲ್ವ್ ಆಗಿ ಅವರು ತಪ್ಪು ಮಾಡಿದ್ದಾರೆ. ಅಲ್ಲಿರತಕ್ಕ ಕೆಲವು ಆಫೀಸರುಗಳು ದರ್ಪ ಮತ್ತು ಅಹಂಕಾರದಿಂದ ವರ್ತಿಸಿದ್ದರಿಂದ ಈ ಒಂದು ಅನಾಹುತವಾಗಿದೆ. ಡೆಪ್ಯುಟಿ ಕಮಿಷನರಾದ ಶ್ರೀ ಅದಿರಾಜಯ್ಯನವರು ಅಲ್ಲಿ ಫೈರಿಂಗ್ ಆರ್ಡರ್ ಕೊಟ್ಟು ಅಲ್ಲಿ ಈ ಘಟನೆ ಆಗುವುದಕ್ಕೆ ಕಾರಣರಾಗಿದ್ದಾರೆ. ಇಂಥಾ ಆಫೀಸರಿಂದ ಜನತೆಗೆ ಹಿತವಾಗುವುದಿಲ್ಲ. ವಾಸ್ತವಿಕ ದೃಷ್ಟಿಯಿಂದ ಅವರು ತಪ್ಪು ಮಾಡಿದ್ದಾರೆ. ಮತ್ತು ಅನ್ಯಾಯ ಮಾಡಿದ್ದಾರೆ. ಇಂಥವರಿಗೆ ಸರ್ಕಾರದವರು ಪ್ರೊಟೆಕ್ಷನ್ ಕೊಡಬಾರದು. ತಪ್ಪು ಮಾಡಿದಂತಹವರಿಗೆ ಸರ್ಕಾರದವರು ಶಿಕ್ಷೆ ಕೊಟ್ಟರೆ ಆಗ ಒಂದು ಸರಿಯಾದ ದಾರಿಗೆ ಅವರು ಬರುತ್ತಾರೆ. ಇಲ್ಲದೆ ಹೋದರೆ ಏನಾಗುತ್ತದೆ ಎಂದರೆ ಇವರೆಲ್ಲರೂ ಅಸೆಂಬ್ಲಿಯಲ್ಲಿ ಬೊಂಬಾರ್ಡ್ ಮಾಡಿದರು ಏನಾಯಿತು? ಎಂದು ಕೇಳುತ್ತಾರೆ. ಆದ್ದರಿಂದ ಇವರು ಮಾಡಿದಂತಹ ತಪ್ಪಿಗೆ ಸರಿಯಾದ ಶಿಕ್ಷೆಯನ್ನು ವಿಧಿಸಲೇ ಬೇಕಾಗುತ್ತದೆ. ಇದರ ಸಲುವಾಗಿ ಆ ಬಗ್ಗೆ ನಿಷ್ಪಕ್ಷಪಾತವಾಗಿ ಒಂದು ಎನ್‌ಕ್ವೈರಿ ಮಾಡಬೇಕು. ಜನತೆಗೆ ನ್ಯಾಯವನ್ನು ದೊರಕಿಸಿ ಕೊಡಬೇಕು.

‡ಶ್ರೀ ಕೆ. ಪ್ರಭಾಕರ್:—(ವರ್ತೂರು) ಈ ಪ್ರಕರಣದಲ್ಲಿ ತಪ್ಪು ಮಾಡಿದಂತಹ ಡೆಪ್ಯುಟಿ ಕಮಿಷನರು ಮತ್ತು ಇತರ ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಸಸ್‌ಪೆನ್‌ಷನ್‌ನಲ್ಲಿಡುವುದಕ್ಕೆ ಕಷ್ಟವಾಗುತ್ತದೆ ಎಂದು ಹೇಳಿದ್ದಾರೆ. ಕೆಟ್ಟ ಅಧಿಕಾರಿಗಳಿಗೆ ಶಿಕ್ಷೆಯನ್ನು ಕೊಡುವುದಕ್ಕೆ ಸರ್ಕಾರದವರು ಮನಸ್ಸು ಮಾಡಿದರೂ ಕೂಡ ಸಿ.ಸಿ.ಎ. ರೂಲ್ಸ್ ಅಡ್ಡ ಬರುತ್ತದೆ ಎಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳುತ್ತಿದ್ದಾರೆ. ಒಟ್ಟಿನಲ್ಲಿ ಆ ಅಧಿಕಾರಿಗಳು ತಪ್ಪು ಮಾಡಿದ್ದಾರೆ ಅಲ್ಲಿ ಏನು ದುರ್ಘಟನೆ ನಡೆದಿದೆ ಎನ್ನುವ ಬಗ್ಗೆ ಮಾನ್ಯ ಸದಸ್ಯರು ಅದರ ಚಿತ್ರವನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಆದ್ದರಿಂದ ಆ ಬಗ್ಗೆ

(ಶ್ರೀ ಕೆ. ಪ್ರಭಾಕರ್)

ಎನ್‌ಕ್ವೈರಿ ಮಾಡಬೇಕಾಗುತ್ತದೆ. ಇದರಲ್ಲಿ ಜನತೆಗೆ ನ್ಯಾಯದೊರಕಿಸುವುದರಲ್ಲಿ ಕಾನೂನು ಅಡ್ಡಿ ಇದ್ದರೆ ಅದರ ಬಗ್ಗೆ ಲಾ ಸೆಕ್ರೆಟರಿಯವರಿಂದ ಅಭಿಪ್ರಾಯ ಪಡೆದು ತಪ್ಪು ಮಾಡಿರತಕ್ಕ ಅಧಿಕಾರಿಗಳಿಗೆ ಶಿಕ್ಷೆಯನ್ನು ವಿಧಿಸಬೇಕು. ತಪು ಮಾಡಿದಂತಹ ಮತ್ತು ಕೆಟ್ಟ ಅಧಿಕಾರಿಗಳಿಗೆ ಶಿಕ್ಷೆಯನ್ನು ವಿಧಿಸುವುದರಲ್ಲಿ ಯಾವುದೇ ಒಂದು ಕಾನೂನು ಅಡ್ಡಿ ಬಂದರೂ ಕೂಡ ಅದರ ಬಗ್ಗೆ ಲಾ ಬ್ರಾಂಚಿನವರನ್ನು ಕನ್‌ಸಲ್ಟ್ ಮಾಡಿ ಅವರ ಅಭಿಪ್ರಾಯವನ್ನು ಪಡೆದು ತಪ್ಪು ಮಾಡಿದಂತಹ ಅಧಿಕಾರಿಗಳಿಗೆ ಶಿಕ್ಷೆಯನ್ನು ವಿಧಿಸಬೇಕು ಎಂದು ನಾನು ಹೇಳುತ್ತೇನೆ.

ಇತ್ತೀಚೆಗೆ ಈ ಪೋಲೀಸ್ ಅಟ್ರೋಸಿಟೀಸ್ ಬಹಳ ಹೆಚ್ಚಾಗುತ್ತಾಇದೆ. ಇವತ್ತು ನೂರಾರು ಕಡೆಗಳಲ್ಲಿ ಇವು ನಡೆಯುತ್ತಿವೆ. ಅವುಗಳನ್ನು ಏನೇನುಎಂಬುದನ್ನು ಬೇರೆ ಸಂದರ್ಭದಲ್ಲಿ ಹೇಳುತ್ತೇನೆ. ಇತ್ತೀಚೆಗೆ ಸರ್ಕಾರದವರಿಗೆ ಈ ಪೋಲೀಲ್ ಅಟ್ರೋಸಿಟೀಸ್ ಕಂಟ್ರೋಲ್ ಮಾಡುವುದಕ್ಕಾಗುವುದಿಲ್ಲ ಎಂಬಕಾರಣದಿಂದ ಸರ್ಕಾರದಬಗ್ಗೆ ಜನರು ಬೇಸರ ಪಟ್ಟುಕೊಂಡಿದ್ದಾರೆ. ಇವತ್ತು ರಾಜ್ಯಾಡಳಿತೆಯಬಗ್ಗೆ ಪಬ್ಲಿಕ್ ಮೈಂಡ್ ಕೆಟ್ಟು ಹೋಗುತ್ತಿದೆ. ಆದ್ದರಿಂದ ಅದನ್ನೆಲ್ಲಾ ಪರಿಶೀಲನೆಮಾಡಿ ಅಲ್ಲಿಗೆ ಯಾವ ಅಧಿಕಾರಿಯನ್ನು ಕೊಡುತ್ತೀರಿ ಎಂಬುದನ್ನು ಹೇಳಬೇಕು. ಯಾವ ಅಧಿಕಾರಿಯನ್ನು ಇಟ್ಟರೂ ಅವರಲ್ಲಿ ನಂಬಿಕೆ ಇಡಬೇಕಾಗುತ್ತದೆ. ಈ ವಿಚಾರದಲ್ಲಿ ಏನು ಅನ್ಯಾಯ ನಡೆದಿದೆ, ಅದರ ಬಗ್ಗೆ ಸರ್ಕಾರದವರು ಯಾವ ಕ್ರಮ ತೆಗೆದುಕೊಳ್ಳುತ್ತೀರೆಂಬುದನ್ನು ಹೇಳಬೇಕು.

ಶ್ರೀ ಎಸ್. ಬಂಗಾರಪ್ಪ : ಸ್ವಾಮಿ ನನಗೆ ಒಂದು ಕ್ಲಾರಿಫಿಕೇಷನ್‌ಬೇಕು. ಅದು ಮಾನ್ಯ ಮಂತ್ರಿಯವರ ಉತ್ತರದ ಮೇಲೆ ಉದ್ಭವಿಸಿದ್ದು. ಅವರಿಂದ ಒಳ್ಳೆಯ ಉತ್ತರ ಸಿಕ್ಕಿದ್ದರೆ ಇದನ್ನೆಲ್ಲಾ ಕೇಳ ಬೇಕಾದ್ದಿರಲಿಲ್ಲ. ಹಾಗೆ ಸಿಕ್ಕದಿದ್ದಾಗ ಕ್ಲಾರಿಫಕೇಷನ್ ಕೇಳಬೇಕಾಗುತ್ತದೆ.

ಶ್ರೀ ವೀರೇಂದ್ರ ಪಾಟೀಲ್ : ಅಧ್ಯಕ್ಷರೇ, ನಾನು ಈಗಾಗಲೇ ಅನೇಕ ಸಲ ಸ್ಪಷ್ಟವಾಗಿ ಹೇಳಿದ್ದೇನೆ. ನಾನು ಮುಖ್ಯಮಂತ್ರಿಯಾಗಿ ಇರುವತನಕ ಯಾವ ಅಧಿಕಾರಿ, ಯಾವ ಹುದ್ದೆಯಲ್ಲೇ ಇದ್ದರೂ, ಅವರಿಗೆ ಪ್ರೊಟೆಕ್ಷನ್ ಕೊಡಬೇಕು, ತಪ್ಪು ಮಾಡಿದ್ದರೆ, ಅವರನ್ನು ಡಿಫೆಂಡ್ ಮಾಡ ಬೇಕೆನ್ನುವ ಉದ್ದೇಶ ನನಗಿಲ್ಲ. ಅದಕ್ಕಾಗಿ ನಾನು ಹೇಳಿದೆ, ಉನ್ನತ ಅಧಿಕಾರಿಗಳನ್ನು ಅಲ್ಲಿ ಕಳಿಸಿ, ಇಂಪಾರ್ಷಿಯಲ್ಲಾದ ಎನ್‌ಕ್ವಾಯಿರಿ ಮಾಡಿಸುವುದಕ್ಕೆ ಆ ಅಧಿಕಾರಿಗಳಿಗೆ ಏನೇನು ಅನುಕೂಲಗಳು ಬೇಕೋ, ಅದನ್ನು ಕೊಡುವುದಕ್ಕೆ ನಾನು ತಯಾರಾಗಿದ್ದೇನೆ ಎಂದು ಹೇಳಿದ್ದೇನೆ. ಈ ರೀತಿ ಇಂಪಾರ್ಷಿಯಲ್ ಎನ್‌ಕ್ವಯಿರಿಮಾಡಿ ಅವರು ಯಾರು ತಪ್ಪಿತಸ್ಥರಿದ್ದಾರೆಂದರೆ ಅದರ ಬಗ್ಗೆ ಏನು ಕ್ರಮ ತೆಗೆದು ಕೊಳ್ಳಬೇಕು. ಅದನ್ನು ತೆಗೆದುಕೊಳ್ಳುವುದಕ್ಕೆ ನಾನು ತಯಾರಾಗಿದ್ದೇನೆ. ಆದರೆ ಈ ಮನೆಯಲ್ಲಿ ಇಂತಿಂಥ ವನನ್ನು ಡಿಸ್‌ಮಿಸ್ ಮಾಡುತ್ತೇನೆ, ಸಸ್ಪೆಂಡ್ ಮಾಡುತ್ತೇನೆ ಎಂದು ನಾನು ಮುಖ್ಯಮಂತ್ರಿಯಾಗಿ ಹೇಳುವುದು ಕಷ್ಟವಾಗುತ್ತದೆ. ಅದಕ್ಕಾಗಿ ನಾನು ಮಾನ್ಯ ಬಂಗಾರಪ್ಪನವರಿಗೆ ಪದೇ ಪದೇ ವಿನಂತಿ ಮಾಡಿಕೊಳ್ಳುವುದೇನೆಂದರೆ, ಇದು ಅಡ್ಮಿನಿಸ್ಟ್ರೇಷನ್‌ಗೆ ಸಂಬಂಧಪಟ್ಟ ಪ್ರಶ್ನೆ ಇರುತ್ತದೆ, ಇದರ ಬಗ್ಗೆ ನೀವು ಅನೇಕ ವಿಚಾರಗಳನ್ನು ಹೇಳಿದ್ದೀರಿ. ಇದನ್ನು ನನಗೆ ಬಿಟ್ಟು ಬಿಡಿ. ಅದಕ್ಕೆ ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಇಷ್ಟರಲ್ಲಿ ತಾವು ಸಮಾಧಾನಪಟ್ಟು ಕೊಳ್ಳುತ್ತೀರೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ :—ನನ್ನ ಭಾವನೆಗಳನ್ನು ಬಹಳ ಹೊತ್ತಿನವರೆಗೆ ತಡೆಹಿಡಿದುಕೊಂಡಿದ್ದೆ. ನಾನು ಕಳಕಳಿಯಿಂದ ಮಾನ್ಯ ಮುಖ್ಯಮಂತ್ರಿಯವರಲ್ಲಿ ಮನವಿಮಾಡಿಕೊಂಡಿದ್ದೆ. ನಾನು ಕಣ್ಣಾರೆ ನೋಡಿಕೊಂಡು ಬಂದ ವಿಚಾರಗಳನ್ನು ಇಲ್ಲಿ ಹೇಳಿದರೆ, ಅದಕ್ಕೆ ನೀವು ಕೊಡತಕ್ಕ ಉತ್ತರದಿಂದ ನಾನು ಸಮಾಧಾನಪಟ್ಟುಕೊಳ್ಳುವ ಹಾಗೆ ಇಲ್ಲ. ನನಗೆ ಸಮಾಧಾನವಾಗುವ ರೀತಿಯಲ್ಲಿ ನಿಮ್ಮ ಉತ್ತರವಿಲ್ಲ. ನಾನು ಕಿವಿಯಾರೆ ಕೇಳಿ, ಕಣ್ಣಾರೆ, ಕಂಡಂತಹ ವಿಷಯಗಳನ್ನು ಇಲ್ಲಿ ಬಂದು ಹೇಳಿದ್ದೇನೆ. ಇವತ್ತು ಅವರನ್ನು ವರ್ಗ ಮಾಡುವುದಕ್ಕೆ ಲಾ ಡಿಪಾರ್ಟ್‌ಮೆಂಟಿನ ಒಪ್ಪಿಗೆ ಏಕೆ ಬೇಕು ? ಅವರು ಅಡ್ಮಿನಿಸ್ಟ್ರೇಶನ್ ವಿಚಾರವೆಂದು ಹೇಳಿದರು. ವರ್ಗಮಾಡಿದರೂ ಅದೇ ಸ್ಥಾನದಲ್ಲಿ, ಬೇರೆ ಜಾಗದಲ್ಲಿ ಅವರು ಇರುತ್ತಾರೆ. ಕೊನೆಯ ಪಕ್ಷ ತಕ್ಷಣ ಹಾಗೆ ಮಾಡಿ ಅಂದರೂ ಕೂಡ ಇವರು ಒಳ್ಳೆಯ ದಕ್ಷ ಆಡಳಿತಗಾರರು ಎಂದು ಹೇಳತಕ್ಕಮಾತು, ಏನಿದೆ ಇದು ಶುದ್ಧಾಂಗ ಸುಳ್ಳು. ಶ್ರೀ ವೀರೇಂದ್ರ ಪಾಟೀಲರ ಸರ್ಕಾರ ಮಾನ

ಮರ್ಯಾದೆಯನ್ನು ಉಳಿಸುವುದಕ್ಕೆ ಯೋಗ್ಯವಾಗಿಲ್ಲ. ಮತ್ತು ಅದನ್ನು ನೋಡಿಕೊಳ್ಳುವುದಕ್ಕೆ ತಯಾರಾಗಿಲ್ಲ ಎನ್ನತಕ್ಕ ಮಾತನ್ನು ನಾನು ಇಲ್ಲಿ ಮನವರಿಕೆಮಾಡಿಕೊಳ್ಳಬೇಕಾಗಿದೆ. ನಿಮಗೆ ಇವತ್ತು ಜನರ ಹಿತರಕ್ಷಣೆ ಮಾಡುವುದು ಬೇಕಾಗಿಲ್ಲ.

Sri K. Puttaswamy : On a point of order. May I know how many times you are permitting the hon. Member to speak

Sri V. N. Patil.–There should be no oibeetion when he is permitted by the Chair

ಶ್ರೀ ಎಸ್. ಬಂಗಾರಪ್ಪ : ನಾನು ಭಾಷಣಮಾಡುವುದಿಲ್ಲ. ಮಂತ್ರಿಮಂಡಲದ ಮೇಲೆ ಹೇಳುವುದು ಸ್ವಲ್ಪ ಇದೆ. ಒಂದು ನಿಮಿಷವಾದರೂ ತಾವು ರೂಲಿಂಗ್ ಕೊಟ್ಟಮೇಲೆ ನನಗೆ ಮಾತನಾಡಲು ಅವಕಾಶವನ್ನು ಕೊಡಬೇಕು.

Sri K. Puttaswamy.—Sir, I have raised a point of order. I want you to give a ruling.

Mr. Speaker.–It is not within the rules to permit clarifications. The non. Member is not entitled to have any more clarifications. I have already given the Hon. Member three or four chances.

Sri S. Bangarappa : I request the Chair to kindly permit me.

Mr. Speaker.–I am not going to permit any more clarifications.

(Sri Bangarappa withdrew)

Sri M. Nagappa.–I also stage a walk out in protest against the Chair's indifferent attitude in not permitting the Hon. members to seek clarifications.

(Sri M. Nagappa withdrew)

(Then Sriyuths D. B. Kalmankar, S. Chandrakanth, and V. N. Patil also withdrew)

Mr. Speaker.–I will now put the motion to the vote of the House. The question is :

"That the Assembly do now adjourn"

The motion was negatived

Matter expunged as ordered by the Chair.

Matter not recorded as directed by the Chair.

Mysore Electricity (Taxation on consumption) (Amendment) Bill 1970-Motion to consider (Debate contd.)

MR. SPEAKER :—Now we shall take up next item of the agenda. The Hon. Member Sri Siddaveerappa to speak on the Electricity Bill.

Sri H. SIDDAVEERAPPA : Sir, I oppose the Mysore Electricity (Taxation on Consumption) (Amendment) Bill, 1970. I would like to offer my observations tomorrow.

MR. SPEAKER :—All right. The House will now rise to meet agoin tomorrow at 8 30. a.m.

The House adjourned Fifty Minutes past seven of the Clock to meet again at Thirty Minutes past Eight of the Clock on Thursday the 2nd April 1970.

WD 15068—GPB –550 –10-9-1970

ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Friday, 4th March 1970.

The House met in the Assembly Chamber, Vidhana Soudha, at Thirty Minutes Past Eight of the Clock.

MR. DEPUTY SPEAKER [SRI D. MANJUNATH] in the Chair.

STARRED QUESTIONS

(to which oral answers were given)

DEVELOPMENT OF SANSKRIT EDUCATION

262. SRI M. MALLAPPA (Birur).—

Will the Minister for Education be pleased to state :—

(*a*) the number of Sanskrit Institutions recognised in the State (a detailed list may be given) ;

(*b*) the facilities provided to these Institutions recognised on permanent basis ;

(*c*) the steps the Government intends to take for giving building grant or full grant to develop Sanskrit Education in the state?

SRI K. V. SHANKARA GOWDA :—(MINISTER FOR EDUCATION.)

(*a*) 199. List is furnished in the Annexure placed on the Table of the House. (Copies laid in the Mysore Legislative Library.

(*b*) Part time teachers are permitted. Vidwans are paid Rs. 40 per month and Non-Vidwans are paid Rs. 25 per month.

(*c*) The question of having a uniform grant-in-aid code with provision for sanction of full grants in respect of Pandits who work on full time basis and building grant as admissible to the General Schools, is under examination.

SRI M. MALLAPPA :—How long will it take to finalise the new grant in-aid Code which is under preparation?

SRI K. V. SHANKARA GOWDA :—It has been prepared; it is under crutiny. Very soon it will be finalised.

SRI M. MALLAPPA :—Has it come to the notice of the Government that what the Government is now paying to the Sanskrit Pandit viz. Rs. 40 to Vidwans and Rs. 25 to Non-Vidwans is very meagre and it is very difficult for them to exist even and will the Government take necessary action to improve their condition in the interest of Sanskrit Education?

† SRI K. V. SHANKARA GOWDA :—Rs. 40 to Vidwans and Rs. 25 to Non-Vidwans are paid on part-time basis and not on a permanent basis. Salary to these pandits on a permanent basis is being considered and we are going to finalise it soon. What we are paying is part-time allowance. They are free to do other work. In addition to other work they are doing this work.

SRI M. MALLAPPA :—Supplementary to (c) How much grant that is admissible to the General Schools will be made applicable if these institutions were to come forward to build their own buildings for the purpose of propagation of Sanskrit Education?

SRI K. V. SHANKARA GOWDA :—According to the existing grant-in-aid Code, the General Schools will get 5% of the building grant.

Asterisks indicate that remarks or speeches have not been revised by the member concerned.

ಶ್ರೀ ಸಿದ್ದಪ್ಪ ಕಾಶೀವಂತ :—ಎಲ್ಲಾ ಶಿಕ್ಷಣ ಸಂಸ್ಥೆಯ ಉಪಾಧ್ಯಾಯರುಗಳಿಗೂ ಪೂರ್ತಿಯಾಗಿ ಅನುದಾನ ಕೊಟ್ಟು, ಕೇವಲ ಸಂಸ್ಕೃತ ಸಂಸ್ಥೆಗಳಲ್ಲಿ ಕೆಲಸ ಮಾಡತಕ್ಕ ಉಪಾಧ್ಯಾಯರುಗಳಿಗೆ ಅಂಶ ಕಾಲಿಕ ಅನುದಾನಗಳನ್ನು ಕೊಡುತ್ತಾ ಇರುವುದರಿಂದ ಇದು ಅನ್ಯಾಯವಲ್ಲವೇ? ಈ ರೀತಿ ಕೊಡುತ್ತಾ ಇರುವುದರಿಂದ ಸಂಸ್ಕೃತ ಶಿಕ್ಷಣವನ್ನು ಕಡೆಗಣಿಸಿದ ಹಾಗೆ ಆಗುವುದಿಲ್ಲವೇ?

ಶ್ರೀ ಕೆ. ವಿ. ಶಂಕರಗೌಡ :—ಹಾಗೇನೂ ಇಲ್ಲ. ಒಂದು ಅಥವಾ ಎರಡು ಗಂಟೆಗೆ ಪರ್ಮನೆಂಟ್ ಬೇಸಿಸ್ ಮೇಲೆ ಇಟ್ಟುಕೊಳ್ಳುವುದಕ್ಕಾಗುವುದಿಲ್ಲ.

SRI B. B. SAYANAK :—The Hon. Minister just now said that they are part-time teachers. For how many hours are they working?

SRI K. V. SHANKARA GOWDA :—At the most for one or two hours,

EXECUTION OF PROJECTS IN CAUVERY BASIN

314. SRI H. N. NANJE GOWDA (Arkalgud):—Will the Minister for Finance, Planning and Youth Welfare be pleased to state:—

(*a*) whether the 'Resources Committee' appointed by Government to suggest ways and means for execution of projects in the Cauvery basin, has submitted an 'Interim Report' to Government;

(*b*) the total amount of money that the said Committee has been able to mobilise by exercise of economy in the various departments;

(*c*) whether the said Committee in their interim reeommendations has made any project-war allocation of funds and if so, the details of the same;

(*d*) whether the Government has passed orders on the recommendations of the Committee and if so, the details of the orders passed?

SRI RAMAKRISHNA HEGDE (Minister for Finance, Planning and Youth Welfare):—

(*a*) Yes.

(*b*) Rs. 7·89 crores.

(*c*) Yes. Details are as in the statement appended.

(*d*) Copy of G. O. appended.

STATEMENT

Showing the additional allocation of allotments to South and North Zones.

South Zone		(Rs. in lakhs)
Tungabhadra Project	...	30-00
Bhadra	...	30-00
Devara Bilikere	...	10-00
Kabini	...	130-00
Varuna	...	10-00
Suvarnavathi	...	50-00
Gundal	..	5-00

(Sri RAMAKRISHNA HEGGADE)

Hemavathi	...	135-00
Harangi	...	56-00
Manchanabele	...	5-00
Kambadakada	...	20-00
Yagachi	...	15-00
Taraka	...	5-00
S. Doddakere	...	5-00
Arkavathy	...	5-00
Belare	...	5-00
Hebbahalla	...	5-00
Lakshmanathirtha	...	5-00
Total	...	526-00
North Zone	...	200-00
Grand Total	...	726-00

Subject:—Interim Report of the Resources Mobilisation Committee.

PROCEEDINGS OF THE GOVERNMENT OF MYSORE

Order No. FD 109 BUD 69, Bangalore, Dated 3rd January 1970.

In G. O. No. PWD 5 LCA 68. Part V, dated 16th April 1969, a Committee was constituted to examine the resources for taking up Irrigation Projects in Cauvery and Krishna basins. The Committee has submitted an Interim Report. The Committee has suggested that saving should be effected in the Budget of several departments and that recoveries of arrears of revenue, etc., should be stepped up to find the necessary finance for meeting the additional capital expenditure on Irrigation including Minor Irrigation and Water Supply Works. The Committee has desired that a total sum of Rs. 7·26 crores should be allocated to the South and North Irrigation Zones in addition to additional grant of Rs. 3 crores for Minor Irrigation and Rural and Urban Water Supply Works. After consideration of the recommendations of the Committee in the Interim Report, the Governor of Mysore is pleased to sanction additional allotment of Rs. 7 crores for Major and Medium Irrigation Projects both in South and North Irrigation Zones. The distribution of this allotment will be made by

the Public Works Department of the Secretariat with reference to progress achieved in the execution of Irrigation Works. The Governor is also pleased to sanction additional allotment of Rs. 100 lakhs for Urban Water Supply and Rs. 50 lakhs for National Rural Water Supply and Rs. 150 lakhs for Minor Irrigation Works. Necessary Supplementary grants under the concerned Heads of Account will be obtained when the Legislature next meets.

2. Regarding the srggestions made by the Resource Mobl isation Committee on savings in expenditure, recovery of arrears, increased receipts from State Tax and Non-tax Revenue etc., the Finance Department will examine and take necessary action to implement the same.

N. S. BHARATH,
Joint Secretary to Government,
Finance Department.

IRRIGATION PROJECTS IN KRISHNA AND CAUVERY BASINS

546. Sri L. SRIKANTAIAH (Nanjangud·—

Will the Minister for Finance, Planning and Youth Welfare be pleased to state :—

(*a*) whether the committe of Legislators to examine the resources for taking up irrigation projects in Krishna and Cauvery Basins has submitted its report (if so, the copy of the report may be placed on the Table of the House,);

(*b*) the recommendations of the Committee in respect of the financial year 1970–71 ?

Sri RAMAKRISHNA HEGDE (Minister for Finance, Planning any Youth Welfare).—

(*a*) Yes. A copy of the report is placed on the Table of the House, copy placed in the Mysore Ligislature library.

(*b*) The Committe has anticipated net savings to the extent of Rs. 7·83 crores to accrue during 1969–70 on the basis of suggestion made by the Committee in the Interim report. The Committee is yet to to furnish a final report indicating the extent to which resources may be mobilised on a long term basis.

ಶ್ರೀ ಎಚ್. ಎನ್. ನಂಜೇಗೌಡ.—ರಿಸೋರ್ಸಸ್ ಕಮಿಟಿಯವರು ಇಲ್ಲಿಯವರೆಗೆ ಎಷ್ಟು ಖರ್ಚಾಗಿದೆ ಎಂದು ನೋಡಿ ಶಿಫಾರಸು ಮಾಡಿರುವರೇ ?

†ಶ್ರೀ ರಾಮಕೃಷ್ಣ ಹೆಗಡೆ.—ಅದೊಂದೇ ನೋಡಿ ಅವರು ಶಿಫಾರಸುಮಾಡಿಲ್ಲ, ಇನ್ನೂ ಅನೇಕ ವಿಚಾರಗಳನ್ನು ಗಮನಿಸಿ ಶಿಫಾರಸು ಮಾಡಿದ್ದಾರೆ ಎಂಬುದು ನನ್ನ ಅಭಿಪ್ರಾಯ.

ಶ್ರೀ ಎಚ್. ಎನ್. ನಂಜೇಗೌಡ.—ಕಮಿಟಿ ಪ್ರಾಜೆಕ್ಟ್‌ವಾರು ಅಲೋಕೇಟ್ ಮಾಡಿರುವುದನ್ನು ತಾವು ಒಪ್ಪಿಲ್ಲವೇ ? ಒಪ್ಪಿದರೆ ಯಾವುದಕ್ಕೆ ಎಷ್ಟು ಹಣ ಕೊಡಲಾಗಿದೆ. ?

ಶ್ರೀ ರಾಮಕೃಷ್ಣ ಹೆಗಡೆ.—ನಾವು ಬಜೆಟ್ಟಿನಲ್ಲಿ ಸೇರಿಸುವಾಗ ಪ್ರಾಜೆಕ್ಟ್‌ವಾರು ಅಲೋಕೇಟ್ ಮಾಡುವುದಕ್ಕೆ ಸಾಧ್ಯ. ಇದು ಬಜೆಟ್ಟಿನಲ್ಲಿ ಸೇರಿರುವುದು, ಪಬ್ಲಿಕ್ ವರ್ಕ್ಸ್ ಇಲಾಖೆಗೆ ಈ ಹಣ ಕೊಡಲಾಗುವುದು. ಸಮಿತಿಯ ಶಿಫಾರ್ಸಿಗನುಗುಣವಾಗಿ ಖರ್ಚುಮಾಡಿದೆ.

ಶ್ರೀ ಎಸ್. ಎಂ. ಗುರೆಡ್ಡಿ.—ಕೃಷ್ಣ ನದಿ ಜಲಾಶಯಗಳ ಕಾರ್ಯಗಳಿಗೆ ಹಣದ ವಿಚಾರದಲ್ಲಿ ಏನು ಸಲಹೆ ಮಾಡಿರುವುದೂ ಕಾಣುವುದಿಲ್ಲ: ರಿಸೋರ್ಸಸ್ ಕಮಿಟಿ ಶಿಫಾರಸಿನ ಪ್ರಕಾರ ಅಡಿಷನಲ್ ರಿಸೋರ್ಸಸ್ ಸಜೆಸ್ಟ್ ಮಾಡಿದ್ದರೆ ಯಾವುದು ಮಾಡಿದೆ ?

ಶ್ರೀ ರಾಮಕೃಷ್ಣ ಹೆಗಡೆ.—ಆ ಸಮಿತಿ ಶಿಫಾರಸು ಮಾಡುವಾಗ ಉತ್ತರ ಮತ್ತು ದಕ್ಷಿಣ ವಿಭಾಗಗಳಿಗೆ ಇಷ್ಟು ಹಣ ಹೆಚ್ಚು ಕೊಡಬೇಕೆಂದು ತಿಳಿಸಿದೆ, ದಕ್ಷಿಣ ವಿಭಾಗದಲ್ಲಿ ಪ್ರಾಜೆಕ್ಟ್‌ವಾರು ಇಷ್ಟು ಕೊಡಬೇಕೆಂದು ತಿಳಿಸಿದ್ದಾರೆ. ಉತ್ತರ ವಿಭಾಗದಲ್ಲಿ ಎಲ್ಲಾ ಸೇರಿ ೨ ಕೋಟಿ ರೂಪಾಯಿ ಹೆಚ್ಚು ಹಣ ಕೊಡಬೇಕೆಂದು ತಿಳಿಸಿದ್ದಾರೆ. ಯಾವ ಯಾವ ಭಾಗದಿಂದ ಹಣ ಉಳಿಸುವುದು ಎಂಬುದು ವರದಿಯಲ್ಲಿದೆ, ನೋಡಬಹುದು.

ಶ್ರೀ ಎಸ್. ಎಂ. ಗುರೆಡ್ಡಿ.—ಅಡಿಷನಲ್ ರಿಸೋರ್ಸಸ್ ಮೊಬಿಲೈಜ್ ಮಾಡುವುದಕ್ಕೆ ಸಮಿತಿ ಸಲಹೆಮಾಡಿದೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಆ ಬಗ್ಗೆ ಇನ್ನೂ ಯಾವ ಶಿಫಾರಸನ್ನೂ ಮಾಡಿಲ್ಲ. ಒಂದೇ ಒಂದು ಐಟಂ ಅಂದರೆ ಫಾರೆಸ್ಟ್ ಇಲಾಖೆಯಿಂದ ಈ ವರ್ಷ ಕೂಪ್ ಮಾರಾಟಮಾಡಿ ಸುಮಾರು ೧ ಕೋಟಿ ರೂಪಾಯಿ ಹೆಚ್ಚಿಸಬೇಕೆಂದು ಹೇಳಿದ್ದಾರೆ. ಆ ಕೆಲಸ ಮಾಡಬೇಕಾಗಿದೆ.

ಶ್ರೀ ಎಚ್. ಎನ್. ನಂಜೇಗೌಡ.—ಉತ್ತರ ಭಾಗದಲ್ಲಿ ಕೃಷ್ಣಬೇಸಿನ್ ಸೇರಿದೆ. ಪ್ರಾಜೆಕ್ಟ್‌ವಾರು ಕಾವೇರಿ ಬೇಸಿನ್‌ನಲ್ಲಿ ಅಲೋಕೇಟ್ ಮಾಡಿ ಕಾವೇರಿ ನೀರನ್ನು ಹೇಗೆ ಉಪಯೋಗ ಮಾಡಿಕೊಳ್ಳಬೇಕೆಂಬುದನ್ನು ಹೇಳಿದ್ದಾರೆಯೇ ? ಈ ಸಾರಿ ಕಂಬದಕಡ ಯೋಜನೆಗೆ ಏಕೆ ಏನೂ ಒದಗಿಸಿಲ್ಲ ?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—ಮಾನ್ಯ ಉಪಾಧ್ಯಕ್ಷರೇ, ನಾನು ಇರಿಗೇಷನ್ ಮೇಲೆ ಚರ್ಚೆ ಯಾದಾಗಲೇ ಉತ್ತರ ಕೊಡುವಾಗ ಕಾವೇರಿ ಪ್ರಾಜೆಕ್ಟ್‌ಗಳು ಯಾವುವು ಇವೆ, ಅವುಗಳಿಗೆ ಹಣದ ಕೊರತೆಯಿಲ್ಲ, ಖರ್ಚು ಎಷ್ಟು ಮಾಡುವರೋ ಅಷ್ಟನ್ನು ಒದಗಿಸುತ್ತೇವೆ. ಎಂದು ತಿಳಿಸಿದ್ದೇನೆ. ಆದುದರಿಂದ ಎಷ್ಟು ಅಲೋಕೇಟ್ ಮಾಡುವರು- ಹೆಚ್ಚು ಒದಗಿಸಲಿಲ್ಲ ಎಂಬ ಪ್ರಶ್ನೆ ಉದ್ಭವವಾಗುವುದಿಲ್ಲ ಕಂಬದಕಡ ಯೋಜನೆ ಪ್ರಶ್ನೆ ಸದ್ಯಕ್ಕೆ ನಮ್ಮ ಮುಂದಿಲ್ಲ.

ಶ್ರೀ ಎಲ್. ಶ್ರೀಕಂಠಯ್ಯ.—ಹಣಕಾಸಿಗೆ ಸಂಬಂಧಪಟ್ಟಂಥ ಸಮಿತಿಯಲ್ಲಿ ಡಿ. ಎಂ. ಸಿದ್ದಯ್ಯನವರು, ಚನ್ನಬಸಪ್ಪನವರು, ಸಿದ್ದವೀರಪ್ಪನವರು ಮತ್ತಿತರರಿದ್ದರು. ಆದರೆ ಅವರು ಇಷ್ಟು ಹಣ ಬೇಕಾಗುತ್ತದೆ. ಎಂದು ಪ್ರಾಜೆಕ್ಟ್ ರಿಪೋರ್ಟ್ ಕೊಟ್ಟರೆ ಅದನ್ನು ಇಂಪ್ಲಿಮೆಂಟ್ ಮಾಡಲಿಲ್ಲವೆಂದು ಗೋಪಾಲಗೌಡರು ರಾಜೀನಾಮೆ ಕೊಡಲಿಲ್ಲವೇ ?

ಶ್ರೀ ರಾಮಕೃಷ್ಣ ಹೆಗಡೆ.—ಗೋಪಾಲಗೌಡರು ರಾಜೀನಾಮೆ ಕೊಟ್ಟ ಕಾರಣವು ಸ್ವಲ್ಪ ಭಿನ್ನವಾಗಿದೆ. ಸಮಿತಿಯಲ್ಲಿ ಚರ್ಚೆಯಾದುದನ್ನು ಸರಕಾರ ತೀವ್ರವಾಗಿ ಗಮನಿಸಲಿಲ್ಲ ಎಂದು ಆ ಕಲ್ಪನೆ ಮೇಲೆ ರಾಜೀನಾಮೆ ಕೊಟ್ಟರು. ಆದರೆ ಆ ಕಲ್ಪನೆ ನಿಜವಲ್ಲ, ಅದನ್ನು ಅವರಿಗೆ ತಿಳಿಸಲಾಗಿದೆ.

ಶ್ರೀ ಎಲ್. ಶ್ರೀಕಂಠಯ್ಯ.—ಈ ಸಮಿತಿ ವರದಿಯನ್ನು ಕಾರ್ಯರೂಪಕ್ಕೆ ತರುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಅದಕ್ಕೆ ಪ್ರಿಂಟೆಡ್ ಉತ್ತರವೇ ಇದೆ.

ಶ್ರೀ ಎಚ್. ಡಿ. ದೇವೇಗೌಡ.—ಅಧಿಕಾರಿಗಳು ಸರಿಯಾದ ಪ್ರೋಗ್ರೆಸ್ಸನ್ನು ತೋರಿಸದೆ ಕೆಲಸ ಕುಂಠಿತವಾದರೆ ಅದರಿಂದೇನೂ ಪ್ರಯೋಜನವಾಗುವುದಿಲ್ಲ, ಹಾಗಾಗಬಹುದೆಂಬ ಅನುಮಾನವಿದೆ. ಇದನ್ನು ಕ್ಲಾರಿಫೈ ಮಾಡುವಿರಾ? ಪ್ರಾಜೆಕ್ಟ್‌ವಾರು ಇಷ್ಟು ಟಾರ್ಜೆಟ್ ಎಂದು ನಿಗದಿಮಾಡಿ ಅದಕ್ಕೆ ಸರಿಯಾದ ಮೆಷೀನರಿ, ಸಿಬ್ಬಂದಿ ಒದಗಿಸಿ ಒತ್ತಾಯಮಾಡಿ ಅದರಂತೆ ಕೆಲಸ ಮಾಡುವಿರಾ ?

ಶ್ರೀ ವೀರೇಂದ್ರ ಪಾಟೀಲ್.—ನಾನು ಹಿಂದೆಯೇ ಈ ಪ್ರಶ್ನೆಗೆ ಉತ್ತರ ಹೇಳಿದ್ದೇನೆ. ಹೇಮಾವತಿ ಯೋಜನೆ ಕೆಲಸವನ್ನು ಕಂಟ್ರಾಕ್ಟರುಗಳು ನಿಲ್ಲಿಸಿದಾಗ ಇಲಾಖೆಯೇ ಕೆಲಸ ಪ್ರಾರಂಭಿಸಿದೆ. ಕೆಲಸಮಾಡಲು ಶಕ್ತಿಯಿಲ್ಲದ ಯಾರೋ ಅಧಿಕಾರಿಗಳನ್ನು ಅಲ್ಲಿಗೆ ಹಾಕಬೇಕೆಂದಿಲ್ಲ. ಕಾವೇರಿ ಬೇಸಿನ್‌ನಲ್ಲಿರುವ ಕೆಲಸಕಾರ್ಯ ಬೇಗ ಆಗಬೇಕು, ಅಧಿಕಾರಿಗಳು ಕೆಲಸ ಸರಿಯಾಗಿ ಮಾಡದಿದ್ದರೆ ಅವರನ್ನು ತೆಗೆದು ಬೇರೆಯವರನ್ನು ಹಾಕುತ್ತೇವೆ. ನೆಪ ಹೇಳಬೇಕೆಂಬ ಉದ್ದೇಶವಿಲ್ಲ.

ಶ್ರೀ ಎನ್. ಎ. ಚನ್ನೇಗೌಡ.—೭.೮೯ ಕೋಟಿ ರೂಪಾಯಿ ಶೇಖರಿಸಲು ಸಾಧ್ಯವಾಗಿದೆ ಎಂದು ಉತ್ತರ ಕೊಡಲಾಗಿದೆ. ಹೇಮಾವತಿ ಯೋಜನೆಗೆ ೩೫ ಲಕ್ಷ ಒದಗಿಸಿದ್ದು ಖರ್ಚಾಗಿದೆಯೇ? ಆಗಿಲ್ಲದಿದ್ದರೆ ಅದು ಪಿಡಬ್ಲ್ಯು ಇಲಾಖೆಯ ತಾತ್ಸಾರ ಮನೋಭಾವದಿಂದ ಅಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ಇಲ್ಲ ಹೇಮಾವತಿ ಯೋಜನೆಗೆ ಮೊದಲು ೧೫೦ ಲಕ್ಷ ಕೊಡಲಾಗಿದೆ. ಅದರ ನಂತರ ಒಂದು ಕೋಟಿ ರೂಪಾಯಿ ಹೆಚ್ಚಾಗಿ ಕೊಟ್ಟಿದೆ. ಲ್ಯಾಪ್ಸ್ ಆಗುವ ಪ್ರಶ್ನೆಯೇ ಇಲ್ಲ. ದೇವೇಗೌಡರಿಗೆ ಇದನ್ನು ಹೇಳಿದೆ. ಮೊನ್ನೆ ಒಂದು ಸೆಕ್ಷನ್ನಿನಲ್ಲಿ ಕೆಲಸಮಾಡುತ್ತಿದ್ದ ಕಂಟ್ರಾಕ್ಟರು ಕೆಲಸ ನಿಲ್ಲಿಸಿ ತಕರಾರು ಮಾಡಿದಾಗ ಇಲಾಖೆಯೇ ಹೆಚ್ಚು ಸಿಬ್ಬಂದಿ ಮತ್ತು ಮೆಷೀನರಿ ಇಟ್ಟುಕೊಂಡು ಕೆಲಸ ಮಾಡಲು ವ್ಯವಸ್ಥೆಮಾಡಿದೆ. ಬಜೆಟ್ಟಿನಲ್ಲಿ ಒದಗಿಸಿದ್ದ ಹಣವಲ್ಲದೆ ಒಂದುಕೋಟಿ ರೂಪಾಯಿಗಳಷ್ಟು ಹೆಚ್ಚು ಹಣವನ್ನು ಚೀಫ್ ಎಂಜಿನಿಯರಿಗೆ ಕೊಡಲಾಗಿದೆ.

ಶ್ರೀ ಎನ್. ಎ. ಚನ್ನೇಗೌಡ:—ಜನರಲ್ ಅಡ್ಮಿನಿಸ್ಟ್ರೇಷನ್‌ನಲ್ಲಿ ಎಷ್ಟು ಮಿತವ್ಯಯ ಮಾಡಲಾಗಿದೆ. ಎಂಬುದಕ್ಕೆ ಉತ್ತರ ಬರಲಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ;—ಅದಕ್ಕೆ ಉತ್ತರ ಕಮಿಟಿ ರಿಪೋರ್ಟಿನಲ್ಲಿದೆ. ರಿಪೋರ್ಟ್ ಟೇಬಲ್ ಮೇಲೆ ಇಟ್ಟಿದ್ದೇವೆ. ಜನರಲ್ ಅಡ್ಮಿನಿಸ್ಟ್ರೇಷನ್‌ನಿಂದ ಎಷ್ಟು, ಬೇರೆ ವಿಭಾಗಗಳಿಂದ ಎಷ್ಟು ಮಿತವ್ಯಯ ಮಾಡುವುದರಿಂದ ಬರುತ್ತದೆ ಎನ್ನುವುದನ್ನು ರಿಪೋರ್ಟ್‌ನಲ್ಲಿ ತಿಳಿಸಿದ್ದೇವೆ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ:—ಕಂಬದಹಳ್ಳಕ್ಕೆ ೨೦ ಲಕ್ಷ ರೂಪಾಯಿ ಒದಗಿಸಿದ್ದಾರೆ. ಸರಕಾರದ ಗಮನದಲ್ಲಿ ಅದು ಸದ್ಯಕ್ಕೆ ಇಲ್ಲ; ತೆಗೆದುಕೊಳ್ಳುವುದಿಲ್ಲ ಎಂದು ಹೇಳಿದರು. ಸರ್ಕಾರದವರ ಮನೋಭಾವನೆ ಏನಾದರೂ ಬದಲಾಗಿದೆಯೇ ?

ಶ್ರೀ ರಾಮಕೃಷ್ಣ ಹೆಗಡೆ: ಅದು ಕಮಿಟಿಯವರು ಮಾಡಿದ ಸಿಫಾರಸು. ಸರ್ಕಾರಿ ಆಜ್ಞೆಯಲ್ಲಿ ಇಲ್ಲ. ಸರ್ಕಾರದವರು ಇಂತಿಂಥ ಪ್ರಾಜೆಕ್ಟಿಗೆ ಇಂತಿಷ್ಟು ಹಣ ಕೊಡಬೇಕೆಂದು ಹೇಳಿಲ್ಲ. ೭೨೬ ಲಕ್ಷ ರೂಪಾಯಿಗಳಲ್ಲಿ ೫೨೬ ಲಕ್ಷ ರೂಪಾಯಿ ದಕ್ಷಿಣ ವಲಯದ ಚೀಫ್ ಇಂಜಿನಿಯರ್ ಮತ್ತು ಎರಡು ಕೋಟಿ ರೂಪಾಯಿ ಉತ್ತರ ವಲಯದ ಚೀಫ್ ಇಂಜಿನಿಯರ್ ಹತ್ತಿರ ಕೊಟ್ಟಿದ್ದೇವೆ.

ಶ್ರೀ ಎಸ್. ಶಿವಪ್ಪ:—ಕೊಟ್ಟಿರತಕ್ಕ ಅಂಕಿ ಅಂಶಗಳ ಪ್ರಕಾರ ೧,೦೯ ಲಕ್ಷ ಉಳಿತಾಯವನ್ನು ಸಂಪನ್ಮೂಲ ಸಮಿತಿಯವರು ಸರ್ಕಾರಕ್ಕೆ ಶಿಫಾರಸು ಮಾಡಿದ್ದರು. ೩೦೦ ಲಕ್ಷ ರೂಪಾಯಿಗಳನ್ನು ಬಿಟ್ಟು ಉಳಿದ ೭೯ ಲಕ್ಷ ರೂಪಾಯಿಗಳನ್ನು ಇಂಟೆರಿಂ ರಿಪೋರ್ಟ್ ಪ್ರಕಾರ ಸರ್ಕಾರದವರು ಆರ್ಡರ್ ಮಾಡಿದ್ದಾರೆ. ಈ ೭೯ ಲಕ್ಷ ರೂಪಾಯಿಗಳಲ್ಲಿ ೩೧ನೇ ಮಾರ್ಚಿ ೧೯೭೧ರ ವರೆಗೆ ಸಾಕಷ್ಟು ಸಿಬ್ಬಂದಿ ಇಲ್ಲದೆ, ಸಾಕಷ್ಟು ವ್ಯವಸ್ಥೆ ಇಲ್ಲದೆ,ಪ್ರಾಜೆಕ್ಟ್‌ಗಳಿಗೆ ಖರ್ಚಾಗಿರತಕ್ಕ ಹಣವೆಷ್ಟು,ಉಳಿತಾಯವಾಗಿರತಕ್ಕ ಹಣವೆಷ್ಟು ಎನ್ನುವುದನ್ನು ಹೇಳುತ್ತಾರೆಯೇ ?

ಶ್ರೀ ರಾಮಕೃಷ್ಣ ಹೆಗಡೆ;—ಮಾನ್ಯ ಸದಸ್ಯರು ಹೇಳುವುದು ಸರಿಯಲ್ಲ. ಒಟ್ಟು ೧೦ ಕೋಟಿ ೯ ಲಕ್ಷ ರೂಪಾಯಿನಷ್ಟು ಉಳಿತಾಯ ಮಾಡಬೇಕು ಎಂದು ಕಮಿಟಿಯವರು ಶಿಫಾರಸು ಮಾಡಿದ್ದು ನಿಜ. ಆದರೆ ಇದರಲ್ಲಿ ಒಂದೂವರೆ ಕೋಟಿ ರೂಪಾಯಿ ಗ್ರಾಮಾಂತರ ನೀರು ಪೂರೈಕೆ ಯೋಜನೆ ಬಗ್ಗೆ ಮತ್ತು ಒಂದೂವರೆ ಕೋಟಿ ರೂಪಾಯಿ ಚಿಕ್ಕ ನೀರಾವರಿ ಯೋಜನೆ ಬಗ್ಗೆ ಅದೇ ಕಮಿಟಿಯ ಶಿಫಾರಸಿನ ಮೇರೆಗೆ ಕೊಟ್ಟಿದ್ದೇವೆ. ಈ ಮೂರು ಕೋಟಿ ಹೋದರೆ ಉಳಿದ ಏಳು ಕೋಟಿ ೯ ಲಕ್ಷ ರೂಪಾಯಿ ಉಳಿಯಿತು; ೭ ಕೋಟಿ ೨೬ ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆ. ಇದರಲ್ಲಿ ಎಷ್ಟು ಉಳಿತಾಯವಾಗಿದೆ ಎನ್ನುವುದನ್ನು ಎರಡು ತಿಂಗಳ ನಂತರ ಕೇಳಿದರೆ ಹೇಳುತ್ತೇನೆ.

ಶ್ರೀ ಎಚ್. ಎನ್. ನಂಜೇಗೌಡ:—ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡುತ್ತಾ, ಸದ್ಯದಲ್ಲಿ ಕಂಬದಕಡ ನಮ್ಮ ಗಮನದಲ್ಲಿಲ್ಲ ಎಂದು ಹೇಳಿದರು. ೧೯೭೪ನೇ ಇಸವಿ ಆತುರವಾಗಿ ಬರುತ್ತಿರುವುದರಿಂದ ನಮ್ಮ ನೀರಿನ ಪೂರ್ತಿ ಹಕ್ಕನ್ನು ಉಪಯೋಗಿಸಿಕೊಳ್ಳುವ ದೃಷ್ಟಿಯಿಂದ ಈ ಪ್ರಾಜೆಕ್ಟನ್ನು ತೆಗೆದುಕೊಳ್ಳುವುದು ಅವಶ್ಯಕವಲ್ಲವೇ ? ಇದನ್ನು ಕೈಬಿಡುವುದು ಎನ್ನುವುದು ಸರ್ಕಾರದ ಅಭಿಪ್ರಾಯವೇ ? ಆದಷ್ಟು ಜಾಗ್ರತೆ ಕ್ರಮ ತೆಗೆದುಕೊಂಡು, ಕೆಲಸ ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆ ಎಂದು ತಿಳಿದುಕೊಳ್ಳೋಣವೇ ? ಯಾವುದಾದರೂ ಭರವಸೆ ಕೊಟ್ಟು ಸ್ಪಷ್ಟೀಕರಿಸುತ್ತಾರೆಯೇ ?

ಶ್ರೀ ವೀರೇಂದ್ರ ಪಾಟೀಲ್:— ಈ ಹೊತ್ತು ತೆಗೆದುಕೊಳ್ಳತಕ್ಕ ವಿಚಾರವಿಲ್ಲ ಎನ್ನುವುದನ್ನು ಹೇಳಿದ್ದೇನೆ. ಈಗಾಗಲೇ ಪ್ರಾರಂಭ ಮಾಡಿದಂಥ ಪ್ರಾಜೆಕ್ಟುಗಳನ್ನು ಪೂರೈಸಬೇಕು ಮತ್ತು ಮೊನ್ನೆ ತಾನೇ ತಾರಕ ಪ್ರಾಜೆಕ್ಟ್ ಕೂಡ ೧೯೭೦-೭೧ರಲ್ಲಿ ಪ್ರಾರಂಭ ಮಾಡುತ್ತೇನೆಂದು ಭರವಸೆ ಕೊಟ್ಟಿರುತ್ತೇನೆ. ಪ್ರಾಜೆಕ್ಟ್‌ಗಳನ್ನು ಬೆಳೆಸಿಕೊಂಡುಹೋಗಿ ಎಲ್ಲಾ ಪ್ರಾಜೆಕ್ಟ್‌ಗಳನ್ನೂ ಮುಗಿಸಲಾರದೆ, ಅಲ್ಲಲ್ಲಿ ದುಡ್ಡು ಖರ್ಚು ಮಾಡಿ ಅರ್ಧಂಬರ್ಧ ಕೆಲಸ ಮಾಡುವುದಕ್ಕಿಂತ, ಅದನ್ನೆಲ್ಲ ಸಂಗ್ರಹ ಮಾಡಿ ಆದಷ್ಟು ಜಾಗ್ರತೆ ತೆಗೆದುಕೊಂಡಿರುವ ಪ್ರಾಜೆಕ್ಟುಗಳನ್ನು ಮುಗಿಸಬೇಕು ಎನ್ನುವುದು ಸರ್ಕಾರದ ಉದ್ದೇಶ.

ಶ್ರೀ ಹೆಚ್. ಎನ್ ನಂಜೇಗೌಡ: — ಹೇಮಾವತಿ ಮತ್ತು ಕಬಿನಿ ಬಿಟ್ಟರೆ ೪೫ ಟಿ. ಎಂ. ಸಿ. ನೀರನ್ನು ಉಪಯೋಗಿಸಿಕೊಳ್ಳಲು ಕಾವೇರಿ ಬೇಸಿನ್‌ನಲ್ಲಿ ಪ್ರಾಜೆಕ್ಟ್‌ಗಳಿಲ್ಲ. ಕಂಬದಕಡ ತೆಗೆದುಕೊಳ್ಳದೆ ಇದ್ದರೆ ನಮಗೆ ಬರಬೇಕಾದ ನೀರನ್ನು ಕಳೆದುಕೊಂಡಂತೆ ಆಗುತ್ತದೆಯಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್:—ಕಂಬದಕಡ ಪ್ರಾಜೆಕ್ಟ್ ಒಂದೇ ಅಲ್ಲ, ಇನ್ನೂ ಅನೇಕ ಪ್ರಾಜೆಕ್ಟ್‌ಗಳನ್ನು ನಾನ್ ಷೆಡ್ಯೂಲ್ ರಿವರ್ಸ್ ಮೇಲೆ ತೆಗೆದು ಕೊಳ್ಳುವುದಕ್ಕೆ ಅಗ್ರಿಮೆಂಟ್ ಅಡ್ಡಿ ಬರುವುದಿಲ್ಲ. ಈ ಪ್ರಾಜೆಕ್ಟ್‌ಗಳನ್ನು ತೆಗೆದುಕೊಳ್ಳಲು ಪ್ರಾಜೆಕ್ಟ್ ರಿಪೋರ್ಟ್‌ಗಳು ತಯಾರಾಗುತ್ತಿವೆ. ಕಂಬದಕಡ ಯೋಜನೆಯನ್ನು ೧೯೭೦-೭೧ ರಲ್ಲಿ ತೆಗೆದುಕೊಳ್ಳುವಂಥ ಅಭಿಪ್ರಾಯ ಸರ್ಕಾರಕ್ಕೆ ಇಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದೇನೆ.

ಶ್ರೀ ಬಿ. ದೊಡ್ಡಬೋರೇಗೌಡ:—ಸಂಪನ್ಮೂಲ ಸಮಿತಿಯವರು ಕೊಟ್ಟಿರುವ ವರದಿ ಪ್ರಕಾರ ೧೮ ಯೋಜನೆಗಳನ್ನು ತೆಗೆದುಕೊಳ್ಳಬೇಕೆಂದಿದೆ. ಇದರಲ್ಲಿ ಸರ್ಕಾರ ಅನುಮತಿ ಕೊಟ್ಟಿರುವ ಯೋಜನೆಗಳೆಷ್ಟು, ಅನುಮತಿ ಕೊಡದೆ ಇರುವ ಯೋಜನೆಗಳೆಷ್ಟು ? ಇದರಲ್ಲಿ ಷಿಂಷಾ ಮತ್ತು ಲೋಕಪಾವತಿ ಯೋಜನೆಗಳು ಸೇರಿಲ್ಲ, ಅವುಗಳನ್ನೂ ಸೇರಿಸುತ್ತಾರೆಯೇ ?

ಶ್ರೀ ವೀರೇಂದ್ರ ಪಾಟೀಲ್:—ಯೋಜನೆಗಳನ್ನು ಯಾವುದನ್ನು ಪ್ರಾರಂಭ ಮಾಡಿದ್ದೇವೆ ಎನ್ನುವ ಪಟ್ಟಿ ಬಹುಶಃ ಮಾನ್ಯ ಸದಸ್ಯರ ಹತ್ತಿರ ಇರಬಹುದು. ಇಲ್ಲಿರುವಂಥ ಪಟ್ಟಿ ಸಂಪನ್ಮೂಲ ಸಮಿತಿಯವರು ಮಾಡಿದ್ದು. ಈ ತರಹ ಯೋಜನೆಗಳಿಗೆ ಹಣವನ್ನು ಸರ್ಕಾರ ಒದಗಿಸಬೇಕು ಎಂದು ಪಟ್ಟಿ ಕೊಟ್ಟಿದ್ದಾರೆಯೇ ಹೊರತು ಬೇರೇನೂ ಅಲ್ಲ. ಮೈನರ್ ಇರಿಗೇಷ್‌ನ ವಿಚಾರ ಇದರಲ್ಲಿ ಬರುವುದಿಲ್ಲ.

ಶ್ರೀ ಕೆ. ಸಂಗನಗೌಡ:—೭೨೬ ಲಕ್ಷರೂಪಾಯಿಗಳಲ್ಲಿ ಉತ್ತರ ವಲಯಕ್ಕೆ ಒದಗಿಸಿರುವುದು ಕೇವಲ ೨೦ ಲಕ್ಷ ರೂಪಾಯಿ. ಕೃಷ್ಣ ಮೇಲ್ದಂಡೆ ಯೋಜನೆಗೆ ೨೦೦ ಕೋಟಿ ರೂಪಾಯಿ ಬೇಕು. ಅದಕ್ಕಾಗಿ ಆ ಭಾಗಕ್ಕೂ ಹಣವನ್ನು ಹೆಚ್ಚಾಗಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತಾರೆಯೋ ?

ಶ್ರೀ ವಿರೇಂದ್ರ ಪಾಟೀಲ್:—ಹೆಚ್ಚು ಹೆಚ್ಚು ಹಣವನ್ನು ಎಲ್ಲ ಕಡೆಗೂ ಖರ್ಚು ಮಾಡಬೇಕಾಗಿದೆ ಕೃಷ್ಣಯೋಜನೆ ಬಹಳ ದೊಡ್ಡ ಯೋಜನೆ. ಅಲ್ಲಿ ಕೆಲಸ ಪ್ರಾರಂಭವಾಗಿದೆ. ಹೋದ ಸಲ ಎಂದರೆ ೧೯೬೯-೭೦ರ ಸಲುವಾಗಿ ಕೊಟ್ಟ ರಿಪೋರ್ಟ್, ಅದರ ಪ್ರಕಾರ ಎಷ್ಟರ ಮಟ್ಟಿಗೆ ಹಣವನ್ನು ಒದಗಿಸಲಾಗಿದೆ ಎಂದು ಸವಿಸ್ತಾರವಾಗಿ ಹೇಳಲಾಗಿದೆ.

ಶ್ರೀ ಎಸ್. ಎಂ. ಗುರೆಡ್ಡಿ:—ಈಗಾಗಲೇ ಕಾವೇರಿ ಬೇಸಿನ್‌ನಲ್ಲಿ ಬರುವಂಥ ಪ್ರತಿಯೊಂದು ಪ್ರಾಜೆಕ್ಟಿಗೆ ಹಣದ ಮಿತಿ ಇಲ್ಲ, ಅಧಿಕಾರಿಗಳು ಬೇಕಾದಷ್ಟು ಖರ್ಚು ಮಾಡಬಹುದು ಎಂದು ಹೇಳುತ್ತಿದ್ದಾರೆ. ಇದು ಸ್ವಾಗತಾರ್ಹವಾದುದು. ಅದರಂತೆ ಕೃಷ್ಣ ಬೇಸಿನ್‌ನಲ್ಲಿ ಬರುವಂಥ ಪ್ರತಿಯೊಂದು ಪ್ರಾಜೆಕ್ಟಿಗೆ ಅದೇ ತರಹ ಗ್ರೀನ್ ಸಿಗ್ನಲ್ ಕೊಟ್ಟಿದ್ದೀರಾ ಹೇಗೆ ?

ಶ್ರೀ ವಿರೇಂದ್ರ ಪಾಟೀಲ್:—ಕೃಷ್ಣ ಬೇಸಿನ್ ನಲ್ಲಿರುವಂಥ ಪ್ರಾಜೆಕ್ಟ್‌ಗಳಿಗೆ ಕೂಡ ಅದೇ ರೀತಿಯಲ್ಲಿ ವಿಚಾರ ಮಾಡಿ ಹೆಚ್ಚು ಹೆಚ್ಚು ಹಣ ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ ಮತ್ತು ಅಪ್ಪರ್ ಕೃಷ್ಣ ಜಾಗ್ರತೆ ಆಗುವುದಕ್ಕೆ ಪ್ರಯತ್ನ ಮಾಡುತ್ತೇವೆ. ಆದರೆ ಕಾವೇರಿ ಬೇಸಿನ್ ಪ್ರಾಜೆಕ್ಟ್ ಮತ್ತು ಕೃಷ್ಣ ಬೇಸಿನ್ ಪ್ರಾಜೆಕ್ಟ್‌ಗಳಲ್ಲಿ ಒಂದು ವ್ಯತ್ಯಾಸವೇನೆಂದರೆ, ಕಾವೇರಿ ಬೇಸಿನ್ ಪ್ರಾಜೆಕ್ಟ್‌ಗಳಿಗೆ ಬಹಳ ಹೆಚ್ಚು ಹಣ ಖರ್ಚು ಮಾಡಬೇಕಾಗಿದೆ, ಅಲ್ಲಿ ನೀರಿನ ಉಪಯೋಗವನ್ನೂ ಬಹಳ ಮಟ್ಟಿಗೆ ಮಾಡಬೇಕಾಗಿದೆ, ಬಹಳ ಹೆಚ್ಚು ಅಭಿವೃದ್ಧಿ ಮಾಡಬೇಕಾದ ಪರಿಸ್ಥಿತಿ ಇದೆ. ಅದರ ಅರ್ಥ ಇಲ್ಲಿ ಎಲ್ಲ ಹಣವನ್ನೂ ಕೊಟ್ಟು, ಕೃಷ್ಣ ಬೇಸಿನ್ ನಲ್ಲಿರುವ ಪ್ರಾಜೆಕ್ಟ್‌ಗಳನ್ನು ಕಟ್ಟಬಾರದು ಎನ್ನುವಂಥದಲ್ಲ. ಅಲ್ಲಿಯೂ ಕೂಡ ಒಳ್ಳೆಯ ಪ್ರೋಗ್ರೆಸ್ ಆಗುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಚ್. ಶ್ರೀ ಕಂಠಯ್ಯ:—೧೬ನೇ ಪುಟದಲ್ಲಿ ಕೊಟ್ಟಿರುವ ಪಟ್ಟಿಯಂತೆ ಅರ್ಕಾವತಿ, ಬೆಳಾರೆ, ಹೆಬ್ಬಹಳ್ಳ, ಲಕ್ಷ್ಮಣತೀರ್ಥ ಮುಂತಾದ ಪ್ರಾಜೆಕ್ಟ್‌ಗಳಿಗೆ ಐದು ಲಕ್ಷ, ಹತ್ತು ಲಕ್ಷ ರೂಪಾಯಿ ಕೊಡುವುದಕ್ಕೆ ಬದಲಾಗಿ, ಅದನ್ನೆಲ್ಲ ಕ್ರೋಢೀಕರಿಸಿ ಬಹಳ ಅಗತ್ಯವಾಗಿ ಆಗಬೇಕಾಗಿರುವ ಕಬಿನಿ ಯೋಜನೆಗೆ ದುಡ್ಡು ಹಾಕಿದರೆ ಬೇಗ ಅದನ್ನು ಮುಗಿಸುವುದಕ್ಕೆ ಆಗುತ್ತದೆಯಲ್ಲವೇ ? ರಿಸೋರ್ಸ್ ಕಮಿಟಿಯವರು ವಿಧಾನ ಪರಿಷತ್ತನ್ನು ರದ್ದು ಮಾಡುವ ಬಗ್ಗೆ ಸಿಫಾರಸು ಮಾಡಿದ್ದಾರೆ. ಅದರಿಂದ ಎಷ್ಟು ಉಳಿತಾಯವಾಗುತ್ತದೆ ಎನ್ನುವುದನ್ನು ಹೇಳುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್:—ಎರಡನೇ ಪ್ರಶ್ನೆಗೆ ಉತ್ತರ ಶ್ರೀ ರಾಮಕೃಷ್ಣ ಹೆಗಡೆ ಅವರು ಕೊಡುತ್ತಾರೆ.

ನಾನು ಪದೇ ಪದೇ ಹೇಳುತ್ತಿದ್ದೇನೆ, ಕಮಿಟಿಯವರು ಕೆಲವು ಪ್ರಾಜೆಕ್ಟ್‌ಗಳ ಬಗ್ಗೆ ಹೇಳಿದ್ದಾರೆ; ನಾವು ಅದನ್ನು ಒಪ್ಪಿಕೊಂಡಿಲ್ಲ. ಮಾನ್ಯ ಸದಸ್ಯರು ಸಲಹೆ ಮಾಡಿದಂತೆ ೨ ಲಕ್ಷ, ೩ ಲಕ್ಷ, ೫ ಲಕ್ಷ, ರೂಪಾಯಿಗಳ ಪ್ರಾಜೆಕ್ಟ್‌ಗಳನ್ನು ಬಿಟ್ಟು ಹೇಮಾವತಿಗೆ ಒಂದು ಕೋಟಿ ರೂಪಾಯಿ ಹೆಚ್ಚು ಕೊಟ್ಟಿದ್ದೇವೆ. ಅದೇ ರೀತಿ ಕಬಿನಿ ಯೋಜನೆಗೆ ಮೊದಲು ಎಷ್ಟು ಹಣವನ್ನು ಬಜೆಟ್ಟಿನಲ್ಲಿ ಒದಗಿಸಲಾಗಿತ್ತೋ ಅದಲ್ಲದೆ ೮೦ ಲಕ್ಷ ರೂಪಾಯಿ ಹೆಚ್ಚಾಗಿ ಕೊಟ್ಟಿದ್ದೇವೆ.

9-00 A.M.

Sri H. SIDDAVEERAPPA :—I invite the attention of the Hon. Minister to the appendix. I would like to know how much of amount has been allotted and how much has been spent in the year just now passed ?

Sri RAMAKRISHNA HEGDE :—In reply to earlier supplementary I said that if this question is put after two months, I shall be able to furnish the figures. Now it is not possible.

Sri H. SIDDAVEERAPPA :—Will you not be able to say approximately, though not exactly whether some amount has been spent or whether sum alloted has not been spent at all or whether the amount allotted has remained on paper only ?

Sri RAMAKRISHNA HEGDE :—I cannot furnish unless they are received and this question becomes irrelevant at this stage. It is only on the basis of expenditure incurred along with certain considerations, the Committee recommended allocation of additional funds to these projects. The question, about how much of money is going to be spent is not justified. It is not possible to give any correct figure of the expenditure that is going to be incurred.

Sri H. SIDDAVEERAPPA :—I do not understand how the question becomes irrelevent. My question is on each of the projects specified here whether anything has been spent–for instanse for Devarabilikere let him say how much has been spent.

Sri RAMAKRISHNA HEGDE :—I want notice.

ಶ್ರೀ ಎಲ್. ಶ್ರೀಕಂಠಯ್ಯ :—ಸ್ವಾಮಿ ರಿಸೋರ್ಸಸ ಕಮಿಟಿಯಲ್ಲಿ ವರ್ಷಂ ಪ್ರತಿ ಎಷ್ಟು ಉಳಿತಾಯ ಆಗುತ್ತದೆ ಎಂದು ಚರ್ಚೆಮಾಡಿದ್ದೀರಾ ?

ಶ್ರೀ ರಾಮಕೃಷ್ಣ ಹೆಗಡೆ .—ಈ ವಿಚಾರ ಅದರಲ್ಲಿ ಬರಲಿಲ್ಲ.

REVISED INTER-STATE SENIORITY LIST OF JUNIOR ENGINEERS IN P.W.D.

317. Sri H.N. NANJEGOWDA (Arkalgud).—

Will the Minister for Public Works be pleased to state.—

(*a*) the nnmber of times the Inter-State Seniority Lists of "Junior Engineers" in the public Works Department has been prepared and revised after 1956 (Date-war information may be furnished) ;

(*b*) whether names of the non-graduate Supervisors, non-graduate Overseers, non-graduate Draftsman were also included together with the graduates (B.Es.) in any of the lists ;

(*c*) if so, the criteria adopted for determining the seniority and also for equating the post of graduate incumbents with that of the non-graduates ;

(*d*) whether Government has very recently promoted some graduate and non-graduate Supervisors and Engineers as "Officiating Assistant Engineers" ;

(*e*) if so, whether separate lists of the graduate and non-graduate incumbents that are promoted together with the lists of gradnate and non-graduate incumbents separately stating against their names, who is coming from the old Mysore area and from the integrated area, will be laid on the Table of the House ?

Sri K. LAKKAPPA (Minister for Public Works) .—

(*a*) Six times as indicated below :—

(1) To Notification dated 25th April 1957.

(2) To Notification dated 10th August 1962.

(3) Notification No. GAD 6 INS 61 dated 10th November 1961, published in the Mysore Gazette dated 23rd November 1961.

(4) Notification No. GAD 64, INS 62, dated 28th November 1963, published in the Mysore Gazette dated 23rd January 1964.

(5) Notification No. GAD 149 INS 66, dated 14th August 1966 published in the Mysore Gazette dated 18th August 1966 and Amendment dated 2nd September 1966 published in the Mysore Gazette dated 8th September 1966.

(6) Notification No. GAD 2 INS 68, dated 26th December 1968 published in the Mysore Gazette dated 30th December 1968.

(Sri K. LAKAPPA)

(*b*) and (*c*) Non-graduate 'Draftsman' have not been included in any of the above lists. In the provisional lists published by the State Government on 18th August 1966 and 8th September 1966 the names of non-graduate 'Supervisors' of Hyderabad and Madras and non-graduate 'Overseers' of Bombay were included in accordance with direction of High Court in Writ Petition No. 1431/61, 2399/63, 2439/63 and 68/65. In the final Inter-State Seniority List Published on 30th December 1968, they along with the non-graduate Sub-Engineers and Overseers of Mysore and non-graduate Section Officers of Coorg were included in accordance with the decisions of the Government of India. The seniority as between Graduates and non-graduates has been determined on the basis of the date of continuous officiation in the equated cadre, maintaining the parent unit seniority.

(*d*) Yes.

(*e*) Promotions are made according to seniority cum-merit dan not according to areas. However, the area to which they belongcce indicated against the name of each officer in the notifications placed on the table of the House. Copies placed in the Mysore Legislature library.

ಶ್ರೀ ಹೆಚ್. ಎನ್. ನಂಜೇಗೌಡ.—ಆರು ಸಾರಿ ಸೀನಿಯಾರಿಟಿ ಲಿಸ್ಟ್ ತಯಾರು ಮಾಡಿದ್ದೀರ, ಇಪ್ಪೊಂದು ಸಾರಿ ಮಾಡಬೇಕಾದರೆ ಏನು ಕಾರಣ? ಫೈನಲೈಜ್ ಮಾಡಬೇಕಾದರೆ ಇನ್ನು ಎಷ್ಟು ನೋಟಿಫಿಕೇಶನ್ ಆಗಬೇಕು. ಸೀನಿಯಾರಿಟಿ ಲಿಸ್ಟ್‌ಗೆ ಕೊನೆ ಇದೆಯೇ?

ಶ್ರೀ ಕೆ. ಲಕ್ಕಪ್ಪ:—ಸೀನಿಯಾರಿಟಿ ಲಿಸ್ಟ್ ತಯಾರಾದ ಮೇಲೆ ಇತರ ಅಧಿಕಾರ ವರ್ಗದವರು ಕೋರ್ಟ್‌ನಲ್ಲಿ ರಿಟ್‌ಅಪ್ಲಿಕೇಷನ್ ಹಾಕಿದ್ದಾರೆ. ಕೋರ್ಟಿನವರ ಆದೇಶದ ಪ್ರಕಾರ ಎರಡು ಮೂರು ಸಾರ್ತಿ ಮುಂದುವರಿಸಬೇಕಾಗಿ ಬಂತು. ಆ ಕಾರಣದಿಂದ ಮುಂದುವರಿಸಿತು.

ಶ್ರೀ ಹೆಚ್. ಎನ್. ನಂಜೇಗೌಡ:—ಕೋರ್ಟ್‌ಗೆ ಹೋಗಿದ್ದು ಎಂದೇ ಸಾರಿ. ಈಗ ಸೀನಿಯಾರಿಟಿ ಲಿಸ್ಟ್ ಮಾಡಿರುವುದರಿಂದ ಗ್ರಾಜುಯೇಟ್ ಇಂಜಿನೀಯರುಗಳು ಹಳೇ ಮೈಸೂರು ಪ್ರದೇಶದಲ್ಲಿ ಇರುವವರು ೧೫೦–೧೬೦ ಕೆಳಗಿನ ಸ್ಥಾನಗಳಿಗೆ ಹೊರಟುಹೋದರು. ಕಾರಣ ಏನು ಎಂದರೆ ಸೂಪರ್‌ವೈಜರ್ಸ್, ಓವರಸೀಸ್ ಅವರಿಗೆ ಈ ಕ್ವೋಟ್ ಮಾಡಿ ಗವರ್ನಮೆಂಟ್ ಆರ್ಡರ್ ಮಾಡಿದಿರಿ. ಇದರಿಂದ ಇಲಾಖೆಯಲ್ಲಿ ಅಸಂತೃಪ್ತಿ ತುಂಬ ಪ್ರಕ್ಷುಬ್ಧ ಪರಿಸ್ಥಿತಿ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ? ಇದನ್ನು ಸೆಟ್‌ರೈಟ್ ಮಾಡಲು ಏನು ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಕೆ. ಲಕ್ಕಪ್ಪ.—ಆ ರೀತಿ ಅತೃಪ್ತಿ ಬಂದುದ್ದು ಉಂಟು. ಕೋರ್ಟ್‌ಗೆ ಹೋಗಿ ಕೋರ್ಟ್‌ನಲ್ಲಿ ವ್ಯವಹಾರ ನಡೆದು ಕೋರ್ಟ್‌ನ ಆದೇಶದ ಪ್ರಕಾರ ಮತ್ತು ಆರೋಪ ಎತ್ತಿದ್ದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಅವರು ಪರಿಶೀಲನೆಮಾಡಿ ಕೇಂದ್ರ ಸರ್ಕಾರದ ಆದೇಶ ಬಂದಮೇಲೆ ತೀರ್ಮಾನ ತೆಗೆದುಕೊಂಡಿದ್ದೇವೆ. ಆದುದರಿಂದ ದಾರಿ ಬಿಟ್ಟು ಹೋಗಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ಇಂಟರ್ ಸ್ಟೇಟ್ ಸೀನಿಯಾರಿಟಿ ಲಿಸ್ಟ್ ತಾರೀಖು ೧೮ನೇ ಆಗಸ್ಟ್ ೧೯೬೬, ೮ನೇ ಸೆಪ್ಟೆಂಬರ್ ೧೯೬೬ ಹೈಕೋರ್ಟ್ ರಿಟ್‌ಪಿಟಿಷನ್ ಮೇಲೆ ಕೊಟ್ಟಂಥ ಆದೇಶಕ್ಕೆ ಅನುಗುಣವಾಗಿ ಮಾಡಿದ್ದೇವೆಂದು ಎಂದು ಹೇಳಿದ್ದೀರಿ. ಮುಂದಿನ ಪ್ರಶ್ನೆಗೆ ಉತ್ತರ ಹೇಳುತ್ತಾ ಗೌವರ್ನಮೆಂಟ್ ಆಫ್ ಇಂಡಿಯಾ ಸೂಚನೆ ಕೊಟ್ಟ ಮೇಲೆ ಫೈನಲ್ ಡಿಸಿಷನ್ ಪಬ್ಲಿಷ್ ಮಾಡಿದ್ದೇವೆ ಎಂದು ಹೇಳಿದ್ದಿರಿ.

ಇಂಟರ್ ಸ್ಟೇಟ್ ಸಿನಿಯಾರಿಟಿ ಲಿಸ್ಟ್ ಎರಡು ಸಾರಿ ಹೈಕೋರ್ಟಿನ ಆದೇಶ ಪ್ರಕಾರ ಪಬ್ಲಿಷ್ ಮಾಡಿದ್ದೀರಿ. ಹೈಕೋರ್ಟ್ ಕೊಟ್ಟಂಥ ಸೂಚನೆ ನಿಷ್ಪಕ್ಷಪಾತವಾಗಿದೆ ಎಂದು ಸರ್ಕಾರಕ್ಕೆ ಮನವರಿಕೆಯಾಗಿದೆಯೇ ? ಹೈಕೋರ್ಟಿನವರು ಕೊಟ್ಟಂಥ ನಿರ್ಣಯದಿಂದ ಇನ್‌ಜಸ್ಟೀಸ್ ಆಗಿಲ್ಲ ಅದು ಸರಿಯಾಗಿದೆ ಎಂದು ಇಂಟರ್‌ಸ್ಟೇಟ್ ಸೀನಿಯಾರಿಟಿ ಲಿಸ್ಟ್ ಪಬ್ಲಿಷ್ ಮಾಡಿದ್ದೀರಾ ?

ಶ್ರೀ ಕೆ. ಲಕ್ಕಪ್ಪ.—ಹೈಕೋರ್ಟಿನವರು ಕೊಟ್ಟಿರತಕ್ಕ ಆದೇಶದಿಂದ ನಾನ್‌ಗ್ರಾಜುಯೇಟ್ ಸೂಪರ್‌ವೈಜರ್ಸ್, ಓವರ್‌ಸೀಸ್ ಮತ್ತು ಕೂರ್ಗಿನಲ್ಲಿ ಇದ್ದಂಥ ಅಧಿಕಾರಿಗಳು ಜೂನಿಯರ್ ಇಂಜಿನೀಯರುಗಳು ಜೊತೆಗೆ ಸೇರಿಸಬೇಕೆಂದು ಕೊಟ್ಟಿದ್ದಾರೆ. ಅದರ ಮೇಲೆ ಸೀನಿಯಾರಿಟಿ ಲಿಸ್ಟ್ ಪ್ರಿಪೇರ್ ಮಾಡಬೇಕಾದರೆ ಕೇಂದ್ರ ಸರ್ಕಾರಕ್ಕೆ ಎಲ್ಲಾ ಮಾಹಿತಿ ಕಳುಹಿಸಬೇಕಾಯಿತು. ಆ ಪ್ರಕಾರ ಏನೇನು ಮಾಹಿತಿ ಬೇಕೋ ಅದಕ್ಕೆ ನೋಟೀಸು ಕೊಟ್ಟು ವಿವರಣೆಗಳನ್ನು ಪಡೆದು ಕೇಂದ್ರ ಸರ್ಕಾರಕ್ಕೆ ಕಳುಹಿಸಬೇಕಾಯಿತು. ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಯಿತು. ಕೇಂದ್ರ ಸರ್ಕಾರದವರು ಪೂರ್ಣ ಪರಿಶೀಲನೆ ಮಾಡಿ ಅನಂತರ ಕಳುಹಿಸಿಕೊಟ್ಟರು.

ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ:—ಆರು ಸಾರಿ ಇಂಟರ್‌ಸ್ಟೇಟ್ ಸೀನಿಯಾರಿಟಿ ಲಿಸ್ಟ್ ಪುನರ್‌ವಿಮರ್ಶೆಮಾಡಿದ್ದೀರಾ. ಆರು ಸಾರಿ ಹೈಕೋರ್ಟು ಡೈರೆಕ್ಷನ್ಸ್ ಬಂದಿದ್ದಕ್ಕೋಸ್ಕರ ಮಾಡಿದ್ದೀರಾ ? ಇನ್ನೂ ಏನಾದರೂ ಬೇರೆ ಕಾರಣಗಳು ಉಂಟೋ ?

ಶ್ರೀ ಕೆ. ಲಕ್ಕಪ್ಪ.—ಹಿಂದೆ ಅಬ್‌ಜಕ್ಷನ್ ಬಂದಿರುವುದರಿಂದ ಪುನಃ ಪುನಃ ಪರಿಶೀಲನೆ ಮಾಡಬೇಕಾಗಿ ಬಂತು. ಅಂತ್ಯದಲ್ಲಿ ಹೈಕೋರ್ಟಿಗೆ ರಿಟ್ ಹೋದರು. ಆ ಮೇಲೆ ತೀರ್ಮಾನವಾಯಿತು.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಹೈಕೋರ್ಟ್ ಆರ್ಡರ್ ಪ್ರಕಾರ ಲಿಸ್ಟ್ ಬದಲಾಯಿಸಿತು. ಹೈಕೋರ್ಟಿನಲ್ಲಿ ಕೆಲವು ಸಾರಿ ರಿಟ್ ಹಾಕಿದಾಗ ಸರ್ಕಾರದವರು ಪಾರ್ಟಿಗೆ ಉಪಕಾರ ಆಗಲಿ ಎಂದು ಕೌಂಟರ್ ಅಫಿಡವಿಟ್ ಹಾಜರುಮಾಡದೆ ಅನೇಕ ವೇಳೆ ಹೈಕೋರ್ಟಿನಲ್ಲಿ ಸರ್ಕಾರಕ್ಕೆ ವ್ಯತಿರಿಕ್ತವಾಗಿ ತೀರ್ಮಾನವಾಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

SRI K. LAKKAPPA.—I can say it is only the imagination of the Hon. Member.

SRI H. Siddaveerappa.—I would like to know from the Hon. Minister whether the Mysore Government have agreed to have all India Cadre of Engineers and if so whether the Junior Engineers also will come in there ?

SRI K LAKKAPPA.—We have agreed for all India Cadre of Engineers.

ಶ್ರೀ ಹೆಚ್. ಎಸ್. ನಂಜೇಗೌಡ.—ಅಕಾರ್ಡಿಂಗ್ ಟು ಸೀನಿಯಾರಿಟಿ ಕಂ ಮೆರಿಟ್ ಮೇಲೆ ಲಿಸ್ಟ್ ತಯಾರು ಮಾಡಿ, ನಾನ್ ಗ್ರಾಜುಯೇಟ್ಸ್‌ಗೆ ಪ್ರಮೋಷನ್ಸ್ ಕೊಟ್ಟಿದ್ದೀರಿ. ಅದರ ಪೈಕಿ ಹೈದರಾಬಾದ್ ಏರಿಯಾಗೆ ೨೯, ಮದರಾಸು ಏರಿಯಾಗೆ ೧೦, ಬಾಂಬೆ ಏರಿಯಾಗೆ ೧೩, ಮೈಸೂರಿಗೆ ೫, ಕೂರ್ಗಿಗೆ ೬ ಈ ರೀತಿ ಪ್ರಮೋಷನ್ಸ್ ಕೊಟ್ಟಿದ್ದೀರಿ. ಲಿಸ್ಟ್ ಪ್ರಕಾರ ನೋಡುವುದಾದರೆ ಒಂದು ಭಾಗಕ್ಕೆ ಸೌಲಭ್ಯವಾಗಲೀ ಎಂದು ಸೀನಿಯಾರಿಟಿ ಲಿಸ್ಟ್ ತಯಾರು ಮಾಡಿದಹಾಗೆ ಕಾಣುತ್ತದೆ. ಇದರಿಂದ ಇಲಾಖೆಯಲ್ಲಿ ಅತೃಪ್ತಿ ಮೂಡಿಲ್ಲವೇ ? ಫೈನಲ್ ಲಿಸ್ಟ್ ಆದಮೇಲೆ ಇದನ್ನು ರೆಕ್ಟಿಫೈ ಮಾಡಿ, ಏನು ಪ್ರಮೋಷನ್ ಕೊಟ್ಟಿದ್ದೀರಿ ಅದನ್ನು ಪುನರ್ ಪರಿಶೀಲನೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ. ಲಕ್ಕಪ್ಪ.—ಏರಿಯಾವೈಸ್ ಮಾಡಿಲ್ಲ. ಸೀನಿಯಾರಿಟಿ ಕಂ ಮೆರಿಟ್ ಬೇಸಿಸ್ ಮೇಲೆ ಮಾಡಿದ್ದೇನೆ. ಅದನ್ನು ಮಾಡುವಾಗ ಹೈದರಾಬಾದಿನ ಕಡೆ ಜಾಸ್ತಿ ಬರಬಹುದು, ಮೈಸೂರಿನ ಕಡೆ ಜಾಸ್ತಿ ಬರಬಹುದು, ಕರ್ಣಾಟಕದ ಕಡೆ ಜಾಸ್ತಿ ಬರಬಹುದು ಅಥವಾ ಕೂರ್ಗದ ಕಡೆ ಜಾಸ್ತಿ ಬರಬಹುದು. ಅದನ್ನು ಏನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಸ್. ಶಿವಪ್ಪ.—ಮೈಸೂರು ದೇಶಾದಂತ್ಯ ಇರತಕ್ಕ ಜೂನಿಯರ್ ಇಂಜಿನಿಯರುಗಳು ಸರ್ಕಾರ ಮಾಡಿರತಕ್ಕ ಅನ್ಯಾಯವನ್ನು ಪ್ರತಿಭಟಿಸಿ ಕಳೆದ ವರ್ಷ ಸಾಮೂಹಿಕವಾಗಿ ರಾಜೀನಾಮೆ ಕೊಟ್ಟದ್ದು ನಿಜವೇ ? ಜೂನಿಯರ್ ಇಂಜಿನಿಯರುಗಳಿಗೆ ಆದ ಅನ್ಯಾಯವನ್ನು ಸರಿಪಡಿಸುವುದಕ್ಕೆ ಸರ್ಕಾರದವರು ವಾಗ್ದಾನ ಕೊಟ್ಟಿದ್ದಾರೆ. ಅದನ್ನು ನೆರವೇರಿಸುವುದಕ್ಕೆ ಏನು ಕಾರ್ಯಕ್ರಮ ಕೈಗೊಂಡಿದ್ದೀರಾ ?

ಶ್ರೀ ಕೆ. ಲಕ್ಕಪ್ಪ.—ಹಿಂದಿನ ವಿಚಾರ ಗೊತ್ತಿಲ್ಲ. I want notice.

WEEKLIES PUBLISHED IN THE STATE

446. SRI M. H. JAYAPRAKASH NARAYAN (Sirsi).—

Will the Minister for Industries, Information and Publicity be pleased to state:—

(*a*) the number of weeklies that are being published at present in the State and their circulation figures ;

(*b*) the number of them that are being published regularly ;

(*c*) the policy adopted by the Government in giving advertisements to these weeklies ;

(*d*) out of the weeklies that are being published regularly, the weeklies which are published without getting advertisements and those which are not given advertisements in spite of their request ;

(*e*) the reasons for denying the advertisements to the weeklies by the Government though they are being published regularly and have requested for the same ?

SRI M. RAJASEKHARA MURTHY (Minister for Industries, Information and publicity):—

(*a*) 133. The list of weeklies and circulation figures is placed on the Table of the House. Copies laid in the Mysore Legislature Library.

(*b*) 91.

(*c*) Copy of the rules framed by the Government placed on the Table of the House. Copies laid in the Mysore Legislature Library.

(*d*) Weeklies not included in the media list approved by Government, do not usually get Government advertisements. Subject to the availability of funds and subject to the conditions laid down in the relevant rules, normally, no request is turned down.

(*e*) Regularity is not the only criteria for release of Government Advertisements. If a request is rejected it could be for not conforming to any one of the rules framed.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ.—೧೩೩ ವಾರ ಪತ್ರಿಕೆಗಳು ಪ್ರಕಟ ಆಗುತ್ತಾ ಇವೆ. ಅದರಲ್ಲಿ ೯೧ ಕ್ರಮವಾಗಿ ಪ್ರಕಟವಾಗುತ್ತಿದೆ ಎಂದು ಉತ್ತರ ಕೊಟ್ಟಿದ್ದೀರಿ. ರಾಜ್ಯದಲ್ಲಿ ಪ್ರಕಟವಾಗತಕ್ಕಂಥ ವಿವಿಧ ಅಧಿಕೃತ ರಾಜಕೀಯ ಪಕ್ಷಗಳ ಪತ್ರಿಕೆಗಳು ಯಾವುವು ? ಯಾವ ಯಾವ ಪಕ್ಷಗಳ ಪತ್ರಿಕೆಗಳಿಗೆ ಪ್ರತಿವರ್ಷ ಎಷ್ಟು ಜಾಹೀರಾತು ಕೊಟ್ಟಿದ್ದೀರಿ ?

ಶ್ರೀ ಎಂ. ರಾಜಶೇಖರಮೂರ್ತಿ.—ಪಕ್ಷಗಳ ಆಧಾರದ ಮೇಲೆ ಆ ಲಿಸ್ಟನ್ನು ತಯಾರು ಮಾಡಿಲ್ಲ.

ಶ್ರೀ ಎಂ. ಹೆಚ್. ಜಯಪ್ರಕಾಶ್ ನಾರಾಯಣ.—ಮೈಸೂರು ರಾಜ್ಯದಲ್ಲಿ ಡೆವಲಪಮೆಂಟ್ ಸ್ಕೀಂಗಳಲ್ಲಿ ಬೋತ್ ಪ್ಲಾನ್ ಅಂಡ್ ನಾನ್ ಪ್ಲಾನ್ ಸ್ಕೀಂಗಳು ೧೦೦ಕ್ಕೆ ೧೮ ಭಾಗ ಈ ಹಣವನ್ನು ಪರಿಶಿಷ್ಟವರ್ಗದವರ ಪುರೋಭಿವೃದ್ಧಿಗಾಗಿ ಖರ್ಚು ಮಾಡಬೇಕೆಂದು ಇದೆ. ಯಾವ ವಾರ ಪತ್ರಿಕೆಯೇ ಆಗಲಿ, ಪಕ್ಷಪತ್ರಿಕೆ ಆಗಲಿ, ಮಾಸ ಪತ್ರಿಕೆ ಆಗಲಿ, ಪ್ರಕಟ ಮಾಡತಕ್ಕವರು ಅಸ್ಪೃಷ್ಟತೆ ಮೇಲೆ ಆಗಲಿ, ಹರಿಜನರ ಮೇಲೆ ಆಗಲಿ ಲೇಖನಗಳನ್ನು ಕ್ರಮವಾಗಿ ಪ್ರಕಟಣೆ ಮಾಡುತ್ತಿದ್ದಾರೆಯೇ ಎಂದು ಯೋಚನೆ ಮಾಡಿ ಉತ್ತೇಜನ ಕೊಡತಕ್ಕ ಅವಕಾಶಮಾಡುತ್ತೀರಾ ?

ಶ್ರೀ ಎಂ. ರಾಜಶೇಖರಮೂರ್ತಿ.—ಅಂತಹವರಿಗೆ ಅಡವರಟೈಜಮೆಂಟ್ ರೀಲೀಜ್ ಮಾಡುತ್ತಿದ್ದೇವೆ.

ಶ್ರೀ ಎನ್. ಎ. ಚನ್ನೇಗೌಡ.—ಸರ್ಕಾರದವರು ಜಾಹೀರಾತು ಕೊಡತಕ್ಕಂಥ ವಾರ ಪತ್ರಿಕೆಗಳೆಷ್ಟು? ಇದರ ಬಗ್ಗೆ ಆಫೀಸಿನಲ್ಲಿ ಜಾಹೀರಾತು ಕೊಡುವುದಕ್ಕೆ ಒಂದು ಪಟ್ಟಿ ಮಾಡಿದ್ದೀರಾ ? ಆ ಲಿಸ್ಟ್ ಪ್ರಕಾರ ಪತ್ರಿಕೆಗಳೆಷ್ಟಿದೆ ? ಅದರಲ್ಲಿ ಮಾರ್ಗದರ್ಶಿ ಅನ್ನುವ ಪತ್ರಿಕೆ ಸೇರಿದೆಯೇ ?

SRI M. RAJASEKHARA MURTHY:—Sir, this is a general question. For individual questions I want notice.

ಶ್ರೀ ಎಸ್. ವಿ. ಅಗ್ನಿಹೋತ್ರಿ.—ಈಗ ತಾವು ನಮ್ಮ ರಾಜ್ಯದಲ್ಲಿ ಇಷ್ಟು ಪತ್ರಿಕೆಗಳು ದಾಖಲೆಯಲ್ಲಿದೆ ಎಂದು ಹೇಳಿದ್ದೀರಿ. ಅದರಲ್ಲಿ ಹರಿಜನರು ನಡೆಸುವಂಥ ಪತ್ರಿಕೆಗಳೆಷ್ಟು ? ಅಥವಾ ಹರಿಜನರಿಗೆ ಇಷ್ಟು ಪತ್ರಿಕೆಗಳು ಎಂದು ಕೋಟಾ ರಿಸರ್ವೇಷನ್ ಏನಾದರೂ ಇಟ್ಟಿದ್ದೀರಾ ?

ಶ್ರೀ ಎಂ. ರಾಜಶೇಖರಮೂರ್ತಿ.—ಅದಕ್ಕೆ ಬೇರೆ ಲಿಸ್ಟ್ ತಯಾರು ಮಾಡಿಲ್ಲ.

SRI K. H. RANGANATH.—It is stated in answer to (d) that Weeklies not included in the media list approved by Government, do not usually get Government advertisements, and Subject to the availability of funds and subject to the conditions laid down in the relevant rules, normally, no request is turned down, further in answer to (e) it is stated that regularity is not the only criteria for release of Government Advertisements and if a request is rejected it could be for not conforming to any one of the rules framed.

ಇದು ಒಂದಕ್ಕೊಂದಕ್ಕೆ ವಿರುದ್ಧವಾಗಿಲ್ಲವೇ ? ಬೇಕಾದವರಿಗೆ ಒಂದು ರೀತಿ ಕ್ರಮ ನಡೆಸುವುದು ಬೇಡವಾದವರಿಗೆ ಒಂದು ರೀತಿ ಕ್ರಮ ನಡೆಸುವುದು ವಿರುದ್ಧವಲ್ಲವೇ ?

ಶ್ರೀ ಎಂ. ರಾಜಶೇಖರಮೂರ್ತಿ.—(ಡಿ) ಮತ್ತು (ಇ)ಗೆ ಉತ್ತರ ಕೊಟ್ಟಿರುವುದು ವಿರುದ್ಧವಾಗಿಲ್ಲ.

SRI K. H. PATIL.—Are there any defunct Papers which have been still continuing their quota of advertisement ?

SRI M. RAJASEKARA MURTHY.—Such a thing has not come to my notice.

SRI B. B. SAYANAK.—May I know how many weeklies are published in Belgaum and out of which how many are getting Government advertisements ?

SRI M. RAJASEKARA MURTHY.—I want Notice.

SRI H. SIDDAVEERAPPA.—In answer to (e), may I know what are the other criteria ?

SRI M. RAJASEKHARA MURTHY.—Apart from regularity, standing and circulation and the quality of writing are the other criteria required.

SRI AZIZ SAIT.—Will the Minister inform the House the number of Papers under circulation only for the purpose of giving one or two copies to the office but not available for sale to the public ?

ಶ್ರೀ ಎಂ. ರಾಜಶೇಖರಮೂರ್ತಿ.—ಅಂಥಾದ್ದು ಯಾವುದೂ ನನ್ನ ಗಮನಕ್ಕೆ ಬಂದಿಲ್ಲ. ಅಂಥಾದ್ದೇನಾದರೂ ಇದ್ದರೆ ನನ್ನ ಗಮನಕ್ಕೆ ತಂದರೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ.—ಸಿರಸಿಯ ಗ್ರಾಮಾಭಿವೃದ್ಧಿ ಸಮಾಜವಾದಿ ಪತ್ರಿಕೆಗೆ ಪ್ರತಿವರ್ಷಪೂ ಕೊಡುವುದಕ್ಕಿಂತ ಈ ವರ್ಷ ಕಡಿಮೆ ಮಾಡಿದ್ದೀರಿ. ಬೇರೆ ಪತ್ರಿಕೆಗಳನು ನೋಡಿದರೆ ಈ ಪತ್ರಿಕೆಗೆ ಕಡಿಮೆ ಕೊಟ್ಟಿದ್ದೀರಿ. ಕಾರಣ ಏನು?

SRI M. RAJASEKHARA MURTHY.—That will be examined on its merits.

CASES OF SMUGGLING OF FOODGRAINS IN MANGALORE FOOD DIVISION

577. SRI B. M. IDINABBA (Mangalore).—

Will the Chief Minister be pleased to state:—

(*a*) the number of cases filed by the Police in Mangalore Food Division regarding smuggling of foodgrain in the year 1968-69,

(*b*) out of such cases the number of persons imprisoned and fined by the Courts;

(c) the number of country boats, electrically operatd boats, lorries and cars confiscated in this connection;

(d) whether the Police have been provided with Jeeps and eletrically operated boats onecessary to apprehend the smugglers;

(e) if not, whether it is not a fact that the police have become negligent in apprehending the smugglers ?

SRI MANIK RAO PATIL (Deputy Minister for Home) (on behalf of

SRI VEERENDRA PATIL (Chief Minister).—

(a)	1968	...	956 cases.
	1969	...	425 eases.
(b)	1968	—	3 persons imprisoned. 668 persons fined
	1969	...	2 persons imprisoned. 223 persons fined.
(c)	1968	...	6 lorries 2 cars 7 boats
	1969	...	1 lorry 3 cars 7 boats 1 cart

(d) Yes.

(e) No.

ಶ್ರೀ ಬಿ. ಎಂ. ಇದ್ದಿನಬ್ಬ :—ಸ್ವಾಮಿ, ಮಂಗಳೂರು ಆಹಾರ ವಿಭಾಗದಲ್ಲಿ ೧೯೬೮-೬೯ನೇ ಸಾಲಿನಲ್ಲಿ ಆಹಾರ ಧಾನ್ಯಗಳ ಕಳ್ಳಸಾಗಾಣಿಕೆ ಸಂಬಂಧದ ವಿಷಯದಲ್ಲಿ ಪೋಲೀಸಿನವರು ಮೊಕದ್ದಮೆ ಹೂಡಿರುವುದು ೧೯೬೮ರಲ್ಲಿ ೯೫೬ ಮೊಕದ್ದಮೆ ೧೯೬೯ರಲ್ಲಿ ೪೨೫ ಮೊಕದ್ದಮೆ ಇನ್ನು ಪೋಲೀಸಿನವರಿಗೆ ಗೊತ್ತಿಲ್ಲದೇ ಇರುವ ಪ್ರಕರಣಗಳು ಎಷ್ಟೋ ಇವೆ. ಆದುದರಿಂದ ಈ ಆಹಾರದ ಜೋನಲ್ ಸಿಸ್ಟಂನ್ನು ತೆಗದು ಬಿಟ್ಟರೆ ಈ ಪ್ರಕರಣಗಳನ್ನು ಹಿಡಿಯುವ ಕಾರ್ಯಕ್ರಮ ಕಡಿಮೆ ಆಗುವುದಿಲ್ಲವೇ?

SRI MANIKRAO PATIL:—Sir, generally the food policy is formulated on the guide lines given by the Government of India. Therefore, unless some specific guide lines are given to this Government we may not change our policy. As long as the existing policy is there, we are bound to maintain the check-posts.

ಶ್ರೀ ಬಿ.ಎಂ. ಇದ್ದಿನಬ್ಬ :—ಸ್ವಾಮಿ, ಮಂಗಳೂರು ಆಹಾರ ವಿಭಾಗದ ಕಳ್ಳಸಾಗಾಣಿಕೆ ಸಂಬಂಧದಲ್ಲಿ ವಶಪಡಿಸಿಕೊಂಡಂಥ ವಾಹನಗಳು ೧೯೬೮ರಲ್ಲಿ ೬ ಲಾರಿಗಳು, ೨ ಕಾರುಗಳು, ೭ ದೋಣಿಗಳು, ೧೯೬೯ರಲ್ಲಿ ೧ಲಾರಿ ೩ ಕಾರು, ೭ ದೋಣಿಗಳು, ೧ ಬಂಡಿ ಇಷ್ಟನ್ನು ಹಿಡಿದಿದ್ದಾರೆ. ಇವಕ್ಕೆ ಮುಟ್ಟುಗೋಲು ಹಾಕಿದ್ದೀರಾ ಅಥವಾ ಹಿಡಿದವರನ್ನು ಬಿಟ್ಟುಬಿಟ್ಟಿದ್ದೀರಾ ?

SRI MANIKRAO PATIL:—When smuggling takes place by means of Lorry or Truck, the vehicles are ceased and are produced before the Courts, and action is taken on the judgement of the Court.

SRI B. B. SAYANAK :—May I know the amount of fine collected during 1968 and 1969 from persons fined ?

SRI MANIKRAO PATIL :—I do not have that information at present.

SRI K. H. RANAGANATH :—The figures with regard to fine and imprisonment are given. May I know the reason for the acquittal of the other cases? Is it due to bad prosecution or bad investigation?

SRI MANIKRAO PATIL:—I do not agree that acquittals are on account of bad investigation. It is the outlook of the Court to give judgement on the merits of the case. As far as investigation is concerned, our officers are quite competent and they are taking precautionary measures.

ಶ್ರೀ ಬಿ. ಎಂ. ಇದ್ದಿನಬ್ಬ :—ಸ್ವಾಮಿ, ಆಹಾರ ಸಾಮಗ್ರಿಗಳು ಕಳ್ಳಸಾಗಾಣಿಕೆ ನೆಲಮಾರ್ಗಕ್ಕಿಂತ ಜಲಮಾರ್ಗದಲ್ಲೇ ಜಾಸ್ತಿ ಆಗುವುದು ಎಲ್ಲರಿಗೂ ಗೊತ್ತಿರುವ ವಿಷಯ: ಇದನ್ನು ಪತ್ತೆ ಹಿಡಿಯಲು ಪೋಲೀಸಿನವರಿಗೆ ಸ್ಟೀಮ ಲಾಂಚ್ ಕೊಟ್ಟಿದ್ದೀರಾ ಎಂದು ಕೇಳಿದರೆ ಇಲ್ಲ ಎಂದು ಹೇಳಿದ್ದೀರಿ. ಅವರಿಗೆ ಸ್ಟೀಮ್ ಲಾಂಚ್ ಕೊಟ್ಟರೆ ಇನ್ನೂ ಹೆಚ್ಚು ಹಿಡಿಯುವುದಕ್ಕೆ ಸಾಧ್ಯವಾಗುತ್ತದೆ. ಅಂಥಾದ್ದು ಏನಾದರೂ ಕೊಡುತ್ತೀರಾ?

SRI MANIKRAO PATIL:—We have already provided a motorboat and also a jeep and efforts are being made by the concerned officeres to prevent smuggling either by land or by sea or by any other means.

ಶ್ರೀ ಎಂ. ಕೆ. ಬೊಮ್ಮೇಗೌಡ :—ಇಷ್ಟು ಕೇಸು ನಡೆದಿರತಕ್ಕಂಥಾ ಜಾಗದಲ್ಲಿ ಆ ಭಾಗದಿಂದ ಬಂದಿರತಕ್ಕಂಥ ಮಂತ್ರಿಗಳಿಗೆ ಸಂಬಂಧಪಟ್ಟವರು ಯಾರಾದರೂ ಇದ್ದಾರೆಯೇ ?

SRI MANIKRAO PATIL :—All these cases have been detected in Mangalore Food Division There is no relation between the Minister and the cases detected.

NATIONAL RURAL WATER SUPPLY SCHEME IN VILLAGES OF HOLENARASIPUR TALUK

675. SRI H. D. DEVEGOWDA (Holenarasipur) :—

Will the Minister for Development be pleased to state:—

(*a*) whether it has come to the notice of Government that the Scheduled Caste population in Anekanambadi, Chittanaballi, Hirebelaguli and Kadabinahosaballi villages in Holenarasipur taluk being more than 50 per cent of the total population in the said villages, a representation was given to Government to sanction the NRWS in those villages by providing the full grant ;

(*b*) whether it is fact that estimates are ready and held up for want of administrative sanction ;

(*c*) whether there is any proposal to sanction the scheme this year ?

SRI P. M. NADGOUDA (Minister for Development) :—

(*a*) The percentage of population of the Scheduled Caste of the villages is indicated below.

(1)	Anekanambadi	...58 per cent
(2)	Chittanahalli	...64.2
(3)	Hirebelaguli	...45.57
(4)	Kadabinahosahalli	...39.41

Representation for full grant from Government is received in respect of No. (1) only.

(*b*) (1) Yes.

(2) And 3 Plans and estimates are awaited.

(4) Yes, held up for want of 10 per cent contribution.

(*c*) Yes.

ಶ್ರೀ ಹೆಚ್. ಡಿ. ದೇವೇಗೌಡ :— ಸ್ವಾಮಿ (ಎ) ಗೆ ಉತ್ತರವಾಗಿ ಅನುಸೂಚಿತ ಜಾತಿಗಳ ಶೇಕಡಾವಾರು ಸಂಖ್ಯೆ ಎರಡು ಗ್ರಾಮಗಳಲ್ಲಿ ೫೦ ಪರ್ಸೆಂಟ್‌ಗಿಂತ ಜಾಸ್ತಿ ಇದೆ. ಇನ್ನು ಎರಡು ಗ್ರಾಮಗಳಲ್ಲಿ ೫೦ ಪರ್ಸೆಂಟ್‌ಗಿಂತ ಕಡಿಮೆ ಇದೆ. ಇಂತಹ ಸಂದರ್ಭದಲ್ಲಿ ಗಾಂಧಿ ಸೆಂಚುರಿ ಇಯರ್‌ನಲ್ಲಿ ಸರ್ಕಾರದವರು ಒಂದು ಮಹತ್ತರವಾದ ನಿರ್ಣಯ ತೆಗೆದು ಕೊಂಡಿದ್ದಾರೆ. ಅದು ಏನೆಂದರೆ ಅನುಸೂಚಿತ ಜಾತಿಗಳು ಎಲ್ಲಿ ೫೦ ಪರ್ಸೆಂಟ್‌ಗಿಂತ ಜಾಸ್ತಿ ಇದ್ದಾರೋ ಅಂತಹ ಕಡೆಗಳಲ್ಲಿ ವಾಟರ್‌ಸಪ್ಲೈ ಅನ್ನು ಎನ್. ಆರ್. ಡಬ್ಲ್ಯೂ. ಎಸ್. ಸ್ಕೀಮ್‌ನಲ್ಲಿ ಫುಲ್‌ಗ್ರಾಂಟ್ ಕೊಡುತ್ತೇವೆ ಎಂದು ಹೇಳಿದ್ದಾರೆ. ನೀವು ೧೯೬೧ ರಲ್ಲಿ ನಡೆದ ಸೆನ್ಸಸ್ ಪ್ರಕಾರ ಆ ಹಳ್ಳಿಗಳ ಜನಸಂಖ್ಯೆ ಕೊಟ್ಟಿದ್ದೀರಿ. ಈಗ ೧೦ ವರ್ಷವಾಯಿತು. ಈಗ ಆ ಗ್ರಾಮಗಳ ಪಾಪ್ಯುಲೇಷನ್ ಜಾಸ್ತಿಯಾಗಿದೆ. ಆದುದರಿಂದ ಆ ಗ್ರಾಮಗಳ ಈಗಿನ ಪ್ರೆಸೆಂಟ್ ಪಾಪ್ಯುಲೇಷನ್ ಏನು ಇದೆ ಅದನ್ನು ತರಿಸಿಕೊಂಡು ಅಲ್ಲಿ ಫುಲ್‌ಗ್ರಾಂಟ್ ಕೊಟ್ಟು ವಾಟರ್‌ಸಪ್ಲೈ ಕೆಲಸವನ್ನು ಮಾಡುವಂತೆ ಏರ್ಪಾಡು ಮಾಡುತ್ತೀರಾ ?

SRI P. M. NADGOUDA : - It will be considered.

ಶ್ರೀ ಹೆಚ್. ಡಿ. ದೇವೇಗೌಡ :— ಉತ್ತರದಲ್ಲಿ ನಾಲ್ಕು ಸ್ಕೀಂಗಳನ್ನು ಹೇಳಿದ್ದೀರಿ. ಇದರಲ್ಲಿ ಆನೆಕನಂಬಾಡಿ ಮತ್ತು ಚಿಟ್ಟನಹಳ್ಳಿ ಇವೆರಡು ಸ್ಕೀಂಗಳನ್ನಾದರೂ ಬೇಗೆ ಮಾಡುತ್ತೀರಾ ಹೇಗೆ "

SRI P. M. NADGOUDA :— It will be done.

AREA AFFECTED BY SEEPAGE UNDER TUNGABHADRA PROJECT IN BELLARY AND RAICHUR DISTRICTS.

705. Sri THIRUMALA DEVARAYA (Gangavathy).—

Will the Chief Minister be pleased to state:—

(*a*) the area that is affected by seepage under the Tungabhadra Project in Bellary and Raichur Districts (distributary wise information be furnished);

(*b*) the steps that have been taken and proposed to be taken by Government to stop seepage ?

Sri D. Parameshwarappa (Deputy Minister for Major irrngation and Electricity) On be half of Sri VEERENDRA PATIL (Chief Minister)

(*a*) As per visual survey the total area affected by seepage under Tungabhadra Project is as follows:—

Bellary District

Under Low Level Canal ... 1,547-28 acres. *Vide* Statement 'A' appended.

Raichur District

Under Left Bank Canal ... 8,214-10 acres as per Statement 'B' appended.

Total ... 9,761-38

(*b*) (i) To investigate the genuine seepage affected lands and to prepare estimates for remedial measures, separate sub-divisions one each on right side and on left side have been formed.

(ii) Penalties as per Mysore Irrigation Act, 1965 are being imposed on ryots who indulge in unauthorised cultivation to check unauthorised irrigation which is causing seepage in certain areas.

(iii) Lining of the distributaries is proposed to be taken.

STATEMENT A

Statement showing the distributarywise area affected by seepage under Tungabhadra Project Right Bank Low Level canal.

	Distributary		Area affected by seepage		Remarks
			Inside Ayacut	Outside Ayacut	
1	2		3	4	5
1	Sanapuram Distributary	...	54.73	28.01	...
2	Muddapuram No. 1	...	117.00	18.69	...
3	D. P. No. 1	...	108.00	9.00	...
4	D. P. No. 2	...	...	...	...
5	D. P. No. 3	...	...	...	...
6	Muddapuram No. 2	...	13.00	...	...
7	D. P. No. 4	...	...	...	...
8	D. P. No. 5	...	...	...	...
9	D. P. No. 6	...	9.09	...	...
10	Sugur	...	144.83	18.31	...
11	Nadivi	...	8.63	23.28	...
12	D. P. No. 7	...	20.09	Nil	..
13	D. P. No. 9, 8 and 9	...	Nil	Nil	...
14	D. P. No. 10 and 11	...	Nil	Nil	...
15	D. P. No. 12	...	Nil	Nil	...
16	D. P. No. 13	...	68.42	7.00	...
17	D. P. No. 14	...	22.30	Nil	...
18	D. P. No. 15	...	...	...	...
19	D. P. No. 16	...	...	...	...
20	D. P. No. 17	...	15.65	Nil	...
21	D. P. No. 17 (a)	...	...	...	...
22	Muddatanur	...	70.00	...	...
23	Bagawady	...	7.00	235.37	...
24	D. P. No. 18	...	...	13.72	...
25	D. P. No. 19	...	...	15 92	...
26	D. P. No. 20	...	28.00	...	...
27	D. P. No. 21	...	18.00	8.90	...
28	D. P. No. 22	...	8.00	...	...
29	D. P No. 23	...	...	...	...
30	D. P. No. 24	...	...	...	...
31	D. P. No. 25	...	...	6.00	...
32	D. P. No. 26 and 27 inclu-ding Kuriganur-distributory	...	...	28.81	...

(Sri D. PARAMESWARAPPA)

1	2	3	4	5	6
33	D. P. No. 28	...	...	...	...
34	D. P. No. 29	...	...	...	...
35	D. P. No. 30	...	...	2.39	...
36	D. P. No. 31	...	...	1.54	...
37	D. P. No. 32	...	...	...	...
38	D. P. No. 33	...	...	...	...
39	D. P. No. 34	...	...	..	...
40	D. P. No. 36	...	...	5.75	...
41	D. P. No. 37	...	...	6.21	...
42	D. P. No 38	...	...	...	...
43	D P. No. 39	...	...	26.43	...
44	D. P. No. 40	...	...	...	...
45	D. P. No. 41	...	33.00	54.58	...
46	D. P. No. 42	...	...	...	...
47	D. P. No. 43	...	...	...	...
48	D. P. No. 58 }	...	...	...	...
49	D. P. No. 59 }	...	Nil	32.37	...
50	D. P. No. 60	...	Nil	...	...
51	K. P. No. Kotehalur Distry	...	14.39	24.93	...
52	D. P. No. 62	...	...	51.67	...
53	Hatecholli Distributary	...	3.50	20.00	...
54	D. P. No. 65	...	...	...	...
55	D. P. No. 72	...	...	38.54	...
56	D. P. No. 73	...	...	...	...
57	T. S. Distry	...	7.50	...	...
58	L. L. C. Seepage	...	...	97.92	...
			771.14	775.54	

Total 1,547.28 Acres

STATEMENT (B)

Statement showing the area affected by seepage under Tungabhadra Left Bank Canal in Raichur District.

(Miles 0 to 18)

Distributary No. 2 50 Acres

Statement showing the seepage affected lands in the Tunga bhadra Project–Left Bank Canal (Mile 19 to 141).

Sl. No.	Distry No.	Total area of seepage affected	Area investi gated	Seepage effect: Due to natural cause	Seepage effect: Due to un-authorised irrigation
1	2	3	4	5	6
		No. 2 Canal Division, Odderhatti.			
1	14	20.00	20.00	20.00	...
2	17	124.00	124.00	124.00	...
3	21	558.06	558.06	558.06	...
4	25	408.25	404.25	404.25	...
5	31	285.24	285.24	285.24	...
6	32	237.09	237.09	237.09	...
Total	...	1,629.24	1,629.24	1,629.24	...
		No. 3 Canal Division, Sindhanoor.			
*1	36	1,825.29	...	...	...
2	37	134.00	134.00	11.00	123.00
3	38	96.00	96.00	5.00	91.00
4	40	482.28	219.32	50.00	169.32
5	41	51.00	...	...	...
6	42	39.00	...	...	...
7	44	11.00	11.00	11.00	...
8	45	106.28	10.28	10.28	...
9	46	...	...	...	...
10	48	...	...	...	...
11	49	...	...	...	...
12	51	5.00	...	...	...
13	52		..	...	...
14	54	1,205.04	746.04	220.00	526.04
15	55	258.05	160.25	45.10	115.15
16	56	111.18	111.18	15.34	95.24
Total	...	4,325.32	1,489.27	368.32	1,120.35

*Note : The area is subject to verification by an Expert Committee

No. 4 Canal Division, Sirwar

(SRI D. PARAMESWARAPPA)

1	2	3	4	5	6
1	62	13.00	13.00	...	13.00
2	65	9.00	9.00	3.00	6.00
3	69	...	...	...	...
4	71A	8.00	8.00	8.00	...
5	73	...	...	...	...
6	76	173 34	173.34	...	173.34
7	78	1.30	1.30	...	1.30
8	79	7.00	7.00	...	7.00
9	82	1.33	1.33	...	1.33
10	84	3.00	3.00	...	3.00
11	85	284.31	284.31	83.15	201.16
12	89	1,397.07	1,397.07	236.07	1, 161.03
13	90	45.12	45.12	8.19	36.33
14	91	70.25	70.25	...	70.25
Total ...		2, 015.12	2,015.12	339.01	1,676.11

No. 5 Canal Division, camp; Yermarus

1	92	127.06	127.06	127.06	...
2	98	47.32	47.32	47.32	...
3	98A	14.00	14.00	14.00	...
4	99	46.00	46.00	46.00	...
5	100	8.24	8.24	8.24	...
		243.22	243.22	243.22	...

ABSTRACT

No. 2 Canal Dn	1629.24	1529.24	1629.24	...
No. 3 do	4325.32	1489.27	368.32	
No. 4 do	2015.12	2015.12	339.01	1676.11
No. 5 do	243.22	243.22	243.22	...
	8,214 10	5,378.05	2,580.39	2,797.06

SRI THIRUMALA DEVARAYA ;—I want to know whether the Government is going to localise the genuine seepage affected areas ?

SRI D. PARMESHWARAPPA ;—The Government will consider such cases.

SRI THIRUMALA DEVARAYA ;—If one goes against the crop pattern in the seepage affected area or if he leaves it fallow, in either case he is put to loss. I want to know whether Government is going to waive the penalty for going against the crop pattern in seepage affected areas ?

SRI D. PARMESHWARAPPA :—The desirability of waiving the penalties in such cases will be considered by the Government.

SRI G. AMARE GOWDA :—May I know whether water rate is being collected from these land ?

SRI D. PARMESHWARAPPA :—Yes.

SRI AMARE GOWDA :-Since how long these lands are under seepage ?

SRI D. PARMESHWARAPPA :—I do not have that information.

ಶ್ರೀ ಕೆ. ಸಂಗನಗೌಡ ;—ಸಿಂಧನೂರು ಬಳಿ ಸೀಪೇಜು ವಾಟರಿನಿಂದ ಬಹಳ ನಷ್ಟವಾಗುತ್ತಿದೆ. ಕನಿಷ್ಟ ಪಕ್ಷ ಇವನ್ನು ಹೆಚ್ ಇರಿಗೇಷನ್‌ಗೆ ಅಳವಡಿಸುವುದಕ್ಕೆ ಸಾಧ್ಯವಿಲ್ಲವೇ ?

ಶ್ರೀ ಡಿ. ಪರಮೇಶ್ವರಪ್ಪ :—ಸೀಪೇಜು ವಾಟರಿನಿಂದ ಆಗುತ್ತಿರುವ ತೊಂದರೆಗಳನ್ನು ತಪ್ಪಿಸಲು ಕೆಲವು ಪ್ರಿವೆಂಟಿವ್ ಮೆಷರುಗಳನ್ನು ತೆಗೆದುಕೊಳ್ಳುತ್ತಿದ್ದೇವೆ ಲೈನಿಂಗ್ ಆಫ್ ಕ್ಯಾನಲ್ ಹಾಗೂ ಇನ್ನು ಬೇರೆ ಬೇರೆ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಪ್ರಿವೆಂಟಿವ್ ಮೆಷರ್ಸ್‌ಗಳನ್ನು ತೆಗೆದುಕೊಂಡ ಮೇಲೂ ಕೆಲವು ಕಡೆ ಇನ್‌ಎವಿಟಬಲ್ ಆಗಿ ಸೀಪೇಜು ಆಗುತ್ತಿರುತ್ತದೆ.

ಶ್ರೀ ಎಸ್. ಎಂ. ಗುರ್ರೆಡ್ಡಿ :—ಪ್ರತಿ ವರ್ಷವೂ ಸೀಪೇಜು ಎನ್ನುವುದು ಹೆಚ್ಚಾಗುತ್ತಲೇ ಬರುತ್ತಿದೆ. ಪ್ರಿವೆಂಟಿವ್ ಮೆಷರ್ಸ್‌ಗಳನ್ನು ಸ್ವಲ್ಪ ಎಫೆಕ್ಟಿವ್ ಆಗಿ ಮಾಡಿ ಪ್ರತಿ ವರ್ಷವೂ ಹೆಚ್ಚಾಗಿ ಬರುತ್ತಿರುವ ಸೀಪೇಜು ನೀರಿನ ತೊಂದರೆಗಳನ್ನು ತಪ್ಪಿಸಲು ತಕ್ಕ ಪರಿಹಾರ ಕಾರ್ಯಕ್ರಮಗಳನ್ನು ತೀವ್ರವಾಗಿ ತೆಗೆದು ಕೊಳುತ್ತೀರಾ ಇಲ್ಲವೇ ?

ಶ್ರೀ ಡಿ. ಪರಮೇಶ್ವರಪ್ಪ :—ಇದರ ಬಗ್ಗೆ ತೀವ್ರವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ಸೀಪೇಜು ಹೆಚ್ಚಾಗಿ ಬ್ಯಾಂಕಿಂಗ್ ಮೇಲೆ ಹಾಗೂ ಮೇನ್‌ಕೆನಾಲ್ ಮತ್ತು ಡಿಸ್ಟ್ರಿಬ್ಯೂಷನ್ ಸೆಂಟರುಗಳಲ್ಲಿ ಬರುತ್ತಿದೆ. ಇಂತಹ ಕಡೆಗಳಲ್ಲಿ ಲೈನಿಂಗು ಆಫ್ ಕೆನಾಲ್ ಹಾಗೂ ಇನ್ನಿತರ ಪ್ರಿವೆಂಟಿವ್ ಮೆಷರ್ಸ್‌ಗಳನ್ನು ತೆಗೆದುಕೊಂಡು ಈಗಾಗಲೇ ಸೀಪೇಜನ್ನು ತಪ್ಪಿಸಲು ಕೆಲಸಗಳನ್ನು ಮಾಡುತ್ತಿದ್ದಾರೆ.

ಉಪಾಧ್ಯಕ್ಷರು :—ಶ್ರೀ ಅರಕೇರಿಯವರು ಪ್ರಶ್ನೆಯನ್ನು ನಂ. ೭೪೯ ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ್‌ರವರು ಕೇಳಬಹುದು.

PAY SCALES OF THE POSTS OF FIELD ASSISTANTS AND AGRICULTURAL ASSISTANTS IN AGRICULTURAL DEPARTMENT

No. 769 SRI M. H. JAYA PRAKASH NARAYAN, (Sirsi) on behalf of SRI S. S. ARAKERI (Balloli).

Will the Minister for Agriculture be pleased to state: —

(*a*) whether it is a fact that the qualifications, duties and responsibilities attached to the Agricultural Assistants and Field Assistants of the Agricultural Department are one and the same but the pay icales recommended by the Tukol Pay Commission are diffrent !

(*b*) whether it is a fact that the Inter-State Seniority list of the Agricultural Department in so for as Agricultural D partment in so far as Agriculture Assistants and Field Assistants are concerned have not yet been finalised ;

(*c*) if so, the reasons for the same ;

(*d*) whether it is a fact that promotions from the posts of Field Assistants to the posts of Agricultural Assistants after the State's reorganisation have not been made ;

(*e*) if so, the reason therefor ?

SRI B. RACHAIAH, (Minister for Agriculture).

(*a*) it is not a fact that the qualifications, duties and responsibilities attached to the Agricultural Assistants and Field Assistants of the Department of Agriculture are one and the same. It is a fact that their pay seales recommended by the Commission are differe t.

(*b*) Yes.

(*c*) Tha final Inter State Seniority list could not be published in view of the direction of the High Court of Mysore, in W.P. No. 705/65 to work out the equation of the post of Agricultural Inspectors held by the writ petitioners on the basis of the principles laid down by the Government of India. The matter is being processed in consultation with the State Advisory Committee and the Government of India.

(*d*) No.

(*e*) Does not arise.

ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ್:—ಇದರಲ್ಲಿ ನಾವು ಕೇಳಿರುವುದು ಇವರ ಕೆಲಸಗಳೇನು ಎಂದು ಇದ್ದರೂ ಇವರ ಬಗ್ಗೆ ಹೇಳಿಲ್ಲ. ಈಗಲಾದರೂ ಇದರ ವಿವರಗಳನ್ನು ಸ್ವಲ್ಪ ವಿಷದವಾಗಿ ಹೇಳುತ್ತಾರೆಯೇ ?

ಶ್ರೀ ಬಿ. ರಾಚಯ್ಯ :— ಕಾಂಪೌಂಡರಿಗೂ ಹಾಗೂ ಡಾಕ್ಟರ್‌ರವರಿಗೂ ಏನು ವ್ಯತ್ಯಾಸ ಇದೆಯೋ ಹಾಗೇ ಇದರಲ್ಲೂ ಇದೆ.

ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ್:—ಇದರ ಬಗ್ಗೆ ಯಾವ ತೀರ್ಮಾನವನ್ನೂ ಮಾಡದೇ ಇನ್ನೂ ಹಾಗೇ ಮುಂದುವರಿಸಿಕೊಂಡು ಹೋಗುತ್ತಾರೋ ಇಲ್ಲವೇ ಇದನ್ನು ಇಂತಿಷ್ಟೇ ದಿನಗಳಲ್ಲಿ ಖಚಿತವಾಗಿ ತೀರ್ಮಾನ ಮಾಡುತ್ತೇವೆ ಎನ್ನುವ ಭರವಸೆಯನ್ನೇನಾದರೂ ಕೊಡುತ್ತಾರೆಯೇ?

ಶ್ರೀ ಬಿ. ರಾಚಯ್ಯ :—ಇದರ ಬಗ್ಗೆ ತೀರ್ಮಾನ ಮಾಡಲು ಈಗಾಗಲೇ ಅಡ್ವೈಸರಿ ಕಮಿಟಿಗೆ ವಹಿಸಲಾಗಿತ್ತು. ಈ ಕಮಿಟಿಯವರು ಅವರ ಶಿಫಾರಸುಗಳನ್ನು ಈಗಾಗಲೇ ಕೇಂದ್ರ ಸರಕಾರಕ್ಕೆ ಕಳುಹಿಸಿದ್ದಾರೆ.

SRI K. H. PATIL :—Will it be possible for the State Government to finalise it early or does it deserve and interference of this House for appointing a committee to finalise the matter ?

ಶ್ರೀ ಬಿ. ರಾಚಯ್ಯ :—ಕೋರ್ಟಿನಲ್ಲಿ ಈ ಇಲಾಖೆಗೆ ಸಂಬಂಧಪಟ್ಟ ಮೂರು ಜನರು ಹೋದುದರಿಂದ ಇದು ಸ್ವಲ್ಪ ತಡವಾಯಿತು. ನಮ್ಮಿಂದ ಏನು ತಡವಾಗಿಲ್ಲ.

ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ್ :—ಉತ್ತರದಲ್ಲಿ ರಾಜ್ಯ ಸಲಹಾ ಸಮಿತಿ ಹಾಗೂ ಭಾರತ ಸರಕಾರಗಳೊಡನೆ ಸಮಾಲೋಚಿಸಿ ಈ ವಿಷಯದಲ್ಲಿ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಹೇಳಿದ್ದೀರಿ. ಎಷ್ಟು ಸಾರಿ ಇವರೊಡನೆ ಸಮಾಲೋಚನೆ ನಡೆಸಿದ್ದೀರಿ ಮತ್ತು ಇಲ್ಲಿಯವರೆಗೆ ಏನೇನು ಕಾರ್ಯಕ್ರಮಗಳನ್ನು ಇದರಲ್ಲಿ ತೆಗೆದುಕೊಂಡಿದ್ದೀರಿ?

ಶ್ರೀ ಬಿ. ರಾಚಯ್ಯ :—ಸಮಾಲೋಚನೆ ಅನೇಕ ಸಾರಿ ಮಾಡಿ ಅವರೊಡನೆ ತೀರ್ಮಾನಗಳನ್ನ ಮಾಡುವುದರಲ್ಲಿದ್ದಾಗ ಹೈ ಕೋರ್ಟಿನಿಂದ ಕೆಲವರು ಸ್ಟೇ ಆರ್ಡರು ತಂದರು ಮತ್ತು ಹೈ ಕೋರ್ಟಿನವರು ಸರಕಾರಕ್ಕೆ ಒಂದು ಡೈರೆಕ್ಷನ್ ಕೂಡ ಕೊಟ್ಟರು. ಇದರಂತೆ ರಿಟ್ ಪಿಟಿಷನರ್ ಅವರ ಜಾಗವನ್ನು ಸರಿಯಾಗಿ ಮಾಡಿ ಕೊಡತಕ್ಕದ್ದು ಎಂದು ಹೇಳಿದುದರಿಂದ ಸ್ವಲ್ಪ ತಡವಾಗಿದೆ.

DOWNWARD TREND OF PADDY AND SUGARCANE

771. SRI L. SRIKANTAIAH, (Nanjangud) :—Will the Minister of State for Food and Civil Supplies be pleased to state :—

(a) whether the Government is aware that the price of paddy has registered a downward trend and often the price level in respect of paddy is much below the rate fixed by the Government ;

(b) the steps taken by the Government to arrest there trends and in any event not below the price fixed by the Government ?

SRI B. VITHALDAS SETTY, (Minister of State for Food and Civil Supplies).

(a) There is some downward trend in the price of paddy but the price of good quality paddy has not gone below the procurement price.

(Sri B. VITTALADAS SETTY)

(*b*) Government have decided to purchase whatever quantities of paddy offered by the growers at the following purchase price :—

Paddy fine	Rs. 57	per qtl.
Paddy midfine	Rs. 54	do
Paddy medium	Rs. 51	do
Paddy coarse	Rs. 50	do

ಶ್ರೀ ಎಲ್. ಶ್ರೀಕಂಠಯ್ಯ :—ಮಾರ್ಕೆಟ್ಟು ರೇಟು ತಾವು ನಿಗದಿ ಮಾಡಿರುವುದಕ್ಕಿಂತ ಕಡಿಮೆಯಾಗುತ್ತಾ ಬಂದಿರುವುದರಿಂದ ಸರಕಾರೀ ರೇಟಿನಂತೆ ಲೆವಿ ಮೂಲಕ ವಸೂಲಾ ಮಾಡುತ್ತಿರುವುದನ್ನು ರದ್ದು ಮಾಡಲು ತಕ್ಕ ಕ್ರಮಗಳನ್ನು ತೆಗೆದಕೊಳ್ಳಬಹುದಲ್ಲವೇ ?

† ಶ್ರೀ ಬಿ. ವಿಠಲದಾಸ ಶೆಟ್ಟಿ : ಈ ವಿಚಾರದಲ್ಲಿ ಸರಕಾರ ತೀವ್ರವಾಗಿ ಪರಿಶೀಲಿಸುತ್ತಿದೆ.

Sri B. B. SAYANAK :—In view of the fact that there is downward trend in the prices of paddy, will the Government purchase the paddy in the open market as they have assured to purchase the same on the floor of this House ?

SRI B. VITTALDAS SHETTY:—The Government is prepared to purchase the paddy, not from the open market, but only from the agriculturists for the support price.

PAY SCALES OF THE POSTS OF PHYSICAL EDUCATION TEACHERS

782. SRI P. V. AITHALA (Suratkal).—

Will the Minister for Education be pleased to state:—

(*a*) the reason for not implementing the higher pay scale to the Physical Education Teachers of other integrated areas as directed by the Mysore High Court Judgment in writ pettion No. 1351/1966;

(*b*) the pay scale of Physical education teachers of of the State in the Tukol Pay Commission Report ?

SRI C. K. RAJAIAH SHETTY:—At least in the 4th plan we should have a phased programme to get meterials and nobody should suffer for want of materials to get power connection.

Another thing is regarding the book value of materials. At the time when the Electricity Board was formed, from the figures supplied it is seen that Rs. 36 crores was the capital value of assets transferred. At that time copper wire was costing Rs. 2 to 3 per K.G., but now the cost of copper wire is about Rs. 30 per K G. If you assess everything in terms of the book value, it will make a lot of difference because the market value of those commodities has now gone up very high and the book value may not reflect the real position of the Board at the time. So I suggest that the book value of these things should be re-calculated once in a period of at least five years on the basis of the real market value. This is very essential in the case of copper wires because of the high cost of copper wires and the scarcity of copper, copper wires are sought to be replaced by aluminium wires. We also do not know what quantity of copper wires has been already replaced by aluminium wires and how much of copper wires has been sold by the Board. It is necessary that we should be supplied with this information.

Then, Sir, in village electrification there is a major defect. Some people are given connections, but at the same time they do not fix meters. In certain villages where meters are not there, every family has to pay about Rs 40 to Rs. 60. They have got a peculiar method of assessing. They take into account the current consumed by a particular lamp of particular watt and if a villager has 8 or 10 lamps in his house for all of them he is charged on the same basis and sometimes it comes to Rs. 40 to 60. This charge is not made on the basis of the actual consumption made by him because there is no meter fixed. This is really unfortunate. There are several instances where villagers have had to pay Rs. 50 to Rs. 60 for 8 to 10 bulbs. If this is the case I wonder how the poor villagers will be able to pay such high charges. I always discourage connections without fixing electrical meters. Therefore, such connections should be immediately metered.

As regards calling for tenders from manufacturers, I differ from the Hon. Member Sri Siddaveerappa. He advocates calling for tenders by advertisement in newspapers. I personally feel that the present system adopted by the present Chairman of calling tenders direct from registered manufacturers is very good and it is a right step in the right direction. There are many bogus companies who do not manufacture anything. Some bogus companies send in tenders in 3 or 4 bogus names and when the contract is given to them, they are not in a position to supply the quality goods according to schedule. It is, therefore, only correct that tenders should be invited direct from the manufacturers. I cannot understand why middlemen should step in. By putting in bogus tenders in different names, if they manage to get

(Sri C. K, RAJAIAH SETTY)

the contract, they will supply so long as the prices for the same goods in the market is lower, but the moment the market value goes higher than the tendered rate, they fail to supply. Therefore, these middlemen should never be encouraged. So far as the Electricity Board are concerned, the NGEF and the Porcelain Factory are the main suppliers and for steel sections they can draw from MISL. Secondly these are controlled commodities which they can get from these Factories at fixed prices. So instead of calling for tenders through advertisement in newspapers when bogus companies are also free to fill in tenders, the best method would be to invite tenders only from registered manufacturers. In such a case the Board also will be able to go and find out whether the tenderer is in a position to supply the goods and whether he has got sufficient installed capacity to produce the goods, etc. This will ensure regular supplies for the Board from genuine manufacturers. So I submit that the present method should not be discontinued.

Regarding the programme of raising Rs. 21 crores called out by the Board, I would only say that all the funds allotted for purchase of materials should not be allowed to lapse for want of adequate supplies and that adequate funds should be placed at the disposal of Electricity Board and at no time should the Board be made to suffer for want of money. Unless the Government gives financial assistance, I am sure the Board will not be in a position to function well keeping in view the 4th plan.

With these few remarks I close my speech.

†ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು):—ಸನ್ಮಾನ್ಯ ಅಧ್ಯಕ್ಷರೇ, ಕೆಲವು ಮಾನ್ಯ ಸದಸ್ಯರು ಎಲೆಕ್ಟ್ರಿಸಿಟಿ ಬೋರ್ಡಿನ ಫೈನಾನ್ಷಿಯಲ್ ಸ್ಟೇಟ್‌ಮೆಂಟ್ ಏನು ನಮ್ಮ ಮುಂದಿದೆ, ಚರ್ಚೆಯಾಗಿದೆ, ಅದರ ಬಗ್ಗೆ ತಮ್ಮ ವಿಚಾರಗಳನ್ನು ವ್ಯಕ್ತಮಾಡಿದ್ದಾರೆ. ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ ಮತ್ತು ಟೀಕೆಗಳನ್ನು ಕೂಡ ಮಾಡಿದ್ದಾರೆ. ಮೊನ್ನೆ ಈ ಬಗ್ಗೆ ಚರ್ಚೆ ನಡೆದಾಗ ನನ್ನ ಸ್ನೇಹಿತರಾದ ಪುಟ್ಟಸ್ವಾಮಿಯವರು ಅದಕ್ಕೆ ಜವಾಬು ಕೊಟ್ಟಿದ್ದಾರೆ. ಬಹುಶಃ ಟೀಕೆಗೆ ಬಹಳಮಟ್ಟಿಗೆ ನಾನಾಗಲೀ ಅಥವಾ ಇಲಾಖೆಯಾಗಲಿ ಕಾರಣವಲ್ಲ ಎನಿಸುತ್ತದೆ. ಈ ವಿದ್ಯುಚ್ಛಕ್ತಿ ಬೋರ್ಡಿನ ಕಾರ್ಯವ್ಯಾಪ್ತಿ ದಿನೇ ದಿನೇ ಬಹಳ ಮಟ್ಟಿಗೆ ಹೆಚ್ಚುತ್ತಿದೆ. ಏಕೆಂದರೆ ನಾವು ಈಗ ಹೇರಳವಾಗಿ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡುತ್ತಿದ್ದೇವೆ. ಅದರ ಬಳಕೆ ನಮ್ಮ ರಾಜ್ಯದಲ್ಲಿ ಹೆಚ್ಚಾಗಬೇಕು ಎಂಬ ಕುತೂಹಲ ಸ್ವಾಭಾವಿಕವಾಗಿ ವಿದ್ಯುಚ್ಛಕ್ತಿ ಬೋರ್ಡಿಗೂ ಮತ್ತು ನಮಗೂ ಇದೆ. ಇಂದು ವಿದ್ಯುಚ್ಛಕ್ತಿ ಹೆಚ್ಚು ಬಳಕೆಯಾಗುತ್ತಿದೆ, ದೊಡ್ಡ ದೊಡ್ಡ ಕೈಗಾರಿಕೆಗಳು, ಕಾರ್ಖಾನೆಗಳು ಹೆಚ್ಚು ವಿದ್ಯುಚ್ಛಕ್ತಿಯನ್ನು ಬಳಸಲು ಹೆಚ್ಚಿನ ಮಟ್ಟದಲ್ಲಿ ಇಲ್ಲಿಗೆ ಬರಬೇಕಾಗಿತ್ತು. ಅದೇ ರೀತಿಯಿಂದ ಮಧ್ಯಮ ಪ್ರಮಾಣದ ಮತ್ತು ಸಣ್ಣ ಪ್ರಮಾಣದ ಕಾರ್ಖಾನೆಗಳು ವಿಶೇಷವಾಗಿ ನಮ್ಮ ದೇಶದಲ್ಲಿ ವಿದ್ಯುಚ್ಛಕ್ತಿಯನ್ನು ಹೆಚ್ಚು ಬಳಸಲು ಸ್ಥಾಪನೆಯಾಗಬೇಕಾದ ಅವಶ್ಯಕತೆ ಇದೆ. ಇದು ಮಾನ್ಯ ಸದಸ್ಯರಿಗೂ ಗೊತ್ತಿದೆ. ಕಳೆದ ಎರಡು ಮೂರು ವರ್ಷಗಳಿಂದ ವಿದ್ಯುಚ್ಛಕ್ತಿಯನ್ನು ನಾವು ಹಳ್ಳಿಗಳಿಗೆ ಹೆಚ್ಚು ಪ್ರಮಾಣದಲ್ಲಿ ತೆಗೆದುಕೊಂಡು ಹೋಗುತ್ತಿದೇವೆ; ಈಗಲೂ ಅದನ್ನು ಮುಂದುವರೆಸಿ ಸಾಕಾದಷ್ಟು ಒದಗಿಸುತ್ತಿದ್ದೇವೆ.

2-30 P.M.

ಹಳ್ಳಿಗಳಿಗೆ ಕೂಡ ವಿದ್ಯುಚ್ಛಕ್ತಿ ಒದಗಿಸಬೇಕು ಎನ್ನುವಂಥ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದೇವೆ. ಮಾನ್ಯ ಸದಸ್ಯರಿಗೆ ಗೊತ್ತಿದ್ದಹಾಗೆ ೧೯೭೦—೭೧ನೇ ಇಸವಿಯಲ್ಲಿ ಸುಮಾರು ೭೦೦ ಹಳ್ಳಿಗಳಿಗೆ ಮತ್ತು

೩೦ ಸಾವಿರ ಐ.ಪಿ. ಸೆಟ್‌ಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಬೇಕು ಎನ್ನುವ ಕಾರ್ಯಕ್ರಮವನ್ನು ಇಟ್ಟು ಕೊಂಡಿದ್ದೇವೆ. ಹೋದ ಸಲ ಇಷ್ಟೊಂದು ದೊಡ್ಡ ಪ್ರಮಾಣದ ಕಾರ್ಯಕ್ರಮವಿರಲಿಲ್ಲ. ಆದರೂ ಹೆಚ್ಚಿನ ಪ್ರಮಾಣದಲ್ಲಿ ವಿದ್ಯುಚ್ಛಕ್ತಿಯನ್ನು ಒದಗಿಸಬೇಕು ಎಂದು ನಾನು ಒತ್ತಾಯ ಮಾಡಿ ೩೦ ಸಾವಿರ ಪಂಪ್ ಸೆಟ್‌ಗಳಿಗಾದರೂ ವಿದ್ಯುಚ್ಛಕ್ತಿಯನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡಿದೆ. ಚೇರ್‌ಮನ್ ಮತ್ತು ಅವರ ಸಂಗಡಿಗರಿಗೆ ಹೇಳಿದಾಗ ಅವರು ಒಂದು ರೀತಿಯ ಸಂಶಯ ಪಟ್ಟುಕೊಂಡರು. ಆವಾಗ ಪರಿಸ್ಥಿತಿ ಏನಾಗಿತ್ತು ಎಂದರೆ ಹಳ್ಳಿಗಳಿಗೆ ಮತ್ತು ಪಂಪ್‌ಸೆಟ್‌ಗಳಿಗೆ ಒದಗಿಸುವುದಕ್ಕೆ ನಮ್ಮ ಹತ್ತಿರ ಹಣವಿದ್ದರೂ ಅಥವಾ ಹಣವನ್ನು ಎಲ್ಲಿಂದಲಾದರೂ ಇರುವಂಥ ಪರಿಸ್ಥಿತಿ ಇದ್ದರೂ-ಎಂ. ಎಸ್. ರಾಡ್ಸ್‌ಗೆ ಅಭಾವ ಬಹಳ ಮಟ್ಟಿಗೆ ಬಂದೊದಗಿತ್ತು. ಆದರಿಂದ ನಾನು ೩೦ ಸಾವಿರ ಪಂಪ್‌ಸೆಟ ಗಳಿಗೆ ಸರ್ವಿಸ್ ಮಾಡಬೇಕು ಎಂದು ಹೇಳಿದರೂ ಇಷ್ಟರವರೆಗೂ ಮಾಡುವುದಕ್ಕಾಗಿಲ್ಲ. ೧೮ ಸಾವಿರ ಪಂಪ್‌ಸೆಟ್‌ಗಳಿಗೆ ಮಾರ್ಚಿ ೩೧ ರೊಳಗಾಗಿ ಸರ್ವಿಸ್ ಮಾಡಿರಬಹುದು ಎಂದೆನ್ನಿಸುತ್ತದೆ. ನಮ್ಮ ಉದ್ದೇಶ, ಸಾಕಷ್ಟು ಪ್ರಮಾಣದಲ್ಲಿ ಮೆಟೀರಿಯಲ್ ದೊರೆತರೆ ಬಹುಶಃ ಇನ್ನು ಹೆಚ್ಚಿನ ಪ್ರಮಾಣದಲ್ಲಿ ವಿದ್ಯುಚ್ಛಕ್ತಿಯನ್ನು ಹಳ್ಳಿಗಳಿಗೆ ತೆಗೆದುಕೊಂಡು ಹೋಗಬಹುದು ಮತ್ತು ಹಳ್ಳಿಗಾಡಿನ ಬಾವಿಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ವಿದ್ಯುಚ್ಛಕ್ತಿಯನ್ನು ಒದಗಿಸಬಹುದು ಎನ್ನುವ ವಿಚಾರ ನಮಗೂ ಆಗಿದೆ. ಅನೇಕ ವರ್ಷಗಳಿಂದ ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಹೆಚ್ಚಿನ ಪ್ರಮಾಣದಲ್ಲಿ ಕೊಡುತ್ತಿದ್ದೇವೆಎಂದು ಮಾನ್ಯ ಸದಸ್ಯರಿಗೆಗೊತ್ತಿರಬಹುದು. ಹಳ್ಳಿಯವರು ವಿದ್ಯುಚ್ಛಕ್ತಿ ಬೇಡುತ್ತಾರೆ ಮತ್ತು ಪಂಪ್‌ಸೆಟ್ ಇಟ್ಟುಕೊಳ್ಳುವವರು ಪಂಪ್‌ಸೆಟ್‌ಗೆ ವಿದ್ಯುಚ್ಛಕ್ತಿ ಕೊಡಬೇಕೆಂದು ಕೇಳುತ್ತಾರೆ. ಈಗ ಎಕ್ಸ್‌ಟೆನ್‌ಷನ್ ಪ್ರೋಗ್ರಾಂ ಹೆಚ್ಚಾಗುತ್ತಿದೆ; ಇಂಪ್ರೂವ್‌ಮೆಂಟ್, ಕನ್‌ಸಾಲಿಡೇಷನ್ ಅಷ್ಟೊಂದು ಹೆಚ್ಚಾಗುತ್ತಿಲ್ಲ ಎಂದು ನನಗನ್ನಿಸುತ್ತದೆ. ನಾನು ಚೇರ್‌ಮನ್ ಅವರಿಗೆ ಮತ್ತು ಚೀಫ್ ಇಂಜಿನಿಯರಿಗೆ ಅನೇಕ ಸಾರಿ ಹೇಳಿದ್ದೇನೆ. ಕನ್‌ಸಾಲಿಡೇಷನ್ ಆಗದೆ ಇರುವುದರಿಂದ ಇಂಟರಪ್‌ಷನ್ಸ್ ಆಗಿ, ವೋಲ್ಟೇಜ್ ಡ್ರಾಪ್ ಆಗುತ್ತ, ಸರಿಯಾಗಿ ನಡೆಯಲಾರದ ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆ. ಈಗ ಎಕ್ಸ್‌ಟೆನ್‌ಷನ್ ಹೆಚ್ಚಾಗುತ್ತಿದೆ. ಎಕ್ಸ್‌ಟೆನ್‌ಷನ್ ಹೆಚ್ಚಾದಂತೆ ಲೈನ್ಸ್ ಎಳೆಯಬೇಕಾಗುತ್ತದೆ, ಟ್ರಾನ್ಸ್‌ಫಾರ್ಮರ್ ಬದಲಾಯಿಸಬೇಕಾಗುತ್ತದೆ, ಕಂಟ್ರೋಲ್ ಪ್ಯಾನೆಲ್ ಬದಲಾಯಿಸ ಬೇಕಾಗುತ್ತದೆ. ಹಾಗೇಯೇ ಇಂಪ್ರೂವ್ ಮಾಡಬೇಕಾದ, ಕನ್‌ಸಾ-ಲಿಡೇಷನ್ ಮಾಡಬೇಕಾದ ಅವಶ್ಯಕತೆ ಬಹಳವಿದೆ. ಎಲೆಕ್ಟ್ರಿಸಿಟಿ ಬೋರ್ಡ್ ಚೇರ್‌ಮನ್ ಅವರು ಪ್ಲಾನಿಂಗ್ ಕಮಿಷನ್ ಜೊತೆಯಲ್ಲಿ ಚರ್ಚೆಮಾಡಿ ನಾಲ್ಕನೆಯ ಯೋಜನೆಯಲ್ಲಿ ಎಕ್ಸ್‌ಟೆನ್‌ಷನ್ ಮತ್ತು ಕನ್‌ಸಾಲಿಡೇಷನ್ ಸಲುವಾಗಿ ಸುಮಾರು ೧೨–೧೩ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲು ಮಂಜೂರಾತಿ ಪಡೆದಿದ್ದಾರೆ, ಎಕ್ಸ್‌ಟೆನ್‌ಷನ್ ಆಗುವುದರ ಜೊತೆಯಲ್ಲಿ ಕನ್‌ಸಾಲಿಡೇಷನ್ ಮತ್ತು ಇಂಪ್ರೂವ್‌ಮೆಂಟ್ ಕೆಲಸಗಳನ್ನೂ ತೀವ್ರಗತಿಯಿಂದ ತೆಗೆದುಕೊಳ್ಳಬೇಕೆಂದು ನಾನು ಬೋರ್ಡಿನವರಿಗೆ ಹೇಳಿದ್ದೇನೆ. ಆ ರೀತಿತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದಾರೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಸಿದ್ಧವೀರಪ್ಪನವರು ಕೆಲವು ವಿಚಾರಗಳನ್ನು ಪದೇ ಪದೇ ಹೇಳಿದ್ದಾರೆ. ಪರ್ಚೇಸ್ ಪದ್ಧತಿ ಬಗ್ಗೆ ಅವರು ಬಹಳ ತೀವ್ರವಾಗಿ ಟೀಕೆ ಮಾಡಿದ್ದಾರೆ. ಇವರಲ್ಲಿ ಟೆಂಡರ್ ಕರೆದು ಆರ್ಡರ್ ಕೊಡುವುದಿಲ್ಲ ಎಂದು ಮುಂತಾಗಿ ಹೇಳಿದ್ದಾರೆ. ಈಗಿರುವ ಚೇರ್‌ಮನ್ ಅವರು ಏನು ಪದ್ಧತಿ ಹೊಸದಾಗಿ ಮಾಡಿದ್ದಾರೆ. ಇದು ಬಹುಶಃ ಒಳ್ಳೆಯ ಪದ್ಧತಿ ಎಂದು ನನಗನ್ನಿಸುತ್ತದೆ. ಇದು ನೇರವಾಗಿ ತಯಾರಕರಿಂದ ತೆಗೆದುಕೊಳ್ಳುವ ಪದ್ಧತಿ. ತಯಾರಕರು ಯಾರಿದ್ದಾರೆ, ಅವರು ಎಲೆಕ್ಟ್ರಿಸಿಟಿ ಬೋರ್ಡಿನಲ್ಲಿ ತಮ್ಮ ಹೆಸರನ್ನು ರಿಜಿಸ್ಟರ್ ಮಾಡುತ್ತಾರೆ. ಯಾರು ರಿಜಿಸ್ಟರ್ ಮಾಡಿರುತ್ತಾರೆ ಅವರಿಂದ ಕೊಟೇಷನ್ಸ್ ತರಿಸಿಕೊಂಡು ಅದರಲ್ಲಿ ಯಾವುದು ಯೋಗ್ಯ ಎಂದು ತಿಳಿದುಕೊಂಡು ಪರ್ಚೇಸ್ ಕಮಿಟಿಯಲ್ಲಿ ಇಟ್ಟು ತೀರ್ಮಾನ ಮಾಡುತ್ತಾರೆ. ತಮ್ಮ ಮನಸ್ಸು ಬಂದಂತೆ ಮಾಡುತ್ತಿಲ್ಲ ಮತ್ತು ಈ ಹೊಸ ಪದ್ಧತಿ ಏನಿದೆ ಇಂಥ ಪದ್ಧತಿಯನ್ನು ದೊಡ್ಡ ದೊಡ್ಡ ಫರ್ಮ್‌ಗಳಲ್ಲಿ ಅನುಸರಿಸುತ್ತಿದ್ದಾರೆ. ಇಂಥ ಪದ್ಧತಿಯನ್ನು ಎಲೆಕ್ಟ್ರಿಸಿಟಿ ಬೋರ್ಡಿನಲ್ಲಿಯೂ ಅನುಸರಿಸುತ್ತಿದ್ದಾರೆ. ಯಾವಾಗ ಕೊಟೇಷನ್ಸ್ ಕರೆಯಬೇಕಾಗುತ್ತದೆ, ಆಗ ತಮಗೆ ಬೇಕಾದವರು ಕೆಲವರಿಂದ ಕೊಟೇಷನ್ ಕರೆಯುತ್ತಿಲ್ಲ. ಒಂದೊಂದುಸಲ ನೂರಿನ್ನೂರು ಜನ ಮ್ಯಾನ್ಯು-ಫಾಕ್ಚರರ್ಸ್ ಇದ್ದರೆ ಎಲ್ಲರಿಂದಲೂ ಕೊಟೇಷನ್‌ಗಳನ್ನು ಕರೆದು ಯಾರದು ಕಡಿಮೆ ಇರುತ್ತದೆ, ಯಾವುದು ಒಳ್ಳೆಯದು ಎಂದು ತಿಳಿದುಕೊಂಡು ತೀರ್ಮಾನ ಮಾಡುತ್ತಾರೆ. ಇದು ಒಳ್ಳೆಯ ಪದ್ಧತಿ. ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟಿನಲ್ಲಿ ಕಂಟ್ರಾಕ್ಟರರುಗಳಲ್ಲಿ ಯಾರಿಗೆ ಅನುಭವವಿದೆ, ಯಾರಿಗೆ ಯೋಗ್ಯತೆ ಇದೆ, ಯಾರದು ಆರ್ಗನೈಜೇಷನ್ ಇದೆ ಹೀಗೆ ಎಲ್ಲ ವಿಚಾರಗಳನ್ನೂ ಪರಿಶೀಲಿಸಿ ರಿಜಿಸ್ಟರ್ ಮಾಡುತ್ತಾರೆ ಮತ್ತು ರಿಜಿಸ್ಟರ್ ಮಾಡಿದವರು ಮಾತ್ರ ಟೆಂಡರ್ ಹಾಕುತ್ತಾರೆ. ಅದೇ ರೀತಿ ಇಲ್ಲಿಯೂ ಕೂಡ ಕೊಟೇಷನ್‌ಗಳನ್ನು ಕರೆಯುವಾಗ ಯಾರು ಜೆನುಯಿನ್ ಮ್ಯಾನ್ಯುಫಾಕ್ಚರರ್ಸ್ ಇದ್ದಾರೆ ಅವರಿಂದ ಮಾತ್ರ ಕೊಟೇಷನ್ ಕರೆಯುತ್ತಾರೆ. ಆದರಿಂದ ಇದರೊಳಗೆ ಯಾವ ತರಹ ಸ್ಕ್ಯಾಂಡಲ್ ಇಲ್ಲ, ಇದರಲ್ಲಿ ಯಾರ ಕೈವಾಡವೂ ಇಲ್ಲ. ಎನ್ನುವುದು ಸ್ಪಷ್ಟವಾಗುತ್ತದೆ. ಬಹಳ ಕಡಮೆ ಅವಧಿಯಲ್ಲಿ ಬೇಕಾದಷ್ಟು ಸಾಮಾನುಗಳನ್ನು

(ಶ್ರೀ ವೀರೇಂದ್ರ ಪಾಟೀಲ್)

ತರಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಅನೇಕ ಸಲ ಟೆಂಡರ್ ಕರೆದಾಗ ಒಬ್ಬರೇ ಎರಡು ಮೂರು ಹೆಸರಿನಲ್ಲಿ ಟೆಂಡರ್ ಹಾಕುತ್ತಾರೆ. ಲೋಯೆಸ್ಟ್ ಟೆಂಡರ್ ಹಾಕಿ ಆನಂತರ ಬೆಲೆಗಳು ಹೆಚ್ಚಾದರೆ, ಅದರಿಂದ ತಪ್ಪಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾರೆ. ಡಿಪಾಜಿಟ್ ಹೋದರೆ ಹೋಯಿತು ಎನ್ನುತ್ತಾರೆ. ಅಂಥ ಸಂದರ್ಭಗಳಲ್ಲೂ ಬಹಳ ತೊಂದರೆಯಾಗುತ್ತದೆ, ಇಂಥದನ್ನೆಲ್ಲ ನಿವಾರಣ ಮಾಡುವುದಕ್ಕೆ ಒಂದು ಒಳ್ಳೆಯ ಪರ್ಚೇಸಿಂಗ್ ಸಿಸ್ಟಂ ಮಾಡಿದ್ದಾರೆ ಎಂದು ನನಗನ್ನಿಸುತ್ತದೆ. ನಾನು ಇದರ ಬಗ್ಗೆ ಸ್ವಲ್ಪ ವಿಚಾರ ಮಾಡಿದೆ. ಇದರಲ್ಲಿ ಏನಾದರೂ ತಪ್ಪುಗಳಿವೆಯೋ ಎಂದು ನೋಡಿದೆ. ಇದರಲ್ಲಿ ತಪ್ಪುಗಳಿಲ್ಲ. ಈ ಹೊಸ ಪದ್ಧತಿಯಿಂದ ನಮಗೆ ಬೇಕಾಗಿರುವಂಥ ಮೆಟೀರಿಯಲ್ ತೀವ್ರಗತಿಯಿಂದ ಆದಷ್ಟು ಜಾಗ್ರತೆ ತರಿಸಿಕೊಳ್ಳುವುದಕ್ಕೆ ಅನುಕೂಲತೆಯಾಗಿದೆ ಮತ್ತು ಇದರಿಂದ ಯಾರು ಯಾರು ಮಿಡಲ್ ಮೆನ್ ವ್ಯವಹಾರ ಮಾಡುತ್ತಾರೆ, ಏನಾದರೂ ಗಳಿಸಿಕೊಳ್ಳಲು ದುರ್ವ್ಯವಹಾರ ಮಾಡುತ್ತಾರೆ ಅಂಥದಕ್ಕೆ ಅವಕಾಶ ವಿರುವುದಿಲ್ಲ ಎನ್ನುವ ಮಾತನ್ನು ಹೇಳುತ್ತೇನೆ.

ಕನ್‌ಸಾಲಿಡೇಟೆಡ್ ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ಮೋಸ ಮಾಡುತ್ತಿದ್ದಾರೆ ಎನ್ನುವ ವಿಚಾರವನ್ನು ಹೇಳಿದ್ದಾರೆ. ಅದನ್ನು ನಾನು ತರಿಸಿ ನೋಡಿದೆ. ಆ ರೀತಿಯಿಂದವಿನೂ ಇಲ್ಲ. ಅಲ್ಲಿರುವಂಥ ಪ್ರಶ್ನೆ ಯಾವುದೋ ಸ್ಟ್ರೀಟ್ ಲೈಟ್ ಫಿಟಿಂಗ್ಸ್ ಪರ್ಚೇಸ್ ಮಾಡಿದ್ದು. ಅದರ ಕಿಮ್ಮತ್ತು ಕೂಡ ಒಂದು ಲಕ್ಷ ೭೦ ಸಾವಿರ ರೂಪಾಯಿ. ಕನ್‌ಸಾಲಿಡೇಟೆಡ್ ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ಅವರು ಸ್ಥಳೀಯ ಉದ್ದಿಮೆಗಾರರು ನಮ್ಮವರು. ಇನ್ನೊಬ್ಬರು ಕಲ್ಕತ್ತದ ಅಸೋಸಿಯೇಟೆಡ್ ಎಲೆಕ್ಟ್ರಿಕಲ್ ಇಂಜಿನಿಯರ್ಸ್ ಎನ್ನುವವರೂ ಕೊಟೇಷನ್ಸ್ ಹಾಕಿದ್ದರೆಂದು ಕಾಣುತ್ತದೆ. ನಮ್ಮವರಾದ ಕನ್‌ಸಾಲಿಡೇಟೆಡ್ ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ಅವರು ಸ್ಟ್ಯಾಂಡರ್ಡ್ ಮೆಟೀರಿಯಲ್ ತಯಾರು ಮಾಡುತ್ತಾರೆ ಎನ್ನುವಂಥ ಅನುಭವ ನಮ್ಮ ಇಂಜಿನಿಯರುಗಳಿಗೆ ಇದೆ. ಆದರಿಂದ ಚೀಫ್ ಇಂಜಿನಿಯರು ಅವರಿಗೆ ಕೊಡಬಹುದೆಂದು ಸಿಫಾರಸು ಮಾಡಿದರು. ಆದೂ ಕೂಡ ಕಲ್ಕತ್ತದವರು ಯಾವ ರೇಟ್ ಹಾಕಿದ್ದರೋ ಆ ರೇಟಿಗೆ ಇಳಿಸಿ ಇವರಿಗೆ ಕೊಟ್ಟಿದ್ದಾರೆ. ಇದರಲ್ಲಿ ಯಾವುದೇ ಮೋಸಮಾಡುವಂಥ ಪ್ರಯತ್ನ ಆಗಿಲ್ಲ.

ಕೆಲವು ಮಾನ್ಯ ಸದಸ್ಯರು ಚೇರ್‌ಮನ್ ಅವರ ಮೇಲೆ ದೂರುಗಳನ್ನು ಹೇಳಿದ್ದಾರೆ. ನನಗೆ ಗೊತ್ತಿದ್ದಹಾಗೆ ಚೇರ್‌ಮನ್ ಅವರು ಯಾವ ವ್ಯವಹಾರವನ್ನೂ ಮಾಡಿಲ್ಲ. ಪರ್ಚೇಸ್ ಮಾಡುವಾಗ ಪ್ರೊಸೀಜರ್ ಪ್ರಕಾರ, ಎಲ್ಲಿ ಚೀಫ್ ಇಂಜಿನಿಯರ್ ಅವರ ಸಿಫಾರಸು ತರಿಸಿಕೊಂಡು ಮಾಡಬೇಕೊ ಅಲ್ಲಿ ಆ ಪ್ರಕಾರ ಮಾಡಿದ್ದಾರೆ, ಎಲ್ಲಿ ಸ್ಟೋರ್ಸ್ ಪರ್ಚೇಸ್ ಕಮಿಟಿ ಮೂಲಕ ತರಿಸಬೇಕೋ ಅಲ್ಲಿ ಆ ಪ್ರಕಾರ ಮಾಡುತ್ತಿದ್ದಾರೆಯೆಹೊರತು ತಮ್ಮ ಮನಸ್ಸಿಗೆ ಬಂದಂತೆ ಪರ್ಚೇಸ್ ಮಾಡುತ್ತಿಲ್ಲ ಎನ್ನುವಂಥ ಮಾತನ್ನು ಹೇಳುತ್ತೇನೆ.

ಇನ್ನೊಂದು ಟೀಕೆ ಬಂದಿದೆ. ಏನೆಂದರೆ ಬಹಳ ಮಟ್ಟಿಗೆ ಪರ್ಚೇಸ್ ಮಾಡುತ್ತಾರೆ, ಲೆಕ್ಕ ತಪ್ಪಿ ಮಾಡುತ್ತಿದ್ದಾರೆ, ಏಳೆಂಟು ಕೋಟಿ ರೂಪಾಯಿನಷ್ಟು ಪರ್ಚೇಸ್ ಮಾಡಿದ್ದಾರೆ ಎಂದು ಹೇಳಿದ್ದಾರೆ. ಮಾನ್ಯ ಸದಸ್ಯರಿಗೆ ಗೊತ್ತಿರಬಹುದು, ಕನ್‌ಸಾಲಿಡೇಷನ್ ಮಾಡಬೇಕು ಎಂದರೆ ಸಾಕಷ್ಟು ಮೆಟೀರಿಯಲ್ ಸಂಗ್ರಹ ಮಾಡಿಕೊಳ್ಳಬೇಕಾಗುತ್ತದೆ. ಎಕ್ಸ್‌ಟೆನ್‌ಷನ್ ಪ್ರೋಗ್ರಾಂ ಪ್ರಕಾರ ೧೯೭೦-೭೧ ರಲ್ಲಿ ೩೦ ಸಾವಿರ ಐ. ಪಿ. ಪಂಪ್‌ಸೆಟ್ಸ್ ಸರ್ವಿಸ್ ಮಾಡಬೇಕು ಎನ್ನುವ ಕಾರ್ಯಕ್ರಮವನ್ನು ಇಟ್ಟುಕೊಳ್ಳಲಾಗಿದೆ. ೭೦೦ ಗ್ರಾಮಗಳಿಗೆ ಎಲೆಕ್ಟ್ರಿಫೈ ಮಾಡಬೇಕು ಎನ್ನುವ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದೇವೆ. ಆದಕ್ಕಾಗಿ ಬೇಕಾದ ಮೆಟೀರಿಯಲ ತರಲಾರದೆ ಹೋದರೆ, ನಮಗೆ ಬೇಕಾದಾಗ ಮಾರುಕಟ್ಟೆಗೆ ಹೋದರೆ ಮೆಟೀರಿಯಲ್ ಸಿಕ್ಕುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಈ ಹೊತ್ತಿನ ದಿವಸ ನಮಗೆ ಅಲ್ಯೂಮಿನಿಯಂ ಷಾರ್ಟೇಜ್ ಪ್ರಾರಂಭವಾಗಿದೆ ಆದ್ದರಿಂದ ಕಂಡಕ್ಟರುಗಳು ಕೇಳಿದಷ್ಟು ಸಿಕ್ಕುತ್ತವೆ ಎಂದು ಹೇಳುವುದಕ್ಕಾಗುವುದಿಲ್ಲ. ಕೆಲವು ಮೆಟೀರಿಯಲ್ಸ್ ಸಿಕ್ಕಬೇಕಾದರೆ ಮೇಲಿಂದ ಮೇಲೆ ಆರ್ಡರ್ ಕೊಟ್ಟು, ಅಡ್ವಾನ್ಸ್ ಕೊಡಬೇಕಾಗುತ್ತದೆ, ಮತ್ತು ತರಿಸಿಕೊಂಡು ಸ್ಟಾಕ್‌ನಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ. ದೊಡ್ಡ ಕಾರ್ಯಕ್ರಮ ಇಟ್ಟುಕೊಂಡಾಗ ಮೆಟೀರಿಯಲ್ಸ್ ಸಾಕಷ್ಟು ಪ್ರಮಾಣದಲ್ಲಿ ಶೇಖರಣೆ ಮಾಡದೆ ಇದ್ದರೆ ಕೆಲಸ ಕಾರ್ಯಗಳನ್ನು ಮಾಡುವುದಕ್ಕಾಗುವುದಿಲ್ಲ. ಯಾವುದಾದರೂ ಮೆಟೀರಿಯಲ್ಸ್ ಕೊರತೆ ಬಂದರೆ ನಮ್ಮ ಗುರಿ ಮುಟ್ಟುವುದಕ್ಕೆ ಆಗುವುದಿಲ್ಲ. ಆ ದೃಷ್ಟಿಯಿಂದ ಮೆಟೀರಿಯಲ್ಸ್ ಪರ್ಚೇಸ್ ಮಾಡುವುದಕ್ಕೆ ಪ್ಲಾನಿಂಗ್ ಮಾಡಿ ಮಾಡುತ್ತಿದ್ದೇವೆ. ಯಾರಿಗೆ ಸಿಕ್ಕಿದರೆ ಅವರಿಗೆ ಫೇವರ್ ಮಾಡುವುದಕ್ಕೆ ಮನಸ್ಸಿಗೆ ಬಂದಂತೆ ಪರ್ಚೇಸ್ ಮಾಡುತ್ತಿಲ್ಲ ಎನ್ನುವ ಭರವಸೆಯನ್ನು ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಿಗೆ ನಾನು ಕೊಡುವುದಕ್ಕೆ ಇಷ್ಟಪಡುತ್ತೇನೆ.

(MR. DEPUTY SPEAKER IN THE CHAIR)

ಅಲ್ಲಿರತಕ್ಕ ಛೇರ್ಮನ್ನರ ಮೇಲೆ ಕೆಲವರು ಕೆಲವು ಆಪಾದನೆಗಳನ್ನು ಮಾಡಿದ್ದಾರೆ. ಆ ಬಗ್ಗೆ ಈಗಾಗಲೇ ನನ್ನ ಸಹೋದ್ಯೋಗಿಗಳಾದ ಶ್ರೀ ಕೆ. ಪುಟ್ಟಸ್ವಾಮಿಯವರು ಸಾಕಷ್ಟು ಉತ್ತರಗಳನ್ನು ಹೇಳಿದ್ದಾರೆ. ಆದ್ದರಿಂದ ನಾನು ಇನ್ನು ಅದರ ಬಗ್ಗೆ ಹೆಚ್ಚು ಹೇಳತಕ್ಕ ಅವಶ್ಯಕತೆಯಿಲ್ಲ.

ಇನ್ನು ಕೊನೆಯದಾಗಿ ಎಲೆಕ್ಟ್ರಿಸಿಟಿ ಬೋರ್ಡಿಗೆ ಸೇರಿದ ಬೆಂಗಳೂರಿನ ಬಿಲಿಂಗ್ ವಿಭಾಗದ ಕಛೇರಿಗೆ ಬೆಂಕಿ ಬಿದ್ದಿರತಕ್ಕ ವಿಷಯದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಆ ಆಪಾದನೆಗಳ ಬಗ್ಗೆ ಈಗಾಗಲೇ ವಿಚಾರಣೆ ನಡೆಯುತ್ತಿವೆ. ಅಲ್ಲಿರತಕ್ಕ ಛೇರ್ಮನ್ನವರು ಅವರೂ ಮೈಸೂರಿನವರೇ. ಅವರಿಗೆ ಈ ವಿದ್ಯುಚ್ಛಕ್ತಿಯ ವ್ಯವಹಾರದಲ್ಲಿ ಅಪಾರ ಅನುಭವವಿದೆ. ಅವರು ಈಗ ಅಲ್ಲಿ ಇಲಾಖೆಯ ಆಡಳಿತದಲ್ಲಿ ಬಿಗುವನ್ನು ಉಂಟು-ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಅವರು ಬರುವುದಕ್ಕೆ ಮುನ್ನ ಆ ಲೆಡ್ಜರ್ ಬುಕ್ಕುಗಳನ್ನು ಹಾಗೇ ಟೇಬಲ್‌ಗಳ ಮೇಲೆ ಬಿಟ್ಟು ಮನೆಗಳಿಗೆ ಹೊರಟು ಹೋಗುತ್ತಿದ್ದರು. ಕೆಲವು ಲೆಡ್ಜರುಗಳ ಹಾಳೆ-ಗಳನ್ನೇ ಕೆಲವು ಕಿತ್ತು ಹಾಕಿದ್ದಾರೆ. ಅಲ್ಲಿ ಮೊದಲು ಇಷ್ಟೆಲ್ಲಾ ಅವ್ಯವಸ್ಥೆಯಿತ್ತು. ಇವರು ಅಲ್ಲಿಗೆ ಬಂದ-ಮೇಲೆ ದಿನದ ಆಫೀಸಿನಲ್ಲಿ ಕೆಲಸ ಮುಗಿದ ಕೂಡಲೆ ಆ ಲೆಡ್ಜರ್ ಬುಕ್ಕುಗಳನ್ನೆಲ್ಲಾ ಸ್ಟೀಲ್ ಆಲ್ಮೈರಾದಲ್ಲಿ ಇಡುವಂತೆ ಒತ್ತಾಯ ಮಾಡಿ ಮೇಲಿಂದ ಮೇಲೆ ಸರ್ಕ್ಯುಲರ್‌ಗಳನ್ನು ಇಷ್ಯೂಮಾಡಿದ್ದಾರೆ. ಈಗ ಆ ಲೆಡ್ಜರುಗಳನ್ನು ಟ್ಯಾಂಪರ್ ಮಾಡುವುದಕ್ಕೆ ಅವಕಾಶ ತಪ್ಪಿದೆ. ಇಲ್ಲಿಯತನಕ ಅಲ್ಲಿ ನಡೆಯುತ್ತಿದ್ದ ದುರ್ವ್ಯವಹಾರಗಳನ್ನು ತಪ್ಪಿಸುವುದಕ್ಕಾಗಿ ಅವರು ಆಡಳಿತದಲ್ಲಿ ಬಿಗು ಮಾಡುತ್ತಿದ್ದಾರೆ. ಅಲ್ಲಿ ನಡೆದಿರತಕ್ಕ ದುರ್ವ್ಯವಹಾರಗಳ ಬಗ್ಗೆ ತನಿಖೆನಡೆಸುವುದಕ್ಕೆ ಪ್ರಾರಂಭಮಾಡಿದ್ದರಿಂದ ಅಲ್ಲಿ ಬಿಲ್ಲಿಂಗ್ ವಿಭಾಗಕ್ಕೆ ಬೆಂಕಿ ಬಿದ್ದಿರುವುದರಿಂದ ಅದರಲ್ಲಿ ಕೆಲವರ ಕೈವಾಡವಿರಬಹುದೆಂಬ ಸಂದೇಹಕ್ಕೂ ಕೂಡ ಅವಕಾಶವಿದೆ. ಆದರೆ ಹಾಲಿ ನಡೆಯುತ್ತಿರುವ ವಿಚಾರಣೆ ಅಷ್ಟು ತೃಪ್ತಿಕರವಾಗಿಲ್ಲವೆಂದು ಕಂಡುಬಂದಲ್ಲಿ ಸರ್ಕಾರದವರು ಬೇರೆ ತನಿಖೆ ನಡೆಸುವುದಕ್ಕೆ ಹಿಂದುಮುಂದು ನೋಡುವುದಿಲ್ಲವೆಂದು ಹೇಳುತ್ತೇನೆ. ಬಿಗಿಯಾಗಿ ಕೆಲಸಗಳನ್ನು ನಡೆಸತಕ್ಕ ದಕ್ಷ ಅಧಿಕಾರಿಗಳು ಬಂದರೆ ಅವರ ಬಗ್ಗೆ ಕಥೆ ಕಟ್ಟತಕ್ಕ ಜನರು ಬಹಳವಾಗಿದ್ದಾರೆ, ಈ ಹಿಂದೆ ಅಲ್ಲಿ ಯಾರು ಮೆಟೀರಿಯಲ್ಸ್ ಬಗ್ಗೆ ಕಂಟ್ರಾಕ್ಟನ್ನು ಸದಾ ಪಡೆದು ಸುಖಪಡುತ್ತಿದ್ದರೋ ಅಂಥವರಿಗೆಲ್ಲಾ ಈಗ ಕೈಕಟ್ಟಿ ಕುಳಿತುಕೊಳ್ಳುವ ಹಾಗೆ ಆಗಿದೆ. ಅಂಥವರು ಇಲ್ಲಸಲ್ಲದ ಚಾಡಿಗಳನ್ನು ಹೇಳಿ ಹೀಗೆಲ್ಲಾ ಕಥೆ ಕಟ್ಟಿಸುವುದಕ್ಕೆ ಪ್ರಯತ್ನ ಮಾಡುತ್ತಾರೆ ಹಾಗೇ ಅಲ್ಲಿ ಕೆಲಸಮಾಡತಕ್ಕ ರ್‍ಯಾಂಕ್ ಅಂಡ್ ಫೈಲಿನಲ್ಲೂ ಅಸಮಾಧಾನ ಮೂಡಿದೆ. ಅವರೂ ಕೂಡ ಚಾಡಿ ಹೇಳುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ.

ಶ್ರೀ ಸಿ.ಕೆ ರಾಜಯ್ಯಶೆಟ್ಟಿ:— ಅವರಲ್ಲಿರತಕ್ಕ ಒಂದು ದೋಷ ಏಂದರೆ ಅವರು ಸಾರ್ವಜನಿಕರನ್ನು ಸ್ವಲ್ಪ ನ್ಯಾಯವಾಗಿ ಮಾತನಾಡಿಸುವುದು ಅಗತ್ಯ ಎಂಬುದು ಅವರಿಗೆ ಗೊತ್ತಿದಂತೆ ಕಾಣುತ್ತಿಲ್ಲ.

ಶ್ರೀ ವೀರೇಂದ್ರ ಪಾಟೀಲ್ :—ಆ ವಿಚಾರದಲ್ಲಿ ನನಗೂ ಕೂಡ ಕೆಲವು ದೂರುಗಳು ಬಂದಿವೆ. ನಾನು ಅವರನ್ನು ಕರೆಸಿ ಅವರಿಗೆ ಅಡ್ವೈಜ್ ಮಾಡುತ್ತಿದ್ದೇನೆ. ಅದೊಂದು ದೊಡ್ಡ ಖಾತೆ. ಬೇಕಾದಷ್ಟು ಕೆಲಸಗಳು ನಡೆಯುತ್ತಿವೆ. ಇನ್ನೂ ಆಗಬೇಕಾದ ಕೆಲಸಗಳು ಬಹಳವಾಗಿವೆ.

ಮೀಟರ್ ರೀಡಿಂಗಿನಲ್ಲೂ ಕೂಡ ಬಹಳ ಮಿಶ್ಚೀಫ್ ನಡೆಯುತ್ತಿತ್ತು. ಸಮಾಜದ ಸಹಕಾರವಿಲ್ಲದೆ ಹೋದರೆ ಇದನ್ನೆಲ್ಲಾ ತಡೆಗಟ್ಟುವುದು ಬಹಳ ಕಷ್ಟ. ಆಡಳಿತದಲ್ಲಿ ಬಿಗು ತರುವುದಕ್ಕೂ ಕಷ್ಟ. ಆದ್ದರಿಂದ ಸಾರ್ವಜನಿಕರೆಲ್ಲರ ಸಹಕಾರ ಈ ಬಗ್ಗೆ ಅತ್ಯಗತ್ಯವೆಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ :- ಈಗ ನಮ್ಮ ಭದ್ರಾವತಿ ಐರನ್ ವರ್ಕ್ಸಿನಲ್ಲಿ ತಯಾರಾಗತಕ್ಕ ಸ್ಟೀಲ್ ಕಂಬ ಮತ್ತು ತಂತಿಯನ್ನು ಬೇರೆಯವರಿಗೆ ಅದರಲ್ಲೂ ಹೊರಗಡೆಯವರಿಗೆ ಪ್ರೊಡಕ್ಷನ್ ರೇಟಿಗಿಂತ ಕಡಿಮೆ ದರದಲ್ಲಿ ಸಪ್ಲೈಮಾಡುವುದನ್ನು ತಪ್ಪಿಸಿ ಆ ಮೆಟೀರಿಯಲ್ಸ್‌ನ್ನೆಲ್ಲಾ ಈ ಬೋರ್ಡಿಗೆ ಕೊಡುವಂತೆ ಏಕೆ ಮಾಡಬಾರದು ?

ಶ್ರೀ ವೀರೇಂದ್ರ ಪಾಟೀಲ್:—ಕಾನೂನು ಪ್ರಕಾರ ಯಾರ್ಯಾರಿಗೂ ಕಮಿಟಿ ಮಾಡಿಕೊಂಡಿದ್ದಾರೊ ಅಂಥವರಿಗೆ ಬಿಟ್ಟು ಉಳಿಯತಕ್ಕ ಸ್ಟೀಲನ್ನೆಲ್ಲಾ ಎಲೆಕ್ಟ್ರಿಸಿಟಿ ಬೋರ್ಡಿನವರಿಗೇ ಕೊಡಬೇಕು ಎಂದು ನಮ್ಮ ಕಂಪನಿಗೆ ತಾಕೀತ್ ಮಾಡಲಾಗಿದೆ, ಅದನ್ನೂ ಏರ್ಪಾಡು ಮಾಡಿದ್ದೇನೆ,

ಶ್ರೀ ಎಲ್. ಶ್ರೀಕಂಠಯ್ಯ :-ಪ್ರತಿಯೊಂದು ಗ್ರಾಮಾಂತರ ಪ್ರದೇಶದಲ್ಲಿ ಹಾಕಲಾಗಿರತಕ್ಕ ಓವರ್-ಹೆಡ್ ವೈರನ್ನು ಅಂಡರ್ ಗ್ರೌಂಡ್ ಮೂಲಕ ಹೋಗುವಂತೆ ಮಾಡತಕ್ಕ ಯೋಜನೆ ನಮ್ಮ ಸರ್ಕಾರದವರೇನಾದರೂ ಆಲೋಚನೆ ಮಾಡಿದ್ದಾರೆಯೇ? ಇನ್ನು ಎರಡನೇಯದಾಗಿ ಮುನಿಸಿಪಾಲಿಟಿಗಳಲ್ಲಿ ಹಾಕಿರತಕ್ಕ ಬಲ್ಬ್‌ಗಳು ಓವರ್‌ಲೋಡಿಂಗ್ ಓಲ್ಟೇಜಿನಿಂದ ಪದೇ ಪದೇ ಬರ್‍ನಾಗಿ ಹೋಗಿ ಬಹಳ ಲುಕ್ಸಾನಾಗುತ್ತಿದೆ ಎಂದು ಹೇಳುತ್ತಿದ್ದಾರೆ. ಅದನ್ನು ತಡೆಗಟ್ಟುವುದಕ್ಕೇನು ಮಾಡಿದ್ದಾರೆ ?

ಶ್ರೀ ವೀರೇದ್ರ ಪಾಟೀಲ್ :—ಅಂಡರ್ ಗ್ರೌಂಡ್ ಕೇಬಲ್ ಹಾಕತಕ್ಕದ್ದು ಬಹಳ ಕಾಸ್ಟ್ಲಿ. ಹಾಗೆ ಎಲ್ಲಿ ಮಾಡಿದ್ದಾರೋ ನನಗೆ ತಿಳಿಯದು. ಆದರೆ ಅದನ್ನು ಕೆಲವು ಲೊಕ್ಯಾಲಿಟಿಗಳಲ್ಲಿ ಮಾಡಬಹುದು ಅಷ್ಟೆ ಈಗ ಓವರ್ ಹೆಡ್ ಕೇಬಲ್ ಖರ್ಚೇ ಜಾಸ್ತಿ ಬರುತ್ತಿರುವಾಗ ಇನ್ನು ಯಾವ ಕಾಲಕ್ಕೆ ನಮ್ಮ ದೇಶದಲ್ಲಿ. ಇದನ್ನು ಜಾರಿಗೆ ತರುತ್ತಾರೋ ಹೇಳುವುದಕ್ಕಾಗುವುದಿಲ್ಲ. ಇನ್ನು ಮುನಿಸಿಪಾಲಿಟಿಗಳವರ ತೊಂದರೆಯನು ತಿಳಿಸಿದ್ದಾರೆ. ಆ ಓಲ್ಟೇಜ್ ಏರುಪೇರನ್ನು ತಡೆಗಟ್ಟುವುದಕ್ಕೆ ಟ್ರಾನ್ಸ್‌ಫಾರ್ಮರ್ಸನ ಬದಲಾವಣೆ ಮಾಡುತ್ತಿದ್ದಾರೆ. ಅದಕ್ಕೆ ಸೂಕ್ತ ಕಾರ್ಯಕ್ರಮ ಹಾಕಿಕೊಂಡಿದ್ದಾರೆ. ಇನ್ನು ಮುಂದಕ್ಕೆ ಆ ತೊಂದರೆ ಇರಲಾರದು.

ಶ್ರೀ ಸಿ.ಕೆ. ರಾಜಯ್ಯ ಶೆಟ್ಟಿ :- ಈಗ ಪಬ್ಲಿಕ್ ಅಕೌಂಟ್ಸ್ ಕಮಿಟಿಯವರ ವರದಿಯನ್ನೇ ಪ್ರತ್ಯೇಕ-ವಾಗಿ ಕೊಟ್ಟು ಆಡಿಟರ್ ರಿಪೋರ್ಟನ್ನೂ ಕೂಡ ಪ್ರತ್ಯೇಕವಾಗಿ ಕೊಡುತ್ತಿದ್ದಾರೆ. ಈ ಎರಡನ್ನು ಒಂದೇ ಕನ್‌ಸಾಲಿಡೇಟೆಡ್ ಆಗಿ ಕೊಡುವುದಕ್ಕಾಗುವುದಿಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್ :- ಪಬ್ಲಿಕ್ ಅಕೌಂಟ್ಸ್ ಕಮಿಟಿ ವರದಿ ಮೊದಲು ಬಂದ. ಬಿಡುತ್ತದೆ. ಆದರೆ ಆಡಿಟ್ ವರದಿಯನ್ನು ಅಕೌಟೆಂಟ್ ಜನರಲ್ ಅವರು ಸರ್ಟಿಫೈ ಮಾಡದ ವಿನಾ ಕೊಡುವುದಕ್ಕಾಗುವುದಿಲ್ಲ. ಆದ್ದರಿಂದ ಎರಡನ್ನೂ ಏಕಕಾಲಕ್ಕೆ ಕೊಡುವುದಕ್ಕಾಗುವುದಿಲ್ಲ. ಅವರು ಸರ್ಟಿಫೈ ಮಾಡಿದಕೂಡಲೆ ಆಡಿಟ್‌ವರದಿಯನ್ನು ನಾವು ಈ ಸಭೆಯ ಮುಂದಿಡುತ್ತೇವೆ.

MR. DEPUTY SPEAKER :—The House will now adjourn and meet again at 2-30 P.M.

The House rose for Tea at fifty Minutes Part twelve of the (clock and reaswembled at fifty five minutes past Two of the Clock.

(Quorum Was Formed at 3-53 p.m.)

(MR. SPEAKER IN THE CHAIR)

Statement of the Minister for Tansport and Housing Regarding Damagedone 15th house of Maha Lakshmi Layout Bangalore.

SRI MOHAMED ALI (Minister for Transport, Housing and Tourism) Sir, I would like to make a statement regarding Mahalaxmi Layout.

In the Mahalaxmi Layout, 168 units of houses were constructed for the industrial workers. The plinth area of each unit is 4-65 surs. and the floor area is 3-58 sq. It contains a hall, a bedroom, kitchen, bathroom and latrine. The ceiling cost at that time for each unit a determined by the Govt. of India, under the Subsidised Industrials Housing Scheme, was Rs 4750 (the present cost is Rs. 5,800.) The actual cost however exceeded the limit by Rs. 600.

In spite of the fact that the cost of construction was higher than the ceiling limit, the rear portion had to be constructed by ACC roofing, though the rest of the house was constructed by RCC roofing, as otherwise the expenditure would have been much higher. The Mysore Housing Board constructs the houses under the Subsidised Industrial Housing Scheme: under this scheme 50% of the ciling would be given by Govt. of India as subsidy and the balance as a loan Any expenditure over and above the ceiling would be treated as a loan and no subisdy is available. Any extra expenditure would therefore result in a corresponding increase in rent as the Board works on a no-profit and no-loss basis and the rent has to cover the principal and interest of the loan. Even as it is, the occupants have to pay a rent of Rs. 34 per month which is itself higher: any higher rent would put them to undue hardship. It may however be pointed out that the houses which the Mysore Housing Board has constructed provide much more accommodation than in Bombay where the floor area is 2.2 sqrs. as against 3.58 sqrs in Mysore.

At about 9-30 P. M. on 3-4-70 there was severe gale at a speed of about 70 M.P.H. The Mahalaxmipuram Layout is situated in an elevated place and there are no houses and other features that would break the force of the wind, Yesterday's gale was an unusally strong one. It is undetstood that many trees have also fallen. Even an electric RCC pole has got bent almost parallel to the ground. About 20 units ware effected by the gale. The ACC roofing and in some cases wooden perlins have been blown off. Slight damage has also been caused to the walls at places where the ACC roofing was imbeded but only in two or three houses. About four persons have been injured and one of them, a lady, admitted into hospital and others have received treatment as out-patients.

In the early hours of the morning, the Chairman and the Officers of the Huosing Board visited the spot and when I subsequently inspected the area, they also accompanied me. I have issued orders to replace the ACC roofing within two or three days. I have also issued orders that the roofing of the kitchen and bathroom should be replaced by RCC roofing by stages.

This is an incident that has occurred as a consequence of the fury of nature and all necessary steps have been taken to replace the roofing and to repair the walls damaged.

ಶ್ರೀ ಬಿ. ಭಾಸ್ಕರ್ ಶೆಟ್ಟಿ:—ಸ್ವಾಮಿ, ನಾನು ಕೂಡ ಅಲ್ಲಿಗೆ ಹೋಗಿ ನೋಡಿಕೊಂಡು ಬಂದೆ.ಅಲ್ಲಿ ೩-೪ ಮನೆಗಳ ರೂಫಿಂಗ್ ಮಾತ್ರ ಹೋಗಿದೆ ಎಂದು ಮಾನ್ಯ ಮಂತ್ರಿಗಳು ಈಗ ಹೇಳಿದರು. ಆರ್.ಸಿ.ಸಿ. ರೂಫಿಂಗ್ ಸಹ ಗಾಳಿಗೆ ಹಾರಿ ಹೋಗಿದೆ. ಯಾವ ರೀತಿ ಆರ್. ಸಿ. ಸಿ. ಮಾಡಿದ್ದರು ಎಂಬುದನ್ನು ಅವರು ಹೇಳಬೇಕಾಗಿದೆ.

ಶ್ರೀ ಕೆ. ಪುಟ್ಟಸ್ವಾಮಿ:—ಗಾಳಿಗೆ ಏನೇನೋ ಹಾರಿ ಹೋಗುತ್ತದೆ.

ಶ್ರೀ ಬಿ. ಭಾಸ್ಕರಶೆಟ್ಟಿ:—ಏನೇನೋ ಹಾರಿಹೋಗುತ್ತದೆ. ಆದರೆ ನೀವು ಮಾತ್ರ ಹಾರಿ ಹೋಗುವುದಿಲ್ಲ ಇವತ್ತು ಅಲ್ಲಿ ಸುಮಾರು ೪೦-೪೫ ಕುಟುಂಬಕ್ಕೆ ಮನೆ ಇಲ್ಲವಾಗಿದೆ. ಅವರಿಗೆಲ್ಲಾ ಕೂಡಲೇ ಬೇರೆ ಕಡೆ ಷೆಲ್ಟರ್ ಒದಗಿಸಬೇಕು. ಇನ್ನು ಎರಡು ಮೂರು ದಿವಸಗಳಲ್ಲಿ ರಿಪೇರಿ ಮಾಡಿಕೊಡಲಾಗುತ್ತದೆ ಎಂದು ಹೇಳುವುದು ಸರಿಯಲ್ಲ. ಅವರಿಗೆ ಊಟದ ವ್ಯವಸ್ಥೆ ಏನಾದರೂ ಮಾಡಿದ್ದೀರಾ ಎಂದು ಕೇಳುತ್ತೇನೆ. ಒಬ್ಬರು ತಮ್ಮ ಮಗಳಿಗೆ ಮದುವೆ ಮಾಡಲು ಸಾಮಾನುಗಳನ್ನು ತಂದಿಟ್ಟಿದ್ದರು. ಆ ಸಾಮಾನುಗಳೆಲ್ಲಾ ಹಾಳಾಗಿ-ಹೋಗಿವೆ. ಅವರಿಗೆಲ್ಲಾ ಏನು ವ್ಯವಸ್ಥೆ ಮಾಡಿದ್ದೀರಾ ಎಂದು ಕೇಳತ್ತೇನೆ. ಮಧ್ಯಾಹ್ನದ ಊಟದ ವ್ಯವಸ್ಥೆ ಮಾಡಿದ್ದೀರಾ ಮತ್ತು ಸಾಯಂಕಾಲಕ್ಕೂ ಊಟದ ವ್ಯವಸ್ಥೆ ಮಾಡಿದ್ದೀರಾ ಎಂಬುದನ್ನು ಹೇಳಬೇಕು.

Sri Mohamed Ali :—Sir, when I was there on the spot representations were made to me by persons residing in the houses. Nobody asked me to make arrangements for their food. When I told them that the work of cement roofing will be taken up in stages, they were satisfied. Instructions have been given to the officers to replace the ACC roofing within a couple of days and the work has already started. It is not correct to say that RCC roofing has also blown out, because though hundreds of workers were there none of them brought it to my notice. They took me to places where more damage was done. Damage has been done to the brick walls.

ಶ್ರೀ ಎಂ. ನಾಗಪ್ಪ :—ಅಲ್ಲಿ ಬೇರೆ ಅನೇಕ ಮನೆಗಳು ಅಕ್ಕಪಕ್ಕದಲ್ಲಿವೆ. ಗಾಳಿ ಬೀಸುವಾಗ ಒಂದೊಂದು ಮನೆಗೆ ಒಂದೊಂದು ರೀತಿಯ ವೇಗದಿಂದ ಬೀಸುವುದಿಲ್ಲ. ನೆನ್ನೆದಿವಸ ಗಾಳಿ ಬೀಸಿದಾಗ ಹೌಸಿಂಗ್ ಬೋರ್ಡಿನವರು ಕಟ್ಟಿದ ಮನೆಗಳು ಹಾಳಾಗಿ ಬೇರೆ ಮನೆಗಳು ಹಾಳಾಗದೆ ಸರಿಯಾಗಿಯೇ ಇವೆ. ಇದಕ್ಕೆ ವರ್ಕ್‌ಮನ್‌ಷಿಪ್ ಚೆನ್ನಾಗಿಲ್ಲದಿರುವುದೇ ಕಾರಣ ಎಂಬುದನ್ನು ಒಪ್ಪುತೀರಾ ?

Sri Mohamed Ali ;—Sir, such houses have been constructed in many part of Bangalore City. Some houses in the same place have not been subjected to heavy gale. Where there was heavy current of this gale, roofs have been uprooted. It is not that in Mahalaxmi Layout alone that such houses have been constructed.

3-00 p. m.

ಶ್ರೀ ಬಿ. ಭಾಸ್ಕರ್ ಶೆಟ್ಟಿ —ಆ ಜನಗಳು ನನ್ನ ಹತ್ತಿರ ಏನೂ ಕೇಳಲಿಲ್ಲ ಎಂದು ಮಾನ್ಯ ಮಂತ್ರಿಗಳು ಹೇಳುತ್ತಾರೆ. ಆ ಜನಗಳು ಧರಣಿ ಮುಷ್ಕರ ಮಾಡುವ ಜಾಗಕ್ಕೆ ಮಾನ್ಯ ಮಂತ್ರಿಗಳು ಹೋಗಿದ್ದರೋ ಇಲ್ಲವೋ ಗೊತ್ತಿಲ್ಲ. ಮತ್ತು ಅವರನ್ನು ನಿಮಗೆ ಏನು ಬೇಕು ಎಂದು ಮಾನ್ಯ ಮಂತ್ರಿಗಳು ಕೇಳಿದರೋ ಇಲ್ಲವೋ ಗೊತ್ತಿಲ್ಲ.

Sri Mohamed Ali:—I do not know whether they have come to know about that or any member has also gone there.

PERSONAL EXPLANATION BY SRI K. N. VEERAPPA GOWDA

ಶ್ರೀ ಕೆ. ಎನ್. ವೀರಪ್ಪಗೌಡ:—(ಶೃಂಗೇರಿ)

ಸ್ವಾಮಿ, ಮೊನ್ನೆ ಅಪ್ರೋಪ್ರಿಯೇಷನ್ ಬಿಲ್ ಮೇಲೆ ನಮ್ಮ ಪಕ್ಷದ ನಾಯಕರು ಮಾತನಾಡುತ್ತಾ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಕೇಸು ಹಾಕಿರತಕ್ಕ ವಿಷಯದಲ್ಲಿ ಶ್ರೀ ಮಾನ್ ರಾಮಕೃಷ್ಣ ಹೆಗ್ಗಡೆಯವರು ಉತ್ತರ ಹೇಳುತ್ತಾ ನನ್ನ ಹಾಗೂ ಶ್ರೀಮಾನ್ ಕೆ. ಎಚ್. ಪಾಟೀಲರ ಬಗ್ಗೆ ಮಾತನಾಡುತ್ತಾ ಕಾಂಗ್ರೆಸ್ ಇಬ್ಭಾಗ ಆಗುವುದಕ್ಕೆ ಮೊದಲೇ ಇವರ ಮೇಲೆ ಕೇಸು ಹಾಕಿರುವುದು ಎಂದು ಹೇಳಿದ್ದಾರೆ. ನನ್ನ ಮೇಲೆ ಯಾರೂ ಹಾಗೆ ಕೇಸು ಹಾಕಿದ್ದು ಇಲ್ಲ. ಒಂದು ಸೊಸೈಟಿಯಲ್ಲಿ ಮ್ಯಾನೇಜರು ಯಾರೋ ಒಬ್ಬರಿಗೆ ಚೆಕ್ ಕೊಟ್ಟಾಗ ಅವರು ಅದನ್ನು ಕ್ಯಾಷ್ ಮಾಡಿಸಿಕೊಂಡು ಓಡಿ ಹೋಗಿದ್ದಾರೆ. ೯ನೇ ನವಂಬರ್ ೬೮ರಲ್ಲಿ ನಾನು ಒಂದು ಕೇಸು ಹಾಕಿದ್ದೇನೆ. ನನ್ನ ಮೇಲೆ ಯಾರೂ ಕೇಸು ಹಾಕಿಲ್ಲ. ಈ ಬಗ್ಗೆ ಇನ್‌ವೆಸ್ಟಿಗೇಷನ್ ಮಾಡುತ್ತಿದ್ದಾರೆ. ಎಫ್.ಐ.ಆರ್ ನಲ್ಲಿ ನಮ್ಮ ಹೆಸರುಗಳು ಇಲ್ಲ. ೨೨ನೆ ಆಗಸ್ಟ್ ೬೯ ರಲ್ಲಿ ಎ.ಐ.ಸಿ.ಸಿ. ಸ್ಟೇಟ್ ಮೀಟಿಂಗ್ ಕರೆಯಬೇಕೆಂದು ನಾನು ರುಜು ಹಾಕಿರತಕ್ಕದ್ದು ನಿಜ. ಆ ಮೇಲೆ ೨೦ನೆ ಸೆಪ್ಟಂಬರ್ ೬೯ ರಲ್ಲಿ ನಮ್ಮನ್ನು ಯಾರೋ ಅಪರಾಧಿ ಮಾಡಿ ಕೋರ್ಟಿನಲ್ಲಿ ಚಾರ್ಜ್ ಷೀಟ್ ಹಾಕಿರುವುದು ನಿಜ. ಹೋಮ್ ಮಿನಿಸ್ಟರನ್ನು ಭೇಟಿ ಮಾಡಿದಾಗ ಅದು ಸರಿಯಲ್ಲ, ಆ ರೀತಿ ಚಾರ್ಜ್ ಷೀಟ್ ಹಾಕಿಲ್ಲ ಎಂದು ಅವರು ಹೇಳಿದರು. ಅಲ್ಲದೆ ಆ ರೀತಿ ಹಾಕುವುದಕ್ಕೆ ಕಾರಣವಿಲ್ಲ ಎಂದು ಹೇಳಿದರು. ನೀವು ಈ ಬಗ್ಗೆ ಒಂದು ಅಪ್ಲಿಕೇಷನ್ ಬರೆದುಕೊಟ್ಟರೆ ಅದನ್ನು ಕನ್‌ಸಿಡರ್ ಮಾಡುತ್ತೇವೆ ಎಂದು ಕೂಡ ಹೇಳಿದರು. ಅದೇರೀತಿ ಅಪ್ಲಿಕೇಷನ್ ಕೊಟ್ಟೆ. ಆ ಮೇಲೆ ೨೪ನೆ ಅಕ್ಟೋಬರ್ ೬೯ ರಲ್ಲಿ ನಾನು ಹೋಮ್ ಮಿನಿಸ್ಟರನ್ನು ಕೇಳಿದಾಗ ಈ ಬಗ್ಗೆ ನ್ಯಾಯ ಇಲಾಖೆಯವರನ್ನು ಕೇಳುತ್ತೇನೆ, ಅವರು ಹೇಳಿದಹಾಗೆ ಮಾಡುತ್ತೇನೆ ಮತ್ತು ೩ನೆ ನವೆಂಬರ್ ೬೯ ಕ್ಕೆ ಚಿಕ್ಕಮಗಳೂರಿಗೆ ಬರುತ್ತೇನೆ, ಅಲ್ಲಿಗೆ ನೀವು ಬನ್ನಿ ಡಿ ಎಸ್.ಪಿ. ಹತ್ತಿರ ಚರ್ಚೆ ಮಾಡೋಣ ಎಂದು ಹೇಳಿದರು. ಆ ಮೇಲೆ ಶೃಂಗೇರಿಯ ಸಬ್‌ಇನ್‌ಸ್ಪೆಕ್ಟರು ೨೪ನೆ ನವೆಂಬರ್ ೬೯ರಲ್ಲಿ ಬೆಂಗಳೂರಿಗೆ ಬಂದು ನೇರವಾಗಿ ಫೈನಲ್ ಛಾರ್ಜ್ ಷೀಟ್ ಹಾಕಿ ೩೧ನೆ ನವಂಬರ್ ೬೯ ರಲ್ಲಿ ಆಸಾಮಿಗಳು ನಾಪತ್ತೆಯಾಗಿದ್ದಾರೆಂದು ರಿಪೋರ್ಟ್ ಮಾಡಿ ವಾರೆಂಟ್ ಇಷ್ಯೂ ಮಾಡಿದರು. ೪ನೇ ನವಂಬರ್ ೬೯ ರಲ್ಲಿ ಲಾ ಡಿಪಾರ್ಟ್‌ಮೆಂಟಿನವರು ಈ ಕೇಸನ್ನು ಹಾಕಿದ್ದು ಸರಿಯಲ್ಲ ಇದು ತಪ್ಪು ಎಂದು ಬರೆದು ಕಳುಹಿಸಿದರೂ ಕೂಡ, ಇವೊತ್ತಿನವರೆಗೂ ಆ ಕೇಸನ್ನು ವಿತ್‌ಡ್ರಾ ಮಾಡಿಲ್ಲ. ದೇವರ ದಯೆಯಿಂದ ನನ್ನ ಮೇಲಿನ ಕೇಸು ವಿತ್‌ಡ್ರಾ ಮಾಡಿಕೊಳ್ಳದೆ ಇದ್ದು ಕೋರ್ಟು ತೀರ್ಮಾನ ಕೊಟ್ಟಿರುವುದರಿಂದ ನಾನು ಏನೋ ಮಾಡಿ ವಿತ್‌ಡ್ರಾ ಮಾಡಿಸಿಕೊಂಡ ಎಂಬ ಅಪಾದನೆಯಿಂದ ತಪ್ಪಿಸಿದಂತಾಯಿತು.

MR. SPEAKER:—If I remember well, I think an allegation was made by Sri Siddaveerappa that only after the Hon. Member joined the Congress(R) proceedings were started against him.

ಶ್ರೀ ಕೆ. ಎನ್. ವೀರಪ್ಪಗೌಡ:—ಸಹಕಾರ ಸಂಸ್ಥೆಯೊಂದರ ಮ್ಯಾನೇಜರು ಹಣ ಚಪಾವಣೆ ಮಾಡಿದ್ದಾರೆ ಎಂದು ನಾನು ಅಪಾದಿಸಿ ಕೇಸು ಹಾಕಿದ್ದೇನೆ. ಸರ್ಕಾರ ಫಿರ್ಯಾದಿದಾರನಾದ ನನ್ನನ್ನೂ ಅಪರಾಧಿ ಎಂದು ಸೇರಿಸಿತ್ತು. ಅದು ಸರಿಯಲ್ಲ. ಕೇಸು ಹಾಕಿರುವುದೇ ನಾನು.

PRIVATE MEMBERS' BUSINESS—BILLS

MYSORE IRRIGATION (AMENDMENT) BILL 1970—*Motion to Consider.*

MR. SPEAKER:—Next item Private Members Bills for consideration Sri Nanje Gowda is absent.

Next, Hon. Member Sri Nagappa to move the Bill standing in his name.

Sri M. NAGAPPA (Raichur):—Sir, I beg to move:—

"That the Mysoie Irrigation (Amendment) Bill, 1970 be taken into consideration."

MR. SPEAKER:—Motion moved.—

"That the Mysore Irrigation (Amendment) Bill, 1970, be taken into consideration."

† ಶ್ರೀ ಎಂ. ನಾಗಪ್ಪ:—ಸನ್ಮಾನ್ಯ ಅಧ್ಯಕ್ಷರೇ, ೧೯೬೫ನೇ ಇಸವಿಯ ಮೈಸೂರು ಇರಿಗೇಷನ್ ಬಿಲ್ ಪಾಸಾದಾಗ ೨೮ನೇ ಸೆಕ್ಷನ್ ಮತ್ತು ೩೨ನೇ ಸೆಕ್ಷನ್ ತಿದ್ದುಪಡಿ ಆಗಲಿಲ್ಲ. ಸೆಕ್ಷನ್ ೨೮ ಸಬ್‌ಸೆಕ್ಷನ್ ೫ ರಲ್ಲಿ ಈ ರೀತಿ ಹೇಳಿದ್ದಾರೆ.

Section 28 (5) of the Mysore Irrigation Act, 1965 reads as follows.

"28 (5) If any person uses water from an irrigation work without obtaining the permission required under this Section, he shall in addition to any penalty he incurs under this Act for such unauthorised use of water be liable to pay water rate at such rate as may be determined by the prescribed officer not being less than ten times and not exceeding thirty times the rate he would otherwise have been required to pay, had he applied for and obtained the permission."

ಎಂದು ಹೇಳಿದ್ದಾರೆ. ಮೊದಲು ಇರತಕ್ಕ ಕಾಯಿದೆಯಲ್ಲಿಯೂ ಕೂಡ ನೀರು ದುರುಪಯೋಗ ಮಾಡಿದ ಪ್ರಕರಣಗಳಲ್ಲಿ ಅಧಿಕಾರಿಗಳಿಗೆ ದಂಡ ವಿಧಿಸತಕ್ಕ ಅಧಿಕಾರವನ್ನು ಕೊಟ್ಟು ಈ ಕಾಯಿದೆಯಲ್ಲಿ ಯಾವ ತರಹ ಅಪೀಲು ಹಾಕುವುದಕ್ಕೂ ಅಧಿಕಾರ ಕೊಟ್ಟಿಲ್ಲ.

sub-section (4) of Section`32 reads thus.—

"In all cases in which the person who has sown or grown any unauthorised crop or allowed any land to be grown or sown with such unauthorised crop cannot be found, the holder of the land in addition to such other person concerned, shall be liable for contravening the provisions of this Section."

ಎಂದು ಹೇಳಿದ್ದಾರೆ. ಸೆಕ್ಷನ್ ೨೮ (೫) ಮತ್ತು ಸೆಕ್ಷನ್ ೩೨ (೪) ರ ಪ್ರಕಾರ ಆರ್ಡರ್ ಪಾಸ್ ಮಾಡಿದರೆ ಅವರ ವಿರುದ್ಧ ಅಪೀಲು ಇಲ್ಲ. ಆದರೆ ಡಿವಿಜನಲ್ ಕಮೀಷನರು ಅದಕ್ಕೆ ಸಂಬಂಧಪಟ್ಟ ರೆಕಾರ್ಡ್ ಅನ್ನು ಕಾಲ್‌ಫಾರ್ ಮಾಡಬಹುದು, ಮತ್ತು ಅದಕ್ಕೆ ಸಂಬಂಧಪಟ್ಟ ಡೆಪ್ಯುಟಿ ಕಮಿಷನರಾಗಲೀ, ಇರಿಗೇಷನ್ ಆಫೀಸರಾಗಲೀ ಯಾರನ್ನಾದರೂ ಕರೆಸಿ ಇದರ ಬಗ್ಗೆ ಅವರನ್ನು ವಿಚಾರಿಸಿ ನಂತರ ಅವರು ತಮಗೆ ತೋಚಿದಂತಹ ಆರ್ಡರನ್ನು ಮಾಡಬಹುದು,

Section 65 reads thus.—

"65. Appeals against order under the Act.—Any person aggrieved by an order of an Irrigation Officer under Section 12 or 24 may within thirty days from the date of communication of the order, prefer an appeal to the Deputy Commissioner of the district."

ಎಂದು ಇದೆ. ಈಗ ಈ ಮಸೂದೆಯಲ್ಲಿ ಹೇಳಿರುವ ಪ್ರಕಾರ ಎಂಥಹ ಪರಿಸ್ಥಿತಿಯಲ್ಲಿ ನೀರು ದುರುಪಯೋಗ ಮಾಡಿದ ಪ್ರಕರಣಗಳಲ್ಲಿ ೫ ಪಟ್ಟು ದಂಡ ವಿಧಿಸಬೇಕು. ೧೦ ಪಟ್ಟು ದಂಡ ವಿಧಿಸಬೇಕು ಎಂದು ರಾಜ್ಯ ಸರ್ಕಾರದವರು ನಿಯಮಾವಳಿಯನ್ನು ತಯಾರು ಮಾಡಿಲ್ಲ. ಯಾರಿಗೆ ೫ ಪಟ್ಟು ದಂಡ ಹಾಕಬೇಕು, ಯಾರಿಗೆ ೧೦ ಪಟ್ಟು ದಂಡ ಹಾಕಬೇಕು, ಮತ್ತು ಪರಮಾವಧಿ ಯಾರಿಗೆ ಎಷ್ಟು ದಂಡಹಾಕಬೇಕು ಎನ್ನುವುದನ್ನು ಇದರಲ್ಲಿ ಹೇಳಿಲ್ಲ. ೧೯೬೯ನೇ ಇಸವಿಯಲ್ಲಿ ಈ ಆಕ್ಟ್ ಅಮೆಂಡ್ ಮಾಡಿ ಸೆಕ್ಷನ್ ೩೨ ಕೂಡ ಅಮೆಂಡ್ ಆಗಿದೆ, ಸೆಕ್ಷನ್ ಸಬ್‌ಕ್ಲಾಜ್ ೪ ಅನ್ನು ಕಂಪ್ಲೀಟಾಗಿ ರೀಕ್ಯಾಸ್ಟ್ ಮಾಡಿ ಹೊಸ ಸೆಕ್ಷನ್ ಆಡ್ ಮಾಡಿದ್ದಾರೆ ಅದು ಈ ರೀತಿ ಇದೆ—

Sub-section (4) of Section 32 has been completely recasted and a new sub-section has been inserted in the Amenedment i. e., Mysore Irrigation(Amendment) Act, 1968 Mysore Act No. 12 of 1969. The amended Section 32(4) reads as follows:—

"32.(4) In all cases in which the person who has sown or grown any unauthorised crop or allowed any land to be grown or sown with such unauthorised crop cannot be found, the holder of the land, in addition to such other person concerned, shall—

(a) be liable for contravening the provisions of this section; and

(b) also be liable to pay such water rates, as may be determined by the Irrigation Officer, not being less than five times and not exceeding ten times the water rate which he would otherwise have been required to pay:

Provided that if no water is utilised either directly or indirectly from the irrigation work for growing any crop, the provisions of sub-sections (3) and (4) shall not be applicable."

ಈ ಸೆಕ್ಷನ್ ೩೨(೪)ನ್ನು ನೋಡಿದ ನಂತರ ಸೆಕ್ಷನ್ ೨೮ರಲ್ಲಿ ೬೦ ಪಟ್ಟು ದಂಡ ಹಾಕತಕ್ಕ ವ್ಯವಸ್ಥೆ ಇದೆ. ಇನ್ನು ಸೆಕ್ಷನ್ ೨೫ ಸಬ್ ಸೆಕ್ಷನ್ (೩)ರಲ್ಲಿ ಈ ರೀತಿ ಇದೆ:

The water rate leviable for the use of water for temporary cultivation under sub-sections (1) and (2) shall be twice the water rate when such rate is levied separately on the land or in other cases twice the difference between dry assessment of the land and the wet assessment of the neighbouring wet lands.

(ಶ್ರೀ ಎಂ. ನಾಗಪ್ಪ)

ಆದ್ದರಿಂದ ಒಂದು ಪಟ್ಟು ವಾಟರ್ ರೇಟ್ ಹಾಕಿದರೆ, ಸೆಕ್ಷನ್ ೩೨ರ ಪ್ರಕಾರ ''ನಾಟ್ ಎಕ್ಸೀಡಿಂಗ್ ೧೦ ಟೈಮ್ಸ್'' ಎಂದು ದಂಡ ಹಾಕತಕ್ಕ ಅಧಿಕಾರ ಇದೆ. ಆದರೆ ದಂಡ ಹಾಕತಕ್ಕದ್ದು ತಪ್ಪು ಎಂದು ಹೇಳತಕ್ಕ ಶಕ್ತಿ, ಅಧಿಕಾರ ರೈತನಿಗೆ ಕೊಟ್ಟಿಲ್ಲ. ಅಷನ್ನು ೫,೪,೧೦ ಟೈಂಸ ಯಾಕೆ ದಂಡ ಹಾಕಿದ್ದೀರೆಂದು ಕೇಳುವುದಕ್ಕಾಗುವುದಿಲ್ಲ. ಆದರ ಬದಲು ಮೊದಲನೆಯ ತಪ್ಪು ಮಾಡಿದವನಿಗೆ, ೫ ಪಟ್ಟು, ಎರಡನೇ ತಪ್ಪು ಮಾಡಿದವನಿಗೆ ೬ ಪಟ್ಟು ಹೀಗೆ ಎಲ್ಲಾ ಹಾಕಬಹುದು ಎಂದು ಮಾಡಿದರೆ ಒಳ್ಳೆಯದು. ಇವತ್ತು ಇವರಿಗೆ ಅನ್‌ಲಿಮಿಟೆಡ್ ಪವರ್ಸ್ ಕೊಟ್ಟು ಅದರ ಮೇಲೆ ಅಪೀಲ್ ಹೋಗುವುದಕ್ಕೆ ಪವರ್ ಕೊಟ್ಟಿಲ್ಲ.

Even the Constitution says that delegated powers must be guided by la w.

ನೀವು ಇವತ್ತು ಪೂರ್ತಿಯಾಗಿ ಡಿಸ್ಕ್ರಿಶನರಿ ಪವರ್ಸ್ ಕೊಟ್ಟು ೬ ರಿಂದ ೧೦ರ ವರೆಗೆ ದಂಡ ಹಾಕಬಹುದೆಂದು ಹೇಳಿದರೆ, ಹೇಗೆ? ಸೆಕ್ಷನ್ ೨೮(೩) ಮತ್ತು (೪)ರಲ್ಲಿ ೧೦ ಟೈಂಸ್ ಆಫ್ ದಿ ವಾಟರ್ ರೇಟ್, ಅಥವಾ ಅತೀ ಹೆಚ್ಚು ಅಂದರೆ ೩೦ ಟೈಂಸ್ ಅಥವಾ ೬೦ ಟೈಂಸ್ ಕೂಡ ಹಾಕಬಹುದು. ಸೆಕ್ಷನ್ ೨೮ (೫)ರಲ್ಲಿ ನಾಟ್ ಲೆಸ್ ದೆನ್ ೧೦ ಟೈಂಸ್ ನಾಟ್ ಎಕ್ಸೀಡಿಂಗ್ ೩೦ ಟೈಂಸ್ ಎಂದು ಇದೆ:

28 (5) If any person use water from an irrigation work without obtaining the permission required under this section, he shall in addition to any penalty he incurs under this Act for such Act for such unauthorised use of water be liable to pay water rate at such rate as may be determined by the prescribed officer not being less than ten times and not exceeding thirty times the rate he would otherwise have been required to pay, had he applied for and obtained the permission.''

ಅಂದರೆ ಯಾವ ಲ್ಯಾಂಡ್ ರೆಗ್ಯುಲರೈಸ್ ಆಗಿಲ್ಲ ಅಂಥ ಕಡೆ ನೀರನ್ನು ಉಪಯೋಗಿಸಿದರೆ, ಸಾಧಾರಣ ೧೦ ರಿಂದ ೩೦ರ ವರೆಗೆ ದಂಡ ಹಾಕಬಹುದು. ೬೦ ಟೈಂಸ್ ಲೆವಿ ಹಾಕತಕ್ಕ ನಿದರ್ಶನವನ್ನು ನಾನು ಕೋಟ್ ಮಾಡಿದ್ದೇನೆ. ಇನ್ನು ಸಬ್ ಸೆಕ್ಷನ್ (೩)ರಲ್ಲಿ ಡಬಲ್ ದಿ ರೇಟ್ ಮಾಡಿ ಅಂದರೆ, ೩೦ರ ೨ ಪಟ್ಟು, ಹಾಕಿದ್ದಾರೆ. ಇದನ್ನು ಅಲ್ಲಿ ಚಾಲೇಂಜ್ ಮಾಡಬೇಕಾಗುತ್ತದೆ. ನನ್ನ ತಿದ್ದುಪಡಿ ಸ್ಪಷ್ಟವಾಗಿದೆ. ಸೆಕ್ಷನ್ ೨೮ ಮತ ಸೆಕ್ಷನ್ ೩೨ (೪)ರಲ್ಲಾಗಲಿ, ಯಾವ ದಂಡವನ್ನು ಹಾಕುತ್ತೀರಿ, ಅದರ ಬಗ್ಗೆ ಕನಿಷ್ಟ ಪಕ್ಷ ರೈಟ್ ಆಫ್ ಅಪೀಲ್ ಕೊಡಿ ಎಂದು. ಇದನ್ನು ಬಿಟ್ಟರೆ ಬೇರೆ ಏನೂ ವಿಷಯ ಇಲ್ಲ. ತಾವು ದಯಪಟ್ಟು ಇನ್ನೊಂದು ಸೆಕ್ಷನ್ ನೋಡಿದರೆ ಗೊತ್ತಾಗುತ್ತದೆ. ಸೆಕ್ಷನ್ ೬೪ರಲ್ಲಿ ಹೀಗೆ ಇದೆ:

Liability when person using water unauthorisedly cannot be found – (1) If water supplied through a field channel is used in any unauthorised manner, and if the person by whose act or neglect such use has occured cannot be found after such enquiry as the Irrigation Officer may deem sufficient, the Irrigation office after giving not less than one moth's notice to the holders and occupiers of all lands benefited thereby and after hearing their representations, if any, make an order for the recovery of such charges as may be prescribed for such use from such holders and occupiers in such proporation as he may find just.

ಇದಕ್ಕೂ ಸಹಿತ ರೈಟ್ ಆಫ್ ಅಪೀಲ್ ಇಲ್ಲ. ಅದನ್ನು ಕೂಡ ಸರ್ಕಾರದವರು ಸೇರಿಸತಕ್ಕದ್ದು ಅವಶ್ಯ. ಇವತ್ತು ಅನೇಕ ಹೈಕೋರ್ಟಿನ ಡಿಸಿಷನ್ಸ್ ಇವೆ. ಯಾವುದೇ ಕಾಯಿದೆಯಲ್ಲಿ ಯಾವುದೇ ಒಬ್ಬ ಅಧಿಕಾರಿಗೆ ಅನ್‌ಲಿಮಿಟೆಡ್ ಪವರ್ಸ್ ಕೊಟ್ಟು ೫ ರಿಂದ ೧೦ರ ವರೆಗೆ, ೧೦ ರಿಂದ ೬೦ ಪಟ್ಟು ದಂಡ ಹಾಕತಕ್ಕದ್ದು ಇಲ್ಲ. ಇವರಲ್ಲಿ ಯಾರಿಗೆ ಎಷ್ಟು ಹಾಕಬೇಕೆಂಬ ಮಿತಿಯನ್ನು ತೋರಿಸಿದೆ.

One person may exercise his discretion in one way and another person in another way.

ದಂಡ ವಿಧಿಸುವಾಗ ಅಧಿಕಾರಿ ಸ್ವೇಚ್ಛೆಯಾಗಿ ವರ್ತಿಸತಕ್ಕ ಪರಿಸ್ಥಿತಿ ಬರುತ್ತದೆ ಅಂತಹ ಸಂದರ್ಭ-ದಲ್ಲಿ ಅದನ್ನು ಚ್ಯಾಲೆಂಜ್ ಮಾಡತಕ್ಕ ಒಂದು ಅವಕಾಶವನ್ನು ಕೊಡತಕ್ಕ ಅಧಿಕಾರ ಈ ಕಾಯಿದೆಯಲ್ಲಿ ಇಲ್ಲ. ಲಾ ಇಕ್ವಲ್ಲಾಗಿರಬೇಕು. ಇಲ್ಲದಿದ್ದರೆ ಒಬ್ಬರಿಗೆ ಒಂದು ರೀತಿಯ ದಂಡ, ಇನ್ನೊಬ್ಬರಿಗೆ ಇನ್ನೊಂದು ರೀತಿಯ ದಂಡ ವಿಧಿಸಿದ್ದೇ ಆದರೆ ಅದು ಅಲ್ಟ್ರಾವೈರ್ಸ್ ಆಗತಕ್ಕ ಪರಿಸ್ಥಿತಿ ಬರಬಹುದು. ೩೨ (೪)ರ ಪ್ರಕಾರ ೨೮ (೫)ರ ಪ್ರಕಾರ ಆರ್ಡರ್ ಆದರೆ ಅದನ್ನು ಚಾಲೆಂಜ್ ಮಾಡತಕ್ಕ ಅಧಿಕಾರ ಇರಬೇಕು. ಅದಕ್ಕೆ ಒಂದು ರೈಟ್ ಆಫ್ ಅಪೀಲ್ ಇರಬೇಕೆಂಬುದು ನನ್ನ ಉದ್ದೇಶ. ಅದಲ್ಲದೆ ಆರ್ಡರ್ ಮಾಡುವವರೂ ಎಲ್ಲೋ ತಮ್ಮ ಆಫೀಸಿನಲ್ಲಿ ಕೂತುಕೊಂಡು ಆರ್ಡರ್ ಮಾಡುತ್ತಾರೆ. ಮತ್ತು ಹಾಗೆ ಮಾಡಿದ ಆರ್ಡರ್ ದೂರದ ಹಳ್ಳಿಗಳಿಗೆ ಸರಿಯಾದ ಸಮಯದಲ್ಲಿ ಬಂದು ಮುಟ್ಟುವುದಿಲ್ಲ. ಅಪೀಲ್ ಮುಗಿಯುವವರೆಗೆ ಸ್ಟೇ ಕೊಡತಕ್ಕ ಅಧಿಕಾರ ಅಪಲೇಟ್ ಅಧಿಕಾರಿಗೆ ಇರಬೇಕೆಂದು ನನ್ನ ವಾದ. Before nulliying this Act, Government should open their eyes and grant the right of appeal. ಆದ್ದರಿಂದ ಆ ಒಂದು ರೈಟ್ ಆಫ್ ಅಪೀಲ್ ಕೊಡಬೇಕೆ ಮತ್ತು ಇದನ್ನು ಒಪ್ಪಿಕೊಳ್ಳಬೇಕೆಂದು ಹೇಳುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

† SRI L. SRIKANTIAH (Nanjangud):—Mr. Speaker Sir, while agreeing in principle to the amendments that have been brought forward by Sri M. Nagappa, I beg to sumbit some of my own reservations and comments with regard to the provisions. contained in the Bill.

In the first place, as I said, I welcome that in all cases where it is found that a person is found using water unauthorisedly, it is better that some sort of an appellate forum is necessary to judge. But there is one major difficulty or hurdle which my learned friend Sri M. Nagappa has not noticed. Here the difficulty would be the use of the expression "unauthorised use of water". Unauthorised use of water may occur in two or three ways. Let us imagine that A and B are neighbours;

Both are entitled to Government water. While B is entitled to water he draws water from the Government canal and deprives A, has beighbouring land-owner, of such quantity of water which A is legitimately entitled to draw from Government sources. B's use of water, to the extent he deprives A of his legitimate water, becomes unauthorised. That is type No. 1.

There is a Second type wherein B or A is not entitled to the use of water because he is not an atchkatdar. In that sense when he draws water from any Government canal the use by him is absolutely illegal and becomes unauthorised. Therefore, in a particular situation when a particular Irrigation Officer is called upon to come to a decision whether the use of water is unauthorised or not, first the Irrigation Officer has to make out whether that water is drawn from a Government source in order to arrive at that conclusion: to conclude that the use of water is unauthorised he has to exclude the use of water from other sources like take which is not Government water and also seepage water which is not classified as Government water. Therefore, here is a

(Sri L. SRIKANTAIAH)

technical matter where in the Irrgation Officer on visiting the spot has to decide and come to a conclusion whether in the first instance the water belongs to the Government and in the second instance even assuming that the water belongs to Government whether that use of water is unauthorised. Therefore in all such cases if an Irrigation Officer comes to the conclusion that the water used is unauthorised, what is the remedy provided for? In such cases the question is whether the remedy of appeal as provided by Sri Nagappa is the proper remedy. I am afraid from the nature of the case, if the appeal is to a Munsiff, Munsiff is not in a position to appreciate this aspect of the Matter. He will have to visit the spot very often and decide the point which is a technical matter. He has first of all to determine whether it is Government water; secondly he has to examine the spot and exclude the possibility that it is not use of water which does not belong to Government. I feel that he will have difficulty in deciding this. At the same time I agree that some sort of appeal should be provided, but I feel that appeal to Munsiff would not be the proper remedy and I feel that appeal should be to a higher authority like the Executive Engineer or the Chief Engineer, a man who is well-versed in the matter and who has got the technical ability to judge and appreciate the facts involved in the case. It is not that I doubt the competence of civil court, especially Munsiff. But here is a matter which is not purely legal in nature. That is my main objection. I am not convinced by the argument of the Hon. Member Sri Nagappa as to whether the Munsiff's court would be the proper forum to arrive at a decision and determine whether the use of water is totally unauthorised. Therefore I would suggest that the Bill be referred to a Select Committee. I have made it absolutely clear that there should be provision for appeal, but the question would be, taking the facts of the case, to whom appeal should be made. Should it be to a Civil Court or a Tribunal, and if it be a tribunal which Tribunal can best appreciate the facts of the case after visiting the spot. With these observations Iam giving a notice that the Bill be referred to a Select Committee for investigation and report.

†SRI D. PARAMESWARAPPA (Deputy Minister for Major Irrigation and Electricity) ;—Mr. Speaker, Sir, the Hon Member Sri M. Nagappa has piloted this Bill seeking to amend certain sections of the Act. At the outset I would like to submit that the Hon. Member seems to be labouring under the impression while proposing these amendments that no person should be punished without an opportunity being given to him. That seems to be the principle which he has in mind. I would like to draw the attention of the House to Section 28 which provides for certain penalty for unauthorised use of water. Section 32 is very clear wherein it is provided that a person is liable to be punished when he grows a crop which is different and which is not prescribed, when he contravenes the conditicnid down las for corp pattern.

Coming to Section 65, it provides for certain appeals under sections 12 and 24. The Hon. Member referred to Section 65 also where in appeals have been provided against orders of the Irrigation Officer under certain circumstances. Sections 12 and 24 are the only sections which are appealable as per Section 65 of the Irrigation Act.

I shall first come to the amendments to Sections 28 and 32 of the Act. For the efficient management and distribution of water, certain preventive measures are quite essential. Our practical experience shows that people have been drawing water from irrigation wells unauthorisedly and as such the atchkatdars are made to suffer unnecessarily for the fault of others. I believe that Mr. Nagappa knows concrete instances in this respect.

Let us for arguments, sake assume that appeal is provided for such cases as contended by Mr. Nagappa and the appeal lies to the Munsiff court, but what about the delay and the hardships that are likely to be caused to the Atchktdars who are legally entitled to get water. That aspect Mr. Nagappa has to consider deeply.

Therefore, with a view to ensure efficient distribution of water and to obviate the delay that may occur in preferoing appeals in such cases the Government thought it fittintroduce certain provisions to prevent the contravention of certain sections. Therefore, under Section 28 a penalty has been provided Even in Section 32 a penalty has been provided for contravention of these sections. In the interest of better management and efficient distribution of water and in order to obviate the delay that is likely to occur in such cases, it is very necessary that the Irrigation officers are given full powers to levy the penalty when there is contravention of these sections. Therefore, I think that sections 28 and 32 are well thought of and there is no need to amend those sections. I therefore oppose the amendment.

ಶ್ರೀ ಎಂ. ನಾಗಪ್ಪ ;— ಶ್ರೀಮಾನ್ ಶ್ರೀಕಂಟಯ್ಯನವರು ಎತ್ತಿದ ಕೆಲವು ವಿಷಯಗಳಿಗೆ ಉತ್ತರ ಕೊಡಲು ಇಚ್ಛಿ ಪಡುತ್ತೇನೆ. ಅವರು ಅನ್‌ಆಥರೈಜ್ಡ್ ಯೂಸ್‌ಆಫ್ ವಾಟರ್ ಬಗ್ಗೆ ಹೇಳಿದರು. ಯಾವ ಯಾವ ಪರಿಸ್ಥಿತಿಯಲ್ಲಿ ಅನ್‌ಆಥರೈಜ್ಡ್ ಎಂದು ಹೇಳುವುದು ಕಷ್ಟ. ಇದಕ್ಕೆ ಟೆಕ್ನಿಕಲ್ ಅಥಾರಟಿ ಬೇಕು ಎಂದು ಅಭಿಪ್ರಾಯಪಟ್ಟರು. ನಾನು ಒಂದು ವಿಚಾರ ಸ್ಪಷ್ಟಪಡಿಸುತ್ತೇನೆ. ಯಾವುದೇ ಇರಿಗೇಷನ್ ಇರಲಿ ತುಂಗಭದ್ರ ಏರಿಯಾ ಇರಲಿ, ಭದ್ರ ಚಾನಲ್ ಏರಿಯಾ ಇರಲಿ ಯಾವ ಯಾವ ಲ್ಯಾಂಡ್ಸ್ ಲೋಕಲೈಜ್ಡ್ ಆಗಿದೆ ಎನ್ನುವ ಲಿಸ್ಟನ್ನು ಸರಕಾರದವರು ಪಬ್ಲಿಷ್ ಮಾಡುತ್ತಾರೆ. ಅಂತಹವರಿಗೆ ನೀರು ಬಿಡಬೇಕು ಎನ್ನುವ ವ್ಯವಸ್ಥೆ ಇದೆ. Any land holder whose land has not been localtised if he used the water then it comes under unauthorised use of water.

ಅದು ೨೮ನೇ ಸೆಕ್ಷನ್ ಕೆಳಗೆ ಬರುತ್ತದೆ. ಆ ರೀತಿ ಒಂದುಲಿ ಸ್ಟ್ ಇದ್ದ ಮೇಲೆ ಯಾವುದು ಅನ್ ಆಥರೈಸ್ಡ್ ಯೂಸ್ ಆಫ್ ವಾಟರ್ ಎನ್ನುವುದು ಸ್ಪಷ್ಟವಾಗುತ್ತದೆ. ಇರಿಗೇಷನ್ ಆಫೀಸರ್ ಅಭಿಪ್ರಾಯ ಬೇಕಿಲ್ಲ. ಕೆರೆ ಕೆಳಗೂ ಲ್ಯಾಂಡ್ ಇರಿಗೇಟ್ ಆಗುತ್ತದೆ. ಬಾವಿ ಕೆಳಗೂ ಲ್ಯಾಂಡ್ ಇರಿಗೇಟ್ ಆಗುತ್ತದೆ. ನಮ್ಮ ರಾಯಚೂರು ಜಿಲ್ಲೆಯಲ್ಲಿ ಅನೇಕ ಬಾವಿಗಳ ಕೆಳಗೆ ಬರತಕ್ಕ ಲ್ಯಾಂಡ್ಸ್ ಅನ್ನು ಲೋಕಲೈಜ ಮಾಡಿದ್ದಾರೆ. ಹಾಗೆ ಕೆರೆಗಳ ಕೆಳಗೆ ಬರತಕ್ಕ ಲ್ಯಾಂಡ್ಸ್ ಅನ್ನು ಲೋಕಲೈಸ್ಡ್ ಮಾಡಿದ್ದಾರೆ ಕೆಲವು ಲ್ಯಾಂಡ್ಸ್‌ನ್ನು ಲೋಕಲೈಜ್ ಮಾಡಿಲ್ಲ. ಕೆಲವು ಕೆರೆಗಳ ಕೆಳಗೆ ಬರುವ ಲ್ಯಾಂಡ್ಸ್‌ನಲ್ಲಿ ಪಾಡಿ ಕಲ್ಟಿವೇಷನ್ ಮಾಡುತ್ತಾರೆ. ಈ ಕಾಯಿದೆಯಿಂದ ಅವರಿಗೆ ಯಾವ ತರಹ ಭಾದಕವೂ ಇಲ್ಲ. ಸೆಕ್ಷನ್ ೩೨ ಪ್ರಕಾರ ಕ್ರಾಪ್ ಬದಲಾವಣೆ

(ಶ್ರೀ ಎಂ. ನಾಗಪ್ಪ)

ಮಾಡುವುದು ಅವರಿಗ ಅಪ್ಲೈ ಆಗುವುದಿಲ್ಲ. ಆದರೆ ಈ ಸೆಕ್ಷನ್ ೩೨ ರ ಪ್ರಕಾರ ಅವರನ್ನು ಲಯಬಲ್ ಮಾಡಿ ೩೦ ಪಟ್ಟು ವಾಟರ್ ರೇಟ್ ಅವರಿಗೆ ಚಾರ್ಜ್ ಮಾಡಿದ್ದಾರೆ. ಹಾಗೆ ಬಾವಿಗಳ ಕೆಳಗೆ ಬರತಕ್ಕವರಿಗೂ ಚಾರ್ಜ್‌ಮಾಡಿದ್ದಾರೆ. ಒಂದು ಉದಾಹರಣೆ ಕೊಡುತ್ತೇನೆ. ನನ್ನ ಲ್ಯಾಂಡ್‌ನಲ್ಲಿ ೨೦ ಎಕರೆ ಜಮಾನು ಬರುತ್ತದೆ, ೧೮ ಎಕರೆ ಲೋಕಲೈಜ್ಡ್ ಆಗಿದೆ ಎಂದು ನನಗೆ ನೋಟೀಸ್ ಕೊಟ್ಟಿದ್ದಾರೆ. ಅವರು ೨೦ ಎಕರೆ ಪೈಕಿ ನೀರು ಕೊಟ್ಟಿರುವುದು ೯ ಎಕರೆಗೆ ಮಾತ್ರ. ಬಾವಿ ಕೆಳಗಡೆ ೯ ಎಕರೆ ಇದೆ. ಆದರೆ ೧೮ ಎಕರೆ ಲೋಕಲೈಜ್ಡ್ ಆಯಿತು ಎಂದು ಯಾವ ದೃಷ್ಟಿಯಿಂದ ಹೇಳುತ್ತಾರೋ ನನಗೆ ಗೊತ್ತಿಲ್ಲ. ೯ ಎಕರೆ ಲೋಕಲೈಜ್ ಆಗಿಲ್ಲ ಎಂದು ನನಗೆ ದಂಡ ಹಾಕಿದ್ದಾರೆ. ಅದು ಸರಿಯಲ್ಲ. ಅದೇ ರೀತಿ ಬೇರೆಯವರಿಗೂ ದಂಡ ಹಾಕಿದ್ದಾರೆ. ಲೋಕಲೈಜ್ಡ್ ಮಾಡಿರುವುದು ರೆಕಾರ್ಡ್ಸ್‌ನಲ್ಲಿ ಇರುವುದಿಲ್ಲ. ರಾಯಚೂರಿನಲ್ಲಿ ಕೆಲವರಿಗೆ ೬ ಪಟ್ಟು ದಂಡ ಮತ್ತೆ ಕೆಲವರಿಗೆ ನಾಲ್ಕು ಪಟ್ಟು ದಂಡ ಹಾಕಿರುತ್ತಾರೆ ಅಂತಹ ಸಂದರ್ಭದಲ್ಲಿ ಅಪೀಲ್ ಮಾಡಬಹುದೆಂದು ತಪ್ಪು ಕಲ್ಪನೆ ಮಾಡಿಕೊಂಡಿದ್ದಾರೆ. ಆದರೆ ಅಪೀಲ್ ಮಾಡಿದಾಗ ಕಾನೂನು ಪ್ರಕಾರ ದಂಡ ಹಾಕುವುದನ್ನು ಚಾಲೆಂಜ್ ಮಾಡುವ ಹಾಗಿಲ್ಲ. ಆದುದರಿಂದ ನಾಲ್ಕು ಪಟ್ಟು ಹತ್ತು ಪಟ್ಟು ಅಧಿಕಾರಿಗಳ ಮನಸ್ಸಿಗೆ ಬಂದ ಹಾಗೆ ಹಾಕಿದರೆ, ಅವರ ಮೇಲೆ ಅಪೀಲ್ ಮಾಡುವ ಅಧಿಕಾರ ಇರಬೇಕು. ಈ ರೀತಿ ಅಪೀಲಿಗೆ ಅವಕಾಶ ಮಾಡುವುದರಿಂದ ಯಾವ ತರಹ ಡಿಲೇ ಆಗುವುದಿಲ್ಲ. ಒಂದು ವೇಳೆ ಒಂದು ವರ್ಷ ೨೦ ಪಟ್ಟು ದಂಡ ಹಾಕಿದರೂ ಅದನ್ನು ಕೊಟ್ಟು ಬಿಟ್ಟು ಮುಂದಿನ ವರ್ಷವೂ ಅನ್ ಆಥರೈಸ್ಡ್ ಕಲ್ಟಿವೇಷನ್ ಮಾಡುವುದನ್ನು ಬಿಡುವುದಿಲ್ಲ. ಆದುದರಿಂದ ಅಪೀಲ್ ರೈಟ್ ಕೊಡುವುದರಿಂದ ತಡವಾಗುತ್ತದೆ ಎಂದು ಹೇಳುವುದು ಸರಿಯಲ್ಲ, ನೀವು ಏನು ದಂಡ ಹಾಕುತ್ತೀರಿ ಆ ದಂಡ ಹಾಕುವ ಅಧಿಕಾರಕ್ಕೆ ಲಗಾಮು ಇಲ್ಲ. ಮುನಸೀಫರು ಕಾಂಪಿಟೆಂಟ್ ಆಥಾರಟಿ ಅಲ್ಲ ಎಂದು ಶ್ರೀಕಂಠಯ್ಯನವರು ಹೇಳಿದರು. ಮುನಸೀಫ್ ಮಾಜಿಸ್ಟ್ರೇಟರಿಗೆ ಏತಕ್ಕೆ ಅಧಿಕಾರ ಕೊಡಬೇಕು ಎಂದು ಹೇಳುತ್ತೇನೆ. ಸರಕಾರದವರು ಲೋಕಲೈಜ್ಡ್ ಏರಿಯಾದ ಲಿಸ್ಟ್ ಕೊಡುತ್ತಾರೆ. the muncif Magistrate will come to the consulion whether he has used the water or not ಅನೇಕ ಕೇಸುಗಳಲ್ಲಿ ರೈಟಿಂಗ್‌ನಲ್ಲಿ ಇರುತ್ತವೆ. ಕೆಲವು ಕಾಗದ ಪತ್ರಗಳು ಇರುತ್ತವೆ ಚೀಫ್ ಇಂಜನೀಯರೇ ಆಗಲೀ ಇನ್ನೊಬ್ಬ ಅಧಿಕಾರಿಯೇ ಆಗಲಿ ಅದನ್ನು ನಿರ್ಧಾರ ಮಾಡುವುದಕ್ಕೆ ಸಾಧ್ಯವಿಲ್ಲ.

ಅದಕ್ಕೆ ಮುನ್‌ಸೀಫ್‌ನ್ನು ಸೆಲೆಕ್ಟ್ ಮಾಡಿದ್ದೇನೆ. ಅಧಿಕಾರಿಗಳು ಎಂದರೆ ಎಕ್ಸಿಕ್ಯೂಟಿವ್ ಇಂಜಿನಿಯರು ಇವತ್ತು ಒಬ್ಬರಿಗೆ ೬ ಟೈಂಸ್ ಹಾಕಬಹುದು. ಇನ್ನೊಬ್ಬರಿಗೆ ೧೦ ಟೈಂಸ್ ಹಾಕಬಹುದು. ಅವನು ತಪ್ಪುಮಾಡಿದ್ದಾನೆಯೇ, ಮೊದಲನೆ ತಪ್ಪು ಮಾಡಿದ್ದಾನೆಯೇ? ಎರಡನೇ ತಪ್ಪು ಮಾಡಿದ್ದಾನೆಯೇ? ಮೂರನೆ ತಪ್ಪು ಮಾಡಿದ್ದಾನೆಯೇ? ಎಂಬುದನ್ನು ನೋಡಬೇಕಾಗುತ್ತದೆಯೇ ಹೊರತು ಮುನ್ಸೀಫ್ ಮ್ಯಾಜಿಸ್ಟ್ರೇಟು ಟೆಕ್ನಿಕಲ್ಲಾಗಿ ನೋಡಬೇಕಾಗಿಲ್ಲ. ೩೨ರ ಪ್ರಕಾರ ದಂಡ ಹಾಕಬೇಕಾದರೆ ಇದರಲ್ಲಿ ೫ ರಿಂದ ೧೦ರವರೆಗೂ ಹಾಕಬಹುದು ಅಂತ ಇದೆ. ಈ ಒಂದು ಲಿಸ್ಟ್ ಪಬ್ಲಿಷ್ ಮಾಡುತ್ತಾರೆ, ಇಂತಿಂಥಾದ್ದು ಷುಗರ್ ಕೇನ್ ಲ್ಯಾಂಡ್, ಇಂತಿಂಥಾದ್ದು ಪ್ಯಾಡಿ ಲ್ಯಾಂಡು ಅಂತ ಹೇಳಿ ಕ್ರಾಪ್ ಪ್ಯಾಟ್ರನ್ ಡಿಟರ್‌ಮಿನ್ ಮಾಡುತ್ತಾರೆ. ಆ ಬಗ್ಗೆ ಮುನ್‌ಸೀಫ್ ಮ್ಯಾಜಿಸ್ಟ್ರೇಟರು ಎನ್‌ಕ್ವೈರಿ ಮಾಡಬೇಕಾಗಿಲ್ಲ, ಅದು ಗೆಜೆಟ್‌ನಲ್ಲಿ ಪಬ್ಲಿಷ್ ಆಗುತ್ತದೆ. ಒಂದು ಸಾರಿ ಲೋಕಲೈಸೇಷನ್ ಪ್ಯಾಟ್ರನ್ ಡಿಟರ್‌ಮಿನ್ ಮಾಡಿದ ಮೇಲೆ ಅದು ಖಚಿತ. ಎಷ್ಟು ಪಟ್ಟು ದಂಡ ಹಾಕಬೇಕೆನ್ನುವುದು ಏನಿದೆ ಅದಕ್ಕೆ ಅಪೀಲ್ ರೈಟ್ ಬೇಕಾಗಿದೆ. ಅನ್‌ಆಥರೈಸ್ಡ್ ಆಗಿ ಮಾಡಿದರೆ ನೀರಿಗೆ ತೊಂದರೆ ಬರುತ್ತದೆ ಎಂಬ ಮಾತು ಸರಿಯಾದ್ದಲ್ಲ. ೫ ರಿಂದ ಹತ್ತು ಪಟ್ಟು, ೧೦ ರಿಂದ ೩೦ ಪಟ್ಟು ದಂಡ ಹಾಕುವುದು ಏನಿದೆ ೨೮ (೪)ರ ಪ್ರಕಾರ ಆಗಲಿ ೩೪ (೨)ರ ಪ್ರಕಾರ ಆಗಲಿ ದಂಡ ಹಾಕತಕ್ಕ ಅಧಿಕಾರಿ ಮನಸ್ಸಿಗೆ ಬಂದಂತೆ ದಂಡ ಹಾಕಬಾರದು, ಹಾಕಿದರೆ ಅಪೀಲು ಹೋಗತಕ್ಕ ಅಧಿಕಾರ ಈ ಕಾಯಿದೆಯಲ್ಲಿ ಇರಲಿ ಅಂತ ಹೇಳಿದೆ ಅಷ್ಟೆ. ಇದಲ್ಲದೇ ಬೇರೆ ಆಕ್ಷನ್ ತೆಗೆದುಕೊಂಡರೆ ಅಭ್ಯಂತರ ಇಲ್ಲ. ಈ ಅಪೀಲು ಇರಬೇಕು ಅಂತ ನಾನು ಹೇಳುತ್ತಾ ಇರುವಾಗ ಇದರ ಸ್ಕೋಪು ಎಷ್ಟು ಅಂತ ಇನ್ನುವುದನ್ನು ತಾವು ತಿಳಿದುಕೊಂಡ ಹಾಗೆ ಕಾಣಲಿಲ್ಲ. ಆದ್ದರಿಂದ ಇದನ್ನು ಇನ್ನೊಂದು ಸಾರಿ ವಿವರಮಾಡಿ ಎಂದು ಹೇಳುತ್ತೇನೆ.

SRI L. SRIKANTAIAH:—Let us assume for the sake of argument that the water has been used unauthorisedly. The grievance of my learned friend is that the levying officer is not given criteria to judge as to what amount should be levied on the un-authorised user. If my learned friend's argument is regarding the quantum of the fine that should be

levied on the person and if he says that for the first time the fine should be 10 years' water rate, if he persists for the subsequent time, it should be 30 times and for the third year, treble that or 40 years' rate I would have accepted his amendment because the user has not cared to obey the orders of the Irrigation Officer. According to the amendment suggested by him, what happens is: the person is allowed to question the very decision of the Irrigation Officer; in which case the case will have to be taken *de novo*. That aspect is not clarified by my learned friend. His intention is to see that criteria should be fixed. Either way, the Bill is not acceptable as far as I can see. I agree with him that some sort of appeal should be provided for; but in what way and in which form, is the point where I beg to differ from him.

SRI M. NAGAPPA:—In a minute I will explain. Suppose a person is in a position to take irrigation facility in Gangavathi or Sindhnoor according to the Hyderabad Irrigation Act. The Tahsildars were the competent authorities and they have issued many Certificates localising lands. Now, the present authorities say that they are not going to honour those Letters. The question of doubt is: when there is an order passed by a competent authority under the then existing law, whether that is to be honoured or not by the subsequent authority. If the matter is there in appeal, definitely the Munsiff will be the only competent authority to give better judgment than any other executive authority. There is no question of technicality such as how to use water and how much has been used, etc. What the Munsiff has to see is whether any authority having powers under any of the provisions of the previous law. has given any permission or authorised certain lands or localised them and issued letters in their favour and whether they are not being honoured by the later authority. This has to be decided by the Munsiff alone because it involves interpretation of law with regard to the powers the previous Tahsildar was having. I submit that this point will come in such of the cases where different authorities have exercised different powers. In case Munsiff is removed from the amendment, "Irrigation Officers" have to be graded and defined so that the Assistant Engineer will deal only with certain cases, the Executive Engineer with certain other cases, the Superintending Engineer with certain other cases and the Chief Engineer with certain cases. Even then, these four Officers also cannot be the appellate authorities. There is another difficulty. If Hon. Members peruse the wording of the definition of 'Irrigation Officer, in Government Notification dated 31st December 1965, they will realise that it includes Assistant Engineer, Executive Engineer, Superintending Engineer and Chief Engineer: according to the Notification, all are Irrigation Officers. If that question comes, there will be conflict. The question is technical to the extent whether the Letter should be honoured and whether there is any justification for the Irrigation Officer to levy the fine, and if he is justified in what manner it should belevied; because it should not

(Sri M. NAGAPPA)

be levied in one manner from one person and in another manner from another person. For these reasons, there should be right of appeal aganst the orders of the Irrigation Officers levying fines for unauthorised use of water, etc. That is the only remedy for preventing arbitrary and indisdrimitate levy of fines. Apart from this solution, the difficulties of the usere of water cannot de removed.

†SRI D. PARAMESWARAPPA:—Sri, Sri Nagappa raised a new point that nowhere in the Act, 'unauthorised irrgation' is defined. The very term is self-explanatory. Unauthorised irrigation always presupposes that a man who is not authorised to utilise the water, has ntilised the water without any permission. That is the plain meaning of the words "unauthorised irrigation."

The second point that he raiaed was that several Officer, from Assistant Engineer to Chief Engineer, have been empowerad to function as Irrigation Officer. He asked why there are various categories of irrigation Officers and why there should not be uniformity. That is his contention. While appointiong certain officers as Irrigation Officers, the Government has taken into codsideration the magnitude of the projects. Supposing for a small irrigation project, there is an Assistant Engineer, for a very big irrigation project, the Chief Engineer will be the Irrigation Officer. It depends upon the magnitude of the project, the area and extent that has got to be brought under irrigation.

On this criterion, the Irrigation Officers have been appionted under this Act. Probably, the apprehension in the mind of my friend might be that orders of the Irrigation Officers are always arbitrary and the party is precluded from placing all the relevant documents before the Irrigation Officer. But I might tell the Hon. Member that before taking any decision in this regard the irrigation officer is expected to go into relevant reords, whether the land is localised land or whether the person draws water unauthorisedly; All these facts can be placed before the Officer and he ean look into all these records before levying any penalty on the party. Therefore, the apprehension that my friend entertains is not sustainable. For this reason I oppose the Amending Bill,

MR. SPEAKER:— The question is.—

"That Mysore Irrigation (Amendment) Bill, 1970, be taken into consideration"

The motion was negatived.

Calling Attention to matters of Urgent Public Importance

(1) Regarding irregular supply of Electricity to Udipi Taluk.

Sri BHASKER SHETTY (Kaup):— I call the attention of the Chief Minister to the irregular supply of electricity to Udipi Taluk.

Sri VEERENDRA PATIL (Chief Minister):—

At Hiriadka, there were two Nos. 110/33 KV. transformers supplying load to Udipi, Manipal, Coondapur, Kaup, Karkala, Bhatkal and other surrounding towns and villages. One of the transformers developed trouble and failed. There was no spare transformer available for replacement at Hiriadka. A substitute transformer in place of the failed one was released at Hubli and despatched to Hiriadka by road after much difficulty. The weight of this transformer was about 40 tonnes. Suitable railway booking could not be procured quickly. The 40 tonne transporter could not also negotiate the ghat sections between Hubli and Hiriadka. Therefore, it had to detour and proceed very slowly over a longer route. When the transformer reached Hiriadka, it was found that one of the oil valves of the transformer was damaged during transit and the transformer oil had drained away. These were made good. When this transformer was ready to be paralleled with the other healthy transformer in Hiriadka during February 1970 it was found that due to certain technical dissimilaritiee between the two units, the paralleling could not be done. Hence, thess transformers were operated as two separate systems-one system feeding Hiriadka-Udipi-Coondapur 33 KV. transmission line and the other system feeding Hiriadka Karkala 33 KV. transmission line. The former line had loads more than the capacities of one transformer, and hence, staggering on this section continued even after commissioning of the second transformer during February 1970 at Hiriadka. In order to over-come this difficulty, the construction of 2nd transmission line between Hiriadka and Udipi was taken up on emergent basis and this construction is now almost completed and the line will be charged during the 1st week of April 1970. After this line is serviced, the loading on the two transformers will be so apportioned that neither unit is over-loaded, and, therefore, normal conditions will prevail from the 1st week of April 1970. The inconveniences caused to the consumers of the area on account of the above technical difficulties is much regretted.

(i) *Re. Atrocities committed on one Sri Sri S. R. Prabhvwalkar by Khadebazaar Police Station, Belgaum.*

SRI B. B. SAYANAK (Belgaum):— I call the attention of the Chief Minister to the atrocities committed on Sri S. R. Prabhawalkar by the Police of Khadebazaar Police Station, Belgaum.

†SRI VEERENDRA PATIL:— It is reported that Shri Sadashiva Rama Prabhawalkar has filed a complaint in the Court of the Judicial

(Sri VEERENDRA PATIL)

Magistrate, First Class, Belgaum City, against some Police officials in connection with the alleged incident. The matter is, therefore, sub-judice.

SRI B. B, SAYANAK:— May I know whether the Government has given consent to file the cases?

SRI VEERENDRA PATIL:— I do not know whether the party has approached the Government seeking permission.

MR. SPEAKER:— Next call attention notice is by Sri S. Bangarappa Hon. Member is not present. Next notice is by Sri P. Venkatagiriappa Hon. member is not present.

(iii) Regarding Excesses Committed by authorities during he course of Land Revenue collection in Thamagondlu Town.

†SRI H. N. NANJE GOWDA (Arkalgud):— I call the attention of the Chief Minister to the excesses committed by the Tahsildar and Police of Nelamangala Taluk during the course of Land Revenue collection in Thamagondlu Town.

SRI VEERENDRA PATIL:— It is reported that the Thahasildar of Nelamangala Taluk started an intensive collection drive at Thyamagondlu on 24th March 1970 with the assistance of the Revenue staff including the Probationary Thahasildar, Taluk Sheristedar, the Head Clerk of the Taluk Office and others at the land revenue arrears ond water-rate demands in this village were heavy. In the course of his rounds, the Thahasildar contacted several of the defaulters and in cases where notices had not been served previously by his subordinate staff, he started getting the demand notices written on the spot and getting them served on defaulters. One of the persons he thus contacted was Shri T. V. Hanumantharaju, a sitting member of the Taluk Development Board Nelamangala (at 4-00 P.M.) as he had to pay more than Rs. 3,000 towards land revenue and water-rate arrears and also a sum of Rs. 2,080 towards loans. Besides, under the harvest levy rules, he was due to surrender levy paddy. Standing in front of his house, the Thahasildar sent for Shri Hanumantharaju and requested him to clear the arrears aforementioned. It is stated that Shri Hanumantharaju told the Thahasildar that he would pay the land revenue at his leisure, but would never pay the water-rate. Then the Thahasildar asked the Shanbogue to write out the demand notices and requested Shri Hanumantharaju to take service of these notices. He also informed him that in case the arrears were not paid in time, he would be obliged to take coercive proceedings by attaching movables

(ಶ್ರೀ ಹೆಚ್. ಎಂ. ನಂಜೇಗೌಡ)

ಮತ್ತು ಸೋಲೂರು ಸಿದ್ದಪ್ಪನವರು ನೆಲಮಂಗಲದ ಮುನಿಸಿಪಲ್ ಆಫೀಸಿನಲ್ಲಿ ಕುಳಿತುಕೊಂಡಿದ್ದರು ಎಂದು ಜನಜನಿತವಾಗಿದೆ. ನೆಲಮಂಗಲ ಮುನಿಸಿಪಲ್ ಆಫೀಸು ನ್ಯಾಷನಲ್ ಹೈವೇ ಮೇಲಿದೆ. ಶ್ರೀ ಹನುಮಂತರಾಜು ಎಂಬುವವರು ಪಿ. ಎಸ್. ಪಿ. ಸದಸ್ಯರು, ತಾಲ್ಲೂಕು ಬೋರ್ಡ್ ಸದಸ್ಯರು ಪಿ ಎಸ್. ಸದಸ್ಯರಾಗಿ ಆಲೂರು ಹನುಮಂತಪ್ಪ ಅವರಿಗೆ ಚುನಾವಣೆಗಳಲ್ಲಿ ವಿರೋಧ ಮಾಡಿದ್ದರು. ಇದನ್ನೆಲ್ಲ ಮನಸ್ಸಿನಲ್ಲಿಟ್ಟುಕೊಂಡು ಇಂಥ ಕೆಲಸವನ್ನು ಮಾಡಿದ್ದಾರೆ. ಚನ್ನಪಟ್ಟಣಕ್ಕೆ ಟ್ರಂಕ್ ಕಾಲ್ ಬುಕ್ ಮಾಡಿ, ಅಲ್ಲಿಂದ ಡೆಪ್ಯುಟಿ ಸೂಪರಿಂಟೆಂಡೆಂಟರನ್ನು ಕರೆಸಿಕೊಂಡು ಎಲ್ಲ ಕಾರುಬಾರು ಮಾಡಿದ್ದಾರೆ. ಇವರು ಯಾವ ಮನುಷ್ಯನಿಗೆ ಏನು ಮಾಡುತ್ತಾರೆಂದು ಹೇಳುವುದಕ್ಕಾಗುವುದಿಲ್ಲ. ಇಂಥ ಪ್ರಕರಣಗಳು ರಾಜ್ಯದಲ್ಲಿ ಹೆಚ್ಚಾಗಿ ಆಗುತಿ ವೆ. ಈ ಪ್ರಕರಣದ ಬಗ್ಗೆ ಜುಡಿಷಿಯಲ್ ಎನ್‌ಕ್ವೈರಿ ಆಗಬೇಕು. ಇದರಲ್ಲಿ ಮಂತ್ರಿಗಳು ಪಾತ್ರವಿರುವುದರಿಂದ ನ್ಯಾಯಾಂಗ ತನಿಖೆಗೆ ಒಪ್ಪಿಕೊಳ್ಳಬೇಕು. ಮತ್ತು ಆಲೂರು ಹನುಮಂತಪ್ಪ ಅವರನ್ನು ಮಂತ್ರಿ ಕೆಲಸದಿಂದ ತತ್ಕಾಲಕ್ಕೆ ಸಸ್‌ಪೆನ್‌ಷನ್‌ನಲ್ಲಿ ಇದ್ದ ಹಾಗೆ ಇಡಬೇಕು. ಇದರ ಬಗ್ಗೆ ಮುಖ್ಯ ಮಂತ್ರಿಗಳ ಉತ್ತರ ಏನು ಬರುತ್ತದೆ ಎಂದು ನಿರೀಕ್ಷೆ ಮಾಡುತ್ತಿದ್ದೇನೆ.

ಶ್ರೀ ವೀರೇಂದ್ರ ಪಾಟೀಲ್.—ಈ ಘಟನೆ ಬಗ್ಗೆ ನಾನು ಸವಿಸ್ತಾರವಾಗಿ ಸ್ಟೇಟ್‌ಮೆಂಟ್ ಮಾಡಿದ್ದೇನೆ. ಮಾನ್ಯ ಸದಸ್ಯರು ಇದನ್ನು ಬಿಟ್ಟು ಏನೋ ಹೇಳಲಿಕ್ಕೆ ಹೊರಟಿದ್ದಾರೆ. ಅದಕ್ಕೂ ಇದಕ್ಕೂ ಏನೂ ಸಂಬಂಧವಿಲ್ಲ. ಒಂದು ವೇಳೆ ಯಾರಾದರೂ ಅರಿಯರ್ಸ್ ಕೊಡುವುದಿದ್ದರೆ, ತಹಶೀಲ್ದಾರರು ಪ್ರೊಬೇಷನರಿ ತಹಶೀಲ್ದಾರರು ಶಿರಸ್ತೇದಾರರು ಇವರುಗಳು ಹೋಗಿ ತಗಾದೆ ಮಾಡಿದಾಗ ಅವರ ಕೆಲಸಕಾರ್ಯಗಳಿಗೆ ಅಡ್ಡಿ ಬಂದು, ಅವರಿಗೆ ತೊಂದರೆ ಮಾಡಿದಾಗ ಯಾವ ಸರ್ಕಾರವು ಕಣ್ಣುಮುಚ್ಚಿ ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ಕಾನೂನು ಪ್ರಕಾರ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಬೇಕಾಗುತ್ತದೆ. ಮಾನ್ಯ ಸಚಿವರಾದ ಆಲೂರು ಹನುಮಂತಪ್ಪನವರ ವಿರುದ್ಧ ಚುನಾವಣೆಗೆ ನಿಂತಿದ್ದರು, ರಾಜಕಾರಿಣಿ ಅವರಿಗೆ ಯಾವ ಕಾನೂನು ಅನ್ವಯವಾಗುವುದಿಲ್ಲ ಎಂದು ಇರುವುದಕ್ಕಾಗುವುದಿಲ್ಲ, ರಾಜಕಾರಿಣಿ ಆದರೆ ಏನು ಬೇಕಾದರೂ ಮಾಡಬಹುದು ಎಂದು ತಿಳಿದು ಕೊಂಡಿದ್ದರೆ ಅದು ಅವನ ತಪ್ಪು, ಅವರು ದೊಡ್ಡ ಜಮೀನ್ದಾರರಿದ್ದಾರೆ. ಐದು ಸಾವಿರ ರೂಪಾಯಿ ಬಾಕಿ ಇದೆ. ಬಡವನಾದರೆ ಆಫೀಸಿಗೆ ಕರೆಸಿ ವಸೂಲು ಮಾಡುತ್ತಿದ್ದರು, ಒಂದು ದಿವಸ ಕೂಡ ಬಿಡುವುದಿಲ್ಲ ಎಂದು ಇದೇ ಮಾನ್ಯ ಸದಸ್ಯರು ಹೇಳುತ್ತಾರೆ. ತಹಶೀಲ್ದಾರರು ಅವರ ಮನೆ ಹತ್ತಿರ ಹೋದರೆ ಅವರನ್ನು ಹೊಡೆದಿದ್ದಾರೆ, ಬಡಿದಿದ್ದಾರೆ, ಒದ್ದಿದ್ದಾರೆ, ಬುಷ್ ಷರ್ಟ್ ಎಲ್ಲ ಹರಿದು ಹಾಕಿದ್ದಾರೆ. ಅವರ ಹಿಂದೆ ಹೋದವರಿಗೆಲ್ಲರಿಗೂ ಇದೇ ರೀತಿ ಮಾಡಿದ್ದಾರೆ ಈ ರೀತಿಯಿಂದ ಈ ಹೊತ್ತು ಅಧಿಕಾರದಲ್ಲಿರುವಂಥ ಜನ ತಮ್ಮ ಕರ್ತವ್ಯವನ್ನು ನಿರ್ವಹಿಸುವುದಕ್ಕೆ ಹೋದಾಗ ಈ ರೀತಿ ಯಾರಾದರೂ ಮಾಡಿದರೆ, ತಿಳಿಯಲಾರದೆ ಮಾಡಿದ್ದಾರೆ, ಎಂದರೆ ಒಪ್ಪುವುದಕ್ಕಾಗುವುದಿಲ್ಲ. ಅವರು ದೊಡ್ಡ ಜಮೀನ್ದಾರರು. ಅವರಿಗೆ ಹಣ ಕೊಡುವುದಕ್ಕೆ ಎಲ್ಲ ಅನುಕೂಲಗಳು ಇರುತ್ತವೆ. ಇಂಥವರ ಬಗ್ಗೆ ಸಹಾನುಭೂತಿ ತೆಗೆದುಕೊಂಡದ್ದು ನನಗೆ ಆಶ್ಚರ್ಯವಾಗುತ್ತದೆ. ಈ ರೀತಿಯ ಜನರಿಗೆ ಯಾರೂ ಸಹಾನುಭೂತಿ ಪಡಬಾರದು.

ಶ್ರೀ ಎಚ್. ಎನ್. ನಂಜೇಗೌಡ.—ನನಗೆ ಗೊತ್ತಿದೆ, ನಾನು ಬೇಕಾದರೆ ಅಧ್ಯಕ್ಷರಿಗೆ ಪಟ್ಟಿ ಪುಸ್ತಕವನ್ನು ತೋರಿಸುತ್ತೇನೆ. ಲ್ಯಾಂಡ್ ರೆವಿನ್ಯೂ ಅರಿಯರ್ಸ್ ೧೯೬೬–೭೭ರದ್ದು ಮಾತ್ರ ಬಾಕಿ ಇದೆ. ಅದೂ ಕೂಡ ಅರಿಯರ್ಸ್‌ನಲ್ಲಿ ಬರುವುದಿಲ್ಲ. ವಾಟರ್ ರೇಟ್ ಅರಿಯರ್ಸ್ ಇದೆ. ೨೪ನೇ ತಾರೀಖು ಹೋಗಿ, ಡಿಮ್ಯಾಂಡ್ ನೋಟೀಸ್ ಸಹ ಮೊದಲು ಕೊಡದೆ ಸ್ಥಳದಲ್ಲಿ ಡಿಮ್ಯಾಂಡ್ ನೋಟೀಸ್ ಬರೆದುಕೊಟ್ಟಿದ್ದಾರೆ, ಮನೆ ಬಾಗಿಲಿನಲ್ಲಿ ನೋಟೀಸ್ ಕೊಟ್ಟು ಬಾಕಿ ಕೊಡದೆ ಇದ್ದರೆ ಅರೆಸ್ಟ್ ಮಾಡುತ್ತೇವೆ, ಇಲ್ಲದೆ ಇದ್ದರೆ ಜಫ್ತಿ ಮಾಡುತ್ತೇವೆ ಎಂದರೆ ಒಪ್ಪಿಕೊಳ್ಳುತ್ತೀರಾ? ಮುಖ್ಯ ಮಂತ್ರಿಗಳು ಹೇಳಿಕೆಯನ್ನು ಕೊಟ್ಟರು. ಜುಡಿಷಿಯಲ್ ಎನ್‌ಕ್ವೈರಿ ಆಗಬೇಕು ಎಂದು ಹೇಳಿದ್ದೇನೆ. ಆಲೂರು ಹನುಮಂತಪ್ಪನವರು ಮಾಡಿದ್ದನ್ನು ಕೇಳುತ್ತಿದ್ದೇನೆ, ಚನ್ನಪಟ್ಟದಿಂದ ಡೆಪ್ಯೂಟಿ ಸೂಪರಿಂಟೆಂಡೆಂಟರನ್ನು ಕರೆಸಿ ಎಲ್ಲ ಮಾಡಿರುವುದನ್ನು ಪ್ರಶ್ನೆ ಮಾಡುತ್ತಿದ್ದೇನೆ. ಜುಡಿಷಿಯಲ್ ಎನ್‌ಕ್ವೈರಿ ಏಕೆ ಮಾಡಬಾರದು ಎಂದು ಕೇಳುತ್ತಿದ್ದೇನೆ. ಮಾನ್ಯ ಮಂತ್ರಿಗಳ ಹೇಳಿಕೆಯಲ್ಲಿ ಯಾವ ಸತ್ಯಾಂಶವೂ ಇಲ್ಲ. ನೆಲಮಂಗಲದಲ್ಲಿ ಪೋಲೀಸ್ ಸ್ಟೇಷನ್ ಸಿಬ್ಬಂದಿ ಇದ್ದಾಗ್ಯೂ ನೆಲಮಂಗಲದಿಂದ ಸರ್ಕಲ್ ಇನ್‌ಸ್ಪೆಕ್ಟರನ್ನು ಕರೆದುಕೊಂಡು ಹೋಗಬೇಕಾದ ಪರಿಸಿ ತಿ ಏನಿತ್ತು? ಚನ್ನಪಟ್ಟದಿಂದ ಡೆಪ್ಯೂಟಿ ಸೂಪರಿಂಟೆಂಡೆಂಟರನ್ನು ಟ್ರಂಕ್ ಕಾಲ್ ಮಾಡಿ ಕರೆಸಬೇಕಾದ ಅವಶ್ಯಕತೆ ಏನಿತ್ತು? ಈ ವಿಚಾರಗಳನ್ನೆಲ್ಲ ಗಮನಕ್ಕೆ ತೆಗೆದುಕೊಳ್ಳದೆ ಸರ್ಕಾರಕ್ಕೆ

ಬಂದಿರುವ ವರದಿಯ ಪ್ರಕಾರ ಒಂದು ಹೇಳಿಕೆಯನ್ನು ಓದದೆ, ಅದರ ಮೇಲೆ ಅವಲಂಬಿಸದೆ ಏನು ಕ್ರಮ ತೆಗೆದುಕೊಳ್ಳುತ್ತಾರೆಂದು ಹೇಳಬೇಕು.

MR. SPEAKER —Hon. Chief Minister has nothing to add.

Sri H. N. NANJE GOWDA.—I do not understand why the circle Inspector of Nelamangala had arrested when there is a Police Station there. Let them explain it.

Mr. SPEAKER.—I cannot force the Hon. Chief Minister to speak.

Sri H. N. NANJE GOWDA.—I am convinced they want to protect their vested interest. It is a dereliction of duty on the part of the Minister

ನಾನು ಸಭೆಯ ಮುಂದೆ ಬಹಳ ಗಂಭೀರವಾದ ವಿಷಯವನ್ನು ಮಂಡಿಸುತ್ತಿದ್ದೇನೆ. ಸರ್ಕಾರದವರು ಏನು ಬೇಕಾದರೂ ಮಾಡಲಿ. ನಮ್ಮನ್ನು ಮಾತ್ರ ಅಧ್ಯಕ್ಷರು ಸುಮ್ಮನೆ ಕುಳಿತುಕೊಳ್ಳಿ ಎಂದರೆ ಕುಳಿತು ಕೊಳ್ಳಬೇಕೆ ? ನಾವು ಕೊಡತಕ್ಕ ಮೋಷನ್‌ಗಳನ್ನು ರೂಲ್ಸ್ ಪ್ರಕಾರವೇ ಕೊಟ್ಟಾಗೂ ತಾವು ಅವುಗಳನ್ನು ತಮಗೆ ಬೇಕಾದಂತೆ ಬದಲಾವಣೆ ಮಾಡಿಕೊಳ್ಳುತ್ತಿದ್ದೀರಿ. ನಾಳೆ ಸರ್ಕಾರದವರು ನಮ್ಮನ್ನೂ ನಿಮ್ಮನ್ನೂ ಎಲ್ಲರನ್ನೂ ಅರೆಸ್ಟ್ ಮಾಡಬಹುದಲ್ಲವೆ ? ಅವರು ಅವರ ಕಾಂಗ್ರೆಸ್ ಫಂಡಿಗೆ ದುಡ್ಡನ್ನು ಕಲೆಕ್ಟ್ ಮಾಡು ವುದಕ್ಕೆ ಹೊರಟಿದ್ದಾರೆ. ಹಾಗೆ ದುಡ್ಡನ್ನು ಕೊಡಬೇಡಿ ಎಂದು ಹೇಳಿದರೆ ಅವರು ಹಾಗೆ ಹೇಳತಕ್ಕವರನ್ನು ಏನಾದರೂ ಕಾರಣ ಕೊಟ್ಟು ಅರೆಸ್ಟ್ ಮಾಡಿಸಬಹುದಲ್ಲವೇ ?

Mr. SPEAKER :—This is the procedure in regard to call-attention notice; when an Hon. Member calls the attention of a Minister to a matter of urgent public importance the Minister makes a brief Statement. In fact there is no provision for clarifications. Even then, I used to permit one or two members to seek clarifications. The Hon. Minister says that there is nothing to add to what has already been stated. In view of the fact that the matter is sub judice, no further discussion can be allowed.

IV re: the errors in vuestion paper in English and Urdu version of District level VIIth Standard.

Sri AZEEZ SAIT :—Sir, I call the attention of the Minister for Eduction to the errors that have crept into Social Studies question paper in English and Urdu version of the District Level VII Standard Examination.

‡Sri K. V. SHANKARA GOWDA (Minister for Education).—

Sir, With reference to Call Attention Notice No. 135 by Shri Azeez Sait, I beg to make the following statement:

It is true that certain regrettable errors have crept into the Social Studiers question paper in English and Urdu versions at the District

(Sri K. V. SHANKAR GOWDA)

Level VII Standard Examination held in Mysore District on 26th March 1970. The following are the circumstances under which the errors crept in :

2. On the reverse of some copies of the question paper pertaining to Mother Tongue Kannada First Paper held on 20th March 1970, questions pertaining to the Social Studies paper scheduled to be held on 26th March 1970 came to be printed, owing entirely to a serious fault on the part of the Printers. As soon as this was noticed, it became imperative for District authorities in Mysore to get a fresh question paper in Social Studies prepared in five different versions, *viz.*, English, Kannada, Urdu, Hindi and Tamil. Therefore, the Paper setter for Social Studies was summoned on the 20th night and asked to set another paper in Social Studies in Kannada language. Translators in respect of English, Urdu, Hindi and Tamil were also summoned to translate the new question paper into the respective languages. All this had to be done overnight, so that the new question paper could be got printed in Bangalore the following day and arrangement made for distributing the new papers in 114 Centres throughout the District well in time before the examination on 26th March 1970. It is most unfortunate that in the extreme hurry in which the job was undertaken, certain serious errars crept into both the Urdu and the English versions of the question paper.

3. It is also ture that in the Urdu version question paper, no reference is made to the fact that the candidates were expected to answer three out of five items given in question I, thereby denying the choice to Urdu medium students. However, instructions have been given to the valuers that the benefit of choice could be given to the best advantage of the students while valuing.

4 The root cause for the trouble has been the carelessness of the private printer who printed mother tongue Kannade first paper. If he had not allowed the social studies questions to be revealed on the reverse of some of these papers, there would have been no occosion to get a fresh question paper set in social studies on a rush basis and all these mistakes could have been averted. The Printer is being called upon to make good the loss incurred in setting and distributing a separate question paper for Social Studies. The question of taking other punitive action against the Printer will also be considered.

In saying all this, I may not be misunderstood as holding any brief for the persons responsible for the lamentable mistakes that have entered into the English and Urdu versions of the Social Studies paper. I shall certainly initiate suitable corrective action so that such things do not recur. However, the House will appreciate that both the paper Setter and the Translators came to the rescue of the administration to meet an emergent situation caused by the revealing of the Social Studies

Questions on 20th March 1970. They were obliged to work overnight to avoid embarrassment to the district education authorities. This mitigating circumstance will also have to be kept in mind at the time of taking action against the persons responsible for the mistakes.

Sri AZEEZ SAIT :—Sir, with due respects and regards to the Hon'ble Minister, though he was good enough to state the true facts, he is not so charitable as I expected. He has accepted the mistake on the part of the Department, He has stated in his reply :

> " It is most unfortunate that in the extreme hurry in which the job was undertaken, certain serious errors crept in to both the Urdu and the English versions of the question paper.
>
> It is also true that in the Urdu version question paper, no reference is made to the fact that the candidates were expected to answer three out of five items given in question 1, thereby denying choice to Urdu medium students. However, instructions have been given to the valuers that the benefit of choice could be given to the best advantage of the students while valuing "

But, so far as Kannada is concerned, the first basic complaint is that the questions set are of a very high standard, for instance about bank notionalisation, who was the Captain of the Cricket team of Australia in 1956, etc. Will the Hon'ble Minister tell me who was the President of the World Bank in 1956 without referring to records ? How can VII Standard Students answer such high standard questions ?

Further, what I want to say is to take all these aspects into consideration sympathetically and see that one year of the students is not lost which would otherwise mean a burden on their parents. I want the Hon. Minister also to see that some grace marks are given to the students.

SRI K. V. SHANKARA GOWDA :— Sir, usually questions are asked on the topics that have been taught in the class. In any case, if the questions are really of high standard and if the questions are not on the topics taught in the class, I will take all steps to see that proper grace marks are added and sufficient number of students get through in the VII standard examination.

ಶ್ರೀ ಎಸ್. ಬಂಗಾರಪ್ಪ :— ಅಧ್ಯಕ್ಷರೇ, ಈಗ ೭ನೇ ಸ್ಟ್ಯಾಂಡರ್ಡ್ ಪರೀಕ್ಷೆಯ ವಿಷಯ ಬಂದಿದ್ದರಿಂದ ಒಂದು ಮಾತನ್ನು ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಬೇಕಾಗಿದೆ. ನಿನ್ನೆ ದಿವಸ ಸಭೆ ನಡೆಯುತ್ತಾ ಇದ್ದುದರಿಂದ ಕೇಳುವುದಕ್ಕೆ ಅವಕಾಶ ಸಿಕ್ಕಲಿಲ್ಲ. ಈ ದಿವಸ ನಾನು ಹೇಳುವ ವಿಷಯ ಮೊನ್ನೆ ದಿವಸದ ಪತ್ರಿಕೆಯಲ್ಲಿಯೂ ಬಂದಿದೆ. ಶಿವಮೊಗ್ಗಾದಲ್ಲಿ ಪಿಯುಸಿ ಪರೀಕ್ಷೆಯಲ್ಲಿ ಕೊಶ್ಚನ್ ಪೇಪರ್ ಕೊಟ್ಟಾಗ ಮೊದಲನೇ ಪುಟದಲ್ಲಿ ಮಾತ್ರ ಎಷ್ಟು ಪ್ರಶ್ನೆ ಇತ್ತೋ ಅಷ್ಟು ಮಾತ್ರ ಪ್ರಿಂಟ್ ಆಗಿ, ೨,೩,೪ ನೇ ಪುಟದಲ್ಲಿ

(ಶ್ರೀ ಎಸ್. ಬಂಗಾರಪ್ಪ)

ಬಾಕಿ ಪ್ರಶ್ನೆಯೇ ಪ್ರಿಂಟ್ ಆಗಿರಲಿಲ್ಲ ಆ ಪೇಪರನ್ನು ಒಬ್ಬ ವಿದ್ಯಾರ್ಥಿಗೆ ಕೊಟ್ಟಿದ್ದರು. ಈ ವಿಚಾರ ನಿನ್ನೆ ದಿವಸ ನನಗೆ ಗೊತ್ತಾಯಿತು. ಆದುದರಿಂದ ಇದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ಎಂಬುದನ್ನು ತಿಳಿಸಬೇಕು ಆ ವಿದ್ಯಾರ್ಥಿಗೆ ಪುನಃ ರೀಎಕ್ಸಾಮಿನ್ ಮಾಡುತ್ತೀರಾ ಅಥವಾ ಯಾವ ರೀತಿಯಾಗಿ ಆ ವಿದ್ಯಾರ್ಥಿಯನ್ನು ತೇರ್ಗಡೆ ಮಾಡುವುದಕ್ಕೆ ಏರ್ಪಾಡು ಮಾಡುತ್ತೀರಿ ಎಂಬುದನ್ನು ದಯವಿಟ್ಟು ತಿಳಿಸಬೇಕು.

ಶ್ರೀ ಕೆ. ವಿ. ಶಂಕರಗೌಡ :— ಮಾನ್ಯ ಸದಸ್ಯರು ಹೇಳಿದ್ದು ನಿಜವಾಗಿದ್ದ ಪಕ್ಷದಲ್ಲಿ ಅದಕ್ಕೆ ಏನೇನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದರಂತೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ.

EDUCATION CONCESSIONS IN THE STATE IN VIEW OF IMPLEMENTATION OF FAMILY PLANNING.

† ಶ್ರೀ ಹೆಚ್. ಎನ್. ನಂಜೇಗೌಡ :— ಸ್ವಾಮಿ, ೩೭೨ನೇ ರೂಲ್ಸ್ ಪ್ರಕಾರ ಈ ಸಭೆಯ ಹಾಗೂ ಸರ್ಕಾರದ ಗಮನವನ್ನು ಸೆಳೆಯ ಬಯಸುತ್ತೇನೆ. ಅದು ಏನೆಂದರೆ ವಿದ್ಯಾ ಮಂತ್ರಿಗಳ ಇಲಾಖೆಯಿಂದ ಒಂದು ಆರ್ಡರನ್ನು ಹೊರಡಿಸಿದ್ದಾರೆ. G.O No. ED. ೧೩೩ CS ೬೯, ಈ ಹುಕುಂ ಪ್ರಕಾರ ೪ನೇ ಮಗು ಆದರೆ ಅವರಿಗೆ ಸರ್ಕಾರದ ಶಿಕ್ಷಣ ಸೌಲಭ್ಯ ಕೊಡಕೂಡದು ಎಂದು ಹೊರಡಿಸಿದ್ದಾರೆ. ಈ ಎಜುಕೇಷನ್ ಕನ್ಸಿಷನ್ ಕೇಳುವವರು ಬಡವರು. ಅವರಿಗೆ ಸಾಮಾನ್ಯವಾಗಿ ಸಾಮಾಜಿಕ ಪ್ರಜ್ಞೆ ಕಡಿಮೆ. ಇದರ ಬಗ್ಗೆ ಅವರಿಗೆ ಸಮಾಜದಲ್ಲಿ ತಿಳುವಳಿಕೆ ಕೊಟ್ಟು ಸಾಮಾಜಿಕ ಭಾವನೆಗಳ ಬಗ್ಗೆ ರೂಢಿತವಾಗುವುದಕ್ಕೆ ಏನು ಬೇಕೋ ಅಂತಹ ಕಾರ್ಯಕ್ರಮಗಳನ್ನು ತೆಗೆದುಕೊಂಡಿಲ್ಲ. ಒಂದು ರೀತಿಯಲ್ಲಿ ಹೇಳುವುದಾದರೆ ನಮ್ಮ ದೇಶದ ಪಾಪ್ಯುಲೇಷನ್ ಬಗ್ಗೆ ಅವರಿಗೆ ಅಜ್ಞಾನ ಇದೆ ಎಂದು ಹೇಳಿದರೆ ತಪ್ಪಾಗಲಾರದು. ೪ನೇ ಮಗು ಆದ ಕೂಡಲೆ ಅಂತಹವರಿಗೆ ಯಾವ ತರಹ ಎಜುಕೇಷನ್ ಕನ್ಸಿಷನ್ ಕೊಡುವುದಿಲ್ಲ ಎಂದು ಆಜ್ಞೆಯಲ್ಲಿ ಹೇಳಿದೆ. ಸಾಮಾನ್ಯವಾಗಿ ಇದರಲ್ಲಿ ಷೆಡ್ಯೂಲ್ ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ಸ್‌ನವರೂ ಸೇರಿರುತ್ತಾರೆ ಅವರಿಗೂ ಇದು ಅನ್ವಯವಾಗುತ್ತದೆಯೇ ಎಂದು ನಾನು ಈ ಸಭೆಯ ಗಮನವನ್ನು ಸೆಳೆಯ ಬಯಸುತ್ತೇನೆ. ಹಣವಂತರು ಎಷ್ಟು ಮಕ್ಕಳಾದರೂ ಮಾಡಿಕೊಳ್ಳಬಹುದು ಹಣ ಇಲ್ಲದೇ ಇದ್ದವರು ಮಕ್ಕಳನ್ನು ಕಡಿಮೆ ಮಾಡಿಕೊಳ್ಳಬೇಕು ಅವರಿಗೆ ಜಾಸ್ತಿ ಮಕ್ಕಳು ಹುಟ್ಟಿಕೊಂಡರೆ ಆ ಮಕ್ಕಳ ವಿದ್ಯಾಭ್ಯಾಸಕ್ಕೆ ಡಿಸ್‌ಕರೇಜ್ ಮಾಡಿದ್ದೀರಿ.

ಇನ್ನೊಂದು ವಿಷಯ ಏನೆಂದರೆ ಅವರಿಗೆ ಎಷ್ಟು ಮಕ್ಕಳು ಇವೆ ಎಂದು ಆ ಕ್ಷೇತ್ರದ ಎಂ.ಎಲ್.ಎ. ಅಥವಾ ಎಂ.ಎಲ್.ಸಿ. ಅವರಿಂದ ಸರ್ಟಿಫಿಕೇಟ್ ಮಾಡಿಸಬೇಕು ನಾವು ಸಾರ್ವಜನಿಕ ಸಂಸ್ಥೆಯಲ್ಲಿರುವ ವಿಷಯ ತಮಗೆ ಗೊತ್ತೇ ಇದೆ. ನಾವು ಒಂದು ಲಕ್ಷ ಪ್ರತಿನಿಧಿಗಳಿಂದ ಆರಿಸಿ ಬಂದಿದ್ದೇವೆ. ಅವರು ಯಾವುದಾದರೂ ನಮ್ಮಿಂದ ಸರ್ಟಿಫಿಕೇಟ್ ಬೇಕು ಎಂದು ಕೇಳಿದರೆ ನಾವು ಕೊಡಲೇ ಬೇಕು. ಇಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ನಾವು ಯಾವಾಗಲೂ ಸಾರ್ವಜನಿಕ ಸಂಸ್ಥೆಗಳಲ್ಲಿ ಕೆಲಸ ಮಾಡಲೇ ಬೇಕು. ಈ ವಿಚಾರ ತಮಗೂ ಗೊತ್ತಿದೆ. ಸಂದರ್ಭ ಹೀಗಿರುವಾಗ ಕೆಲವರು ೬ ಮಕ್ಕಳು ಇದ್ದರೂ ೩ ಮಕ್ಕಳು ಇದ್ದಾರೆ ಎಂದು ಹೇಳಿ ಬರೆಸಿಕೊಂಡು ಬಿಡುತ್ತಾರೆ. ನಾವು ಏನೋ ೩ ಮಕ್ಕಳು ಇರಬಹುದೆಂದು ಸರ್ಟಿಫಿಕೇಟ್ ಕೊಟ್ಟು ಬಿಡುತ್ತೇವೆ. ಒಂದು ವೇಳೆ ಯಾವುದಾದರೂ ಸಂದರ್ಭದಲ್ಲಿ ಇದು ಕೋರ್ಟಿಗೆ ಹೋದರೆ ಆಗ ಈ ವಿಷಯ ಬಹಳ ಕಷ್ಟವಾಗುತ್ತದೆ. ಆದುದರಿಂದ ಈ ಹುಕುಂ ಇರತಕ್ಕದ್ದು ಸರಿಯಲ್ಲ ಎಂದು ಹೇಳುತ್ತೇನೆ. ಅದಕ್ಕೆ ನನ್ನ ಸಲಹೆ ಏನೆಂದರೆ ಮಕ್ಕಳು ಕಡಿಮೆ ಇದ್ದವರಿಗೆ ಬಹುಮಾನ ಕೊಟ್ಟು ಕನ್‌ಸೆಷನ್ ಕೊಡಿ. ಅದು ಯಾವ ರೀತಿ ಎಂದರೆ ಮಕ್ಕಳು ಇಲ್ಲದೇ ಇರುವವರಿಗೆ ಒಂದು ಅಂಬಾಸಿಡರ್ ಕಾರ್ ಬಹುಮಾನ ಕೊಡಿ, ಒಂದೇ ಒಂದು ಮಗು ಇರುವವರಿಗೆ ಒಂದು ಮೋಟಾರ್ ಸೈಕಲ್ ಬಹುಮಾನ ಕೊಡಿ, ಎರಡು ಮಕ್ಕಳು ಇರುವವರಿಗೆ ಒಂದು ಸೈಕಲ್ ಬಹುಮಾನ ಕೊಡಿ. ಹೀಗೆ ಬೇಕಾದರೆ ಪ್ರೋತ್ಸಾಹ ಕೊಟ್ಟು ಮಕ್ಕಳು ಕಡಿಮೆ ಮಾಡಿಸುವುದಕ್ಕೆ ಪ್ರಯತ್ನ ಮಾಡಿ ಮಕ್ಕಳು ಜಾಸ್ತಿ ಇದ್ದರೆ ಪನಿಷ್ ಮಾಡುತ್ತೇವೆ ಎಂದು ಈಗ ನೀವು ಮಾಡಿರುವುದು ನೋಡಿದರೆ ಇದರಿಂದ ಸಮಾಜಕ್ಕೆ ಅನ್ಯಾಯವಾಗುತ್ತದೆ. This amounts to an antisocial order. ಹಿಂದೆ ಇದನ್ನು ಒಂದು ಸಾರಿ ತಡೆ ಹಿಡಿದಿದ್ದಿರಿ. ಈಗಲೂ ಇದನ್ನು ತಡೆಹಿಡಿಯುವುದು ಯೋಗ್ಯ ಎಂದು ನನಗೆ ಅನಿಸುತ್ತದೆ. ಫ್ಯಾಮಿಲಿಪ್ಲಾನಿಂಗ್‌ನಲ್ಲಿ ಇದನ್ನು ಪ್ರಯೋಗಕ್ಕೆ ತರಬೇಕಾದರೆ

ಇದಕ್ಕೆ ಇನ್ನೂ ಕಾನೂನು ಮಾಡಿಲ್ಲ. ಮಕ್ಕಳು ಇಷ್ಟೇ ಆಗಬೇಕು ಎಂಬುದಾಗಿ ಫ್ಯಾಮಿಲಿ ಪ್ಲಾನಿಂಗ್‌ನಲ್ಲಿ ಸಂತಾನ ನಿರೋಧ್ ಮಾಡಬೇಕು. ಇದಕ್ಕೂ ಕಾನೂನು ಆಗಿಲ್ಲ. ಸರಕಾರ ಈ ರೀತಿ ಮಾಡುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಇದರ ಬಗ್ಗೆ ತಕ್ಕ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ

ಶ್ರೀ ಎಲ್. ಶ್ರೀಕಂಠಯ್ಯ:—ಮಾನ್ಯ ಸದಸ್ಯರಾದ ಶ್ರೀ ನಂಜೇಗೌಡರು ಹೇಳಿರುವುದರ ಬಗ್ಗೆ ನಾನು ಒಂದು ಕಾಂಪ್ರಮೈಸ್ ರೀತಿಯಲ್ಲಿ ಒಂದು ಸೂಚನೆ ಮಾಡುತ್ತೇನೆ. ಸರಕಾರಿ ನೌಕರರುಗಳಿಗೆ ಮಾತ್ರ ಇದು ಅನ್ವಯವಾಗಬೇಕು ಎಂದು ಇದರಲ್ಲಿ ಹೇಳುತ್ತಿದ್ದಾರೆ. ಫ್ಯಾಮಿಲಿ ಪ್ಲಾನಿಂಗ್ ಕಾನೂನು ಜಾರಿಗೆ ಬರುವುದಕ್ಕೇ ಮೊದಲು ಹೆಚ್ಚು ಮಕ್ಕಳಾಗಿದ್ದರೆ ಏನು ಮಾಡುವುದು ? ಇನ್ನು ಮೇಲೆ ಅವರಿಗೆ ಮೂರು ಮಕ್ಕಳಾಗಬಾರದು ಎಂದು ಸರ್ಕಾರದವರು ನಿಗದಿ ಮಾಡಿದ್ದಾರೆಯೇ ? ಮತ್ತು ಯಾವ ತಾರೀಖಿನಿಂದ ಇದನ್ನು ಜಾರಿಗೆ ತರಬೇಕೆಂದು ಮಾಡಿದ್ದಾರೆ ಮತ್ತು ಇದನ್ನು ಜನರಿಗೆ ತಿಳಿಸಲು ಸಾಕಷ್ಟು ಅವಕಾಶ ಕೊಡಲಾಗಿದೆಯೇ ?

೪-೩೦ P M.

† ಶ್ರೀ ಕೆ ವಿ ಶಂಕರಗೌಡ:—ಸ್ವಾಮಿ. ಈ ಒಂದು ಕಾನೂನನ್ನು ಇಂಡಿಯಾ ಸರಕಾರದ ಆದೇಶದ ಮೇಲೆ ಮಾಡಿರತಕ್ಕದ್ದು. ಇಂತಹ ಕಾನೂನು ಬೇರೆ ರಾಜ್ಯಗಳಲ್ಲೂ ಜಾರಿಗೆ ಬಂದಿದೆ. ಮಹಾರಾಷ್ಟ್ರ ಸರಕಾರದಲ್ಲಿ ಇದು ಜಾರಿಯಲ್ಲಿದೆ. ಇದರ ಪ್ರಕಾರ ೧ನೇ ಜೂನ್ ೧೯೭೦ ನೇ ತಾರೀಖಿನ ಮೇಲೆ ಮೂರು ಮಕ್ಕಳ ಮೇಲೆ ಆದರೆ ಅಂತಹವರಿಗೆ ಇದರ ರಿಯಾಯತಿಗಳು ಸಿಗುವುದಿಲ್ಲ. ಮತ್ತು ಮೂರು ಮಕ್ಕಳಿರುವವರಿಗೆ ಮಾತ್ರ ಇದರ ರಿಯಾಯಿತಿಗಳು ಸಿಗುತ್ತವೆ ಎಂದು ಎಲ್ಲರಿಗೂ ಪ್ರಕಟಣೆಗಳ ಮೂಲಕ ಹಾಗೂ ರೇಡಿಯೋ ಮೂಲಕ ಪ್ರಚಾರ ಮಾಡಲಾಗಿದೆ. ಫ್ಯಾಮಿಲಿ ಪ್ಲಾನಿಂಗನ್ನು ಜಾರಿಗೆ ಕೊಡಬೇಕಾದರೆ ಇಂತಹ ಒಂದು ಕಾನೂನು ಇರಬೇಕು. ಇದರಿಂದೇನೂ ಅಂತಹ ತೊಂದರೆಗಳಾಗುವುದಿಲ್ಲ. ಇದರಲ್ಲಿ ಮಾನ್ಯ ಸದಸ್ಯರು ಹೇಳಿದ ಹಾಗೆ ಇದರಿಂದ ಬಡವರಿಗೆ ಅನಾನುಕೂಲಗಳಾಗುತ್ತವೆ ಎನ್ನುವ ಪ್ರಶ್ನೆ ಇದರಲ್ಲಿ ಉದ್ಭವಿಸುವುದಿಲ್ಲ. ಹೆಚ್ಚಿಗೆ ಮಕ್ಕಳು ಆಗಬೇಕೆಂದು ಯಾರೂ ಕಾತರರು ಆಗಿಲ್ಲ. ಇದರಲ್ಲಿ ಮಕ್ಕಳು ಕಡಿಮೆ ಇದ್ದರೆ ಅವರ ಸಂಸಾರ ಚೆನ್ನಾಗಿರುತ್ತದೆ. ಮಕ್ಕಳು ಹೆಚ್ಚಾಗಿದ್ದರೆ ಅವರ ಸಂಸಾರ ಕಷ್ಟವಾಗುತ್ತದೆ. ದೇಶದಲ್ಲಿ ಇಂದು ಪ್ರಜಾ ಸಮಸ್ಯೆ ಬಹಳ ಬೃಹದಾಕಾರವಾಗಿ ಬೆಳೆಯುತ್ತಿದೆ. ಇದೊಂದು ದೊಡ್ಡ ಪ್ರಶ್ನೆಯಾಗಿದೆ ಇದಕ್ಕೆ ಆದಷ್ಟು ಜಾಗ್ರತೆ ಪ್ರಜಾ ಸಂಖ್ಯೆಯನ್ನು ತಡೆಗಟ್ಟಲು ತಕ್ಕ ಕ್ರಮ ತೆಗೆದುಕೊಳ್ಳುವುದು ಅವಶ್ಯಕ. ಇದಕ್ಕಾಗಿ ಒಂದು ಕಾನೂನನ್ನು ಜಾರಿಗೆ ತರಬೇಕಾದುದು ಅಗತ್ಯ.

ಶ್ರೀ ಎಲ್. ಶ್ರೀಕಂಠಯ್ಯ :—ಸ್ವಾಮಿ ರಷ್ಯಾದೇಶದಲ್ಲಿ ಒಂಬತ್ತು ಮಕ್ಕಳಾದರೆ ಅಲ್ಲಿಯ ಸರಕಾರ ಅವರಿಗೆ ಪುರಸ್ಕಾರ ಕೊಟ್ಟು ಬಹುಮಾನ ಕೊಡುತ್ತಾರೆ. ಇಲ್ಲೇಕೆ ಸ್ವಾಮಿ ತಾವು ಹೀಗೆ ಮಾಡುತ್ತೀರಿ?

ಶ್ರೀ ಕೆ.ವಿ. ಶಂಕರಗೌಡ : ರಷ್ಯಾದೇಶದಲ್ಲಿರುವ ವಿಸ್ತೀರ್ಣ ನಮ್ಮಲ್ಲಿ ಇರುವುದಕ್ಕೆ ಐದರಷ್ಟು ಇರುತ್ತದೆ. ಅವರಲ್ಲಿ ಪ್ರಜಾ ಸಂಖ್ಯೆ ಕಡಿಮೆ. ಹೆಚ್ಚು ಮಕ್ಕಳಾಗಬೇಕು ಎಂದು ಮಾಡಿದ್ದಾರೆ. ಅವರ ದೇಶ ಇರುವಷ್ಟು ವಿಸ್ತೀರ್ಣ ನಮ್ಮ ದೇಶದಲ್ಲಿಲ್ಲ. ನಮ್ಮಲ್ಲಿರುವ ವಿಸ್ತೀರ್ಣ ಕಡಿಮೆಯಾಗಿದೆ.

Sri. B.B. SAYNAK:-If a Goveranment servant has more than three children, he is not entitled to get facilities: I want to ask if he has already two children and at the third delivery there is twin born, that will be the fate of the fourth ?

Sri K. V. SHANKARA GOWDA :—That will be treated as three children

ಶ್ರೀ ಎಲ್. ಶ್ರೀಕಂಠಯ್ಯ:—ಹಿಂದೆ ಕುಟುಂಬ ಯೋಜನೆ ಸಾಧಿಸದೆ ತಪ್ಪು ಮಾಡಿದವರಿಗೆ ಈಗ ಶಿಕ್ಷೆ ವಿಧಿಸಬೇಡಿ.

ಶ್ರೀ ರಾಮಕೃಷ್ಣ ಹೆಗ್ಗಡೆ.—ಈ ವಯಸ್ಸಿನಲ್ಲಿ ನಮ್ಮ ಪ್ರೊಫೆಸರ್‌ರವರು ಏಕೆ ಮಕ್ಕಳನ್ನು ಜಾಸ್ತಿ ಮಾಡುತ್ತಾರೆ ? (ನಗು)

ಶ್ರೀ ಎಸ್. ಬಂಗಾರಪ್ಪ:—ಮಕ್ಕಳು ಜಾಸ್ತಿ ಮಾಡುವುದನ್ನು ಹಿರಿಯ ಮಂತ್ರಿಗಳಿಗೆ ಬಿಡದೇ ಚಿಕ್ಕ ವಯಸ್ಸಿನ ಮಂತ್ರಿಗಳಿಗೇ ಬಿಡಿ.

ಶ್ರೀ ಹೆಚ್. ಎನ್. ನಂಜೇಗೌಡ:—ಮಾನ್ಯ ಮಂತ್ರಿಗಳು ಹೇಳುವ ಹಾಗೆ ಈ ಪಾಪ್ಯುಲೇಷನ್ ಸಮಸ್ಯೆ ಬಹಳ ದೊಡ್ಡದು ಎನ್ನುವುದನ್ನು ನಾನೂ ಒಪ್ಪಿಕೊಳ್ಳುತ್ತೇನೆ. ಈಗ ಮೂರು ಮಕ್ಕಳು ಆದ ಮೇಲೆ ಮಕ್ಕಳು ಆಗಕೂಡದು ಎಂದು ಹೇಳಿದರೆ ಇದು ಆಗದ ರೀತಿಯಲ್ಲಿ ಇದಕ್ಕೆ ತಕ್ಕ ಒಂದು ವಾತಾವರಣವನ್ನು ನಾವು ಸೃಷ್ಟಿಸಬೇಕಾಗಿದೆ ಮತ್ತು ಇದಕ್ಕೆ ತಕ್ಕ ಸಾಕಷ್ಟು ಸೌಲಭ್ಯಗಳನ್ನು ಕೊಡುವ ಏರ್ಪಾಡು ಮಾಡಬೇಕು. ಇಲ್ಲೇನೋ ಮಾನ್ಯ ಮಂತ್ರಿಗಳು ಒಂದು ಪ್ರಪೋಸಲ್ ಎಂದು ಇನ್ನೊಂದು ವರ್ಷದ ಮೇಲೆ ಹೆಚ್ಚು ಮಕ್ಕಳಾದರೆ ಅಂತಹವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದರೆ ಇದು ಸರಿಯಾಗುತ್ತದೆಯೇ ? ನಿಮ್ಮ ಹತ್ತಿರ ಇಷ್ಟೊಂದು ಕೃಪಾಸಿಟಿ ಇದೆಯೇ ಎಂದು ಇಲ್ಲಿ ಕೇಳ ಬೇಕಾಗಿದೆ. ಯಾವುದಕ್ಕೂ ಒಂದು ಮಿತಿ ಇರಬೇಕು. ಈಗ ನಮಗೆ ತಿಳಿದ ಹಾಗೆ ಸೆಕ್ಸುಯಲ್ ಇನ್ ಸ್ಟಿಂಕ್ಟ್ ಎನ್ನುವುದು ಹುಡುಗರಲ್ಲಿ ಹೆಚ್ಚಾಗಿರಬಹುದು, ವಯಸ್ಸಾದವರಲ್ಲಿ ಕಡಿಮೆ ಇರಬಹುದು. ಆದರೆ ಎಲ್ಲರಿಗೂ ಎಲ್ಲಾ ಕಾಲದಲ್ಲಿಯೂ ಒಂದೇ ರೀತಿಯಾಗಿ ಇರುತ್ತದೆ. ಎಂದು ಭಾವನೆ ಮಾಡುವುದಕ್ಕಾಗುವುದಿಲ್ಲ. ಇದನ್ನು ಕಾನೂನಿನ ಮೂಲಕ ನೀವು ಬಾಯ್‌ಕಟ್ ಮಾಡುವುದಕ್ಕಾಗುವುದಿಲ್ಲ. ಇದನ್ನು ಪ್ರಚಾರ ಮಾಡುವುದಕ್ಕಾಗಿ ಅನೇಕ ತಾಂತ್ರಿಕ ಔಷಧಿಗಳನ್ನು ಬೇರೆ ಒದಗಿಸಿ ಕೊಡುತ್ತಿದ್ದೀರಿ. ಹೀಗಿರುವಾಗ ಇದನ್ನು ತಡೆಯಬೇಕೆಂದು ೧ನೇ ಜೂನ್ ೧೯೭೦ರ ವರೆಗೆ ಎಂದು ನೋಟೀಸು ಕೊಟ್ಟಿರುವುದು ಸಾಲದು. ಇದಕ್ಕೆ ಕಾಲಾವಕಾಶ ಹೆಚ್ಚಾಗಿರಬೇಕು. ಇದಕ್ಕಾಗಿ ಎರಡು ವರ್ಷಗಳ ಕಾಲ ಎಂದು ನೋಟಿಸು ಕೊಟ್ಟರೆ ಅನುಕೂಲವಾಗುತ್ತದೆ. ಇದನ್ನು ನೀವು ಈಗಲಾದರೂ ಯೋಚನೆ ಮಾಡುವುದು ಸಾಧ್ಯ.

ಶ್ರೀ ಕೆ ವಿ ಶಂಕರಗೌಡ :—ಈಗಾಗಲೇ ಒಂದು ವರ್ಷದ ಹಿಂದೆಯೇ ನೋಟೀಸನ್ನು ಕೊಡಲಾಗಿತ್ತು. ಆದರೆ ಕೆಲವಾರು ಜನರು ಸರಕಾರಕ್ಕೆ ಮನವಿಗಳನ್ನು ಕಳುಹಿಸಿ ಇದು ಸಾಲದು ಇನ್ನು ಕಾಲವನ್ನು ಮುಂದೂಡಬೇಕು ಎಂದು ಕೇಳಿದುದರಿಂದ ಇದನ್ನು ಒಂದು ವರ್ಷ ಎಂದು ೧ನೇ ಜೂನ್ ೧೯೭೦ರ ವರೆಗೆ ಮುಂದೂಡಲಾಗಿದೆ. ಪುನಃ ಇದನ್ನು ಮುಂದೂಡಬೇಕೆಂದು ಹೇಳಿದರೆ ಆದರಿಂದೇನೂ ಪ್ರಯೋಜನ ವಾಗುವುದಿಲ್ಲ. ಮೂರು ಜನ ಮಕ್ಕಳಿಗೆ ಎಂದು ಸೀಮಿತವಾಗಿದ್ದರೂ ಹಿಂದೆ ಮೂರು ಜನಕ್ಕಿಂತ ಹೆಚ್ಚು ಮಕ್ಕಳಾಗಿದ್ದರೆ ಅವರಿಗೆ ಇದರಿಂದೇನೂ ತೊಂದರೆಯಾಗುವುದಿಲ್ಲ. ಈ ತಾರೀಖಿನಿಂದ ಮುಂದೆ ಹುಟ್ಟುವ ಮಕ್ಕಳಿಗೆ ಅನುಕೂಲ ಸಿಗುವುದಿಲ್ಲ ಎಂದು ಇದರಲ್ಲಿ ವಿವರವಾಗಿ ಹೇಳಲಾಗಿದೆ. ಇದರಲ್ಲಿ ಈಗ ಬೇರೆ ಬೇರೆ ವಿಧವಾದ ಅಭಿಪ್ರಾಯಗಳು ಬರುತ್ತಿವೆ ಮತ್ತು ಈ ವಿಚಾರದಲ್ಲಿ ಇನ್ನೂ ಒಂದು ರೀತಿಯಾದ ಜಿಜ್ಞಾಸೆ ಇದೆ. ಇದು ತಾತ್ಕಾಲಿಕವಾಗಿರುವುದರಿಂದ ಮುಂದೆ ಇದು ಯಾವ ರೂಪ ತಾಳುವುದೋ ಹೇಳುವುದಕ್ಕೆ ಸಾಧ್ಯವಿಲ್ಲ. ಜನಗಳ ಬೇಡಿಕೆ ಈ ವಿಷಯದಲ್ಲಿ ಏನು ಬರುತ್ತದೆ ಅವನ್ನು ನೋಡಿಕೊಂಡು ಮಾಡಬೇಕಾಗುತ್ತದೆ.

ಶ್ರೀ ಎಲ್. ಶ್ರೀಕಂಠಯ್ಯ :—ಮೂರು ಮಕ್ಕಳ ಮೇಲ್ಪಟ್ಟು ಮಕ್ಕಳಿರುವವರಿಗೆ ಒಂದು ರೀತಿಯಾದ ಇನ್‌ಕಂ ಟ್ಯಾಕ್ಸ್ ಸ್ಲಾಬನ್ನು ಮಾಡಿರುತ್ತಾರೆ, ಮತ್ತು ಇತರರಿಗೆ ಇದರಲ್ಲಿ ಎಕ್ಸೆಂಪ್ಷನ್ ಬರುತ್ತದೆ. ಹಾಗೆ ಇದರಲ್ಲೂ ತಾವು ಒಂದು ರೀತಿಯಾದ ಸ್ಲಾಬ್ ಇರುವಂತೆ ಮಾಡಲು ಪರಿಶೀಲಿಸ ಬಹುದಲ್ಲ.

ಶ್ರೀ ಕೆ. ವಿ. ಶಂಕರಗೌಡ :—ಇದನ್ನು ಇನ್ನೂ ವಿಚಾರ ಮಾಡಬೇಕಾಗಿದೆ.

(RULING BY THE SPEAKER)

RULING ON THE POINT RAISED BY THE MINISTER FOR LAW REGARDING THE CONSIDERATION OF THE PUBLIC MEN ENQUIRIES BILL.

MR. SPEAKER :—Now I have to give a few rulings. On 29th August 1969, Sri H. N. Nanje Gowda sought to move a motion for taking into consideration the the Bill " The Mysore Public Men Enquiries Bill, 1969 " introduced by him earlier.

The Minister for Law, Labour and Parliamentary Affairs raised a point of order, objecting to the motion for consideration of the said Bill. The contention of the Minister was that the Bill could not be taken into consideration by the House on two grounds, one being that this House was not competent to consider a Bill of the kind in question, as it was beyond the jurisdiction of this House, and the second was that the Bill involved expenditure from the consolidated fund of the State and therefore, recommendation of the Governor under Sub-clause (3) of Article 207 of the Constitution was necessary for the consideration of the Bill. The Hon. Minister advanced elaborate arguments in support of his two contentions. He stated that under the provisions of the Bill, the Chief Justice of the High Court or the other Judges of the High Court would be performing non-judicial functions and therefore, this House was not competent to entrust to a Judge any duties other than what came within the jurisdiction and powers of the High Court.

The Minister further stated that by entrusting such function as are envisaged in the Bill to the High Court, separate staff including additional Judges would be necessary, and therefore, additional expenditure would have to be incurred Since the Bill was not accompanied by a financial memorandum and the necessary recommendation from the Governor for the consideration of the Bill, the Bill could not be taken into consideration.

Sri H. N. NANJE GOWDA and several members opposed the point of order. They also advanced elaborate arguments in support of their contentions. As the House is aware, a detailed discussion took place on three days on the point of order raised by the Minister. During the course of their speeches, several members spoke on the desirability of enacting a measure the kind of introduced by Sri Nanje-Gowda.

I have carefully considered the observations made by the Minister for Law, Sri Nanje Gowda and the other Hon'ble Members. I have gone into the several provisions of the Bill. It is not for me to say

(Sri H. N. NANJE GOWDA)

anything about the desirability of a measure of this kind. It is for the House to judge. The scheme of the Bill introduced by Sri Nanje Gowda indicates that an individual presents a petition to the Governor, making a request for enquiry into an accusation. The Governor refers the accusation made therein for preliminary scrutiny to a judge. The Chief Justice thereafter, is required to refer the matter to a judge of the High Court. The words used in clause 4 of the Bill are that on a request in this behalf being made by the Governor, the Chief Justice shall, for the purpose of making the scrutiny, refer the matter to a Judge etc.

Clause 5 provides that the Judge shall scrutinise the accusation informally and expeditiously. Under Clause 13, the Judge is required to pronounce his findings at the end of the enquiry Sub-clause (2) of the said Clause states : that where the Judge is of opinion that it is expedient in the interest of justice that the person accused or any other person concerned with the subject matter of the accusation should be prosecuted he shall record a finding to that effect. Sub-clause (4) of the same clause contemplates that the Vigilance Commissioner will take necessary steps for the prosecution of the person concerned.

The above provisions will thus indicate that the Judge of the High Court is required to perform certain functions which cannot be called judicial in nature. A Judge is required to give his decision in a case and his decision is enforceable. What the Bill proposes to entrust to the High Court is only a sort of fact-finding enquiry against individuals which is a non-judicial function. If the Judge has to do any non-judicial function, it would follow that more number of Judges are necessary for performing these functions.

Sri H N NANJE GOWDA pointed out a ruling of the Speaker of Lok Sabha, wherein the Speaker of Lok Sabha has observed that whenever an individual offence is created under an Act, no new Court was established and therefore, a financial memorandum was not necessary for consideration of the essential services maintenance Bill. I have gone into that ruling also. I am afraid, the case now before us is different from the case which was before the Speaker of Lok Sabha. In the present Bill, what we are entrusting to a Judge is a function which is not the normal function of a Judge of the High Court. In the case quoted by Sri Nanje Gowda, a new offence was created and hence it was rightly held that recommendation of the President was not necessary.

Considering the above, I hold that the Bill requires recommendation of the Governor for consideration by the House and without such recommendation, the consideration motion cannot be taken up. It is

not necessary for me to give my ruling on the question as to whether the House is competent to consider such a Bill. As I have already stated that the Bill requires recommendation, I need not say anything about the competence of this House to consider this Bill.

RULING ON A QUESTION OF PRIVILEGE AGAINST THE CHIEF MINISTER ON A PHAMPLET "MYSORE AFTER INTEGRATION".

MR. SPEAKER:—On 21st January 1970, Sri H. N. Nanje Gowda raised a question of privilege against the Chief Minister. Sri Nanje-Gowda alleged that the document " Mysore after integration–Survey of Development of diffierent Regions" laid by the Chief Minister on the Table of the House on 9th September 1969 contained misleading figures. He further contended that the Chief Minister chose the last day of a Session for laying on the Table of the House the particular dacument. Secondly, the member has alleged that the statement is not correct in regard to the expenditure incurred by the Government on the integrated areas. I have considered whether these two facts would constitute prima facie case to give my consent.

I have gone through a number of rulings of the Presiding Officers when such matters of privileges were sought to be raised in Parliment and other State Legislatures.

According to " May ", the House may treat the making of a deliberately misleading statement as a contempt. In 1963, the House of Commons resolved that in making a personal statement which contained words which he later admitted to be true a member had been guilty of a grave contempt. (Profuma's case).

A breach of privilege arises only when the member or the Minister makes a false Statement or an incorrect statement wilfully, deliberately and knowingly.

On 17th August 1966, in Lok Sabha when two members sought to raise a question of privilege against the Minister for Food and Agriculture on the ground that he had surpressed the truth and misled the Public Accounts Committee when he appeared before them, the Speaker of Lok Sabha observed among other things as follows:—

> "Incorrect statements made by a Minister cannot be the basis for a breach of privilege. It is only a deliberate flasehood, if it can be substantiated, that would certainly bring the offence within the meaning of breach of privilege."

(Mr. SPEAKER)

I may also recall to the members the ruling pointed out by the Minister for Law and Parliamentary Affairs in the House when this matter was raised by the member.

In the instant case I do not find any prima facie evidence to show that any incorrect statement is made by the Chief Minister either deliberately or with the intention of misleading the House.

I hold that the matter is not in order.

RULING ON A QUESTION OF PRIVILEGE AGAINST THE CHIEF MINISTER ON HIS ALLEGED STATEMENTS ABOUT MYSORE-MAHARASTRA BORDER.

MR. SPEAKER:—Sri H. M. Channabasappa had given notice of a question of privilege in which he has alleged that the statement of the Chief Minister in the House, in reply to a supplementary question put by him on the main question given notice of by Sri D. M. Siddaiah, seeking to know whether the Central Government had intimated the State Government about the action proposed to be taken on the Mahajan Commission Report to solve the border dispute between the States of Mysore and Maharashtra was different from what the Chief Minister had stated while addressing a Political Conference at Belgaum recently.

I have gone through the proceedings of the House when the particular question mentioned by the member was answered in the House. Sri Channabasappa put a supplementary question, seeking to know whether the Chief Minister had stated at the Political Conference at Belgaum that the Central Government was influenced by foreign money and foreign pressures in taking decisions. The Chief Minister replied that this was not so. I have also looked into the newspaper produced by Sri Channabasappa, containing a statement reported to have been made by the Chief Minister at Belgaum. It would appear that what the Chief Minister has stated at the Conference is in a different context from what it was stated in the House. In the House, the question was regarding Belgaum and the Chief Minister stated that the Central Government was not influenced by foreign money and pressures.

In reply to the debate on the motion, moved by Sri V. N. Patil recently, the Chief Minister referred to his statement made at Belgaum incidentally and categorically denied that he had made any such statement attributed to him by Sri Channabasappa.

It has been ruled on a number of occasions that if any statement is made on the floor of the House by a Member or a Minister which another member believes to be untrue, incomplete or incorrect, it does not constitute a breach of privilege. To constitute a breach of privilege, the statement must be a deliberate lie with an intention of misleading the House. In this case, it is difficult to conceive of any such intention on the part of the Chief Minister. On the other hand, the facts are much stronger to indicate that there is no intention to mislead the House. I, therefore, hold that the matter is not in order.

At the most, Chief Minister's statement amounts to a denial of the Press Report, which every person, a member, Minister, or otherwise is entitled to do, if he thinks that the Press has, inaccurately reported him. Such statements do not constitute breach of privilege.

I, therefore, hold that the notice is not in order.

Private Members Business—Bills

MYSORE VILLAGE PANCHAYAT AND LOCAL BOARDS (AMENDMENT) BILLS 1970-MOTION TO CONSIDER

Sri H. N. NANJE GOWDA:—I move:

That the Mysore Village Panchayat and Local Boards(Amendment) Bill, 1970, be taken into consideration."

MR. SPEAKER:—Motion moved;

"That the Mysore Village Panchayat and Local Boards (Amendment) Bill, 1970, be taken into consideration."

‡ಶ್ರೀ ಎಚ್. ಎನ್. ನಂಜೇಗೌಡ;—ಮಾನ್ಯ ಅಧ್ಯಕ್ಷರೇ, ನಾನು ಈ ಬಿಲ್ ಬಗ್ಗೆ ಹೆಚ್ಚು ಸಮಯ ತೆಗೆದುಕೊಳ್ಳದೆ ಕೇವಲ ಮೂರು ನಿಮಿಷಗಳಲ್ಲಿ ಮುಗಿಸುತ್ತೇನೆ. ಈಗ ಇರತಕ್ಕಂಥ ಆಕ್ಟ್‌ನಲ್ಲಿ ತಾಲ್ಲೂಕ್ ಬೋರ್ಡ್ ಮತ್ತು ಮುನಿಸಿಪಾಲಿಟಿಗಳಲ್ಲಿ ಸಭೆ ಸೇರಲು ಮೂರನೇ ಒಂದು ಭಾಗ ಕೋರಂ ಇರಬೇಕೆಂದು ಇದೆ. ಆದರೆ ಪಂಚಾಯಿತಿಗಳಿಗೆ ಅರ್ಧ ಭಾಗ ಇರಬೇಕೆಂದು ಇದೆ. ಈಗ ಕೆಲವು ಪಂಚಾಯಿತಿಗಳಲ್ಲಿ ೧೫, ೧೩, ೧೧ ಈ ಪ್ರಕಾರ ಸದಸ್ಯರು ಇರುತ್ತಾರೆ. ಚೇರ್‌ಮನ್ ಮೀಟಿಂಗ್ ನಡೆಸಬೇಕಾದರೆ ಅರ್ಧ ಭಾಗದಷ್ಟು ಸದಸ್ಯರು ಇರಬೇಕು. ೧೫ ಜನ ಸದಸ್ಯರು ಇರುವ ಕಡೆಗಳಲ್ಲಿ ಚೇರ್‌ಮನ್ ಪರವಾಗಿ ೭ ಜನ ಸದಸ್ಯರು ಇದ್ದರೆ ಚೇರ್‌ಮನ್ ಮೀಟಿಂಗ್ ನಡೆಸುವುದಕ್ಕಾಗುವುದಿಲ್ಲ. ಉಳಿದ ೮ ಜನ ಸದಸ್ಯರು ಸೇರಿಕೊಂಡು ಈ ಚೇರ್‌ಮನ್ ಅವರನ್ನು ಅಧಿಕಾರದಿಂದ ಉರುಳಿಸುವುದಕ್ಕಾಗುವುದಿಲ್ಲ. ಏಕೆಂದರೆ ಚೇರ್‌ಮನ್ ಅವರನ್ನು ಕೆಲಸದಿಂದ ಉರುಳಿಸಬೇಕಾದರೆ ಮೂರನೇ ಎರಡು ಭಾಗದಷ್ಟು ಮೆಜಾರಿಟಿ ಇರಬೇಕೆಂದು ಆಕ್ಟ್‌ನಲ್ಲಿ ಇದೆ. ಆದಕಾರಣ ಇಂತಹ ಪಂಚಾಯಿತಿಗಳಲ್ಲಿ ಯಾವ ಕೆಲಸವೂ ಆಗುತ್ತಿಲ್ಲ. ತಾಲ್ಲೂಕ್ ಬೋರ್ಡ್‌ಗೆ ಮತ್ತು ಮುನಿಸಿಪಾಲಿಟಿಗಳಿಗೆ ಯಾವ ರೀತಿ ಮೂರನೆಯ ಒಂದು ಭಾಗ ಕೋರಂ ಇರಬೇಕೆಂದು ಇದೆಯೋ ಅದನ್ನೇ ಅನ್ವಯಮಾಡಬೇಕೆಂದು ಈ ತಿದ್ದುಪಡಿಯನ್ನು ತಂದಿದ್ದೇನೆ. ಮಾನ್ಯ ಮಂತ್ರಿಗಳಿಗೂ ಗೊತ್ತಿರಬಹುದು, ಅನೇಕ ಪಂಚಾಯಿತಿಗಳಲ್ಲಿ ಗುಂಪುಗಳು ಹುಟ್ಟಿಕೊಂಡು ಯಾವ ಕೆಲಸಗಳು ಸಹ ಆಗದೆ ವಿರೋಧಭಾಸವಾಗಿ ಅವು ಮೂಲೆ ಗುಂಪಾಗಿವೆ. ಆದ್ದರಿಂದ ನಾನು ತಂದಿರುವ ತಿದ್ದುಪಡಿಯನ್ನು ಪಂಚಾಯಿತಿಗಳ ಮೇಲೆ ಕರುಣೆಯಿಟ್ಟು ಒಪ್ಪಲೇಬೇಕೆಂದು ಅರಿಕೆ ಮಾಡಿಕೊಂಡು ನಾನು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಬಿ. ಎಲ್ ಗೌಡ (ಸಹಕಾರ ಶಾಖೆಯ ಉಪ ಮಂತ್ರಿಗಳು) :—ಸ್ವಾಮಿ, ಶ್ರೀಮಾನ್ ನಂಜೇಗೌಡರು ತಂದಿರತಕ್ಕ ತಿದ್ದುಪಡಿಯನ್ನು ನಾನು ಒಪ್ಪುತ್ತೇನೆ. ಈಗಾಗಲೇ ಈ ಸಭೆಯ ಮುಂದೆ ಮಂಡಿಸಿರತಕ್ಕ ೧೯೭೦ನೇ ಇಸವಿಯ ಮೈಸೂರು ಪಂಚಾಯತ್ ರಾಜ್ ಮಸೂದೆಯಲ್ಲಿ ಇದಕ್ಕೆ ಒಂದು ಅವಕಾಶವನ್ನು ಮಾಡಿಕೊಟ್ಟಿದ್ದೇವೆ. ಈಗ ಶ್ರೀ ಮಾನ್ ನಂಜೇಗೌಡರು ಈ ಸಭೆಯ ಮುಂದೆ ತಂದಿರತಕ್ಕ ಮೈಸೂರು ವಿಲೇಜ್ ಪಂಚಾಯತ್ ಅಂಡ್ ಲೋಕಲ್ ಬೋರ್ಡ್ಸ್ ಅಮೆಂಡಮೆಂಟ್ ಬಿಲ್ ಏನಿದೆ ಇದರಲ್ಲಿ ಪಂಚಾಯಿತಿ ಸಭೆಗಳ ಕೋರಂ ಮಿತಿಯನ್ನು ಸದಸ್ಯರ ೧/೨ ಸಂಖ್ಯೆ ಇರುವುದನ್ನು ೧/೩ ಭಾಗಕ್ಕೆ ಇಳಿಸಬೇಕೆಂದು ಹೇಳಿದ್ದಾರೆ. ಇದೇ ವಿಷಯವನ್ನು ನಾವು ಹೊಸ ಪಂಚಾಯಿತಿ ರಾಜ್ ವಿಧೇಯಕದಲ್ಲಿ ೫೪ನೇ ಕಾಲಂನಲ್ಲಿ ಅಳವಡಿಸಿ ಪಂಚಾಯಿತಿಗಳ ಮೀಟಿಂಗ್‌ನಲ್ಲಿ ಕೋರಂ ಮಿತಿಯನ್ನು ಸದಸ್ಯರ ಸಂಖ್ಯೆ ಸದಸ್ಯರ ಅರ್ಧ ಸಂಖ್ಯೆ ಇರಬೇಕೆಂದು ಇದ್ದದ್ದನ್ನು ೧/೩ ಭಾಗಕ್ಕೆ ಇಳಿಸಿದ್ದೇನೆ. ಆದ್ದರಿಂದ ಇದನ್ನು ಮನಗಂಡು ನಮ್ಮ ಮಾನ್ಯ ಸ್ನೇಹಿತರಾದ ಶ್ರೀಮಾನ್ ನಂಜೇಗೌಡರು ಈ ತತ್ವವನ್ನು ಒಪ್ಪಿಕೊಂಡು ಅವರು ತಂದಿರತಕ್ಕ ತಿದ್ದುಪಡಿ ವಿಧೇಯಕವನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ನಾನು ಮಾನ್ಯ ಅಧ್ಯಕ್ಷರ ಮುಖಾಂತರ ಅರಿಕೆ ಮಾಡಿಕೊಳ್ಳುತ್ತೇನೆ.

Sri H. N. NANJE GOUDA :—Sir, I beg leave of the House to withdraw the Mysore Village Panchayat and Local Boards (Amendment) Bill, 1970.

The Bill was by leave, withdrawn.

Sri AZEEZ SAIT :—Sir, the Hon. Minister Sri B. Rachiah has raised a point of order to which you said you would give a ruling. It is in respect of the words 'sarkari gulam'.

Mr. SPEAKER :—I shall give a ruling.

CALLING ATTENTION TO MATTERS OF URGENT PUBLIC IMPORTANCE:

(re : Kyasanur Forest disease in the areas of Sarab, Sagar, etc.)

Sri S. BANGARAPPA :—Sir, I call the attention of the Minister for Health to the spread of Kyasanur forest disease in the areas of Sorab, sagar, etc.

†Sri Y. RAMAKRISHNA (Minister for Health) :—Kyasanur Forest Disease is a virus disease that occur every year during the period from December to March.

During this period from 1st December 1969 to 14th March 1970 which is the transmission period, there have been 193 human cases of Kyasanur Forest Disease in the three Taluks of Sorab, Sagar and Shikaripur of Shimoga District, of which 57 attacks are in sorab Taluk only. There have been no deaths in any of the Taluks.

During the corresponding period in 1968, i.e., from 1st December 1968 to 31st March 1969 there were 387 human cases with 12 deths in the above Taluks. Out of 387 human cases, 116 human attacks with 2 deaths were in Sorab Taluk only.

No cases of Kyasunur Forest Disease have been reported from Sirsi and Siddapur Taluks of North Kanara District during the period. There are no human cases due to Kyasunur Forest Desease in other parts of the State

Anticipatory action has been taken for the control of Kyasanur Forest Disease as follows :

(*a*) In January 1970, the Joint Director (Health) and the Deputy Director (Communicable Diseases) intensively toured in Shimoga District, Convened meetings of the Chairmen of the Village Panchayats and Taluk Board Presidents and apprised them of the epidemiological aspect of the disease and action contemplated to be taken by the Government for the prevention of the disease and also apprised them of the part to be played by the general public to control of the disease.

(*b*) Drugs worth Rs. 25,000.00 have been supplied during the current year to the District Health and Family Planning Officer. Shimoga for treatment of human cases suffering from the Kyasanur Forest Disease.

(*c*) The question of prophylactic inoculation of vulnerable population group in the area is under the consideration of Government.

(*d*) Sparying of selected forest floor with Lindane Insecticides has been taken up to control larval stages of ticks which are the transmitting agents of the disease and the results of spraying have been found to be effective.

(*d*) Government have accorded sanction in Government Order No. HMA 175 PMS 69 dated 20th March 1970 to the following :

(i) Three six bedded wards at a cost of Rs. 20,000 each, one ward for each of the two primary Health Centres in Sorab Taluk and one ward for the Primary Health Centre at Shiralkoppa in Shikaripur Taluk.

(ii) Five six bedded wards at a cost of Rs. 20,000 each in the following Primary Health Units in Sorab Taluk.

1. Kuppagadde
2. Shigga
3. Hosabale
4. Ulvi
5. Thyagarathi

(Sri Y. RAMAKRISHNA)

(iii) Five kitchen blocks attached to the wards in the above Primary Health Units at a cost of Rs. 7,500 each.

(iv) Fifty cots

(v) Ambulance Van

(vi) Beds, linen, etc., to the extent of Rs. 15,000.00

(vii) Diet for 50 patients Rs. 31,950.00 per year

(viii) Drugs to the extent of Rs. 50,000.00 ,,

(ix) Other equipments like Thermos flasks, Thermometers, etc., to the extent of Rs. 9,000.00 ,,

ಶ್ರೀ ಎಸ್. ಬಂಗಾರಪ್ಪ :—ಸ್ವಾಮಿ, ಮಾನ್ಯ ಆರೋಗ್ಯ ಶಾಖೆಯ ಮಂತ್ರಿಗಳು ಈ ವರ್ಷ ಯಾವುದೂ '.ಸಾವು'; ಇಲ್ಲ ಎಂದು ಹೇಳಿದ್ದಾರೆ. ಆದರೆ ಅವರು ಸತ್ಯಕ್ಕೆ ದೂರವಾದ ಮಾತುಗಳನ್ನು ಹೇಳಿದ್ದಾರೆ. ಸಾವು ಸೊರಬದಲ್ಲಿ ಆಗಿದೆ. ಹೋದ ವರ್ಷ ಸುಮಾರು ೧೩ ಜನ ಸತ್ತುಹೋಗಿದ್ದಂತಹ ಸಂದರ್ಭದಲ್ಲಿ ನಾನು ಒಂದು ಆಡರ್‌ಮೆಂಟ್ ಮೋಷನ್ ಸಭೆಯಲ್ಲಿ ತಂದಿದ್ದೆ. ಆಗ ಈ ಖಾಯಿಲೆ ಬಗ್ಗೆ ಮಾನ್ಯ ಮಂತ್ರಿಗಳು ಬಹಳ ಒಳ್ಳೆಯ ಕ್ರಮಗಳನ್ನು ತೆಗೆದು ಕೊಂಡಿದ್ದರು. ಆದಕ್ಕಾಗಿ ನಾನು ನನ್ನ ಮೆಚ್ಚಿಗೆಯನ್ನು ಕೂಡ ವ ಕ್ತಪಡಿಸಿದ್ದೇನೆ. ಆ ಸಮಯದಲ್ಲಿ ಸುಮಾರು ೭-೮ ವ್ಯಾನುಗಳಲ್ಲಿ ಔಷಧಿಯನ್ನು ತುಂಬಿಕೊಂಡು ಡಾಕ್ಟರುಗಳು ಅನೇಕ ಹಳ್ಳಿಗಳನ್ನು ಟೂರ್ ಮಾಡಿ ಜನಗಳಿಗೆ ಔಷಧಿಯನ್ನು ಕೊಟ್ಟು ಬರುತ್ತಿದ್ದರು. ಅದರ ಒಂದು ನೆನಪೂ ಕೂಡ ನನಗೆ ಇದೆ. ಆಗ ಬಹಳ ಒಳ್ಳೆಯ ಕೆಲಸ ಮಾಡಿದ್ದಾರೆ. ಈ ವರ್ಷವು ಕೂಡ ಅಲ್ಲಿ ಈ ಖಾಯಿಲೆಯು ಹರಡಿದೆ. ಆ ಖಾಯಿಲೆ ಸಾಮಾನ್ಯವಾಗಿ ಡಿಸೆಂಬರ್ ತಿಂಗಳಿನಿಂದ ಪ್ರತಿವರ್ಷವು ಪ್ರಾರಂಭವಾಗುತ್ತದೆ ಅದು ಮಳೆ ಪ್ರಾರಂಭವಾಗುವವರೆಗೂ ಇರುತ್ತದೆ. ಫಾರೆಸ್ಟಿನಲ್ಲಿ ಔಷಧಿಯನ್ನು ಸ್ಪ್ರೆ ಮಾಡತಕ್ಕ ಕೆಲಸವನ್ನೇ ಮಾಡಿದ್ದಾರೆ. ಆ ಕೆಲಸವನ್ನು ಇನ್ನೂ ಜಾಸ್ತಿ ಮಾಡಬೇಕು. ಮತ್ತು ಈ ಖಾಯಿಲೆಯ ಬಗ್ಗೆ ಎಫೆಕ್ಟೀವ್ ಕಂಟ್ರೋಲ್ ಇಟ್ಟುಕೊಳ್ಳಬೇಕು. ಅನೇಕ ಹಳ್ಳಿಗಳಲ್ಲಿ ಈ ಖಾಯಿಲೆಯಿಂದ ಜನ ಮಲಗಿದ್ದಾರೆ. ಆದ ರಿಂದ ಹೋದ ವರ್ಷದ ಹಾಗೆಯೇ ಈ ವರ್ಷವು ಕೂಡ ವ್ಯಾನಿನಲ್ಲಿ ಔಷಧಿ ತುಂಬಿಕೊಂಡು [illegible]ತೆಯಲ್ಲಿ ಡಾಕ್ಟರು ಹೋಗಿ ಜನಗಳಿಗೆ ಔಷಧಿಯನ್ನು ಹಂಚತಕ್ಕ ಒಂದು ವ್ಯವಸ್ಥೆಯನ್ನು ಮಾಡಿದರೆ ಒಳ್ಳೆಯದು ಎಂದು ನನ್ನ ಅಭಿಪ್ರಾಯ. ಈಗ ಔಷಧಿಯನ್ನೇನು ಸಪ್ಲೈ ಮಾಡಿದ್ದಾರೆ ಅದು ಬಹಳ ಕಡಿಮೆ ಇದೆ. ಸೊರಬದ ಜನಗಳು ಕಾರವಾರ ಜಿಲ್ಲೆಗೆ ಮತ್ತು ಬನವಾಸಿ ಆಸ್ಪತ್ರೆಗೆ ಹೋಗುತ್ತಾರೆ. ಏತಕ್ಕೆಂದರೆ ವರದಾ ನದಿಯನ್ನು ದಾಟಿದರೆ ಬನವಾಸಿ ಆಸ್ಪತ್ರೆ ಕಾಣುತ್ತದೆ. ಆ ಬನವಾಸಿ ಆಸ್ಪತ್ರೆಯಲ್ಲಿ ಡಾಕ್ಟರು ಔಷಧಿ ಸಪ್ಲೈ ಇಲ್ಲ ದಯವಿಟ್ಟು ಔಷಧಿ ಸಪ್ಲೈ ಮಾಡಿಕೊಡಿ. ಸೊರಬಾದಿಂದ ಜನ ಇಲ್ಲಿಗೆ ಬರುತ್ತಾರೆ ಎಂದು ಸರ್ಕಾರಕ್ಕೆ ಹೇಳಿದ್ದಾರೆ. ಆದ್ದರಿಂದ ಮಾನ್ಯ ಮಂತ್ರಿಗಳು ದಯಮಿಟ್ಟು ಬನವಾಸಿ ಆಸ್ಪತ್ರೆಗೆ. ಸಿದ್ದಾಪುರ ಆಸ್ಪತ್ರೆಗೆ ಸಾಕಷ್ಟು ಔಷಧಿಯನ್ನು ಒದಗಿಸುವುದಕ್ಕೆ ವ್ಯವಸ್ಥೆ ಮಾಡಬೇಕು ಮಾನ್ಯ ಮಂತ್ರಿಗಳು ತಮ್ಮ ಸ್ಟೇಟ್‌ಮೆಂಟಿನಲ್ಲಿ ಚಂದ್ರಗುತ್ತಿಯನ್ನು ಕೈಬಿಟ್ಟಿದ್ದಾರೆ. ಶಿರಾಳಕೊಪ್ಪದ ವಿಷಯವನ್ನು ಮಾನ್ಯ ಮಂತ್ರಿಗಳು ತಮ್ಮ ಸ್ಟೇಟ್‌ಮೆಂಟಿನಲ್ಲಿ ತಿಳಿಸಿದ್ದಾರೆ. ಆದಕ್ಕಾಗಿ ನಾನು ಅವರನ್ನು ಮೆಚ್ಚುತ್ತೇನೆ. ಚಂದ್ರಗುತ್ತಿಯನ್ನು ಏತಕ್ಕೆ ಕೈಬಿಟ್ಟಿದ್ದಾರೆಯೋ ಗೊತ್ತಾಗ ಲಿಲ್ಲ. ಚಂದ್ರಗುತ್ತಿಯಲ್ಲಿ ವಿಪರೀತ ಜನ ಖಾಯಿಲೆ ಮಲಗಿದ್ದಾರೆ. ಅಲ್ಲಿಗೆ ವ್ಯಾನ್ ಕಳುಹಿಸಿ ಅಲ್ಲಿನ ಜನಗಳಿಗೆ ಔಷಧಿಯನ್ನು ಕೊಡಿಸುವಂತಹ ವ್ಯವಸ್ಥೆಯನ್ನು ಮಾಡಬೇಕು ಎಂದು ನಾನು ಹೇಳುತ್ತೇನೆ.

ಶ್ರೀ ವೈ. ರಾಮಕೃಷ್ಣ :—ಸ್ವಾಮಿ ಮಾನ್ಯ ಸದಸ್ಯರು ಚಂದ್ರಗುತ್ತಿಯನ್ನು ಕೈ ಬಿಟ್ಟಿದ್ದಾರೆ ಎಂದು ಹೇಳಿದರು. ಅದನ್ನು ಶೀಘ್ರವಾಗಿ ಸೇರಿಸುತ್ತೇವೆ. ಕ್ಯಾಸನೂರ ಫಾರೆಸ್ಟ್ ಖಾಯಿಲೆಯಿಂದ ಜನಗಳು ಸಾಯುವುದಕ್ಕೆ ಬಿಡುವುದಿಲ್ಲವೆನ್ನುವ ಆಶ್ವಾಸನೆಯನ್ನು ಮಾನ್ಯ ಸದಸ್ಯರಿಗೆ ಕೊಡುವುದಕ್ಕೆ ನಾನು. ತಯಾರಾಗಿದ್ದೇನೆ. ಕಳೆದ ವರ್ಷ ಈ ಖಾಯಿಲೇ ವಿಶೇಷವಾಗಿ ಹಬ್ಬಿತ್ತು. ಅದನ್ನು ೬೦-೭೦ ಪರ್ಸೆಂಟ್‌ನಷ್ಟು ಕಂಟ್ರೋಲ್ ಮಾಡಿದ್ದೇವೆ. ಒಂದೇ ವರ್ಷದಲ್ಲಿ ಪೂರ್ತಿ ಕಂಟ್ರೋಲ್ ಮಾಡುವುದಕ್ಕೆ

ಕಷ್ಟವಾಗುತ್ತದೆ. ಮಾನ್ಯ ಸದಸ್ಯರು ಸಲಹೆ ಕೊಟ್ಟ ಹಾಗೆ ಶೀಘ್ರವಾಗಿ ಯಾವ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೋ ಆ ಎಲ್ಲಾ ಕಾರ್ಯಕ್ರಮಗಳನ್ನೂ ಹಾಕಿಕೊಂಡು ಈ ಖಾಯಿಲೆಯನ್ನು ಹೋಗಲಾಡಿಸುವುದಕ್ಕೆ ಸರ್ಕಾರ ದವರು ಕಾರ್ಯಕ್ರಮ ಹಾಕಿಕೊಳ್ಳುತ್ತಾರೆ.

5-00 P. M.

ಶ್ರೀ ಎಸ್. ಬಂಗಾರಪ್ಪ:—ನಾನು ವ್ಯಾನ್‌ನಲ್ಲಿ ಟೂರ್ ಮಾಡತಕ್ಕ ವಿಚಾರ ಹೇಳಿದ್ದು.

ಶ್ರೀ ವೈ. ರಾಮಕೃಷ್ಣ:—ಅದನ್ನೂ ವಿಚಾರ ಮಾಡುತ್ತೇನೆ.

Re:—Atrocities committed on one Sri Venkataramanappa by the Police of Kolar Rural Police Station.

SRI P. VENKATAGIRIYAPPA (Kolar):—Sir, I call the attention of the Hon. Chief Minister to the atrocities committed on Sri Venkataramanappa by the Police of Kolar Rural Police Station.

†SRI K. PUTTASWAMY (Minister for law, labour and Parliamentary Affairs):—Sir, It is reported that one Sri Syed Ismail of Nayakarahalli presented a petition in Kolar Rural Police Station at 13·30 hrs. on 23-3-1970 making allegations against Sri Venkataramanappa and six others. H. C. No. 109, who was the Station House Officer, sent H. C. No. 102 along with two P. Cs. to the said village to fetch the counter-petitioners. The counter-petitioners Sri Venkataramanappa and two others were brought to the Police Station at about 20·00 hrs. The Station House Officer recorded their statements and lest them go about an hour later.

Neither Sri Venkataramanappa nor any of the counterpetitioners who had been brought to the Police Station, were beaten nor tortured as alleged. All the allegations contained in the Calling Attention Notice are baseless.

ಶ್ರೀ ಪಿ. ವೆಂಕಟಗಿರಿಯಪ್ಪ:—ಸ್ವಾಮಿ, ೩ ಗಂಟೆಗೆ ಒಬ್ಬ ಪೋಲೀಸ್ ಕಾನ್‌ಸ್ಟೇಬಲ್ ಮತ್ತು ಹೆಡ್‌ಕಾನ್ಸ್‌ಟೇಬಲ್ ಆತನನ್ನು ಪೋಲೀಸ್ ಸ್ಟೇಷನ್ನಿಗೆ ಕರೆದುಕೊಂಡು ಬಂದು ಹೊಡೆದು ಗಾಯಗೊಳಿಸಿದ್ದಾರೆ. ಇದರ ಬಗ್ಗೆ ಆಸ್ಪತ್ರೆಯಲ್ಲಿ ಸರ್ಟಿಫಿಕೇಟ್ ಕೂಡ ಕೊಟ್ಟಿದ್ದಾರೆ. ಈಗ ಇದು ನಡೆದಿಲ್ಲ, ಹೊಡೆದಿಲ್ಲವೆಂದು ಹೇಳುತ್ತಿದ್ದಾರೆ. ಹೀಗಿದ್ದರೆ ನಾನು ನೋಡಿ ಹೇಳುವುದು ಸುಳ್ಳೇ ಅಥವಾ ಪೋಲೀಸರು ಏನು ವರದಿ ಕಳಿಸಿದ್ದಾರೆ, ಅದು ಸತ್ಯವೇ ?

ಶ್ರೀ ಕೆ. ಪುಟ್ಟಸ್ವಾಮಿ:—ಸ್ವಾಮಿ, ಮಾನ್ಯ ಸದಸ್ಯರು ನೋಡಿದರೆ ನಾನು ಸುಳ್ಳು ಎಂದು ಹೇಳುವುದಿಲ್ಲ. ಅವರು ನೋಡಿ ಬೇರೆ ಹೇಳುತ್ತಾರೆಂದು ನಾನು ಹೇಳುವುದಿಲ್ಲ. ನನಗೂ ಬಂದಿರತಕ್ಕ ಸಮಾಚಾರ ನಿಜವಿರಬಹುದು. ವೆಂಕಟಗಿರಿಯಪ್ಪನವರು ಪೋಲೀಸ್ ಸ್ಟೇಶನ್ನಿಗೆ ಹೋಗಿ ಬಂದ ಮೇಲೆ, ಅವರು ನೋಡಿದಂತಹ ಪರಿಣಾಮ ಯಾವುದಾದರೂ ಬೇರೆ ಕಾರಣಗಳಿಂದ ಆಗಿರಬಹುದು. ಆದ್ದರಿಂದ ಅವರು ಹೇಳಿದಂತಹ ವಿಚಾರ ಅಪನಂಬಿಕೆಯದ್ದಾಗಿವೆ ಎಂದು ನಾನು ಹೇಳುವುದಿಲ್ಲ.

ಶ್ರೀ ಪಿ. ವೆಂಕಟಗಿರಿಯಪ್ಪ:—ಸ್ವಾಮಿ, ನಾನು ನೋಡಿರುವ ವಿಚಾರ ಹೇಳುತ್ತಿದ್ದೇನೆ. ನಾನು ಹೇಳುವ ಮಾತಿಗೆ ಏನಾದರೂ ಬೆಲೆ ಇದ್ದರೆ, ಈ ಬಗ್ಗೆ ಯಾರಾದರೂ ವಿಚಾರಣೆ ಮಾಡಲಿ, ನಾನು ಹೇಳುವುದರಲ್ಲಿ ಏನಾದರೂ ಸತ್ಯಾಂಶ ಇದೆಯೋ ಎಂದು ನೋಡಲಿ. ಅದರಲ್ಲಿ ಸತ್ಯಾಂಶ ಇದೆಯೆಂದು ಕಂಡಂ

(ಶ್ರೀ ಪಿ. ವೆಂಕಟಗಿರಿಯಪ್ಪ)

ಬಂದರೆ ಯಾರು ಆ ಕೃತ್ಯ ಮಾಡಿದ್ದಾರೋ, ಮತ್ತು ಯಾರು ಈ ಸುಳ್ಳು ರಿಪೋರ್ಟ್ ಕಳಿಸಿದ್ದಾರೋ, ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ ?

SRI K. PUTTASWAMY:—Now that the Hon. Member is repeation over again, we will have the matter checked ov r again. If there is any element of truth in what the Hon. Member has stated, suitable action will be taken.

SRI AZIZ SAIT:—Sir, I have heard very carefully the question raised by Hon. Member Sri Venkatagiriyappa and the answer given from the Government side. The Minister stated that because the Hon. Member repeated the allegation, the Government is also going to repeat the investigation. Such statements serve no purpose. The Government must come to a firm decision that the Government will have the allegations enquired into by an Officer of such and such a rank and designation. I am not here to demoralize the Police Force. The point is, we are be coming helpless. When an important person is arrested, and kept in the lock-up for a small matter, the Members have become helpless and they have to face the issue in the House every time. Does it speak good of the Government ? I do not know whether some Ministers would relish those things. If the citizens' rights are allowed to be trampled, where is pro ection for them and where is law ? ಮಂತ್ರಿಯವರು ಅಷ್ಟು ಲಘುವಾಗಿ ಇದನ್ನು ತಿಳಿಯಬಾರದು. ಯಾವುದು ಕೇಳಿದರೂ ಕೂಡ ನಾವು ಮಾಡಿಸುತ್ತೇವೆ, ಮಾಡಿಸುತ್ತಿದ್ದೇವೆ, ನೋಡುತ್ತೇವೆಂದು ಹೇಳುತ್ತಾರಲ್ಲದೆ ಬೇರೆ ಪದ ಇವರಲ್ಲಿ ಇಲ್ಲ. ನಾವು ಸುಟಬಲ್ ಆಕ್ಷನ್ ತೆಗೆದುಕೊಳ್ಳುತ್ತೇವೆಂದು ಸ್ಟ್ರೈಟ್ ಆವೇ ಹೇಳುವುದಕ್ಕೆ ಏನು ಕಷ್ಟವಾಗುತ್ತದೆ ?

MR. SPEAKER:—The Hon. Minister's statemant is specific. He has stated that he would check it up.

Now we are about to adjourn. Hon Members had worked hard for six hours to-day and I am thankful to one and all for their Co-operation. We have Ugadi on the 7th of this month It is new Year's Day for most of the Hon. Members and they would like to be with their dear and near. Their relations and friends may be awaiting them; their Constituency may be awaiting them. I wish all the Members a Happy New Year, enduring prosperity and a long period of dedicated service to the Motherland.

SRI S. SIVAPPA:—We heartily reciprocate your good wishes and wish you long life, happiness and prosperity.

MR. SPEAKER:—Thank you.

I now adjourn the House *sine die*.

The House adjourned *sine die* at six Minutes past Five of the Clock.

WD 15071—GPB—550 -15-9-1970